ಕರ್ನಾಟಕ ಸರ್ಕಾರ

ಭರತೇಶನ ದಿನಚರಿ

# ವಿಜಯದ ದಿನಗಳು

ಪಿ.ಕೆ. ನಾರಾಯಣ



ಕನ್ನಡ ಪುಸ್ತಕ ಪ್ರಾಧಿಕಾರ

## ಭರತೇಶನ ದಿನಚರಿ

# ವಿಜಯದ ದಿನಗಳು

ಪಿ. ಕೆ. ನಾರಾಯಣ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ದೂರವಾಣಿ: ೨೨೪೮ ೪೫೧೬

**BHARATESHANA DINACHARI - 'Vijayadha Dinagalu' :** by P.K. Narayana, *Published by:* **Ashoka N. Chalawadi** Administrative officer Kannada Pustaka Pradhikara Kannada Bhavana, J.C. Road, Banglaore - 560 002

Pages : ii + 238
Price : Rs. 75/-
First Edition : 1974
Second Edition : 2009
Copies : 500

© ಈ ಆವೃತ್ತಿಯ ಹಕ್ಕು ಕನ್ನಡ ಪುಸ್ತಕ ಪ್ರಾಧಿಕಾರದ್ದು.

ಪುಟಗಳು : ii + ೨೩೮

ಬೆಲೆ : ರೂ. ೭೫

ಪ್ರಥಮ ಮುದ್ರಣ : ೧೯೭೪

ದ್ವಿತೀಯ ಮುದ್ರಣ : ೨೦೦೯

ಪ್ರತಿಗಳು : ೫೦೦

ಕರಡು ತಿದ್ದಿದವರು : ಡಾ. ವರದಾ ಶ್ರೀನಿವಾಸ್

**ಪ್ರಕಾಶಕರು :**
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಮುದ್ರಕರು : ಭಾಗ್ಯಂ ಬೈಂಡಿಂಗ್ ವರ್ಕ್ಸ್
ನಂ. ೨೫/೧, ೧ನೇ ಮುಖ್ಯರಸ್ತೆ, ೧ನೇ ಅಡ್ಡರಸ್ತೆ
ನ್ಯೂ ಟಿಂಬರ್ ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫೮೨೮೦, ಫ್ಯಾಕ್ಸ್ : ೨೬೭೫೯೦೮೮

# ಅಧ್ಯಕ್ಷರ ಮಾತು

ಕನ್ನಡದ ಪ್ರಸಿದ್ಧ ಕವಿ ರತ್ನಾಕರವರ್ಣಿಯ ಭರತೇಶ ವೈಭವದ ಸರಳ ಕನ್ನಡ ಗದ್ಯಾನುವಾದ ಭರತೇಶನ ದಿನಚರಿ. ಸಾಂಗತ್ಯದಲ್ಲಿ ರಚಿತವಾಗಿರುವ ಈ ಕೃತಿಯನ್ನು ೧೯೭೦ ರಷ್ಟು ಹಿಂದೆಯೇ ಹೊಸಗನ್ನಡಕ್ಕೆ ತಂದ ಶ್ರೇಯಸ್ಸು ಹಿರಿಯರಾದ ದಿ. ಶ್ರೀ. ಪಿ.ಕೆ. ನಾರಾಯಣ ಅವರಿಗೆ ಸಲ್ಲಬೇಕು. ರತ್ನಾಕರವರ್ಣಿ ಭರತನ ಪಾತ್ರಕ್ಕೆ ಹೊಸತನ ನೀಡಿ ಉದಾತ್ತತೆಯನ್ನು ತಂದವನು. ಒಬ್ಬ ಚಕ್ರವರ್ತಿಯಾಗಿ ತನ್ನ ಬದುಕಿನಲ್ಲಿ ಯೋಗಭೋಗದ ಸಮನ್ವಯ ಸಾಧಿಸಿದವನು. ಸರಸಿಯೂ, ಪರಾಕ್ರಮಿಯೂ ಆಗಿದ್ದ ಭರತ ಕೊನೆಯಲ್ಲಿ ಎಲ್ಲವನ್ನು ತೊರೆದು ವೈರಾಗ್ಯಪರನಾದದ್ದು ಅತ್ಯಂತ ಮನನೀಯ ಸಂಗತಿ. ಭರತೇಶನ ದಿನಚರಿ – ಸರಸದ ದಿನಗಳು, ವಿಜಯದ ದಿನಗಳು, ತಪಸಿನ ದಿನಗಳು ಈ ಮೂರು ವಿಭಾಗದಲ್ಲಿ ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಕೃತಿಗಳನ್ನು ಹೊರತರಲು ಅನುಮತಿಸಿದ ಲೇಖಕರ ಮಕ್ಕಳಾದ ಶ್ರೀಮತಿ ವರದಾ ಶ್ರೀನಿವಾಸ್ ಅವರಿಗೆ ಆಭಾರಿಯಾಗಿದ್ದೇನೆ.

ಈ ಗ್ರಂಥವನ್ನು ಹೊರತರಲು ಸಹಕರಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಸಂಯೋಜನಾಧಿಕಾರಿ ಶ್ರೀ ಟಿ.ಎಸ್. ಶಾಮರಾವ್, ಪ್ರಾಧಿಕಾರದ ಎಲ್ಲಾ ಸದಸ್ಯರು, ಸಿಬ್ಬಂದಿ ವರ್ಗದವರಿಗೆ ಹಾಗೂ ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ಭಾಗ್ಯಂ ಬೈಂಡಿಂಗ್ ವರ್ಕ್ಸ್‌ಗೆ ನನ್ನ ಕೃತಜ್ಞತೆಗಳು.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಕೃತಜ್ಞತೆಗಳು

ದಿ|| ಪಿ.ಕೆ. ನಾರಾಯಣ ಅವರು ಅನುವಾದಿಸಿರುವ ಕೃತಿ ಇದು. ಇದು ರತ್ನಾಕರವರ್ಣಿಯ ಭರತೇಶ ವೈಭವ (ಸಾಂಗತ್ಯ)ದ ಗದ್ಯಾನುವಾದ. ಈ ಗದ್ಯಾನುವಾದ ೧೯೭೨ರಲ್ಲಿ ಬೆಂಗಳೂರಿನ ಸಹಕಾರಿ ಪ್ರಕಾಶನದ ಮೂಲಕ ಪ್ರಕಟವಾಯಿತು.

ದಿ. ಪಿ.ಕೆ. ನಾರಾಯಣ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಸಾಹಿತಿ; ಪತ್ರಕರ್ತ, ಕವಿ, ಸಮಾಜ ಸೇವಕ, ಗಾಂಧೀವಾದಿ ಆಗಿದ್ದರು. ಅವರ ಕೃತಿಗಳು ಆ ಕಾಲದ ಸಹೃದಯರಿಗೆ ಚಿರಪರಿಚಿತವಾಗಿದ್ದವು. ಈಗಲೂ ಅವರು ಅಲ್ಲಿಯ ಸ್ಮರಣೀಯ ಸಾಹಿತಿಗಳಲ್ಲೊಬ್ಬರು.

ಆ ಅನುವಾದದ ಬಗ್ಗೆ ಶ್ರೀಯುತ ಬನ್ನಂಜೆ ಗೋವಿಂದಾ ಚಾರ್ಯರು 'ಉದಯವಾಣಿ'ಯಲ್ಲಿ ಶರೀಸೇವ ನಮಿರಾಜ ಮಲ್ಲರು 'ಕರ್ಮವೀರ'ದಲ್ಲಿ ವಿಮರ್ಶಿಸಿ, ಪ್ರಶಂಸಿದ್ದಾರೆ. ಕನ್ನಡದ ಕವಿ ಪಂಡಿತ ಶ್ರೀ ಸೇಡಿಯಾಪು ಕೃಷ್ಣಭಟ್ಟರು, ಅಭಿನವ ಕಾಳಿದಾಸ ರೆಂದು ಪ್ರಸಿದ್ಧರಾದ ಪ್ರೊ|| ಎಸ್.ವಿ. ಪರಮೇಶ್ವರ ಭಟ್ಟರು ಈ ಅನುವಾದವನ್ನು ಹೊಗಳಿದ್ದಾರೆ. ಪ್ರೊ|| ಜಿ. ಬ್ರಹ್ಮಪ್ಪನವರಿಗಿಂತ ಮೊದಲು ರತ್ನಾಕರವರ್ಣಿಯ ಸಮಗ್ರ ಕಾವ್ಯವನ್ನು ತಿಳಿಗನ್ನಡದಲ್ಲಿ ಸೊಗಸಾಗಿ ಅನುವಾದಿಸಿದವರು ಪಿ.ಕೆ. ನಾ. ಅವರು.'' ಎಂದು ಡಾ|| ಪಂಪನಾ ಅವರು ತಿಳಿಸಿದ್ದಾರೆ.

ಇಂಥ ಒಂದು ಅನುವಾದ ಮೂವತ್ತೇಳು ವರ್ಷಗಳ ನಂತರ ಪುನರ್ಮುದ್ರಣ ವಾಗುತ್ತಿದೆ. ಇದಕ್ಕೆ ಕಾರಣಕರ್ತರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಡಾ|| ಸಿದ್ಧಲಿಂಗಯ್ಯ ಅವರು. ಅವರ ಈ ತೀರ್ಮಾನಕ್ಕೆ ನಾನು ಆಭಾರಿಯಾಗಿದ್ದೇನೆ.

ನಾನು, ದಿ|| ಪಿ. ಕೆ. ನಾರಾಯಣ ಅವರ ಮಗಳು ಕರಡಚ್ಚು ಪರಿಶೀಲಿಸಿ ಸಂದರ್ಭ ದಲ್ಲಿ ಎರಡೆರಡು ಬಾರಿ ಅನುವಾದ ಓದುವ ಅವಕಾಶ ಕಲ್ಪಿಸಿಕೊಟ್ಟರು. ಸಹೃದಯರಾದ ಡಾ|| ಸಿದ್ಧಲಿಂಗಯ್ಯ ಅವರು.

ರತ್ನಾಕರನ ಈ ಅನುವಾದ ಓದುತ್ತಿದ್ದಂತೆ ಆ ಮಹಾಕವಿಯ ಶಬ್ದಭಂಡಾರ, ತಾತ್ವಿಕ ವಿಚಾರ, ಹಂಸಕಲೆಯ ವಿವರ–ಎಲ್ಲವೂ ಅದ್ಭುತವಾಗಿದ್ದು ಗದ್ಯದಲ್ಲೂ ಅಷ್ಟೇ ಪರಿಣಾಮ ರಮಣೀಯವಾಗಿ ಬಂದಿರುವುದು ಗಮನಾರ್ಹ ಅಂಶವಾಗಿದೆ.

ಇಂಥ ಒಂದು ಬೃಹತ್ ಕೃತಿಯನ್ನು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನನ್ನ ಹೃತ್ಪೂರ್ವಕ ವಂದನೆಗಳು.

೨೮–೦೪–೦೯

ಡಾ. ವರದಾ ಶ್ರೀನಿವಾಸ
ಬೆಂಗಳೂರು

# ವಿಜಯದ ದಿನಗಳು

# ೧

# ನವರಾತ್ರಿಯ ಸಮಾರಂಭ

ಕೃತಯುಗದ ಆದಿಯಲ್ಲಿ ಆದಿತೀರ್ಥಂಕರನ ಮೊದಲ ಮಗನಾದ ಆದಿ ಚಕ್ರಿಯು ಕ್ಷಿತಿಯನ್ನು ಪಾಲಿಸುತ್ತಿದ್ದನು. ಆದರೆ ಭೂಮಿಯ ಭಾರವನ್ನು ತಾಳಿದ ಚಿಂತೆಯೆಂಬುದು ಒಂದಿಷ್ಟೂ ಅವನಲ್ಲಿರಲಿಲ್ಲ. ಅವನಿಗೆ ಯಾವುದೊಂದರ ಶ್ರಮವೂ ಇರಲಿಲ್ಲ. ಸುತ್ರಾಮನು ಸ್ವರ್ಗವನ್ನಾಳುವಂತೆ ಒಂದಿಷ್ಟೂ ಆಲಸ್ಯವಿಲ್ಲದೆ ರಾಜ್ಯವನ್ನಾಳುತ್ತಿದ್ದನು.

ಭರತಚಕ್ರಿಯು ಲೀಲೆಯಿಂದಲೇ ರಾಜ್ಯಪರಿಪಾಲನೆ ಮಾಡುತಿದ್ದಾಗ ಮಂತ್ರಿಯು ರಾಜನೆಡೆಗೆ ಬಂದು, ಅವನ ಲೀಲೆಯು ಇನ್ನೂ ವಿಶಾಲವಾಗುವಂತೆ ಆಲೋಚನೆ ಮಾಡಿದನು.

''ಈಗ ಮಳೆಗಾಲ ಹೋದುದು; ಬೆಳೆಗಾಲ ಬಂದಿದೆ. ಸೇನಾದಳಗಳನ್ನು ನಡೆಸುವುದಕ್ಕೆ ಇದು ಚೆನ್ನಾದ ಕಾಲ. ಆದ್ದರಿಂದ ಮಹಾರಾಜರು ದಿಗ್ವಿಜಯಕ್ಕೆ ಮನಸ್ಸು ಮಾಡುವುದು ಒಳ್ಳಿತು. ನಮ್ಮ ಶಸ್ತ್ರಾಲಯದಲ್ಲಿ ಚಕ್ರರತ್ನವೊಂದು ಬಾಲಾರ್ಕನಂತೆ ಉದಯಿಸಿರುವುದು. ಅರಿತಿಮಿರ ಭಾಸ್ಕರನೆ, ಧರೆಯನ್ನು ಸಾಧಿಸುವುದಕ್ಕೆ ಇನ್ನೇಳಬಹುದು. ದುಷ್ಟರನ್ನು ಮರ್ದಿಸಿ; ಶಿಷ್ಟರನ್ನೂ, ವಿಪ್ರರನ್ನೂ, ತಾಪಸರನ್ನೂ ರಕ್ಷಿಸುವ ದೊರೆಯೆ, ಸಮಸ್ತಭೂಮಿಯ ಪ್ರಭುಗಳನ್ನು ವಶಮಾಡುವುದಕ್ಕಾಗಿ ನೀನೊಂದು ಭೂಪ್ರದಕ್ಷಿಣೆ ಮಾಡಲು ಏಳು. ಜಂಬೂದ್ವೀಪದ ದಕ್ಷಿಣ ಸೂರ್ಯನಂತಿರುವ ನೀನು, ದ್ವೀಪದ್ವೀಪಗಳಲ್ಲಿ ಉಕ್ಕಿಸೊಕ್ಕಿರುವ ದಿಂಡೆಯ ಭೂಪತಿಗಳ ಹಿಂಡನ್ನು ನಿನ್ನ ಶ್ರೀಪಾದಕ್ಕೆರಗಿಸಿಕೊಳ್ಳಲು ಹೊರಡು. ಗಿರಿದುರ್ಗ, ಜಲದುರ್ಗ, ವನದುರ್ಗಗಳಲ್ಲಿರುವ ನರಪತಿಗಳ ಸೊಕ್ಕು ಮುರಿದು, ಭರತ ಷಟ್ಖಂಡದ ಧರೆಯನ್ನು ಸಾಧಿಸಿ ಭರತೇಶನೆಂಬ ಬಿರುದನ್ನು ತೋರಿಸು. ಎಲ್ಲೆಲ್ಲಿ ಉತ್ತಮ ವಸ್ತುವಾಹನಗಳುಂಟೋ ಅಲ್ಲಲ್ಲಿಂದ ಕಪ್ಪವನ್ನು ಕೊಳ್ಳುತ್ತ ಮೆಲ್ಲಮೆಲ್ಲನೆ ನಾಡುಗಳನ್ನು ನೋಡಿಕೊಂಡು ಬರುವುದೊಂದು ಲೀಲೆಯಲ್ಲವೆ? ಆರು ಖಂಡದ ಪ್ರಜೆಗಳಿಗೆ ನಿನ್ನ ರೂಪವನ್ನು ತೋರಿಸಿ, ಕೃತಾರ್ಥರನ್ನಾಗಿ ಮಾಡಿ, ಆರು ಖಂಡವೆಂದರೆ ಮೂರು ಚೋಟೆಂದು ಕಂಡು, ನಮ್ಮ ಬಿಲ್ಲಾಳಿಕೆಯನ್ನು ಮರೆದು ಬರುವ. ವಸಂತನು ವನಗಳಲ್ಲಿ ಸಂಚರಿಸಿ, ಆ ವನಗಳಲ್ಲಿ ಚಿಗುರುಗಳನ್ನೇರಿಸುವಂತೆ ವನಧಿ ಮಧ್ಯದ ಈ ಧರಣಿಯಲ್ಲಿ ನಿನ್ನ ಸುಳುಹಿನಿಂದ ಜನಮನವು ಚಿಗುರುವಂತೆ ಮಾಡು.''

ಎಂದು ನುಡಿದ ಬುದ್ಧಿಸಾಗರ ಮಂತ್ರಿ, ಚಕ್ರಿಯ ಮುಖವನ್ನು ಮತ್ತೊಮ್ಮೆ ನೋಡಿದನು. ಭರತೇಶನಾಗ, ಮಂತ್ರಿಗೆ ಉಡುಗೊರೆಯಿತ್ತು ''ಮುಂದಿಗೆ ಹೇಳಿ ಪಯಣಕ್ಕೆ ಉಬ್ಬೆಗಿಸು, ಹೋಗು'' ಎಂದನು. ನವರಾತ್ರಿಯ ಜಿನಮಹಿಮೆಯನ್ನು ಮಾಡಿ

ದಶಮಿಯ ದಿವಸದಲ್ಲಿ ಪಯಣವಾಗುವಂತೆ ಅಣಿಗೊಳಿಸುವೆನೆಂದು ಮಂತ್ರಿಯು ಬಿನ್ನವಿಸಿ ಬೀಳ್ಕೊಂಡನು.

ಕೂಡಲೆ ಪಟ್ಟಣದಲ್ಲಿ ಅಲ್ಲಲ್ಲಿ ಗುಡಿತೋರಣಗಳು ಕಟ್ಟಲ್ಪಟ್ಟವು, ಬೆಟ್ಟದಂತಹ ತೇರುಗಳು ಸಿಂಗರವಾದುವು. ದಂಡಿನ ಸುದ್ದಿ ಹುಟ್ಟಿ ಹಬ್ಬಿತು, ಪತಾಕೆಗಳೆಲ್ಲ ಆಕಾಶಕ್ಕೆದ್ದಿರುವುದನ್ನು ನೋಡಿ ಇದು ಸಾಕೇತಪುರವೆಂದರು. ಶ್ರೀಕೌಶಲ ಅಯೋಧ್ಯಾಪುರವೆನ್ನುವ ಜಿನರಾಗದಿಂದ, ಆ ಕೀರ್ತಿಪುರಕ್ಕೆ ಶೋಭೆಯುಂಟಾಯಿತು. ಗುಡಿಸಿದ ಬೀದಿಗಳು ಮಿಂಚುತಿದ್ದವು. ನಡೆಯುವವರ ಅಡಿಗಳಲ್ಲಿ ಜುಮ್ಮಿದಟ್ಟಿ ಸುತ್ತಿದ್ದುವು. ಹೂವಿನ ಕೆಂಪು ಹಬ್ಬಿ ಆ ನಗರವೊಂದು ಕಡಲಂತೆ ಕಾಣುತಿತ್ತು ಸಾದಿನ ಸಾರಣೆಯಿಂದ ಪನ್ನೀರ ಚೆಳಯದಿಂದ ಜವಾದಿ ಕುಂಕುಮ ಮಿಶ್ರದಿಂದ ಬೀದಿಬೀದಿಗಳಲ್ಲಿ ಪರಿಮಳದ ಮಹಾಪೂರವೇ ಹರಿದಿತ್ತು ಅಯೋಧ್ಯಾನಗರದ ಮಧ್ಯದಲ್ಲಿರುವ ಬಸದಿಯಲ್ಲಿ ಮುಗಿಲನ್ನು ಮುಟ್ಟುವ ಧ್ವಜವೆತ್ತಿತ್ತು. ಕೇರಿಕೇರಿಗಳಲ್ಲಿ ಅಂತಹ ಅಗಣಿತವಾದ ಬಸದಿಗಳಿದ್ದುವು. ಹೋಮಗಳು, ಪೂಜೆಗಳು, ಸ್ತೋಮಾಭಿಷೇಕಗಳು, ಶ್ರೀಮುನಿಭುಕ್ತಿಗಳು ಅಲ್ಲಲ್ಲಿ ಮೆರೆದು ಆ ನಗರವು ಪುಣ್ಯಧಾಮವಾಯಿತು. ಕಲಿಕುಂಡ, ವಜ್ರಪಂಜರಯಜ್ಞ, ಗಣಧರವಲಯ, ಮೃತ್ಯುಂಜಯ ಯಜ್ಞ, ಬಲಿಸಿದ್ಧಿ, ಭಯಸಿದ್ಧಿ ಸರ್ವರಕ್ಷೆಗಳೆಂಬ ಹಲವು ಯಜ್ಞಗಳು ನಡೆದುವು. ನಿತ್ಯ ಪ್ರಭಾವನೆ, ರಥೋತ್ಸವ ಅಭಿಷೇಕ ಪೂಜೆಗಳೂ, ನಿತ್ಯ ಚತುಸ್ಸಂಗ ಸಂತೃಪ್ತಿಗಳೂ ಎಸೆದುವು. ಜಿನಪೂಜೆಯೊಂದಿಗೆ ಒಂಬತ್ತು ದಿನ ಚಕ್ರಪೂಜೆಯೂ ನಡೆಯಿತು. ಚಕ್ರೇಶ್ವರನ ಅನುಚರರೆಲ್ಲರೂ ತಂತಮ್ಮ ಚಿಹ್ನೆಗಳನ್ನು ಅನುರಾಗದಿಂದ ಪೂಜಿಸಿದರು. ಅಶ್ವೀಜಮಾಸದ ಶುಕ್ಲಪಕ್ಷದ ಪಾಡ್ಯಮಿಯಂದು ಯಕ್ಷ ಗೋಮುಖಗೆ, ಚಕ್ರೇಶ್ವರಿ ಯಕ್ಷಿಣಿಗೆ ಅಕ್ಷುಣ್ಣ ಪೂಜೆಯನ್ನು ಮಾಡಿ, ಕುದುರೆಗೆ ರಕ್ಷೆಯನ್ನು ಕಟ್ಟಿದರು. ಆನೆಗಳನ್ನು ರಥಗಳನ್ನು ಸಿಂಗರಿಸಿ ವೈಭವವೆದ್ದು ತೋರುವಂತೆ ಮಂತ್ರಿಯಾದ ಬುದ್ಧಿಸಾಗರನು ಮಾಡಿಸಿದನು. ಹೀಗೆ ಈ ಲೋಕಕ್ಕೆ ಆಶ್ಚರ್ಯವಾಗುವಂತೆ ಮಹಾ ಮಂತ್ರಿಯ ಪ್ರೇರಣೆಯಿಂದ ಮಹಾನವಮಿಯು ನಡೆಯಿತು.

ನಗರ ಮಧ್ಯದಲ್ಲಿರುವ ಜಿನವಾಸಕ್ಕೆ ಒಂದು ದಿನ ಹಗಲು ರಾಜೇಂದ್ರನು ಹೋಗಿ ಪೂಜೆಯನ್ನು ಮಾಡಿ ಮರಳಿ ಅರಮನೆಗೆ ಬಂದು ಮತ್ತೆ ರಾತ್ರಿಯಲ್ಲಿ ಓಲಗವಿತ್ತನು.ಈ ಓಲಗವು ಕೊನೆಯ ಹಜಾರದಲ್ಲಿ ಜರಗಿತು. ಭರತೇಶನು ಸಿಂಹಾಸನವೇರಿ ಕುಳಿತಾಗ ಅವನ ರತ್ನಕಿರೀಟವೇ ಅಂದಿನ ಕಾರಿರುಳನ್ನು ಹಗಲನ್ನಾಗಿ ಮಾಡಿದಂತೆ ತೋರಿತು. ರಾಜೇಂದ್ರನ ಸುತ್ತಲೂ ರಾಜಾಧಿರಾಜರೂ ಸಚಿವರೂ ನಿರ್ದೋಷರಾದ ಕವಿಗಮಕಿಗಳೂ ಜಾಣ್ಮೆಯ ಗೆಳೆಯರೂ ವಾರನಾರಿಯರೂ ನೆರೆದಿದ್ದರು. ಕಣ್ಣಿಗೆ ಕಾಣುವವರೆಗೂ ಭರತೇಶನ ಎದುರುಗಡೆಯಲ್ಲಿ ಪರಿವಾರದವರೇ ತುಂಬಿದ್ದರು. ಪ್ರಜೆಗಳು ಚಕ್ರಧರನನ್ನು ನೋಡುತ್ತ ತೆಟ್ಟೆ ತೆಟ್ಟೆಯಾಗಿ ನಿಂತಿದ್ದರು. ದೀಪಮಾಲೆಯನ್ನು ಹಿಡಿಯುವವಳು ಅಲ್ಲಿ ಕಾಕಿಣಿ ರತ್ನವನ್ನು, ಎತ್ತಿ ನಿಲ್ಲಿಸಿದಾಗ ಕತ್ತಲೆಯು ನಾಶವಾಗಿ ದಿವಾಕರ ಪ್ರಭೆಯು ತೋರಿತು. ಹನ್ನೆರಡು ಗಾವುದದ ಆ ನಗರವೆಲ್ಲಾ ಸಾಲು ದೀಪಗಳ ಪಂಜಿನಿಂದ

ಪ್ರಕಾಶಮಾನವಾಯಿತು. ಈ ಕಾಕಿಣಿ ರತ್ನದಿಂದಾಗಿ ಅರಮನೆಯ ಮುಂಭಾಗದಲ್ಲಿ ಹಗಲಾದಂತೆ ಬೆಳಕಾಯಿತು.

ಅಂದು ಅಲ್ಲಿ ಬೊಂಬೆಗಳ ಆಟವಾಡಿಸುವವರು, ಪಾತ್ರನಿತಂಬಿನಿ ಜನಗಳು, ಡೊಂಬರಗಣೆಯ ಸಂಗಾತಿಯರು, ಅಲ್ಲಲ್ಲಿ ಇಂಬುಗೊಂಡಿದ್ದರು. ಇಂದ್ರಜಾಲಿಗರು, ಗೋವಿಂದಗತಿಗಳು, ಮಹೇಂದ್ರಜಾಲಿಗರು, ವಿಸ್ಮಯರು, ಖೇಂದ್ರನಾಟಕರು ಭರತರಾಜೇಂದ್ರನಿಗೆ ಆಟಗಳನ್ನು ತೋರಿಸುವೆವೆಂದು ಅಲ್ಲಿ ಸಿದ್ಧರಾಗಿದ್ದರು. ಮುಗುಳಾಗಿದ್ದ ತಾವರೆಯು ಭಾಸ್ಕರನು ನಡೆದತ್ತ ಮಿಡಿದು ಅರಳುವಂತೆ ಯಾವ ಕಡೆಗೆ ರಾಜನು ಮುಖಮಾಡುತ್ತಾನೋ ಅಲ್ಲಲ್ಲಿ ನಾನಾ ವಿದ್ಯೆಗಳನ್ನು ತೋರಿಸುತಿದ್ದರು. ಸೂತ್ರವನ್ನು ಮಿಡಿದರೆ ಬೊಂಬೆಗಳು ಕುಣಿವಂತೆ ಭರತೇಶನ ಕಣ್ಣುಗಳು ಅಲೆದತ್ತ ಪಾತ್ರದ ಹೆಣ್ಣುಗಳು ಕುಣಿಯುತಿದ್ದರು. ಆಕಾಶವನ್ನು ಮುಟ್ಟುವಂತೆ ಗಣೆಯನ್ನೇರಿ ಅರಸನ ಮುಖವನ್ನೇ ನೋಡುತ್ತ ಅವನ ಕಣ್ಣ ಬೆಳಕು ತಮ್ಮ ಮೇಲೆ ಬಿದ್ದೊಡನೆಯೇ ಡೊಂಬರು ತಟಪುಟನುಬ್ಬಿ ಲಾಗು ತೋರುವರು.ಜಗಜಟ್ಟಿಗಳು ಉಬ್ಬಿಕೋ ಎಂದು ಭುಜಗಳನ್ನು ತಟ್ಟಿಕೊಂಡು, ಒಬ್ಬರನ್ನೊಬ್ಬರು ತಟ್ಟನೆ ಘಟ್ಟನೆ ತಿವಿದು ತೆಗೆದು ಆಡಿ ಉರುಳಿಸುತ್ತಿದ್ದರು. ವಿಸ್ಮಯಕಾರನೊಬ್ಬನು ಬರೇ ಒಂದು ಬೀಜವನ್ನು ನೆಟ್ಟನು. ಕೂಡಲೆ ಅದು ಮರವಾಯಿತು. ಅದರಲ್ಲಿ ಕಾಯಿಗಳೂ ಹಣ್ಣುಗಳೂ ಆದುವು. ಆಸ್ಥಾನವೇ ಸೋಜಿಗಪಟ್ಟಿತು. ಇಂದ್ರಜಾಲಿಗನು ಕೈ ಮುಗಿದು ಮಂತ್ರಿಸಿದ ತನ್ನ ಇಂದ್ರನೀಲದೊಳಗೆ ಒಂದು ಅರಮನೆಯನ್ನು ಮಾಡಿ, ಅಲ್ಲಿಗೆ ದೇವೇಂದ್ರನನ್ನೇ ತಂದು ತೋರಿಸಿದನು. ಊರ್ವಶಿ ರಂಭೆ ಮೇನಕೆಯರನ್ನು ಶೃಂಗಾರ ಪೂರ್ವಕವಾಗಿ ತೋರಿಸಿದಾಗ ಜನರೆಲ್ಲ ಬಾಯಿ ತೆರೆದು ನೋಡಿದರು. ಇದನ್ನು ಕಂಡು ಸಾರ್ವಭೌಮನು ನಸುನಕ್ಕನು. ಮಹೇಂದ್ರಜಾಲಿಗನು ಕೈ ಮುಗಿದು ನಗರದ ಹೊರಗಿನ ಕೋಟೆಗಳೂ ದಿಕ್ಕುಗಳನ್ನೂ ತುಂಬಿಕೊಂಡು ಸಮುದ್ರವೇ ತುಂಬಿ ಬಂದುದನ್ನು ತೋರಿಸಿದನು. ಖೇಂದ್ರನಾಟಕನು ಕೋಟೆಗೆ ಅಡ್ಡವಾಗಿ ಆಕಾಶದಲ್ಲೊಂದು ಊರನ್ನೇ ನಿರ್ಮಿಸಿ, ಕೋಟಿ ಪಾತ್ರಗಳನ್ನು ಕೂಡಿಸಿ, ವಣೆಯಿಲ್ಲದ ಗಂಧರ್ವ ನೃತ್ಯವನ್ನು ತೋರಿಸಿದನು. ಹೀಗೆ ವಿವಿಧ ವಿದ್ಯೆಗಳನ್ನು ತೋರಿದ ಈ ವಿದ್ಯಾಧರ ಸಮೂಹಕ್ಕೆ ಅವರವರ ವಿದ್ಯಾಂಗಕ್ಕೆ ತಕ್ಕಂತೆ ರಾಜೇಂದ್ರನು ನವನಿಧಿಯನ್ನೇ ಉಡುಗೊರೆಯಾಗಿ ಕೊಟ್ಟನು. ಕೊಡುವಾಗ ಭರತೇಶನ ಕೈಗೆ ಅಡೆತಡೆಯುಂಟೆ?

ಪಟ್ಟಣದಲ್ಲಿ, ಕೇರಿಕೇರಿಗಳಲ್ಲಿ ರಕ್ಷೆಗಟ್ಟಿದ ಕುದುರೆಗಳು ತುಂಬಿ ಬೆಟ್ಟ ಬಿರಿವ ವಾದ್ಯ ಮೊಳಗುತ್ತಿರಲು ಹಜಾರವನ್ನು ಸೇರಲೆಂದು ಬರುತ್ತಿದ್ದುವು. ಮುಂಭಾಗದಲ್ಲಿ ಪುಷ್ಪಕದಲ್ಲಿ ಗೋಮುಖ ಯಕ್ಷನು, ಸಾಲುಸಾಲಾಗಿ ಪತಾಕೆಗಳು, ಹಿಂದೆ ಕುದುರೆಗಳು ಸಾಲಾಗಿ ಕಡಲ ತೆರೆಗಳಂತೆ ಕುಣಿದು ಕುಣಿದು ನಡೆದುವು. ಅಲ್ಲಲ್ಲಿ ಆಡುತ್ತಿರುವ ನೃತ್ಯ; ಅದರೊಡನೆ ಎಸೆಯುತ್ತಿರುವ ಪುಷ್ಪಾಂಜಲಿ; ಈ ರೀತಿಯಿಂದ ಪುಷ್ಪಕವನ್ನು ನೃಪನ ಸನ್ನಿಧಿಗೆ ತಂದರು. ರಾಜೇಂದ್ರನಿದಿರಲ್ಲಿ ಪುಷ್ಪಕವು ನಿಂತಾಗ ಕುದುರೆಗಳು ಮಾತ್ರ ವಾದ್ಯಗತಿಗೆ ತಕ್ಕಂತೆ ಕುಣಿಯುತ್ತಿದ್ದುವು. ಕುಣಿವ ಕುದುರೆಗಳಿಗೆ ರನ್ನದ ಗಗ್ಗರ, ಬಣ್ಣದ ಜೋಲಿ,

ಹೊನ್ನಹೂಗಳಿರುವ ಬಾಸಿಂಗ ಮುಂತಾದವುಗಳಿದ್ದುವು. ಭರತೇಶನೇರುವ ಪವನಂಜಯವೆಂಬ ಅಶ್ವರತ್ನವು ರತ್ನಪುಂಜದ ಬಾಸಿಂಗದಿಂದಲೂ ಝಲ್ಲಿಗಳಿಂದಲೂ ರಂಜಿಸುತ್ತಿತ್ತು, ಅಲ್ಲಿ ನೀಲ, ಸುನೀಲ, ಶ್ರೀವತ್ಸ, ಸಾರಂಗ, ಮಂಗಲ, ಮುಂತಾದ ವರ್ಣ ಶುದ್ಧಾಂಗದ ಅಶ್ವಗಳಿದ್ದುವು. ಅವುಗಳು ಒಂದಲ್ಲೊಂದು ರೀತಿಯಿಂದ ತಮಗೆ ಅರಸನಲ್ಲಿದ್ದ ಪ್ರೀತಿಯನ್ನು ತೋರಿಸುತ್ತಿದ್ದವು. ಅಷ್ಟರಲ್ಲಿ ನಾಗಾಂಗನೆಯರು ಬಂದು ರಂಗು ಹೊಳೆಯುತ್ತಿರುವ ರತ್ನದಾರತಿಗಳನ್ನು ಯಕ್ಷನಿಗೆ ಲೀಲೆಯಿಂದೆತ್ತಿ ಬೆಳಗಿದರು. ಅನಂತರ ಪುಷ್ಪಕವು ಮುಂದುವರೆಯಿತು.

ಅತ್ತ ಕುದುರೆಗಳು ಲಾಯ ಸೇರಲು,'ಇತ್ತ ಆನೆಗಳ ಮೆರವಣಿಗೆ ಬಂದುದು. ಆ ಆನೆಗಳೋ ಬೆಟ್ಟಗಳು ಕಾಲು, ಬಾಲ, ಸೊಂಡಿಲು, ದಂತಗಳು ಹುಟ್ಟಿ ನಡೆದು ಬರುವಂತಿದ್ದುವು. ಪಟ್ಟದಾನೆಯ ಮೇಲೆ ಜಿನಬಿಂಬ; ಸುತ್ತಲಿನ ಸಣ್ಣ ಪುಟ್ಟ ಆನೆಗಳ ಮೇಲೆ ಎತ್ತಿದ ಧ್ವಜ ಛತ್ರ ಚಾಮರಗಳು; ರಾಜೇಂದ್ರನ ಪಟ್ಟದಾನೆಯ ಮೇಲೆ ಅನ್ಯರು ಏರಬಾರದೆಂಬ ನಿಯಮಕ್ಕಾಗಿ ಜಿನಬಿಂಬವು ಅಂಬಾರಿಯಿಂದ ಜಾರಿಬೀಳದಂತೆ ಮಯನೇ ಕೌಶಲದಿಂದ ನಿರ್ಮಾಣಮಾಡಿದ್ದ ಹಣೆಗನ್ನಡಿ, ಹೊಕ್ಕಳಗಂಟೆ, ಬಂಗಾರದಿಂದ ಬರೆದಿರುವ ಹಾವರಣೆಗಳಿಂದ ಅಲಂಕಾರಗೊಂಡ ಮದದಾನೆಗಳು ರಾಯನೆಡೆಗೆ ಬಂದುವು. ವಿಜಯ ಪರ್ವತವೆಂಬ ಪಟ್ಟದಾನೆಯ ಮೇಲೆ ರಜತಾದ್ರಿಯೊಡನೆ ಪುರು ಪರಮೇಶನ ಪ್ರತಿಮೆಯಿರುವುದನ್ನು ಕಂಡಕೂಡಲೇ ರಾಜೇಂದ್ರನು ಎದ್ದು ನಿಂತನು. ಆನೆಗಳೆಲ್ಲ ತಮ್ಮ ಸೊಂಡಿಲುಗಳನ್ನೆತ್ತಿ ಶ್ರೀಕರದಿಂದ ಸೇಸೆಹಾಕಿ ಸ್ವರದೋರಿ ಬಲಗಾಲನ್ನು ದಂತದ ಮೇಲಿಟ್ಟು ಚಕ್ರಧರನಿಗೆ ಶಿರಬಾಗಿದುವು. ಅರಸಿಯರೆಲ್ಲರೂ ಬಾಗಿಲೊಳಗೇ ನಿಂತು ಪುರು ಜಿನ ಬಿಂಬವನ್ನು ನೋಡಿ ಕೈಮುಗಿದು ಆರತಿಗಳನ್ನು ಕಳುಹಿಸಿದರು. ಸುಂದರಿಯರು ಸುಂದರತರವಾದ ಆರತಿಗಳನ್ನು ಬೆಳಗಿದ ಮೇಲೆ ದಿಗ್ಗಜಗಳು ನಡೆವಂತೆ ಆನೆಗಳು ನಡೆದು ಹೋದವು. ಆ ಮೇಲೆ ಜಿನಾಲಯದ ಮುಂದೆ ತೇರುಗಳನೆಳೆಯುವಾಗ ವಾದ್ಯಘೋಷ ಮೊಳಗಿತು.

ನಕ್ಷತ್ರಗಳು ಮುಸುಕಿದ ನಾಲ್ಕು ಮೇರುಗಿರಿಗಳಂತೆ ನಾಲ್ಕು ತೇರುಗಳು ನಾಲ್ಕು ದಿಕ್ಕುಗಳಿಗೆ ಹೊರಟುವು. ಆ ರಥಗಳಲ್ಲಿ ಭೂರಿ ದೀಪಗಳು ಬೆಳಗುತ್ತಿದ್ದುವು. ಸ್ವಾಮಿಯ ಪ್ರತಿಮೆಗಳನ್ನು ಧರಿಸಿದ ಆ ರಥಗಳು ಸೋಮವೀಥಿಗಳಲ್ಲಿ ಭೂಮಿಯಿಂದ ಅಮರಲೋಕಕ್ಕೆ ಹೋಗುವಂತೆ ಚಲಿಸಿದುವು. ಪಲ್ಲವ ಸುತ್ತಿಗೆಗಳಿಂದಲೂ, ತೂಗುವ ಝಲ್ಲಿಗಳಿಂದಲೂ, ಆಲ್ಲಾಡಿ ದನಿಮಾಡುವ ಗಂಟೆಗಳಿಂದಲೂ ರಥಗಳ ಸೊಬಗು ಹೊರಚೆಲ್ಲುತ್ತಿತ್ತು, ಮಾಣಿಕ್ಯದ ಕಲಶಗಳು ಈ ಸೊಬಗಿಗೆ ಕಳಶವಿಟ್ಟಂತೆ ಇದ್ದುವು. ರಥಗಳೊಳಗಿರುವ ಸ್ವಾಮಿಯ ಗೆಲವನ್ನು ಸೂಚಿಸುವಂತೆ ಪತಾಕೆಗಳಿದ್ದುವು.

ಮೂರು ತೇರುಗಳು ಮೂರು ದಿಕ್ಕುಗಳಿಗೆ ಹರಿದುವು. ಭರತೇಶನನ್ನು ಹರಸುವುದಕ್ಕಾಗಿ ಅರುಹಂತನೇ ಹೋಗುವಂತೆ ಮತ್ತೊಂದು ರಥವು ಅರಮನೆಯತ್ತ ಹರಿಯಿತು. ಆ ತೇರನ್ನು ಬಳಸಿ ಬಾಣಗಳನ್ನೂ, ಚೀಳು ಬಾಣಗಳನ್ನೂ, ಪುಷ್ಪ ಬಾಣಗಳನ್ನೂ ಬಿಡುವ ಅರ್ಶಿಗಾರರು ಬರುತ್ತಿದ್ದರು. ವಾರನಾರಿಯರ ಪಾತ್ರಗಳಿಂದಲೂ,

ಹಾಡುಗಳಿಂದಲೂ, ಭೇರಿಶಂಖಗಳ ಘೋಷಣೆಯಿಂದಲೂ ಕೂಡಿದ ತೇರು ಹಜಾರದ ಮುಂದೆ ಬಂತು ನಿಂತಿತು. ರಥದಲ್ಲಿರುವ ಸ್ಫಟಿಕದ ಸಿದ್ಧಬಿಂಬಕ್ಕೆ ಭರತೇಶನು ಕೈಮುಗಿದನು. ಯಶಸ್ವತಿ ದೇವಿಯು ಮೇಲಾದ ಮೆಚ್ಚಿನಿಂದ ಭಕ್ತಿಮಾಡಿದಳು. ಸೊಸೆಯರು ರಚಿಸಿದ ರತ್ನದಾರತಿಗಳನ್ನು ಹಸನಾಗಿವೆಯೆಂದು ಪ್ರೀತಿಯಿಂದ ನೋಡಿ ಕಳುಹಿಸಿದಳು. ಅವರು ಬಂದು ತೇರಿನ ಮೇಲಿರುವ ದೇವನಿಗೆ ಉಚಿತವಾದ ಅರ್ಚನೆ ಯೆಸಗಿದರು. ಆಮೇಲೆ ತೇರು ಜಿನಾಲಯದತ್ತ ತಿರುಗಿತು. ರಾಜನು ಸಿಂಹಾಸವೇರಿ ಕುಳಿತನು. ಈ ರೀತಿಯಲ್ಲಿ 'ನವರಾತ್ರಿಯಲ್ಲಿ' ಜಿನಮಹಿಮೆಯು ಮೆರೆಯಿತು.

ಪಾಡ್ಯದಿಂದ ಮೊದಲ್ಗೊಂಡು ನವಮಿವರೆಗೆ ವಿವಿಧ ಕಾರ್ಯಕ್ರಮಗಳಿಂದ ನವರಾತ್ರಿ ಉತ್ಸವ ನಡೆಯಿತು. ಒಂದೊಂದು ದಿನ ಒಂದೊಂದು ರೀತಿಯ ರಥೋತ್ಸವವಾಯಿತು. ಒಂದೊಂದು ಪರಿಯ ವಿದ್ಯಾರ್ಥವಾಯಿತು. ಒಂದೊಂದು ರೀತಿಯ ಪ್ರಭಾವನೆಯಿಂದ ಮಹಾನವಮಿ ಮೆರೆಯಿತು. ಶಾಂತಿಕರಿಂದ, ದಾನಗಳಿಂದ, ತ್ಯಾಗಭೋಗದ ಲೀಲೆಗಳಿಂದ ಭರತೇಶನು ಮಂತ್ರಿಯು ಹೇಳಿದಂತೆ ನವಮಿ ಉತ್ಸವಗಳಲ್ಲಿ ವರ್ತಿಸಿದನು. ರಾಜನನ್ನು ರಾಜ್ಯಗಳಿಂದಲೂ, ವಿದ್ಯಾಜನರನ್ನು ವಿದ್ಯಾಗೋಷ್ಠಿಗಳಿಂದಲೂ ಮಾನ್ಯ ಪುರಜನರನ್ನು ಲಾಲನೆಗಳಿಂದಲೂ ಭರತೇಶನು ಅರ್ತಿ ಮಾಡಿದನು.

ನವಮಿಯ ರಾತ್ರಿಯಲ್ಲಿ ಓಲಗ ಹರಿವುದಕ್ಕೆ ಒಂದಿಷ್ಟು ಸಮಯವಿದೆಯೆನ್ನುವಾಗ ಯುವರಾಜನ ಆಪ್ತಮಂತ್ರಿಯು ಬಂದು ಭರತೇಶನಿಗೆ ಕಾಣಿಕೆಯಿತ್ತು ಸಾಷ್ಟಾಂಗ ವೆರಗಿದನು. ಕಾಮದೇವನೆನಿಸುವ ಬಹುಬಲಿಯ ಪ್ರಣಯಚಂದ್ರಮನೆಂಬ ಆ ಮಂತ್ರಿಯು ಅರಸನ ಅಪ್ಪಣೆಯಂತೆ ಬುದ್ಧಿಸಾಗರ ಮಂತ್ರಿಯ ಒತ್ತಿನಲ್ಲಿಯೇ ಕುಳಿತನು. ಆ ಮಂತ್ರಿಯೊಂದಿಗೆ ಅರಸನು ಕಿರಿಯನ ವಿಚಾರಗಳ ಕುರಿತು ಮಾತನಾಡಿನು.

''ಪ್ರಣಯಚಂದ್ರಮ, ಬಾಹುಬಲಿಯು ನಿತ್ಯ ಯಾವ ಲೀಲೆಗಳಲ್ಲಿದ್ದಾನೆ? ನಮ್ಮ ಪ್ರಯಾಣದ ಕುರಿತು ಏನು ಹೇಳಿದನು?''

''ದೇವರ ಕೃಪೆಯಿಂದ ದೇವರ ಸೋದರರಿಗೆ ಯಾವ ಚಿಂತೆಗಳ ತೊಂದರೆಯೂ ಇಲ್ಲ, ಯಾವಾಗಲೂ ಸುಖದಲ್ಲೇ ಓಲಾಡುತ್ತಿದ್ದಾರೆ. ಪುರುದೇವರ ಮಕ್ಕಳಲ್ಲವೆ? ಕಾವ್ಯನಾಟಕ ಕಾಮಶಾಸ್ತ್ರಗಳಲ್ಲಿ ಒಮ್ಮೊಮ್ಮೆ, ನವಯೌವನೆಯರ ಓಲಗದಲ್ಲಿ ಒಮ್ಮೊಮ್ಮೆ, ಕಾಲ ಕಳೆಯುತ್ತಿರುವವರು, ಶೃಂಗಾರವನದಲ್ಲಿ, ಕೊಳದಲ್ಲಿ ಹೊನ್ನಮಾಡಗಳಲ್ಲಿ, ತಂಗಾಳಿ ತುಂಬಿದ ಕೋಗಿಲೆ ಕೊಳವರ್ಕ್ಕಗಳಿರುವಲ್ಲಿ, ಕನ್ನೆಯರೊಂದಿಗೆ ಕಾಲಕಳೆಯುವರು.ಈ ರೀತಿಯಲ್ಲಿ ಭೋಗಗಳನ್ನು ಭೋಗಿಸುತ್ತಿರುವಾಗಲೇ ಯೋಗಗಳಲ್ಲೂ ನಿರತರಾಗಿರುತ್ತಾರೆ. ಚಕ್ರಿಯ ಒಡಹುಟ್ಟಿದವರಲ್ಲವೇ? ಇದು ನಮ್ಮ ರಾಜರ ವರ್ತನೆ. ಅದು ಹಾಗಿರಲಿ.

''ದೇವರಲ್ಲಿ ಅಪ್ಪಾಜಿಗೆ ಸರಿಯಿಲ್ಲ. ಅರಸರಲ್ಲಿ ಅಣ್ಣಾಜಿಗೆ ಸರಿಯಿಲ್ಲ, ನಾವೆಲ್ಲ ಅವರನ್ನು ನೆನೆದು ಬದುಕುತ್ತೇವೆ'' ಎಂದು ನಿಮ್ಮ ತಮ್ಮ ನಮ್ಮೊಡನೆ ಹೇಳುತ್ತಾರೆ. ಸ್ವಾಮಿಯು ತಮ್ಮನೇ ಇಲ್ಲಿಯ ತನಕ ಬರುವವರಿದ್ದರು. ಆದರೆ ಒಂದು ಶಾಸ್ತ್ರವನ್ನು ಕೇಳತೊಡಗಿದ್ದಾರೆ. ಆದ್ದರಿಂದ ನನ್ನನ್ನಿಲ್ಲಿಗೆ ಕಳುಹಿಸಿದರು. ಅಲ್ಲಿ ಮುನಿಗಳು

ಆತ್ಮಪ್ರವಾದವನ್ನು ಹೇಳುತ್ತಿರುವರು; ನಮ್ಮ ರಾಜರು ಕೇಳುತ್ತಿರುವರು. ನಾಳೆಯೊಳಗೆ ಆ ಗ್ರಂಥವು ಮುಗಿಯುವುದು.''

ಇಷ್ಟು ಮಾತನಾಡಿದ ಪ್ರಣಯಚಂದ್ರಮನು ಗೂಢಾರ್ಥವೊಂದಿದೆ ಎಂದು ತಿಳಿಸಿದನು. ಅದನ್ನು ಕೇಳಿದಾಗ ಸಭೆಯಲ್ಲಿದ್ದವರೆಲ್ಲ ಭರತೇಶನಿಗೆ ಕೈಮುಗಿದು ಚದರಿ ಹೋದರು. ಬುದ್ಧಿಸಾಗರ ಮಂತ್ರಿ ಮಾತ್ರ ಅಲ್ಲಿಯೇ ಇದ್ದನು. ಆನಂತರ ಪ್ರಣಯಚಂದ್ರಮನು ತನ್ನ ಮಾತನ್ನು ಮುಂದುವರೆಸಿದನು.

''ಮಾತೇನೂ ಬೇರೆಯಿಲ್ಲ, ಸ್ವಾಮಿ. ಸ್ವಾಮಿಯವರು ಪಯಣ ಬೆಳೆಸಿದಾಗ ಸ್ವಾಮಿಯ ಮಾತೆಯನ್ನು ತನ್ನ ಪುರಕ್ಕೆ ಕರೆದೊಯ್ಯಲು ಬಾಹುಬಲಿಗಳೇ ಬರುವರಂತೆ. ಅದನ್ನು ಸೂಚಿಸುವುದಕ್ಕಾಗಿ ನನ್ನನ್ನು ಕಳುಹಿಸಿದರು.''

''ಮಗನ ಮನೆಗೆ ತಾಯಿ ಹೋಗುವರು. ತಾಯನ್ನು ಮಗ ಕರೆದೊಯ್ಯುವನು. ಇದಕ್ಕೆ ಈ ತೆಗೆಬಿಗಿಯೇನು? ನಮ್ಮನ್ನೇನು ಕೇಳುವುದು? ತಾನು ಮಗ, ನಾನು ಮಗನಲ್ಲವೆ? ಅಪ್ಪಾಜಿ ನನಗೆ ಓಜೆ ಕಲಿಸುವವರಲ್ಲದೆ ನಾನು ಅವರಿಗೆ ಹೇಳುವವನೇ? ತಮಗೆ ಈ ಎಣಿಕೆ ಯಾಕೆ? ಅಮ್ಮನನ್ನು ತನ್ನ ಊರಿಗೆ ಕರೆಸಿಕೊಳ್ಳಲಿ'' ಎಂದು ಭರತೇಶನು ಮಂತ್ರಿಗೆ ತಿಳಿಸಿದನು. ''ದೇವರು ಹೇಳಿದಂತೆಯೇ ದೇವರ ತಮ್ಮನೂ ಇದಕ್ಕೆ ಯಾರನ್ನು ಕೇಳಬೇಕೆಂದೇ ಹೇಳಿದರು. ನಾನಾಗ ಅದು ಮತವಲ್ಲ ಸೂಚಿಸಬೇಕು. ಎಂದು ಬಂದೆನು. ''ಮಂತ್ರಿ, ನೀನು ಉತ್ತಮನಾಗಿರುವಿ. ನಮ್ಮ ತಮ್ಮನ ಒತ್ತಿನಲ್ಲಿರಬೇಕು'' ಎಂದು ಚಕ್ರಿಯು ಅವನಿಗೆ ಉತ್ತಮವಾದ ಉಡುಗೊರೆಯಿತ್ತು ಕಳುಹಿಸಿದನು. ಪ್ರಣಯಚಂದ್ರ ಮಂತ್ರಿಯು ಭರತೇಶನಿಗೆರಗಿ ತೆರಳಿದನು. ಭರತೇಶನು ತನ್ನ ಮನದಲ್ಲೇ ಯುವರಾಜನ ಅಂತರಂಗವನ್ನು ತೂಗಿ ನೋಡಿದನು. ಅದರೊಂದಿಗೆ ಮೊಗದಲ್ಲಿ ನಸುನಗೆಯಾಡಿತು. ಮತ್ತೆ ಬುದ್ಧಿಸಾಗರನೊಡನೆ ಹೀಗೆಂದನು.

''ಬುದ್ಧಿಸಾಗರ, ಭುಜಬಲಿಯ ಉದ್ಧತಿಕೆಯನ್ನು ಕಂಡೆಯಾ? ಶುದ್ಧ ಚಿತ್ತದಿಂದಿಲ್ಲಿಗೆ ಬರುವುದನ್ನು ಬಿಟ್ಟು, ಶಾಸ್ತ್ರದ ಶುದ್ಧಿ ತೋರಿಸಿದನು. ಭುಜಬಲಿಗಿದು ದರ್ಪ. ಅದರ ಮೇಲೆ ಕಂದರ್ಪನೆಂಬ ಹೆಮ್ಮೆ! ತನಗಾರು ಸಾಟಿಯೆಂಬ ಬಿಂಕವಿದು. ಈ ಕಾಲವು ಹುಂಡಾವಸರ್ಪಿಣಿಯಲ್ಲವೇ? ಪ್ರಣಯ ಚಂದ್ರಮನು ಹೇಳಿದ ಮಾತುಗಳೆಲ್ಲ ಬಣ್ಣಗಾರಿಕೆಯ ಪ್ರೇಮೋಕ್ತಿಗಳು. ಅಣ್ಣನೆಂದು, ಭಕ್ತಿ ಮಾಡುವವನು ಭುಜಬಲಿಯಲ್ಲ; ತಣ್ಣಗಿರಲಿ ನನಗೇನಂತೆ! ಇವನಿಂತು ಯುವರಾಜನೆಂಬ ಗರ್ವದಿಂದಿರುವುದನ್ನು ನೋಡಿ ಮೇರುಗಿಯವರೂ ರವಿಯನ್ನು ನೋಡಿದ ಉತ್ಪಲದಂತೆ ಓರೆಯಾಗಿರುವರು. ಅವರಿಗೂ ನಮ್ಮೊಡನೆ ದುಗುಡವಂತೆ. ಅಪ್ಪಾಜಿ, ಅಮ್ಮಾಜಿ ಎಂದರೆ ಇವರಿಗೆ ತುಂಬಾ ಭಕ್ತಿ, ನಮ್ಮನ್ನು ಕಂಡರೆ ಅರಸನೆಂದು ವಿರಸ. ಪುರುದೇವರ ಮಕ್ಕಳಿಗಿದು ನಡತೆಯೇ? ನಾನಿವರಲ್ಲಿ ವಿನಯದಿಂದಲೇ ಇರುವೆನು. ಇವರೋ ನನ್ನಲ್ಲಿ ಪರಕೀಯರಂತಿರುವರು, ನಾನಿವರಿಗೇನು ಮಾಡಿರುವೆನು ನೀನೇ ಹೇಳು? ಜಿನನಾಣೆಯಾಗಿ ಹೇಳುತ್ತೇನೆ. ಇಂದು ನಿನ್ನಲ್ಲಿ ಮಾತ್ರ ಇದನ್ನು ಹೇಳಿದೆ. ಇವರ ಈ ಚೇಷ್ಟೆಗಳನ್ನು ಜನನಿ ತಿಳಿದರೆ ನೊಂದುಕೊಂಡಾರೆಂದು. ಇದನ್ನೆಲ್ಲ ಮರೆಮಾಚಿಕೊಂಡು, ತಮ್ಮಂದಿರೆಲ್ಲ ಒಳಿತಾಗಿರುವರೆಂದೇ ಹೇಳುತ್ತಿದ್ದೆನು.

ಅಂದು ಮುನಿಗಳಾದ ಆ ಸೋದರರು ತನಗೆ ತಕ್ಕವರಾಗಿದ್ದರು. ನನಗೀಗ ಗುರುಗಳಾಗಿದ್ದಾರೆ. ಅವರ ವಿಚಾರದಲ್ಲಿ ನನಗೆ ಅನುಮಾನವೇ ಇಲ್ಲ. ನೀನೇ ನೋಡು, ಇವರು ನನ್ನ ಅನುಜರೋ ದನುಜರೋ?''

ತಮ್ಮಂದಿರ ವರ್ತನೆಯಿಂದ ನೊಂದ ಭರತೇಶನ ನುಡಿಗೇಳಿದ ಬುದ್ಧಿಸಾಗರನು ಅವನನ್ನು ಸಮಾಧಾನಪಡಿಸಿದನು.

''ಸ್ವಾಮಿ ಇವರೆಲ್ಲ ಕಿರಿಯರು. ಇವರಿಂದ ನಿನಗಾವ ಕೊರತೆಯೂ ಇಲ್ಲ; ಅವರಿಗೊಂದೂ ತಿಳಿಯದು. ನಿನ್ನೊಂದಿಗೆ ಹೊಂದಿಕೊಂಡು ಬದುಕುವುದಕ್ಕೆ ಪುಣ್ಯಬೇಕು, ಮೂರುಲೋಕದ ಜಾಣರೆಲ್ಲರೂ ನಿನ್ನ ಬಲ್ಲಾರಿಕೆಗೆ ಅರ್ತಿ ಮಾಡುತ್ತಾರೆ. ನೂರು ಮಂದಿ ಸೋದರರು ಅಡ್ಡ ಮೋರೆ ಮಾಡಿದರೇನಂತೆ? ಜಗವೆಲ್ಲ ಭಾಸ್ಕರನ ಉನ್ನತಿಗೆ ಅರ್ತಿಮಾಡುವುದೆಂಬುದಕ್ಕೆ ನಿನ್ನ ನುಡಿಯೇ ಸಾಕು, ನೈದಿಲೆ ಅಡ್ಡಮೋರೆಯಿಂದಿದ್ದರೆ ಪ್ರಭಾಕರನಿಗೇನು ಕೊರತೆ? ನಿನ್ನ ತಮ್ಮಂದಿರು ಮದಮುಖರಲ್ಲವೆಂದು ನಾನು ಬಲ್ಲೆ. ನಿನ್ನೊತ್ತಿಗೆ ಬರುವುದಕ್ಕೆ ಅಂಜುತ್ತಾರೆ. ನಿನ್ನ ಗಂಭೀರವೆಂದರೆ ಸಾಮಾನ್ಯವೇ. ಈ ಪ್ರಾಯದಲ್ಲಿ, ಈ ಸಿರಿಯಲ್ಲಿ, ನೀನೊಬ್ಬನೇ ಜಯಮಾನದಿಂದ, ಗಂಭೀರದಿಂದ ನಡೆದಿರುವೆ. ಈ ನಡತೆಯು ನಿನ್ನ ತಮ್ಮಂದಿರಿಗಿನ್ನೂ ಬಂದಿಲ್ಲ. ಆದಕ್ಕಾಗಿ ಅವರೆಲ್ಲ ನಾಚಿಕೆಯಿಂದಿದ್ದಾರೆ. ಚಿಕ್ಕವರಾದ ನಿನ್ನ ತಮ್ಮಂದಿರಲ್ಲಿ ಇನ್ನೂ ಮಕ್ಕಳಾಟಿಕೆಯುಂಟು. ಚಿಕ್ಕಣ್ಣನ ಬಳಿಗೆ ಅಂಜದೆ ಹೋಗುವರು. ದೊಡ್ಡಣ್ಣನ ದಿಕ್ಕೆಂದರೆ ಒಂದಿಷ್ಟು ಯೋಚಿಸುತ್ತಾರೆ. ಹುಚ್ಚು ಹುಚ್ಚಾಗಿ ನಡೆದರೂ ಭುಜಬಲಿರಾಜ ಮೆಚ್ಚುವನು. ಆದಕ್ಕಾಗಿ ಅವರು ಅಂಜುವುದಿಲ್ಲ. ಹುಚ್ಚು ನಡತೆಯನ್ನು ನೀನು ಮೆಚ್ಚಲಾರೆಯೆಂದು ಬೆಚ್ಚಿ ದೂರದಲ್ಲೇ ಇದ್ದಾರೆ. ಇವರು ತಮ್ಮ ನಡತೆಗಾಗಿ ನಾಚಿಕೆಯಿಂದಿದ್ದಾರಲ್ಲದೆ ಹೆಮ್ಮೆಯಿಂದಲ್ಲ. ನಾಳೆ ತಾವಾಗಿಯೇ ಬಂದು ಎರಗುವರು.''

ಮಂತ್ರಿಗೆ ಭೂಷಣವಾಗುವ ತೆರದಲ್ಲಿ ಬುದ್ಧಿಸಾಗರನಾಡಿದ ಮಾತುಗಳನ್ನು ಕೇಳಿ ಭರತೇಶನೂ ಅಹುದೆಂದು ಒಪ್ಪಿದನು. ಒಡಕು ಹುಟ್ಟಿಸದ ಬಾಂಧವ್ಯ ತಂತ್ರಿಯೆಂದು ತನ್ನ ಮಂತ್ರಿಯನ್ನು ಮೆಚ್ಚಿದರೂ, ಹೊರಗೆ ನುಡಿದು ತೋರಿಸದೆ ಭರತೇಶ ಸಂತೋಷದಿಂದಿದ್ದನು.

ಅಷ್ಟರಲ್ಲಿ ಅರ್ಧರಾತ್ರಿಯ ಭೇರಿನಾದ ಕೇಳಿತು. ಭರತೇಶ್ವರನು ಜಿನಸಿದ್ಧ ಎಂದು ಹೇಳಿ ಎದ್ದನು. ಅನಂತರ ವರಮಂತ್ರಿ ಸೇವಕರೊಡಗೂಡಿ ಶಸ್ತ್ರಮಂದಿರಕ್ಕೆ ಬಂದನು. ವಿಶಾಲವಾದ ಶಸ್ತ್ರಶಾಲೆಯ ಒಳಕೋಣೆಯಲ್ಲಿ ಆಯುಧಗಳೆಲ್ಲ ಸಾಲುಸಾಲಾಗಿದ್ದವು. ಅವು ಬಲಿ ಪುಷ್ಪ ಗಂಧಗಳ ಪೂಜೆಯಿಂದ ವೀರರಸವನ್ನು ಹೊರಸೂಸುತ್ತಿದ್ದವು. ಅಲ್ಲಿ ರಕ್ತ ಚಂದನದ ಸಾರಣೆಕಾರಣೆ ಮಾಡಿದ್ದರು. ರಕ್ತಚಂದ್ರಿಕೆಯ ಮೇಲ್ಕಟ್ಟನ್ನು ಕಟ್ಟಿದ್ದರು. ರಕ್ತವರ್ಣದ ಹೂಮಾಲೆಗಳನ್ನೇ ಹಾಕಿದ್ದರು. ಅಲ್ಲಿ ಪಂಚವರ್ಣದ ಕೂಳು ಕಜ್ಜಾಯಗಳಿದ್ದವು. ಹುಗ್ಗಿ, ಎರೆಯಪ್ಪ, ಕಿಚ್ಚಡಿ, ರೊಟ್ಟಿ, ದೋಸೆ ಮುಂತಾದವುಗಳನ್ನು ಇರಿಸಿದ್ದರು. ತುಪ್ಪಗಳ ಹಿರಿ ಸೊಡರುಗಳು ಉರಿಯುತ್ತಿದ್ದವು. ತರಿಗೆಂಡಗಳ ಹೋಮಕುಂಡ ಹೊಳೆಯುತ್ತಿತ್ತು. ತರಿದು ಬಿಟ್ಟಿದ್ದ ಕಬ್ಬು ತೆಂಗಿನಕಾಯಿಗಳಿಂದ ಖಡ್ಗಪೂಜೆ ಮೆರೆದಿತ್ತು.

ಪೊಗೆಯೇಳುವ ಧೂಪಗಳಿಂದ, ಹೊನ್ನಕಿಡಿ ಕೆದರುವ ದೀಪಗಳಿಂದ, ಬಗೆ ಬಗೆಯ ಹೂಮಾಲೆಗಳಿಂದ ಹಣ್ಣುಕಾಯಿ ಕೆಂಪು ಚರುಗಳಿಂದ ದಿಗ್ಬಲಿ ಕೊಟ್ಟಿದ್ದರು.

ಅಲ್ಲಿ ಭೆಲ್ಲೆ ,ಕತ್ತಿ ಕಠಾರಿ, ಮುಪ್ಪಿಡಿ, ವಂಕಿ, ಗದೆ, ಲಾಡಿ, ಪರಶು, ಸುರಗಿ, ಸಬಳಗಳೂ, ಬಿಲ್ಲಂಬು ಜವದಾಡೆ, ಖಂಡೆಯ, ಚಂದ್ರಹಾಸ, ಕಡಿತಲೆ, ಕಕ್ಕಡೆ,ಡಾಣೆ, ವಿಚಂಡಿಗಳೂ, ಕೃಪಾಣ ದಂಡರತ್ನಾಯುಧಗಳೂ, ಸರ್ಪಮಂಡಲವೋ ಎಂಬಂತೆ ಇದ್ದುವು. ಭರತೇಶನೊಂದಿಗೆ ದಂಡು ನಡೆವನೋ ತಾನೆಂದಿಗೆ ರಿಪುಗಳನ್ನು ತಿಂದು ತೇಗುವೆನೋ ಎಂದು ಮೃತ್ಯು ನಾಲಿಗೆ ನೀಡಿರುವಂತೆ ಸಾನಂದಕವೆಂಬ ಅಸಿರತ್ನವು ಅಲ್ಲಿ ಮೆರೆದಿತ್ತು, ಇವೆಲ್ಲವುಗಳ ಮಧ್ಯದಲ್ಲಿ ಜ್ವಾಲಾರ್ಕನಂತೆ ಚಕ್ರರತ್ನವು ಎಸೆದಿತ್ತು. ಇದನ್ನು ಚಕ್ರೇಶ್ವರನು ನೋಡುವಷ್ಟರಲ್ಲಿ ಬುದ್ಧಿಸಾಗರ ಮಂತ್ರಿ ಮುಂದೆ ಬಂದು ಬಿನ್ನಹ ಮಾಡಿದನು.

''ಸ್ವಾಮಿ, ಇದುವರೆಗೆ ಚಕ್ರರತ್ನದ ಪೂಜೆಯಾಯಿತು. ನಾಳೆ ವಿಕ್ರಾಂತ ಲಗ್ನದಲ್ಲಿ ವಿಜಯ ಪ್ರಯಾಣವು ಯಥಾಕ್ರಮದಿಂದಾಗುವುದು.''

ಈ ಮಾತನ್ನು ಕೇಳಿ ಭರತೇಶನು ಚಕ್ರರತ್ನದ ಮೇಲೆ ತಾನೊಂದು ಕಮಲವನ್ನಿಟ್ಟನು. ಭಾಸ್ಕರನನ್ನು ತಾವರೆಯು ಸೇರಿತು. ''ದೇವರಿಗಿದು ಯೋಗ್ಯವಾದ ಚಿನ್ಹೆ'' ಎಂದು ಮಂತ್ರಿ ಮತ್ತೊಮ್ಮೆ ಬಿನ್ನಹ ಮಾಡಿದನು. ಚಕ್ರಿಯು ನಗುಮೊಗದಲ್ಲೇ ಮಂತ್ರಿಯನ್ನು ಬೀಳ್ಕೊಟ್ಟು ಶಸ್ತ್ರಾಗಾರದಿಂದ ಹೊರಟು ತನ್ನ ಅರಮನೆಯನ್ನು ಸೇರಿದನು.

## ೨

# ಪಟ್ಟಣ ಪಯಣ

ರಾಜ್ಯೋತ್ತಮನಾದ ಭರತಚಕ್ರಿಯ ದಶಮಿಯ ಉತ್ತಮ ಲಗ್ನದಲ್ಲಿ ದಿಗ್ವಿಜಯಕ್ಕೆ ಹೊರಟನು. ಅವನು ಶೃಂಗಾರವಾಗಿ ಹೊರಟ ಸಂಪತ್ತನ್ನು ಬಣ್ಣಿಸಲು ಸಾಧ್ಯವಿಲ್ಲ. ಹಾಗೆ ಹೊರಟವನೇ ತನ್ನ ತಾಯ ಅರಮನೆಗೆ ಬಂದನು. ಬರುತ್ತಿರುವ ಮಗನ ಸೌಭಾಗ್ಯವನ್ನು ತಾಯಿ ತನ್ನೆರಡು ಕಣ್ಣುಗಳು ತಣಿಯುವಂತೆ ನೋಡಿ ಹರುಷವೇರಿದಳು. ಸಂಪೂರ್ಣ ಚಂದ್ರನನ್ನು ಕಂಡು ಸಾಗರವು ಉಕ್ಕೇರುವಂತೆ ಆಕೆಯ ಹರುಷವು ಹೆಚ್ಚಿತು.

ವಿಲಾಸಿನಿಯರ ನಟ್ಟನಡುವೆಯ ಮಾಣಿಕ್ಯದ ದೇವತೆಯಂತಿರುವ ಅಕಳಂಕ ಚರಿತೆಯಾದ ತಾಯಿಗೆ ಷಟ್ಖಂಡಾಧಿಪನಾದ ಭರತೇಶನು ಸಾಷ್ಟಾಂಗವೆರಗಿ ಕಾಣಿಕೆಯಿತ್ತನು ''ಸಮುದ್ರಾಂತಧರೆಯನ್ನು ಲೀಲಾಮಾತ್ರದಲ್ಲಿ ಜಯಿಸು ಕಂದಾ. ಜಿನಭಕ್ತಿಯಲ್ಲೂ ಭೋಗದಲ್ಲೂ ಇಂದ್ರನಾಗು'' ಎಂದು ಜನನಿಯು ಭರತನನ್ನು ಹರಸಿದಳು.

''ದೊಡ್ಡಣ್ಣ, ಪಯಣವೆ ನಿನಗಿಂದು''

''ನಯನ ಲೀಲಾರ್ಥವಾಗಿ ರಾಜ್ಯದಲ್ಲಿ ಸುತ್ತಾಡಿ ಬಂದು ಬೇಗನೆ ನಿಮ್ಮ ಪಾದಗಳನ್ನು ಕಾಣುತ್ತೇನೆ.''

ಅನಂತರ ಭರತೇಶನು ಭುಜಬಲಿಯು ಬರುವ ವಿಚಾರವನ್ನು ಪ್ರಸ್ತಾಪಿಸಿದನು. ''ಅಮ್ಮಾ ಭುಜಬಲಿಯು ನಾಡಿದಲ್ಲಿಗೆ ಬಂದು ತಮ್ಮನ್ನು ಕರೆದೊಯ್ಯುವೆನೆಂದು ನಿನ್ನೆ ರಾತ್ರಿ ಹೇಳಿ ಕಳುಹಿಸಿದನು. ನಾನಿಲ್ಲದಾಗ ನೀವೊಬ್ಬರೇ ಚಿಮ್ಮನಿರುವುದು ಒಳಿತಲ್ಲ. ಮೀನಾಂಕನ ಯೋಚನೆ ಒಳಿತಾದುದು. ನಾನು ಧರೆಯನ್ನು ಸಾಧಿಸಿ ಬರುವವರೆಗೆ ಅಲ್ಲಿರಿ'' ಎಂದು ಹೇಳಿ ಮೇಲೆ ತನಗೊಂದು ಬುದ್ಧಿ ಮಾತನ್ನೂ ಹೇಳಿಯೆಂದು ಬೇಡಿಕೊಂಡನು. ಆ ಮಾತನ್ನು ಕೇಳಿದ ಯಶಸ್ವತಿ ದೇವಿಯು ನಸುನಕ್ಕು ನುಡಿದಳು—

''ಮಗನೆ, ನಿನಗೆ ನಾನು ಬುದ್ಧಿ ಹೇಳುವುದೇ? ಜಗತ್ತಿಗೆ ನೀನೇ ಸರಿಯಾದ ಬುದ್ಧಿಗಲಿಸುವವನು. ಖೂಳತನದಲ್ಲಿ ನಡೆಯುವ ಮಗನಿಗೆ ತಾಯಿಯು ಬುದ್ಧಿ ಹೇಳಬೇಕು. ಹಾಲನ್ನು ಹಿಡಿವ ಹಂಸದಂತಿರುವವಗೆ ಏನನ್ನು ಹೇಳಲಿ? ಹೆತ್ತ ತಾಯಿಯೆಂದು ನೀನು ಕೇಳಿದ್ದು ಉತ್ತಮವಾಯಿತು. ದೊಡ್ಡಣ್ಣ ಮುತ್ತಯ್ಯನಂತೆ ನಿನ್ನ ನಡತೆಯೂ ಪ್ರಕಾಶವಾಗಿದೆ. ನಿನ್ನ ಶತ್ರುಗಳನ್ನು ಗೆದ್ದು ಬಾ. ಬರುವಾಗ ನಮ್ಮ ಊರಿಗಾಗಿ ಬಾ.''

''ನನ್ನ ಮನಸ್ಸಿನಲ್ಲಿ ಸಹಜ ಬುದ್ಧಿಯುಂಟೆಂದು ನಿಶ್ಚಯವುಂಟೇ?'' ಎಂದು ಭರತನಾಗ ಸಹಜವಾಗಿಯೇ ತಾಯಿಯನ್ನು ಕೇಳಿದನು. ಅದಕ್ಕೆ ತಾಯಿ, ''ಉಂಟುಂಟು''

ಎಂದೊಪ್ಪಿಕೊಂಡಳು. ಅನಂತರ ಭರತೇಶನು ಜನನಿಯ ಚರಣಾರವಿಂದಗಳಿಗೆ ನಮಿಸಿದನು. ಆಕೆ ಚಂದದಿಂದೆದ್ದು ಅವನಿಗೆ ಮುತ್ತಿನ ಅಕ್ಷತೆಯನ್ನೆರಚಿದಳು. ಅವನನ್ನು ತಕ್ಕೈಸಿಕೊಂಡು ತೂಪಿರಿದು, ಅಕ್ಕರೆಯಿಂದ ನೋಡಿ, ಆತ್ಮಾನಂದದಿಂದ ನಕ್ಕಳು. ''ಮಗನೆ, ತಾಮಸ ಮಾಡಬೇಡ. ಮಾನವೇಂದ್ರನ್ನು ಕಾಲಿಗೆರಗಿಸಿಕೊಂಡು ನಮ್ಮ ಊರಿಗೆ ಬಾ.'' ಎಂದು ಮತ್ತೊಮ್ಮೆ ಹರಸಿ ಮಗನನ್ನು ಬೀಳ್ಕೊಟ್ಟಳು.

ಜನನಿಯಿಂದ ಹರಕೆಗೊಂಡು ಭರತೇಶನು 'ಜಿನಸಿದ್ಧ' ಎನುತೆದ್ದು ಹೋದನು. ಅಷ್ಟರಲ್ಲಿ ಸೊಸೆಯರು ಅಲ್ಲಿಗೆ ಬಂದರು. ಆ ರಾಜಾಂಗನೆಯರು ಶೃಂಗಾರವಾಗಿ ಸಂತೋಷದಿಂದ ಅಲ್ಲಿಗೆ ಬಂದು ಅತ್ತೆಯ ಚರಣಗಳಿಗೆರಗಿದರು. ''ಬನ್ನವೆಂಬುದು ನಿಮ್ಮ ಕನಸಿನೊಳಗೂ ಕಾಣದಿರಲಿ. ನನ್ನ ಅಣುಗನೊಡಗೂಡಿ ಲೀಲೆಯಿಂದಾಡಿಕೊಂಡು ಬನ್ನಿ'' ಎಂದವರನ್ನು ಹರಿಸಿದಳು.

''ಬುದ್ಧಿ ಏನು ಅತ್ತ್ಯಮ್ಮ ನಮಗೆ?'' ಎಂದು ಆ ಬುದ್ಧಿಕಾರನ ಪತ್ನಿಯರು ಕೇಳಿದರು.

''ನಿಮ್ಮರಸನ ಜಾಣ್ಮೆ ಲೋಕದ ಜಿಡ್ಡನ್ನು ತೊಳೆದು, ಕಮ್ಮನೆ ಮಾಡುವುದು. ನಿಮ್ಮ ಪತಿಯು ಹೇಳಿದಂತಿರುವುದೇ ನಿಮಗೆ ನಮ್ಮ ಬುದ್ಧಿವಾದ. ನೀವು ಜಾಡ್ಯೆಯರಲ್ಲ; ಮತ್ಸರ ನಿಮ್ಮಲ್ಲಿಲ್ಲ. ಇನ್ನೇನು ಬುದ್ಧಿ ಹೇಳಲಿ? ಯಾವ ಚಿಂತೆಯೂ ನನಗಿಲ್ಲ'' ಎಂದು ಅತ್ತೆಯು ಸೊಸೆಯರಿಗೆ ಪ್ರೀತಿಯಿಂದ ಹೇಳಿದಳು. ಅತ್ಯಮ್ಮನ ಅಡಿಗಳನ್ನು ಪುನಃ ಕಾಣುವವರೆಗೆ ವ್ರತಮಾಡಬೇಕೆಂದವರು ತಮ್ಮಲ್ಲೇ ಆಲೋಚಿಸಿದರು. ಉಣ್ಣುವ ರಸಗಳಲ್ಲಿ ಮುಡಿವ ಪುಷ್ಪಗಳಲ್ಲಿ, ಉಡುವ ವಸ್ತ್ರಗಳಲ್ಲಿತಾಂಬೂಲಗಳಲ್ಲಿ ಒಂದೊಂದನ್ನು ತೊರೆವ ವ್ರತವನ್ನು ಒಬ್ಬೊಬ್ಬರು ಕೈಗೊಂಡರು. ''ಮಲ್ಲಿಗೆಯನ್ನು ಸೂಡೆನು.'' ''ಜಾಜಿಯನ್ನು ಒಲ್ಲೆನು.'' ''ಮೊಲ್ಲೆಯನ್ನು ತೊರೆಯುವೆನು,'' ಒಬ್ಬಳು ಚಿಲುಪಾಲು ವ್ರತವನ್ನಾಂತಳು. ಇನ್ನೊಬ್ಬಳು ತಾನು ಫೇಣಿಯನ್ನು ಮೆಲಲೊಲ್ಲೆನೆಂದಳು. ಹೀಗೆ ಗೋರೋಜನ ಕಸ್ತೂರಿಗಳನ್ನು ಅವರು ತೊರೆದರು. ಇನ್ನೂ ಕೆಲವರು ತಮ್ಮ ಉಡಿಗೆಯ ಸೀರೆಗಳಲ್ಲಿ ಕೆಲವನ್ನು ತೊರೆದರು.

ಸೊಸೆಯರ ಈ ವ್ರತಗಳನ್ನು ಕೇಳಿದ ಅತ್ತೆ ಅದನ್ನು ಸಹಿಸದಾದಳು. ಬರಿದೇಕೆ ಅವರು ಕಷ್ಟಪಡಬೇಕೆಂದು ಅದನ್ನು ಮಾಣಿಸಲು ಪ್ರಯತ್ನಿಸಿದಳು. ''ಪರರಾಜ್ಯಗಳಿಗೆ ಹೋಗುವ ನೀವು ಸಂಚಾರಕಾಲದಲ್ಲಿ ವ್ರತದಿಂದಿರುವುದು ಒಳಿತಲ್ಲ.'' ''ಭರತೋರ್ವಿ ನಮ್ಮದು. ನಾವೇನು ಪರರಾಜ್ಯಗಳಿಗೆ ಹೋಗುವುದಿಲ್ಲ.'' ಎಂದವರು ಆಕೆಯನ್ನು ಸಮಾಧಾನ ಮಾಡಿ ಅತ್ತೆಗೆರಗಿದರು. ಆಕೆ ಸೇಸೆ ತಳಿದು ಹರಸಿ ಅವರನ್ನು ಬೀಳ್ಕೊಟ್ಟಳು. ಅರಸಿಯರು ಕನಕ ಪಲ್ಲಕ್ಕಿಯನ್ನೇರಿ ನಡೆದರು. ಸಾಮಾನ್ಯ ಸೇವಕಿಯರು ಬೆಳ್ಳಿಯ ದಂಡಿಗೆಯನ್ನೇರಿ ಈ ಸತಿಯರ ಮಧ್ಯದಲ್ಲಿರುವ ಬಂಗಾರದ ರಥದಲ್ಲಿ ಅರ್ಕಕೀರ್ತಿ ಕುಮಾರನ ತೊಟ್ಟಿಲೂ ಸಾಗಿತು.

ಸತಿಯರೆಲ್ಲ ಅತ್ತ ನಡೆದಾಗ ಭರತ ಚಕ್ರಿಯು ತನ್ನ ವಿನೋದದ ಕೆಳೆಯರೊಂದಿಗೆ ಮಣಿಕನಕದ ಹಾವುಗೆ ಮೆಟ್ಟಿ ಜಿನಗೇಹಕ್ಕೆ ನಡೆದನು. ಅವನೊಂದಿಗೆ ಮಂತ್ರಿಯೂ ನಡೆದನು. ಅರಸು ಜಿನಗೇಹಕ್ಕೆ ಹೋಗುತ್ತಿರುವಾಗ ಜೋಯಿಸರ ಓದುವ ಪಂಚಾಂಗ, ಶುದ್ಧವಾದ ಲಗ್ನಾಯತಾರ್ಥಗಳನ್ನು ಆಲಿಸಿದನು. ರಾಯನನ್ನು ನೋಡಿ

ಶಾಸ್ತ್ರೋಪಾಧ್ಯಾಯರು "ಶ್ರೇಯೋಜಯಸಿದ್ಧಿರಸ್ತು" ಎಂದು ಹೊಗಳಿದರು. ಅಲ್ಲಿ ಆತ್ಮಸಾರವನ್ನು ಶ್ರೀರಾಗದಲ್ಲೂ ಮಧು ಮಾಧವಿಯಲ್ಲೂ ಹಾಡುತ್ತಿರುವುದನ್ನು ಕೇಳುತ್ತ ಭರತೇಶನು ನಡೆದನು. ಆಗ ಭೂರಿವಾದ್ಯಗಳೂ ಮೊಳಗುತ್ತಿದ್ದವು.

ತಾಯ ಮನೆಯಿಂದ ಭರತಚಕ್ರಿಯ ಹೊರಟು ಹೋಗುವಾಗ ಹಲ್ಲಿ, ಕಾಗೆ, ಗರುಡಾದಿಗಳ ಶಕುನಗಳನ್ನು ಅವನೊಡನಿದ್ದ ಅನುಕೂಲ ನಾಯಕ, ನಾಗರ ನಾಯಕ, ಮತ್ತು ದಕ್ಷಿಣ ನಾಯಕರು ತಿಳಿಸಿದರು. ಅಷ್ಟರಲ್ಲೊಂದು ಗೂಳಿಯು ಗುಟರಿಕ್ಕುತ್ತ ಧೂಳು ಚೆಲ್ಲುತ್ತ ಬಂತು. ಅದನ್ನು ನೋಡಿದ ದಕ್ಷಿಣನು ಮುಂದಣ ದಾಳಿ ವಿಕ್ರಮದ ಸೂಚನೆಯಿಂದೆಂದು ಹೇಳಿದನು. ಭರತೇಶನು ಇದನ್ನು ಕೇಳುತ್ತ ಒಳಗೊಳಗೆ ನಗುತ್ತ ಮನದಲ್ಲೇ ಹಂಸನಾಭನನ್ನು ನೆನವುತ್ತ ಊರ ಮಧ್ಯದ ಜಿನಗೇಹಕ್ಕೆ ಬಂದನು. ಹೊರಗಣ ಪೌಳಿಯನ್ನು ಕಂಡೊಡನೆ ಚಕ್ರಿಯು ತನ್ನ ಹಾವುಗೆಯನ್ನು ಕಳಚಿದನು. ಮಿರುಗುತ್ತಿರುವ ಐದು ಹೊನ್ನ ಕೋಟೆಗಳನ್ನು ದಾಟಿ ಮೆರೆವ ಆದಿಜಿನನ ಬಿಂಬವನ್ನು ನೋಡಿದನು. ಭದ್ರ ಮಂಟಪದಲ್ಲಿ ನಿಂತು ಕಾಣಿಕೆಯಿತ್ತು ಭದ್ರಭಾವದಿಂದ ಬಿಂಬಕ್ಕೆರಗಿದನು. ಅಲ್ಲಿಯೇ ಇದ್ದ ಚಿದ್ರೂಪಭಾವನೆಯ ಯೋಗಿಗಳ ಸಾಗರಕ್ಕೆ ನಮಿಸಿದನು. ಆಗ ಅಲ್ಲಿ ಆ ಯೋಗಿಗಳು ಅವನನ್ನು ಹರಸಿದರು. "ಸಿದ್ಧ ದಿಗ್ವಿಜಯ ಕಾರ್ಯೋಭವ" "ಭೂಪ ಸಮೃದ್ಧ ಸುಖೀಭವ" ಎಂದು ಆ ನಿರಂಜನ ಭಾವನೆಯ ಯೋಗಿಗಳು ಸಿದ್ಧಾಂತ ಘೋಷ ವೆಸಗಿದರು. ಪದ್ಧತಿಕಾರನಾದ ಭರತೇಶನು ಸಿದ್ಧಸೇನೆಯನ್ನು ಪಡೆದು ಮೃತ್ಯುಂಜಯಸಿದ್ಧ ಚಕ್ರಾದಿ ಯಜ್ಞಗಳ ಶುದ್ಧ ವಿಭೂತಿಯನ್ನು ಮುಟ್ಟಿ ಕೊರಳಿಗಿಟ್ಟುಕೊಂಡನು.

ಆಗ ಮಂತ್ರಿಯು ಮುಂದೆ ಬಂದು, "ಹೋಮ ಕರ್ಮಗಳು ಚೆನ್ನಾಗಿ ನಡೆದುವು; ಮಹಾಮುನಿ ಭಕ್ತಿ ನಡೆಯಿತು. ಸ್ವಾಮಿಯ ಪೂಜೆ ಸಲೀಸಾಗಿ ನಡೆಯಿತು" ಎಂದು ಬಿನ್ನವಿಸಿದನು.

"ಪಾಡ್ಯದಿಂದ ದಶಮಿಯವರೆಗೆ ನಡೆದ ಜಿನಪೂಜೆಯು ನನಗಿನ್ನು ಈ ಲೋಕದಲ್ಲಿ ಪೂಜೆಯ ಮಾಡಿಸದೆ ಇರುವುದೆ? ಧರ್ಮಪೂರ್ವಕವಾಗಿ ರಾಜ್ಯವನ್ನಾಳುವ, ಧರ್ಮಾಂಗವರಿತು ಭೋಗಿಸುವ, ಮರ್ಮವನ್ನು ನೀನಲ್ಲದೆ ಯಾರು ಬಲ್ಲರು?" ಎಂದು ಧರ್ಮಸಚಿವನು ಮುಂದೆ ಬಂದು ನುಡಿದನು.

"ಸ್ವಾಮಿ, ಇಲ್ಲಿ ಕಿರೀಟವನ್ನು ಧರಿಸಬೇಕು" ಎಂದು ಮಂತ್ರಿಯು ನುಡಿದಾಗ ಭರತೇಶನು ಒಡಂಬಟ್ಟು ಕಿರೀಟವನ್ನು ಧರಿಸಿದನು. ಜಿನಗೆ ಕೈ ಮುಗಿದು ಸ್ವಾಮಿ ದರ್ಶನವಾಗಲೆಂದು ಮುನಿಗಳಿಗೆ ನಮಿಸಿ ಅಲ್ಲಿಂದ ಹೊರಟನು. ಆಗ ಎಲ್ಲೆಲ್ಲೂ ಜಯಘೋಷವೆದ್ದಿತು. ಭೂದಳಪತಿಯು ಕೆಲ ವೃದ್ಧರ ಹರಕೆಯಿಂದಲೂ ವಿಬುಧರು ತಳಿದ ಮಂತ್ರಾಕ್ಷತೆಯಿಂದಲೂ ಮಂಗಳಾಷ್ಟಕಗಳ ಘೋಷಣೆಯಿಂದಲೂ ಕೂಡಿ ಓಜೆಯಿಂದ ಮುನ್ನಡೆದನು. ಆಗ ಅಲ್ಲಲ್ಲಿ ಜನರು ಮುಂದೆ ಬಂದು ರಾಜನಿಗೆ ಪುಷ್ಪ ಫಲಗಳನ್ನು ಕಾಣಿಕೆಯಿತ್ತು ಕೈಮುಗಿಯುತ್ತಿದ್ದರು. ರಾಜನು ಅವರನ್ನು 'ಕಡುಲೇಸು ಒಳ್ಳಿತು. ಉತ್ತಮ'–ಎಂದು ಬಿಳ್ನುಡಿಯ ಸೂಚನೆ ಮಾಡುತ್ತಿದ್ದನು. ಭರತೇಶನು ಸಂತೋಷದಿಂದ ಜಿನಮಂದಿರದ ಹೊರಬರುವಾಗ ಮುಂದಿನ ಲಘು ಸಂಪತ್ತಿನ ಸೂಚನೆಯೋ ಎಂಬಂತೆ

ಆತನ ಬಲದ ತೋಳು ತೊಡೆ ಕಣ್ಣುಗಳು ಹಾರಿದುವು. ಹೀಗೆ ಸರ್ವ ಸಂಭ್ರಮದಿಂದ ಸಾರ್ವಭೌಮನು ಪಂಚಕೋಟೆಗಳನ್ನು ದಾಟಿ ಬಂದು "ಸರ್ವಜ್ಞ ಶರಣು" ಎನ್ನುತ್ತ ಪರ್ವತದಂತಿರುವ ಪಟ್ಟದಾನೆಯನ್ನೇರಿದನು. ಅದರೊಡನೆ ಮುತ್ತಿನ ಸತ್ತಿಗೆಗಳೆದ್ದುವು. ಚಾಮರಗಳು ಅತ್ತಿತ್ತ ಚಿಮ್ಮಿದುವು. ಸುತ್ತಲೂ ಪತಾಕೆಗಳೆದ್ದುವು. ಕೋಟಿ ವಾದ್ಯಗಳು ದಿಕ್ಕುಗಳು ಬಿರಿಯುವಂತೆ ಮೊಳಗಿದವು.

"ಮೊತ್ತದ ರಿಪುಗಳ ಗಂಡ, ವೈರಿಗಳೆಂಬ ಕತ್ತಲೆಗೆ ಉದಯ ಮಾರ್ತಾಂಡ, ಜಯಾಂಗನಾವಲ್ಲಭ ಚಾಂಗು" ಎಂದು ಭಟರು ಕೈಯೆತ್ತಿ ಹೊಗಳಿದರು. ತಲೆಗಿಟ್ಟ ಕಿರೀಟವು ಮೂಡುವ ಸೂರ್ಯನಂತೆ ಹೊಳೆಯುತ್ತಿತ್ತು. ಮೈಗಟ್ಟು ಹೊನ್ನ ಬೊಂಬೆಯಂತೆ ಮೆರೆದಿತ್ತು. ಇಂತಿರುವ ರಾಯನು ಬೆಟ್ಟವನ್ನು ನಡೆಸಿದನು. ನಕ್ಷತ್ರಗಳೊಂದಿಗೆ ಪೂರ್ಣಚಂದ್ರನು ಬಂದು ಮೇಲೆ ಓಲೈಸುವಂತೆ ರಾಜನಿಗೆ ಎತ್ತಿದ ಸತ್ತಿಗೆ ಒಪ್ಪಿತು. ವಿಶಾಲವಾದ ಮೂವತ್ತೆರಡು ಚಾಮರಗಳು ವಿರಾಜಿಸುತ್ತಿರಲು ಕ್ಷೀರಸಾಗರದಲ್ಲಿ ಆನೆಯನ್ನು ನಡೆಸುವಂತೆ ಆ ಲಲಿತಾಂಗನು ತೋರಿದನು. ಸೂರ್ಯಚಂದ್ರರು ಬಂದು ಮನುಜೇಂದ್ರನನ್ನು ದಿಗ್ವಿಜಯಕ್ಕೆ ಕರೆದೊಯ್ಯುವಂತೆ ಎಡಬಲದಲ್ಲಿ ಸೂರ್ಯಚಂದ್ರರ ಧ್ವಜಗಳೆದ್ದುವು.

ಇಂದು ಪುರುಷೋತ್ತಮನು ಪುರದಿಂದ ಮುಂದಕ್ಕೆ ತೆರಳುತ್ತಿರುವವನೆಂಬುದರಿಂದ ಪುರದಲ್ಲಿರುವ ಸ್ತ್ರೀ ಪುರುಷರೆಲ್ಲರೂ ನೆರೆದು ನಿಟ್ಟಿಸಿದರು. ತರುಣಿಯರು, ಕರುಮಾಡ, ಮಾಳಿಗೆ, ಕರುಜಿ ಗೋಪುರಗಳನ್ನೇರಿ ರಾಜ ಮನ್ಮಥನನ್ನು ಗಾಬರಿಯಿಂದ ನೋಡಿದರು. ಆ ಪರನಾರಿ ಸೋದರನನ್ನು ಎಲ್ಲರೂ ನೋಡಿದರು. ಅಲ್ಲಲ್ಲಿ ಗಂಡಹೆಂಡತಿಯರೊಟ್ಟಾಗಿ ನೋಡಿದರು. ಅಲ್ಲಲ್ಲಿ ಹೆಣ್ಣುಗಳೇ ಒಟ್ಟಾಗಿ ನೋಡಿದರು. ಪಟ್ಟಣದ ಎಲ್ಲರೂ ಷಟ್ಖಂಡಾಧಿಪತಿಯ ಚೆಲುವಿಕೆಯನ್ನು ನೋಡಿದರು. ಕಾಸುತ್ತಿರುವ ಹಾಲನ್ನು ಇಳಿಸದೆ. ತನ್ನ ಮುಂದೆ ಅಳುತ್ತಿರುವ ಕೂಸನ್ನು ನಿಟ್ಟಿಸದೆ ಓಡಿ ಬಂದು ಕಾಸಿ ತೊಳೆದ ಹೊನ್ನ ಪುತ್ಥಳಿಯಂತೆ ಮೆರೆಯುವ ಆ ಸೊಬಗನನ್ನು ನೋಡಿದರು. ನೀರೆಯರು, ಆಡುವ ನೆತ್ತವನ್ನು ಅರ್ಧದಲ್ಲೇ ಬಿಟ್ಟು, ಹಾಡುವ ರಾಗವನ್ನು ಅಲ್ಲಿಗೇ ನಿಲ್ಲಿಸಿ , ಮಾಡವನ್ನೇರಿ ಮದಲನ್ನೇರಿ ಆ ರಾಯನನ್ನು ನಿಟ್ಟಿಸಿದರು. ಕನ್ನಡಿ ಹಿಡಿದು ಬೊಟ್ಟಿಡುತ್ತಿದ್ದ ಕನ್ನೆಯರು ನೃಪತಿ ಬರುವ ಸನ್ನೆಯನ್ನು ಕೇಳಿದೊಡನೆ ಕನ್ನಡಿಸಹಿತ ಕನ್ನೆ ಮಾಡವನ್ನೇರಿ ರಾಜನನ್ನು ನೋಡಿದರು. ಚಕ್ರನಾಥನ ಸೊಬಗನ್ನು ಹೇಳಲು ಸಾಧ್ಯವಿಲ್ಲ. ನೋಡಿದ ಹೆಣ್ಣುಗಳು ಅಲ್ಲಲ್ಲಿ ಅಲ್ಲಾಡದ ಪುತ್ಥಳಿಗಳಂತೆ ಉಸಿರೆತ್ತದೆ ಬೆರಗಾಗಿದ್ದರು. ಆ ರಾಜಮನ್ಮಥನ ಶೃಂಗಾರಕ್ಕೆ ಪುರಜನರೆಲ್ಲ ಸೋತರೆಂದಮೇಲೆ ಹೆಣ್ಣುಗಳು ಸೋಲುವುದು ಆಶ್ಚರ್ಯವಲ್ಲ. ಮಾನಿನಿಯರು ತನ್ನನ್ನು ನೋಡುತ್ತಿದ್ದರೂ ರಾಯನು ಅವರನ್ನು ನೋಡುತ್ತಿರಲಿಲ್ಲ. ಆನೆಯ ನೆತ್ತಿಯನ್ನೇ ನೋಡುತ್ತ ಬಂದನು. ಈ ಗೌರವವನ್ನು ಎಲ್ಲಿ ಕಲಿತನೋ ! ತ್ರಿಭುವನಸಾರ ಚಿದಂಬರ ಪುರುಷನ ವೈಭವವನ್ನು ಕಂಡ ಆತ್ಮಸುಖಿಗೆ ಚಿತ್ತದಲ್ಲಿ ತಳಮಳ ಉಂಟಾದೀತೇ? ಮತ್ತ ಗಜವನ್ನೇರಿ ಭರತೇಶನು ಓಜೆಯಿಂದ ಸಾಗುತ್ತಿದ್ದನು.

ಭರತೇಶನ ಮುಂದೆ ಕೋಟಿ ಪಾತ್ರಗಳು ಸಿಂಗರವಾಗಿ ನೃತ್ಯಮಾಡುತ್ತಿರಲು ಪಾಠಕರು

ಕೈಯೆತ್ತಿ ಕೀರ್ತಿಸುತ್ತಿದ್ದರು. ''ಪುರುಜಿನಪುತ್ರ, ಪುಷ್ಪಾಯುಧನ ಅಗ್ರಜ, ಭರತ ಷಟ್ಖಂಡಾಧಿನಾಥ. ಗುರುಹಂಸನಾಥ ಭಾವಕ. ಜಯಜಯ'' ಎಂದು ಅಕ್ಕರಿಗರು ಹೇಳುತ್ತಿದ್ದರು. ''ಮೇದಿನೀಶರ ಗಂಡ, ಮೆರೆವ ರಾಜೋದಯ ಕಾನನಕ್ಕೆ ಉರಿಗೆಂಡ. ಕಾದಲೊಡ್ಡುವ ರಾಜಗೆ ಗಿರಿವಜ್ರದಂಡ'' ಎಂದು ಭಟ್ಟರು ಓದುತ್ತಿದ್ದರು. ''ಇರಿಯದ ಪಂಥವ, ಮೆರೆಯದ ಮೋಡಿಯ, ಅರಿಯದ ಕಲೆಯ ಜಾಣ್ಮೆಯನ್ನು ಹೊರ ರಚನೆಯಲ್ಲಿ ಹೊಗಳಿಸಿಕೊಳ್ಳುವವರ ಗಂಡ.'' ಎಂದು ಹೊಗಳುತ್ತಿದ್ದರು. ''ಸಿರಿಯಲ್ಲಿ ಶೀಲದಲ್ಲಿ ಓಜೆಯಲ್ಲಿ ಆಜ್ಞೆಯಲ್ಲಿ ಅರಸುತನದಲ್ಲಿ ವೀರ್ಯದಲ್ಲಿ ತ್ಯಾಗದಲ್ಲಿ ಭೋಗದಲ್ಲಿ ಈ ನರಲೋಕದ ಸುರಪತಿ. ಜಯಜಯ'' ಎನ್ನುತ್ತಿದ್ದರು.

ತನ್ನ ಮುಂದೆ ನರ್ತಿಸುವವರಿಗೆ, ಹೊಗಳುವವರಿಗೆ ಲೀಲೆಯಿಂದ ಉಡುಗೊರೆಗೊಡುತ್ತ ಮಂದರಾದ್ರಿಯನ್ನೇರಿ ಬರುವ ಸೂರ್ಯನಂತೆ ಭರತೇಶನು ಮದಗಜವನ್ನೇರಿ ಬರುತ್ತಿದ್ದನು. ರಾಜನು ವಸ್ತ್ರ ಪುಷ್ಪತಳಿರುಗಳ ತೋರಣಗಳನ್ನೂ ಕಂಚು ಕನಕ ರತ್ನ ಸಂಚಯಗಳ ತೋರಣಗಳನ್ನೂ ದಾಟಿಕೊಂಡು ಬಂದನು. ರಾಜನು ತೋರಣಗಳ ಒಳಗಿನಿಂದ ನುಸುಳುವಾಗ ಮೇಲೆ ಕಟ್ಟಿದ ಹೂಗಳ ಪೊಟ್ಟಣದ ಸೂತ್ರಗಳನ್ನು ದೂರದಿಂದೆಳೆದು ರಾಜನಿಗೆ ಪುಷ್ಪಸಾರಾಭಿಷೇಕಮಾಡಿದರು. ಸಿರಿಬನದೊಳಗೆ ಮನ್ಮಥನು ಬರುವಂತೆ ಪುರದ ಬೀದಿಯಲ್ಲಿ ಭರತಚಕ್ರಿಯು ಬಂದು ಸಿರಿಯು ನೆಲೆಸಿರುವ ಹೊತ್ತಿನಲ್ಲಿ ವಿನೀತಾಪುರದ ಕೋಟೆಯನ್ನು ದಾಟಿದನು. ಹೀಗೆ ಭರತೇಶನು ಪಟ್ಟಣವನ್ನು ದಾಟಿ ಫೌಜು ನೋಡುವ ಬಟ್ಟಬಯಲಿಗೆ ಬಂದನು.

೩

# ದಶಮಿ ಪ್ರಸ್ಥಾನ

ವಾದ್ಯಘೋಷಗಳ ಮಹಾವೈಭವದೊಡನೆ ಭರತೇಶನು ಆನೆಯನ್ನೇರಿ ಮುಂದೆ ಸಾಗಿದನು. ಆಗ ಅವರಿದಿರಿನಲ್ಲಿ ಬನ್ನಿಯ ಮರದಲ್ಲಿ ಚಕ್ರರತ್ನದ ಪ್ರಭೆತೋರಿತು. ಸಿಂಹಲಗ್ನದಲ್ಲಿ ಅರಮನೆಯಿಂದ ತೆರಳುವಾಗ ಭರತೇಶನ ಆಜ್ಞೆಯಂತೆ ದಂಡನಾಯಕನು ನಡೆಸಿದ ಚಕ್ರವು ಇದಿರಲ್ಲೇ ಹೊಳೆಯುತ್ತಿತ್ತು. ಫಲಪುಷ್ಪ ಝಲ್ಲಿಪಟಗಳಿಂದ ಶೃಂಗಾರವಾದ ವಿಜಯವೃಕ್ಷದಲ್ಲಿ ಚಕ್ರರತ್ನವು ಹೊಳೆಯುತ್ತಿತ್ತು. ರಾಜನ ಮಹಾ ಬಲವು ಅದನ್ನು ಕಂಡು ಆಶ್ಚರ್ಯದಿಂದ ನೋಡುತ್ತಿತ್ತು. ಆ ಬನ್ನಿಯ ಮರವಾದರೋ ಉನ್ನತವಾದ ಗೊನೆಗಳಿಂದ ಎಲ್ಲರನ್ನೂ ಬನ್ನಿ ಬನ್ನಿ ಎಂದು ಕೈಸನ್ನೆಮಾಡಿ ಕರೆಯುವಂತಿತ್ತು. ಇಪ್ಪತ್ತನಾಲ್ಕು ಶಂಖಗಳ, ಹನ್ನೆರಡು ಭೇರಿಗಳ, ಹನ್ನೆರಡು ಪಟಹಗಳ ಮಹಾ ಘೋಷವು ಮೊಳಗುತ್ತಿರುವಾಗ ಭರತೇಶನು ಬನ್ನಿಯ ಕಟ್ಟೆಗೆ ಮುಟ್ಟಿದನು. ಅಂಕೆಗೊಟ್ಟು ಆನೆಯನ್ನು ನಿಲ್ಲಿಸಿ, ಅಂಕುಶದಲ್ಲಿ ಹಸ್ತವನ್ನಿಟ್ಟು ಶೃಂಗಾರದ ಸೋಂಕಿನಿಂದ ವಿರಾಜಮಾನವಾದ ಪದಾತಿಯನ್ನು ರಾಜನು ಬಿಂಕದಿಂದ ನೋಡಿದನು. ಎಲ್ಲಿ ನೋಡಿದರೆ ಅಲ್ಲಿ ಆನೆಗಳು, ಕುದುರೆಗಳು, ಬಗೆಬಗೆಯ ರಥಗಳು, ವೀರಭಟರ ಮೊತ್ತಗಳೆಲ್ಲ ಅಲ್ಲಿ ಪಣ್ಣೆಪಣ್ಣೆಯಾಗಿ ನಿಂತಿದ್ದುವು. ಐವತ್ತಾರು ದೇಶಗಳ ಧರಣಿಪರು ಅಲ್ಲಲ್ಲಿ ಫೌಜುಬಿಟ್ಟು ತಮ್ಮ ತಮ್ಮ ಬಾವುಟಗಳನ್ನು ಏರಿಸಿ, ಕಹಳೆ ಕೊಂಬುಗಳನ್ನು ಮೊಳಗಿಸಿದರು. ಜಯರಾಜ ಮತ್ತು ಅಯೋಧ್ಯಾಂಕರೆಂಬ ದಳಪತಿಗಳಿಬ್ಬರೂ ಅರಸನ ಒತ್ತಿನಲ್ಲೇ ಇದ್ದರು.

ಮಧ್ಯಾಹ್ನ ಮೂರನೆಯ ಜಾವದಲ್ಲಿ ಅಯೋಧ್ಯಾಂಕನ ಕೈಸನ್ನೆಯರಿತು ರಾಜರೆಲ್ಲರೂ ಬಂದು ಅಯೋಧ್ಯಾಧಿಪತಿಯಾದ ಭರತೇಶನನ್ನು ಕಂಡರು. ಅಂಗದೇಶದ ರಾಜನು ಹಿರಿಯ ತುರಂಗವನ್ನೇರಿ ಕುಣಿಸುತ್ತ ಬಂದು ಭರತೇಶನಿಗೆ ಕೈಮುಗಿದು ಸಾಗಿದನು. ಆ ಪಲ್ಲವದೇಶದ ನೃಪನು ಬಂದು ಕೈಮುಗಿದು ಹಿಂದೆ ಸರಿದನು. ಕುದುರೆಯನ್ನೇರಿ ಕೇರಳದ ಅರಸು ಅನಂತ ಬಂದು ಚಕ್ರಿಯನ್ನು ಕಂಡನು. ಆ ಮೇಲೆ ಕಾನೋಜ, ಕರಹಾಟ, ಸೌರಾಷ್ಟ್ರ ದೇಶಗಳ ಮನ್ನೆಯರು ಬಂದು ಚಕ್ರಿಗೆ ಮನ್ನಣೆಮಾಡಿದರು. ಕಾಶಿ, ಕಾಶ್ಮೀರ, ತೆಲುಗು, ಪುರುಮುಂಜಿ, ಫಾರಸಿ, ಚೇರ, ಸಿಂಧು, ಕಲಹರಿ, ಪಾಂಡ್ಯ, ಸಿಂಹಳ, ಕುಂತಳ, ಗುರ್ಜರ, ನೇಪಾಳ, ವಿದರ್ಭ ಮುಂತಾದ ದೇಶಗಳ ರಾಜರು ಒಬ್ಬೊಬ್ಬರಾಗಿ ಬಂದು ಭರತಚಕ್ರಿಯ ಭೇಟಿಮಾಡಿ ಹಿಂತೆರಳಿದರು. ಚೀನಿ, ಮಹಾಚೀನಿ, ಭೋಟ, ಮಹಾಭೋಟ, ಲಾಟ, ಮಹಾಲಾಟ, ಮುಂತಾದ ದೇಶದ ಅರಸರೂ ಕರ್ಣಾಟ, ಕಾಂಭೋಜ, ವಂಗ, ಕಳಿಂಗ, ಚಿತ್ರಕೂಟ, ಪಾಂಚಾಳ, ಗೌಳ, ಮಾಳವ ಮುಂತಾದ ದೇಶಗಳ ರಾಜರೂ ಧವಳದೇಶ, ಮಕ್ಕದೇಶ, ಬಂಗಾಳದೇಶ, ಸಾಮ್ರಾಣಿದೇಶ, ಹಮ್ಮೀರ

ದೇಶವೇ ಮುಂತಾದೆಡೆಗಳ ರಾಜರೂ ಭರತೇಶನನ್ನು ಕಂಡು ಗೌರವಗೊಂಡರು. ಅನಂತರ ಗೌಡ, ಕೊಂಕಣ, ತುಳುವ, ಬರ್ಬರ, ಮಲಯ, ಮಗಧ, ಹೈವ, ಮಹಾರಾಷ್ಟ್ರ ದೂಪಾರಿ, ಮಲಯಾಳ, ಕೊಡಗು, ಚೋಳ ದೇಶಗಳ ರಾಯರೂ ಬಂದು ಭರತಚಕ್ರಿಗೆ ಅಭಿವಂದಿಸಿದರು.

ಹೀಗೆ ಆರು ಖಂಡದ ನೃಪರಲ್ಲಿ ಒಂದು ಖಂಡದ ನೃಪರು ಮಾತ್ರ ಬಂದು ಭರತೇಶನನ್ನು ಕಂಡು ಮರಳಿದರು. ಆರ್ಯಾಖಂಡದ ಅರಸರೆಲ್ಲರೂ ಬಂದಿದ್ದರು. ಆದರೆ ಮ್ಲೇಚ್ಛಖಂಡದ ಅರಸರು ಬಂದಿರಲಿಲ್ಲ. ಆದ್ದರಿಂದ ಜಲಧಿಯಲ್ಲಿದ್ದ ಮೂವರು ವ್ಯಂತರೇಂದ್ರರನ್ನು ಗೆಲಿದು ಮ್ಲೇಚ್ಛಕ್ಕೆ ನಡೆಯುವ ತಂತ್ರಕ್ಕಾಗಿ ಭರತಚಕ್ರಿಯು ಬಲವನ್ನು ಕೂಡಿದನು. ಆ ಬಲದ ಲೆಕ್ಕವನ್ನೇನೆಂದು ಬಣ್ಣಿಸಲಿ! ಎಂಭತ್ತುನಾಲ್ಕು ಲಕ್ಷ ಭದ್ರಹಸ್ತಿಗಳು, ಎಂಭತ್ತನಾಲ್ಕು ಲಕ್ಷ ರಥಗಳು, ಹದಿನೆಂಟು ಕೋಟಿ ಕುದುರೆಗಳು ಅಲ್ಲದೆ ಜಾತಿವೀರರೂ. ರಣಜಿತರೂ ಕೂಡಿದ ಎಂಭತ್ತುನಾಲ್ಕು ಕೋಟಿ ಪದಾತಿ. ಈ ಮಹಾಸೇನೆಯಲ್ಲದೆ ರಣರಂಗ ಜಜ್ಝಾರರೆನಿಸಿದ ಚಕ್ರೇಶನ ಅಂಗರಕ್ಷಣೆಗೆ ಹದಿನಾರು ಸಾವಿರದ ಎಣಿಕೆಯಲ್ಲಿ ವ್ಯಂತರ ಕುಲೋತ್ತಮರೂ ಗಣಬದ್ಧ ದೇವರ್ಕಳೂ ಇದ್ದರು.

ಈ ಪಡೆಯನ್ನು ಕೂಡಿಕೊಂಡು ಭರತರಾಜೇಂದ್ರನು ತೊಡೆ ಸನ್ನೆಯಿಂದ ಹಸ್ತಿಯನ್ನು ನಡೆಸಿದನು. ಒಡನೆಯೆ ಎಲ್ಲರೂ ಜಯಘೋಷವೆಸಗಿದರು. ಆ ಘೋಷವು ಕೂಗಿ ಬೊಬ್ಬಿರುವ ಕಡಲಂತೆ ಇತ್ತು. ಭೇರಿ, ನಿಸ್ಸಾಳೆ, ಪಟಹ, ಶಂಖ, ಹೆಗ್ಗಾಳೆ, ವೀರತಂಬಟೆ— ಮುಂತಾದ ವಾದ್ಯ ವಿಶೇಷಗಳು ಪ್ರಳಯದ ಭೈರವನಾರ್ಭಟದಂತೆ ಒಂದೇ ಬಾರಿಗೆ ಮೊಳಗಿದುವು. ಆ ವಿಜಯವೃಕ್ಷವನ್ನು ಬಲಕ್ಕಿಕ್ಕಿ ಚಕ್ರಿಯು ವಿಜಯಪರ್ವತವೆಂಬ ತನ್ನ ಆನೆಯನ್ನು ಮುನ್ನಡೆಸಿದನು. ಆ ಆನೆಯ ಮುಂಭಾಗದಲ್ಲೇ ಧ್ವಜಗಳ ಬಗ್ಗಿನಲ್ಲಿ ಹೊಳೆಯುತ್ತ ಚಕ್ರರತ್ನವೂ ಮುಂದೆ ಸಾಗಿತು. ಎಡಬಲ ಹಿಂದು ಮುಂದು ಎಲ್ಲೆಲ್ಲಿಯೂ ತುಂಬಿ ಕಡಲಂತೆ ನಡೆದುದು ಆ ಹಿರಿದಾದ ಪಡೆ. ನಡುವೆ ರಾಜೇಂದ್ರನು ಮಂದರಪರ್ವತದಂತೆ ಮುತ್ತಿನ ಸತ್ತಿಗೆಯ ನೆರಳಿನಲ್ಲಿ ಬರುತ್ತಿದ್ದನು. ಅಲ್ಲಿದ್ದ ದೊರೆಗಳೆಲ್ಲರೂ ತಮ್ಮ ತಮ್ಮ ಫೌಜಿನಲ್ಲಿ ತಮ್ಮ ತಮ್ಮ ಬಿರುದುಗಳನ್ನು ಕಹಳೆಗಳಲ್ಲಿ ಮೊಳಗಿಸುತ್ತ ಭರತರಾಜೇಂದ್ರನನ್ನು ಓಲೈಸಿಕೊಂಡು ಬರುತ್ತಿದ್ದರು. ಭರತಚಕ್ರೇಶನ ಸಿರಿಗೆಣೆಯಾದ ಸಿರಿಯುಂಟೆ? ಮುಳುಗುವ ಭಾನುವಿಗೆ ಬೆನ್ನಿಕ್ಕಿ ಹೆಚ್ಚುತ್ತಿರುವ ಚಂದ್ರನನ್ನ ನಿಟ್ಟಿಸುತ್ತ ಸೇನಾಸಹಿತನಾಗಿ ವಾದ್ಯ ಘೋಷಗಳ ಮಹಾನಾದದೊಂದಿಗೆ ಚಕ್ರೇಶ್ವರನು ಮುಂದೆ ಸಾಗಿದನು.

ಈ ರೀತಿಯಲ್ಲಿ ಸಾಗುತ್ತಿರುವಾಗ ಪುರದಿಂದ ಅನತಿದೂರದಲ್ಲೇ ಮಯನು ರಚಿಸಿದ ಬೀಡುದಾಣವನ್ನು ಕಂಡೊಡನೆ ಅದರ ಕೆಲದಲ್ಲೇ ರಾಯನು ಆನೆಯನ್ನು ನಿಲ್ಲಿಸಿದನು. ತೇರಮೇಲೆ, ಆನೆಯಮೇಲೆ, ತೇಜಿಯಮೇಲೆ, ಸಾಗುತ್ತಿದ್ದ ಅಖಿಲ ಭೂಮಿಪರಿಗೂ ತನ್ನ ತೋರಹಸ್ತದ ಸನ್ನೆಯಿಂದ, ಕಣ್ಸನ್ನೆಯಿಂದ ಬಿಡಾರಕ್ಕೆ ಹೋಗಲು ಸೂಚಿಸಿದನು. ವಿಶ್ವಕರ್ಮನು ದೊರೆಗಳ ಮೋಡಿಯನ್ನರಿತು ಮನೆಗಳನ್ನು ರೂಢಿಸಿದ್ದನು. ಆದ್ದರಿಂದ ಅರಸರೆಲ್ಲರೂ ಯಾವ ಹಂಗೂ ಇಲ್ಲದೆ ಬಿಡಾರಗಳನ್ನು ಸೇರಿದರು. ಪುರುದೇವ ಕುಮಾರನಾಗ ಬೆಟ್ಟದಿಂದಿಳಿವಂತೆ ಗಜದಿಂದ ಇಳಿದು ಬುಧರೇ ಮೊದಲಾದವರನ್ನು

ಬೀಳ್ಕೊಟ್ಟನು. ಕಟ್ಟಿಗೆಕಾರರು ಉಗ್ಘಡಿಸುತ್ತಿರುವಾಗ ಹಾವುಗೆಗಳನ್ನು ಮೆಟ್ಟಿ ತನ್ನ ಬೀಡಿಗೆ ಹೆಜ್ಜೆಯಿಟ್ಟನು. ಒಂದೆರಡು ಪಾಗರಗಳನ್ನು ದಾಟಿ ಮುಂದೊಂದು ಬಾಗಿಲಲ್ಲಿ ರಾಯನು ನಿಂತನು. ''ಹೋಗಿ,. ಹೋಸದ ವೇಳೆಯಾಯಿತು'' ಎಂದು ತನ್ನ ಬೆಂಬಳಿಯಾಗಿ ಬಂದ ಗಣಭದ್ರರನ್ನೂ ಕೆಳೆಯರನ್ನೂ ಕಳುಹಿಸಿ, ಶುದ್ಧಾಂತಃಕರಣನಾದ ಭರತೇಶನು ಭದ್ರಮುಖನೆಂಬ ಸಿದ್ಧಿಯ ರಚಿಸಿದ ಶಿಬಿರವನ್ನು ಹೊಕ್ಕನು.

ಒಳಗೊಂದು ಮದುವೆಯ ಜಗಲಿ ಸಿಂಗಾರವಾಗಿ ಎಸೆದಿತ್ತು. ರಾಜೇಂದ್ರನದನ್ನು ದಿಟ್ಟಿಸಿ ನೋಡಿದನು. ಅಲ್ಲೇ ಕೆಲಸದಲ್ಲಿ ಕುಸುಮಾಜಿ ನಿಂತಿದ್ದಳು.

''ಮುಂದಿನ ನಿಮ್ಮ ಮಂಗಲದ ಸೂಚನೆಯಿದು'' ಎಂದಾಕೆ ನುಡಿದಳು. ಇದು ತನ್ನ ತಂಗಿಯ ಮದುವೆಗಾಗಿ ಆಕೆ ಮಾಡಿದ ಶಿಟ್ಟವೆಂದು ರಾಯನಾಗ ತಿಳಿಯದಿರಲಿಲ್ಲ.

''ಸುದತಿಯ ಕಾರ್ಯವನ್ನು ಪುರದಲ್ಲಿರುವಾಗ ಮಾಡಿಸಿದರೇನು?'' ಎಂದು ರಾಯನೇ ಆಕೆಯನ್ನು ಕೇಳಿದನು.

''ಅಪ್ಪಾಜಿಯೇ. ಇಲ್ಲಿಗೆ ಕಳುಹಿಸಲು ವೇಳೆಯಾಗಿತ್ತು, ಮುಂದೆ ಕಾಲ ಸಿಗದೆಂದು ಈಗಲೇ ಇದನ್ನು ಸಂಘಟಿಸಲಾಗಿದೆ'' ಎಂದು ಆ ಜಾಣೆಯು ಉತ್ತರವಿತ್ತಳು. ''ಇರುಳಿಗೆ ಲಗ್ನ ಲೇಸೆಂದು ನಮ್ಮ ಜನಕನೇ ನಿರ್ಧರಿಸಿ ಬಂದಿದ್ದನು. ತಂಗಿಯು ಸಂಪೂರ್ಣ ಸಿಂಗಾರವಡೆದಿದ್ದಾಳೆ'' ಎಂದಾಕೆಯು ತನ್ನ ಪುರುಷನೊಂದಿಗೆ ಮಾತನಾಡುತ್ತ ಅವನನ್ನು ಅನುಸರಿಸಿದಳು.

ಅಷ್ಟರಲ್ಲಿ ಸೂರ್ಯನು ಮುಳುಗಿದನು. ಅರಸನು ಸಂಧ್ಯಾವಂದನೆಯನ್ನು ತೀರಿಸಿ, ಅರ್ಕಕೀರ್ತಿಯನ್ನು ಮುದ್ದಿಸಿ, ತೋರಿಕೆಗಾಗಿ ಸಿಂಗಾರವೆಸಗಿ ಕಾಂತೆಯರೊಡನಿದ್ದನು. ಆಗ ಲಗ್ನದ ಸಮಯವಾಯಿತು. ರಾಜನು ನಡೆದುಬಂದು ಮೆಟ್ಟುಕ್ಕಿಯನ್ನು ಮೆಟ್ಟಿನಿಂತನು. ಮಾವನ ಒತ್ತಿನಲ್ಲೇ ನಿಂತಿದ್ದ ಮೈದುನನನ್ನು ನೋಡಿದನು.

''ಕಮಲಾಂಕ, ಅವಳು ಕುಸುಮಾಜಿಯಂತಲ್ಲ. ಅಂದು ಕೋಪಿಸಿ ನನ್ನನ್ನು ಜರೆದಿದ್ದಳು. ಅಂತಹ ಅಸಮಾನಳನ್ನು ನನಗೆ ಕೊಡುವುದು ರಸಿಕರ ಮಾರ್ಗವೆ?'' ಎಂದು ಕೇಳಿದನು.

''ವಸುಧೆಯಲ್ಲಿ ನಿನಗೆ ಸಮಾನರಿಲ್ಲ. ಅದ್ದರಿಂದ ನೀನು ಅಸಮಾನನು. ಅಸಮಾನದ ಅರಸನಿಗೆ ಅಸಮಾನದ ಅಬಲೆಯನ್ನು ರಸಿಕರು ಕೊಡಲಾರರೆ?'' ಎಂದು ಮೈದುನನು ಪ್ರಶ್ನೆಯಿಂದಲೇ ಭಾವನಿಗುತ್ತರವಿತ್ತನು.

''ಪಯಣದ ವೇಳೆಯಾದುದು. ಈಗ ಬಹುವಾಕ್ಯಕ್ಕೆ ಆಸ್ಪದವಿಲ್ಲ'' ಎಂದು ಹೇಳಿ ನಿಯತವಾದ ಶೋಭನ ಮಂಗಲಾಷ್ಟಕಗಳನ್ನು ಕೇಳಿಸಿಕೊಂಡನು. ಅಷ್ಟರಲ್ಲಿ ತೆರೆ ಸರಿಯಿತು. ವಾದ್ಯ ಘೋಷಗಳಾದುವು. ಗಜಾನಕರಾಜನು ಮಕರಂದಾಜಿಯನ್ನು ಭರತೇಂದ್ರನಿಗೆ ಧಾರೆಯೆರೆದಿತ್ತನು. ರಾಜನು ಹೋಮಸಾಕ್ಷಿಯಾಗಿ ಆಕೆಯ ಕರವಿಡಿದನು. ತನ್ನ ಮಗಳನ್ನು ರಾಜೇಂದ್ರನ ಅರಮನೆಗೆ ಗಜಾನಕನು ಕರೆದೊಯ್ದು ಮನ್ನಿಸಿದನು. ಆ ಮೇಲೆ ಕುಸುಮಾಜಿ ಅಯ್ಯನನ್ನು ಬೀಳ್ಕೊಟ್ಟಳು. ಭರತ ರಾಜೇಂದ್ರನು ಅಲ್ಲಲ್ಲಿ ತನ್ನ ಸೌಜನ್ಯಕಾಂತೆಯರೊಂದಿಗೆ ಸುಖಾಂಗದಲ್ಲಿದ್ದನು. ಅತ್ತ ಸೈನಿಕರೆಲ್ಲರೂ ಮುಂದಿನ ಯುದ್ಧದ ಯೋಚನೆಯಲ್ಲೇ ಇದ್ದರು.

## ೪

# ಪೂರ್ವಸಾಗರ ದರ್ಶನ

ಭರತೇಶನು ಏಕಾದಶಿಯ ಉದಯಕಾಲದಲ್ಲೆದ್ದು ಸಾಕೇತ ನಗರದ ರಕ್ಷಣೆಗೆಂದು ಮಾಕಾಳನನ್ನು ಬಿಟ್ಟುಕೊಟ್ಟು ಮುಂದಿರುವ ಕೋಟಿಸೇನೆಗೆ ಮುನ್ನಡೆಯಲು ಆಜ್ಞೆಯಿತ್ತನು. ಆಗ ಬೆಟ್ಟದಂತಹ ಹನ್ನೆರಡು ಭೇರಿಗಳು ಮೊಳಗಿದುವು. ಅದರಿಂದ ಜಗಕೆಲ್ಲ ಮೊಳಗಿನ ಮೊಟ್ಟೆಯನ್ನು ಕಟ್ಟಿದಂತಾಯಿತು. ತಿಳಿಬೆಳಕನ್ನು ಉಕ್ಕಿಸುತ್ತ ಚಕ್ರರತ್ನವು ಮುಂದೆ ಸಾಗಿತು. ಅನುಪಮ ರತ್ನಮಯದ ಪಲ್ಲಕ್ಕಿಯಲ್ಲಿ ಭರತಚಕ್ರಿಯಿದ್ದನು. ಎತ್ತಿದ ಸತ್ತಿಗೆಗಳು ಬಿಳಿಯ ತಾವರೆಗಳಂತಿದ್ದುವು. ಬೀಸುತ್ತಿರುವ ಚಾಮರಗಳು ಸುಳಿಯುತ್ತಿರುವ ಹಂಸಗಳಂತಿದ್ದುವು. ರಾಜನ ಗೆಳೆಯರೂ ಮಧುಚಂದ್ರ ಮರುತರಂತೆ ಅವನೊಂದಿಗಿದ್ದರು. ಉಸಿರಿನ ಗುಟ್ಟನ್ನರಿತ ಉತ್ತಮರು ಕೊಳಲೂದಿ ಆತ್ಮಕಲೆಯನ್ನು ಹಾಡುತ್ತಿರುವಾಗ ಆತ್ಮರಸಿಕನಾದ ರಾಜೇಂದ್ರನು ಅದನ್ನು ಕೇಳುತ್ತ ಮುಂದೆ ಸಾಗಿದನು.

ಜಡೆವೀರನಾಗ, ಚಲ್ಲಣಗಳಿಂದಲೂ ಕತ್ತಿ ಖಡ್ಗಗಳಿಂದಲೂ ಮಣಿಮಯವಾದ ಗುರಾಣಿಗಳಿಂದಲೂ ಕೂಡಿದ ಗಣಬದ್ಧ ದೇವತೆಗಳು ಪಲ್ಲಕಿಯ ಸುತ್ತಲೂ ಸಂದಣಿಸಿ ಬಂದರು. ಚಕ್ರಿಯ ಅಂಗರಕ್ಷಣೆಗಾಗಿ ಎರಡು ಸಾವಿರ ಬದ್ಧಗಣರಿದ್ದರು. ನಡೆಯುವ ಗೋಡೆಯಂತಿರುವ ಹದಿನಾಲ್ಕು ಸಾವಿರದ ಸೇನೆಯು ಅರಸಿಯರ ಹಿಂಗಡೆಯಿಂದ ಬಂತು. ಕುದುರೆಗಳಲ್ಲೂ ಪಂಡಿಗೆಗಳಲ್ಲೂ ಊಳಿಗದ ಹೆಂಗಸರಿದ್ದರು. ಅರಸಿಯರು ಪಲ್ಲಕಿಯೊಳಗಿದ್ದರು. ಕುವರ ಅರ್ಕಕೀರ್ತಿಯು ಪಂಡಿಗೆಯ ರಥದಲ್ಲಿತ್ತು, ಅರಸನ ಹೆಣ್ಣುಗಳ ಫೌಜಲ್ಲದೆ ಅರ್ಕಕೀರ್ತಿಯ ಫೌಜೂ ನಡೆದು ಬರುತ್ತಿತ್ತು. ಅರ್ಕಕೀರ್ತಿಯ ಫೌಜಿನ ಹಿಂದಿನಿಂದ ಕೋಟಿ ಭಟರೊಂದಿಗೆ ಭರತ ಪಾದುಕರೆಂಬ ಗೊಲ್ಲನಾಯಕರಿಬ್ಬರು ಬರುತ್ತಿದ್ದರು.

ಇಂಥ ಅಧಿಕ ಲೀಲೆಯಿಂದ ಚಕ್ರವರ್ತಿಯು ತನ್ನ ಸೇನೆಯೊಂದಿಗೆ ಮುನ್ನಡೆದನು.

ಆ ಪೂರ್ವಾಹ್ನದಲ್ಲಿ ಪುರುಜಿನನ ಪುತ್ರನಾದ ಪೂರ್ವಯುಗದ ಚಕ್ರವರ್ತಿಯು ಪೂರ್ವಾಭಿಮುಖನಾಗಿರಲು ಅವನ ದಂಡು ಅಪೂರ್ವ ಸಂಭ್ರಮದಿಂದ ಮುನ್ನಡೆಯಿತು. ಆನೆಗಳ ಸಮೂಹ, ಕುದುರೆಗಳ ಪಡೆ, ತೇರುಗಳ ಸಂದಣಿ, ಸಂಗ್ರಾಮವೀರರ ಸಂದಣಿ ಕೂಡ ಎಡಬಲವೆನ್ನದೆ ಮೇರೆ ಮೀರಿದ ಸಾಗರದಂತೆ ಮುಂದುವರೆಯಿತು. ಭೂಭುಜರು ತಮ್ಮ ತಮ್ಮ ಧ್ವಜ, ಸತ್ತಿಗೆ, ವಾಹನ ವಾದ್ಯಗಳ ವೈಭವದಿಂದಲೂ ಶೃಂಗಾರದಿಂದೆಸೆವ ಪರಿವಾರದಿಂದಲೂ ಕೂಡಿ ಸಂಭ್ರಮದಿಂದ ಸಾಗಿದರು. ಆನೆಗಳ ನೆಗಳು, ರಥಗಳ ಹಡಗು, ತುರಂಗಗಳ ತರಂಗ ಕೂಡಿರುವ ಆದಿ ಚಕ್ರೇಶನ ಸೇನೆಯು ಸಾಗರದಂತೆ ಆ ನೆಲದಗಲದಲ್ಲಿ ನಡೆಯಿತು. ಘುಡಘುಡಿಸುವ ವಾದ್ಯಗಳ ಗುಡುಗು, ಸಿಡಿವ ಶಬ್ದಗಳ

ಹಿಡಿಲು, ಹೊಳೆವ ಖಡ್ಗಗಳ ಕೋಲುಮಿಂಚುಗಳಿಂದ ಕೂಡಿ ಕಾರ್ಗಾಲದಂತೆ ಆ ಪಡೆ ನಡೆಯಿತು.

ಬಹು ವಿಧದ ವಾದ್ಯಗಳು ಮೊಳಗುತ್ತಿರುವಾಗ ಹರಿಗೆಕಾರರು ತಮ್ಮ ತಮ್ಮ ಗುರಾಣಿಗಳನ್ನು ತಿರುಗಿಸುತ್ತ ಸೇನೆಯ ಮುಂಭಾಗದಲ್ಲಿ ನಡೆದರು. ಅವರು ಸಾಲಾಗಿ ತೆರೆಗಳಂತೆ ಸರಿದರು. ಗಾಲಿಗಳು ಉರುಳುವಂತೆ ಹಿಂದಿರುಗಿ ಬಂದರು. ತೊಡೆಯನ್ನು ಚಾಚಿ ಹರಿಗೆಯೊಂದಿಗೆ ಹಾರುವರು. ಬಾಳನ್ನು ಜಿಡಿದು ತೇಲುವರು. ನೂಕಿ ಇರಿದು ಒಬ್ಬರಿಗೊಬ್ಬರು ಹರಿಗೆಯನ್ನು ತಾಗಿಸುವರು.

ಬಿಲ್ಲುಗಾರರು ಅಂಬುಗಳನ್ನೂ ಬಿಲ್ಲುಗಳನ್ನೂ ಒಕ್ಕೈಗೊಂಡು ಹೊಳೆವರು. ಗೆಲುವಿನ ಗತಿಗೆ ಓಡಾಡಿ ಬರುವರು. ಬಾಣಗಳನ್ನು ತೆಗೆದುಕೊಂಡು ಹಲ್ಲುಕಡಿದು ಇದಿರಲ್ಲಿ ಯಾರನ್ನೂ ಕಾಣದೆ ಬಾಣಗಳನ್ನು ಇಳಿಸುವರು. ತಲೆಗಳನ್ನು ಮೇಲಕ್ಕೆತ್ತಿ ಬಿಲ್ಲುಗಳನ್ನು ತಿರುಗಿಸುತ್ತ ಎಡಬಲಕ್ಕೆ ಒಲೆಯುವರು. ''ಕಲಹ ಸಿಕ್ಕಿದರೆ ನಮ್ಮ ಭಾಗ್ಯ'' ವೆಂದು ಹೇಳುವರು.

ಗಡೆಯ ಭಟರು ಹಿರಿದಾದ ಗಡೆಗಳನ್ನೆತ್ತಿ ಗಗನವನ್ನು ತಿವಿವಂತೆ ವಾದ್ಯಗತಿಗೆ ಸರಿಯಾಗಿ ಭರತೇಶನ ಮುಂಗಡೆಯಲ್ಲಿ ಕುಣಿಯುತ್ತ ನಡೆಯುವರು. ಅವರು ಗಡೆಯನ್ನು ಉಬ್ಬಿನಿಂದ ಉದ್ದಕ್ಕಿಟ್ಟು ಆನುವರು. ಒಂದು ಕಡೆಯನ್ನು ಹಿಡಿದು ಝುಳಪಿಸುವರು. ಹಾವಾಡಿಗ ಸರ್ಪವನ್ನು ಆಡಿಸುವಂತೆ ನಡುಗುವ ಗಡೆಯನ್ನು ಕೈದುಡುಕಿ ನಡೆಯುವರು. ಜೋಳದ ಹೆಬ್ಬೆಳಸು ಎದ್ದುದೋ ಎಂಬಂತೆ ಒಬ್ಬುಳಿಗಡೆಯನ್ನೆತ್ತಿ ನಡೆಯುವರು.

ಕುದುರೆಗಾರರು ವಾದ್ಯದ ಗತಿಗನುಗುಣವಾಗಿ ತಮ್ಮ ಕುದುರೆಗಳನ್ನು ನೂಕಿಕೊಂಡು ಭರತೇಶನಿದಿರಿಗೆ ಬಂದು ಕೈಮುಗಿದು ತಮ್ಮ ಕುದುರೆಗಳನ್ನು ಚದುರಿಂದ ಕುಣಿಸುವರು. ಕಂಬಾರನ ಚಕ್ರ ತಿರುಗುವಂತೆ ಕುದುರೆಗಳನ್ನು ವೃತ್ತಾಕಾರವಾಗಿ ಓಡಿಸುವರು. ಅದು ಪ್ರೌಢ ಚಕ್ರಿಯ ಬಲವೆಂಬ ಸಮುದ್ರದ ಸುಳಿಯೋ ಎಂಬಂತಿತ್ತು.

ಮಾವತಿಗರು ಮದದಾನೆಯನ್ನು ಸಕಲ ಕಲಾವಿದರೆದುರಿಗೆ ಕರೆತಂದು ಕಾಲಿಗೆರಗಿಸಿ ತಾವೂ ಕೈಮುಗಿದರು. ಆನೆಯ ಕಾಲಸಂಕಲೆ ಝಣರು ಝುಗ್ಗೆನುತಿರಲು ಅಂಕುಶವಿಟ್ಟು ಅಡ್ಡ ನಡೆಸುವರು. ಹಡಗುಗಳನ್ನು ಕಡಲಲ್ಲಿ ನೂಕುವಂತೆ ಕರಿಗಳನ್ನು ರಾಜನಿದಿರಿಗೆ ನೂಕುವರು. ಆನೆಯ ಹಿಂದೆ ಆನೆಯನ್ನು ನಿಲ್ಲಿಸಿ, ಸೇನಾಂಬುರಾಶಿಗೆ ಸೇತುಗಟ್ಟಿದ ಹಾಗೆ ಭರತನಿಗೆ ತೋರಿಸುವರು. ಆ ಆನೆಗಳ ಸೊಂಡಿಲುಗಳನ್ನೆತ್ತಿ ಬಾಲಗಳನ್ನು ನೀಡಿ ದನಿ ದೋರಿದಾಗ ಗಿರಿಯಿಂದ ದೊಡ್ಡ ಗುಂಡುಗಲ್ಲುಗಳು ಉರುಳುವಂತೆ ಸುಳಿದುವು. ಭರತೇಶನಿದಿರಲ್ಲಿ ಆ ಮದಕರಿಗಳು ದಿಂಕಿಟ್ಟು ನಡೆವಾಗ ಸುರಿವ ಮದದ ಕಂಪಿಗೆ ಎರಗುವ ತುಂಬಿಗಳು ಚೆದುರಿ ಹೋಗುತ್ತಿದ್ದುವು.

ರಥಿಕರು ರಥಗಳನ್ನು ಚಮತ್ಕಾರದಿಂದ ತಂದು ಕೈಮುಗಿದು ನಡೆಸಿದರು. ಗರಿಗರಿಯೆಂದುರುಳು ಗಾಲಿಗಳು, ಬಾಯಲ್ಲಿ ನೊರೆಯನ್ನುಗುಳುವ ತೇಜಿಗಳು ಚಿನ್ನದುಪ್ಪರಿಗೆಯ ಸಾಲುನಡೆವಂತೆ, ಹೊನ್ನರಥದ ಸಾಲು ನಡೆದುವು.

ರಾಜರು ಚತುರಂಗಸೇನೆಯ ಮೊತ್ತದಲ್ಲಿ ಹೊನ್ನ ಅಂದಣಗಳನ್ನೇರಿ ಚಂದ್ರನನ್ನು ಓಲೈಸುವ ನಕ್ಷತ್ರಗಳಂತೆ ಚಕ್ರಿಯನ್ನು ಓಲೈಸಿ ಬಂದರು. ಅಮರೇಂದ್ರನೊಡನೆ ಬರುವ ದೇವತೆಗಳಂತೆ, ಭುವನೇಂದ್ರನೊಡನೆ ನಡೆವ ಜನರಂತೆ, ಉತ್ತಮ ದೇಶಪಾಲರು ಭರತೇಶನೊಂದಿಗೆ ನಡೆದರು. ಕರವಾಳಗಳನ್ನು ಧರಿಸಿದ ಅರಸುಮಕ್ಕಳು ಕುದುರೆಗಳನ್ನೇರಿ ಭರತೇಶನನ್ನು ನೋಡುತ್ತ, ನೋಡುತ್ತ ನಡೆದರು. ದಳಪತಿಯು ದಳದ ಮುಂಗಡೆಯಲ್ಲಿ ನಡೆದರೆ, ಸಚಿವನು ರಾಯನ ಬಳಿಯಲ್ಲೇ ನಡೆದನು.

ಮುಂದೆ ಸಾಗುತ್ತಿದ್ದ ಭರತೇಶನು ಇಷ್ಟರೊಳಗೆ ಅರ್ಕಕೀರ್ತಿಯ ಫೌಜು ಬರಬಹುದೆಂದು ನೋಡುತ್ತ ನಡೆದು ಬಂದು ಪಯಣವಾಯಿತೆಂದು ಬಿಸಿಲು ಬಲಿಯದ ಮೊದಲೆ ಬೀಡುಬಿಡಿಸಿದನು. ಎಲ್ಲರನ್ನೂ ಉಚಿತ ರೀತಿಯಲ್ಲಿ ಬೀಳ್ಕೊಟ್ಟ ಮೇಲೆ ತಾನು ಸುರ ಶಿಲ್ಪಿ ರಚಿಸಿದ ಶಿಬಿರವನ್ನು ಹೊಕ್ಕನು. ಅಷ್ಟರಲ್ಲಿ ಅರ್ಕಕೀರ್ತಿಯ ಫೌಜು ಬಂದುದು. ಪೆಟ್ಟಿಗೆ ಭಂಡಾರ ಬೊಕ್ಕಸಗಳೆಲ್ಲ ಸಾಗಿಬಂದು ಬೀಡಿನಲ್ಲಿ ಒಟ್ಟುಗೂಡಿತು. ಅರಸು ಬಿಟ್ಟಲ್ಲಿ ಪಟ್ಟಣವೆಂಬಂತೆ ಪಾಳೆಯವು ಪಟ್ಟಣವಾಯಿತು. ಅದರಲ್ಲಿ ಭರತೇಶನು ದಿನವೊಂದನ್ನು ಕಳೆದನು.

ಮರುದಿನ ಸೂರ್ಯೋದಯಕ್ಕೆ ಮೊದಲೆ ಬರಸಿಡಿಲಂತೆ ಬಲುದೊಡ್ಡ ಭೇರಿಗಳು ಸೂಳೈಸಿದುವು. ರಾಯರ ಕೆಳೆಯನಾದ ಭರತಚಕ್ರಿಯ ಸೇನೆಯು ಕೂಡಲೆ ಹೊರಟಿತು. ತೊರೆಯು ಉಕ್ಕಿ ಹರಿಯುವಂತೆ ಚಕ್ರಿಯ ಮಹಾಸೇನೆ ಬೀಡು ಬಿಟ್ಟಲ್ಲಿಂದ ಹರಿಯತೊಡಗಿತು.

ದಿಗ್ಗಜದಂತಹ ಆನೆಗಳ ಸಮೂಹವೇ ನಡೆಯುವಾಗ, ಲಗ್ಗೆಯ ರಥಗಳು ಸರಿಯುವಾಗ, ಭೂಮಿಯು ತಗ್ಗುತ್ತಿತ್ತು . ಕಿರುಬೆಟ್ಟ, ಬಡಬೆಟ್ಟಗಳು ನೆಲಸಮ ವಾಗುತ್ತಿದ್ದವು. ಹದಿನೆಂಟು ಕೋಟಿ ಕುದುರೆಗಳು ಅತ್ತಿತ್ತ ಕೆದರಿ ಕಾಲಿಡುವಾಗ ನೆಲವೇ ಅದಿರುತಿತ್ತು. ವೈರಿರಾಯರ ಧೈರ್ಯವೇ ಕದಲಿ ಎದೆ ಹಾರುವಂತೆ ಕಾಲಾಳು ಅತ್ತಿತ್ತ ನಡೆಯುವ ಭರಕ್ಕೆ ಧೂಳೆದ್ದು ಗಗನವನ್ನು ಮುಸುಕಿತು. ಆಗ ಸಂಜೆಯಾದಂತೆ ತೋರಿತು. ಕಾಲವಲ್ಲದ ಕಾಲದಲ್ಲಿಂತಾದುದು ವೈರಿಗಳ ಸಮೂಹಕ್ಕೆ ಉತ್ಪಾತವೆಂಬಂತೆ ಇತ್ತು . ಮೊಳಗುತ್ತಿರುವ ವಾದ್ಯಘೋಷಗಳಿಗೆ ಸಾಲುಬೆಟ್ಟಗಳು ಸಡಿಲಾಗಿ ಗುಡುಗುಟ್ಟಿ, ಉರುಳುವಂತೆ ಆಯಿತು.

ಸೇನಾಪತಿ ಜಯರಾಜನು ಬಿನ್ನವಿಸಿದಂತೆ ಭರತೇಶನ ಮಹಾಸೇನೆಯು ಕಿರಿಕಿರಿದು ಪಯಣವೆಸಗುತ್ತ ಅಲ್ಲಲ್ಲಿ ಎರಡೆರಡು ಮೂರು ಮೂರು ದಿನಗಳು ಬೀಡುಬಿಡುತ್ತ ಬಂದು ಕೊನೆಗೆ ಗಂಗಾನದಿಯ ತಡಿಯಲ್ಲಿ ಬೀಡುಬಿಟ್ಟಿತು. ಬಡಗಿನ ಹಿಮಗಿರಿಯಲಿ ಹುಟ್ಟಿ, ತೆಂಕಿಗೆ ಹರಿದು ಬಂದೊಡನೆ ಡೊಂಕಿಸಿ ಮೂಡಲಿಗೆ ಹರಿಯುತ್ತ ಸಾಗಿ, ಸಾಗರವನ್ನು ಸೇರುತ್ತಿದೆ ಗಂಗಾನದಿ. ಭರತೇಶನ ಪಡೆಯವರು ಗಂಗೆಯಲ್ಲಿ ಮಿಂದು ಸರ್ವಾಂಗ ಶುದ್ಧರಾದರು. ಅಲ್ಲಿ ದೇವಗಂಗೆಯ ತೆಂಕಲಿಗೆ ಉಪ ಲವಣಾಬ್ಧಿ ಇರುವುದು. ಭರತೇಶನು ಅದನ್ನು ಬಲಕ್ಕಿಕ್ಕಿ ಮುಂದೆ ದೇವಗಂಗೆಯ ತಡಿಯಲ್ಲೇ ಪೂರ್ವಸಾಗರದೆಡೆಗೆ ಸಾಗಿದನು. ಗಂಗೆಯಲ್ಲಿ ಅಲ್ಲಲ್ಲಿ ಬೀಡುಬಿಡುತ್ತ ಮತ್ತೆ ಮುಂದುವರೆಯುತ್ತ ಭರತೇಶನು ಮೂಡಣ ಲವಣವಾರ್ಧಿಯನ್ನು ಕಂಡನು.

''ಈ ಕಡಲಿನಲ್ಲಿ ಮಾಗಧಾಮರನು ಇರುವನು. ಅವನು ಮಹಾಕೋಪಿ. ಆತನನ್ನು ಜಯಿಸಿ ಮುಂದೆ ಬೇಕಾದ ಕಾರ್ಯವನ್ನು ಯೋಚಿಸುವ.'' ಎಂದು ರಾಯನೊಡನೆ ಮಂತ್ರಿಯು ಬಿನ್ನವಿಸಿದನು.

''ಮಾಗಧನ ಕೋಪವೇ ? ಅವನ ಕೋಪಾಗ್ನಿಯನ್ನು ಲೋಟಿಸಿ ಬೂದಿಮಾಡುವೆನು. ಈ ಸಮುದ್ರದಲ್ಲಿರುವೆನೆಂಬ ಸೊಕ್ಕಲ್ಲವೆ? ಓಲೆಯೊಂದನ್ನು ಬರೆದುಬಿಡು. ಅದನ್ನವನು ಓದಿಸಿ ಬಾರದಾಗ ನೋಡುವ. ಆಗ ಅವನಿಗೆ ತಕ್ಕ ಮಾತನ್ನು ಹೇಳುವ.'' ಎಂದು ಚಕ್ರಿಯು ಮಂತ್ರಿಗೆ ತಿಳಿಸಿದನು. ಅನಂತರ ದೊರೆಯ ಸೂಚನೆಯಂತೆ ಮಂತ್ರಿಯು ಬೀಡುಬಿಡಲು ಡಂಗುರ ಸಾರಿಸಿದನು.

ಅಲ್ಲೇ ಸಾಗರದ ತಡಿಯಲ್ಲೇ ಬೀಡುಬಿಟ್ಟಿತು. ಮನುಷ್ಯಸಾಗರದಂತಿರುವ ಭರತೇಶನ ಸೇನೆ, ಮೂವತ್ತಾರು ಯೋಜನದ ಅಗಲವಿತ್ತು ಅದರ ಉದ್ದವು ನಲ್ವತ್ತೆಂಟು ಗಾವುದ. ಬೀಡು ಬಿಟ್ಟುದೇ ತಡ, ಅಲ್ಲಿ ವಣಿಜರ ಅಂಗಡಿಗಳಾದುವು. ಹಯಶಾಲೆ ಗಜಶಾಲೆಗಳಾದುವು. ಕೇರಿಕೇರಿಗಳಾದುವು. ನೃಪನ ಪಾಳೆಯವೆಂದರೆ ವಿಶ್ವಕರ್ಮನು ನಿರ್ಮಿಸುವ ಪಟ್ಟಣವಷ್ಟೆ. ದೊರೆಗಳಿಗೆ, ಅರಸು ಮಕ್ಕಳಿಗೆ, ಕೆಳೆಯರಿಗೆ, ಕರಣಿಕರಿಗೆ, ಮಂತ್ರಿಗಳಿಗೆ ಪರಿವಾರದವರಿಗೆ ಎಂದು ಮುಂತಾಗಿ ಎಲ್ಲರಿಗೂ ನಿವಾಸಗೃಹಗಳ ರಚನೆಯಾಯಿತು. ನಟ್ಟನಡುವೆ ಭರತೇಶನಿಗಾಗಿ ಒಳಕೋಟೆ ಹೊರಕೋಟೆ ಪಟ್ಟಶಾಲೆಗಳು, ಮಾಡಗಳು ಚಾವಡಿಗಳು —ಎಲ್ಲವನ್ನೂ ಮಯನು ನಿರ್ಮಿಸಿದನು. ಅರಸಿಯರ ಮನೆಗಳು, ಶಯನಮಂದಿರ, ಜಿನಗೃಹ ಮೊದಲಾದವೆಲ್ಲವು ಅಣಿಗೊಂಡುವು.

ಭರತಚಕ್ರಿಯು ಮೊದಲು ರಾಜರನ್ನು ಬಿಡಾರಗಳಿಗೆ ಬೀಳ್ಕೊಟ್ಟನು. ಅನಂತರ ಉಳಿದವರನ್ನು ಕಳುಹಿಸಿದನು. ಫೌಜಿನವರ ಆರೈಕೆಯನ್ನು ಜತನದಿಂದ ನೋಡಬೇಕೆಂದು ಜಯರಾಜನನ್ನು ಬೀಳ್ಕೊಟ್ಟನು.ಅಷ್ಟರಲ್ಲಿ ಅಲ್ಲಿಗೆ ಅರ್ಕಕೀರ್ತಿಯ ಫೌಜು ಬಂದಿತು. ಅದು ಅರಮನೆಯನ್ನು ಸೇರಿತು.

ನಾಳೆ ಯೋಚನೆ ಉಂಟೆಂದು ಮಂತ್ರಿಗೆ ಸೂಚಿಸಿ ಚಕ್ರಿಯು ಅವನನ್ನೂ ಮನೆಗೆ ಕಳುಹಿಸಿದನು. ಕೊನೆಗೆ ತಾನು ಮಂದಿರವನ್ನು ಸೇರಿ ನವಭದ್ರಶಾಲೆಯಲ್ಲಿ ಓಲಗಗೊಟ್ಟನು. ಮೊದಲು ಸುತನನ್ನು ತರಿಸಿಕೊಂಡು ನೋಡಿ ಮುದ್ದಾಡಿ ಮತ್ತೆ ದಾದಿಯ ಕೈಗೆ ಕೊಟ್ಟನು. ಆ ಮೇಲೆ ಸತಿಯರೆಲ್ಲ ಬಂದು ರಾಯನನ್ನು ಕಂಡರು. ರಾಯನವರನ್ನು ಮಂದಸ್ಮಿತದಿಂದ ನೋಡಿದನು. ಅಂದಿನ ಪಯಣವು ಹಿಂದಿನಂತಲ್ಲ. ಹೆಂಗಳೆಯರಲ್ಲಿ ಒಂದಿಷ್ಟು ತಾಪೋದಯವಾಗಿತ್ತು ಆ ತಾಪದಿಂದಾಗಿ ಅವರ ಮೈ ಬಾಡಿತ್ತು ಮುಖದಲ್ಲಿ ಬೆವರು ಮೂಡಿತ್ತು ಬಾಡಿದ ಎಲೆಗಳಂತೆ ತನ್ನೆದುರು ನಿಂತಿರುವ ಅವರನ್ನು ಚಕ್ರಿಯು ಮಾತನಾಡಿಸಿದನು.

''ನೀವೆಲ್ಲ ಬಳಲಿರುವಿರಿ; ಕುಳಿತುಕೊಳ್ಳಿ'' ಎಂದಾಗ ಅವರೆಲ್ಲ ನಗುನಗುತ್ತ ಕುಳಿತುಕೊಂಡರು. ''ಪಲ್ಲಕಿಗಳನ್ನು ಭರದಿಂದ ತಂದರೆ? ದೇಹವಲ್ಲಾಡಿ ನೀವು ನೊಂದಿರೆ? ನಿಮ್ಮ ಮೊಗ ಒಂದಿಷ್ಟು ಕಂದಿರುವುದು; ನಿಮಗೆ ಬಿಸಿಲು ತಾಗಿತೆಂದು'' ಎಂದು ಅರಸನು ನೊಂದು ನುಡಿದನು.

''ನೀವು ನನ್ನ ಬಳಿಯಲ್ಲೇ ಗುಂಪಾಗಿ ಬಂದರೆ ಸೆಖೆ ಹೆಚ್ಚಾಗುವುದೆಂದು ದೂರ ದೂರದಲ್ಲಿ ಬರುವಂತೆ ಕಟ್ಟುಮಾಡಿದುದು ಹೀಗಾಯಿತು.''

''ಇದು ಸಮುದ್ರ ಸಮೀಪವಾಗಿದೆಯೆಂದು ನಾವೇ ಭರದಿಂದ ಸಾಗಿ ಬಂದೆವು. ನಾವು ಹೇಳಿದಂತೆ ಮಾಡಿದ ಅವರಲ್ಲಿ ತಪ್ಪಿಲ್ಲ. ದೇವ ಮುನಿವನೆಂದು ಸೇವಕಾತಿಯರು ನಂಬುಗೆ ಬರುವಂತೆ ಹೇಳಿದ್ದರು. ನಾವೇ ಅದನ್ನು ಕೇಳದೆ ಬಂದೆವು. ಈ ನಮ್ಮ ಅಪರಾಧವನ್ನು ಮನ್ನಿಸಬೇಕು'' ಎಂದು ಅರಸಿಯರು ಇಂಪಾಗಿ ನುಡಿದರು.

''ಇಂದಿನ ಪಯಣದಲ್ಲೇ ಇಷ್ಟು ವೇಗದಿಂದ ಬಂದೆವು. ಹಿಂದಣ ಪಯಣದಲ್ಲಿ ಹೀಗಾಗಲಿಲ್ಲ. ಈಗ ನಿಮ್ಮನ್ನು ಕಾಣಲು ತಾಪವೆಲ್ಲ ಹೋಯಿತು.'' ಎಂದವರು ನಲ್ಲನೊಡನೆ ಹೇಳಿದರು.

''ಹಾಗಾದರೆ ಉಪ್ಪರಿಗೆಯನ್ನೇರಿ ಸಮುದ್ರವನ್ನು ನೋಡುವ. ಅದಕ್ಕೂ ಮೊದಲು ಮಿಂದು ದೇವಾರ್ಚನೆಗೈದು ಭೋಜನಮಾಡುವ; ಏಳಿ. ಎಂದು ಅರಸನು ಅರಸಿಯರೊಂದಿಗೆ ಎದ್ದನು. ಮಯನು ಸಾಹಸದಿಂದ ನಿರ್ಮಿಸಿದ ಲಕ್ಷಗೃಹಗಳಲ್ಲಿ ಒಬ್ಬೊಬ್ಬರು ಒಂದೊಂದು ಗೃಹವನ್ನು ಸೇರಿ ಸ್ನಾನಗೈದರು. ಚಕ್ರಿಯು ಬೇರೊಂದು ಮಂದಿರದಲ್ಲಿ ಮಜ್ಜನಮಾಡಿದನು. ಆ ಗೃಹಪತಿರತ್ನನಾದ ಚಕ್ರಿಯು ಪ್ರೇರಿಸಿದಂತೆ ಅವರೆಲ್ಲ ಮಿಂದು ಮಡಿಯುಟ್ಟು ಜಿನ ಆವಾಸಕ್ಕೆ ಅಡಿಯಿಟ್ಟರು. ದೇವಪೂಜೆಯನ್ನು ಮಾಡಿ ದಿವ್ಯಾನ್ನ ಪಾನವನ್ನು ಸೇವಿಸಿದರು. ಪರಿಮಳದ ತಂಬುಲಗಳನ್ನು ಕೊಂಡು ಶಯನಮಂದಿರ ಸೇರಿ ಸುಖನಿದ್ರೆಮಾಡಿದರು. ಆಮೇಲೆ ಆ ಭೋಗಿಗಳು ಸರಸ ವಿನೋದಗಳಿಂದ ಮಧ್ಯಾಹ್ನದ ಆಸರವನ್ನು ಪರಿಹರಿಸಿದರು.

ಅಂದು ಮೂರನೆಯ ಜಾವದಲ್ಲಿ ಅವನೀಶನು ತನ್ನ ನಳಿನಾಕ್ಷಿಯರೊಡನೆ ನೆಲೆಮಾಡವೇರಿ ಮೇಲ್ಮನೆಯಲ್ಲಿ ಕುಳಿತುಕೊಂಡು ಹೆಣ್ಣುಗಳಿಗೆಲ್ಲ ಸಮುದ್ರವನ್ನು ತೋರಿದನು. ಅಷ್ಟರವರೆಗೆ ಕಡಲನ್ನು ನೋಡದ ಹೆಣ್ಣುಗಳು ಆಶ್ಚರ್ಯದಿಂದ ಸಾಗರವನ್ನು ನೋಡಿದರು. ಕಡಲಿನ ಅಬ್ಬರವನ್ನು ಮನಸ್ಸಿನಲ್ಲೇ ಅವರು ಮೆಚ್ಚಿದರು. ಕಣ್ಣೆದುರಾಗಿ ಕಾಣುವ ಕಡಲನ್ನು ನೋಡುತ್ತ, ಅಟ್ಟಹಾಸವನ್ನು ಮಾಡುತ್ತ ಒಬ್ಬರನ್ನೊಬ್ಬರು ತಟ್ಟುತ್ತ ಸಂತೋಷಪಟ್ಟರು. ಅಟ್ಟಿಕೊಂಡು ಬರುವ ತೆರೆಗಳನ್ನೂ ಮುಂದಕ್ಕೆ ಓಡಿಹೋಗುವ ತೆರೆಗಳನ್ನೂ ಹಿರಿದಾದ ಬೆಟ್ಟದಂತೆ ಏಳುವ ಬೀಳುವ ತೆರೆಗಳನ್ನೂ ಅವರು ಕಣ್ಣಿಟ್ಟು ನೋಡಿದರು. ಆ ಸಮುದ್ರದಲ್ಲಿ ಅಲ್ಲಲ್ಲಿರುವ ಗುಡ್ಡಗಳನ್ನೂ ನಿಡುಗಲ್ಲುಗಳನ್ನೂ ನೋಡಿದರು. ಆ ಸಮುದ್ರದಲ್ಲಿ ದೋಣಿ, ದುಗ್ಗಿ, ಕಪ್ಪಲು, ದೊಡ್ಡ ಹಡಗುಗಳೂ ಇರುವುದನ್ನವರು ನೋಡಿದರು. ತುಂತುರು ತೆರೆಯ ನೊರೆಯಲ್ಲಿ ಫುಳಫುಳೆಂದು ಸುಳಿಸುಳಿಯಾಗಿ ಹೊಳೆಯುತ್ತಿರುವ ವಾರಿಧಿಯನ್ನು ಕಾಂತೆಯರು ನೋಡುತ್ತಿರುವಾಗ ಭೂಪಾಲನು ಅವರೊಡನೆ ಮಾತನಾಡಿದನು.

''ಇಂದಿನಿಂದ ನೀವು ಈ ಹಿರಿದಾದ ಕಡಲನ್ನು ನಿತ್ಯವೂ ನೋಡಬಹುದು. ಈಗ ಸಾಕು.'' ಎಂದು ನುಡಿದವನೇ ಅರಸಿಯರೊಂದಿಗೆ ಮಾಡದಿಂದ ಇಳಿದನು. ಅನಂತರ ರಾಜನು ಕಾಲೋಚಿತವಾದ ಭೋಗದಲ್ಲಿ ಮೆರೆದನು. ಸಾಗರದ ತಡಿಯಲ್ಲಿ ಮಹಾಸೇನೆಯೂ ಮೆರೆದಿತ್ತು.

# ೫

# ರಾಯಸದ ಅಂಬು

ಮರುದಿನ ಭರತೇಶನು ತನ್ನ ಮಂದಿರಕ್ಕೆ ದಳಪತಿಯನ್ನೂ ಸಚಿವನನ್ನೂ ಕರೆಯಿಸಿ ಮುಂದಣ ಕಾರ್ಯವನ್ನು ಯೋಚಿಸಿ ನುಡಿದನು.

''ಸೇನಾಪತಿಯೆ, ಮಾಗಧವ ಗೆಲ್ಲುವುದೊಂದು ಗಹನವೆ? ಈ ಕಡಲ ತಡಿಯಲ್ಲಿ ನನಗೊಮ್ಮೆ ಯೋಗದೊಳಗಿರಬೇಕೆಂದು ಆಸೆಯಾಗುತ್ತಿದೆ. ನಿನ್ನೆ ಸಮುದ್ರವನ್ನು ಕಂಡಂದಿನಿಂದ ನನ್ನೆದೆಯಲ್ಲಿ ಧ್ಯಾನದ ಆಸೆಯು ಒಂದೇ ಸಮನೆ ಹೆಚ್ಚುತ್ತಿದೆ. ನಾನದನ್ನೂ ಮನ್ನಿಸಬೇಕು. ಕಾಡಿನಲ್ಲಿ, ಕಡಲಿನಲ್ಲಿ, ಹೊಳೆಯಲ್ಲಿ, ಗಿರಿಸಾನುಗಳಲ್ಲಿ ಧ್ಯಾನವು ಲೇಸೆಂದು ಅಧ್ಯಾತ್ಮದಲ್ಲಿ ಹೇಳಿರುವುದನ್ನು ನಾನು ಕೇಳಿರುತ್ತೇನೆ. ಆ ಮಾತೀಗ ನನ್ನ ಮನಸ್ಸಿನಲ್ಲಿ ಹೊಳೆಯಿತು. ಪುರದಿಂದ ಹೊರಟ ಮೇಲೆ ದಾರಿಯಲ್ಲಿ ಹಿರಿಯ ಯೋಗವನ್ನು ಮಾಡಿಲ್ಲ. ಶರಧಿಯ ಒತ್ತಿನಲ್ಲೊಮ್ಮೆ ಯೋಗದಲ್ಲಿದ್ದು ಅದನ್ನು ಪರೀಕ್ಷಿಸಬೇಕು.''

''ದೇವರಲ್ಲಿ ಬಿನ್ನಹ.'' ಎಂದು ಮಂತ್ರಿಯು ಮಾತು ಕೊಡಿಸಿದನು. ''ಸಮುದ್ರದ ತಡಿಯಲ್ಲಿ ಧ್ಯಾನ ಮಾಡುವುದು ಲೇಸಹದು. ಅದಕ್ಕಾಗಿ ಹಗೆಯನ್ನು ಜಯಿಸಿ ಆ ಮೇಲೆ ಮಾಡಬಹುದು.'' ಸೇನಾಪತಿಯೂ ಮಂತ್ರಿಯ ಮತವನ್ನೇ ಸಮರ್ಥಿಸಿದನು.

''ಮಾಗಧ ನನಗೊಂದು ಹಗೆಯೆ? ಸೂರ್ಯನಿಗೆ ದೊಡ್ಡ ಗೂಗೆಯ ಯೋಚನೆಯೇಕೆ? ನಾನು ಯೋಗದಲ್ಲಿದ್ದಾಗ ಅವನು ತನ್ನ ಪಡೆಯನ್ನು ತಾಗಿಯಾನೆ? ತೃಣವನ್ನು ಪರ್ವತವನ್ನಾಗಿ ಮಾಡುವಂತೆ ನೀವವನನ್ನು ದೊಡ್ಡವನ್ನಾಗಿ ಮಾಡಿ ಒಕ್ಕಣಿಸುತ್ತಿದ್ದೀರಿ. ಗಣಬದ್ಧರಿಗೆ ಅಜ್ಞೆಯಿತ್ತು ಒಂದೇ ಕ್ಷಣದಲ್ಲಿ ಆ ಬಣಗನನ್ನು ಹಿಡಿದು ತರಿಸಲೆ? ಅದು ಬೇಡ. ವಜ್ರಕಾಂಡವೆಂಬ ಬಿಲ್ಲಿಗೆ ಕಿಡಿಗೆದರುವ ಬಾಣವನ್ನು ತೊಟ್ಟು ಅವರ ಪುರದಲ್ಲಿ ಕೆಂಡದ ಮಳೆ ಸುರಿಸಿ ಗದಗಾಪುಗೊಳಿಸಲೆ? ಇಲ್ಲವಾದರೆ ಮಯನಿಂದ ಸೇತುಗಟ್ಟಿಸಿ ನಮ್ಮ ತೊಂಡರಿಂದ ಅವನನ್ನು ಹಿಡಿದು ತರಿಸಲೆ? ಅವನಿಗೆ ಚಕ್ರವೂ ಬೇಡ; ಚಾಪವೂ ಬೇಡ. ವಿಕ್ರಮದ ಅರಸು ಮಕ್ಕಳೇ ಅವನನ್ನು ಆಕ್ರಮಿಸಿ ಹಿಡಿದೆಳೆದು ತಂದು ನನ್ನ ಪಾದದಲ್ಲಿ ಕೆಡಹುವಂತೆ ಮಾಡುತ್ತೇನೆ. ಆದ್ದರಿಂದ ನನಗಿದು ದೊಡ್ಡದಲ್ಲ. ಇದಕ್ಕಾಗಿ ನೀವು ಎದೆಹಾಕುಗೊಳ್ಳದೆ ಒಪ್ಪಿರಿ. ಸಮುದ್ರದ ತಡಿಯಲ್ಲಿ ಪರಮಾತ್ಮಯೋಗ ಸಂಪದವನ್ನು ಒಮ್ಮೆ ನೋಡುವೆನು. ಹಂಸನಾಥನ ನೋಡುವಾಗ, ಕರ್ಮಾಳಿಯೇ ವಿಧ್ವಂಸವಾಗುವಾಗ, ಇವನು ಸಿಡಿದು ಬೀಳದಿರುವನೇ? ನಾಳೆ ನಾನು ಅವನಿಂದ ಸೇವೆ ಮಾಡಿಸಿಕೊಳ್ಳುವುದನ್ನು ನೀವೇ ನೋಡುವಿರಂತೆ. ಒಂದು ಬಾಣವೆಸೆದು ಅವನ ಒಳಗನ್ನು ನೋಡುವೆನು. ಉಗುರಿಂದ ಹೋಗುವುದಕ್ಕೆ ಕೊಡಲಿಯೇಕೆ? ಬಂದರೆ ಒಂದೊಳ್ಳಿತು; ಬಾರದಿರೆ

ಎರಡೊಳ್ಳಿತು— ಎಂದವಗೆ ತೋರಿಸುವೆನು. ಧ್ಯಾನದಲ್ಲಿ ಮೂರು ದಿನವಿದ್ದು ಮರುದಿನವೇ ನಾನವನಿಗೆ ಒಂದು ಅಂಬನ್ನೆಸೆದು ಈ ನಿಲಯಕ್ಕೆ ಬರುವೆನು. ಇದು ರಾಜಯೋಗಾಂಗ, ಸೇನೆಯನ್ನು ಎಚ್ಚರದಿಂದ ನೋಡಿಕೊಳ್ಳಿರಿ.''

ಎಂದು ಚಕ್ರಿಯು ಮಂತ್ರಿ ಸೇನಾಪತಿಗಳಿಗೆ ಹೇಳಿ, ಅವರನ್ನು ಉಡುಗೊರೆಯಿತ್ತು ಕಳುಹಿಸಿದನು. ಆ ಮೇಲೆ ಸಾಗರ ತಡಿಗೆ ಹೋಗಲು ಅಣಿಯಾದನು. ಸಾಗರದೆಡೆಯಲ್ಲಿ ಬಡಗಿಯೊಡ್ಡಿದ ಗೃಹದಲ್ಲಿ ರಾಜಯೋಗಿಯು ಯೋಗದಲ್ಲಿ ಮೂರು ದಿನವಿದ್ದನು. ಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹರ, ಧಾರಣೆ, ಸಮಾಧಿಯೆಂಬ ಯೋಗಾಮೃತದ ಅಷ್ಟಾಂಗವನ್ನು ಬಗೆದನು. ಲೋಕದವರ ಮುಂದೆ ತೋರದಿರುವ ನಿಧಿಯನ್ನು ತಂದು ಏಕಾಂತದಲ್ಲಿ ನೋಡುವಂತೆ ಆ ಕಡಲಿನ ಒತ್ತಿನಲ್ಲಿ ಭೂಕಾಂತನು ತನ್ನ ದೇಹದಲ್ಲೇ ಆತ್ಮನನ್ನು ಕಂಡನು. ಹಿಂದಿನ ಭೋಗಗಳಿಗಿಂತಲೂ ಅಂದಿನ ಯೋಗವು ಮಹೋನ್ನತವಾಗಿತ್ತು. ಮೂರು ದಿವಸ ಮೂರು ಗಳಿಗೆಯಾಗಿದ್ದರೂ ನೃಪನಿಗೆ ಉದರಾಗ್ನಿ ತೋರುತ್ತಿರಲಿಲ್ಲ. ಮೂರು ಲೋಕದ ಸಾರವೆನಿಸುವ ಆತ್ಮಸುಖದಲ್ಲಿದ್ದು ತಣಿದನು.

ಮರುದಿನ ಭರತೇಶನು ಪಾರಣೆಗೈದು ವಿಶ್ರಮಿಸಿದನು, ಮೂರನೆಯ ಜಾವದಲ್ಲಿ ವಿಶ್ರಮಿಸಿದ ಧೀರರ ದೇವನೆದ್ದು ಹೊಂದೇರನ್ನು ಏರಿ ಸಾಗರದ ಮೇಲೆ ಸಾಗಿದನು. ಅವನು ಏರಿದ ಆ ಜಿತಂಜಯವೆಂಬ ರಥವು ಧ್ವಜಘಂಟೆ ಕಲಶ ಹೂಮಾಲೆಗಳಿಂದ ಶೃಂಗಾರವಾಗಿತ್ತು. ಅದನ್ನು ಹತ್ತು ಕುದುರೆಗಳು ಎಳೆಯುತಿದ್ದುವು. ಗಣಭದ್ರನೊಬ್ಬನು ಸಾರಥಿಯಾಗಿ ರಥ ನಡೆಸುತ್ತಿದ್ದನು. ಜಲಗಾಮಿಗಳಾದ ಆ ಕುದುರೆಗಳು ನೆಲದ ಮೇಲೆ ಎಳೆಯುವಂತೆಯೇ ರಥವನ್ನು ಜಲದ ಮೇಲೆಳೆದುಕೊಂಡು ಹೋದುವು. ಮುಂಗಾಲನ್ನು ಮಡಿದು ಹಿಂಗಾಲನ್ನು ನೀಡಿ ರಥವನ್ನು ಎಳೆದುವು. ಹನ್ನೆರಡು ಯೋಜನ ಸಾಗಿದ ಮೇಲೆ ಹಡಗು ನಿಲ್ಲುವಂತೆ ಆ ರಥವು ಸಾಗರದ ಮೇಲೆ ನಿಂತಿತು.

''ಹೇಡಿಯು ನಿನ್ನನ್ನು ಕಂಡರೆ ಓಡಿಹೋಗುವನು. ಇನ್ನು ಮುಂದೆ ಹೋಗಬಾರದು'' ಎಂದು ಸಾಗರವೇ ಬಂದು ಕಾಲು ಹಿಡಿದು ನಿಲ್ಲಿಸಿದಂತೆ ಆ ತೇರು ನಿಂತಿತು. ಆಗ ಚಕ್ರಿಯು ದೀರ್ಘವಾದ ಬಿಲ್ಲನ್ನು ರಥದ ಮೇಲೂರಿ ಹೆದೆಯೇರಿಸಿದನು. ಬಿಲ್ಲಿಗೆ ಬಾಣವನ್ನು ಹೂಡಿ ''ನಿರಂಜನ ಸಿದ್ಧ''ನನ್ನು ನೆನೆದು, ಕರ್ಮದ ಗುರಿಯನ್ನು ಕಾಣುವಂತೆ, ಗುರಿಯಿಟ್ಟು ಭೂಕಾಂತನು ಬಾಣವನ್ನೆಸೆದನು. ಆಕಾಶಮಾರ್ಗದಲ್ಲಿ ಆ ಬಾಣವು ಮುಂದೆಸೆಯಲ್ಪಟ್ಟು ಹಾದುಹೋಯಿತು. ಹೂಂಕರಿಸಿದ ರಾಯನ ಆರ್ಭಟಕ್ಕೆ, ಕುದುರೆಗಳೆಲ್ಲ ಬೆದರಿದವು. ಕಡೆಯುತ್ತಿರುವ ಘಟದ ಮೊಸರು ಉಕ್ಕುವಂತೆ ಕಡಲು ದಡವನ್ನು ಮೀರಿ ಉಕ್ಕಿತು. ನಕ್ಷತ್ರಗಳು ಉದುರಿಬಿದ್ದುವು. ತಳಲೋಕ, ನರಲೋಕ, ಮೇರುಪರ್ವತಗಳೂ ಅಲುಗಿದುವು. ಮಾಗಧನ ಊರಿಗೆ ನೀರುಕ್ಕಿ ಆ ನಾಡು ಕಂಪಿಸಿತು. ಬಿರುಗುಟ್ಟುತ್ತ ಆ ಬಾಣವು ಬರಸಿಡಿಲಂತೆ ಆರ್ಭಟಿಸುತ್ತ, ಹೋಗಿ ಮಾಗಧನಿದ್ದ ಹೊರಗಿನ ಓಲಗದ ಶಾಲೆಯಲ್ಲಿರಿಸಿದ್ದ ಕಂಭಕ್ಕೆ ತೊಟ್ಟನೆ ನೆಟ್ಟಿತು.

ಝಲ್ಲನೆ ಸಭೆ ಚೆದುರಿತು—ಹುಲಿ ಬರಲು ಕಂಡ ಹುಲ್ಲೆಯ ಹಿಂಡಿನಂತೆ. ಬಲ್ಲಿದನಲ್ಲವೆ

ಮಾಗಧಾಮರನು. ಆದ್ದರಿಂದ ಅವನು ತನ್ನ ಗದ್ದುಗೆಯಲ್ಲೇ ಇದ್ದನು. ಹೆದರಿ ಓಡಿದವರು ಅಂಜಿಕೆಯಳಿದು ಬಳಿಕ ಒಬ್ಬೊಬ್ಬರಾಗಿ ಹತ್ತಿರ ಬಂದರು.

''ಓಲೆಯನ್ನು ತನ್ನಿರಿ''—ಎಂದು ಮಾಗಧಾಮರನು ಆಜ್ಞೆಯಿತ್ತನು. ಅವರಲ್ಲೊಬ್ಬನು ಅಳುಕುತ್ತ ಅಳುಕುತ್ತ ಅದನ್ನು ತಂದನು. ಆ ಓಲೆಯನ್ನು ಓದಲೆಂದು ಕರಣಿಕನಿಗೊಪ್ಪಿಸಲಾಯಿತು, ಒಡನೆಯೇ ಕರಣಿಕನು ಓದಿದನು.

''ಶ್ರೀ ಮನ್ಮಮಹಾ ಪುರಜಿನೇಂದ್ರನ ಸುಕುಮಾರ, ಗುರುಹಂಸನಾಥನ ಭಾವಕ್ಕೆ ಸೊಕ್ಕಿದ ಅರಿರಾಯ ಗಿರಿವಜ್ರದಂಡ, ಪ್ರಚಂಡ, ಮಾರ್ಮಲೆವ, ಅರಿರಾಯಮೇಘ, ಝಂಝಾನಿಲ, ದುರ್ಮುಖರಾಯ,ಜಜ್ಜರ, ಕರ್ಮಕೋಳಾಹಳ, ಮೃತ್ಯುಕೋಳಾಹಳ, ಧರ್ಮಪಾಲಕ, ಪ್ರಜಾಪಾಲಕ ಭರತಚಕ್ರೇಶ್ವರನು—ಒಲವಿನಿಂದ ನಮ್ಮ ಕಿಂಕರನಾದ ಮಾಗಧಾಮರನಿಗೆ ಕೊಟ್ಟ ನಿರೂಪ : ತ್ವರಿತದಲ್ಲೇ ನಾಳೆ ಬಂದು ನಮ್ಮನ್ನು ಕಾಣುವುದು. ಇದು ಪರಮಶಾಸನವು.''

ಇದನ್ನು ಕೇಳಿದೊಡನೆ ಮಾಗಧಾಮರನು ಕಿಡಿಕಿಡಿಯಾಗಿ ಮೈನಿಮಿರಿ ಔಡುಗಚ್ಚಿದನು. 'ಸೀಳು, ಸೀಳು ಓಲೆಯನ್ನು ಸುಡು, ಸುಡು.'' ಎಂದು ತನ್ನ ಬಾಳನ್ನೇ 'ಸೀಳು ಸುಡು'' ಎನ್ನುವಂತೆ ಹೇಳಿದನು, ಹಲ್ಲು ಕಡಿದು ಕಣ್ಣು ಕೆಂಪೇರಿಸಿ, ಓದಿದವನನ್ನೇ ಕೊಲ್ಲುವವನಂತೆ ಅವನನ್ನು ನೋಡಿ ನೋಡಿ ನುಡಿದನು.

''ಇವನ್ನೆಲ್ಲಿಯ ಭರತಗಿರತ? ಇವನು ತಮ್ಮ ಸಾಗರದ ಭರತವಿಳಿತವೋ. ಅವನ ಸೇನೆಯನ್ನು ಚೆಲ್ಲಿಬಿಡಿವೆ; ಕರೆಯೊ ನಮ್ಮೆಲ್ಲ ವ್ಯಂತರಿಗರನ್ನು.... ಕಿಂಕರನೆ ನಾನು ಅವನಿಗೆ? ಅವನ ಓಲೆಯ ಅಂಕೆ ನನಗೊಂದು ನಿರೂಪವೆ? ಬಿಂಕದ ಕಡಲಿನೊಳಗಿರುವವರಲ್ಲಿ ಪೊಡವಿಯಲ್ಲಿರುವ ಡೊಂಕರು ಈ ರೀತಿಯಲ್ಲಿ ಹೇಳುವುದು ಸೊಕ್ಕಲ್ಲವೆ? ಒಮ್ಮಾರು ಬಿರುವಿನ ಒಕ್ಕಣೆಯಿಲ್ಲದ, ಹೆಮ್ಮೆಸಲ್ಲದ ಪಂಥ ನಮ್ಮನಾಡಿನದು. ನಮ್ಮ ಮುಂದೆ ಇದೆಲ್ಲ ನಡೆಯುವುದೆ? ಅವನು ಬೂತನಾಥರ ಘನತೆಯನ್ನು ಅರಿಯನು.ನಾನು ಅವನನ್ನು ಕಾಣುವವನೆ? ನೋಡುವ, ಅವನ ಭರತವನ್ನು ಇಳಿತ ಮಾಡುವೆನು. ಭಟರನ್ನು ಬರಹೇಳೊ.'' ಎಂದು ನುಡಿದು ಕೋಪದಿಂದ ಕೆಂಪೇರಿ ಉರಿಯುತ್ತ ಗದ್ದುಗೆಯನ್ನು ಜಡಿದನು.

ಆಗ ಅಲ್ಲಿದ್ದ ಮಂತ್ರಿಗಳೇ ಮುಂತಾದವರು ಅವನ ಕೋಪವು ತಣಿಯುವಂತೆ ಸಮಾಧಾನ ಮಾಡಿದರು.

''ದೇವ, ಇದಕ್ಕೆ ನೀವು ಏಳುವುದು ಮತವಲ್ಲ? ಕುಳ್ಳಿರಿ ಇದಾವ ದೊಡ್ಡಿತು? ಆ ಕಾರ್ಯವನ್ನು ನಾವು ಸಲ್ಲಿಸುವೆವು. ನೀವು ಎಂದಿನಂತೆ ಓಲಗಗೊಡಿರಿ. ಓಲಗ ಪರಿದ ಮೇಲೆ ನಮಗೆ ಅಜ್ಞೆ ಮಾಡಿರಿ.''

ಮಾಗಧೇಂದ್ರನು ಅದರಂತೆ ವರ್ತಿಸಿದನು. ಓಲಗ ಪರಿಯಿತು.ಆಗ ಅವರು ತಮ್ಮೊಳಗೆ ಆಲೋಚನೆ ಮಾಡಿದರು.

''ಧೀರನಲ್ಲವೆ ನೀನು? ಪ್ರೌಢನಲ್ಲವೆ? ನಿನಗಾರು ಇದಿರು? ಇದರಿಂದ ನಿನ್ನ ಘನತೆಗೆ,

ಭಾಗ್ಯಕ್ಕೆ ತಕ್ಕಂತೆ ನಡೆ. ಅಲ್ಪ ನಡತೆಯ ಆಟವನ್ನು ಬಿಡು. ಮುನಿಸನ್ನು ಬಿಡು. ನಮ್ಮ ಮಾತನ್ನು ಕೇಳು–ನೀನು ಅರಮನೆಯೊಳಗೇ ಇರು. ನಾವು ಮಾಡುವ ಘನತೆಯನ್ನು ನೋಡು. ಭೂತಳವೆಲ್ಲ ನಿನ್ನನ್ನೇ ಮೆಚ್ಚಿ ಕೀರ್ತಿಸುವಂತೆ ಮಾಡುವೆವು.''

—ಎಂದ ಮಾತಿಗೆ ಮಾಗಧಾಮರನು ನಸುನಕ್ಕನು. ''ಮುನಿಸು ಇನ್ನಿಲ್ಲ. ನಿಮ್ಮ ಅನುಮಾನವೇನೆಂದು ಹೇಳಿರಿ.'' ಎಂದನು. ಅವನ ಮನಸ್ಸು ತಂಪಾದುದನ್ನು ಅವರು ತಿಳಿದು ತಮ್ಮ ಕಾರ್ಯದ ಅನುವನ್ನು ಹೇಳಿದರು.

''ಭರತ ಚಕ್ರೇಶ್ವರನು ಸಾಮಾನ್ಯನಲ್ಲ. ದೇವರೆಲ್ಲರಿಗೂ ದೇವನಾಗಿರುವ ಪುರದೇವನ ಕುಮಾರನು. ಅವನ ರೀತಿಯನ್ನು ನೀವೇ ತಿಳಿಯಬೇಕಲ್ಲದೆ ಮರಳು ವ್ಯಂತರರು ಅದನ್ನು ತಿಳಿಯುವರೆ? ಅವನು ಅದ್ಭುತ ಸಂಪತ್ತಿಗೊಡೆಯನು; ಅವನಿಗೆ ಕಿಂಚಿತ್ತೂ ಭಯವಿಲ್ಲ. ಈ ಜನ್ಮದಲ್ಲಿ ಅವನ ಮೋಕ್ಷಗಾಮಿಯಾಗಿದ್ದಾನೆ. ನೀನು ಅವನ ಚಿತ್ತದ ಭೂತಿಯನ್ನು ತಿಳಿದರೆ ನೀನೇ ಅವನನ್ನು ಅರ್ಚಿಸುವೆ; ಅಂತಹ ಮಹಿಮನವನು. ಭರತನು ಷಟ್ಖಂಡವನ್ನು ಆಳುವ ಪುಣ್ಯವನ್ನು ಪಡೆದೇ ಹುಟ್ಟಿರುವನು. ಅವನನ್ನು ಬೇರೆಯವರಿಂದ ತೊಲಗಿಸಲು ಸಾಧ್ಯವೇ? ಪ್ರೌಢ ಭೂವರನಾದ ನೀನೇ ಇದನ್ನು ಸ್ಮರಿಸು. ಮಡಕೆಯನ್ನೊಡೆಯುವಂತೆ ಅವನು ವಜ್ರಕವಾಟನ್ನೊಡೆಯುವನು. ಭರತೇಶನೇನೂ ಬಡವನಲ್ಲ. ಬೆಟ್ಟಗಳನ್ನೇ ಒಟ್ಟುಗೂಡಿಸಿ ಕಡಲನ್ನು ದಾಟುವ ದಕ್ಷನು. ಜಾಣನಲ್ಲವೆ ನೀನು. ಅವನು ಎಸೆದ ಬಾಣವು ಕಂಬದಲ್ಲಿ ನೆಟ್ಟಿದೆ. ಈ ಮೊದಲು ಈ ರೀತಿಯಲ್ಲಿ ಕೋಣೆಗೆ ಬಾಣವೆಸೆದವರುಂಟೆ? ಕಂಬಕ್ಕೆ ತಾಗಬೇಕೆಂದು ಎಸೆದ ಅಂಬು ಇಲ್ಲಿ ಕಂಬದಲ್ಲಿ ನೆಟ್ಟಿತು. ಓಲೆಯಕಟ್ಟಿ ಬಾಣವೆಸೆದವನು ಉರಿಮಾಲೆಯ ಬಾಣವನ್ನಿಡನೇ? ಜ್ವಾಲೆಯನ್ನುಗುಳುವ ಚಕ್ರದಿಂದ ಹೊಡೆಯನೇ? ಇದನ್ನು ನೀನೇ ಸಮಾಲೋಚಿಸು ನೃಪತಿ.''

ನೆಟ್ಟ ಬಾಣವನ್ನು ತೋರಿಸಿ ನುಡಿದ ಈ ಮಾತುಗಳನ್ನು ಮಾಗಧನು–ಬಾಯಿ ಬಿಟ್ಟು ಕೇಳತೊಡಗಿದನು. ಆ ಮಾತುಗಳು ಅವನೆದೆಗೆ ತಾಗಿದುವು. ವಜ್ರಕವಾಟವನ್ನು ಹಿಟ್ಟುಗುಟ್ಟುವನೆಂಬ ಮಾತು ಅವನನ್ನು ಬೆದರಿಸಿತು. ಸಮಯಸಾಧಿಸಿ ಸಚಿವರು ತಮ್ಮ ಹಿತವಚನವನ್ನು ಮುಂದುವರಿಸಿದರು.

''ಇದಿರಾಳಿಯ ಶಕ್ತಿಯನ್ನೂ ತನ್ನ ಶಕ್ತಿಯನ್ನೂ ಯೋಚಿಸಿ ಕಾಳಗಕ್ಕಿಳಿವುದು ಜಾಣ್ಮೆ. ಮದದಿಂದ ಹೋಗಿ, ತಾಗಿ ಯುದ್ಧದಲ್ಲಿ ಸೋತು ಶರಣಾದರೆ ಲೋಕದ ಹಾಸ್ಯಕ್ಕೆ ಆಸ್ಪದವಾಗುವುದು. ತನಗೆ ತಕ್ಕ ಎಡೆಯಲ್ಲಿ ಕಾಳಗವೆಸಗಬೇಕಲ್ಲದೆ ಅಧಿಕರಲ್ಲಿ ಸೆಣಸಾಡಿ ತಿವಿಸಿಕೊಳ್ಳುವುದು ಒಳಿತೇ? ತನ್ನ ಇಚ್ಛೆಗೆ ಸರಿಯಾಗಿ ಮಾತಾಡದೆ ಪರರ ಶಕ್ತಿಯನ್ನು ಮಹೋನ್ನತವಾಗಿ ಮಾಡಿದರೆನ್ನಬೇಡ. ಕನ್ನಡಿಯಂತಿರುವುದನ್ನೇ ತೋರಿಸಿ ಹೇಳಿದೆವು. ಒಡೆಯನನ್ನು ಕುಸಿಗುಟ್ಟಿ ಪರರನ್ನು ಹೆಚ್ಚಿಸಿ ನುಡಿಯುವುದು ಅಧಮತನ. ಕಡೆಗೆ ಜಯಿಸುವ ಕಾರ್ಯವನ್ನು ಹೇಳಿದೆವಲ್ಲದೆ ಕೆಡುವ ಕಜ್ಜವನ್ನು ಹೇಳುವವರಲ್ಲ. ನಮ್ಮ ಮಾತು ನಿನಗಿಂದು ಕಷ್ಟವೆಂದು ತೋರಿದರೆ, ಮುಂದೆ ಇದೇ ಲೇಸೆಂದು ತೋರುವುದು. ಅದನ್ನು ನೀನೇ ಕಾಣುವೆ. ಇದು ನಿನ್ನ ಚಿತ್ತಕ್ಕೆ ಬಂದರೆ ಕೇಳು; ಇಲ್ಲದಿದ್ದರೆ ಬಿಟ್ಟುಬಿಡು.''

ಈ ರೀತಿಯಲ್ಲಿ ಕುಲವೃದ್ಧರಾಡಿದ ಮಾತನ್ನು ಲಾಲಿಸಿ, ಚಕ್ರಿಯು ಬಲು ಶಕ್ತಿವಂತನೆಂದು ತಿಳಿದನು ಮಾಗಧೇಂದ್ರ, ಕಲಹ ಜಯಿಸಲಾರದೆಂದು ತಿಳಿದು ತಾನು ತಲೆತಗ್ಗಿಸಿಕೊಂಡನು.

"ಹಾಗಾದರೆ ಇನ್ನೇನು ಮಾಡುವ ?" ಅರಸನ ಪ್ರಶ್ನೆ.

"ಪ್ರೀತಿಯಿಂದ ಚಕ್ರೇಶನೆಡೆಗೆ ಹೋಗಿ ಒಲವಿಂದ ವಂದನೆಮಾಡುವ" ಅವರ ಉತ್ತರ. ಅವನು ಆದೀಶನ ಕಂದನೆಂದು ಅವರು ತಮ್ಮ ಉತ್ತರವನ್ನು ಸಮರ್ಥಿಸಿಕೊಂಡರು.

"ಷಟ್ಖಂಡದೊಳಗೆ ಅವನಿಗೆ ಸೋತು ಎರಗದ ಬಲ್ಲಿದರಾರಿದ್ದಾರೆ? ಮೋಕ್ಷಸುಖಿಯ ಪಾದಕ್ಕೆರಗುವುದು ಕೊರತೆಯೇ? ಭಕ್ತಿಯಿಂದ ಎರಗದವರನ್ನು ನಾಳೆ ತನ್ನ ಶಕ್ತಿಯಿಂದಲೇ ಎರಗಿಸಿಕೊಳ್ಳುವನು. ಆದ್ದರಿಂದ ಮೊದಲೇ ಹೋಗಿ ಅವನನ್ನು ಕಾಣುವುದೇ ನಮಗಿರುವ ಯುಕ್ತಿ"

ಮಾಗಧನು ಈ ಮಾತಿಗೆ ಒಡಂಬಟ್ಟನು. ತಮ್ಮೊಳಗೆ ಒಡಂಬಡಿಕೆ ಬಂದುದಕ್ಕಾಗಿ ಆಪ್ತರಾದ ಆ ಮಂತ್ರಿಗಳು ಅವನನ್ನು ಕೊಂಡಾಡಿದರು. ನೀತಿಯನ್ನು ಕೇಳುವ ದೊರೆಯನ್ನು ಹೊಗಳದವರಾರು? "ಚಕ್ರಿಯ ಓಲೆಯಲ್ಲಿ ನಾಳೆ ಬಂದೆರಗಬೇಕೆಂದಿದೆ. ನಾಳೆ ಹೋಗುವ; ಈಗ ಕಡೆಹಗಲಾಗಿದೆ" ಎಂದವರು ಅರಸನಿಂದ ಬೀಳ್ಕೊಂಡರು.

ಅತ್ತ ಚಕ್ರೇಶ್ವರನು ಬಾಣವನ್ನು ಎಸೆದೊಡನೆ, ಒತ್ತಿನ ಸಾರಥಿ ರಥವನ್ನು ಹಿಂತಿರುಗಿಸಿದನು. ಅದು ಕಡಲಿನ ತಡಿಯಲ್ಲಿ ನಿಂತಿದ್ದ ಸೇನೆಯ ಹತ್ತಿರಕ್ಕೆ ಸಾಗಿತು. ತೂಗುತ್ತಿರುವ ಘಂಟೆ ಪತಾಕೆಗಳ ಆ ರಥವು ಮಂದರ ಪರ್ವತವು ಸಾಗುತ್ತಿರುವಂತೆ ತೋರಿತು. ದಂಡ ವಜ್ರಖಂಡವನ್ನು ರಥಕ್ಕೆ ಊರಿ, ಅದರ ಮೇಲಿನ ತುದಿಯಲ್ಲಿ ಎಡಗೈಯನೆತ್ತಿ ಹಿಡಿದು, ರಥಕ್ಕೊರಗಿ ನಿಂತುಕೊಂಡು ಭರತೇಶನು ಮುಂದೊತ್ತಿದನು. ಎಡಗೈಯ್ಯಲ್ಲಿದ್ದ ಪಂಚರತ್ನ ಕಟ್ಟಿನ ಬಿಲ್ಲು ಕಾಮನ ಬಿಲ್ಲಿನಂತೆ ಸೊಗಸಾಗಿತ್ತು, ಕಾಮನಬಿಲ್ಲು ತನ್ನೊತ್ತಿನಲ್ಲಿ ಮೂಡಿ ಹೇಮಾದ್ರಿಯಂತೆ ಅವನು ಮುಂದುವರಿದನು. ನೀಡುತ್ತಿರುವ ವೀಳ್ಯದೆಲೆಯ ಕೊಳ್ಳುತ್ತ, ಬೀಸುತ್ತಿರುವ ಚಾಮರಸೇವೆಯ ಕೊಳ್ಳುತ್ತ, ಎಡಬಲವ ನೋಡುತ್ತ ರಾಮರೊಡೆಯನು ಬಂದನು.

ತೇರನ್ನು ಕಂಡೊಡನೆ ಕಟಕದ ಸೈನಿಕರೆಲ್ಲ ಜಯಘೋಷವೆಬ್ಬಿಸಿದರು. ವೀರವೃಂದದ ಆ ಘೋಷವನ್ನು ಕೇಳಿ ಆ ರಾಜಸಿಂಹನು ನಗುಮೊಗದಿಂದ ಮುಂದೊತ್ತಿ ಬಂದನು. ಕಡಲದಡವನ್ನು ರಥವು ಸೇರಿದೊಡನೆ ನಟನವಾಡಿದಂತೆ ರಥದಿಂದ ನೆಲಕ್ಕೆ ಲಂಘಿಸಿದನು. ರಥದಲ್ಲಿ ಬಿಲ್ಲನ್ನಿರಿಸಿದ ಚಕ್ರಿಯು ಸಾರಥಿಯನ್ನೂ ಮನ್ನಿಸೆಂದು ಬಳಿಯಿದ್ದ ರಥಿಕನಿಗೆ ಹೇಳಿ ಮನ್ಮಥನಂತೆ ಅರಮನೆಯತ್ತ ನಡೆದನು. ದಳಪತಿಗಳೂ ಸಚಿವರೂ ರಾಜಪುತ್ರರೂ ಗಣಬದ್ಧರೂ ನಿವಾಳಿಯಿಟ್ಟು, ಎರಗುತ್ತಿರಲು ಅದನ್ನು ಸ್ವೀಕರಿಸಿ ಮನ್ನಿಸುತ್ತ ಭೂಪತಿ ನಡೆದನು. ಅವನು ಹಾದುಹೋಗುತ್ತಿರುವಾಗ ಕವಿಗಳು ಕೀರ್ತಿಸುತ್ತಿದ್ದರು, ಪಾಠಕರು ಓದುತ್ತಿದ್ದರು, ಭಟರು ಹಸ್ತವನ್ನೆತ್ತಿ ಹೊಗಳುತ್ತಿದ್ದರು. "ಪಾದಪರಾಕು" ಎಂದು

ವೇತ್ರಾಂಕರು ಹೇಳುತಿದ್ದಂತೆ ರಾಜೇಂದ್ರನು ಮುನ್ನಡೆದನು. ಅಲ್ಲಲ್ಲಿ ಕಂಡವರನ್ನು ಅಲ್ಲಲ್ಲಿ ಮನ್ನಿಸಿ ಭರತೇಶನು ಅರಮನೆಯನ್ನು ಸೇರಿದನು.

. ಅಲ್ಲಿ ರಾಣಿಯರು ಇದಿರ್ಗೊಂಡರು. ನಿವಾಳಿಯಿಟ್ಟು, ಅಚ್ಚಮಾಣಿಕದ ಆರತಿಯೆತ್ತಿ ಪ್ರಾಣೇಶನ ಅಡಿಗಳಿಗೆರಗಿದರು. ಆ ಸಂಭ್ರಮವೇ ಪರಮಕಲ್ಯಾಣದಂತಿತ್ತು. ನಾಲ್ಕು ದಿವಸ ತಮ್ಮ ಪುರುಷನನ್ನು ಅಗಲಿರುವುದೆಂದರೆ ನಾಲ್ಕು ಯುಗವೇ ಅಗಲಿದಂತೆ ಆಗುವುದು ಅವರಿಗೆ. ಬಿಲ್ಲುಬಾಣ ಬಿಟ್ಟು ಮನ್ಮಥನಂತೆ ಬಂದ ಭರತೇಶನನ್ನು ಕಂಡು, ಅವರು ಸಂತೋಷವೇರಿದರು. ಅವರೊಡನೆ ರಾಜೇಂದ್ರನು ಹೊಸದ ಆರೋಗಣೆ ಮಾಡಿದನು. ಅನಂತರ ದಿನಾಂತ್ಯದ ಜಿನಸ್ತುತಿಯನ್ನು ಮಾಡಿ ತನ್ನ ನಿವಾಸದಲ್ಲಿದ್ದುಕೊಂಡು ತನ್ನ ಆಯತಾಕ್ಷಿಯರಿಗೆ ತೋಯಧಿಗೆ ಹೋಗಿಬಂದ ಕಾರ್ಯವನ್ನು ಹೇಳುತ್ತ ಉಚಿತಲೀಲೆಯಲ್ಲಿ ಮೆರೆದನು.

೬

# ಆದಿರಾಜೋದಯ

ಭರತೇಶನು ಉದಯಕಾಲದಲ್ಲೆದ್ದು ಜಿನೇಂದ್ರ ಪೂಜೆಯನ್ನು ಮಾಡಿ ತ್ರಿದಶೇಂದ್ರ ನಂತೆ ಸಿಂಗರಿಸಿಕೊಂಡು ಹಜಾರವಟ್ಟದಲ್ಲಿ ಓಲಗವಾದನು. ರಾಜರೂ ರಾಜಪುತ್ರರೂ ಬಂದು ಕೈಕಾಣಿಕೆಯಿತ್ತು ಕೈಮುಗಿದು ಮಾಣಿಕ ಗದ್ದುಗೆಯ ಇಬ್ಬದಿಗಳಲ್ಲಿ ಕುಳಿತರು. ಹತ್ತಿರದಲ್ಲೆ ಮಂತ್ರಿಗಳು ಸೇನಾಪತಿಗಳು ಕುಳಿತಿದ್ದರು. ಬೆನ್ನಕಡೆಯಲ್ಲಿ ಗಣಬದ್ಧರಿದ್ದರು. ಸಂಗಡಿಗರೂ ಗಣಿಕೆಯರೂ ತಮ್ಮ ತಮ್ಮ ಸ್ಥಾನಗಳಲ್ಲಿದ್ದರು. ಇದರಲ್ಲಿ ಕವಿಗಮಕಿಗಳೂ ಪಾಠಕರೂ ಚಿತ್ರದ ಪದ್ಯಗಳನ್ನೋದುತ್ತಿದ್ದರು. ಬೀಸುತ್ತಿರುವ ಚಾಮರಗಳ ಸೇವೆಯಿಂದ ಭರತೇಶನು ಓಲಗದಲ್ಲಿ ಒಪ್ಪಿದನು. ಪ್ರಾತಃಕಾಲದ ರಾಗವನ್ನು ಹಾಡುವ ಆ ಹಾಡುಗಾರಿಕೆಯನ್ನು ಆಲಿಸುತ್ತ ರಾಯನು ಒರಗುವ ಮೂಡೆಯಲ್ಲಿ ಒರಗಿದ್ದನು. ಒಮ್ಮೆ ಕ್ಷತ್ರಿಯ ಪುತ್ರರನ್ನೂ ಒಮ್ಮೆ ಧಾತ್ರೀಪಾಲಕರನ್ನೂ ಒಮ್ಮೆ ತನ್ನ ಧೀರ್ಘಬಲವನ್ನೂ ನೋಡುತ್ತನೋಡುತ್ತ ಪವಿತ್ರವಾದ ಗಾನವನ್ನು ಕೇಳುತಿದ್ದನು.

ಆ ಸಂಗತಿಯನ್ನು ಒಬ್ಬೊಬ್ಬರೊಂದೊಂದು ವಿಧವಾಗಿ ಭರತೇಶನಿಗೆ ತಿಳಿಸಿದರು:– ''ಲಲಿತೆಯ ರಾಗ ಚೆನ್ನಾಗಿದೆ. ಅದರಲ್ಲಿ ಆತ್ಮಕಲೆಯೂ ಕೂಡಿದೆ. ಇದನ್ನು ನೀನು ಕಲಿತೆ. ಅಧಿನಾಥನು ಮೆಚ್ಚಬೇಕು.'' ಅನುಕೂಲನಾಯಕನ ಮಾತು.

''ಅಕ್ಷರದ ಹಾಡಿನಲ್ಲಿ ಅಕ್ಷರ ಮಸುಳದಂತೆಯೂ ಸುಸ್ವರದ ಹಾಡಿನಲ್ಲಿ ಧ್ವನಿ ಸಾಕ್ಷಿಯಾಗಿರುವಂತೆಯೂ ಲಕ್ಷಿಸಿ ಹಾಡಿದದು ಚೆನ್ನಾಗಿದೆ.'' ದಕ್ಷಿಣ ನಾಯಕನು ನುಡಿದನು.

''ಪುಟಿದ ಸಕ್ಕರೆಯನ್ನು ತನಿಹಾಲಿನಲ್ಲಿ ಸೇರಿಸಿ ಗುಟುಕಿಸಲು ಕೊಟ್ಟಂತೆ ಸಂಗೀತವಿದು.'' ಕುಟಿಲನಾಯಕನ ಮಾತು.

''ಠಾಯಿಯ ಠೀವಿ ತಾನದ ಸೋನೆ. ಗಾಯಕನದೊಂದುಗಂಭೀರವು, ಇದು ರಾಯನ ಮೆಚ್ಚಿನಂತಿದೆ.'' ಎಂದು ಶಠನಾಯಕನ ವಿವರಣೆ.

''ಅಲ್ಲಿ ರಾಗವೊಂದನ್ನೇ ಬಣ್ಣಿಸುತ್ತಾರೆ. ಇಲ್ಲಿ ಶ್ರೀ ಗುರುಹಂಸನಾಥರನ್ನು ಕೋಗಿಲೆ ಯಂತೆ ಹಾಡಿದನು.'' ಎಂದು ನಾಗರನು ಅವನೀಶನೊಡನೆ ಹೇಳಿದನು.

''ಮಲಹರಿರಾಗದಲ್ಲಿ ಆತ್ಮಕಲೆಯನ್ನು ಹಾಡಿರುವುದು ಚಟುಲಾಕ್ಷಿಯು ಚಕ್ರಿಯನ್ನು ನೋಡಿದಂತೆ ಆಯಿತು'' ಎಂದು ಸಭೆಯೇ ನಲಿವಂತೆ ವಿಟನು ಹೇಳಿದನು.

ಇದರಂತೆ ಪೀಠಮರ್ದಕನೂ, ವಿದೂಷಕನೂ ಮಾತನಾಡಿದರು. ಆ ರೀತಿಯಲ್ಲಿ ನುಡಿವ ಕೆಳೆಯರ ನುಡಿಕೇಳಿ ಅಂತರಂಗದಲ್ಲೇ ಭರತೇಶನು ಅರ್ತಿಗೊಂಡನು. ಆ ನುಡಿಗೆ ಮೆಚ್ಚಿ ಅವರವರಿಗೆ ತಕ್ಕಂತೆ ಮೆಚ್ಚುಗೆಗಳನ್ನಿತ್ತು ಮನ್ನಿಸಿದನು. ಅನಂತರ ಕಡುಸೊಗಸಾಗಿ ಹಾಡಿದವರಿಗೂ ಉಡುಗೊರೆಗಳನ್ನಿತ್ತನು.

ಭರತೇಶನು ಈ ರೀತಿಯಲ್ಲಿ ಒಂದೊಂದು ರಾಗಕ್ಕೆ ಮೆಚ್ಚುತ್ತ ಪರಮಾತ್ಮನ ಅಂದವನ್ನು ಬಗೆಯುತ್ತಿರುವಾಗ ಮಂದಾಕಿನಿಯೆಂಬ ದಾದಿಯು, ಕುಮಾರರನ್ನು ತಂದು ಅವನ ಕೈಗಿತ್ತಳು.

''ಚಂಡಿ ಮಾಡಿದನು ಸಣ್ಣರಸು—ಸಭಾ ಮಂಡಲಕ್ಕೆ ಕರೆದೊಯ್ಯಬೇಕೆಂದು ನನ್ನ ದಂಡಿಸಿದರು'' ಎಂದು ದಾದಿಯು ಕುಮಾರನನ್ನು ಅಲ್ಲಿಗೆ ಕರೆತಂದ ಕಾರಣ ಹೇಳಿದಳು.

ಆಗ ಸಭಿಕರೆಲ್ಲರೂ ಕುಮಾರನ ಚೆಲುವನ್ನು ನೋಡತೊಡಗಿದರು. ಭರತೇಶನಾದರೋ ಕುವರನನ್ನು ಬಲದ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುದ್ದಾಡಿಸುತ್ತಿದ್ದನು. ಚಿತ್ತಜರೂಪನಾಗಿರುವ ಭರತೇಶನ ತೊಡೆಯ ಮೇಲಿದ್ದ ಕುಮಾರನು ಮುತ್ತಿನ ಮಣಿಯಲ್ಲಿ ಹುಟ್ಟಿದ ಕಟ್ಟಾಣಿ ಮುತ್ತಿನ ಮಣಿಯೋ ಎಂಬಂತಿದ್ದನು. ರಾಜನಂದನನು ತಂದೆಯ ರೂಪು, ಚೆಲುವು, ನೋಟಗಳಿಂದ ತಂದೆಯ ಅಚ್ಚೊತ್ತಿನಂತಿದ್ದನು. ಭರತ ರಾಜೇಂದ್ರನ ಕುವರನು ಅರಳೆಲೆ ಮಾಗಾಯಿ ಕುಂಡಲಗಳನ್ನು, ಹಸ್ತದಮುರಿ, ಮಣಿಮಯ ಉಡಿದಾರವನ್ನೂ, ಬೆರಳುಂಗುರ ಗೆಜ್ಜೆ ಅಂದುಗೆಗಳನ್ನೂ, ಧರಿಸಿ ಹೊಳೆಯುತ್ತಿದ್ದನು.

ಭರತೇಶನು ತೊಡೆಯ ಮೇಲಿರುವ ಮಗನನ್ನು ನೋಡಿ ತಲೆಯನ್ನು ನೇವರಿಸುತ್ತಾ ಒಡನೆತ್ತಿಕೊಂಡು ಎದೆತುಂಬಿ ತಬ್ಬುವನು. ತಕ್ಕಿಸಿಕೊಂಡು ತೂಗಾಡುವನು.

''ಚೆಲ್ವಯ್ಯ, ಚೆನ್ನಾನೆ,'' ಎಂದು ಮೈಯೆಲ್ಲಾ ಗುಡುಗುಟ್ಟುವಂತೆ ತಕ್ಕಿಸಿಕೊಳ್ಳುವನು. ಮಗುವು ತಂದೆಯ ಕೊರಳನ್ನು ಅಪ್ಪುವನು; ಕಿರುಬೆರಳಿನಿಂದ ಮಣಿಗಳನ್ನು ಎಣಿಸುವನು. ಒಂದೆಂಟು ಹತ್ತೆರಡೆಂದು ಮಗನು ಎಣಿಸುವುದನ್ನು ನೋಡಿ ತಂದೆಯು ಸುಖಿಪಡುವನು.

''ಆದಿತೀರ್ಥಂಕರ, ಎನ್ನ ಕೀರ್ತಿಯೇ'' ಎಂದು ರಾಜನೋದಿಸುವನು. ಆ ಬಾಲನದನ್ನು ಅದಿಂಕರನೆನ್ನುವನು. ಅದನ್ನು ಕೇಳಿ ಎಲ್ಲರೂ ವಿನೋದಗೊಳ್ಳುವರು.

''ಅಣ್ಣ ಚಿದಂಬರ ಪುರುಷ'' ಎಂದು ರಾಜನು ಕಲಿಸಿದರೆ ಚಿಣ್ಣನು ''ಚಿಂಬರ ಪೂಸ'' ಎಂದು ರಾಜನನ್ನು ನಗಿಸುವನು. ''ಗುರುನಿರಂಜನ ಸಿದ್ಧ'' ಯೆಂದು ಓದಿಸಿದರೆ ''ನಿಂಜಸಿದ್ದ''ಯೆಂದು ಕುಮಾರನು ಓದುವನು.

ರಾಜನು ''ನೋಡಣ್ಣ ದೊರೆಗಳ'' ಎಂದು ದೊರೆಗಳನ್ನು ತೋರಿಸಿದನು. ಶಿಶುವು ಎಡಗಾಲನ್ನು ನೀಡಿ ಅವರನ್ನು ತೋರುವುದು. ''ಪಾದದ ಊಳಿಗದವರೆಂದು ನಿಮ್ಮನ್ನೆಲ್ಲಾ ಪಾದಪದ್ಮದಿಂದ ಸೂಚಿಸಿದನು. ಆದಿಚಕ್ರಿಯ ಸುತಗಿದು ಸಹಜವವು.'' ಎಂದು ದೊಡ್ಡ ದೊರೆಗಳು ಮೆಚ್ಚಿದರು. ಕುಮಾರನು ಏಕಾಂತ ಗೈವಂತೆ ರಾಜನ ಕಿವಿಗೆ ಮೊಗವನಿಟ್ಟಾಗ ಮಂತ್ರಿಯದನ್ನು ಕಂಡು ನಕ್ಕನು. ''ನಮಗಿನ್ನು ಪ್ರಧಾನಿಕೆಯು ಅಗತ್ಯವಿಲ್ಲ'' ಎಂದನು.

''ತಂದೆ ದೊರೆ; ಮಗ ಮಂತ್ರಿಯಾದನು. ಇನ್ನು ನೀವು ಆಲೋಚನೆ ಮಾಡುವುದು ಬೇಡ'' ಎಂದು ಚಕ್ರೇಶನು ಆನಂದಿಸುವಂತೆ ಎಲ್ಲರೂ ಹೇಳುವರು.

ಜಾಣರಾದ ರಾಜರೆಲ್ಲರೂ ಆಲೋಚಿಸಿ ಶಿಶುವಿಗೆ ಕಾಣಿಕೆಯಿತ್ತರು, ಆ ಮೂಲಕ ಇವನು ನಮ್ಮ ಪ್ರಾಣ ರಕ್ಷಕನೆಂದು ಒಪ್ಪಿಕೊಂಡರು. ತರಳನಿಗೆ ಕೈಗಾಣಿಕೆ ಬೇಡವೆಂದು ಚಕ್ರಿಯು ಹೇಳಿದರೂ ಅವರು ಬೇಕೆಂದೆ ಬೇಡಿಕೊಂಡರು. ''ಇರಲಿ ಸ್ವಾಮಿ. ನಮ್ಮ ಸೇವೆಯಿಷ್ಟು'' ಎಂದವರು ಹರುಷದಿಂದ ಕಾಣಿಕೆಗೊಟ್ಟರು. ಅನಂತರ ಅರಸು ಮಕ್ಕಳೂ ಕಾಣಿಕೆಯಿತ್ತರು. ದೊರೆಯ ಮುಂದೆ ಚಿನ್ನದೊಂದು ರಾಶಿಯಾಯಿತು. ಹೊ. ಭಾರತರಾಜೇಂದ್ರನ ಸಿರಿಯೆ!

''ನಿನಗೆ ಕಾಣಿಕೆ ಕೊಟ್ಟವರನ್ನು ಕಳುಹಣ್ಣ'' ಎಂದು ಚಕ್ರಿಯು ಸೂಚಿಸಿದಾಗ ಶಿಶುವು ತಲೆದೂಗಿ ಕೈಯಾಡಿಸಿದನು. ಭರತೇಶಸುತಗಿದು ಸಹಜ. ''ಅಣ್ಣಾ, ಹಾಗಲ್ಲ . ವೀಳೆಯವನ್ನು ಕೊಟ್ಟು ಬೀಳ್ಕೊಡಬೇಕು.'' ಎಂದಾಗ ಮಗುವು ಎಲೆಗಳನ್ನಾಯ್ದು ಅವರ ಕಡೆಗೆಸೆಯಿತು. ''ಅಣ್ಣ, ಈ ರಾಶಿ ಹೊನ್ನನ್ನು ಯಾರಿಗೆ ಕೊಡುವ'' ಎಂದು ಭರತೇಶನು ಸುತನನ್ನೇ ಕೇಳಿದರೆ ಬಳಿಯಲ್ಲೇ ನಿಂತಿದ್ದ ಸೇವಕರನ್ನು ಮಗು ತೋರಿಸಿತು. ಭರತೇಶನಿಗೆ ವಿಸ್ಮಯವಾಯಿತು.

''ಕಲ್ಪವೃಕ್ಷದ ಸಸಿ ಕಾಡು ಮರವಾದೀತೆ? ಬಲ್ಪಿನ ಒಡೆಯ. ನಿನ್ನ ಕುಮಾರನು ಅಲ್ಪ ಗುಣಗಳನ್ನು ಕೈಹಿಡಿಯುವನೆ? ಬೀಜಕ್ಕೆ ಬಿಡುವುದನ್ನು ಹೀಚಿನಲ್ಲೇ ತಿಳಿ ಎಂಬುದು ಈ ಜಗದಲ್ಲಿರುವ ಗಾದೆ. ಅದೀಗ ನಿನ್ನ ಅಣುಗನಲ್ಲಿ ತೋರಿತು. ಈತನೆ ಚಾಗಿ.'' ಎಂದು ಬುಧರು ರಾಜಾಗ್ರಣಿಯೊಡನೆಂದರು.

ಭರತೇಶನು ಬುಧರಿಗೆ, ಸೇವಕರಿಗೆ, ಹೊನ್ನ ಉಡುಗೊರೆಯಿತ್ತು ವಾಙ್ಮಧುರ ಗೋಷ್ಠಿಯಲ್ಲಿ ಮೆರೆದನು.

ಭರತೇಶನು ವಾಙ್ಮಧುರಗೋಷ್ಠಿಯಲ್ಲಿ ಒಪ್ಪುತ್ತಿರುವಾಗ ದಿಕ್ಕುಗಳೇ ಘರ್ಜಿಸಿದಂತೆ ವಾದ್ಯ ಘೋಷದೊಡನೆ ಬರುತ್ತಿರುವ ಮಾಗಧನ ಬರವು ತೋರಿತು. ಗಗನದಲ್ಲಿ ವಿಮಾನಪತಾಕೆಗಳು ತೋರಿದುವು. ವ್ಯಂತರರ ಸೇನೆಯೂ ತೋರಿತು. ಸಮುದ್ರವನ್ನು ಮುಟ್ಟದೇ ಬರುತ್ತಿದೆ. ಚಕ್ರೇಶನ ಸೇನೆ ಇದನ್ನು ನೋಡಿತು.

ಭರತೇಶನು ಮಂದಾಕಿನಿಯನ್ನು ಕರೆದು ಕುವರನನ್ನು ಕೊಟ್ಟು ಅವಳನ್ನು ಮಂದಿರಕ್ಕೆ ಬೀಳ್ಕೊಟ್ಟನು. ಅನಂತರ ಮಂದರದಂತೆ ಓಲಗದಲ್ಲಿ ಒಪ್ಪಿದನು. ಮಂದಿಯೆಲ್ಲಾ ಗಮಕದಲ್ಲೇ ಇದ್ದರು.

ಚಕ್ರಿಯ ಸೇನೆಯನ್ನು ಕಂಡು ಮಾಗಧನ ಪರಾಕ್ರಮ ಜಜ್ಜರವಾಯಿತು. ಅವನು ಇವನೊಂದಿಗೆ ವಕ್ರವು ಸಲ್ಲದೆಂದು ಮನಸ್ಸಿನಲ್ಲೇ ಅನುಕ್ರಮಿಸುತ್ತ ಬರುತಿದ್ದನು. ಕಡಲ ತಡಿಯಲ್ಲೇ ವಿಮಾನದಿಂದಿಳಿದು ಮಾಗಧನು ಕಾಲ್ನಡೆಯಲ್ಲೇ ಬರುತ್ತಿದ್ದನು. ಅಷ್ಟರಲ್ಲಿ ಕೆಡುಕನೊಬ್ಬನು ನೋವೊಂದು ಹಣ್ಣಾಗುವಂತೆ ಮಾಡಿದನು. ಅವನು ಮಾಗಧನ ನಾಡವನು. ಅವನು ಚಕ್ರಿಯ ಸೇವಕನೊಬ್ಬನನ್ನು ಕರೆದು ಮಾಗಧನು ಚಕ್ರಿಯನ್ನು

ಜರೆದುದನ್ನು ಅವನ ಕಿವಿಯಲ್ಲಿ ತುಂಬಿದನು. ಅವನು ಕೋಪಗೊಂಡು ಚಕ್ರಿಯೆಡೆಗೆ ಬಂದು ಎಲ್ಲವನ್ನೂ ಒಪ್ಪಿಸಿ ಜಾರಿದನು. ಮಾಗಧನು ಅತಿಕೋಪಿಯೆಂಬುದನ್ನು ಭರತೇಶನು ಮೊದಲೆ ಕೇಳಿ ತಿಳಿದಿದ್ದನು. ಆದ್ದರಿಂದ ಇದು ದಿಟವಿರಬಹುದೆಂದು ಮನದಲ್ಲೆ ಕೆರಳಿ ಕೋಪದಲ್ಲಿದ್ದನು.

ಮಾಗಧನು ಛತ್ರ ಚಾಮರಾದಿ ಚಿಹ್ನೆಗಳನ್ನು ಬಿಟ್ಟು ಕ್ಷಮೆಯ ವಸ್ತ್ರಗಳನ್ನು ಧರಿಸಿ ಭರತೇಶನ ಮಂತ್ರಿಗಳ ನಿಯಮದಂತೆ ಬರುತಿದ್ದನು. ರಾಹು ಮುಖದ, ದೊಡ್ಡ ಕಣ್ಣುಗಳ, ದೀರ್ಘದೇಹದ, ಡೊಳ್ಳು ಹೊಟ್ಟೆಯ ಕರಿಕನಾಗಿರುವ ಸಾಹಸಿ ಮಾಗಧನು ಮಣಿಮಯ ಆಭರಣದ ಸೇನೆಯೊಂದಿಗೆ ಬರುತಿದ್ದನು. ಬಳಿಗೆ ಬಂದು ಸರ್ವರನ್ನೂ ಹೊರಗೇ ನಿಲ್ಲಿಸಿ ಮಾಗಧಾಮರನು ತನ್ನ ಮಂತ್ರಿಯೊಂದಿಗೆ ಕಪ್ಪಕಾಣಿಕೆಗಳನ್ನು ಹಿಡಿದುಕೊಂಡು ಒಳಗೆ ಹೋದನು. ಸೇತುವೆಗಟ್ಟಿದಂತೆ ನಿಂತಿರುವ ಭರತೇಶನ ಮಾರ್ಬಲವನ್ನು ಕಂಡು ಮಾಗಧನು ಎದೆಯಲ್ಲೇ ಅಳುಕಿ ಮುಂದಡಿಯಿಡುತ್ತಾ ಬಂದನು. ಹಾಗೆ ಬಂದವನೇ ಕುಲಗಿರಿಗಳ ಮಧ್ಯದಲ್ಲೊಪ್ಪುವ ಮೇರುವಿನಂತೆ ದೇಶಾಧಿಪತಿಗಳ ಮಧ್ಯದಲ್ಲಿ ಮಣಿಮಯ ಸಿಂಹಾಸನದಲ್ಲಿ ಒಪ್ಪುತ್ತಿರುವ ಭರತೇಶನನ್ನು ಕಂಡನು. ನವರತ್ನ ಕಿರೀಟವನ್ನು ಧರಿಸಿದ ಅಂಗಪ್ರಭೆಯಿಂದ ರಾರಾಜಿಸುತ್ತಿರುವ ಮತ್ತು ಎರಡು ಬದಿಗಳಲ್ಲೂ ಮಹಾಚಾಮರಗಳು ಒಪ್ಪುತ್ತಿರುವ ವೈಭವವನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಗಂಡು ಗಂಡಿಗೆ ಮೋಹಿಸುವಂತಿರುವ ಭರತೇಶನ ಸೌಂದರ್ಯವನ್ನು ದೂರದಿಂದ ನೋಡಿದ ಮಾತ್ರಕ್ಕೆ ಮಾಗಧನ ಎದೆ ಸೋತು ಹೋಯಿತು. ಇನ್ನು ಹೆಂಗಸರ ಎದೆ ಸೋಲದಿರುವುದೇ?

ಅಲ್ಲಲ್ಲಿ ನಿಲ್ಲುತ್ತ ಕುಗ್ಗುತ್ತ ಬರುತ್ತಿರುವ ಮಾಗಧನನ್ನು ಭೂಪತಿಯು ದಳ್ಳಿಸುವ ಕೋಪದಿಂದ ನೋಡಿ ಕಠಿಣವಾಗಿ ಮಾತನಾಡಿದನು.

''ಇವನೊ ಮಾಗಧನು?'' ಭರತೇಶನು ಮಂತ್ರಿಗಳನ್ನು ಕೇಳಿದನು.

''ಇವನೇ ಸ್ವಾಮಿ ಮಾಗಧನು; ದೊಡ್ಡವನು.'' ಎಂದರು ಮಂತ್ರಿಗಳು.

''ಎಲವೋ ಮಾಗಧ. ನಿನ್ನೆ ಹಿರಿದಾಗಿ ಪಂಥವನ್ನೆ ಕಲೆದೆ. ಜಲಧಿಯಲ್ಲಿರುವೆನೆಂಬ ಸೊಕ್ಕೆ ನಿನಗೆ?''

ಮಾಗಧನಾದರೂ ಗಡಗಡನೆ ನಡುಗಿದನು. ಕೈಗಳಿಂದ ಬಾಯನ್ನು ಬಡಿದುಕೊಂಡು ''ತಪ್ಪು; ತಪ್ಪು, ನನ್ನನ್ನು ರಕ್ಷಿಸು ಒಡೆಯ.'' ಎಂದು ಅಡ್ಡಬಿದ್ದನು.

ಚಕ್ರಿಯು ನಕ್ಕನು. ''ಏಳು ಏಳು, ಅಂಜದಿರು.'' ಎಂದು ಅಭಯವಿತ್ತನು. ಮಾಗಧನು ಎದ್ದು ನಿಂತನು.

''ಮೂರು ಲೋಕಗಳ ಒಡೆಯನ ಮಗನಾದ ನಿನ್ನನ್ನು ಕಂಡಾಗ ಯಾರ ಸೊಕ್ಕು ಅಡಗದು ಸ್ವಾಮಿ? ಬಾವಿಯೊಳಗೆ ಕಪ್ಪೆಗಳಿರುವವಂತೆ ನಾವೊಂದು ದ್ವೀಪದಲ್ಲಿದ್ದೆವು. ದೇವ, ನಿನ್ನ ತೇಜಸ್ಸಿನ ಏಳಿಗೆಯನ್ನು ಬಲ್ಲೆವೆ? ನಾವು ಗಾವಿಲರು. ಕಾಮವನ್ನು ಜಯಿಸಿದ ರೂಪವುಳ್ಳ ರಾಯನೆ, ನಿನ್ನನು ಓಲೈಸುವ ಭಾಗ್ಯ ನೋಂಪುಗೈದವರಿಗೆ ಮಾತ್ರ ಬರುವುದು. ಸಾಗರವನ್ನು ತೋಡು ಜರೆದರೆ, ಕಾಗೆ ಹಂಸವನ್ನು ನಿಂದಿಸಿದರೆ, ಮಾಗಧನು

ಭರತಚಕ್ರೇಶನನ್ನು ಹಳಿದರೆ ಯಾರಿಗೆ ಕೊರತೆ? ಈ ಚೆಲುವಿನ, ಈ ಭೂಚಕ್ರದೊಡೆಯನ ಮುಂದೆ ನಮಗೊಂದು ಪೇಚಾಟವೇ? ನಮ್ಮದೇನು ರಾಜಿಮೋಡಿಯೆ? ಸುಡು ಅದನ್ನು. ಜಾಣರದಕ್ಕೆ ನಾಚಬೇಡವೆ? ನಿನ್ನಂತೆ ಸೊಬಗುಳ್ಳ ಅರಸಾಗಿ ಬಾಳುವುದು. ನಿನ್ನಂತೆ ಸೊಬಗು ಕೊಡದಿದರೆ ನಿನ್ನನ್ನು ಓಲೈಸಿ ಬದುಕುವುದು–ಸುಖವು. ಉಳಿದುದೆಲ್ಲ ಬಣ್ಣದ ಅರಸುತನ. ಯೋಗಭೋಗದಲ್ಲಿದ್ದು ಮುಕ್ತನಾಗುವ ಮೋಕ್ಷಭಾಗಿಗೆ ಎಣೆ ಯಾರು?''

—ಎಂದು ಮಾಗಧೇಂದ್ರನು ಚಕ್ರವರ್ತಿಯ ವಂದಿಮಾಗಧರಂತೆ ಅವನನ್ನು ಕೀರ್ತಿಸಿದನು.

ಭೂಮಿಪಾಲರೂ ರಾಜಪುತ್ರರೂ ಅದಕ್ಕೆ ಮೆಚ್ಚಿದರು. ''ಸ್ವಾಮಿಗೆ ಇರುವುದನ್ನೇ ಕೀರ್ತಿಸಿದೆ. ನೀನು ಸ್ವಾಮಿಯ ಹಿತವನು'' ಎಂದು ಮಾಗಧೇಂದ್ರನನ್ನು ಹೊಗಳಿದರು. ಆ ಮೇಲೆ ಚಕ್ರೇಶ್ವರನು ಅವನಿಗೆ ಆಸನವನ್ನು ಕೊಡಿಸಿದನು. ''ನೀನು ಕಷ್ಟನಲ್ಲ : ಉತ್ತಮನಾಗಿದ್ದೀಯೇ, ಕುಳಿತಿರು.'' ಎಂದಿಷ್ಟು ವಾಕ್ಯಗಳನ್ನು ಒಲವಿಂದಾಡಿದನು ಭರತೇಶ. ಮಾಗಧನು ಅದರಿಂದ ಸಂತಸಗೊಂಡು ಚಕ್ರಿಯ ಸುವರ್ಣಚರಣಗಳ ಮೇಲೆ ಜಾಳಿಗೆಯನ್ನೊಡೆದು ಕಾಣಿಕೆಗಳನ್ನು ಸುರಿದನು. ತನ್ನ ಸಚಿವನ ಕೈಯಲ್ಲಿರುವ ಮಹಾರತ್ನ ಖಚಿತದ ಭೂಷಣಗಳನ್ನು ಕಪ್ಪವೆಂದು ಚಕ್ರಿಯ ಮುಂದಿರಿಸಿ ತನ್ನ ಸಚಿವ ಸಹಿತ ವಂದಿಸಿದನು. ಸಭೆಯವರೆಲ್ಲ ''ಲೇಸು, ಲೇಸು'' ಎನ್ನುತ್ತಿರುವಾಗ ಅವನು ಆಸನವನ್ನೇರಿ ಕುಳಿತನು.

ಆಗ ಭರತೇಶನು ಬಳಿಯಲ್ಲಿದ್ದ ಬುದ್ಧಿಸಾಗರ ಮಂತ್ರಿಯನ್ನು ನೋಡಲು–

''ಮಾಗಧಾಮರನು ಸುಜನನು ಸ್ವಾಮಿ. ವ್ಯಂತರ ಭಾಗದಲ್ಲಿ ಇವನು ಶ್ರೇಷ್ಠನು. ದೇವರ ಸೇವೆಗೆ ಬೇಗನೆ ಒದಗುವನು. ದೇಶಾಧಿಪತಿಗಳ ಸಂಸರ್ಗದಲ್ಲಿ ಜಿನೇಶ್ವರನ ಸುತನನ್ನು ಓಲೈಸುವ ಕೌಶಲವನ್ನು ಪಡೆದವನೇ ಕೃತಾರ್ಥನು.'' ಎಂದು ಬುದ್ಧಿಸಾಗರನು ನುಡಿದನು.

''ಬುದ್ಧಿಸಾಗರನೆ, ಲೇಸನ್ನೇ ಆಡಿದೆ. ನಿನ್ನ ಶುದ್ಧ ಮನಸ್ಸನ್ನು ನಾನು ಕೇಳಿರುವೆನು. ನನ್ನನ್ನೀಗ ಉದ್ಧರಿಸಿದೆ.'' ಎಂದು ಮಾಗಧನು ಚಿತ್ತಶುದ್ಧಿಯಿಂದ ಹೇಳಿದನು.

''ಇಂದು ಮಾಗಧಾಮರನು ತನ್ನ ಊರಿಗೆ ಹೋಗಲಿ. ಆ ಮೇಲೆ ಮುಂದಣ ಪಯಣಕ್ಕೆ ಬರಲಿ, ಅವನನ್ನು ಚಂದದಿಂದ ಬೀಳ್ಕೊಡು'' ಎಂದು ಮಂತ್ರಿಗೆ ಭರತೇಶನು ತಿಳಿಸಿದನು. ಆ ಮೇಲೆ ಮಾಗಧನನ್ನು ಕರೆದು ಧಾರಿಣಿಯಲ್ಲೇ ಉತ್ತಮವಾದ ವಸ್ತ್ರಗಳನ್ನು ಅವನಿಗೆ ಉಡುಗೊರೆಯಿತ್ತನು. ಮಾಗಧನು ಕಪ್ಪವಿತ್ತ ಹಾರಕುಂಡಲ ಕಡಗಗಳಿಗಿಂತಲೂ ಉತ್ತಮವಾದ ಭೂಷಣಗಳನ್ನು ಭರತೇಶನಿತ್ತನು. ಭರತೇಶನಿಗೆ ಅಡಿಗೆರಗಿಸಿಕೊಳ್ಳುವ ತೇಜಸ್ಸಲ್ಲದೆ ಒಡವೆಗಳ ಆಸೆಯಿಲ್ಲ. ಒಡನಿದ್ದ ಭೂಪತಿಗಳೆಲ್ಲ ತಲೆದೂಗುವಂತಾಗಿತ್ತು ಭರತೇಶನಿತ್ತ ಉಡುಗೊರೆ. ''ನಿನ್ನ ಮಂತ್ರಿಗಳೂ ಒಳ್ಳೆಯವರೆಂದು ಕೇಳಿರುವೆನು'' ಎಂದವನ ಕರೆದು ಆ ಮಂತ್ರಿಗೂ ಯೋಗ್ಯ ಉಡುಗೊರೆಯಿತ್ತನು. ''ಮಂದಿರಕ್ಕೆ ಹೋಗಿಬರುವವರೆಗೆ ನನ್ನ ಅನಂತರದವನಾದ ಈ ಧ್ರುವಗತಿ ಇಲ್ಲಿರಲಿ.'' ಎಂದು

ಧ್ರುವಗತಿಯನ್ನು ಕರೆಯಿಸಿ ಚಕ್ರಿಯ ಕಾಲಿಗೆ ಒಪ್ಪಿಸಿದನು. ಮಂತ್ರಿಸಹಿತ ಕಾಲಿಗೆರಗಿ ಮಾಗಧನು ಅತ್ತ ತೆರಳಿದನು. ಸಭೆಗೆಲ್ಲ ಪರಮಸಂತೋಷವಾಯಿತು.

ಜಿನ !ಜಿನ ! ಏನೆನ್ನಲಿ ! ಆಷ್ಟರಲ್ಲಿ ಮಾನಿನಿಯೊಬ್ಬಳು ಅರಮನೆಯಿಂದ ನಗುತ್ತ ಓಡಿಬಂದು ರಾಯನನಿಗೆ ಕೈಮುಗಿದು ಬಿನ್ನಿಸಿವಿದಳು.

''ದೇವ, ಚಿತ್ತೈಸು ದೊಡ್ಡ ಒಸಗೆಯನ್ನು. ನಿಮಗೆ ಕುಮಾರನು ಉತ್ಪತ್ತಿಯಾದನು. ಉತ್ತಮೋತ್ತಮನು.''

ಆ ಒಸಗೆಯನ್ನು ಕೇಳಿದೊಡನೆ ಭರತೇಶನು ಅವಳಿಗೆ ಮುತ್ತಿನಹಾರವನ್ನೇ ಮೆಚ್ಚುಗೊಟ್ಟನು. ಮತ್ತವಳ ಒತ್ತಿಗೆ ಕರೆದು ಕುಮಾರನನ್ನು ಹಡೆದವರಾರೆಂದು ಕೇಳಿದನು. ಕುಸುಮಾಜಿಯರು ಸುಕುಮಾರನನ್ನು ಹಡೆದರೆಂದು ಅವಳು ಹೇಳಿದಳು. ಹತ್ತಿರವಿದ್ದವರೆಲ್ಲ ಇದನ್ನು ಕೇಳಿ ಸಂತೋಷಪಟ್ಟರು.

ಚಕ್ರಿಯ ಸೇನೆಯಲ್ಲಿ ಬಾವುಟಗಳೆದ್ದು ಹಾರಿದುವು. ಎಲ್ಲೆಲ್ಲೂ ತೋರಣಗಳು ರಂಜಿಸಿದುವು. ಚಕ್ರಿಗೆ ಸುಕುಮಾರನುದಯಿಸಿದ ವಾರ್ತೆ ದಾರಿಯಲ್ಲಿ ತುಂಬಿತು. ಸಭೆಯಲ್ಲಿದ್ದವರನ್ನು ಉಚಿತವಾಗಿ ಬೀಳ್ಕೊಟ್ಟು ತಾನು ಹೆರಿಗೆಯ ಮನೆಯನ್ನು ಹೊಕ್ಕು ಮುದ್ದಿನ ಮಗನನ್ನು ನೋಡಿದನು.

ನಸುನಾಚಿಗೆಯಿಂದ ಪತಿಯನ್ನು ನೋಡಿ ತಲೆಬಾಗಿ ಕುಳಿತಿದ್ದ ಕುಸುಮಾಜಿಯ ಬಳಿಯಲ್ಲಿರುವ ಹಸುಳೆಯನ್ನು ನೋಡಿ. ''ಸಿದ್ಧೋರಕ್ಷತ'' ಎಂದು ಹರಸಿ ಸಂತೋಷದಿಂದ ಹಿಂತಿರುಗಿದನು. ಆಗಲೆ ಅರಸಿಯರೆಲ್ಲರೂ ಬಂದು ಪುರುಷನ ಪಾದಕಮಲಗಳಿಗೆರಗಿ ವರಸುತನಾದನೆಂದು ನುಡಿಯುತ್ತಾ ಸಂತೋಷಗೊಂಡರು. ಪ್ರಧಾನಿಯು ನಾಡಿನಲ್ಲೆಲ್ಲ ದಾನಾಭಿಷೇಕವನ್ನು ಮಾಡಿಸಿದನು, ಸೇನಾಪತಿಯು ತನ್ನ ಕಟಕದಲ್ಲೂ ಅದೇ ರೀತಿ ಮಾಡಿಸಿದನು. ಮಯನು ನಿರ್ಮಿಸಿದ ಬಸದಿಗಳಲ್ಲೂ ಪಾಳೆಯದಲ್ಲೂ ಅರ್ಚನೆಯು ವಿಜೃಂಭಣೆಯಿಂದ ಜರುಗಿತು.

ಆ ದಿನದಲ್ಲಿ ಭರತೇಶನು ಸುಕುಮಾರನಿಗೆ ಜಾತಕರ್ಮವನ್ನು ಮಾಡಿಸಿ ದ್ವಾದಶಿ ದಿನದಲ್ಲಿ ಆದಿಜಿನನ ಹೆಸರೆಂದು ಆದಿರಾಜನೆಂಬ ನಾಮವನ್ನಿಟ್ಟನು, ನಾಮಕರ್ಮದ ದಿನದಲ್ಲಿ ಮಾಗಧನು ತನ್ನ ಸೀಮೆಯ ಸಂಪತ್ತನ್ನು ಕೂಡಿಕೊಂಡು ಉಲುಪೆಗಳ ಸ್ತೋಮದಿಂದ ಬಂದು ಭರತೇಶನನ್ನು ಕಂಡನು.

ಅದನ್ನು ಕಂಡು ಭರತೇಶನೂ ಸಂತೋಷಗೊಂಡನು. ''ಮುಂದಣ ಪಯಣಕ್ಕೆ ಬರುವನೆಂದು ಹೋಗಿ ಇಂದಿಲ್ಲಿಗೆ ಒದಗಿಬಂದನು. ನಮಗೆ ಎಂದೆಂದಿಗೂ ಮಾಗಧನೆ ಮಹಾಹಿತನು.'' ಎಂದೂ ನುಡಿದನು.

''ತಮ್ಮಿಂದ ಕಳುಹಿಸಿಕೊಂಡ ನಾನು ಕಡಲೊತ್ತಿಗೆ ಮುಟ್ಟುವಾಗಲೇ ಕುಮಾರೋದಯ ಉತ್ಸವದ ವಾರ್ತೆಯನ್ನು ಕೇಳಿದೆ. ಕೂಡಲೆ ಉಲುಪೆ ಸಹಿತ ಬರಬೇಕೆಂದು ಊರಿಗೆ ಹೋಗಿ ಈಗ ಮರಳಿಬಂದೆನು''.....ಎಂದು ಮಾಗಧನು ಬಿನ್ನಹ ಮಾಡಿದನು.

''ನಿನಗೆ ಗಟ್ಟಿಯಾಗಿ ಮಾತಾಡಿದೆ. ಅದನ್ನು ಮರೆತುಬಿಡು'' ಎಂದು ಭರತೇಶನವನನ್ನು ಮುಟ್ಟಿ ಲೇಸನ್ನಾಡಿದನು. ''ತಾವು ತಟ್ಟಿ ಸದ್ಬುದ್ಧಿಗಲಿಸಿದಿರಿ ನನ್ನೊಡೆಯ'' ಎಂದು ಮಾಗಧನು ಅಟ್ಟಹಾಸದಿಂದ ನಮಸ್ಕರಿಸಿದನು.

''ನಿನ್ನ ನಾಳಿನವನನ್ನು ಕರೆದುಕೊಂಡು ಹೋಗು. ಸಾಗರದಲ್ಲಿ ನೆಮ್ಮದಿಯಿಂದಿರು. ಆಗಲೆ ನನ್ನ ಓಲಗವು ಸಂದಿತು.'' ಎಂದು ಭರತೇಶನು ಮಾಗಧನೊಡನೆ ನುಡಿದನು.

''ಸುಡು, ಸುಡು, ನಾಡಿನಲ್ಲೇನುಂಟು ಸಿರಿ? ನಿನ್ನ ಪಡೆಯಲ್ಲಿರುವುದೇ ನನಗೊಂದು ಭಾಗ್ಯ. ಇನ್ನು ನಿನ್ನ ಅಡಿಗಳನ್ನು ಬಿಡೆನು.'' ಎಂದವನು ದೃಢವಾಗಿ ಹೇಳಿದನು. ಭರತೇಶನಂತಹ ಸೊಬಗನನ್ನು ಕಂಡಮೇಲೆ ಬಿಡುವವರಾರು?

ಹುಟ್ಟಿದ ಶಿಶುವಿಷ್ಟು ಬಲಿಯಬೇಕೆಂದು ಭರತೇಶನು ಆರು ತಿಂಗಳು ಅಲ್ಲಿಯೇ ಬೀಡುಬಿಟ್ಟಿದ್ದನು — ಹೊಸತೊಂದು ಪಟ್ಟಣದಲ್ಲಿರುವಂತೆ. ಮೇದಿನೀಪತಿಗಳನ್ನು ಕೂಡಿಕೊಂಡು ಕಾದುವ ಕಟ್ಟು ನೆನಪಿಲ್ಲದೆ ಓದುವ. ಹಾಡುವ, ಲೀಲೆಯಲ್ಲಿ ಭರತೇಶನು ಮೆರೆದನು.

## ೭

# ವರತನು ಸಾಧ್ಯ

ಆರು ತಿಂಗಳ ಮೇಲೆ ಅಲ್ಲಿಂದ ದಂಡೆದ್ದುದು. ಭೇರಿ ಬೇರಿಟ್ಟು ಸೂಳೈಸಿತು. ಪಡೆಯ ಪತಾಕೆ ಟಕ್ಕೆಗಳು ಬಾಸಿಗೇರಿ ತೋರಿದುವು.

ಭರತೇಶನು ಮಾಗಧನ ಮೂಡಣ ಕಡಲನ್ನು ಗೆದ್ದು ಸಕಲ ಸೇನೆಯೊಂದಿಗೆ ಕಡಲ ದಂಡೆಯಲ್ಲೇ ತೆಂಕು ಮುಖವಾಗಿ ಸಾಗಿದನು. ಒಂದು ರಥದಲ್ಲಿ ಕಿರಿಯಕುವರನ ತೊಟ್ಟಿಲು, ಇನ್ನೊಂದು ರಥದಲ್ಲಿ ದೊಡ್ಡ ಅಣುಗನು ಮುಂದಾಕಿನಿಯ ತೊಡೆಯನ್ನೇರಿದ್ದನು. ಆವೆರಡು ರಥಗಳ ಹಿಂದಿನಿಂದ ಅರ್ಕಕೀರ್ತಿಯ ಫೌಜು ಸಾಗುತಿತ್ತು, ಅನುಕೂಲವಾದಲ್ಲಿ ದಂಡು ತಂಗುತಿತ್ತು ಭರತೇಶನು ಪಲ್ಲಕಿಯೇರಿ ಒಂದು ಪಯಣ ಮಾಡಿದರೆ ದಂಡಿಗೆಯಲ್ಲಿ ಇನ್ನೊಂದು ಪಯಣ ಮಾಡುತ್ತಿದ್ದನು. ಚವರದ ಹೊಂಬಾಳವನ್ನೇರಿ ಒಂದು ಪಯಣ ಸಾಗಿದರೆ ದಿವಿಜರ ವಿಮಾನದಂತೆಸೆವ ಪುಷ್ಪಕವನ್ನೇರಿ ಇನ್ನೊಂದು ಪಯಣ ಸಾಗುವುದು. ಆನೆಯ ಮೇಲೊಮ್ಮೆ, ರಥದಲ್ಲೊಮ್ಮೆ, ಕುದುರೆಯ ಮೇಲೊಮ್ಮೆ ಭರತೇಶನು ವಿಲಾಸದಿಂದ ಪಯಣವೆಸಗುತಿದ್ದನು. ಹೀಗೆ ಸಾಗುತ್ತಿರುವಾಗ ಮಾಗಿಯ ಬೇಸಗೆ ಕಳೆಯಿತು. ಮಳೆಗಾಲವು ಕಳೆಯಿತು. ಅಷ್ಟರಲ್ಲಿ ಪಡೆಯು ತೆಂಕಣ ಸಾಗರದ ತಡಿಯನ್ನು ಸೇರಿತು, ಅಲ್ಲಿಯೆ ಭರತೇಶನು ಬೀಡುಬಿಟ್ಟನು.

ದಕ್ಷಿಣ ಸಾಗರದ ಕರೆಯಲ್ಲಿ ನಿಂತು, ಭರತೇಶನು, ಮಾಗಧನನ್ನು ಕರೆಯಿಸುವ ಮೊದಲೇ ಅವನು ಬಂದು ರಾಜೇಂದ್ರಗೆ ನಮಸ್ಕರಿಸಿ ನಿಂತನು. ಭರತೇಶನು, ಅವನೊಂದಿಗೆ ದಕ್ಷಿಣ ಸಾಗರದ ವ್ಯಂತರನಾದ ವರತನು ಎಂಥವನೆಂದು ವಿಚಾರಿಸಿದನು.

''ವರತನು ವ್ಯಂತರನು ತಾನಾಗಿ ಬಂದು ನಮ್ಮನ್ನು ಕಾಣುವನೊ'' ಇಲ್ಲವೆ ಹೆಮ್ಮೆಯಿಂದ ಬಾರದಿರುವನೋ?''

''ದೇವ, ನಿನಗಿಂತ ಅಗ್ಗಳೆಯರು ಬೇರಿಲ್ಲ. ವರತನು ಸುಮುಖನು. ದೇವರ ಸೇವೆಗೆ ನಾಳೆಯೇ ನಾನವನನ್ನು ಒಡಗೊಂಡು ಬರುವೆನು. ಅದೊಂದು ಗಹನ ಕಾರ್ಯವಲ್ಲ''

ರಾಜೇಂದ್ರನು ಅದರಿಂದ ಸಂತೋಷಗೊಂಡು ಮಾಗಧನನ್ನು ಬೀಳ್ಕೊಟ್ಟು ರಾಜಗೃಹವನ್ನು ಸೇರಿದನು. ಸ್ನಾನ ದೇವಾರ್ಚನೆ ಭೋಜನ ಶಯನಾದಿಗಳ ಲೀಲಾನುವರ್ತನದಲ್ಲಿ ಮೀನಲೋಚನೆಯರೊಂದಿಗೆ ಚಕ್ರಿಯು ಮರೆದನು.

ಬೆಳಗಾಗಿ ನಿತ್ಯ ಕರ್ಮವನ್ನು ತೀರಿಸಿ ಭರತೇಶನು ಓಲಗದಲ್ಲಿ ಕುಳಿತನು. ಅರಸರು ಬಂದು ಕಾಣಿಕೆಗೊಟ್ಟು, ಓಲಗದಲ್ಲಿ ರಾಜೇಂದ್ರನನ್ನು ಗೌರವಿಸಿದರು. ಕ್ರಮವಾಗಿ ಕೆಳೆಯರು, ಅಕ್ಕರಿಗರು, ಗಾಯಕರು, ರಾಜಕುಮಾರರು, ಮಂತ್ರಿದಳಪತಿಗಳು, ಸರ್ವ ಪರಿವಾರದವರೂ ತಮ್ಮ ತಮ್ಮ ಸ್ಥಾನದಲ್ಲಿದ್ದರು. ಆಗ ಗಾಯಕರು ಭರತೇಶನಿಗೆ ಸಂಗೀತ ಸುಧೆಯುಣಿಸತೊಡಗಿದರು. ಮಂಗಳಕೌಶಿಕೆಯೆಂಬ ರಾಗದಲ್ಲವರು ಮೊದಲು ಹಾಡಿದರು. ಅನಂತರ ನಾರಾಣಿ, ಸೌರಾಷ್ಟ್ರ, ಗುಜ್ಜರಿ ರಾಗಗಳಲ್ಲಿ ಅವರು ಸಂಚರಿಸಿದರು. ಆತ್ಮತತ್ವಾರಾಮನಾದ ಭರತೇಶನು ಲೋಕೋತ್ತಮವಾದ ಹಂಸಗುಣಗಳನ್ನು ಕೇಳಿದನು. ಪುಣ್ಯಗಾನವನ್ನು ಕೇಳುತ್ತ ಆತ್ಮನ ಪರಮ ಲಾವಣ್ಯವನ್ನು ಭಾವಿಸುತ್ತ ರಾಜಾಧಿರಾಜಾಗ್ರಗಣ್ಯನು ಆ ಸುಗೋಷ್ಠಿಯಲ್ಲಿ ಮೆರೆದನು.

ಆದಿಜಿನನನ್ನು ನೆನೆಯುತ್ತ ಹಂಸನಾಥನನ್ನು ಭೇದಿಸಿ ತಿಳಿಯುತ್ತಿರುವಾಗ ಗಂಧಮಾಧವಿಯೆಂಬ ದಾದಿಯು ಆದಿರಾಜನನ್ನು ತಂದು ನೃಪನಿಗಿತ್ತಳು.

"ರಜತಾದ್ರಿಯೊಡೆಯನು ಬಂದನು; ಅಪ್ಪಾಜಿ ಬಿಜಯ ಮಾಡಿದನು." ಎಂದು ಹೇಳುತ್ತ ಭೂಪತಿಯು ತನ್ನ ಭುಜತುಂಬುವಂತೆ ಮಗನನ್ನು ಎತ್ತಿ ಅಪ್ಪಿಕೊಂಡನು. ಗಲ್ಲವನ್ನು ಚುಂಬಿಸಿ ಮುತ್ತುಕೊಟ್ಟು ನಗುನಗುತ್ತ "ಎಲ್ಲಿಂದ ಬಂದಿರಿ ಸ್ವಾಮಿ?" ಎಂದು ಉಲ್ಲಾಸದಿಂದ ಕೇಳಿದನು. "ಕಾರುಣ್ಯದಿಂದ ನನ್ನನ್ನು ನೋಡಬೇಕೆಂದು ಮೇರುಗಿರಿಯ ತುದಿಯಲ್ಲಿ ನಿಂತ ಆದಿಪುರುಷ" ಎಂದು ನುಡಿಸುತ್ತ ಮುಂಡಾಡಿದನು. ಮಗನ ಅರಳೆಲೆಯನ್ನು ತಿದ್ದುವ, ಕೊರಳದಂಡೆಯನ್ನು ಸರಿಮಾಡುವ, ಮೂಗಾಯನ್ನು ಮುಟ್ಟುವ, ಆಟದಲ್ಲಿ ಭರತೇಶನು ಸುಖಿಸುತಿದ್ದನು. ಮಗನು ತಂದೆಯ ಮುಖವನ್ನು ನೋಡುವಾಗ ಮೊಳೆವ ಹಲ್ಲು ಮಿನುಗಿ ನಗೆಯನ್ನು ಸೂಸುವುದು. ಅಯ್ಯನ ಮೀಸೆಯನ್ನು ತಿದ್ದುವನು. ತನ್ನ ತೋಳರಕ್ಷೆಯನ್ನು ತಂದೆಗೆ ತೋರಿಸಿ ರಾಜೇಂದ್ರನ ತಾವುಜವನ್ನು ಕೇಳುವನು. ಕಾಲಂದುಗೆಯನ್ನು ತೋರಿ ಪೆಂಡೆಯವನ್ನು ಬೇಡಿಕಾಡುವನು. ಮಗನು ಪ್ರಾಯಕ್ಕೆ ಬಂದೊಡನೆ ತಾವುಜವನ್ನೂ ಪೆಂಡೆಯನ್ನೂ ತೊಡಿಸುವೆನೆಂದು ತಂದೆಯು ಮಗನನ್ನು ಸಮಾಧಾನಪಡಿಸುವನು.

ಇಂತು ಆದಿರಾಜನು ತಂದೆಯ ತೊಡೆಯ ಮೇಲೆ ಆಡುತ್ತಿರುವಾಗ ಅರ್ಕಕೀರ್ತಿಯು ಸಿಂಗರಿಸಿಕೊಂಡು ನಡೆದುಬಂದನು. ಕಾಸೆ, ಚೆಲ್ಲಣ, ನಡುವಿನ ಜವದಾಡೆ, ಮಾಸಾಳು, ಕುಲ್ಲಾಯಿಗಳನ್ನು ಧರಿಸಿದ್ದನು. ಹಣೆಯ ತಿಲಕದಿಂದ ಅರ್ಕಕೀರ್ತಿ ಕಮ್ಮನೆ ಬರುತಿದ್ದನು. ತೋಳುಗಳ ಬೀಸಿ ಗಾಡಿಯಿಂದ ಬರುವ ಅರ್ಕಕೀರ್ತಿಯನ್ನು ಕಾಣುತ್ತ ರಾಜೇಂದ್ರನು ರಾಣಿಯರು ಮಾಡಿದ ವಿನೋದವೆಂದು ಅರಿತನು. ಹಿಂದಿನಿಂದ ಮಂದಾಕಿನಿ ರಕ್ಷಕಿಯಂತೆ ಮೆಲ್ಲನೆ ಬರುತ್ತಿದ್ದಳು. ನೆರೆದಿದ್ದ ನೃಪಸಭೆಗೆ ಮರಿಯಾನೆ ಬಂದಂತೆ ಅರ್ಕಕೀರ್ತಿ ಬಂದಾಗ ಮಂತ್ರಿ ದಳಪತಿಯೇ ಮುಂತಾದ ಸಭಿಕರೆದ್ದು ಗೌರವಿಸಿದರು. ಅದನ್ನು ನೋಡಿದ ಅರ್ಕಕೀರ್ತಿ ಕಣ್ಸನ್ನೆಯಿಂದಲೇ ಅವರನ್ನು ಕುಳ್ಳಿರಲು ತಿಳಿಸುತ್ತ ಮುಂದೆ ಬಂದನು.

"ಅಣ್ಣಾಜಿ ಬರುವಾಗ ಕುಳ್ಳಿರಲಾಗದು ; ಏಳಣ್ಣ " ಎಂದು ರಾಯನು ಆದಿರಾಜನೊಂದಿಗೆದ್ದು ಕೈಮುಗಿಸಿದನು. ಅರ್ಕಕೀರ್ತಿ ಸಿಂಹಾಸನದೆಡೆಗೆ ಬಂದು ಕಾಣಿಕೆಯಿತ್ತು, ಕೈಮುಗಿದು, ಸಿಂಹಾಸನವೇರಿ ತಂದೆಯೊತ್ತಿನಲ್ಲಿ ನಿಂತನು.

"ಮಂದಾಕಿನಿ, ಅರ್ಕಕೀರ್ತಿಗೆ ಏನು ಕಲಿಸಿಕೊಟ್ಟಿರಿ?" ರಾಜೇಂದ್ರನು ಕೇಳಿದನು.

"ಹಾಲು ಸಕ್ಕರೆಯನ್ನಾರೋಗಿಸುವುದು ಸಾಲವೆ? ಪಿತನೊಡನೆ ಓಲೈಸಿ ಶಿದ್ಧಬೇಡವೆ ರಾಜಸುತನು? ಎಂದು ಹೇಳಿ ಬಂದನಿಲ್ಲಿಗೆ" ಮಂದಾಕಿನಿ ಉತ್ತರವಿತ್ತಳು.

ಅರ್ಕಕೀರ್ತಿಯ ಉಡಿಗೆತೊಡಿಗೆಯನ್ನು ನೋಡಿ ತನಗೂ ಕುಲ್ಲಾಯಿ, ಕಾಸೆ, ಚಲ್ಲಣ, ಜವದಾಡೆಗಳು ಬೇಕೆಂದು ಆದಿರಾಜನು ಕಾಡಿದನು. ಭರತೇಶನೆಷ್ಟು ಸಮಾಧಾನ ಪಡಿಸಿದರೂ ಆವನು ಕೇಳಲೇ ಇಲ್ಲ. ಕೊನೆಗೆ ಅರಸನ ಸೂಚನೆಯಂತೆ ಗಣಸಿದ್ಧನೊಬ್ಬನು ಆದಿರಾಜಗೆ ಅರ್ಕಕೀರ್ತಿಯಂತೆ ಸಿಂಗರಿಸಿದನು. ಆಗ ಅವರಿಬ್ಬರೂ ಭರತೇಶನ ಎಡಬಲಗಳಲ್ಲಿ ನಿಂತುಕೊಂಡರು. ಬಾಲಸೂರ್ಯನು ಎಡಬಲಗಳಲ್ಲಿದ್ದು ಮಧ್ಯದಲ್ಲಿ ಮೆರೆಯುವಂತೆ ಬಾಲಕರಿಂದ ಕೂಡಿದ ರಾಜೇಂದ್ರನು ಮೆರೆದನು. ಎಡಬಲದಲ್ಲಿ ಬಾಲಕರು, ಮುಂದೆ ರಾಜಾಧಿರಾಜರಿದ್ದು ಭರತೇಶನೋಲಗವು ಅಮರೇಂದ್ರನೋಲಗಕ್ಕೆ ಸರಿಯೆನಿಸಿತು. "ಇಂತಹ ಭಾಗ್ಯವನ್ನು ನಾವೆಲ್ಲೂ ಕಂಡಿಲ್ಲ"ವೆಂದು ನೃಪರುಭರತೇಶನ ಸೌಭಾಗ್ಯವನ್ನು ಹೊಗಳಿದರು. "ಈ ಸುಕುಮಾರರನ್ನು ಕಂಡು ನಮ್ಮ ಕಣ್ಣುಗಳ ಜಾಡ್ಯ ಹರಿಯಿತು." ಎಂದು ಅರಸರು ಭಿನ್ನೈಸಿದರು. "ರಾಜಾವತಂಸ, ಈ ನಿನ್ನ ಗಂಭೀರವೂ ನಿನ್ನ ಮಕ್ಕಳ ಗಂಭೀರವೂ ಮನ್ನೆಯರಿಗೆ ರೀತಿಯನ್ನು ಕಲಿಸುವುದು. ಭರತೇಶ, ನಿನ್ನ ಗುಣ ನಿನ್ನ ತನುಜರಲ್ಲಿರುವುದು. ಬೀಜದಂತೆ ಅಂಕುರವೆಂಬ ನುಡಿ ಮಾಡಿದ್ದುದು ಇಂದು ಕಾಣಿಸಿತು. ಹೆಚ್ಚು ಬಣ್ಣಿಸಲಾರೆವು. ದೃಷ್ಟಿಪಾತವು ಆವರಿಸಬಹುದು. ಸುಕುಮಾರರ ಓಲಗವನ್ನು ನಿಲ್ಲಿಸು" ಎಂದು ಭೂಭುಜರು ಕೈ ಮುಗಿದರು.

"ಒಂದು ಘಳಿಗೆ ನಮ್ಮನ್ನು ಓಲೈಸಿದ ಈ ಕುಮಾರರಿಗೇನು ಸಂಬಳ?" ಎಂದು ರಾಜೇಂದ್ರನು ಮಂತ್ರಿದಳಪತಿಗಳನ್ನು ಕೇಳಿದನು. ಹಿರಿಯರಿಗೆ ಚಿಕ್ಕರಸಿಗೆ ಸಲ್ಲಿಸಬೇಕೆಂದು ದಳಪತಿ ಸೂಚಿಸಿದನು. ಘಳಿಗೆಗೆ ಒಂದೂವರೆ ಕೋಟಿ ವಿತ್ತವನ್ನು ನೀಡಬೇಕೆಂದು ಭರತೇಶನು ಅಪ್ಪಣೆಯಿತ್ತನು."

ಆಮೇಲೆ ಭರತೇಶನು ತನ್ನ ಕುಮಾರರನ್ನು ಜಾತಿವೀರರೆ ಬನ್ನಿರೆಂದ. ಎರಡು ತೋಳುಗಳಿಂದ ಅಪ್ಪಿಕೊಂಡು ಅರ್ತಿತೋರಿದನು. ಅನಂತರ ಅವರೊಂದಿಗೆ ಓಕುಳಿಯಾಡಿದನು. ನೆರೆದ ರಾಜರೆಲ್ಲ ಕುಮಾರರಿಗೆ ಸಿವಾಳಿಯನ್ನಿಟ್ಟು ನಮಿಸಿದರು. ಅವರಿವರೆನ್ನದೆ ಎಲ್ಲರೂ ಕಾಣಿಕೆಯಿಕ್ಕಿ ಆದರದಿಂದ ಅಡ್ಡಬಿದ್ದರು.

ಅಷ್ಟರಲ್ಲಿ ಕಡಲತಡಿಯಿಂದ ಮೊರೆವ ವಾದ್ಯಘೋಷವು ಕೇಳಿಸಿತು. ರಾಜೇಂದ್ರನು ಆದಿರಾಜನನ್ನು ಗಂಧಮಾಧವಿಯ ಕೈಗಿತ್ತನು. ಹಿರಿಯಕುಮಾರನನ್ನು ಮಂದಾಕಿನಿಗೊಪ್ಪಿಸಿ ಅವರನ್ನು ಅರಮನೆಗೆ ಕಳುಹಿಸಿದನು. ಮತ್ತೆ ದೊರೆಗಳ ಮಧ್ಯದಲ್ಲಿ ಭರತೇಶನ ಓಲಗ ಮೆರೆಯಿತು.

ಜಲನಿಧಿಯೊತ್ತಿಗೆ ಬಂದೊಡನೆ ವರತನು ವಿಮಾನದಿಂದಿಳಿದು ಮಾಗಧನಂತೆ ಚಾಮರಾದಿಗಳನ್ನು ತೊರೆದು ಕಾಲ್ನಡೆಯಿಂದಲೆ ಬರುತಿದ್ದನು. ವ್ಯಂತರೇಂದ್ರನಾದ ವರತನು, ತನ್ನ ಹೆಸರಿನಂತೆ, ಸಿಂಗರದಿಂದೊಪ್ಪುವ ತೆಳುವಿನ ದೇಹದಿಂದಲೂ ಮುಗುಳುನಗೆಯೆಸಳಿನಿಂದಲೂ ವರತನುವೇ ಆಗಿದ್ದನು. ಅವನು ಕಪ್ಪ ಕಾಣಿಕೆಯ ವಸ್ತುಗಳನ್ನು ವಸ್ತ್ರಗಳಲ್ಲಾಂತು ತನ್ನ ಮಂತ್ರಿಗಳೊಂದಿಗೆ ಮಾಗಧನನ್ನು ಹಿಂಬಾಲಿಸಿಕೊಂಡು ಭರತೇಶನ ಓಲಗಕ್ಕೆ ಬಂದನು.

''ಛಲದಂಕ ಮಲ್ಲ ! ಸೊಕ್ಕಿದ ಹಗೆರಾಯರ ಬಲದುರ್ಗನಿರ್ಧೂಮ ಧಾಮ ! ತಲೆಬಾಗಿದ ಅರಿರಾಯರ ರಕ್ಷಕ !''

—ಎಂಬ ಗಲಭೆಯು ಆಗಲೇ ಅವನಿಗೆ ಕೇಳಿಸಿತು. ಕಟ್ಟೆದಿರಲ್ಲಿ ಚಕ್ರಧರನ ದಿವ್ಯಾಂಗವನ್ನು ತಟ್ಟನೆ ನೋಡಿದ ವರತನು. ''ಹುಟ್ಟಬೇಕು ಇಂತಹ ನೃಪರು'' ಎಂದು ಮನದಲ್ಲಿ ಭಾವಿಸಿ ರಾಜಸನ್ನಿಧಿಗೆ ಬಂದನು.

ಆಗ ಮಾಗಧನು. ಎತ್ತಿ ಕೈಮುಗಿದು ''ಚಿತ್ತೈಸು ಸ್ವಾಮಿ, ಇವನೆ ವರತನು'' ಎಂದನು. ''ಭರತ ರಾಜೇಂದ್ರನು ಚಿತ್ತೈಸಿದ್ದಾನೆಂದು ನಾನು ಹೇಳಿದಾಗಲೆ 'ಪರಮ ಸೌಭಾಗ್ಯವೇ ಇದಿರುಬಂದುದು' ಎಂದುಬ್ಬಿ ವರತನು ಬಂದಿರುವನು. 'ಕಾಣಬೇಡವೆ ಪುರುಜಿನನ ಕುಮಾರನ? ಪ್ರೀಣಾತ್ಮಯೋಗ ಭಾಸುರನ? ಜಾಣರೊಡೆಯನ?' ಎಂದು ಬಂದಿರುವನು.''

ಮಾಗಧನು ವರತನವನ್ನು ಕಾಣಿಸಿ ಮತ್ತೆ ಕೈಮುಗಿದು ಕಡೆಸಾಗಿ ನಿಂತನು. ವರತನು ಮುತ್ತುಗಳಿಂದ ಭರತೇಶನ ಪಾದಗಳ ಅಭಿಷೇಕ ಮಾಡಿ, ಹೊಸ ನಿವಾಳಿಯನ್ನಿಟ್ಟನು. ಕಡಗ, ಚೂಡಾರತ್ನ, ಕವಚ, ಕಂಠಾಭರಣಗಳನ್ನು ಕಪ್ಪವೆಂದು ಭರತೇಶನಿಗೊಪ್ಪಿಸಿ ಮಂತ್ರಿಯೊಂದಿಗೆ ಸಾಷ್ಟಾಂಗವೆರಗಿದನು. ''ನಿನ್ನನ್ನು ನೋಡಿ ದೃಷ್ಟಿಗಳು ಸಫಲವಾದವು; ಚಿತ್ತಕ್ಕೆ ತುಷ್ಟಿಯಾಯಿತು. ಇಷ್ಟರಿಂದಧಿಕವೇನುಂಟು ಸ್ವಾಮಿ?' ಎಂದು ವರತನು ನುಡಿದನು.

ವರತನು ಸುಮುಖನೆಂದೂ ವಕ್ರನಲ್ಲವೆಂದೂ ಭರತೇಶ ಮೆಚ್ಚಿದನು. ''ನೀನು ಬಂದುದು ಸುಕ್ರಮವಾಯಿತು'' ಎಂದು ಭರತೇಶನು ಉಪಕ್ರಮ ವಾಕ್ಯವನ್ನು ಹೇಳಿದನು. ಅನಂತರ ಮಂತ್ರಿಸಹಿತ ಭರತೇಶನು ಓಲಗದಿಂದ ಎದ್ದನು. ವರತನು ನೋಡಿ ಹೀಗೆಂದನು—

''ಸ್ವಾಮಿ ಜಗದೊಳಗೆಲ್ಲರ ಕಣ್ಣಹಬ್ಬವನ್ನು ಮಾಡಲೆಂದು ನೀನು ಜನಿಸಿದೆ. ಇದಕ್ಕೆ ಈ ನಿನ್ನ ರೂಪವೇ ಸಾಲದೆ? ಈ ರಾಯಮೋಡಿ, ತೇಜೋಲಂಬ, ನೇತ್ರಶೃಂಗಾರ, ಈ ಲೇಸು ನಿಮಗಿರಲಿ. ನಿನ್ನನ್ನು ಬಿಡದೆ ಓಲೈಸುವ ಐಸಿರಿಯು ನಮಗಿರಲಿ. ಕೂಪದ ಮೀನಿನಂತೆ ಕಡಲಿನಲ್ಲಿದ್ದ ನಮ್ಮ ಪಾಪವನ್ನು ಕಳೆಯಲೆಂದೇ ನೀನಿಲ್ಲಿಗೆ ಬಂದೆ ಸ್ವಾಮಿ. ನಾವಿಂದು ಪವಿತ್ರರಾದೆವು'' ಭರತೇಶನು ಸಂತಸಿಗನಾದ. ವರತನುವಿಗೆ ಕುಳ್ಳಿರ ಹೇಳಿದನು. ಇದನ್ನು

ನೋಡಿ ರಾಜರೆಲ್ಲರೂ ಮೆಚ್ಚಿದರು. ವರತನು ಮಂತ್ರಿಸಹಿತ ಉಲ್ಲಾಸದಿಂದ ಅಲ್ಲಿ ಕುಳಿತನು.

ಭರತೇಶನು ಮಾಗಧಾಂಕನಿಗೆ ಕುಳ್ಳಿರಹೇಳಿ ತನ್ನ ಮಂತ್ರಿಶ್ರೇಷ್ಠನಾದ ಬುದ್ಧಿಸಾಗರಾಂಕನನ್ನು ನೋಡಿದನು. ಭೂಪತಿಯ ನೋಟದ ಇಂಗಿತವನ್ನರಿತ ಮಂತ್ರಿ ಹೀಗೆಂದನು. ''ಭೋಗ ದೇವೇಂದ್ರನೆ ಕೇಳುವುದು—ವರತನು ಸುರನು ನಿನ್ನ ಭೋಗಕ್ಕೆ ಒಪ್ಪುವ ಸೇವಕನು. ಅವನು ಮೃದುಚಿತ್ತನೂ ಅಹುದು; ಸುಮಾರ್ಗಿಯೂ ಅಹುದು; ನಿನ್ನ ಚೌದಪದ್ಮಹಿತನೂ ಅಹುದು. ಇವನನ್ನು ಮಾಗಧಾಮರನು ಕರೆತಂದ ಸೇವೆಯೂ ದೊಡ್ಡದು ಸ್ವಾಮಿ. ನಿನ್ನ ಸೇವೆಯನ್ನು ಎರಡಿಲ್ಲದೆ ಮಾಡುವ ಸಂಪನ್ನರು ಇವರಿಬ್ಬರೆಂಬುದನ್ನು ನೀನೆ ಬಲ್ಲೆ. ಇವರಿಬ್ಬರನ್ನೂ ಚೆನ್ನಾಗಿ ಪೊರೆಯಬೇಕು.''

ಈ ಮಾತನ್ನು ಕೇಳಿದೊಡನೆ ಅವರಿಬ್ಬರೂ ಕೂಡಿ, ''ನಾವು ಮಾಡುವ ಸೇವೆಯೇನುಂಟು ಸ್ವಾಮಿಗೆ? ಸೇವಕರು ಅಲ್ಪರಲ್ಲವೆ? ಆದರೂ ಈ ಮಾತಿನಿಂದ ಮನ್ನಿಸಿದೆ ನಮ್ಮನ್ನು'' ಎಂದರು. ''ವರತನು ಸುರನಿಂದು ತನ್ನ ಊರಿಗೆ ಹೋಗಲಿ : ಮುಂದಿನ ಬೀಡಿಗೆ ಬರಲಿ. ಅವನನ್ನು ಭೂಪತಿಯು ಹರುಷದಿಂದ ಬೀಳ್ಕೊಡುವುದು'' ಎಂದು ಬುದ್ಧಿಸಾಗರನು ಭರತೇಶನೊಡನೆ ಬಿನ್ನವಿಸಿದನು. ಭರತೇಶನು ಅವನನ್ನು ತನ್ನೊತ್ತಿಗೆ ಕರೆದುಕೊಂಡು ಅವನಿಗೆ ಆಭರಣಗಳನ್ನೂ ದಿವ್ಯಾಂಬರಗಳನ್ನೂ ಉಡುಗೊರೆಯಿತ್ತನು. ಅವನ ಮಂತ್ರಿಗಳನ್ನೂ ಹಾಗೆಯೇ ಮನ್ನಿಸಿದನು. ವರತನು ಭರತೇಶನನ್ನು ಬೀಳ್ಕೊಳ್ಳುವ ಮೊದಲು ತವಕದಿಂದ ಅವನ ಉತ್ತರಾಧಿಕಾರಿಯಾದ ಸುರಕೀರ್ತಿಯನ್ನು ಭರತೇಶನಿಗೊಪ್ಪಿಸಿದನು; ಅವನನ್ನು ಭರತೇಶನ ಚರಣಕ್ಕೆರಗಿಸಿದನು. ''ದೇವರ ಹತ್ತಿರ ಇವನಿರಲಿ. ನಾವಿನ್ನು ಬರುವೆವು'' ಎಂದು ಮಂತ್ರಿಗಳೊಂದಿಗೆ ಭರತೇಶಗೆರಗಿ ಹೊರನಡೆದನು.

ಅನಂತರ ಭರತೇಶನು ಮಾಗಧಾಂಕನನ್ನು ನೋಡಿದನು. ''ಇಲ್ಲಿಗೆ ಬಂದು ನಿಂತೊಡನೆ ನಾವು ಮಾಗಧಾಂಕನನ್ನು ಹೋಗೆಂದೆವು. ಅವನು ಹೋಗಿ ಬಳಲಿದರೂ ತನ್ನ ಕಾರ್ಯವನ್ನು ಚೆಂದಗಾಣಿಸಿದನು.'' ಅದನ್ನು ಕೇಳಿದ ಮಂತ್ರಿಯೂ ಮಾಗಧನ ಕಾರ್ಯವನ್ನು ಶ್ಲಾಘಿಸಿದನು.

''ನಿನ್ನ ಸೇವೆಯನ್ನು ಮಾಡುವುದು ನಾವು ಮುನ್ನ ಮಾಡಿದ ಪುಣ್ಯವು. ನಿನ್ನಡಿಯಾಣೆ ನನಗೆ ಬಳಲಿಕೆಯೇ ಆಗಲಿಲ್ಲ'' ಎಂದು ಮಾಗಧನು ತನ್ನ ವಿಶ್ವಾಸವನ್ನು ತೋರಿದನು.

ಭರತೇಶನು ಅವನನ್ನು ತನ್ನೊತ್ತಿಗೆ ಕರೆದು ರಾಗಿಸಿ, ತಲೆ ಸವರಿ ತನ್ನ ಭೂತ ಸೇನಾಗಣಕ್ಕೆ ಅವನನ್ನು ಅರಸಾಗಿ ನೇಮಿಸಿದನು. ''ವ್ಯಂತರ ಮುಖ್ಯರು ಇನ್ನಾರು ಬಂದರೂ ಓಲಗದ ಮರ್ಯಾದೆಯು ನಿನ್ನ ಅನಂತರವೇ ಅವರಿಗೆ ಸಲ್ಲುವುದು. ಮೊದಲಿನ ತೇಜವೂ ಮನ್ನಣೆಯೂ ನಿನ್ನದಾಗಿದೆ. ಕಡಲಲ್ಲಿರುವ ವ್ಯಂತರರಿಗೆ ನೀನು ಏನನ್ನು ಕೊಡಲು ಹೇಳುವೆಯೋ ಅದನ್ನು ಕೊಡುವೆನು. ನೀನು ತಡೆಯೆಂದರೆ ತಡೆಯುವೆನು. ನಿನ್ನ

ನುಡಿಯನ್ನೇ ನಡೆಯಿಸುವೆನು. ನಿನ್ನನ್ನು ಮನ್ನಿಸುವೆನು. ಮಾಗಧ, ನೀನಿಂದು ಎರವಿಲ್ಲದೆ ನನ್ನಸೇವೆ ಮಾಡುತ್ತಿರುವೆ. ಆದರೆ ನಾನಂದು ನಿನ್ನ ಕುರಿತಾಡಿದ ಮಾತನ್ನು ನೆನೆದರೆ ನನಗೇ ನೋವಾಗುವುದು. ಗುರುಹಂಸನಾಥನಾಣೆ'' ಎಂದು ಭರತೇಶನು ಮನಮೆಚ್ಚಿ ಎದೆತುಂಬಿ ಮಾತಾಡಿದನು.

''ನೀವೇನ ನುಡಿದೆ ನನ್ನೊಡೆಯ? ಅಜ್ಞಾನದಿಂದ ನಾನಂದು ನಿನ್ನನ್ನೂ ಜರೆದಿದ್ದೆನು ಆ ನೋವು ನನಗಿಲ್ಲ, ನೀನೂ ಅದನ್ನು ಮರೆ—'' ಎಂದು ಮಾಗಧನು ಭರತೇಶನಿಗೆ ಮಣಿದನು. ಆಗ ಭರತಚಕ್ರಿಯು ತಾನು ತೊಟ್ಟ ಹಾರವನ್ನೇ ಕೊಟ್ಟು ಗೌರವಿಸಿದನು. ಅದರೊಂದಿಗೆ ಅಮೂಲ್ಯವಾದ ಆಭರಣಗಳನ್ನೂ ಇತ್ತನು. ಅದರೊಂದಿಗೆ ಮಾಗಧನಿಗೆ 'ವ್ಯಂತರಾಗ್ರಣಿ' ಎಂಬ ದೊಡ್ಡ ಬಿರುದನ್ನೂ ಕೊಟ್ಟನು.

''ವ್ಯಂತರಾಗ್ರಣಿಯೆಂಬುದಿದು ಬಲುಬಿರುದು. ನಿನ್ನನ್ನು ಒಲಿಸಿ ಓಲೈಸಿ ಕೊಂಡ ವರಿಗೇ ಅದು ಫಲಿಸುವುದು'' ಎಂದು ಎಲ್ಲರೂ ಮೆಚ್ಚಿ ಚಕ್ರಿಯನ್ನು ಹೊಗಳಿದರು. ಅನಂತರ ಭರತೇಶನು ಮಾಗಧನನ್ನು ಬೀಡಿಗೆ ಹೋಗೆಂದು ಕಳುಹಿಸಿದನು. ಮತ್ತೆ ಉಳಿದೆಲ್ಲರನ್ನೂ ಉಚಿತವಾಗಿ ಬೀಳ್ಕೊಟ್ಟು, ಅರುಹನನ್ನು ಮನಸ್ಸಿನಲ್ಲೇ ನೆನೆದು ಮುತ್ತಿನ ಗದ್ದುಗೆಯಿಂದಿಳಿದು ಮಂದಿರವನ್ನು ಸೇರಿದನು, ಚಕ್ರಿ.

ಭರತೇಶನು ಅಂತಃಪುರದ ಸ್ತ್ರೀಯರೊಂದಿಗೆ ತನ್ನ ಸಂತಾನ ಕೂಡಿ ಭೋಗಿಸುತ್ತ ಚಿಂತೆಯಿಲ್ಲದೆ ಆತ್ಮಭಾವನೆಯಲ್ಲಿ ಕೆಲದಿವಸ ಅಲ್ಲಿಯೇ ಇದ್ದನು. ಬೆಳೆದುಬಂದ ಅರ್ಕಕೀರ್ತಿಗೆ ಅರಸು ಒಂದು ದಿನ ರಾಜಕುಲವೆಲ್ಲ ಮೆಚ್ಚುವಂತೆ ಯಜ್ಞೋಪವೀತ ಕಲ್ಯಾಣವನ್ನು ಮಾಡಿಸಿದನು. ಓದುಸಾಧನೆಯನ್ನು ಉದ್ಯೋಗಿಸಬೇಕೆಂದು ದಾದಿಗೂ ಅರ್ಕಕೀರ್ತಿಗೂ ಬೇರೆ ಬೇರೆ ಮನೆಯನ್ನು ಮಾಡಿ ಬೋಧಗೃಹದಲ್ಲಿರಿಸಿದನು. ಹಿಂದೆ ಯಾವುದು ಅರ್ಕಕೀರ್ತಿಯ ಫೌಜೆಂದಾಗಿತ್ತೋ ಅದಿಂದು ಆದಿರಾಜನ ಫೌಜೆಂದಾಯಿತು. ಪೂರ್ವ ದಿಕ್ಕಿನ ಶರಧಿಪಾಲರನ್ನು ಗೆದ್ದು ಭರತೇಶನು ವರುಣದಿಕ್ಕಿಗೆ ಹೋಗಲು ನಿಶ್ಚಯಿಸಿದನು.

# ೮

# ಪ್ರಭಾಸಾಮರ

ಪೃಥ್ವಿ ಆಕಾಶಗಳು ನಾದಮಯವಾಗುವಂತೆ ಭೇರಿಗಳು ಮೊಳಗಿದುವು. ರಾಜಮಾರ್ತಾಂಡನಾದ ಭರತೇಶನು ದಂಡೆತ್ತಿ ಪಡುವಣ ದಿಕ್ಕಿಗೆ ಪಯಣ ಬೆಳೆಸಿದನು.

ಕಿರಿಯ ಕುಮಾರನ ಫೌಜು ಹಿಂದಿನಿಂದ ಬರುತ್ತಿತ್ತು, ಹಿರಿಯ ಕುಮಾರನು ಭರತೇಶನೊಡನೆ ಮಿರುಗುವ ಪಲ್ಲಕ್ಕಿಯಲ್ಲಿ ಕುಳಿತು ಬರುತ್ತಿದ್ದನು. ಚಕ್ರಿಯು ಮೋದದಿಂದ ಮುನ್ನಡೆದನು. ಮಾಗಧಾಮರನು ಧ್ರುವಗತಿ ಸುರಕೀರ್ತಿಯರನ್ನು ಕೂಡಿಕೊಂಡು ಲವಲವಿಕೆಯಿಂದ ಭರತೇಶನನ್ನು ಹಿಂಬಾಲಿಸಿದನು. ಅವರನ್ನು ನೋಡುತ್ತ ಭರತೇಶನು ಮುಂದುವರಿದನು. ಆಗ ಮಾಗಧಾಧಿಪತಿಯನ್ನು ನೋಡುತ್ತ, ಕಾಂಭೋಜದರನೊಡನೆ ಇಷ್ಟು ನಗುತ್ತ, ಮಾಳವಾಧಿಪತಿಯ ಬಿನ್ನಹಕ್ಕೆ ತಲೆದೂಗುತ್ತ ರಾಜರೀತಿ ರಾಜಿಸುವಂತೆ ಬರುತಿದ್ದನು. ಚೋರಚೋಳರ ನುಡಿಯನ್ನು ಕೇಳುತ್ತ, ಹಮ್ಮೀರಪಡೆಯನ್ನು ನೋಡುತ್ತ, ಕೇರಳದರಸು ತನ್ನನ್ನು ಕೀರ್ತಿಸಲು ಮೆಚ್ಚುತ್ತ ರಾಜಮಂದಾರನು ನಡೆದನು. ಬಂಗಾಳದರಸನನ್ನು ಒಮ್ಮೆ ನೋಡಿ, ರಾಜ್ಯಾಂಗಲಕ್ಷಣನು ಲೀಲೆಯಿಂದ ತೆರಳಿದನು. ಎಲ್ಲರ ನೋವನ್ನೂ ಬಿಡಿಸುವಂತೆ ದೊರೆಯು ಅಲ್ಲಲ್ಲಿ ಬೀಡುಬಿಡಿಸುತ್ತಿದ್ದನು.

ಭರತೇಶನ ದಳಾಧಿಪತಿ ಜಯರಾಜನು ತನ್ನೊಡೆಯನು ಮೆಚ್ಚುವಂತೆ ದಂಡನ್ನು ನಡೆಯಿಸುತ್ತಿದ್ದನು. ಸೇನೆಯು ತಂಪಿನಲ್ಲೇ ನಡೆಯುವಂತೆ ಮಾಡುವನು. ಹಿಂದಿನಿಂದ ಬರುವ ಆದಿರಾಜನ ದಳ, ನಡುಹೊಂದಿಬರುವ ರಾಜನ ಫೌಜು, ಇವೆಲ್ಲವನ್ನೂ ಸರಿಯಾಗಿ ನೋಡುವವನು ಜಯರಾಜನು. ಸಕಲ ಸೇನೆಯನ್ನು ನೋಡಿಸದೆ ನಡೆಯಿಸುವ ಆವನು ಚಕ್ರವರ್ತಿಯ ಸೇನಾಪತಿ ರತ್ನನಲ್ಲವೆ?

ಸ್ಥಳವರಿತು ಬೀಡುಬಿಟ್ಟು, ಪಯಣ ಬೆಳಸುತ್ತಿರುವಾಗ ಪಾವನವಾದ ಒಂದೆಡೆಯಲ್ಲಿ ಭರತೇಶನ ಹೆಂಡತಿ ಚಂದ್ರಿಕಾದೇವಿ ಸುತನನ್ನು ಹೆತ್ತಳು. ಕೂಡಲೇ ಗುಡಿತೋರಣಗಳು ಕಾಣಿಸಿದುವು. ಮಂಗಳವಾದ್ಯಗಳು ಮೊಳಗಿದುವು. ಕುಮಾರನಾದ ಒಸಗೆಯು ದಿಕ್ಕುಗಳನ್ನೇ ತುಂಬಿದಂತಿರುವ ಸೇನೆಯಲ್ಲೆಲ್ಲ ಹಬ್ಬಿತು.

ಆಗ ವರತನು ಬಂದು ಭರತೇಶನನ್ನು ಕಂಡು, ''ನನ್ನ ನಗರದ ಬಳಿಯಿಂದ ತೆರಳುವಾಗಲೆ ಸ್ವಾಮಿಗೆ ಸುತನಾದನು. ನಾನೆ ನಿರ್ಭಾಗ್ಯನು. ಸ್ವಾಮಿಗೆ ಸುತನಾದುದಕ್ಕೆ ಉಲುಪೆ ಸಹಿತ ನಮ್ಮ ನಾಡಿನ ಸುವಸ್ತುಗಳನ್ನು ತರುವೆನು. ನಾನು ಮಾಗಧಾಮರನಂತೆ ನೋಂತವನಲ್ಲ.'' ಎಂದು ನಮಿಸಿ ಹೊರಟನು.

''ವರತನು, ಹೋಗದಿರು; ನನ್ನಾಣೆಯಿದೆ. ನಾನು ಹೇಳುವುದನ್ನು ಸುಖದಿಂದ ಕೇಳು. ಉಲುಪೆಯೇನು ಹೆಚ್ಚು? ಇಲ್ಲಿ ಬಹಳ ಕಾರ್ಯಗಳಿವೆ. ಆದ್ದರಿಂದ ನೀನು ಹೋಗಬೇಡ. ನನ್ನ ಬಳಿಯಲ್ಲೇ ಇರು. ನಿನ್ನ ನಾಡು ಉಲುಪೆಗಳೂ ನಮಗೆ ಸಂದುವೆಂದೇ ತಿಳಿ.'' ಭರತೇಶನು ಭಾವಭರಿತನಾಗಿ ಹೇಳಿದನು. ಆದರೆ ವರತನು ಒಪ್ಪಲಿಲ್ಲ ''ಸ್ವಾಮಿ, ತಾವು ಅವನಿಗೊಡೆಯರು. ಚತುರ್ದಶ ರತ್ನಗೌರವರು. ನಿಮಗಿದೆಲ್ಲ ಹಿರಿದಲ್ಲ, ನಮಗಿಷ್ಟು ಭಕ್ತಿ ತೋರಿತು. ಸಂದಿತೆಂಬುದಿಲ್ಲ'' ಎಂದಷ್ಟೇ ಹೇಳಿ ವರತನು ಸುಮ್ಮನಾದನು.

ಭೂಮೀಶನು ಜಾತಕರ್ಮವನ್ನು ಮಾಡಿಸಿ ನಾಮಕರ್ಮದ ದಿನದಲ್ಲಿ ಪ್ರೇಮದಿಂದ ''ಇವನು ವೃಷಭಸೇನನು ; ವೃಷಭರಾಜನು'' ಎಂದು ಹೆಸರಿಟ್ಟನು. ಅಲ್ಲಿ ಬಿಟ್ಟ ದಂಡು ಆರು ತಿಂಗಳು ಏಳಲಿಲ್ಲ. ಆ ಅವಧಿಯಲ್ಲಿ ಆದಿರಾಜನಿಗೆ ಉಪನಯನವಾಯಿತು. ಸುತರಿಬ್ಬರೂ ಓದುಸಾಧನೆಯನ್ನು ಉದ್ಯೋಗಿಸಿ, ಪಿತನಾಜ್ಞೆಯಲ್ಲಿ ನಿಂತರು. ವೃಷಭ ರಾಜನ ದಳವೊಂದು ಆಗುತ್ತದೆಂಬುದು ಸತಿಯರಿಗೆಲ್ಲ ಒಂದು ವಾರ್ತೆಯಾಯಿತು.

ಆರು ತಿಂಗಳು ಕಳೆದ ಮೇಲೆ ದಂಡೆದ್ದಿತು. ಭೇರಿಗಳು ದಿಕ್ಕುಗಳನ್ನು ತುಂಬುವಂತೆ ಮೊಳಗಿದುವು. ದೊಡ್ಡ ಜಾತ್ರೆಯಂತೆ ಸೇನೆಯು ಮುಂದಕ್ಕೆ ನಡೆಯಿತು. ವೃಷಭರಾಜನ ಫೌಜು ಹಿಂದಿನಿಂದ ಬರುತ್ತಿತ್ತು, ಕುಮಾರರಿಬ್ಬರು ಜಗಳವಾಡದೆ ಸ್ನೇಹದಿಂದ ಒಂದೇ ಪಲ್ಲಕಿಯಲ್ಲಿ ಬರುತಿದ್ದರು. ಇದನ್ನೆಲ್ಲ ನೋಡುತ್ತ ದುಷ್ಷಮ ಸುಷಮ ಕಾಲಾಧ್ಯನು ನಡೆದನು.

ಖಡ್ಗಗಳನ್ನು ಜಳಪಿಸಿ ಕುದುರೆಗಳ ಚಾರಿಯನ್ನರಿತು ಕಡುಪಿನಿಂದ ಬರುತ್ತಿರುವ ಹಿರಿಮೆಯ ಅರಸುಮಕ್ಕಳನ್ನು ನೋಡುತ್ತ ಭರತೇಶನು ಮುನ್ನಡೆದನು. ಹರಿವಂಶದ, ಉಗ್ರವಂಶದ, ನಾಥವಂಶದ, ಕುರುವಂಶದ ಅರಸು ಮಕ್ಕಳನ್ನು ಇಕ್ಷ್ವಾಕುವಂಶ ಗಗನ ಭಾಸ್ಕರನು ನೋಡುತ್ತ ನುಡಿಸುತ್ತ ಬರುತ್ತಿದ್ದನು. ಉಗ್ರವಂಶಕ್ಕಿವ ಉತ್ತಮನೆಂದೂ, ಹರಿವಂಶಕ್ಕಿವ ಭೂಷಣನೆಂದೂ, ಕುರುಕುಲಕ್ಕಿವ ಪ್ರವರನೆಂದೂ, ನಾಥವಂಶಕ್ಕಿವನು ಪೂಜ್ಯನೆಂದೂ ಅವರವರ ಕುರಿತು ಯೋಚಿಸುತಿದ್ದನು. ಇವನು ಗಂಭೀರನು, ಇವನು ಪರಾಕ್ರಮಿ, ಇವನು ಗುಣಾಂಬೋಧಿ, ಇವನು ಡಂಬರಹಿತನು ಎಂದವರನ್ನು ಬಗೆಯುತ್ತಿದ್ದನು. ಸೂರ್ಯನನ್ನು ಕಂಡ ತಾವರೆಯಂತೆ, ಚಂದ್ರನ ಸಿರಿಯನ್ನು ಕಂಡ ಉತ್ಪಲದಂತೆ, ಭರತರಾಜನನ್ನು ನೋಡಿ ರಾಜಪುತ್ರರು ಹಿಗ್ಗುತ್ತ ಬರುತಿದ್ದರು. ಅವರಾದರೂ ಬಹಳವಾಗಿ ಮಾತನಾಡದೆ, ಆಶೆಯನ್ನು ತೋರಿಸದೆ ತಮ್ಮಲ್ಲಿ ಅಹಿತಚೇಷ್ಟೆಗಳನ್ನು ಕಾಣಿಸದೆ ಬರುತ್ತಿದ್ದರು. ಆ ಕ್ಷತ್ರಿಯರು ಉತ್ಸವದಲ್ಲೇ ಮಹಿಮೆಯೊಡನೆ ಬರುತಿದ್ದರು. ಅವರೆಲ್ಲ ಚಕ್ರಿಗೆ ಹಿತವರಾಗಿದ್ದರು. ಕೊಳುಕೊಡೆಗೆ ತಕ್ಕವರಾಗಿದ್ದರು. ವಂಶದಲ್ಲಿ ಸಮಯುತರಾಗಿದ್ದರು. ಆದರೆ ಅಷ್ಟು ಸಿರಿಯಲ್ಲಿ ಭರತೇಶಗೆಣೆಯಾಗಿರಲಿಲ್ಲ.

ಭರತೇಶನ ದಂಡು ಅಲ್ಲಲ್ಲಿ ಬೀಡುಬಿಡುತ್ತ ಮತ್ತೆ ಪಯಣ ಬೆಳೆಸುತ್ತ ಪಡುವಣಕಡಲನ್ನು ಕಂಡಿತು. ಭರತೇಶನು ''ಮಾಗಧಾಂಕರ ಕರೆ, ವರತನು ಬರಲಿ''

ಎಂದುದೇ ತಡ ಅವರಿಬ್ಬರೂ ಬಂದು ಕೈಮುಗಿದರು. ಭರತೇಶನು ಸಾಗರ ತೀರದಲ್ಲೇ ನಿಂತು ಅವರಿಬ್ಬರಿಗೂ ಒಂದಾಗಿ ನುಡಿದನು. ''ಈ ಸಮುದ್ರದ ದ್ವೀಪದಲ್ಲಿ ಪ್ರಭಾಸನೆಂಬ ವ್ಯಂತರನಿರುವನು. ಅವನು ಸೋಲದೆ ನಮ್ಮನ್ನು ಬಂದು ಕಾಣುವನೋ ಸೋತು ಬಂದು ಕಾಣುವನೋ ಹೇಳಿ.''

''ಪ್ರಭಾಸದೇವನು ಉತ್ತಮನು. ನಿನ್ನ ಚಿತ್ತವನ್ನು ಒಲಿಸತಕ್ಕವನು. ನಾವಿಬ್ಬರು ಅವನನ್ನು ಇಲ್ಲಿಗೆ ಕರೆದುಕೊಂಡು ಬರುವೆವು.'' ಚಕ್ರಿಯ ನುಡಿಗವರು ಉತ್ತರವಿತ್ತರು.

''ನೀನು ಹೋಗುವುದು ಬೇಡ. ನಿಮ್ಮ ನಾಡಿನವರು ನಮಗೊಂದು ಸೇವೆಯನ್ನು ಮಾಡಲಿ. ನಾವವರನ್ನು ನೋಡಬೇಡವೇ?'' ಎಂದ ಚಕ್ರಿಯೇ ''ಧ್ರುವಗತಿ ಬಾ. ಸುರಕೀರ್ತಿ ಬಾ.'' ಎಂದವರಿಬ್ಬನ್ನೂ ಕರೆದು, ''ನೀವಿಬ್ಬರು ಅವನನ್ನಿಲ್ಲಿಗೆ ತರೆದು ತರುವುದು'' ಎಂದನು. ಅವರು ವಿನಯದಿಂದೊಪ್ಪಿಕೊಂಡು ಉತ್ಸಾಹದಿಂದ ಭರತೇಶ ನಿಂದ ಬೀಳ್ಕೊಂಡರು,

ಭರತೇಶನು ಎಲ್ಲರನ್ನೂ ಬೀಳ್ಕೊಟ್ಟು ಕುಮಾರಿರಬ್ಬರನ್ನೂ ಮುದ್ದುಲಲ್ಲೆಯಿಂದ ಬೀಡಿಗೆ ಕಳುಹಿಸಿದನು. ಅನಂತರ ಪಲ್ಲಕ್ಕಿಯಿಂದಿಳಿದು, ಕಾಮರೂಪನಾದ ಚಕ್ರಿಯು ಅರಮನೆಯನ್ನು ಹೊಕ್ಕನು. ಎಳೆವೆಣ್ಣುಗಳೊಡಗೂಡಿ ಜಳಕ ಮುಂತಾದ ನಿರ್ಮಲ ಭೋಗಯೋಗ ಲೀಲೆಯಲ್ಲಿ ಹಗಲಿರುಳನ್ನು ಕಳೆದನು. ಮರುದಿವಸ ಬೆಳಗಿನಲ್ಲಿ ಓಲಗವಿತ್ತನು. ಕಡೆಯ ಚಾವಡಿಯಲ್ಲಿ ಕಡೆಗಟ್ಟು ರಂಜಿಸುವಲ್ಲಿ ಚಕ್ರಿಯು ಓಲಗಗೊಟ್ಟು ಇಂಪಿನ ಗಾನವನ್ನು ಕೇಳುತಿದ್ದನು. ಅವನ ಸುತ್ತಮುತ್ತ ದೊರೆಗಳ ಗುಂಪಿತ್ತು. ಹಿರಿಯ ಪಡೆಯು ಅವರನ್ನೆಲ್ಲ ಬಳಸಿ ನಿಂತಿತ್ತು

ಲೇಸುಲೇಸೆಂದು ತಲೆದೂಗುವಂತೆ ಪರಮಾತ್ಮ ಕಲೆಯನ್ನು ಧನ್ಯಾಸಿ ಭೈರವಿಗಳಲ್ಲಿ ಹಾಡುತ್ತಿರುವುದನ್ನು ಭರತ ಚಕ್ರಿಯು ವಿಳಾಸದಲ್ಲಿ ಆಲಿಸುತ್ತಿದ್ದನು. ಹೊರಗೆ ಎಳೆಬಿಸಿಲು ಎಸೆವಂತೆ ಒಳಗೆ ಆತ್ಮನ ಪ್ರಭೆತೋರುವುದು. ದಿಂಬಿನಲ್ಲೊರಗಿದ್ದ ಅವನು ಕಣ್ಣೆವೆ ಮುಚ್ಚದೆ ನೆನಪಿನಲ್ಲೇ ಆತ್ಮನನ್ನು ನೋಡುತ್ತಿದ್ದನು. ಚರ್ಮದೃಷ್ಟಿಯಿಂದ ಲೋಕವನ್ನು ನೋಡುತಿದ್ದರೆ, ಅಂತರ್ಮಹಾಜ್ಞಾನ ದೃಷ್ಟಿಯಿಂದ ನಿರ್ಮಲಾತ್ಮನನ್ನು ನೋಡುತ್ತಿದ್ದನು. ಭರತೇಶನ ಮನೋಧರ್ಮವನ್ನು ಬಲ್ಲವರಾರು? ಕೆಸರಲ್ಲಿರುವ ತಾವರೆಯ ಮೇಲಲ್ಲದೆ ಆ ಕೆಸರ ಮೇಲೆ ರವಿಗಾಸೆಯಿರುವುದೇ? ಭವ್ಯರಾದವರು ಅಸಮ ಭೋಗದಲ್ಲಿದ್ದರೂ ಅವರ ಮಮತೆಯಿರುವುದು ಆತ್ಮನ ಮೇಲೆಯೇ. ಪರಮಾತ್ಮಯೋಗವನ್ನು ರಾಗರಚನೆಯಲ್ಲಿ ಹಾಡುವುದನ್ನು ಕೇಳುತ್ತ ಅವರಿಗೆ ತ್ಯಾಗದಿಂದ ನೀಡುತ್ತ ಗುಣರತ್ನ ಭೂಷಣನಾದ ಭರತೇಶನು ಹಂಸನಾಥ ಲೀಲೆಯಲ್ಲಿ ತನ್ಮಯನಾಗಿದ್ದನು.

ಭರತೇಶನು ಉತ್ತುಂಗ ವೈಭವದ ಓಡ್ಡೋಲಗದಲ್ಲಿದ್ದನು. ಆಗ ಚಿತಾನುಮತಿಯೆಂಬ ದಾದಿಯು ಕುಮಾರ ವೃಷಭರಾಜನನ್ನು ಚೆಂದು ಚಕ್ರಿಗೊಪ್ಪಿಸಿದಳು, ಸಿರಿಯನ್ನು ತಂದು ಒಪ್ಪಿಸಿದಂತೆ!

''ಶ್ರೀ ಜಿನಪತಿ ಬಿಜಯಂಗೈದನೆ? ಭರತನ ಅಪ್ಪಾಜಿ ಐತಂದನೆ'' ಎಂದು ಭರತೇಶನು ಕುಮಾರನನ್ನು ಅಪ್ಪಿಕೊಂಡನು. ದೊಡ್ಡ ಮಾಣಿಕದ ಬೊಂಬೆಯು ಚಿಕ್ಕ

ಮಾಣಿಕದ ಬೊಂಬೆಗಿಡ್ಡ ಬಂದಂತೆ ದೊಡ್ಡ ಸೊಬಗಿನ ದೊಡ್ಡರಾಯನು ಸೌಂದರ್ಯದ ಚಿಕ್ಕರಾಯನನ್ನು ಅಪ್ಪಿಕೊಂಡು ಮುತ್ತಿತ್ತು, ಹಣೆಗೆ ಹಣೆಯನ್ನಾನಿಸಿ ಮತ್ತೆ ಹೊಕ್ಕುಳನ್ನು ಅಲುಗಿಸಿದನು. ಆ ಕುಮಾರನು ತಂದೆಯ ಮುಖವನ್ನು ನೋಡಿ ಮೊಳೆಯುತ್ತಿರುವ ಹಲ್ಲು ಮಿನುಗಿಸಿ ಸಂಪತ್ತಿನಂತೆ ನಕ್ಕನು. ದೊರೆಯು ಅಂಗೈಯನ್ನು ಅಗಲಿಸಿ ಲಕ್ಷಣಗಳನ್ನು ನೋಡಿದನು. ಅಂಗಾಲುಗಳನ್ನು ಹಿಡಿದು ನೋಡಿದನು. ಮಂಗಲಮಯ ರೇಖೆಗಳನ್ನು ನೋಡಿ ''ಲೋಕೈಕ ಮಂಗಲ'' ಯೆಂದು ಚುಂಬಿಸಿದನು. ತಂದೆ ತನ್ನ ಕೈಯನ್ನು ನೋಡಿದಂತೆ ಮಗನು ತಂದೆಯ ಕೈಯನ್ನು ನೋಡಿದನು. ತಂದೆಯ ಕಾಲನ್ನೂ ನೋಡಿದನು. ಅಪ್ಪಿಕೊಂಡು ಮಂದಹಾಸ ಬೀರಿದನು.

''ನಿನ್ನ ಲಕ್ಷಣವನ್ನು ನಾನು ನೋಡಿದರೆ, ನೀನು ನನ್ನ ಲಕ್ಷಣವನ್ನು ನೋಡಿದೆಯೋ? ನಿನ್ನಂತೆ ನಾನು ನನ್ನಂತೆ ನೀನು'' ಎಂದು ಕಂದನೊಡನೆ ನುಡಿದನು ಭರತೇಶ.

ಒಬ್ಬ ಮಗನನ್ನು ಮುದ್ದಿಸುತ್ತಿರುವಾಗ ಇಬ್ಬರು ಬೆಳೆದ ಮಕ್ಕಳು ಚಕ್ರಿಯ ಸಭೆಗಾಗಿ ಬರುತ್ತಿದ್ದರು. ತಂದೆಯನ್ನು ಕಾಣುವ ಮೊದಲೇ ಅಂದಣದಿಂದಿಳಿದು ಜೊತೆಯಿಂದ ನಡೆದುಕೊಂಡು ಬಂದರು. ಅಣ್ಣ ಮುಂದೆ ತಮ್ಮ ಹಿಂದೆ. ಓಲಗ ಸಭೆಯ ಸ್ವಲ್ಪ ದೂರದಲ್ಲೇ ತಮ್ಮ ಛತ್ರಚಾಮರಗಳನ್ನು ತೊಲಗಿಸಿ, ಹಾವುಗೆಗಳನ್ನು ಬಿಟ್ಟು ಬರಿಗಾಲಿನಿಂದಲೇ ಮುಂದೆ ಬಂದರು. ಉಳಿದವರನ್ನೆಲ್ಲ ಹಿಂದೆ ನಿಲ್ಲಿಸಿ ತಾವಿಬ್ಬರೇ ಒಡ್ಡೋಲಗವನ್ನು ಸೇರಿದರು. ಆ ಕುಮಾರರಾದರೋ, ದೇವಾಂಗ ವಸ್ತ್ರವನ್ನು ಧರಿಸಿದ್ದರು. ಆಭರಣಗಳ ಕಾಂತಿಯಿಂದ ಹೊಳೆಯುತ್ತಿದ್ದರು. ರತ್ನದ ತಾವಡ ಕೋಲನ್ನು ಕೈವಿಡಿದಿದ್ದರು. ಕಸ್ತೂರಿ ತಿಲಕದಿಂದ ಶ್ರೀಗಂಧದ ಲೇಪದಿಂದ ಕುಮಾರರು ಗಮಗಮಿಸುತ್ತಿದ್ದರು. ಭರತರಾಜನ ಮಕ್ಕಳಲ್ಲವೇ? ಅವರ ಸಿಂಗಾರಕ್ಕೇನು ಕೊರತೆ !

ಅವರಲ್ಲಿ ತಂದೆಯ ಓಲಗವೆಂಬ ಅಸಡ್ಡೆಯಿಲ್ಲ, ಭಯಭಕ್ತಿ ಅವರಲ್ಲಿ ತುಂಬಿತ್ತು. ಆ ಕಿರಿಯರು ಮಂದಗತಿಯಿಂದ ಬರುವ ಸೊಬಗಿಗೆ ನೃಪರೆಲ್ಲ ಮೆಚ್ಚಿದರು. ಅವರು ಸಮೀಪಕ್ಕೆ ಬಂದೊಡನೆ ನೃಪರೆಲ್ಲರೆದ್ದು ನಿಂತು ಅವರಿಗೆ ಕೈಮುಗಿದರು. ಅಣ್ಣತಮ್ಮಂದಿರು ವಂದಿಸಿದ ನೃಪರನ್ನು ಸನ್ನೆಯಿಂದಲೇ ಕುಳ್ಳಿರಿಸಿ ಮುಂದುವರಿದರು. ರಾಜೇಂದ್ರನಿದಕ್ಕೆ ಮೆಚ್ಚಿದನು. ಆಗ ಕಟ್ಟಿಗೆಕಾರರು ಅವರ ಬರವನ್ನು ಸಾರಿ, ಅವರಿಗೆ ಪರಾಕು ಹೇಳಿದರು. ಭರತೇಶನಿಗೂ ಅವರನ್ನು ತೋರಿದರು.

''ಮಾರ್ತಾಂಡನಿಗೆ ಇಮ್ಮಡಿ ಮಾರ್ತಾಂಡನೆನಿಸುವ ಅರ್ಕಕೀರ್ತಿ ರಾಜರೂ ಆದಿರಾಜರೂ ಬರುತ್ತಿರುವರು ಸ್ವಾಮಿ. ಘಳಿಗೆಗೆ ಕೋಟಿ ಹಣವನ್ನು ಕೊಳ್ಳುವ ವೀರರ ತಲೆ ಮಣಿಗಳಾಗಿರುವ ಅವರನ್ನು ನೋಡು ಸ್ವಾಮಿ. ಮಲೆವ ಅರಿರಾಯದಲ್ಲಣರನ್ನು ಪರಾಂಬರಿಸು ಸ್ವಾಮಿ. ಸೌಜನ್ಯ, ವಿನಯ, ವಿವೇಕಗಳೇ ಆಭರಣಗಳಾಗಿ ಕಾಂತಿಯಿಂದೊಪ್ಪುವ ರಾಜಕುಮಾರರಲ್ಲಿ ಅಗ್ರಗಣ್ಯರಾದ ಅವರನ್ನು ರಾಜಾಧಿರಾಜರಲ್ಲಿ ಅಗ್ರಗಣ್ಯರಾದ ಸ್ವಾಮಿ ಚಿತ್ತೈಸಬೇಕು. ಹುಂಡಾವಸರ್ಪಿಣಿ ಕಾಲದಾದಿಯ ಷಟ್‌ಖಂಡ ಮಂಡಲೇಶ, ಅದ್ರಿಯಲ್ಲಿ ಹುಟ್ಟಿದ ಸೂರ್ಯ ಚಂದ್ರರ ನೋಡು ಒಡೆಯ !'' ಎಂದವರು ನಿವೇದಿಸಿದರು. ದಂಡಧರರ ಮಾತು ಕೇಳಿದ ಭರತೇಶನು ನಗುನಗುತ್ತ

ಹರ್ಷದಿಂದವರಿಗೆ ಉಡುಗೊರೆಯಿತ್ತನು. ಮಕ್ಕಳೂ ನಗುನಗುತ್ತಲೇ ತಂದೆಯೆಡೆಗೆ ನಡೆದರು.

''ಏಳಣ್ಣಾ! ಅಣ್ಣಾಜಿಯವರು ಬರುತ್ತಿದ್ದಾರೆ'' ಎಂದು ಚಕ್ರಿಯು ಚಿಕ್ಕಮಗನೊಡನೆ ಹೇಳಿದನು. ಆಮೇಲೆ ತಂದೆ ಹೇಳಿದಂತೆ ಅವನು ಅಣ್ಣಂದಿರಿಗೆ ಕೈಮುಗಿದನು.

''ಅವನು ನಮಗೇಕೆ ಕೈಮುಗಿವುದು?'' ಎಂದು ನಮಸ್ಕಾರ ಮಾಡುತ್ತಾ ದೊಡ್ಡಣ್ಣ ಕೇಳಿದ. ''ರಾಜಕುಮಾರರ ಲಕ್ಷಣವಿದು'' ಎಂದು ವಿವರಣೆ ಕೊಟ್ಟನು ಚಕ್ರಿ. ಆ ಮೇಲವರು ಚಕ್ರೇಶ್ವರನಿಗೆ ಕಾಣಿಕೆಯಿತ್ತುತಾವಡದ ಕೋಲನ್ನೆತ್ತಿ ಕೈಮುಗಿದು ಗದ್ದುಗೆಯ ಎಡಬಲದಲ್ಲಿ ರಾಜನನ್ನು ಓಲೈಸುವವರಂತೆ ನಿಂತರು.

ತೊಡೆಯ ಮೇಲೊಬ್ಬ ಕುಮಾರ ! ಗದ್ದುಗೆಯ ಕೆಳಗಡೆ ಇಬ್ಬರು ಕುಮಾರರು ! ಮುಂದೆ ಗಡಣದ ರಾಜರು ! ಹೀಗೆ ಭರತೇಶನ ಅಂದಿನ ಓಲಗ ರಾರಾಜಿಸಿತು. ದೊರೆಗಳನ್ನು ನೋಡಿ ಅವರನ್ನು ಕುಳ್ಳಿರಲು ಹೇಳಿದರೆ ಅವರು ಕುಳಿತುಕೊಳ್ಳಲಿಲ್ಲ. ''ಹಿರಿಯಣ್ಣ ನೀನು ಹೇಳಿ ಅವರನ್ನು ಕುಳ್ಳಿರಿಸು.'' ಎಂದು ಚಕ್ರಿ ಅರ್ಕಕೀರ್ತಿಗೆ ಸೂಚಿಸಿದನು. ಅರ್ಕಕೀರ್ತಿಯ ಮಾತಿಗವರು ರಾಜಕುಮಾರರನ್ನು ಪ್ರೀತಿಯಿಂದ ನೋಡಿದರಲ್ಲದೆ ಮತ್ತೇನೂ ಮಾಡಲಿಲ್ಲ. ಇದನ್ನು ನೋಡಿದ ಭರತೇಶನು ''ಕಿರಿಯಣ್ಣ ನೀನವರನ್ನು ಕುಳ್ಳಿರಲು ಕೇಳು'' ಎಂದು ಚಿಕ್ಕ ಮಗನಿಗೆ ಹೇಳಿಕೊಟ್ಟನು. ಆದಿರಾಜನು ಅದರಂತೆ ರಾಜರನ್ನು ಕುಳ್ಳಿರಲು ಹೇಳಿದನು. ಆದರೂ ಅವರು ಒಪ್ಪಲಿಲ್ಲ. ಕೊನೆಗೆ ''ಅಣ್ಣಾಜಿ ಯಾಣೆ'' ಎಂದಾಗ ಅವರೆದೆ ಹಣ್ಣಾಗಿ ಕೆಣ್ಣನೆ ಕುಳಿತು ಕೊಂಡರು.

''ಸ್ವಾಮಿಯೆದುರು ನನ್ನಾಣೆಯೇ?'' ಎಂದು ಅಣ್ಣನು ತಮ್ಮನೊಡನೆ ಕೇಳಿದನು. ''ಸ್ವಾಮಿ ನಿನಗೊಡೆಯನು; ನನಗೆ ನೀನೆ ಒಡೆಯನು'' ಎಂದು ಆದಿರಾಜನು ಅಣ್ಣನಿಗುತ್ತರವಿತ್ತನು. ರಾಜೇಂದ್ರನಿದಕ್ಕೆ ಮೆಚ್ಚಿದನು. ತನ್ನ ಮಕ್ಕಳ ಓಜೆಗೆ ತಾನೇ ಪ್ರೀತಿಗೊಂಡನು. ''ಈ ಜಾತಿ ವಿನಯವು ಯಾರಿಗಿದೆ?'' ಎಂದು ಸಭಾ ಜನರಲ್ಲಿ ಮೆಚ್ಚಿ ಕೀರ್ತಿಸಿದರು. ಚಕ್ರಿಯಾಗ ಮಂದಹಾಸದಿಂದ ದಳಪತಿ ಸಚಿವರನ್ನು ಬಳಿಗೆ ಕರೆದನು. ''ನಾನಂದು ಸೂಚಿಸಿದಂತೆ ಕುಮಾರರಿಗೆ ಸಂಬಳ ಸಲ್ಲುತ್ತಿದೆಯೇ?'' ಎಂದು ವಿಚಾರಿಸಿದನು. ''ಪ್ರಭುಗಳ ಆಜ್ಞೆಯಂತೆ ನಾವು ಒಪ್ಪಿಸಿದೆವು. ಆದರೆ ಅವರೆ ಭಂಡಾರದಲ್ಲಿರಲೆಂದು ಇರಿಸಿದರು.'' ಎಂದವರು ತಿಳಿಸಿದರು. ಚಂಡವೀರರಿಗೆ ಯಾವ ತಡೆಯೂ ಇಲ್ಲವೆಂದವನು ಮತ್ತೆ ರಾಯನಿಗೆ ಪ್ರೀತಿಯಿಂದ ಸೂಚಿಸಿದರು. ಇದರಿಂದ ನೃಪತಿಯೂ ಸುಪ್ರೀತನಾದನು.

''ಇನ್ನು ನೀವಿಲ್ಲಿ ಕುಳಿತಿರಿ'' ಎಂದು ಚಕ್ರಿಯು ಉನ್ನತಾಸನವನ್ನು ತೋರಿದನು. ಆದರೆ ಕುಮಾರರು ಮತ್ತೊಂದು ಸೇವೆಯೆಸಗುವ ಆರ್ತಿಯುಂಟೆಂದು ಸನ್ನದ್ಧರಾದರು. ಅಯ್ಯಗೆ ವೀಳ್ಯದೆಲೆಯ ಕೊಡುತ್ತಿರುವವನ ಕೈಯಿಂದ ಹರಿವಾಣವನ್ನೇ ಅರ್ಕಕೀರ್ತಿಯು ಸೆಳೆದುಕೊಂಡು ತಾನೇ ತಂದೆಗೆ ವೀಳ್ಯಕೊಡತೊಡಗಿದನು. ಅಷ್ಟರಲ್ಲೇ ಆದಿರಾಜನು ಚಾಮರವನ್ನು ಸೆಳೆದುಕೊಂಡು ಜನಕನಿಗೆ ಚಾಮರ ಬೀಸತೊಡಗಿದನು. ಮಕ್ಕಳನ್ನು ಪಡೆದು ಮತ್ಸರದಲ್ಲಿ ಬೆಂದು ವಿಕೃಸಕ್ಕದಿಂದ ಬಾಳುವವರನ್ನು ಧಿಕ್ಕರಿಸುವವರಂತೆ ಆ ಮಕ್ಕಳಿಬ್ಬರೂ

ತಂದೆಯ ಊಳಿಗ ಮಾಡಿದರು. ವೀಳ್ಯದ ಸೇವನೆಯಾದಮೇಲೆ ತಂದೆ ಮಕ್ಕಳನ್ನು ಕುಳಿತು ಓಲಗಿಸಿಯೆಂದನು. ವೀಳ್ಯದೆಲೆಯ ಹರಿವಾಣವನ್ನತ್ತಸರಿಸಿ ಅರ್ಕಕೀರ್ತಿಯು ತಂದೆಯ ತೊಡೆಯ ಮೇಲಿದ್ದ ತರಳನನ್ನು ಎತ್ತಿಕೊಂಡನು.

''ಏನಣ್ಣಾ ತರಳನನ್ನು ನೀನೆತ್ತಿಕೊಂಡೆ?'' ನರನಾಥನು ಕೇಳಿದನು. ''ಬೇನೆಯಿಲ್ಲವೆ ದೇವರ ತೊಡೆಗೆ.'' ಎಂದು ಆವನ ಉತ್ತರವಿತ್ತನು. ''ಅಣ್ಣಾ ದೇವನು ವೃಷಭರಾಜನನ್ನು ಎತ್ತಿಕೊಂಡು ಘನ ವೇಳೆಯಾಯಿತು. ತಮ್ಮನನ್ನು ನಾನಿಷ್ಟು ಧರಿಸುವೆನು'' ಎಂದು ಆದಿರಾಜನು ಮುಂದಾದನು, ಈ ವಿನಯಕ್ಕೆ ಚಕ್ರಿಯು ಚೋದ್ಯಗೊಂಡನು. ಆಮೇಲೆ ನನಗೇನೂ ನೋವಿಲ್ಲವೆಂದು ಭರತೇಶನು ತರಳನನ್ನು ಎತ್ತಿಕೊಂಡು ಸುತರನ್ನು ಕುಳ್ಳಿರಿಸಿದನು. ಆಸನವೇರಿದ ಅವರಿಬ್ಬರು ತಂದೆಯನ್ನೊಮ್ಮೆ ನೋಡುತ್ತಾಸಭೆಯನೊಮ್ಮೆ ನೋಡುತ್ತಾಸಮ್ಮಾನದಲ್ಲಿದ್ದರು.

ಮತ್ತೆ ತಂದೆ, ಮಕ್ಕಳನ್ನು ಮಾತನಾಡಿಸಿದನು. ಅವರ ಮೈ ತಡವಿದನು. ''ಓದು ಸಾಧನೆ ನಿಮಗೆ ಹೇಗೆ ಆಯಿತು? ವಿಷಾದವೋ ಹರ್ಷವೋ'' ''ಅದೊಂದು ವಿನೋದ. ಆ ದೊಡ್ಡ ಸುಖವನ್ನು ಹೇಳುವುದು ಕಷ್ಟ. ಸಾಧನೆಯೆಂಬುದು ಜಾಡ್ಯಹರಣ. ಶಾಸ್ತ್ರಾಭ್ಯಾಸವೇ ಜ್ಞಾನ ಸಾಧನೆ. ಭೂವರ ಕುಲಕ್ಕಿದು ಸುಖವಲ್ಲವೇ?'' ಎಂದು ತಂದೆಯ ಪ್ರಶ್ನೆಗೆ ಕುಮಾರರು ಉತ್ತರವಿತ್ತರು. ಪ್ರಾರಂಭದಲ್ಲಿಷ್ಟು ಬೇಸರವಾದರೂ ಮತ್ತೆ ಸರಿಯಾಗಿ ಸೊಗವನ್ನುಂಟು ಮಾಡುವುದು. ಧೀರರಿಗೆ ಓದುವ ಸಾಧನೆಯೂ ಸುಲಭ. ಭರತೇಶನು ಕುಮಾರರೊಡನೆ ಹೇಳಿದನು. 'ನಮಗವು ಬೇಸರವನ್ನುಂಟುಮಾಡುವುದಿಲ್ಲ, ಪ್ರೀತಿಯನ್ನೇ ಹೆಚ್ಚಿಸುತ್ತವೆ. ಅವಸರ ಮಾಡದೆ ಒಯ್ಯನೊಯ್ಯನೆ ಕಲಿಯುವೆವು. ಉದಯದಲ್ಲಿ ಸಾಧನೆ, ಪೂರ್ವಾಹ್ನದಲ್ಲಿ ಓದು, ರಾತ್ರಿಯಲ್ಲಿ ಓದಿದುದರ ಚಿಂತನೆ, ನಮ್ಮ ಈ ಸಾಧನೆಯು ಮೃದುಮೃದುವಾಗಿ ನಡೆದು ನಮಗದರಿಂದ ಮೋದವಾಗಿದೆ.'' ಎಂದರು ಕುಮಾರರು.

''ಆದಿರಾಜನ ಬುದ್ಧಿಯೆಂಬುದು ದಿನದಿನದ ಓದಿನಲ್ಲಿ, ಸಾಧನೆಯಲ್ಲಿ ಆದರ್ಶವನ್ನು ಒಲಿದು ಬೆಳೆಸಿದಂತಿದೆ. ಮರೆತ ಓದುಸಾಧನೆಗಳು ಮತ್ತೊಮ್ಮೆ ಎಚ್ಚರಿಸಿ ನೆನೆಯುವಂತೆ ಮೆರೆಯುತ್ತಿದೆ ತಮ್ಮನ ಬುದ್ಧಿ. ದೇವರ ದೇವನ ಹೆಸರಿಟ್ಟಿರುವಿರಿ. ದೇವರ ವಾಕ್ಯವೂ ತಪ್ಪುವುದೇ? ಭಾವಿಸಲು ಅವನು ಆದಿರಾಜನಲ್ಲವೆ? ಮಧ್ಯಭಾವದ ಅಂತ್ಯದ ರಾಜನಲ್ಲ ಎಂದು ಅರ್ಕಕೀರ್ತಿಯು ಆದರದಿಂದ ಅಯ್ಯನೊಡನೆ ಅರಿಕೆ ಮಾಡಿದನು.

''ಹೌದೇ? ನಿನ್ನ ಚಿತ್ರಕ್ಕೆ ಕಿರಿಯಣ್ಣನಷ್ಟು ಪ್ರೀತನಾದನೆ?'' ಎಂದು ಭರತೇಶನು ಕೇಳಲು ''ಬಹುವಚನವರಿಯೇನು. ನಮ್ಮ ವಂಶಕ್ಕೆ ಉತ್ಸಾಹಕಾರಿ'' ಎಂದು ತಂದೆಗೆ ತಿಳಿಸಿದನು.

''ಹಿರಿಯರು ಕಿರಿಯರನ್ನಿಂತು ಬಣ್ಣಿಸುವುದೇ? ಪರೀಕ್ಷಿಸಿದರೆ ನನ್ನಲ್ಲಿಷ್ಟು ಗುಣಗಳಿವೆಯೇ ಅಣ್ಣಾ?'' ಆದಿರಾಜನೆ ಅಣ್ಣನೊಡನೆ ಕೇಳಿದನು. ''ದೋಷವಿಲ್ಲ ಆದಿದೇವರು ಸ್ಮರಿಸಿ.'' ಅಣ್ಣ ಸಂತೋಷದಿಂದ ನುಡಿದನು. ''ಭೂಷಣರಲ್ಲವೆ ನೀವಿಬ್ಬರು?'' ಎಂದು ತಂದೆ ಮಕ್ಕಳನ್ನು ನೋಡಿ ತನ್ನ ಹರ್ಷವನ್ನು ವ್ಯಕ್ತಪಡಿಸಿದನು.

''ಓಲಗವಿಂದಿಗೆ ಸಾಕು. ನೀವಿನ್ನು ನಿಮ್ಮ ರಾಜಾಲಯಕ್ಕೆ ಹೋಗಿ'' ಎಂದು

ಲಲಿತಾಭರಣಗಳನ್ನು ತುಂಬಿದ ಕರಡಿಗೆಗಳನ್ನು ಪುತ್ರರಿಗೆ ನೀಡಿದನು. ''ನಮಗೇಕೆ ಉಡುಗೊರೆಗಳು? ಆಭರಣಗಳಿಗೇನೂ ಕಡಿಮೆಯಿಲ್ಲ'' ''ಕಡುರಮ್ಯವಾದ ಕೆಲಸದ ಈ ಆಭರಣಗಳನ್ನು ನೀವೊಮ್ಮೆ ನೋಡಬೇಕು.'' ''ನಮಗಿಂದು ಬೇಡ.'' ''ನಾನಿತ್ತರೆ ನಿಮಗೆ ಬೇಡವೆ? ಸಂವಿಧಾನದಿಂದ ನೀವು ನಮಗೆ ಕಾಣಿಕೆಯಿತ್ತಿರಿ. ನಾನು ಒಲ್ಲೆನು.'' ಎಂದು ತಂದೆ ಮಕ್ಕಳಾಡಿಕೊಂಡರು. ದೊಡ್ಡಕುವರ ಮೊದಲು ಉಡುಗೊರೆ ಹಿಡಿದರೆ ಚಿಕ್ಕವನು ಕೊಳ್ಳುವನೆಂದು ಭರತೇಶನು ಉಡುಗೊರೆಯೆತ್ತಿ ಅರ್ಕಕೀರ್ತಿಯನ್ನು ಕರೆದನು. ಆದರೆ ಅವನು ಸುಮ್ಮನಿದ್ದನು. ಆಗ ''ಸ್ವಾಮಿ ಪಾಲಿಸಿಕೊಳ್ಳಬೇಕು.'' ಎಂದು ಆದಿರಾಜ ತನ್ನಣ್ಣನನ್ನು—ತಂದೆಯ ಸೂಚನೆಯಂತೆ—ಪ್ರಾರ್ಥಿಸಿದನು. ಆಗ ಭರತೇಶನು ಆ ಕರಡಿಗೆಗಳನ್ನು ವೃಷಭ ಕುಮಾರನ ಮುಂದಿರಿಸಿದನು. ಆಗ ಅರ್ಕಕೀರ್ತಿಯೂ ಆದಿರಾಜನೂ ತಮಗೆ ಉಡುಗೊರೆ ನೀಡೆಂದು ವೃಷಭರಾಜನನ್ನೇ ಬೇಡಿದರು. ಮಗು ಕೈಯೆತ್ತಿ ಕರಡಿಗೆಗಳನ್ನು ಕೊಡಲಿಲ್ಲ. ಅವರನ್ನೇ ಕೊಳ್ಳಿಯೆಂದು ಕೈ ತೋರಿದ. ''ಅಜ್ಜನ ಹೆಸರಲ್ಲವೆ ನನಗೆ? ನೀನೆ ಕೊಡು'' ಎಂದವರು ಹೇಳಿದರೂ ಅವನು ಅಜ್ಜನಂತೆ ತಲೆಯಲ್ಲಾಡಿಸಿದನೇ ಹೊರತು ನೀಡಲಿಲ್ಲ. ಕಿರಿಯರು ಹಿರಿಯರಿಗೆ ಕಾಣಿಕೆ ನೀಡುವುದಲ್ಲದೆ ಉಡುಗೊರೆ ಕೊಡುವುದಲ್ಲವೆಂಬ ನಿಯಮ ಈ ಮಗುವೆಲ್ಲಿ ಕಲಿತನೆಂದು ಸಭೆಯೇ ಬೆರಗಾಯಿತು. ''ಮೋಕ್ಷಗಾಮಿಯ ಪುತ್ರರವರು; ಈ ಭವದಲ್ಲೇ ಮೋಕ್ಷವನ್ನು ಪಡೆಯುವವರು'' ಎಂದು ಸಭೆ ಅವರನ್ನು ಕೊಂಡಾಡಿತು.

''ವೃಷಭಣ್ಣಾ, ನೀನಿವರಿಗೆ ಕೊಡು'' ಎಂದು ಭರತೇಶ ಸೂಚಿಸಲು ಶಿಶುವು ಕೊಡುವಂತೆ ಕರಡಿಗೆಗಳನ್ನು ನಗುನಗುತ್ತ ಅವರತ್ತ ನೂಕಿತು. ''ನನ್ನಯ್ಯನಲ್ಲವೆ ಇವನು. ತಪ್ಪಿ ನಡೆವನೇ? ಕೊಳ್ಳಿ'' ಎಂದು ಭರತೇಶನು ಕರಡಿಗೆಗಳನ್ನು ಕುಮಾರರ ಕೈಗಿತ್ತನು. ಅವರು ತಂದೆಯಿತ್ತ ಉಡುಗೊರೆಯನ್ನು ಸ್ವೀಕರಿಸಿ ವೃಷಭನ ಕೊರಳಿಗೆ ಒಂದೊಂದು ಮುತ್ತಿನ ಹಾರವನ್ನು ಹಾಕಿ ಉಳಿದವುಗಳನ್ನು ಅವನ ಮಡಿಲೆಡೆಯಲ್ಲಿಟ್ಟರು. ಅರ್ಕಕೀರ್ತಿ ತನ್ನ ಕರಡಿಗೆಗಳನ್ನು ಕೊಂಡಾಗ ಆದಿರಾಜನು ಕೈ ನೀಡಿ ''ಅರಮನೆವರೆಗೆ ನಾನು ಹಿಡಿದುಕೊಳ್ಳುವೆ'' ಯೆಂದನು. ''ಆದಿರಾಜ, ನೀನು ಅಪ್ಪಾಜಿಯೆದುರು ಸಲ್ಲದ ನಡೆಯನ್ನು ನಡೆಸುವುದೆ? ಎಂದು ಅರ್ಕಕೀರ್ತಿ ತನ್ನ ಕರಡಿಗೆಯನ್ನು ಕೊಡಲಿಲ್ಲ. ''ಅಪ್ಪಾಜಿಯನ್ನೇ ಕೇಳಬಾರದೆ? ನಾನೆಂದುದು ತಪ್ಪೋ ಒಪ್ಪೋ?'' ತಂದೆಯದನ್ನು ಒಪ್ಪೆಂದೆ ಒಪ್ಪಿಗೆಯಿತ್ತಾಗ ಆದಿರಾಜನ ಕೈಯೇ ಮೇಲಾಯ್ತು ಅನಂತರ ಅಣ್ಣ ತಮ್ಮಂದಿರು ತಂದೆಗೊಂದಿಸಿ ಹೊರಟರು. ಅಣ್ಣ ಮುಂದೆ. ತಮ್ಮ ಹಿಂದೆ, ಭಾವ ಶುದ್ಧದಲ್ಲಿ ಒಪ್ಪುವ ಮಕ್ಕಳನ್ನು ಕಂಡ ಭರತೇಶ ಹಿಗ್ಗಿದನು. ಅವನು ಮಕ್ಕಳನ್ನು ಪ್ರೀತಿಯಿಂದ ಬೀಳ್ಕೊಟ್ಟು ಚಿತ್ರಾನು ಮತಿಯ ಕೈಯಲ್ಲಿ ಕಂದನನ್ನು ಕೊಟ್ಟು, ರಮಣೀಯವಾದ ಓಲಗದ ಮಧ್ಯದಲ್ಲಿ ಕುಳಿತು ಮೆರೆದನು.

## ೯

# ವಿಜಯಾರ್ಧ ದರ್ಶನ

ಪಡುಗಡಲ ಕುರುವಡ ವ್ಯಂತರೇಂದ್ರನಾದ ಪ್ರಭಾಸಾಮರನು ತನ್ನ ಬಲದೊಡಗೂಡಿ ಬಂದು, ಸಮುದ್ರದಡದಲ್ಲಿ ಲಲಿತ ವಿಮಾನದಿಂದಿಳಿದನು. ತನ್ನ ಬಲವನ್ನೆಲ್ಲ ಅಲ್ಲಿಯೇ ನಿಲ್ಲಿಸಿ, ತಾನು ಭರತೇಶನೋಲಗಕ್ಕೆ ಮುನ್ನಡೆದನು. ಪ್ರಭಾಸಾಂಕನೊಂದಿಗೆ ಅವನ ಕುಮಾರನಾದ ಪ್ರತಿಭಾಸನೂ ಮಂತ್ರಿಶ್ರೇಷ್ಠನೂ ಇದ್ದರು. ಅವನನ್ನು ಕರೆಯಹೋಗಿದ್ದ ಸುರಕೀರ್ತಿ ಧ್ರುವಗತಿಗಳೂ ಅವನೊಂದಿಗೇ ನಡೆದು ಬಂದರು.

ಗೌರವರ್ಣನಾದ ಪ್ರಭಾಸನು ಭೂಷಣದ ಕಾಂತಿಯಿಂದ ಭರತೇಶನ ಕಟಕವನ್ನು ಹೊಕ್ಕು ಮಂತ್ರಿ ಯುವರಾಜರಲ್ಲಿ ಕಪ್ಪಕಾಣಿಕೆಗಳನ್ನು ಹಿಡಿಸಿಕೊಂಡು ಬಂದನು. ತುಂಬಿದ್ದ ಆನೆ, ಕುದುರೆ, ತೇರು, ಕಾಲಾಳುಗಳನ್ನೂ ರತ್ನಮಯರಾದ ದಂಡಧರರನ್ನೂ ಎಡಬಲದಲ್ಲಿ ನೋಡುತ್ತ ವ್ಯಂತರೇಂದ್ರನು ಬಂದನು. ''ತೊಲಗು, ಕುಳ್ಳಿರು, ಧ್ವನಿಮಾಡದಿರು, ಒತ್ತದಿರು, ಮಹಾ ಸಭೆಯಲ್ಲವೆ?'' ಎಂಬ ಮಾತುಗಳಿಂದ ಕಟ್ಟಿಗೆಕೋಲಿನವರು ವ್ಯವಸ್ಥೆ ಮಾಡುವುದನ್ನವನು ಕಂಡನು. ''ಕಲಿಗಳದೇವ, ಚೆಲುವರ ದೇವ, ಜಯ ಜಯ ಚಾಂಗು ಭಲಾ.'' ಎಂದವರು ಹೇಳುವುದನ್ನೂ ಕೇಳಿದನು. ಒಡನೆಯೇ ಇದಿರಲ್ಲಿ ಭರತೇಶನನ್ನು ಕಂಡು ಇವೇನು ನರಪತಿಯೋ, ಸುರಪತಿಯೋ, ಮದನನೊ, ಚಂದ್ರನೊ, ಸೂರ್ಯನೊ'' ಎಂದು ತನ್ನಲ್ಲೇ ಎಣಿಸಿದನು. ಅಷ್ಟರಲ್ಲಿ ಭರತೇಶನ ಬಳಿಗವರು ಬಂದರು. ಇವನು ಪ್ರಭಾಸಾಮರನೆಂದು ಸುರಕೀರ್ತಿ ಧ್ರುವಗತಿಗಳು ತೋರಿಸಿ, ಕೈಮುಗಿದು ಚಕ್ರಿಗೆರೆಗಿದರು.

''ಸ್ವಾಮಿ, ಸಮುದ್ರತೀರದಲ್ಲಿರುವವನು ಪ್ರಭಾಸಾಮರನೆಂದು ತಾವು ಹೆಸರು ಹೇಳಿದ ಮಾತ್ರದಿಂದಲೇ ತಾನು ಧನ್ಯನಾದೆನೆಂದು ಈ ಪ್ರಭಾಸನು ತಿಳಿದಿರುವನು. ಮೊದಲು ಮಾಗಧ ವರತನುಗಳ ಧನ್ಯರಾಗಿ ಮಾಡಿ, ತನ್ನನ್ನು ಉದ್ಧರಿಸಲು ರಾಯರ ರತ್ನನು ಬಂದನೇ–ಎಂದು ನಮ್ಮನ್ನು ಪ್ರೀತಿಯಿಂದ ಕಂಡನು. ನಮ್ಮ ಮೊದಲಿನ ಬಂಧುತ್ವ ಹಾಗಿರಲಿ. ಇಂದು ಸ್ವಾಮಿಯ ಅಭ್ಯುದಯ ವಾರ್ತೆಯನ್ನು ತಂದಿರೇ ಎಂದು ಪ್ರೀತಿಯಿಂದ ಅಪ್ಪಿಕೊಂಡು ನಮಗೆ ಸತ್ಕಾರಮಾಡಿದನು. ಈಗ ಸ್ವಾಮಿಯನ್ನು ಕಾಣುವೆನೆಂದು ಭಕ್ತಿಯಿಂದ ಬಂದಿರುವನು.'' ಎಂದು ಅವರಿಬ್ಬರೂ ಹೇಳಿ ಕೈಜೋಡಿಸಿ ಚಕ್ರಿಯ ಒತ್ತಿನಲ್ಲೇ ಮೌನವಾಗಿ ನಿಂತರು.

ಪ್ರಭಾಸಾಂಕನು ಭರತೇಶನ ಪಾದಗಳಿಗೆ ನಿವಾಳಿಯಿಟ್ಟು ಕಾಣಿಕೆಯೆಂದು ಬೆಳ್ಳಿಯ ಹೂಗಳನ್ನು ಸುರಿಸಿದನು. ಬಂಗಾರ, ಮುತ್ತು ರತ್ನಗಳನ್ನು ಕಪ್ಪವೆಂದೊಪ್ಪಿಸಿದನು. ಆಮೇಲೆ ತನ್ನ ಮಂತ್ರಿ ಯುವರಾಜರೊಂದಿಗೆ ಚಕ್ರಿಯ ಅಡಿಗಳಿಗೆರಗಿದನು.

''ಆದಿತೀರ್ಥೇಶಾಗ್ರಕುಮಾರ ಜಯಜಯ. ಆದಿಚಕ್ರೇಶ ಮಾ ಪಾಹಿ ಭೂದೇವ

ಧನ್ಯೋಸ್ಮಿ'' ಎಂದು ಎರಗಿದವನು ಭರತೇಶನನ್ನು ಸ್ತುತಿಸಿದನು. ಭರತೇಶನು ಅವರನ್ನು ಕರುಣದಿಂದ ಕಂಡು ಏಳಿಯೆಂದೆಬ್ಬಿಸಿದನು. ಪ್ರಭಾಸಾಂಕನು ಸಿಂಹಾಸನದೆದುರು ನಿಂತನು ಮತ್ತೆ ಭರತೇಶನನ್ನು ಕೀರ್ತಿಸಿದನು.

''ಸ್ವಾಮಿ, ನೀನು ಎವೆಯಿಕ್ಕುವ ಇಂದ್ರನು. ಕುಂದದ ಚಂದ್ರನು. ಬಿಸಿಬಿಟ್ಟಿರುವ ರವಿ. ದೇಹವಿರುವ ಮನ್ಮಥ. ಅವನೀಶವೇಷದಿಂದ ಬಂದು ಈ ಜಗತ್ತಿನ ಜಾಡ್ಯವನ್ನು ತೊಳೆದೆ. ಸಾಕೇತಪುರದಲ್ಲೇ ನೀನಿರುತಿದ್ದರೆ ಕಡಲೊಳಗಿರುವ ಅನೇಕ ವ್ಯಂತರರು ಕೆಡುವರೆಂದು ನಮ್ಮ ಉದ್ಧಾರಕ್ಕಾಗಿ ಬಂದಿರುವ ನೀನು ಲೋಕಕ್ಕೆ ಮಂಗಲಸ್ವರೂಪವೇ ಸರಿ. ಮೋಕ್ಷ ಭಾಸ್ಕರನೆ, ನಿನ್ನ ಸೇವೆಯ ಭಾಗ್ಯವೆಲ್ಲರಿಗೆ ದೊರಕದು. ನಮ್ಮ ಪುಣ್ಯಕ್ಕೆ ಸರಿಯಿಲ್ಲಸ್ವಾಮಿ.''

ಅವನಾಗ ಭೂರಮಣನು ಸುಮುಖನೆಂದು ಪ್ರೋತ್ಸಾಹಿಸಿ ಕುಳ್ಳಿರಿಸಿದನು. ಪ್ರಭಾಸನು ತನ್ನ ಮಂತ್ರಿ ಪುತ್ರರೊಂದಿಗೆ ಅಲ್ಲಿ ಕುಳಿತನು. ಭರತೇಶನು ಸುರಕೀರ್ತಿ ಧ್ರುವಗತಿಗಳನ್ನೂ ಕುಳ್ಳಿರಿಸಿ ಬುದ್ಧಿಸಾಗರನನ್ನು ನಿಟ್ಟಿಸಿದನು. ಆ ಮಂತ್ರಿಯಾದರೊ ಕಾಲೋಚಿತವನ್ನರಿತು ನುಡಿದನು.

''ರಾಯನೆ, ಚಿತ್ತೈಸು. ಪ್ರಭಾಸದೇವನು ವಿವೇಕಿ, ನಿರ್ಮಾಯಿ. ನಿಮ್ಮ ಪಾದಪ್ರೀತನು, ಶ್ರೇಯಸ್ಸುಳ್ಳವನು. ನಿಮ್ಮ ಭವ್ಯ ಸೇವೆಯನ್ನು ಪಡೆದಿರುವನು. ಇದಕ್ಕಿಂತ ಮಿಗಿಲಾದ ಸಿರಿ ಯಾವುದಿದೆ? ಅಂದು ಮಾಗಧಾಮರ ವರತನುಗಳಿಬ್ಬರೆ ಪುಣ್ಯಭಾಗಿಗಳಾಗಿದ್ದರು. ಈಗ ಪ್ರಭಾಸೇಂದ್ರನೂ ಕೂಡಿ ಪುಣ್ಯಭಾಗಿಗಳು ಮೂವರಾದರು.''

ಮಂತ್ರಿಯು ಲೇಸನ್ನೇ ಆಡಿದನೆಂದೂ ಆ ಮೂವರು ಸಂತೋಷಗೊಂಡರು. ಸುರಕೀರ್ತಿ ಧ್ರುವಗತಿಗಳು ಮಾಡಿದ ಕೆಲಸವನ್ನೂ ಒಳಿತಾಯ್ತೆಂದು ಮಂತ್ರಿಯು ಪ್ರಶಂಸೆ ಮಾಡಿದನು.'' ಇಂದು ಪ್ರಭಾಸಾಮರನು ಮನೆಗೆ ಹೋಗಲಿ. ಮುಂದೆ ಬೀಡುಬಿಟ್ಟಲ್ಲಿಗೆ ಬರಲಿ.'' ಎಂದು ವಿದ್ಯಾಸಾಗರನು ಹೇಳಿದನು.

ಅನಂತರ ಭರತೇಶನು ಪ್ರಭಾಸಾಂಕನನ್ನೂ ಪ್ರತಿಭಾಸನನ್ನೂ ಅವರ ಮಂತ್ರಿಗಳನ್ನೂ ಬಳಿಗೆ ಕರೆದು ಉಡುಗೊರೆಯಿತ್ತನು. ಅದನ್ನು ಕಂಡು ಸಭೆಯಲ್ಲಿದ್ದ ದೊರೆಗಳೆಲ್ಲ ಮೆಚ್ಚಿದರು. ಚಕ್ರಿಯು ಅವರನ್ನೂ ಉಡುಗೊರೆಯಿಂದ ಮನ್ನಿಸಿದನು. ಸುರಕೀರ್ತಿ ಧ್ರುವಗತಿಗಳನ್ನು ತನಗೆ ತಕ್ಕ ಅವಸರದ ಆಳುಗಳೆಂದು ಹೇಳಿ, ನವರತ್ನಭೂಷಣಗಳನ್ನವರಿಗೆ ಇತ್ತನು. ಆಮೇಲೆ ಪ್ರಭಾಸಾಂಕನನ್ನು ''ನಿನ್ನ ಊರಿಗೆ ನಡೆ.'' ಎಂದವನನ್ನು ಬೀಳ್ಕೊಟ್ಟನು. ಅಷ್ಟರಲ್ಲಿ ಒಸಗೆ, ಒಸಗೆ, ಎಂಬ ಮಾತು ಕೇಳಿಸಿತು. ಅದೇನೆಂದು ತಿಳಿವ ಕುತೂಹಲದಿಂದ ಪ್ರಭಾಸಾದಿಗಳು ಮತ್ತೂ ಅಲ್ಲೇ ಕುಳಿತರು.

ಭರತೇಶನಿತ್ತ ಸಭೆಯಲ್ಲಿ ಮೆರೆದಿರುವಾಗ ಅತ್ತ ಅಂತಃಪುರದಲ್ಲಿ ಶ್ರೀಮಾಲೆ, ವನಮಾಲೆ, ಗುಣದೇವಿ, ಮಣಿದೇವಿ, ಹೇಮಾಜಿಯರೆಂಬ ಪಂಚಕಾಂತೆಯರು ಪಂಚಪುತ್ರರನ್ನು ಪಂಚರತ್ನರಂತೆ ಪಡೆದರು. ಆ ಮಕ್ಕಳು ಕಾಮನ ಪಂಚಶರಗಳಂತೆ ನಗುತಿದ್ದುವು. ಜಾಣನಾದ ದೊರೆಯ ಅರ್ಧಾಂಗಿನಿಯರೂ ಜಾಣತನದಿಂದಲೇ

ಪುತ್ರೋದಯದ ಒಸಗೆಯನ್ನು ಕಳುಹಿಸಿದರು. ಒಸಗೆಯವರು ಒಟ್ಟೊಟ್ಟಿಗೆ ಹೋಗುವುದೊಳಿತಲ್ಲವೆಂದೂ ಒಬ್ಬರ ಹಿಂದೊಬ್ಬರು ಒಂದಿಷ್ಟು ಅಂತರದಲ್ಲಿ ಹೋಗಬೇಕೆಂದೂ ಅದಕ್ಕಾಗಿ ಯೋಗ್ಯರನ್ನೇ ಆರಿಸಿ ಕಳುಹಿಸಿದರು. ನಾರಿಯರು ಏಳೆಂಟು ಮಾರಿಗೊಬ್ಬರಂತೆ ಬರುವ ಆ ಮಾಲೆಯನ್ನು ಕಂಡು ಸುತರಾದ ಕೊಬ್ಬು ಇದೆಂದು ಭರತೇಶನರಿತುಕೊಂಡನು. ಸುತರಾದ ಒಸಗೆ ತಂದ ಆ ದಾಸಿಯರಿಗೆ ಭರತೇಶನೊಂದೊಂದು ಹಾರವನ್ನು ಉಡುಗೊರೆಯಾಗಿ ಕೊಟ್ಟನು.

ಭರತೇಶನಿಗಾದ ಆನಂದವನ್ನು ಅಂತು–ಇಂತು ಹೇಳುವಂತಿಲ್ಲ, ಆದರೆ ಆಸ್ಥಾನವೇ ಅದರಿಂದ ವಿಶೇಷವಾದ ಆನಂದಹೊಂದಿತು.

''ಈ ವಿಶ್ವೋತ್ಸಾಹವನ್ನು ನೋಡದೆ ನಾನು ನನ್ನ ಮನೆಗೆ ಹೋಗುವುದೇ ದೇವ? ನಾನಿಲ್ಲಿದ್ದು ಈ ಉತ್ಸಾಹವನ್ನು ಕಾಣುವೆನು'' ಎಂದು ಪ್ರಭಾಸಾಮರನು ಚಕ್ರಿಯ ಅನುಮತಿ ಪಡೆದನು. ಆಮೇಲವನು ತನ್ನ ಮಂತ್ರಿಗೆ ಉಲುಪೆಗಳನ್ನು ತರಲು ಆಜ್ಞೆಯಿತ್ತು ಕಳುಹಿಸಿದನು.

ಭರತೇಶನು, ಆ ಮೇಲೆ, ಉಚಿತವಾದ ರೀತಿಯಲ್ಲಿ ಎಲ್ಲರನ್ನೂ ಮನ್ನಿಸಿ, ''ಗುರುನಿರಂಜನ ಸಿದ್ಧಾ''ಯೆಂದು ಆಸ್ಥಾನದಿಂದ ಹೊರಟು ಅಂತಃಪುರದತ್ತ ನಡೆದನು. ಐವರು ಮಕ್ಕಳ ಮುಖದರ್ಶನಮಾಡಿ ಉತ್ತಮವಾದ ರೀತಿಯಲ್ಲಿ ಜಾತಕರ್ಮವನ್ನೂ ರಚಿಸಿ ನಾಮಕರಣೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದನು. ಹಂಸರಾಜ, ನಿರಂಜನಸಿದ್ಧರಾಜ, ಮಹಾಂಶುರಾಜ, ರತ್ನರಾಜ, ಸಂಸುಖರಾಜ ಎಂದು ಆ ಮಕ್ಕಳಿಗೆ ನಾಮಕರಣ ಮಾಡಿ ನೆರೆದನು.

ಪಡುಗಡಲ ತಡಿಯಲ್ಲಿ ಬೀಡುಬಿಟ್ಟ ಭರತೇಶನು ಆರು ತಿಂಗಳು ಅಲ್ಲಿಯೇ ತಡೆದನು. ಷಣ್ಮಾಸ ತುಂಬಿದ ಮೇಲೆ ಮಹಾಭೇರಿಯನ್ನು ಮೊಳಗಿಸಿ, ಜಾಣ್ಮೆಯಿಂದ ದಂಡೆತ್ತಿ ಮುನ್ನಡೆದನು. ಹಿಮಗಿರಿಯಲ್ಲಿ ಹುಟ್ಟಿ ಗಂಗೆಯಂತೆ ತೆಂಕುದಿಕ್ಕಿಗಾಕ್ರಮಿಸಿ, ಮತ್ತೆ ಅಪರ ಸಾಗರವನ್ನು ಕೂಡುವುದು ಸಿಂಧುವೆಂಬ ಮಹಾನದಿ; ಚಕ್ರಿಯ ಮಹಾಸೇನೆಯು ಈ ಮಹಾನದಿಯ ಒತ್ತ ಹಿಡಿದು ಸಾಗಿತ್ತು. ಇಚ್ಛೆಯಾದಲ್ಲಿ ಬೀಡುಬಿಟ್ಟು ನಿರ್ಮಲವಾದ ನೀರು ನೆರಳುಗಳ ಆಶ್ರಯ ಪಡೆದು ಚಕ್ರಿಯ ಮಹಾಸೇನೆಯು ಮ್ಲೇಚ್ಛರ ಮೇಲೇರಿ ಮುಂದುವರಿಯಿತು.

ಅಗಣಿತ ಪುಣ್ಯಭಾಗಿಯಾದ ಭರತೇಶನು ಈ ಪಯಣದಲ್ಲಿ ಪಡೆದ ಮಕ್ಕಳಿಗೆ ಉಪನಯನ ಮುಂತಾದ ಕ್ಷತ್ರಿಯ ಕ್ರಿಯೆಗಳನ್ನು ಮಾಡಿಸುತ್ತ ಮುಂದೊತ್ತಿದನು. ಹಾಗೆ ಮುಂದೊತ್ತುವಾಗ ತಗ್ಗುತೆವರನ್ನಾಗಲೀ ತರುಗಿರಿಯನ್ನಾಗಲೀ ದಂಡಾಯುಧವು ಗಣಿಸದೆ ನುಗ್ಗಿ ಒತ್ತಿನಡೆಯುತ್ತಿತ್ತು, ಹಿರಿದಾದ ಪರ್ವತವು ಬಯಲು ಭೂಮಿಯಲ್ಲಿ ನಡೆದಂತೆ ಭರತೇಶನ ಸೇನೆ ಸಾಗುತ್ತಿತ್ತು. ಆ ಸೇನಾಚಲನೆಯಲ್ಲಿ ಘಟ್ಟಬೆಟ್ಟಗಳೆಲ್ಲವೂ ಸಮತಟ್ಟಾದುವು. ಆ ಕಟಕದ ಚಲನೆಯೆಂದರೆ ಕುಡಿದ ನೀರು ಅಲ್ಲಾಡದಂತೆ, ಉಸಿರು ಉಬ್ಬಸಗಳ ಆಯಾಸವಾಗದಂತೆ. ಸೇನೆಗಿದಿರಾದ ಗಿರಿಯನ್ನೊಡೆವಾಗ ಸಿಕ್ಕಿದ

ನಿಧಿಯೆಲ್ಲವೂ ಸೇನಾಪತಿಗೆಂದು ಭೂನಾಥನು ನೇಮಿಸಿದನು. ಅವನಿಗೆ ಅದೇನು ಘನವೇ? ಮೂಡದಿಕ್ಕನ್ನು ಹಿಡಿದು ಮುನ್ನಡೆದ ಕಟಕವು ಮುಂದೆ ಬಡಗುಮುಖವಾಗಿ ಚಲಿಸಿತು. ಚಕ್ರೇಶನು ಸಿಂಧೂನದಿಯ ಸೊಬಗನ್ನು ನಲ್ಮೆಯಿಂದ ನೋಡುತ್ತ ಹೋದನು.

ಹೀಗೆ ರಿಪುರಟ್ಟಡಿಕಾರನು ಬಿಟ್ಟಲ್ಲಿ ಬಿಡದೆ, ದಂಡೆತ್ತಿ ನಡೆದರು. ದಿಟ್ಟಿಗಳಿಗೆ ರಮ್ಯವೆನಿಸುವ ಬೆಳ್ಳಿಯ ಬೆಟ್ಟವನ್ನು ಕಂಡನು. ಅದು ನಾಡಾಡಿ ಗಿರಿಯಲ್ಲ. ವಿಜಯಾರ್ಧ ಗಿರಿಯದು. ಮೇಘವನ್ನು ಮುಟ್ಟುವಂತೆ ಇತ್ತು, ಅದು ಮೂಡುಪಡು ಸಾಗರಗಳನ್ನು ಮುಟ್ಟಿ ಬೆಳ್ಳಿಯ ಗೋಡೆಯಂತಿದೆ. ಆ ಗಿರಿಯ ತಪ್ಪಲಲ್ಲಿ ನೂರಹತ್ತು ಪಟ್ಟಣಗಳು ಮೆರೆದಿವೆ. ಅವುಗಳಲ್ಲಿ ವಿದ್ಯಾಧರರಿರುವರು. ಆ ಪುರಗಳಲ್ಲಿ ಗಗನವಲ್ಲಭಪುರ, ರಥನೂಪುರಚಕ್ರವಾಳಪುರವೆಂಬೆರಡು ಅಗ್ಗಳವಾದ ಪುರಗಳು. ಅಲ್ಲಿ ನಮಿರಾಜನು ಅಧಿರಾಜನಾಗಿಯೂ ವಿನಮಿರಾಜನು ಯುವರಾಜನಾಗಿಯೂ ಖಚರರನ್ನೆಲ್ಲ ಕಾಲಿಗೆರಗಿಸಿಕೊಂಡು ರಾಜ್ಯವಾಳುತ್ತಿದ್ದಾರೆ. ಆ ಸೋದರರಿಬ್ಬರೂ ಭರತೇಶನ ಸೋದರಮಾವನ ಮಕ್ಕಳು. ವಿಜಯಾರ್ಧದ ತುದಿಯಲ್ಲಿ ಕಿನ್ನರರೂ ಸಿದ್ಧರೂ ಯಕ್ಷರೂ ಇರುವರು. ಇವರೆಲ್ಲರ ಅರಸಾಗಿ ವಿಜಯಾರ್ಧ ಕುಮಾರನಿರುವನು.

ವಿಜಯಾರ್ಧಗಿರಿಯ ಮಧ್ಯದ ಗಂಗಾನದಿ ಹರಿಯುವ ಸುಧಾಂಗಣವು ಒಂದು ಖಂಡ. ಸಿಂಧುನದಿಯ ವಿಜಯಾರ್ಧಮಧ್ಯಾಂಗದ ಭೂಮಿಯು ಒಂದು ಖಂಡ. ಆ ಎರಡು ಖಂಡಗಳೂ ಮ್ಲೇಚ್ಛಖಂಡಗಳು; ಮತ್ತೆ ಅವುಗಳ ತೆಂಕಣ ದಿಕ್ಕಿನಲ್ಲಿ ಲವಣಾಬ್ಧಿವರೆಗೆ ಮೆರೆಯುವುದೇ ಆರ್ಯಾಖಂಡ. ಈ ಮೂರು ಖಂಡಗಳೂ ವಿಜಯಾರ್ಧದ ದಕ್ಷಿಣಕ್ಕಿರುವುವು. ಉತ್ತರದಲ್ಲೂ ಮೂರು ಖಂಡಗಳಿವೆ. ವಿಜಯಾರ್ಧ ಗಿರಿಯ ಉತ್ತರ ದಿಕ್ಕಿನಲ್ಲಿ ಪೂರ್ವಾಪರ ಸಾಗರಗಳಿವೆ. ಅವುಗಳಿಗೆ ತಾಗಿ ಮತ್ತೊಂದು ಅಡ್ಡಗೋಡೆಯಂತೆ ಹೇಮಾದ್ರಿಯಿರುವುದು. ಈ ಎರಡು ಬೆಟ್ಟಗಳ ನಡುವೆ ಪೂರ್ವದಿಂದ ಪಶ್ಚಿಮದವರೆಗೆ ನೀಡಿಕೊಂಡು ಮೂರು ಖಂಡಗಳು ರಾಜಿಸುತ್ತವೆ. ಈ ಭರತ ಷಟ್ ಖಂಡಗಳನ್ನು ಆಳುವ ದಕ್ಷನೇ ನಮ್ಮ ಭರತ ಚಕ್ರೇಶನು.

ಕೋಟೆಯಂತಿರುವ ವಿಜಯಾರ್ಧಕ್ಕೆ ವಜ್ರಕವಾಟವು ಭದ್ರವಾಗಿರುವುದು. ಅದನ್ನೊಡೆದು ಅಖಿಳ ಸೇನೆಯನ್ನೂ ದಾಟಿಸಬೇಕಾಗಿದೆ. ಭರತೇಶನು ಅದನ್ನು ಯೋಚಿಸಿ ಸೇನಾಚಕ್ರದ ಮುಖ್ಯನನ್ನು ಕರೆದು ಅದನ್ನವನಿಗೆ ತಿಳಿಸಿದನು.

"ಖೇಚರಗಿರಿಯ ಈ ಕಡೆಯಲ್ಲಿ ಹನ್ನೆರಡು ಯೋಜನದಲ್ಲಿ ಸಂಕೋಚದ ಅಗಳನ್ನು ತೆಗೆಸು. ಇಂದು ನೀನು ಬೀಡಿನಲ್ಲೇ ಇದ್ದು, ನಾಳೆ ನಿನ್ನ ತಮ್ಮಂದಿರನ್ನು ಇಲ್ಲಿನ ಮಂದಿರಗಳ ರಕ್ಷಣೆಗಿರಿಸಿ ವ್ಯಂತರ ಸೇನೆಯನ್ನು ಕೂಡಿಕೊಂಡು ಹೋಗಿ ಆ ಅಗಳ ಕೆಲಸ ಸಾಧಿಸು. ವಜ್ರಕವಾಟದ ಮುಚ್ಚಿದ ಪಡಿಯನ್ನು ತೆಗೆಯುವಾಗ ಅದರೊಳಗಿರುವ ಕಿಚ್ಚು ಹನ್ನೆರಡು ಗಾವುದುಕ್ಕೆ ಹಾರುವುದು. ಅದು ಮುಂದೊತ್ತಿಬಾರದಂತೆ ಎಚ್ಚರದಿಂದ ಕಾರ್ಯವೆಸಗಬೇಕು. ದಂಡರತ್ನದಿಂದ ವಜ್ರಬಂಧವನ್ನು ತಾಟಿಸಲು ಕೆಂಡ ಸೂಸುವುದು ಚೋದ್ಯವಲ್ಲ. ಕಟ್ಟಿಗೆ ಒಂದಕ್ಕೊಂದು ತಾಗಿ ಉರಿದರೆ ಕಾಡನ್ನೇ ಸುಡುವುದಿಲ್ಲವೇ?

ಕಾಲುವೆ ತೆಗೆಯದಿದ್ದರೆ ಕಿಚ್ಚು ಮುಂದೊತ್ತಿ ಬಂದು ನಮ್ಮ ಪಾಳೆಯವೇ ಓಡಬೇಕಾದೀತು. ಇದು ನಮ್ಮ ಕಡೆಗೆ ಬೆಂಕಿ ಬಾರದಂತೆ ಮಾಡುವ ಬಗೆ. ಆ ಬೆಂಕಿಯು ಸಿಂಧು ನದಿಯಿಂದ ಪಡುದಿಕ್ಕಿಗೆ ಹತ್ತಿದರೆ ಪ್ರಳಯಾಗ್ನಿಯಂತೆ ಇಳೆಯನ್ನೇ ಸುಡುವುದು. ಆದ್ದರಿಂದ ಅದಕ್ಕೂ ಕಾಲುವೆಯನ್ನು ತೆಗೆಸು.''

ಅನಂತರ ಭರತೇಶನು, ವ್ಯಂತರಾಗ್ರಣಿಯರಾದ ಪ್ರಭಾಸಾಂಕ, ವರತನು ಮುಂತಾದವರನ್ನು ಕರೆಯಿಸಿ, ಸೇನಾಪತಿಯೊಂದಂತೆ ಸಹಕರಿಸಿ ಕಾರ್ಯವೆಸಗಬೇಕೆಂದು ನೇಮಿಸಿದನು.

ವಿಜಯಾರ್ಧಗಿರಿಯ ಇದಿರಿನಲ್ಲೇ ಭರತೇಶನು ಬೀಡುಬಿಟ್ಟನು. ಅವರವರಿಗೆ ತಕ್ಕಂತೆ ಅಲ್ಲಲ್ಲಿ ಮನೆಗಳಾದುವು. ಅದೊಂದು ಹೊಸ ನಗರವೇ ಆಯಿತು. ಭರತೇಶನು ಎಲ್ಲರನ್ನೂ ಅವರವರಿಗೆ ಗೊತ್ತಾಗಿದ್ದ ಮನೆಗಳಿಗೆ ಕಳುಹಿಸಿ, ತಾನು ರಾಜಗೃಹವನ್ನು ಹೊಕ್ಕನು.

## ೧೦

# ಕವಾಟವಿಸ್ಫೋಟನ

ಅಗಳನ್ನು ತೆಗೆದು ನೀರು ತುಂಬಿದರು. ಅದಾಗಿ ಎಂಟನೆಯ ರಾತ್ರಿ, ಜಯರಾಜನು ಮಾಗಧಾದಿ ವ್ಯಂತರರನ್ನು ಕೂಡಿಕೊಂಡು ಬಂದು ಭರತೇಶನೊಡನೆ ಬಿನ್ನವಿಸಿದನು. ಭರತೇಶನದನ್ನು ಆಲಿಸಿ, ಲೇಸೆಂದು ಅವರಿಗೆ ತಕ್ಕ ಉಡುಗೊರೆಗಳನ್ನಿತ್ತು ಮನ್ನಿಸಿ ಬೀಳ್ಕೊಟ್ಟನು.

ಮರುದಿನ ರಾಜೇಂದ್ರನು ದಳಪತಿಯನ್ನೂ ಸಚಿವರನ್ನೂ ಕರೆಸಿಕೊಂಡು ಕಳಧೌತ ಗಿರಿಯ ಕವಾಟವನ್ನೊಡೆಯುವ ಕಲೆಯನ್ನವರಿಗೆ ಬಿತ್ತರಿಸಿದನು— "ವಿಜಯಾರ್ಧ ಗಿರಿಯಲ್ಲಿ ಹಾಕಿದ ಪಡಿಯನ್ನು ಒಣಗಿದ ಹಾಳೆಯನ್ನೊಡೆಯುವಂತೆ ನಾಳೆ ಹೋಳು ಮಾಡುವೆನು. ಆ ದ್ವಾರಬಂಧವನ್ನೊಡೆಯುವುದು ನನಗೊಂದು ದೊಡ್ಡ ಕೆಲಸವಲ್ಲ. ಆ ರೀತಿಯಲ್ಲಿ ಪೂರ್ವಾರ್ಜಿತ ಪುಣ್ಯದ ಪ್ರೇರಣೆಯಿದೆ. ಅದನ್ನಾರು ಮೀರುವರು? ಕೋಸಲದಲ್ಲಿ ನಾನು ಜನಿಸಬೇಕು; ದಂಡೆತ್ತಿಬಂದು ಈ ಶೈಲವನ್ನು ದಾಟಿ ಮುಂದೆ ದೇಶಾಧಿಪತಿಗಳನ್ನು ಆಳಬೇಕೆಂಬುದು ಆದೇಶವಲ್ಲವೇ? ಆದ್ದರಿಂದ ನಮ್ಮನ್ನು ಗೆಲ್ಲುವವರು ಯಾರಿದ್ದಾರೆ? ಶ್ರೀ ಹಂಸನಾಥನನ್ನು ನೆನೆಯುತ್ತ ನಡೆಯುವಾಗ ಉತ್ಸಾಹವಲ್ಲದೆ ಚಿಂತೆಯಿಲ್ಲ. ಸಾಹಸ, ಸಾರುವುದಲ್ಲದೆ ಭೀತಿ ಸಾರಿಬರುವಂತಿಲ್ಲ. ಇದೊಂದು ಮಹಾತ್ಮ್ಯವೆಂದು ನೀವು ನಂಬಿ."

ದಳಪತಿ ಸಚಿವರು ಭರತೇಶನ ನುಡಿಯನ್ನು ನಂಬಿದರು. "ಹಂಸನಾಥನನ್ನು ನೋಡಿ ಕರ್ಮವನ್ನೊಡೆಯುವುದೂ ಪ್ರಾಂಶುವಜ್ರದ ಕವಾಟವನ್ನು ಧ್ವಂಸ ಮಾಡುವುದೂ ನಿನ್ನಿಂದ ಸಾಧ್ಯ, ಉಳಿದವರಿಗೆ ಅದೇನು ಸಾಧ್ಯವೇ? ಆನೆ ಕೇಸರಿಗಳಿಗೆ ಅಡಿನಂತಿರುವುದು. ಅಡಿಗಾದರೆ ಆಕಾಶದಷ್ಟು ಉದ್ದವಾಗಿರುವುದು. ನೀನದನ್ನು ಸದರವಾಗಿ ಕಂಡೆ. ಉಳಿದ ರಾಜರಿಗೆಲ್ಲ ಅದು ಸಾಧ್ಯವೇ?" ಎಂದವರು ಭರತೇಶನನ್ನು ಕೊಂಡಾಡಿದರು.

ಅವರಿಬ್ಬರಿಗೂ ಭರತೇಶನು ಉಡುಗೊರೆಯಿತ್ತು ಬೀಡಿಗೆ ಕಳುಹಿಸಿದನು. ಹತ್ತನೆಯ ದಿನದ ಬೆಳಗಿನ ಹೊತ್ತಿನಲ್ಲಿ ಜಿನಪೂಜೆ ಮಾಡಿ ಹೊರಟನು.

ರಾವುತ್ತರೀಪಿಯಿಂದ ಹೊರಟ ಭರತೇಶನು ಸೊಗಸ ಸುಂದರನಾಗಿ ತೋರಿದನು. ಬಿಗಿದುಟ್ಟ ಕಾಸೆ ಚಲ್ಲಣಗಳು, ಜಗುಳೆ ಗಂಟಿಕ್ಕಿದ ಬಿಗುವಿನ ಕುಲ್ಲಾಯಿ, ಮೃಗಮದದ ಲೇಪನ, ಕಿವಿಯಲ್ಲಿ ಹೊಳೆವ ಒಂಟಿಗಳು, ಹಣೆಯಲ್ಲಿ ತಿಲಕ—ಇವುಗಳಿಂದ ರಾಜೇಂದ್ರನು ಸೊಬಗನಾದನು. ಆ ಗಂಡುಗಲಿಯು ಪೆಂಡೆಯವನ್ನು ಧರಿಸಿದ್ದನು.

ಸೊಂಟದಲ್ಲಿ ಹೊನ್ನಿನ ಸರಿಗೆಯು ಹೊಳೆಯುತ್ತಿತ್ತು. ಕಂಕಣ ತಾವುಜಗಳಿಂದ ವೀರಲಕ್ಷ್ಮಿಯ ಬಿಂಕದ ನಲ್ಲನಂತೆ ಕಂಗೊಳಿಸಿದನು. ನಡುವನ್ನು ಬಳಸಿ ಬಂದ ದೂವಟದ ವಲ್ಲಿಯು ಅವನ ಎಡದ ತೋಳನ್ನು ಸುತ್ತಿ ನಿಮಿರಿತ್ತು. ಹಾವುಗೆ ಮೆಟ್ಟಿ ವೀಳೆಯವನ್ನು ಕೊಂಡು ಬೆಡಗಿನಿಂದ ಭರತೇಶನು ಬಂದನು. ಬಂದವನೇ ಸಿಂಗರಿಸಿದ ಪವನಂಜಯ ಕುದುರೆಯನ್ನು ಮುಂಗಡೆಯಲ್ಲಿ ನಿಂತು ಪರೀಕ್ಷಿಸಿ ಹಿಂಗಡೆಯಿಂದ ಹಾರಿ ಕುಳಿತನು. ದೂವಟದ ಎರಡು ಸೆರಗುಗಳನ್ನೂ ಹಾರಿಬಿಟ್ಟು, ವಾಘೆಯನ್ನು ಹಿಡಿದುಕೊಂಡನು. ನವರತ್ನಮಯ ಸಂಜೋಗವೊಪ್ಪುತ್ತಿರುವ ತೇಜಿಯನ್ನು ಹಿಡಿದುಕೊಂಡನು. ನವರತ್ನಮಯ ಸಂಜೋಗವೊಪ್ಪುತ್ತಿರುವ ತೇಜಿಯನ್ನು ಹತ್ತಿದ ಭರತೇಶನು ಉಚ್ಚೈಶ್ರವವನ್ನು ಹತ್ತಿದ ಅಮರೇಂದ್ರನಂತೆ ಮೆರೆದನು. ಪಚ್ಚೆ ಬಣ್ಣದ ಸುಲಕ್ಷಣಗಳಿಂದೊಪ್ಪುವ ಕುದುರೆಯದು. ಉದಯರವಿಗೆ ಏಳು ಕುದುರೆಗಳೆಂದು ಕವಿಗಳು ಕಲ್ಪಿಸಿ ಹೇಳುವುದುಂಟು. ಏಳರಲ್ಲಿ ಒಂದನ್ನೇ ಆರಿಸಿಕೊಂಡು ಏರಿಬಂದಂತೆ ಭರತೇಶನಲ್ಲಿ ತೋರಿದನು. ರಾಜೇಂದ್ರನ ತೊಡೆಸೋಂಕಿದೊಡನೆ ಆ ಕುದುರೆಯು ತವಕದಿಂದ ತತ್ತರಿಸಿ ಕುಣಿಯಿತು.

ಕುದುರೆಯೇರಿ ಚಕ್ರಿಯು ಪಾಳೆಯವನ್ನು ಬಿಟ್ಟು ಒಂದೆರಡು ಬೀದಿಗಳಲ್ಲಿ ರಾವುತಿಕೆ ಮಾಡಿದನು. ಲಯ, ಧಾರೆ, ಗತಿ, ಜವ, ಭಾವಕಗಳೆಂಬ ಹಯದ ಐದು ಪದ್ಧತಿಗಳನ್ನು ಅನುಸರಿಸಿ ಏಳು ರೀತಿಯ ಸವಾರಿಯ ಸೊಬಗನ್ನು ರಾಜೇಂದ್ರನು ತೋರಿಸಿದನು. ಭರತೇಶನ ಮೊದಲ ಸೂಚನೆಯಂತೆ ಆ ಕುದುರೆಯು ಗಗನದಲ್ಲಿ ಮಿಂಚು ಡೊಂಕಾಗಿ ಹರಿವಂತೆ ಹರಿದಾಡಿತು. ಎಡಬಲಗಳಿಗೆ ತಿರುಗುತ್ತ ಅತಿವೇಗದಿಂದ ತಲೆಯಲ್ಲಾಡಿಸುವ ಆ ಕುದುರೆಗೆ ಅಗಣಿತ ಮೊಗವೋ ಎಂಬಂತೆ ತೋರಿತು. ಸೂರ್ಯನ ಪರಮಂಡಲದಂತೆ ತೋರಿತು. ಬೊಗರಿಯಂತೆ ಸುತ್ತುತ್ತಿರುವ ರಾಜೇಂದ್ರನ ತೇಜಿಯು ನೋಡುವವರಿಗೆ ಅದೇ ಒಂದು ರಮ್ಯವಾಯಿತು.

ಹದಿನೆಂಟು ಕೋಟಿ ಕುದುರೆಗಳ ಸೇನೆಯ ಬಲಭಾಗದಲ್ಲಿ ಮದದಾನೆಗಳೂ ಎಡಭಾಗದಲ್ಲಿ ರಥಗಳೂ ಮೆದೆಗಟ್ಟಿ ಸಾಲಾಗಿ ನಿಂತಿರಲು ಅವುಗಳ ಮಧ್ಯದಲ್ಲಿ ಭರತೇಶನು ಅಶ್ವವೇರಿ ಮೆರೆದನು. ವಾದ್ಯಗತಿಯಂತೆ ಕುದುರೆ ಕುಣಿದು ಮುಂದುವರಿಯಿತು. ಆ ಹಯವು ಬಿರುಗಾಳಿಯಂತೆ ಹರಿಯುತ್ತ ಹುಲ್ಲೆಯಂತೆ ಕುಣಿಯುತ್ತ, ಸೇನೆಯನ್ನು ಬಿಟ್ಟು ಮುಂದೋಡಿತು. ಓಡುವಾಗ ಅದು ಬಂಗಾರದ ಬಾಣವೇ ಸರಿವಂತೆ ಕಾಣುತಿತ್ತು. ಮಹಾಸೇನೆಯಿಂದ ದೂರ ಸರಿದು ಹೋದ ಕುದುರೆಯು ಅಲ್ಲಲ್ಲಿ ನಿಂತು ಮುಂದುವರಿಯುತ್ತಿತ್ತು. ಭರತೇಶನೇರಿದ ಕುದುರೆಯು ನಾಲ್ಕು ದಿಕ್ಕುಗಳಿಗೂ ನುಗ್ಗಿ ನಡೆಯಿತು. ತನ್ನೊಡೆಯನ ಸೂಚನೆಯಂತೆ ಅದು ಹಾರಿ ಗಗನಕ್ಕೇರಿತು. ಬುರಬುರನೆ ಆಕಾಶಕ್ಕೇರಿದ ತುರಗವು ಗರಗರನೆ ಧರೆಗಿಳಿಯಿತು. ಗರುಡನನ್ನೇರಿ ವೈಹಾಳಿ ಮಾಡುವ ಚಕ್ರಧರನಂತೆ ಭರತೇಶನು ಆ ಕುದುರೆಯ ಮೇಲೊಪ್ಪಿದನು.

ಏಳು ರೀತಿಯ ವೈಹಾಳಿಯಲ್ಲಿ ಮೆರೆದ ಭರತೇಶನು ಬಿಸಿಲುರಿಯೇಳುವ ಮೊದಲೇ

ತನ್ನ ಪಾಳೆಯಕ್ಕೆ ಸನ್ನೆ ಮಾಡಿ ನಿಲ್ಲಿಸಿದನು. ಅನಂತರ ವಿಜಯಾರ್ಧ ಶೈಲಕ್ಕೆ ದಾರಿ ತೆಗೆದನು. ಸೇನೆಯೊಂದಿಗೆ ಸೇನಾಪತಿಯು ನಿಂತನು. ಗಣಬದ್ಧರೊಡಗೂಡಿ ನೃಪತಿಯು ಮುಂದುವರಿಯುತ್ತಿರಲು ಮಾಗಧಾದಿ ವ್ಯಂತರರು ಅವರನ್ನು ಹಿಂಬಾಲಿಸಿದರು. ತಮ್ಮೊಡೆಯನನ್ನು ಬಿಟ್ಟು ನಿಲ್ಲುವರೆ ಆ ಸೇವಕರು? ಸೋಪಾನವಿಡಿದು ಅಲ್ಪ ದೂರ ಹತ್ತಲು ಪರ್ವತದ ಗರ್ಭಕ್ಕವರು ಬಂದರು. ಅಲ್ಲಿಯೇ ಆಪತ್ತಿನಂತಿರುವ ವಜ್ರ ಕವಾಟವನ್ನು ಭರತೇಶನು ಕಂಡನು. ಆ ಪರ್ವತವು ಇಪ್ಪತ್ತೈದು ಗಾವುದ ಉದ್ದವಾಗಿದೆ. ಅವರ ಕಿಬ್ಬಸಿರಿನಲ್ಲಿರುವ ಕದದ ಎತ್ತರವು ಎಂಟುಗಾವುದ, ಅಗಲವು ಹನ್ನೆರಡಗಾವುದ. ಭರತೇಶನದನ್ನು ದಿಟ್ಟಿಸಿ ನೋಡಿದನು; ದಟ್ಟಿಸಿ ಪರಾಂಬರಿಸಿದನು. ಆ ಗುಹೆಯ ತೆಂಕುಬಡಗುಗಳಲ್ಲಿ ಭೇರಿಯನ್ನು ಮುಚ್ಚಿದ ಚರ್ಮದಂತೆ ಎರಡು ಕವಾಟಗಳಿದ್ದುವು. ರೌದ್ರಾಗ್ನಿಯೊಳಗಿದ್ದು ಬಿಗಿದಿರುವ ಆ ಬಾಗಿಲು ಪಡಿಯನ್ನು ಚಿದ್ರೂಪನಾದ ಭೂಪನು ನಿಟ್ಟಿಸಿ ನೋಡಿದನು. ಭರತೇಶನು ತಿಮಿಸ್ರನಾಮ ಗುಹೆಯ ವಿಚಾರವನ್ನು ಮಾಗಧ ವರತನು ಪ್ರಭಾಸಾಂಕರಿಗೆ ತಿಳಿಸಿದನು. ''ಇಲ್ಲಿ ಪಡಿಗಳೆರಡು ಜೋಡಿಸಲ್ಪಟ್ಟಿವೆ. ಒಳಗಿನಿಂದ ಅಗಳಿ ಜಡಿದಿರುವರು.ಇಲ್ಲಿಗೆ ತಿವಿದರೆ ಅಗಳಿಯೊಡೆದು ಬಾಗಿಲು ತೆರೆವುದು.'' ಎಂದು ಭರತೇಶನು ಅವರಿಗೆ ಕುಟ್ಟಿತೋರಿದನು. ''ಹಲ್ಲನ್ನು ಜೋಡಿಸಿದಂತಿರುವ ಗುಹೆಯ ಹಲ್ಲನ್ನು ಮುರಿದು ಬಾಯಿ ಬಿಡಿಸುವೆನು, ನೋಡಿರಿ'' ಎಂದು ಭರತೇಶನು ನಕ್ಕನು. ''ಮಂಜಿನ ಮೊತ್ತಮಕ್ಕಳನ್ನು ಅಂಜಿಸುವುದು. ಜಂಜಡರಿಗೆ ವಜ್ರವಾಗಿದ್ದುದು ಚಕ್ರಿಗೆ ಹುಸಿಹಂಜಿಯಂತೆ ಕಂಡಿತು. ಕತ್ತಲೆಯ ಮೊತ್ತ ರವಿಗೆ ಅಲ್ಪವಾಗಿರುವುದು. ಸೊಡರುಗಳಿಗೆ ಅಲ್ಪವಾಗುವುದೇ? ಪೊಡವಿಗೆಲ್ಲ ಬಲ್ಪಾಗಿರುವುದು ನಿಮಗೆ ಅಲ್ಪವಾಗಿದೆ'' ಎಂದು ವ್ಯಂತರ ನಾಯಕರು ನುಡಿದರು.

''ನೀವಿನ್ನು ಬೇಗನೆ ಆ ಕಡೆಗೆ ಸರಿಯಿರಿ. ಅಗಳ ಮುಂಗಡೆಗೆ ಹೋಗಿರಿ.'' ಎಂದು ಭರತೇಶನು ತನ್ನವರಿಗೆ ಸೂಚನೆಗೊಟ್ಟು ಕಡುಪಿನ ದಂಡಾರತ್ನಾಯುಧವನ್ನು ಅಧಿಕವಾದ ಶೌರ್ಯದಿಂದ ಕೈಗೆತ್ತಿಕೊಂಡನು. ಹಾರೆಯಾಕಾರದ ಚಂಡವೇಗವೆಂಬ ಆಯುಧವನ್ನು ರಾಯನು ತನ್ನ ವೀರಭುಜದಿಂದ ತೂಗಿ ನೋಡಿ, ತನ್ನ ಕುದುರೆಯ ಮುಖವನ್ನು ತೆಂಕು ದಿಕ್ಕಿಗೆ ತಿರುಗಿಸಿಕೊಂಡನು. ಭರತೇಶನು ಷಟ್ಪದ್ಮದ ಅಕ್ಷರಗಳನ್ನು ನೋಡಿ ಪುರುಜಿನನ ಚರಣಗಳನ್ನು ನೆನೆದು ಹೃದಯದಲ್ಲಿ ಹಂಸನಾಥನನ್ನು ಭಾವಿಸಿದನು. ಎಡಗೈಯಲ್ಲಿ ವಾಘೆಯನ್ನು ಹಿಡಿದು ಬಲಗೈಯಲ್ಲಿ ದಂಡಾಯುಧವನ್ನು ಧರಿಸಿ ಆ ಮುದ್ರಿಸಿದ ಕವಾಟವನ್ನು ತಿವಿದು ಒಡೆಯಲು ತೂಗಿನಿಂತನು. ಒಡನೆ ಹಿಂಚಾರಿಯಲ್ಲಿ ತೂಗಿ ತಿವಿದನು. ಕೂಡಲೆ ಕವಾಟದ ಪಡಿಯು ಹಂಚಿನಂತೆ ಎರಡು ಹೋಳಾಯಿತು. ಕಂಚಿನ ಬೆಟ್ಟವೇ ಹೋಳಾದಂತೆ ಧ್ವನಿಯಾಯಿತು. ಆಗ ಭರತೇಶ್ವರನ ಅಶ್ವವು ಮಿಂಚಿನಂತೆ ಲಂಘಿಸಿತು.

ಭರತೇಶನು ವಜ್ರಾಯುಧದಿಂದ ವಜ್ರಕವಾಟವನ್ನು ಹೊಡೆಯಲು ಸಿಡಿಲು ಸಿಡಿಲನ್ನೇ ತಾಗಿದಂತಾಯಿತು. ಮಹಾಭರ್ಟಿ ಮಸಗಿತು. ಚಕ್ರಿಯು ಬಡಿದು ಹೊಡೆದ

ಭರಕ್ಕೆ, ಕದವು ಒಡೆದ ಭರಕ್ಕೆ, ವಿಜಯಾರ್ಧವೇ ನಡುಗಿತು. ನೆಲ ಅದುರಿತು. ಕಡಲುಗಳು ಉಕ್ಕಿ ತುಳುಕಿದುವು. ತಳಿಗೆಯನ್ನು ಕೋಲ ತುದಿಯಿಂದ ಕುಟ್ಟುವಂತೆ ವಜ್ರಕವಾಟವನ್ನು ಭರತೇಶನು ನಿಮಿಷದಲ್ಲಿ ಹೋಳುಗುಟ್ಟಿದನು. ಪಡೆನಡೆಯಲು ಅಡ್ಡವಾಗಿದ್ದ ವಜ್ರದ ಪಡಿಯನ್ನು ಚಕ್ರಿಯು ಈ ರೀತಿಯಲ್ಲಿ ಒಡೆದುಬಿಟ್ಟನು. ಬೆಟ್ಟವನ್ನೇ ಮುಚ್ಚಿಕೊಂಡಿರುವ ಕವಾಟ ಬಂಧವು ಒಂದೇ ಪೆಟ್ಟಿನಲ್ಲಿ ಇಬ್ಭಾಗವಾಯಿತು. ಬರಸಿಡಿಲು ಎರಗಿದರೆ ಹಾಸುಗಲ್ಲು ಬಿರಿಯುವಂತೆ ಸೀಳಾಯಿತು. ಮೊರೆಯಿಡುವಂತೆ ಘಿರ್ರೆಂದು ಘೀಳಿಡುತ್ತ ವಜ್ರಕವಾಟವು ತೆರೆಯಿತು. ಆ ಕವಾಟವನ್ನು ಜಜ್ಜರಿಸಿದಾಗ ಬೆಂಕಿಯು ನಾಲಗೆ ಇಜ್ಜಾಡಿಸುತ್ತ ಹಬ್ಬಿತು. ತೂಬನ್ನು ತೆರೆದರೆ ನೀರು ನೆಗೆವಂತೆ ಗುಹೆಯಲ್ಲಿ ತುಂಬಿದ್ದ ಬೆಂಕಿ ಭೂಪತಿಯ ಬಳಿಗೆ ನಾಲಗೆ ನೀಡಿತು. ಆಗ ಭರತೇಶನ ಅಶ್ವವು ಮೂರು ಹಾರು ಹಾರಿತು. ಬುಸ್ಸೆಂದು ಬೆಂಕಿ ಹಬ್ಬಿದಾಗ ಕುದುರೆಯು ಗಾಳಿಯಂತೆ ಹೆದರಿ ಸರಿಯಿತು. ತೆಂಕುಮುಖದಿಂದ ನಿಂತಿದ್ದ ಕುದುರೆ ಲಂಘಿಸುವಾಗ ಡೊಂಕಿ ಹಾರಿತು. ಸಿಂಧು ಮಧ್ಯಕ್ಕೆ ಕುದುರೆ ಬೀಳುವುದೆಂಬಂತೆ ಆಗಲು ಭರತೇಶನು ಚದುರಿನಿಂದ ಕುದುರೆಯ ಮುಖವನ್ನು ಎಡಗೈಯಿಂದ ತಿರುಗಿಸಲು ಅದು ಕಿರಿಮುರಿಯಾಗಿ ಹಾರಿತು. ಅದು ಒಂದು ಹಾರಿಗೆ ಅಗಳನ್ನು ದಾಟಿತು. ಮುಂದೆ ಎರಡು ಹಾರು ಹಾರಲು ಭೂಪತಿ ತಡೆದು ನಿಲ್ಲಿಸಿದನು,

ಪ್ರಳಯಕಾಲದ ಅಗ್ನಿಯಂತೆ ಗುಹಾಗ್ನಿಯ ಉರಿಯತೊಡಗಿತು. ಅಲ್ಲಿದ್ದ ಮರಗಿಡ ಬಳ್ಳಿ ಪೊದರುಗಳನ್ನೆಲ್ಲ ಮಹಾಜ್ವಾಲೆ ಸುಟ್ಟುಬಿಟ್ಟಿತು. ಇಂಡೆಯಾಡಿದಂತೆ ಕೆಂಡ ಕೆದರಿ ಬಿದ್ದಿತು. ಹೊಗೆ ಹಿಂಡು ಕಾರ್ಮುಗಿಲಂತೆ ಆಕಾಶಕ್ಕೇರಿತು. ದಳ್ಳುರಿಯೆದ್ದುದನ್ನು ಕಂಡು ವಿದ್ಯಾಧರರು ತಮ್ಮ ಅಳ್ಳೆಯನ್ನೇ ಹೊಡೆದುಕೊಂಡರು. ಮ್ಲೇಚ್ಛರಾಜರು ತಳಮಳಗೊಂಡರು. ವಿಜಯಾರ್ಧದೇವನು ಮಂಡೆದೂಗಿದನು. ಪಡಿವೊಡೆದು ಅರ್ಭಟೆ ಕೇಳಿದಾಗ ಅವರ ಎದೆ ದುಮ್ಮುದುಡುಕೆಂದಿತು. ಸಿಡಿಲ ಸೇತುವಿನಂತೆ ಜ್ವಾಲೆಯೆದ್ದುದನ್ನು ನೋಡಿ ಅವರೆಲ್ಲ ಸಿಡಿಮಿಡಿಕೊಂಡರು. ಮಾಗಧೇಂದ್ರಾದಿಗಳೂ ಆಶ್ಚರ್ಯಪಟ್ಟರು. ಸೇನೆಯು ಕೂಗಿ ಬೊಬ್ಬಿಟ್ಟಿತು. ಭರತೇಶನು ತನ್ನ ಕುದುರೆಯು ಕುಣಿಯುವುದನ್ನು ಕಂಡು ಅದರ ಭುಜವನ್ನು ಚಪ್ಪರಿಸಿ ನೋಡುತಿದ್ದನು.

ಭರತೇಶನು ಚಂಡವೇಗೆಯನ್ನು ನೆಲದಲ್ಲಿ ನೆಟ್ಟು ವ್ಯಂತರ ಮಂಡಳಿಕರ ಬಳಸಿನಲ್ಲಿ ನಿಂತಿರುವಾಗ ವಿಜಯಾರ್ಧದೇವನು ತನ್ನ ದೇವತಾ ಸಮೂಹದೊಡನೆ ಬಂದು, "ವಿಜಯಲಕ್ಷ್ಮಿಯ ನಲ್ಲ ಜಯ ಜಯ" ಎಂದು ಹೂಮಳೆಯನ್ನು ಸುರಿಸಿದರು. ಹೂಮಳೆ ನಿಲ್ಲಲು ಗರ್ಭಸುಖಿಯಾದ ಭರತೇಶನಿಗೆ ಸೆಖೆಯಾದೀತೆಂದು ಚಂದನ ರಸವನ್ನು ಕರ್ಪೂರ ಬೆರಸಿದ ಪನ್ನೀರನ್ನು ಸುರಿಸಿದನು. ರಾಜರತ್ನನಾದ ಚಕ್ರಿಯ ತೋಳ ಬಲ್ಮೆಯನ್ನು ಕಿನ್ನರ ಕಿಂಪುರುಷರೆಲ್ಲರೂ ಹಾಡಿದರು. ಅವನ ಸನ್ನಿಧಿಯಲ್ಲಿ ಗಂಧರ್ವ ಗಣಿಕೆಯರು ಉನ್ನತವಾದ ನೃತ್ಯವೆಸಗಿದರು.

ಅನಂತರ ವಿಜಯಾರ್ಧದೇವನು ತನ್ನ ಬಲದೊಡಗೂಡಿ ನೃಪನ ಸಮ್ಮುಖಕ್ಕೆ ಬಂದನು. ಅವರು ತೊಟ್ಟ ತೊಡಿಗೆಗಳು ಮಿಂಚಿನಂತೆ ಹೊಳೆಯುತ್ತಿದ್ದುವು. ಅವನು ನಿವಾಳಿಯಿಟ್ಟು,

ಕಾಣಿಕೆ ಕೊಟ್ಟು ಅಡ್ಡ ಬಿದ್ದು ನಿಂತುಕೊಂಡನು. ''ದಿಟ್ಟರ ದೇವ. ಚೆಲುವರ ದೇವ. ನಮ್ಮ ದೃಷ್ಟಿಯಾಗ ಸಫಲವಾಯಿತು.'' ಎಂದು ಹೇಳಿ ಮಣಿಪೀಠವನ್ನೂ ಭೃಂಗಾರ ಛತ್ರ ಚಾಮರಗಳನ್ನೂ ಮಣಿಭೂಷಣಗಳನ್ನೂ ದೊರೆಗೊಪ್ಪಿಸಿ ಗಣಬದ್ಧರು ಅವುಗಳನ್ನು ಹಿಡಿದು ನಿಲ್ಲುವಂತೆ ಮಾಡಿದನು. ಈ ರೀತಿಯಲ್ಲಿ ಪಾಗುಡವಿತ್ತು ಆಪ್ತಗಡಣದವರನ್ನೂ ಭರತೇಶನ ಅಡಿಗೆರಗಿಸಿದನು.

ಆಗ ಭರತೇಶನು ಮಾಗಧಾಂಕನನ್ನು ನೋಡಿದನು. ''ವಿಜಯಾರ್ಧದೇವನು ದೇವರ ಸೇವೆಗೆ ತಕ್ಕವನು.'' ಎಂದು ಮಾಗಧನು ತಿಳಿಸಿದನು. ''ಮೋಕ್ಷಮಾರ್ಗಿಯನ್ನು ಓಲೈಸಲು ಬಂದೆವು. ಈ ಭಾಗ್ಯವು ಯಾರಿಗೆ ತಾನೆ ದೊರೆಯುವುದು? ನೀವು ನಾವು ಕೃತಾರ್ಥರಾದೆವು.'' ಎಂದು ವಿಜಯಾರ್ಧದೇವನು ಬಗ್ಗಿ ಮಾತನಾಡಿದನು. ''ಈತನೀಗ ತನ್ನ ನಿಳಯಕ್ಕೆ ಹೋಗಲಿ. ನಮ್ಮ ಕಟಕವು ಉತ್ತರ ಖಂಡಕ್ಕೆ ನಡೆವಾಗ ಈತನು ದಳಸಹಿತ ಬರಲಿ'' ಎಂದು ಮಾಗಧಾಮರನು ಭೂ ತಿಲಕನಿಗೆ ಬಿನ್ನವಿಸಿದನು. ಭರತೇಶನಾಗ ವಿಜಯಾರ್ಧದೇವನನ್ನು ಬಳಿಗೆ ಕರೆದು ಅನರ್ಘ್ಯದ ಕಂಕಣಗಳನ್ನು ತೊಡಿಸಿದನು. ಆಮೇಲೆ ವಿಜಯಾರ್ಧದೇವನು ತೆರಳಿದನು.

ಅತಿಶಯವಾದ ತಮಿಸ್ರ ಗುಹೆಯ ಮೇಗಡೆಯಲ್ಲಿ ವಾಸಿಸುವ ಕೃತಮಾಳದೇವನು ಭೂಪತಿಯನ್ನು ಕಂಡು ಸಾಷ್ಟಾಂಗವೆರಗಿ ಕಾಣಿಕೆಗೊಟ್ಟು ನಿಂತನು. ತಿಲಕವೇ ಮುಂತಾದ ಚತುರ್ದಶ ಭೂಷಣಗಳನ್ನು ಭೂವರನೆದುರಲ್ಲಿಟ್ಟು, ಅವನನ್ನು ಕೊಂಡಾಡಿ ತನ್ನ ದೇವಬಲವನ್ನು ನಮಸ್ಕಾರ ಮಾಡಿಸಿದನು.

''ಇವನೂ ನಮ್ಮ ಬಂಧುವು. ಈ ಕೃತಮಾಳ ಸುರನು ವಿನೀತನು. ದೇವರ ಸೇವೆಯಲ್ಲಿ ಪ್ರೀತನಾಗಿರುವನು.'' ಎಂದು ಒಡೆಯನಿಗೆ ಮಾಗಧಾಮರನು ಸಂಪ್ರೀತಿ ಸೇವೆಯಿಂದ ಬಿನ್ನವಿಸಿದನು. ಕೃತಮಾಳನೂ ಈಗ ತೆರಳಲೆಂದೂ,ಪಾಳೆಯ ತೆರಳುವಾಗ ಬರಲೆಂದೂ ಅವನು ಸೂಚಿಸಿದನು. ಭರತೇಶನು ತನ್ನ ತೋಳ ತಾವುಜವನನ್ನವನಿಗೆ ಉಡುಗೊರೆಗೊಟ್ಟು ಬೀಳ್ಕೊಟ್ಟನು. ಕೃತಮಾಳನು ತನ್ನ ಸೇನೆಯೊಂದಿಗೆ ತೆರಳಿದನು.

ಆಮೇಲೆ ಗಣಬದ್ಧರು ಒಡೆಯನನ್ನು ವಸ್ತ್ರದಿಂದ ತೊಡೆದು ವಸ್ತ್ರಾಭರಣಗಳನ್ನು ಉಡಿಸಿ, ತೊಡಿಸಿ, ಕನ್ನಡಿಯನ್ನು ಬೆಳಗಿ ಅನಂತರ ಅದನ್ನೇ ನೋಡುವಂತೆ, ತಮ್ಮ ರಾಯನನ್ನು ನೋಡಿದರು. ಆಗ ಬೆಟ್ಟದಲ್ಲಿ ಬಿಸಿಲು ಹೊಳೆಯಿತು. ಭರತೇಶನಾಗ ನೆಟ್ಟ ದಂಡವನ್ನೆತ್ತಿಕೊಂಡು ಥಟ್ಟನೆ ಅಶ್ವವನ್ನು ತಿರುಗಿಸಿದನು. ಅಮರವಾದ್ಯವು ಮೊಳಗುತ್ತಿರಲು ನೂತನ ಛತ್ರಚಾಮರಾದಿಗಳ ಶೋಭೆಯಲ್ಲಿ ಅಮರ ಸೇನೆಯೊಂದಿಗೆ ನರಲೋಕದ ಅಮರೇಂದ್ರನಾದ ಭರತೇಶನು ತನ್ನ ಸೇನೆಯ ಕಡೆಗೆ ಹೊರಟನು. ಒಂದೇ ನಿಮಿಷದಲ್ಲಿ ಭರತೇಶನೇರಿದ ಕುದುರೆಯು ಕಟಕದ ಬಳಿಗೆ ಹಾರಿಬಂತು. ಭರತೇಶನು ಎಲ್ಲರನ್ನೂ ಮಮತೆಯಿಂದ ನೋಡಿಕೊಂಡು ಪಾಳೆಯ ಪ್ರವೇಶ ಮಾಡಿದನು. ರಾಜನಿಗೆ ಸುಖವಾಗಲು ರಾಜ್ಯಕ್ಕೆ ಸುಖವೆಂಬ ರಾಜನೀತಿಯ ಮಾತಿನಂತೆ ರಾಜೇಂದ್ರನು ಸಂತೋಷದಿಂದ ಬರುತ್ತಿರುವುದನ್ನು ನೋಡಿದ ಜನರಿಗೂ ಗೆಲುವಾಯಿತು.

ಭರತೇಶನ ಮೂವರು ಮಕ್ಕಳೂ ಹರುಷದಿಂದ ಮುಂದೆ ಬಂದು ರಾಜೇಂದ್ರನಿಗೆ ನಿವಾಳಿ ತೆಗೆದು ಶಿರದ ಮೇಲೆತ್ತಿ ಕೈಮುಗಿದರು. ಆಗ ಚಕ್ರೇಶ್ವರನು ಹಿರಿದಾದ ಪ್ರೀತಿಯಿಂದ ತನ್ನ ಸುತರನ್ನು ನೋಡಿದನು. ''ನೀವು ನಿಮ್ಮ ತೇಜಿಗಳನ್ನೇರಿರಿ'' ಎಂದು ನಗೆಮೊಗದಿಂದ ಸೂಚಿಸಿದನು. ಸುಗುಣರಾದ ಅರ್ಕಕೀರ್ತಿ, ಆದಿರಾಜ, ವೃಷಭರಾಜರು, ತಂದೆಯ ಮಾತಿನಂತೆ ತುರಗಗಳನ್ನೇರಿ ಒತ್ತಿನಲ್ಲೇ ಬಂದರು, ಮಂತ್ರಿ ಸೇನಾಪತಿಗಳೂ ರಾಜಕುಮಾರರೂ ಇಕ್ಕಡೆಗಳಲ್ಲಿ ಸಾಲು ಸಾಲಾಗಿ ನಿಂತುಕೊಂಡು ಬರುತ್ತಿರುವ ಚಕ್ರೇಶ್ವರರಿಗೆ ನಿವಾಳಿಯಿಟ್ಟು ತಂಡತಂಡವಾಗಿ ಎರಗಿದರು. ಭರತರಾಜೇಂದ್ರನು ಅವರನ್ನು ನೋಡುತ್ತ ಬರುತ್ತಿದ್ದನು. ರಾಯ ಬರುತ್ತಿರುವಾಗ ಭಟ್ಟರು ಹೊಗಳಿದರು. ಪಂಡಿತರು ಲೇಸೆಂದು ನುಡಿದರು. ಕವಿಗಳು ಕೃತಿಗಟ್ಟಿದರು. ಕಟ್ಟಿಗೆಗಾರರು ಪರಾಕು ಹೇಳಿದರು. ಇದನ್ನೆಲ್ಲ ಕೇಳುತ್ತ ನೋಡುತ್ತ ಚಕ್ರಿ ಗೆಲವಿನಿಂದ ಬಂದನು.

ಅರಮನೆಯಿದಿರಲ್ಲಿ ಕುದುರೆಯನ್ನು ನಿಲ್ಲಿಸಿ, ವ್ಯಂತರರನ್ನು ಕಳುಹಿಸಿದನು. ಸುತರಿತ್ತ ಹಾರಗಳಲ್ಲಿ ಒಂದನ್ನು ಹಾಕಿ ಅವರನ್ನೂ ಬೀಳ್ಕೊಟ್ಟನು. ಕುದುರೆಯ ಭುಜತಟ್ಟಿ ಆದಿನಾಥನನ್ನು ನೆನೆಯುತ್ತ ಕುದುರೆಯಿಂದ ಭೂಮಿಗಿಳಿದನು. ಗಣಬದ್ಧರಿಗೆ ಕುದುರೆಯನ್ನು ಮನ್ನಿಸಲು ಹೇಳಿ, ವ್ಯಂತರರಿಗೆ ಉಡುಗೊರೆಗೊಟ್ಟು ರಾಜೇಂದ್ರನು ರಾಜಗೃಹವನ್ನು ಪ್ರವೇಶಿಸಿದನು.

ಅರಸಿಯರ ಆನಂದ ಅಂತಿಂತೆಂದು ಹೇಳುವಂತಿಲ್ಲ, ಸಂತೋಷ ಸಾಗರದ ತೆರೆಯೊತ್ತಿ ಬರುವಂತೆ ಅವರು ಬಂದು ನಿವಾಳಿಯಿಟ್ಟು ಅರಸಗಾರತಿಯನ್ನು ಬೆಳಗಿದರು. ಹಂಸರಾಜ ಮುಂತಾದ ಐವರು ಮಕ್ಕಳೂ ಹಂಸಗಳ ಮರಿಗಳಂತೆ ಬಂದು ''ಅಯ್ಯಾ'' ಎನ್ನಲು ಅವರನ್ನು ಅಪ್ಪಿಕೊಂಡನು. ಮತ್ತಿನ ಮಕ್ಕಳನ್ನೂ ಮುದ್ದಾಡಿ ಅರಸಿಯರ ಕೈಗಿತ್ತನು. ಸ್ನಾನ ಭೋಜನಗಳಾದ ಮೇಲೆ ಅರಸಿಯರಿಗೆ ತಾನು ಮಾಡಿದ ಕೆಲಸದ ವಾರ್ತೆಯನ್ನು ವಿವರಿಸಿದನು. ಭರತೇಶನು ಮಿಟುಜವ್ವನೆಯರೊಂದಿಗೆ ಕಾಲೋಚಿತದ ಆಟದಲ್ಲಿ ಮೆರೆದನು.

ಅದೇನು ಸಿರಿವಂತನೊ ಚಕ್ರಿ !

## ೧೧

# ಕುಮಾರ ವೈಹಾಳಿ

ಭರತೇಶನೊಂದು ದಿನ ಜಯರಾಜನನ್ನೂ ಅವನ ಅನುಜರನ್ನೂ ಕರೆಯಿಸಿ ಮುಂದಿನ ಸೇನಾವ್ಯವಸ್ಥೆಯನ್ನು ನಿಯಮಿಸಿದನು.

''ವಿಜಯಾರ್ಧ ಕವಾಟವನ್ನೊಡೆದಾಗ ಉಂಟಾದ ಬೇಗೆ ಆರುವುದಕ್ಕೆ ಆರು ತಿಂಗಳ ತಡವುಂಟು. ಅಷ್ಟರೊಳಗೆ ಎರಡು ಖಂಡದ ಮ್ಲೇಚ್ಛರ ಸೊಕ್ಕನ್ನಡಗಿಸಿ ಇಲ್ಲಿಗೆ ತರಬಹುದು. ಮೂಡಣ ಖಂಡಕ್ಕೆ ಜಯರಾಜನು ಹೋಗಲಿ. ಪಡುವಣನಾಡಿಗೆ ವಿಜಯಾಂಕನು ಹೋಗಲಿ. ಬೀಡಿನ ಆರೈಕೆಯನ್ನು ಕಿರಿಯ ಜಯಂತಾಂಕನು ನೋಡಿಕೊಂಡಿರಲಿ. ನಮ್ಮ ಅಧಿಕ ಸಂಖ್ಯೆಯ ಸೇನೆಯು ಒಟ್ಟಾಗಿ ನಡೆದು ಅವರನ್ನು ಗೆಲ್ಲುವುದು. ಅಲ್ಲಿನ ಬೆಂಕಿಯನ್ನು ನೋಡಿಯೇ ಅವರ ಎದೆಯೊಡೆದು ಹೋಗಿದೆ. ಸೋಪಾನಗಳಲ್ಲೇ ನಡೆದು ಗಂಗೆಯನ್ನು ದಾಟಿರಿ. ಸಿಂಧುವಿನ ಸೋಪಾನಗಳಲ್ಲೀಗ ಉರಿಬರಿಸು ಇದೆ. ಅದನ್ನು ಚರ್ಮರತ್ನದ ಸಹಾಯದಿಂದ ದಾಟಿರಿ.''

—ಎಂದು ನರನಾಥನು ನಿರೂಪಿಸಿ, ಅವರವರನ್ನು ಬೀಳ್ಕೊಟ್ಟು ತಾನು ಕಟಕವನ್ನು ಸೇರಿ ಅವಿರಳವಾದ ಲೀಲೆಯಲ್ಲಿ ಮೆರೆಯುತ್ತಿದ್ದನು.

ವಿಜಯಾರ್ಧಸ್ಫೋಟನದಿಂದಾಗಿ, ಅತ್ತ ಧವಳಗಿರಿಯಲ್ಲಿ ನಮಿರಾಜನು ಚಿಂತಾಮಗ್ನನಾದನು. ರಥನೂಪುರ ಚಕ್ರವಾಳನಗರದ ವಿನಮಿರಾಜೇಂದ್ರನು, ಭರತೇಶನಿಂದಾಗಿ ಉರಿಯೆದ್ದುದನ್ನು ಕಂಡು ಸಂತೋಷಗೊಂಡು, ಬಂದನು. ಬಂದವನೇ ಅಣ್ಣನಾದ ನಮಿರಾಜನಲ್ಲಿಗೆ ಹೋಗಿ ಇಂತೆಂದನು.

''ನಮ್ಮ ಭಾವಾಜಿಯು ವಜ್ರಕವಾಟವನ್ನು ನಿಮಿಷದಲ್ಲಿ ಒಡೆದುದನ್ನು ಕೇಳಿದಿರಾ? ಅದರಿಂದೆದ್ದ ಉರಿಯು ಆಕಾಶವನ್ನೇ ಮುಟ್ಟಿರುವುದು. ಕವಾಟವನ್ನು ಕುಟ್ಟಿದ ರಭಸಕ್ಕೆ ಪಟ್ಟಣದ ಅರಸುಗಳೆಲ್ಲ ತಮ್ಮ ಗದ್ದುಗೆಗಳಿಂದ ತೊಟ್ಟಿಲ ಮಕ್ಕಳಂತೆ ಕೆಳಗೆ ಬಿದ್ದರು. ಕಿಚ್ಚಿನ ನಾಲಗೆಗೆ ಸಿಕ್ಕಿದ ಬಿಳಿಮುಗಿಲು ಹತ್ತಿಯಂತೆ ಸುಟ್ಟು ಹೋಯಿತು. ದೇವತೆಗಳೂ ಸಂಚರಿಸಲು ಅಂಜುತ್ತಿದ್ದಾರೆ. ಅಣ್ಣಾ ನಮ್ಮ ಭಾವಾಜಿಗೆ ಸರಿಯಾದವರು ಯಾರೂ ಇಲ್ಲ.''

ಇದನ್ನು ಕೇಳಿ ನಮಿರಾಜನು ಹುಸಿನಗೆ ನಕ್ಕನು. ಅಷ್ಟರಲ್ಲಿ ಅಲ್ಲಿಗೆ ಮಂತ್ರಿಯೂ ಬಂದನು. ನಮಿಯು ಅವರಿಬ್ಬರನ್ನೂ ಕುಳ್ಳಿರಿ ಹೇಳಿದನು. ಅಣ್ಣನ ಮನವನ್ನು ತಿಳಿಯದ ತಿಳಿಮನಸ್ಸಿನ ವಿನಮಿಯು ಅದೇ ಮಾತನ್ನು ಕೇಳಿದನು. ''ಈ ಸಂತೋಷದಲ್ಲಿ ಸಂಕ್ಲೇಶವೇಕೆ? ಭಾವಾಜಿಗೆ ಅಂತಾದ ಸಿರಿ ನಮ್ಮದಲ್ಲವೇ? ನಿಮಗೇಕೆ ಈ ಚಿಂತೆ?''

ವಿನಮಿಯ ಮಕ್ಕಳಾಟಿಕೆಯ ಮಾತನ್ನು ಕೇಳಿ ನಮಿರಾಜನು ಎಚ್ಚರಿಸಿದನು.

"ರಾಜ್ಯಾಂಗದ ದಿಕ್ಕು ನಿನಗಿನ್ನೂ ತಿಳಿದಿಲ್ಲ. ಹೊರಗೀ ಮಾತನ್ನು ಆಡಬೇಡ. ಭಾವಾಜಿಯ ಪೌರುಷಕ್ಕೆ ನೀನೀಗ ಬೀಗಿದೆ. ಆದರೆ ಭಾವಾಜಿಯು ಷಟ್‌ಖಂಡದ ಒಡೆಯನು. ಭೂವರರು ಓಲೈಸಬೇಕೆಂದು ಹೇಳಿದಾಗ ಇನ್ನು ಮುಂದೆ ನಾವು ಸೇವಕರಾದೆವು. ಈವರೆಗೆ ಒಂದಾಗಿ ಕುಳಿತು ನೀನು—ತಾನು ಎಂದು ಸರಸವಾಡುತಿದ್ದುದು ಇನ್ನಿಲ್ಲ. ಇನ್ನು— ಕಾಣಿಕೆಗೊಟ್ಟು ಕಾಣಬೇಕು. ಕಂಡಾಗ ಅಯ್ಯ, ಜೀಯ, ಎನ್ನಬೇಕಾಗುವುದು. ಸರಿಸಿರಿಯಾದಾಗ ನಮ್ಮನ್ನು ಬೀಗರೆಂದು ಮನ್ನಿಸುವರು. ಸಿರಿ ಹೆಚ್ಚಿದಾಗ ನಮ್ಮನ್ನು ಕಡೆಗಣಿಸುವರು. ನಿನಗೆ ಅದೆಲ್ಲ ತಿಳಿಯದು. ಬಾಲ್ಯದಿಂದಲೇ ಭರತೇಶನನ್ನು ಅರಿತವರು ನಾವು. ಅವನ ವಿಡಾಯದವರು ಧರೆಯಲ್ಲೇ ಇಲ್ಲ. ಅದನ್ನು ನಾನೂ ಆಲೋಚಿಸುವೆನು. ಚೆಂಡಾಟದಲ್ಲಾಗಲೀ ಓದಿನಲ್ಲಾಗಲೀ ಗರಡಿಯಲ್ಲಾಗಲೀ ನಮ್ಮ ಮೇಲೆ ಇಂಡೆಯ ಹೊರಿಸಿಯೆ ಹೋಗುತ್ತಿದ್ದನು. ಆಟದಲ್ಲಿ ತಾನು ಗೆದ್ದರೆ ಜಾರುತ್ತಿದ್ದ; ಅದೇ ನಾವು ಗೆದ್ದರೆ ನಮ್ಮನ್ನು ಹೋಗಗೊಡುತ್ತಿರಲಿಲ್ಲ. ಕೊನೆವರೆಗೂ ಅವನದು ಇದೇ ಕ್ರಮ. ಅವನು ಗೆದ್ದನೆಂದರ ಮೇಳದ ಮಕ್ಕಳು ತಮತಮಗೆ ಉಬ್ಬಿ ಗದ್ದಲವೆಬ್ಬಿಸುವರು. ನಮಗೆ ಗೆಲವಾದರೆ ಅವರೆಲ್ಲ ಸುಮ್ಮನಿರುವರು. ಭುಜಬಲಿ ವೃಷಭಸೇನರೊಂದಿಗೆ ಆಡಿ ಗಜದಂತೆ ಬರುವ ನಾವು ಭರತೇಶನೊಂದಿಗೆ ಆಡಿ ಅಜದಂತೆ ಬರಬೇಕೆ? ಇದನ್ನು ಯೋಚಿಸು. ಬೆಳೆಯುವಾಗ ಗೆಲುವಿನಲ್ಲೂ ವಿಡಾಯದಲ್ಲೂ ಒಬ್ಬರೊಡನೊಬ್ಬರು ಬೆರೆತು ಬೆಳೆದೆವು. ಆದರೆ ಈ ಸಿರಿ ಬಂದ ಮೇಲೆ ಅವನು ಯಾರ ಚುಳುಕೂ ಕಾಣನು. ಧಾರೆಕೋರೆಯನ್ನು ನೋಡಿದರೂ ರಾಜತೇಜವನ್ನು ನೋಡಿದರೂ ಭಾವಾಜಿಗೆ ಎಣೆಯಿಲ್ಲವೆಂಬುದು ಸಹಜ. ಆದರೆ, ಹೂರಿಗೆ ಎಂದೊಡನೆ ಗಬಕೆಂಬ ಗಾದೆಯಂತೆ ಆವನ ವಿಚಾರ. ಅದನ್ನು ಯಾರು ಅರಿಯರು.

ಆದರೂ ನಮಿಯ ಮಾತಿನ ಮೊನೆಯನ್ನು ವಿನಮಿಯು ಅರಿಯದೆ ಮತ್ತೂ ಮಾತನಾಡಿದನು.

"ಆಗಲಿ. ಈಗ ಅದಕ್ಕೇನು ಮಾಡಬಹುದು? ಪುಣ್ಯಭಾಗಿಯಾಗಲು ಯಾರಿಗೇನಾದೀತು? ನಮ್ಮ ಭಾವಾಜಿಯೆಂದರೆ ಸಾಮಾನ್ಯ ಲೋಗರಂತಲ್ಲ. ಅವನು ನಮ್ಮ ಅಪ್ಪಾಜಿಯ ಒಡಹುಟ್ಟಿದವಳ ಮಗನಲ್ಲವೆ? ನಾವು ಅವನ ಸೋದರ ಮಾವನ ಮಕ್ಕಳಲ್ಲವೇ? ಇದರಲ್ಲಿ ಕೆಟ್ಟುದೇನಿದೆ ಅಣ್ಣಾಜಿ?"

"ಹಾಗಲ್ಲ. ವಿನಯಶ್ರೀಯನ್ನು ಬಿಟ್ಟು ಕ್ಷತ್ರಿಯರಾದ ನಾವು ಎರಗುವುದಾದರೂ ಹೇಗೆ? ನಮ್ಮನ್ನು ಕಂಡರೆ ಏಳಲಾರನು. ಕೈ ಮುಗಿಯಲಾರನು. ಚಕ್ರಿಯಿಂತೆಸಗುವುದು ನಮಗೆ ಕುಂದಲ್ಲವೆ? ನಮ್ಮನ್ನಿಂದು ರಾಜನೆಂದು ಕರೆವನಲ್ಲದೆ ತಾವು ನೀವೆಂದು ಗೌರವಿಸಲಾರ. ಸುರರೂ ನಮ್ಮನ್ನು ವ್ಯಂತರರೊಂದಿಗೆ ಸೇರಿಸಿ ತೇಜಿಷ್ಠರೆಂದೇ ಸಾರುವರು. ಹೆಣ್ಣು ಕೊಟ್ಟವರು ಕೈಮುಗಿಯೆ, ಅವನು ಕೈಮುಗಿಯಲಾರ. ಬಣ್ಣಕ್ಕಾಗಿ ತಾವು ನೀವು ಎಂದಿಷ್ಟು ಹೇಳುವನು."

"ಎಂದು ಹೇಳಿ ನಮಿರಾಜನು ಮತ್ತೆ ತನ್ನೆದುರು ಮಂಡಿಸಿದ ಮಂತ್ರಿಯನ್ನು ನೋಡಿ ತನ್ನ ಮಾತನ್ನು ಮುಂದುವರಿಸಿದನು.

"ಮಂತ್ರಿಯೇ, ಇದಕ್ಕೇನು ತಂತ್ರವಿದೆ? ನಾವು ಅವನನ್ನು ಚದುರಿನಿಂದಲೇ ಜಯಿಸಬೇಕು. ತಂಗಿ ಸುಭದ್ರಾ ದೇವಿಯನ್ನು ಭರತರಾಜನಿಗಿತ್ತು ವಿವಾಹವೆಸಗಬೇಕೆಂದು ಅಂದು ನೀನು ಹೇಳಿದ್ದೆಯಲ್ಲವೆ? ಈಗ ಆ ಮಾತನ್ನು ಮರೆತುಬಿಡು. ಹೆಣ್ಣು ಒಳ್ಳೆಯವಳೆಂದು ಕೇಳಿದರೆ ಅವನೇ ಬೇಡುವನು. ನಾನೇ ಹೋಗಿ ಅವನನ್ನು ಕಾಣುವುದೊಳಿತಲ್ಲ. ದಕ್ಷಿಣ ಭಾಗೆಯ ಖಚರ ಪುತ್ರಿಯರಲ್ಲಿ ಲಕ್ಷಣವತಿ, ರೂಪವತಿಯಾದೊಬ್ಬಳನ್ನು ದಾಕ್ಷಿಣ್ಯ ವಿನಯಗಳಿಂದ ಕರೆದೊಯ್ದು ಅವನಿಗೆ ಧಾರೆಯೆರೆದು ಬನ್ನಿ. ಮೊದಲೇ ಅವನ ಮೈ ಕೆಂಪಗೆ; ಈಗಂತೂ ಭೂಮಂಡಲದಲ್ಲೇ ಅಗ್ಗಳನೆನಿಸಿರುವನು. ಆದ್ದರಿಂದ ಭೂಮಂಡಲದ ದೊರೆಗಳೂ ತಾವು ತಾವೆಂದು ಕನ್ನೆಯರನ್ನು ತಂದು ಕೊಡುವರು. ನೀವು ಮಾತ್ರ ನೆವನಕ್ಕಾಗಿ ಈ ಕಾರ್ಯವೆಸಗಿರಿ. ನಮ್ಮರಮನೆಯಲ್ಲಿ ಉತ್ತಮ ವಸುವಡವೆಗಳಲ್ಲಿ ನಿಮ್ಮ ಮನಸ್ಸಿಗೆ ಬಂದುದನ್ನು ಕೊಂಡೊಯ್ದು ಅವನಿಗೊಪ್ಪಿಸಿರಿ. ಇಂದಿಗಿಷ್ಟೇ ಸಾಕು. ನಿಮ್ಮೊಡನೆ ವಿನಮಿಯೂ ಬರುವನು, ಮುಂದಿನ ವಿಚಾರವನ್ನು ಅವನು ಬಂದಾಗ ಯೋಚಿಸಿದರಾಯಿತು."

ನಮಿರಾಜನ ಮಾತಿಗೆ ವಿನಮಿಯಾಗಲೀ ಮಂತ್ರಿಯಾಗಲೀ ಉತ್ತರವೀಯಲಿಲ್ಲ. ಅವನ ಮಾತಿಗೊಪ್ಪಿ, ಅವನನ್ನು ಬೀಳ್ಕೊಂಡರು. ಅವರು ಚೆಲುವಿನ ಹೆಣ್ಣುಗಳನ್ನು ವಿಚಾರಿಸುತ್ತ ಧವಳಗಿರಿಯ ತೆಂಕಲಲ್ಲಿ ಸಂಚರಿಸತೊಡಗಿದರು.

ವೃಷಭಕುಮಾರನು ಉದಯಕಾಲದಲ್ಲೆದ್ದು ವೈಹಾಳಿಗೆ ಸಿದ್ಧನಾದನು. ಇದನ್ನು ಅಣ್ಣಂದಿರಿಗೆ ಹೇಳದೆ ತನ್ನ ಮೇಳದ ಸೇವಕರೊಂದಿಗೆ ನೀಲವೆಂಬ ಅಶ್ವವನ್ನೇರಿ ಹೊರಟನು. ಚಂದ್ರಕಾವಿಯ ದಟ್ಟಿ, ಪಟ್ಟೆಯ ಕುಲ್ಲಾಯಿ ಧರಿಸಿ, ಕುಂಕುಮದ ತಿಲಕವಿಟ್ಟು ಲಘುಭೂಷಣದಲ್ಲಿ ವೃಷಭಕುಮಾರನು ಕಂಗೊಳಿಸಿದನು. ದಿಗಿದಿಗಿಯೆಂದು ಅಶ್ವವನ್ನು ನಡೆಸುತ್ತಾ ಮುಂದುವರಿಯುವಾಗ ಚೀನದ, ಮಹಾ ಚೀನದ ಭೂಪರು ದಂಡಗೆಯಿಂದಿಳಿದು ಕೈಮುಗಿದು, ಕುಮಾರನ ಎಡಬಲದಲ್ಲಿ ಮುನ್ನಡೆದರು. ಅದನ್ನು ಕಂಡ ಕುಮಾರನು ಅಯ್ಯನ ಓಲಗಕ್ಕೆ ಹೋಗಿರೆಂದು ಅವರನ್ನು ಭರತೇಶನೆಡೆಗೆ ಕಳುಹಿಸಿ, ತಾನು ಮುಂದೆ ನಡೆದನು. ಕಿರಿದು ದೂರ ಸಾಗುವಷ್ಟರಲ್ಲಿ ದಕ್ಷಿಣನೂ ಸಾಗರನೂ ಅವನನ್ನು ಕಂಡು ಕುಮಾರನ ವೈಹಾಳಿಯನ್ನು ತಡೆದರು.

"ಒಡಹುಟ್ಟಿದವರಿಲ್ಲ; ಅರಸುಕುವರರಿಲ್ಲ; ಒಂಟಿಯಾಗಿ ವೈಹಾಳಿಗೆ ಹೊರಡುವುದೇ? ನೀವು ಹಿಂತಿರುಗದಿದ್ದರೆ ನಾವು ಸ್ವಾಮಿಗೆ ಅರಿಕೆ ಮಾಡುವೆವು."

ಸ್ವಾಮಿಹಿತರ ಈ ಮಾತನ್ನು ಕೇಳಿ ವೃಷಭಕುಮಾರನು ಅಳುಕಿದನು. "ವೈಹಾಳಿಯಲ್ಲಿ ನನಗೆ ಪ್ರೀತಿ ಹುಟ್ಟಿದೆ. ನಾನೇನೂ ದೂರ ಹೋಗುವುದಿಲ್ಲ. ಬೇಗನೆ ಬರುವೆನು. ನನ್ನ ಕ್ಷೇಮಕ್ಕಾಗಿ ಒಪ್ಪಿರಿ." ಎಂದು ದೈನ್ಯದ ಮಾತನ್ನಾಡಿ, ಮತ್ತೆ ಅವರಿಗೆ ಲಂಚಗೊಡುವಂತೆ ತನ್ನ ಕಂಕಣಕ್ಕೆ ಕೈಹಾಕಲು ಅದನ್ನವರು ಕಂಡು ಬೇಡವೆಂದರು. "ಕಂಕಣವ ಮುಟ್ಟದಿರಿ. ನಮಗವು ಬೇಡ. ಕುಮಾರನ ಅರ್ತಿಗೆ ಅಡ್ಡಬಾರೆವು" ಎಂದವರು ತಿಳಿಸಿದರು.

ವೃಷಭಕುಮಾರನು ಉತ್ಸಾಹದಿಂದ ಕುದುರೆಯನ್ನೋಡಿಸಿದನು. ಇವರು ಅವನೀಶಗರುಹಿ ರಕ್ಷಣೆಗೆ ಪ್ರಾಪ್ತರನ್ನು ಕಳುಹಬೇಕೆಂದು ಇತ್ತ ಬಂದರು.

ಆದಿರಾಜನು ಗರಡಿಗೆ ಬಂದಾಗ ತಮ್ಮನು ವೈಹಾಳಿಗೆ ತೆರಳಿದ ವಾರ್ತೆಯನ್ನು ಕೇಳಿದನು. ಅವನು ಕುದುರೆಯನ್ನು ತರಹೇಳಿ ಅರ್ಕಕೀರ್ತಿಗೊಂದು ಓಲೆಯನ್ನು ಬರೆದನು.

"ಶ್ರೀ ಮನ್ಮಹಾರಾಜ, ರಾಜಾದಿತ್ಯ ರಾಜರೊಡೆಯ ಆದಿಚಕ್ರೇಶ್ವರನ ಸುತ ಅರ್ಕಕೀರ್ತಿರಾಜಾದೇಯಮೂರ್ತಿ ಅಗ್ರಜಗೆ —

ದೇವರ ಊಳಿಗದಿ ಆದಿ ಸಾಷ್ಟಾಂಗವೆರಗಿ ಸದ್ಭಾವದಲ್ಲಿ ಮಾಡುವ ಬಿನ್ನಹ.

ವೃಷಭಣ್ಣನು ಸೇವಕರೊಡನೆ ವೈಹಾಳಿಗೆ ತೆರಳಿರುವನು. ನಾನು ಜಾಗ್ರತೆಯಿಂದ ಹೋಗಿ ಅವನನ್ನು ಕರೆದು ತರುವೆನು. ದೇವರು ಏನನ್ನೂ ಚಿಂತಿಸಬಾರದು. ಶ್ರೀನಿರಂಜನ ಸಿದ್ಧ. ಜಯ. ಜಯ."

ಆ ಪತ್ರವನ್ನು ಅರ್ಕಕೀರ್ತಿಗೆ ಕಳುಹಿಸಿ ತಾನು ತನ್ನ ಊಳಿಗದವರೊಂದಿಗೆ ಕುದುರೆಯೇರಿ ಸಾಗಿದನು. ಹರಿಯೋಲೆಯನ್ನೋದಿ ಅರ್ಕಕೀರ್ತಿಯು ಕೂಡಲೆ ಗರಡಿ ಸಾಧನೆಯನ್ನು ನಿಲ್ಲಿಸಿ, ಸಾಧಿತಾಶ್ವವೊಂದನ್ನೇರಿ ತನ್ನವರೊಂದಿಗೆ ವೃಷಭ ಕುಮಾರನೆಡೆಗಾಗಿ ನಡೆದನು.

ಈ ರೀತಿಯಲ್ಲಿ ಕುಮಾರರು ಹೋದುದನ್ನು ಕಂಡು ದಕ್ಷಿಣನೂ ಭರತೇಶನನ್ನು ಕಂಡು ಎರಗಿ ಆ ಸಂಗತಿಯನ್ನು ನಿವೇದಿಸಿದರು. ಭರತೇಶನು ಆದನ್ನಾಲಿಸಿ, ರಾವುತರನ್ನೂ ಸಾಣೆಗಳನ್ನೂ ಕ್ಷತ್ರಿಯರನ್ನೂ ಕರೆದು ಕುಮಾರರನ್ನು ಅನುಸರಿಸಿ ಸಾಗಿರೆಂದು ನೇಮಿಸಿದನು. ಅವರು ಉತ್ತಮ ತೇಜಿಗಳನ್ನೇರಿ ನೃಪಕುಮಾರರ ಬೆಂಬತ್ತಿ ನಡೆದರು.

ಅತ್ತ ತನ್ನ ಬೆಂಬಳಿವಿಡಿದು ಬರುವವರ ಅರಿವಿಲ್ಲದೆ ವೃಷಭಕುಮಾರನು ಉಬ್ಬಿನಿಂದ ಮುಂದೆ ಸಾಗಿದನು. ಅವನು, ಸೊಕ್ಕಿದ ಗೂಳಿ ಓಡುವಂತೆ ಕಟಕವನ್ನು ಬಿಟ್ಟು ಬಹುದೂರ ಸಾಗಿದನು. ಕುದುರೆ ಸವಾರಿಯಲ್ಲಿ ವಿವಿಧ ಲೀಲೆಯನ್ನು ತೋರಿದನು. ಅದನ್ನು ನೋಡಿದ ಅವನೊತ್ತಿಗಿದ್ದವರು ವೃಷಭಕುಮಾರನನ್ನು ಮನಸಾರೆ ಹೊಗಳಿದರು. ಆಯುಧವಿಡಿದು ಕೆಲವು ಸಾಧನೆಗಳನ್ನು ಕುದುರೇಯೇರಿದಂತೆ ಮಾಡಬೇಕೆಂದು ಬಗೆದು ಸಜ್ಜಾಗುವಷ್ಟರಲ್ಲಿ ಅಲ್ಲಿಗೆ ಆದಿರಾಜನು ಬಂದನು. ಅಣ್ಣನನ್ನು ಕಂಡೊಡನೆ ವೃಷಭ ಕುಮಾರನು ಕುದುರೆಯಿಂದ ಧರೆಗಿಳಿದು ಅವನೆಡೆಗೆ ನಡೆದುಕೊಂಡೇ ಬಂದನು. ಅಣ್ಣನನ್ನು ಕಂಡೊಡನೆ ಮಂದಹಾಸದಿಂದ ಕೈಮುಗಿದನು.

"ದೇವರು ಇತ್ತಕಡೆ ಬಂದ ಕಾರಣವೇನು?' ಎಂದು ವೃಷಭರಾಜನೇ ಕೇಳಿದನು. "ನನಗಿಂದು ಅಶ್ವಾರೋಹಣದಲ್ಲಿ ಆರ್ತಿಯುಂಟಾಯಿತು. ಆದ್ದರಿಂದ ಇತ್ತ ಬಂದೆ ಎಂದು ಆದಿರಾಜನು ಉತ್ತರವಿತ್ತನು. ಅಷ್ಟರಲ್ಲಿ ಅಲ್ಲಿಗೆ ಅರ್ಕಕೀರ್ತಿಯು ಬರುವುದು ಗೋಚರಿಸಿತು. ಕೂಡಲೇ ಇವರಿಬ್ಬರು ನಡೆದುಕೊಂಡೇ ಅಣ್ಣನನ್ನು ಇದಿರುಗೊಂಡರು. ಅವರನ್ನು ನೋಡಿದ ಅರ್ಕಕೀರ್ತಿಯು, "ಕುದುರೆಯನ್ನೇರಿರಿ, ವೈಹಾಳಿಯಲ್ಲಿ ಒಂದಿಷ್ಟು ಮೃದುಲೀಲೆ ಮಾಡುವ" ಎಂದು ಹೇಳಿದನು. ಅನುಜರಿಬ್ಬರು ಕುದುರೆಯೇರಿದರು. ಅವರೆಲ್ಲರೂ ವೈಹಾಳಿಗೆ ಅಣಿಯಾಗುವಷ್ಟರಲ್ಲಿ ಭರತೇಶನು ಕಳುಹಿಸಿದ ರಾವುತರು ಅಲ್ಲಿಗೆ ಬಂದು ಕುಮಾರರಿಗೆ ನಮಿಸಿದರು.

“ವೃಷಭಣ್ಣ ವಿರಾಟ ತೋರಿಸು.” ಎಂದು ಅರ್ಕಕೀರ್ತಿ ಹೇಳಿದರೆ “ದೇವರ ಮುಂದೇತರ ವಿರಾಟ? ಅಂಜುವೆನು” ಎಂದು ವೃಷಭಕುಮಾರನು ಉತ್ತರವಿತ್ತನು. ಆದರೆ ಅರ್ಕಕೀರ್ತಿ ಬಿಡಲಿಲ್ಲ. ಕೊನೆಗೆ ವೃಷಭಕುಮಾರನು “ನಿರಂಜನ ಸಿದ್ಧ” ಎಂದು ತುರಗವನ್ನು ತೆಗೆದನು. ಅವನೇರಿದ ತುರಗವು ವೇಗದಿಂದ ಓಡುತ್ತಿರುವಾಗ ನಿಂಬೆ ಹಣ್ಣನ್ನು ಬಾನಿನೆಸೆದು ಅದನ್ನು ಬಾಣದಿಂದ ತುಂಡರಿಸಿದನು. ಆ ಚಮತ್ಕಾರವು ಎಲ್ಲರನ್ನೂ ಬೆರಗುಗೊಳಿಸಿತು. ಅಶ್ವವೋಡುತ್ತಿರುವಾಗಲೇ ಒಂದು ಅಂಬನ್ನು ಮೇಲಕ್ಕೆಸೆದು ಇನ್ನೊಂದು ಅಂಬಿನಿಂದ ಅದನ್ನು ತುಂಡರಿಸಿದನು. ನೋಡಿದ ಜನರೆಲ್ಲ “ಖೋ” ಯೆಂದರು.

ತಮ್ಮನ ಈ ಕೈಚಳಕವನ್ನು ಕಂಡ ಅಣ್ಣಂದಿರು ಅಚ್ಚರಿಪಟ್ಟು ಇನ್ನು ಸಾಕೆಂದು ಅವನನ್ನು ಮುಂದಿನ ವಿರಾಟವಾಡದಂತೆ ತಡೆದರು. ವೃಷಭಕುಮಾರನು ಆದರದಿಂದ ಅವರೆಂದಂತೆ ವಿರಾಟವನ್ನು ನಿಲ್ಲಿಸಿ ಅವರೆಡೆಗೆ ಬಂದು ನಮಿಸಿ ನಿಂತನು. ತಮ್ಮನ ಈ ಒಲುಮೆಯನ್ನು ಕಂಡು ಅಣ್ಣಂದಿರಿಬ್ಬರೂ ಆನಂದಪಟ್ಟು ಅವನನ್ನು ಹೊಗಳಿದರು. ತಮ್ಮ ಕೊರಳ ಹಾರಗಳನ್ನೇ ತೆಗೆದು ತಮ್ಮನಿಗೆ ಉಡುಗೊರೆಯಿತ್ತು ಸನ್ಮಾನಿಸಿದರು. ವೃಷಭಕುಮಾರನು ವಿನಯದಿಂದ ನಮಿಸಿದನು. ಅಷ್ಟರಲ್ಲಿ ಎಲ್ಲರೂ ವೃಷಭಕುಮಾರನನ್ನು ಮೆಚ್ಚಿ ಕೊಂಡಾಡಿ ನಿವಾಳಿಯಿಟ್ಟು ನಮಿಸಿದರು. ಸಾರ್ವಭೌಮನ ತನುಜರಿಗೆ ಎರಗದವರಾರು?

ಆಮೇಲೆ ಅರ್ಕಕೀರ್ತಿಯು ತಮ್ಮಂದಿರೊಂದಿಗೆ ಹಿಂತಿರುಗಿ ಕಟಕದತ್ತ ಬರುತಿದ್ದನು.

ಅಷ್ಟರಲ್ಲಿ ಆರೋಗಣೆಯ ಹೊತ್ತಾಯಿತೆಂದು ಭರತೇಶನಿಗೆ ನಿವೇದಿಸಿದರು. ಆದರೆ ಕುಮಾರರು ಬಂದಿಲ್ಲವೆಂದು ರಾಯನು ನಿಧಾನಿಸಿದನು, ಮೊರೆವ ವಾದ್ಯದ ರಭಸದಲ್ಲಿ ಬರುತ್ತಿದ್ದ ರಾಜಪುತ್ರರನ್ನು ಅರಸನಾಜ್ಞೆಯಂತೆ ದೇಶದರಸುಗಳು ಇದಿರ್ಗೊಂಡರು. ಆರತಿ ಕಲಶ ಕನ್ನಡಿ ಹಿಡಿದ ವಾರನಾರಿಯರು ನಿವಾಳಿಯಿಟ್ಟು ವೀರರಿಗೆರಗಿದರು. ಕುಮಾರರು ಸಾಲಾಗಿ ಬರುತ್ತಿರುವುದನ್ನು ಕಂಡ ಭರತೇಶನು ಅವರಿಗೆ ವಿಕ್ರಾಂತಸೂಚನೆಗೊಟ್ಟು ಎಡಬಲದಲ್ಲಿ ಅನುಜರೂ ಮಧ್ಯದಲ್ಲಿ ಅಗ್ರಜನೂ ಬರುವಂತೆ ಮಾಡಿದನು. ಕುಮಾರರು ಅದರಂತೆ ನಡೆತಂದರು. ಭರತೇಶ ಕುಮಾರರಿಂತು ವೈಭವದಿಂದ ಬರುತ್ತಿರುವುದನ್ನು ಹೆಂಗಸರೆಲ್ಲರು ಉಪ್ಪರಿಗೆಯೇರಿ ನೋಡಿ ಸಂತೋಷಪಟ್ಟರು.

ಸಂಭ್ರಮದಿಂದ ಬಂದ ಕುಮಾರರು ಅರಮನೆಯೆಡೆಗೆ ಬಂದಾಗ, ತಾವೇರಿದ ಅಶ್ವಗಳಿಂದ ಇಳಿದು ಒಳಹೊಕ್ಕು ತಂದೆಯ ಪಾದಗಳಿಗೆ ತಲೆಯಿಟ್ಟು ನಮಸ್ಕರಿಸಿದರು. ಆರು ಖಂಡದ ಕರ್ತನಾದ ಭರತೇಶನು ಕುಮಾರರನ್ನು ಒಬ್ಬೊಬ್ಬರಾಗಿ ಅಪ್ಪಿಕೊಂಡು, ಆರ್ತಿದೋರಿ, ಮುದ್ದಾಡಿ “ಅಶ್ವದ ವಿರಾಟದಲ್ಲಿ ಅಧಿಕರಾದಿರಿ” ಎಂದು ಮನ್ನಿಸಿದನು.

“ಏನು ದೊಡ್ಡಣ್ಣ ನಿನ್ನನುಜನ ಲೀಲೆಗೆ ನೀನೇ ಬೆಂಬತ್ತಿದೆಯಾ?” ಎಂದು ದೊರೆಯು ನಗುನಗುತ್ತ ಕೇಳಿದನು.

“ಏನೆಂಬೆ ಸ್ವಾಮಿ ವೃಷಭರಾಜನ ಬಲ್ಮೆಯನ್ನು?” ಎಂದು ತಮ್ಮನ ವಿರಾಟದ ವಿಚಿತ್ರ ಸಾಧನೆಗಳನ್ನೆಲ್ಲ ಬಿತ್ತರಿಸಿದನು. “ಅವನ ರಾವುತಿಕೆಯ ವಿಳಾಸವನ್ನು ದೇವರೇ ಕಾಣಬೇಕು.”

ಎಂದು ಮಾತನ್ನು ಕೊನೆಗಾಣಿಸಿದನು. ಒಡನಿದ್ದವರೂ ಅಂತೇ ಹೊಗಳಿದರು. ಈ ಮಾತುಗಳನ್ನು ಕೇಳಿದ ತಂದೆಯು ಸಹಜವಾಗಿಯೂ ಉಬ್ಬಿದನು. ಇಷ್ಟೆಲ್ಲ ಮಾತುಗಳಾಗುವಾಗ ಮಿಡುಕದೆ ಮೌನವಾಗಿದ್ದ ವೃಷಭಕುಮಾರನೊಡನೆ ಭರತೇಶನೇ ನುಡಿದನು.

''ಅಶ್ವದ ಏರಾಟದಲ್ಲಿಟ್ಟು ಶಕ್ತಿಯಿದ್ದೂ ಮೊನ್ನೆ ಸುಮ್ಮನಿದ್ದುದೇಕೆ? ನೀನೆ ಹೋಗಿ ವಿಜಯಾರ್ಧಕವಾಟವನ್ನು ಕುಟ್ಟಬಹುದಿತ್ತು'' ಎಂದು ನಗೆಯಾಡಿದನು. ವೃಷಭ ಕುಮಾರನು ವಿನಯದ ನಡೆಯಲ್ಲೇ ಮೌನವಾಗಿದ್ದನಲ್ಲದೆ ತುಟಿಮಿಡುಕಿಸಲಿಲ್ಲ.

ಆಮೇಲೆ ಭರತೇಶನು ಎಲ್ಲರನ್ನೂ ಬೀಳ್ಕೊಟ್ಟರೂ ತನುಜರನ್ನು ಬೀಳ್ಕೊಡಲಿಲ್ಲ. ಜಿನಯೆನುತೆದ್ದು ಕುಮಾರರ ಕೈ ಹಿಡಿದು ಅಂತಃಪುರದ ಒಳಹೊಕ್ಕನು. ಅಲ್ಲಿ ಅಂಗನೆಯರಿಂದ ಮಂಗಳಾರತಿಯೆತ್ತಿಸಿ, ಸೇಸೆಯಿಕ್ಕಿಸಿ ತುಂಗಶೋಭನವನ್ನು ಪಾಡಿಸಿದನು. ವೀರಾಂಗನೆಯರ ಅರಸನು ಕಣ್ತುಂಬ ಕುಮಾರರನ್ನು ನೋಡಿ ಸಂತಸಗೊಂಡನು. ಆ ಮೇಲೆ ಕುಂತಲಾವತಿ, ಚಂದ್ರಿಕಾದೇವಿ, ಕುಸುಮಾಜಿ ಮೊದಲಾದ ಕಾಂತೆಯರನ್ನು ಕರೆಸಿದನು. ಕುಮಾರರು ಅವರೆಲ್ಲರಿಗೆರಗಿದರು.

''ನಿಮ್ಮ ಮಕ್ಕಳಿಗೆ ನೀವಿಷ್ಟು ಬುದ್ಧಿ ಹೇಳಬೇಡವೆ?''—ಎಂದರಸನು ಅವರನ್ನು ಕೇಳಿದನು. ''ಅತ್ತಮ್ಮನವರು ದೇವರಿಗೆ ಬುದ್ಧಿ ಹೇಳುವ ಹೊತ್ತಿಗೆ ನಾವೂ ಇವರಿಗೆ ಹೇಳುವೆವು. ದೇವರ ಮಕ್ಕಳು ದೇವರಂತಲ್ಲವೇ?'' ಎಂದವರು ದೊರೆಗೆ ಉತ್ತರವಿತ್ತರು.

ಆಮೇಲೆ ಒಂದೇ ಪಂಕ್ತಿಯಲ್ಲಿ ಕುಮಾರರೊಂದಿಗೆ ಅಮೃತಾನ್ನವನ್ನುಂಡು, ಅವರಿಗೆ ಹೊನ್ನಿನ ತೊಡವುಗಳ ಉಡುಗೊರೆಯಿತ್ತನು. ಮುತ್ತಿನಂತಹ ಮಾತುಗಳಿಂದ ಬುದ್ಧಿ ಹೇಳಿ ಬಿಡಾರಕ್ಕೆ ಕಳುಹಿಸಿದನು.

ಆಮೇಲೆ ಭರತೇಶನು ನಾರಿಯರೊಡನೆ ಕುಮಾರರ ವಿನಯ, ಗಂಭೀರ, ಚಾತುರ್ಯ ಮುಂತಾದ ವಾರ್ತೆಯನ್ನು ವಿವರಿಸಿ ಕಾಲಕಳೆದನು.

# ೧೨

# ಖೇಚರಿಯರ ವೈವಾಹ

ವಿನಮಿರಾಜನು ಸುಮತಿಸಾಗರ ಮಂತ್ರಿಯೊಂದಿಗೆ ಭರತೇಶ್ವರನ ಕಟಕದ ಕಡೆಗಾಗಿ ಬರುತ್ತಿದ್ದನು. ಅವನೊಂದಿಗೆ ಖೇಚರ ಭೂಪರು ತಮ್ಮ ಅಮಲಕುಮಾರಿಯರೊಡಗೂಡಿ ಬರುತಿದ್ದರು. ಹೀಗೆ ಬರುತ್ತಿದ್ದವರು ಭರತಚಕ್ರಿಯ ಸೇನೆಯಬಳಿಗೆ ಬಂದವರೇ ಆಕಾಶ ತುಂಬಿದ್ದ ವಿಮಾನಗಳಿಂದ ಕೆಳಗಿಳಿದರು.

ಮೈದುನನ ಬರವನ್ನು ಕೇಳಿದ ಭರತೇಶನು ಬುದ್ಧಿಸಾಗರನನ್ನೂ ತನ್ನ ಸಲ್ಲೀಲೆಯ ಕೆಳೆಯರನ್ನೂ ಸೇರಿಸಿ ಗೂಢಗೋಷ್ಠಿಯಲ್ಲಿ ಓಲಗವಾದನು. ''ನೆರೆದ ಖೇಚರರು ಮತ್ತೆ ಬರಲಿ; ಮೊದಲೊಮ್ಮೆ ವಿನಮಿರಾಜನು ಬರಲಿ'' ಎಂದು ಭರತೇಶನು ವಿನಮಿರಾಜನನ್ನು ಕರೆಸಿಕೊಂಡನು.

ವಿನಮಿರಾಜನು ದೈವನಿರ್ಮಿತವಾದ ಚಾವಡಿಗಳನ್ನು ನೋಡುತ್ತ ಭಾವನ ಸಿರಿಗೆ ಅರ್ತಿ ಪಡೆಯುತ್ತ, ಮಾವನ ಮಗನೆಂಬ ಅಕ್ಕರೆಯಿಂದ ಓಲಗಕ್ಕೆ ಬಂದನು. ಅವನು ಬರುವಾಗ ಉಡಿಸುತ್ತಲಿಲ್ಲ. ಬಂದವನು ಸಾಷ್ಟಾಂಗವೆರಗಲಿಲ್ಲ. ಬೆಡಗಿಂದ ಬಂದವನೇ ಭಾವನಿಗೊಂದು ಕಾಣಿಕೆಗೊಟ್ಟು ಕೈಮುಗಿದನು. ವಿನಮಿಯು ಸುರಸಿಯಲ್ಲವೇ ! ಸುಮತಿಸಾಗರನು ನಿವಾಳಿ ಕಾಣಿಕೆಯಿಟ್ಟು ''ನಮಿರಾಜನು ಈ ಉಚಿತಗಳನ್ನು ಕಳುಹಿಸಿರುವನು'' ಎಂದು ಪ್ರಚುರ ಭೂಷಣಗಳನ್ನಿರಿಸಿ ಸಾಷ್ಟಾಂಗವೆರಗಿದನು. ಭರತೇಶನು ವಿನಮಿಗೆ ಒತ್ತಿನ ಆಸನವಿತ್ತನು, ಸುಮತಿಸಾಗರನನ್ನೂ ಕುಳ್ಳಿರಿಸಿದನು.

''ವಿನಮಿ, ನಿನಗೆ ಪರಿಣಾಮವೇ? ನಮಿಗೂ ಕ್ಷೇಮವೇ? ಮನೆಯೊಳಗಿದ್ದವರೆಲ್ಲ ಪದುಳವೇ?'' ಭರತೇಶನು ಮೈದುನನನ್ನು ವಿಚಾರಿಸಿದನು. ''ದೇವರ ಹಿರಿಮೆಯಿಂದ ನನಗೆ ಸುಖ, ನಮಿರಾಜನಿಗೆ ಯಾವಾಗಲೂ ಪರಮಸಂತೋಷ. ಅರಮನೆಯವರೆಲ್ಲರೂ ಸುಖಿಗಳು.'' ಎಂದು ವಿನಮಿಯು ತಿಳಿಸಿದನು. ''ಪುರುನಾಥನ ಉದರದಲ್ಲಿ ಹುಟ್ಟಿ ಭರತಖಂಡವನ್ನೆಲ್ಲ ಆಳುತ್ತಿರುವಾಗ ಬಂಧುಜನವೆಂಬ ವನಕ್ಕೆ ನೀನು ವಸಂತನಂತಾಗಿರುವೆ ಭಾವಾಜಿ. ನಾನು ಬರುವಾಗ ನಮಿರಾಜನೂ ಬರಬಹುದಿತ್ತು. ಆದರೆ ಅವನೊಂದು ಭ್ರಮರೀವಿದ್ಯೆಯನ್ನು ಸಾಧಿಸುವೆನೆಂದು ತೊಡಗಿದ್ದನು. ಮಂತ್ರಯೋಗದಲ್ಲಿದ್ದ ನಮಿರಾಜನಿಗೆ ಹೇಳಿ, ಮಂತ್ರಿ ಸಹಿತ ಬಂದೆನು, ಇದರಿಂದ ನಮ್ಮ ಪಯಣಕ್ಕೆ ವಿಳಂಬವಾಯಿತು. ನಿನ್ನ ಗಂಭೀರಕ್ಕೆ ಐಶ್ವರ್ಯಕ್ಕೆ ಯಾರಿಗೆ ಸಂತೋಷವಾಗದು? ನಿನಗೆ ಕೈಧಾರೆಯೆರೆಯಲೆಂದು ಭೂರಿನೃಪರು ತಮ್ಮ ಸುತೆಯರನ್ನು ತಂದಿರುವರು. ನಲ್ಲವೆಂಗಳ

ಹೆತ್ತವರು ಹೆಣ್ಣು ತಂದರೆ ಅದಿಲ್ಲದವರು ಝುಲ್ಲಿಪಟ್ಟೆಯೇ ಮುಂತಾದ ಭೂಷಣಗಳನ್ನು ತಂದಿರುವರು. ಅವರನ್ನೆಲ್ಲ ಕರೆಸಬೇಕು.'' ಎಂದು ವಿನಮಿಯು ಮಾತು ಮುಗಿಸಿದನು.

ವಿನಮಿಯ ಮಾತನ್ನಾಲಿಸಿದ ಭರತೇಶನು ಮಂತ್ರಿಗಳಿಗೆ ತಕ್ಕ ಸೂಚನೆಗಳನ್ನಿತ್ತನು. ಅದರಂತೆ ಮಂತ್ರಿಗಳೂ ಸುಮತಿಸಾಗರನೂ ಬುದ್ಧಿಸಾಗರನೂ ಕೂಡಿ ವ್ಯವಸ್ಥೆಮಾಡಿದರು. ಸುತೆಯರ ಕೊಡುವವರು ಮೊದಲು ಬಂದು ಮನುವಂಶ ತಿಲಕನಾದ ಭರತೇಶನೆಡೆಗೆ ಕಾಣಿಕೆಯಿತ್ತರು. ಅರಸನ ಅಂಗ ಲಾವಣ್ಯಕ್ಕೆ ಖಚರ ಪುಂಗವರೆಲ್ಲರೂ ಆಶ್ಚರ್ಯಪಟ್ಟು ಎವೆಯಿಕ್ಕದೆ ನೋಡಿದರು. ಹಾಗೆ ನೋಡುವುದೇ ದೇವಸಂಪತ್ತೆಂದು ಅವರು ಭಾವಿಸಿದರು. ''ಪ್ರಾಯದಲ್ಲಿ ಇಂಥ ಚೆಲುವನ್ನು, ಈ ಬೆಡಗನ್ನು, ಈ ಸಿರಿಯ ಗೌರವವನ್ನು ಪಡೆಯಬೇಕು. ಜಡರೆಲ್ಲರು ದೊರೆಗಳೇ? ಸುಡು ಸುಡು,'' ಎಂದು ಅವರು ಮನದಲ್ಲೇ ಎದೆತುಂಬುವಂತೆ ನೆನೆದರು.

ಆಗ ಖೇಚರಮಂತ್ರಿ ಅವರೆಲ್ಲರ ಇಂಗಿತವನ್ನೇ ಬಿನ್ನವಿಸಿದನು. ''ದೇವರನ್ನು ಕಾಣಬೇಕೆಂದು ಬಹುಕಾಲದಿಂದ ಆಕಾಶಗಾಮಿಗಳಾದ ನಾವು ಆಶೆಪಟ್ಟಿದ್ದೆವು. ಈಗ ಆ ನಮ್ಮ ಆಶೆ ಪೂರ್ತಿಯಾಯಿತು. ಸಾಮಾನ್ಯ ಪದವನ್ನು ಪಡೆದವರಿದ್ದಾರೆ; ಆದರೆ ಷಟ್ಖಂಡಭೂಮಿಯನ್ನಾಳುವವರಾರಿದ್ದಾರೆ? ನಿನ್ನ ಸೊಬಗು ನರೇಂದ್ರರಲ್ಲೂ ಅಮರೇಂದ್ರರಲ್ಲೂ ಯಾರಿಗುಂಟು? ಇದು ದಾಕ್ಷಿಣ್ಯವಲ್ಲ ! ಡಂಬಕವಲ್ಲ; ಇದಕ್ಕೆ ಪುರುಜಿನನೇ ಸಾಕ್ಷಿ ನೋಡು, ನಿನಗೆ ಸೋಲದ ಗಂಡು ಹೆಣ್ಣು ಮನುಕ್ಷೇತ್ರದಲ್ಲೇ ಇಲ್ಲ, ಸುಂದರಾಗಿಯರಾದ ಮುನ್ನೂರು ಕನ್ನೆಯರನ್ನು ನಮ್ಮ ಅರಸರು ತಂದಿರುವರು, ಚಂದದಿಂದ ಅವರನ್ನು ಮದುವೆಯಾಗಬೇಕು''

ಖೇಚರಮಂತ್ರಿಯ ಮಾತಿಗೆ ಭರತೇಶನು ನಗುತ್ತ, ಅವನನ್ನು ಕುಳ್ಳಿರಲು ಸೂಚಿಸಿದನು. ಬುದ್ಧಿಸಾಗರನು ಖೇಚರಮಂತ್ರಿಯ ಮಾತು ಲೇಸೆಂದು ಹೇಳಿದನು. ದೊರೆ ಮಕ್ಕಳೂ ಅದನ್ನೇ ಹೇಳಿದರು. ನಾಳಿನ ರಾತ್ರಿ ಮದುವೆಯೆಂದು ಮಂತ್ರಿ ತಿಳಿಸಿದನು. ಎಲ್ಲರೂ ಒಪ್ಪಿದರು. ಸುಖಕ್ಕೆ ಒಪ್ಪದವರಾರು?

''ಬಂದವರಿಗೆಲ್ಲ ಪಡಿ, ಬಿಡಾರಗಳನ್ನು ಚೆಂದದಿಂದ ಮಾಡಿಸಿ. ಇವರು ಮಿಂದುಂಡು ವಿಶ್ರಮಿಸಲಿ.'' ಎಂದು ಭರತೇಶನುಸುರಿ ಮಣಿಮಯದ ಉಡುಗೊರೆಗಳನ್ನು ಖಚರರಿಗಿತ್ತು ಕಳುಹಿಸಿದನು. ವಿನಿಮಿಯನ್ನೂ ಮಂತ್ರಿಗಳನ್ನೂ ಮನ್ನಿಸಿ ಬೀಳ್ಕೊಟ್ಟನು.

ಮರುದಿನ ಕಟಕವೆಲ್ಲ ಸಿಂಗಾರವಾಯಿತು. ಸಾರಣೆ, ತೋರಣ, ಗುಡಿ, ಕೇತುಗಳೆಲ್ಲ ಮೆರೆದುವು. ರಂಗವಲ್ಲಿ ಪುಷ್ಪವಲ್ಲಿಗಳು ರಂಜಿಸಿದುವು. ಎಂಟು ದಿಕ್ಕುಗಳಲ್ಲೂ ಕರುಮಾಡುಗಳು ಕಾಣಿಸಿದುವು. ಕುರುಜಗಳೆದ್ದು ತೋರಿದುವು. ಆನೆ ಕುದುರೆ ರಥಗಳೆಲ್ಲ ಶೃಂಗಾರಗೊಂಡವು. ಎಲ್ಲೆಲ್ಲೂ ಮಹೋತ್ಸವ ಮೆರೆಯಿತು. ' ಕೋಟೆಯ ಹೆಬ್ಬಾಗಿಲುಗಳಲ್ಲಿ, ಗೋಪುರಗಳಲ್ಲಿ, ಝುಲ್ಲಿಗಂಟೆಗಳು ಮೆರೆದುವು. ನೆಂಟರೂ ದೊರೆಗಳೂ ವ್ಯಂತರರೂ ಉಳಿಗದವರೂ ಎಲ್ಲರೂ ಸಿಂಗರಿಸಿಕೊಂಡು ಉತ್ಸವದಲ್ಲಿ ಸೇರಿಕೊಂಡರು. ಸಾಲುಸಾಲಾಗಿ ಮುನ್ನೂರು ಮದುವೆ ಮಂಟಪಗಳು ಮಯನ

ತಂತ್ರದಲ್ಲಿ ಸನ್ನದ್ಧವಾದುವು. ಹೊನ್ನು ರನ್ನಗಳ ಅಲಂಕಾರಗಳಿಂದ ಅವು ಸೊಬಗನ್ನು ಸೂಸುತಿದ್ದುವು. ರಾಣಿಯರು ಉತ್ಸಾಹದಿಂದ ಅಲಂಕರಿಸಿಕೊಂಡರು. ನೋಡಿದ ನರರೂ ಸುರರೂ ಬೆರಗಾಗುವಂತೆ ಭರತೇಶನು ಶೃಂಗಾರವಾದನು.

ಖಚರಭೂಪರು ತಮ್ಮ ಸುತೆಯರನ್ನು ನವರತ್ನಖಚಿತವಾದ ಭೂಷಣಗಳಿಂದ ರಚನೆಯಾದಂತೆ ಸಿಂಗರಿಸಿದರು. ಅವರನ್ನು ಸಿಂಗರಿಸಿದ ದಾದಿಯರೋ ಶುಚಿರ್ಭೂತ ರಾದವರು. ತಕ್ಕೆ ತುರುಬು, ತೊಂಡಿಲು ಮಣಿಮಾಲೆ, ಚೊಕ್ಕ ಬೊಟ್ಟಿಕ್ಕಿದ ರವಕೆ, ಲೆಕ್ಕಿಸಿ ತಿದ್ದಿ ನಿರಿವಿಡಿದು ಉಡಿಸಿದ ಸೀರೆಗಳಿಂದ ಆ ಕನ್ನೆಯರು ಸೊಗಸಾಗಿ ಎಸೆದರು. ಅಲತಿಗೆಯಿಂದ ಮಿಂಚುತ್ತಿರುವ ಉಗುರು, ಚಕ್ಕುಲಿಸುತ್ತಿರುವ ಅಂದುಗೆ, ಕಂಕಣಬಳೆ ಗಳಿಂದ ಆ ನೀರೆಯರು ನಳನಳಿಸಿದರು. ಮೂಕುತಿ, ಮುತ್ತಿನ ಸರ, ಕಣಪತ್ರ, ಚಿಂತಾಕು, ನೇವಳ ಉಳಿಪದಕ, ಬೆರಳುಂಗುರ, ತೋಳ್ಬಳೆಗಳಿಂದ ಆ ಕನ್ನೆಯರು ಕಂಗೊಳಿಸಿದರು. ಕನ್ನಡಿಕದಪಿನಲ್ಲಿ ಮಕರಿಕಾಪತ್ರ, ಬಾವನ್ನಜವಾಜಿಯ ಲೇಪನ, ಚಿನ್ನದ ಹೂ, ತಾಳೆಹೂಗಳಿಂದ ಆ ಚೆನ್ನವೆಣ್ಣುಗಳೊಪ್ಪಿದರು. ಸಕಲ ಶೃಂಗಾರವಾದ ಮೇಲೆ ದಾದಿಯರು ಮಾಣಿಕ್ಯದ ಕನ್ನಡಿಯನ್ನು ತೋರಿಸಿದರು. ಅವರು, ಕನ್ನಡಿಯನ್ನು ನೋಡಿ ಓರೆಕೋರೆ ಗಳನ್ನು ತಿದ್ದಿದರು. ತಿಲಕವನ್ನು, ಕಾಡಿಗೆಯನ್ನು ತುರುಬನ್ನು ಅವರೆ ತಿದ್ದಿಕೊಂಡರು. ಭರತೇಶನು ಜಾಣನೆಂದು ಜಗವರಿತಿದ್ದರೆ ಸಿಂಗರಿಗನೆಂದು ಸ್ವರ್ಗವರಿತಿತ್ತು. ಅದರಿಂದಲೇ ಅವರು ಹುರುಳಾಗಿ ಸಿಂಗರಿಸಿಕೊಂಡರು. ಪ್ರೌಢೆಯರಾದ ಭರತೇಶನ ರಾಣಿಯರು ನೋಡುವವರು ಒಪ್ಪುವ ರೀತಿಯಲ್ಲಿ ತಮ್ಮನ್ನು ತಾವೇ ರಚಿಸಿಕೊಂಡರು.

'ಭೂಚರಾಂಗನೆಯರು ಚಕ್ರಿಯ ಚಿತ್ತವಿಲೋಚನಗಳನ್ನು ಒಲಿಸಿಕೊಂಡವರು. ಅವರು ಅವನ ಚಿತ್ತದಿಂದ ಮರೆತುಹೋಗುವಂತೆ ನೀವು ಮಾಡಬೇಕು'' ಎಂದು ದಾದಿಯರು ಸೂಚಿಸಿದರು. ಅವರಾದರೊ ಆತನ ಆಯತವರಿತವರಂತೆ ನಗುತಿದ್ದರು. ಶೃಂಗಾರವು ಪರಿಪೂರ್ಣವಾಗಲು ದಾದಿಯರು ನೀರಾಜನ ವಿರಚನೆಗೈದು ಭರತ ರಾಜೇಂದ್ರನ ಮನವ ಸೋಲಿಸಿಯೆಂದು ಹರಸಿ ಸೇಸೆಗಳನಿಕ್ಕಿದರು.

ಮುಂಜಾವದಲ್ಲಿ ಉತ್ತಮ ಲಗ್ನವು ಹತ್ತಿದಾಗ ಭರತೇಶನ ಊಳಿಗದವರು ಬಂದು ಹೇಳಲು ಖೇಚರರೆಲ್ಲರೂ ಎದ್ದು ಅಣಿಯಾದರು. ಪಲ್ಲಕಿಯಲ್ಲಿ ತಮ್ಮ ಕನ್ನೆಯರನ್ನು ಕುಳ್ಳಿರಿಸಿಕೊಂಡು ಖೇಚರರಾಜರು ವಿವಾಹ ಮಂಟಪದೆಡೆಗೆ ಹೊರಟರು. ದಿಬ್ಬಣಿಗರ ಮೆರವಣಿಗೆಯು ಮಹಾವಿಜೃಂಭಣೆಯಿಂದ ಸಾಗಿತು.

ಆನೆ ಕುದುರೆ ತೇರುಗಳಿಂದಲೂ ವಿಮಾನ ಪತಾಕೆ ಸತ್ತಿಗೆಗಳಿಂದಲೂ ಕಹಳೆ ಭೇರಿಗಳ ಘೋಷಣೆಗಳಿಂದಲೂ ಮೆರವಣಿಗೆಯು ಗಮನಿಸಿತು. ತಂಬಟೆ, ತುಡುಮು, ಚಿಂಬಿಕೆ, ಕೊಂಬುಗಳ ನಾದವು ದಶದಿಕ್ಕುಗಳಿಗೂ ಕೇಳುವಂತಿತ್ತು. ಆ ಮೆರವಣಿಗೆಯಲ್ಲಿ ಹಾಡುವವರು, ಕೀರ್ತಿಸುವವರು, ಪಾತ್ರವನ್ನಾಡುವವರು, ತಮ್ಮ ಕೌಶಲ್ಯವನ್ನು ತೋರುತ್ತಿದ್ದರು. ಅದನ್ನು ನೋಡುವವರಿಗೂ ಮೆಚ್ಚುವವರಿಗೂ ಕೊರತೆಯಿದ್ದಿಲ್ಲ. ವಿನಮಿ

ರಾಜನನ್ನು ಮುಂದೆ ಮಾಡಿಕೊಂಡು ತಮ್ಮ ನಂದನೆಯರನ್ನು ಹಿಂದಿಕ್ಕಿಕೊಂಡು ಖೇಚರೇಂದ್ರರು ಭರತೇಶನ ಅರಮನೆಗಾಗಿ ಬರುತ್ತಿದ್ದರು.

ಇವರನ್ನೆದುರುಗೊಳ್ಳಲು ಕಟಕದ ಬಲಸಹಿತ ಜಯಂತರಾಜನು ಬಂದನು. ಅವನೊಂದಿಗೆ ಕಳಶಕನ್ನಡಿಯವರು ಮುಂದಿನಿಂದಲೂ ಕ್ಷತ್ರಿಯಬಲ ಹಿಂದಿನಿಂದಲೂ ನಡೆಯುತ್ತಿದ್ದಿತು. ಜಯಂತನು ವಿನಮಿರಾಜನಿಗೆ, ಉಳಿದವರಿಗೆ ಕೈಮುಗಿದು ಒಳನುಡಿಯಿಂದ ಮಾತನಾಡಿದನು. ದಿಬ್ಬಣವೆರಡು ಒಂದಾಗಿ ಉತ್ಸಾಹಲೀಲೆಯಿಂದ ಅರಮನೆಗೆ ಸಾಗಿತು. ಅಲ್ಲಿ ಹೆಂಗಳೆಯರು ಪಲ್ಲಕ್ಕಿಯಿಂದಿಳಿದು ಪುಲ್ಲಿಪಟ್ಟೆಯ ಮುಸುಕಿಕ್ಕಿಕೊಂಡು ಮೆಲ್ಲನೆ ಮದುವೆಯ ಮಂಟಪಕ್ಕೆ ಒಯ್ಯಾರದಿಂದ ನಡೆದರು. ಅಲ್ಲಿ ಮೂನ್ನೂರು ಪಡಲಿಗೆಗಳಲ್ಲಿ ಸಾಲುಸಾಲಾಗಿ ಮೆಟ್ಟಕ್ಕಿ ಇರಿಸಿದ್ದರು. ತೆಂಕುಬಡಗಾಗಿ ತೆರೆ ಇಳಿಸಿದ್ದರು. ಮಾಣಿಕ್ಯ ದೀಪಗಳ ಸಾಲು ರಂಜಿಸುತ್ತಿರುವ ಕಲ್ಯಾಣ ಮಂಟಪದ ಒಳಹೊಕ್ಕು ಖೇಚರವನಿತೆಯರು ಸವಿಸವಿಯಾಗಿ, ಸಂಭ್ರಮವಾಗಿ, ಕೋಕಿಲರವದಂತೆ ಶೋಭನಗಳನ್ನು ಹಾಡುತ್ತಿದ್ದರು. ಪಡಲಿಗೆಯೇರಿದ ಖೇಚರಕನ್ನೆಯರು ನಿರ್ಮಲಾಂತಃಕರಣದಿಂದ ಭರತರಾಜನನ್ನು ಪ್ರೀತಿಯಿಂದ ಧ್ಯಾನಿಸುತಿದ್ದರು.

ಆ ಹೊತ್ತಿಗೆ ಸರಿಯಾಗಿ ಭರತೇಶನಾದರೊ ಜಿನವಾಸಕ್ಕೆ ಹೋಗಿ, ಜಿನೇಂದ್ರ ವಂದನೆಯನ್ನು ಮಾಡಿ ಗುರುಹಂಪನಾಥನನ್ನು ಮನಮುಟ್ಟಿ ಧ್ಯಾನಿಸಿ, ಅರಮನೆಗೆ ಮರಳಿ ಬಂದು ತನ್ನ ಪತ್ನಿಯರೊಂದಿಗೆ ಸಜ್ಜಾಗಿದ್ದನು. ವನಜಗಂಧಿನಿಯರು ಸಿಂಗರಿಸಿದ ಮದುವಣಿಗನ ಬದಿಯಲ್ಲಿದ್ದರು. ಅವರಾದರೊ ಮನದಲ್ಲಿ ಯಾವ ರೀತಿಯ ಮತ್ಸರವೂ ಇಲ್ಲದೆ ಒಬ್ಬೊಬ್ಬರು ಒಂದೊಂದು ವಿನೋದವನ್ನೇ ನುಡಿಯುತಿದ್ದರು.

''ದೇವ, ಚಿನ್ನಹ, ಹಂಸಕ್ಕೆ ಹೆಣ್ಣುಹಕ್ಕಿಗಳು ಸಾವಿರವುಂಟು. ಮತ್ತಲ್ಲಿಗೆ ಕೆಲವು ಹಕ್ಕಿಗಳು ಬಂದುವು. ಆಗ ಮೊದಲಿನವುಗಳು ನೊಂದು ಕೊಳ್ಳುವವೆ?'' ಒಬ್ಬಳು ಕೇಳಿದಳು.

''ಒಂದು ಹಂಸವೆ ಬಹುರೂಪವಾಗಿ ಹಲವರೊಡಗೂಡಲು ಅವುಗಳು ನೊಂದುಕೊಳ್ಳಲು ಏನು ಕಾರಣವೆಂದು ನೀನೇ ಹೇಳು?'' ಎಂದು ಭರತೇಶನು ಆಕೆಗೆ ಒಲಿದು ನಗುತ್ತ ಕೇಳಿದನು.

''ಕುಸುಮದ ಅಂಗಡಿಯಲ್ಲಿ ತುಂಬಿಯಿತ್ತು, ಮತ್ತೆ ಹೊಸ ಹೂವೂಗಳನ್ನು ಅಂಗಡಿಗೆ ತಂದರು. ಆ ತುಂಬಿಗೆ ಪ್ರೀತಿಯು ಯಾವ ಪುಷ್ಪದಲ್ಲಿರುವುದು?'' ನಸುನಗುತ್ತ ಒಬ್ಬಳು ಪ್ರಶ್ನಿಸಿದಳು.

''ಕಾತರಾರ್ಥದ ತುಂಬಿಯಲ್ಲ ಅದು; ಪರಂಜ್ಯೋತಿಯನ್ನು ಕಂಡ ತುಂಬಿಯದು. ಆ ತುಂಬಿಗೆ ಎಲ್ಲರಲ್ಲೂ ಸರಿ.'' ಎಂದು ಸರಸದಲ್ಲೇ ಅವನು ಉತ್ತರವಿತ್ತನು.

''ಪರಿಣಯದ ಸಮಯದಲ್ಲಿ ನೀವಿಂತು ನುಡಿಯುವುದೆ? ಸರಸವಿರಸವಾದೀತು. ಸುಮ್ಮನಿರಿ.'' ಎಂದು ಉಳಿದ ನಾರಿಯರು ಉಸುರಿದರು. ''ಬಂದ ನಾರಿಯರನ್ನಾಳುವ ಶಕ್ತಿ ಪುರುಷೋತ್ತಮಗುಂಟು. ನಮಗೇಕೆ ಅದರ ಚಿಂತೆ.'' ಎಂದು ಎಲ್ಲರೂ ನುಡಿದರು.

"ಯಾರದನ್ನು ಬಯಸಿದರು? ಮೊದಲು ಸಾರವಾದ ಆತ್ಮಭಾವನೆಯನ್ನು ಮಾಡಿದುದರ ಪುಣ್ಯಫಲವು ತರುತ್ತಿದೆ, ನಿಮ್ಮನ್ನು ಬಯಸಿ ತಂದವನಲ್ಲ, ಇಂದಿನ ಕನ್ನೆಯರ ಕಂಡವನಲ್ಲ; ಸಂಬಂಧಗೊಡುತ್ತಿರುವುದು ಪುಣ್ಯ" ಎಂದು ಪರಬ್ರಹ್ಮ ರಸಿಕನು ಒಲಿದು ನುಡಿದನು.

ಧಾರೆಗೆ ಸಮಯವಾಯಿತೆಂದು ಸಂಚಾರ ಕಾಂತೆಯೊಬ್ಬಳು ಬಂದು ಬಿನ್ನವಿಸಿದಳು. ಭರತಚಕ್ರಿಯು ಆ ರಮಣಿಯರನ್ನು ಅಲ್ಲಿಯೇ ಬಿಟ್ಟು ಓರಂತೆ ಮದುವೆಯ ಗೃಹಕ್ಕೆದ್ದನು. ಇಳಿಯಬಿಟ್ಟ ಸೆರಗು; ಹೊದೆದ ದಿವ್ಯವಸ್ತ್ರ, ಕರದಲ್ಲಿ ಹೊನ್ನಿನ ಒರೆಯ ಕಠಾರಿ; ಮಿರುಗುವ ಪಾವುಗೆಯನ್ನು ಮೆಟ್ಟಿಕೊಂಡು ಸೊಬಗನಾದ, ಭರತೇಶ್ವರನು ಬಂದನು.

ಭೋಗ ಸಾಮ್ರಾಜ್ಯನಾಯಕ ಪಾದಜತನ! ಲೋಕಾಗಮ್ಯ ಸುಖಿ ಪರಾಕು!

—ಎಂದು ಪಾಠಕರು ಸ್ತುತಿಸುತ್ತಿರಲು ಸೀಗುರಿಚಾಮರಗಳ ಒಗ್ಗಿನಲ್ಲಿ ಮನ್ಮಥನಿಗಿಂತಲೂ ಮಿಗಿಲಾದ ಭರತೇಶನು ಬಂದನು. ಗಾಯಕಿಯರು ಲಲಿತವಾದ ಶೋಭನಗಳನ್ನು ಹಾಡುತ್ತಿರಲು ಚೆಲುವರಸನು ಬಂದು ಮಂಟಪವನ್ನು ಹೊಕ್ಕನು. ಅಲ್ಲಿದ್ದ ಮುತ್ತಿನ ಮೆಟ್ಟಕ್ಕಿಯನ್ನು ಮೆಟ್ಟಿನಿಂತನು. ಪಟ್ಟದರಸಿಯ ವಿವಾಹಕ್ಕೆ ಮಾತ್ರ ಭಾಸಿಗ. ಈಗ ಮಿಕ್ಕ ಸಿಂಗಾರಗಳೆಲ್ಲ ಸೊಗಸುಗೊಂಡಿದ್ದುವು. ತೆಂಕು ಬಡಗಲಾಗಿರುವ ತೆರೆಯ ಮುಂದೆ ಸಾಲಾಗಿ ತರುಣಿಯರು ಪಶ್ಚಿಮಮುಖಿರಾಗಿದ್ದರು. ಭೂವರನು ಪೂರ್ವಮುಖನಾಗಿ ನಿಂತನು. ಒಂದು ರೂಪಿನಲ್ಲಿ ನಡೆದು ಬಂದ ಭರತೇಶನು ಒಡನೆ ಮುನ್ನೂರು ರೂಪಾಗಿ ಪಡಲಿಗೆಯನ್ನೇರಿದನು. ಇದನ್ನು ಕಂಡ ಖೇಚರೇಂದ್ರರು ಅಚ್ಚರಿಗೊಂಡರು.

ಉತ್ತಮರಾದ ಬ್ರಾಹ್ಮಣರು ಸಿದ್ಧಾಂತಮಂತ್ರವನ್ನೋದಿ ಮುತ್ತಿನ ಅಕ್ಷತೆಗಳನ್ನಿಟ್ಟರು. ಮಂಗಳಾಂಗೀಯರು ಭೃಂಗಗಳಂತೆ ಮಂಗಲಶೋಭೆಗಳನ್ನು ಹಾಡುತ್ತಿರಲು ಮಂಗಳಾಷ್ಟಕಗಳು ಪೂರ್ಣವಾಗಿ ಮಧ್ಯದ ತೆರೆ ಸರಿಯಿತು. ನೆರೆದವರೆಲ್ಲ ಜಯಜಯವೆಂದರು. ಖೇಚರೇಂದ್ರರು ತಮ್ಮ ಕನ್ನೆಯರ ಬಲಗೈಗಳನ್ನೆತ್ತಿ ರಾಯನ ಒಂದೊಂದು ರೂಪಿನ ಬಲಗೈಗಳಿಗಿತ್ತರು. ಭರತರಾಜನ ಕೈಮುಟ್ಟಿದೊಡನೆ ಆ ಜವ್ವನೆಯರ ಮೈ ಪುಳಕಗೊಂಡಿತು. ಎಳೆಲತೆಗಳನ್ನು ಕಲ್ಪವೃಕ್ಷಕ್ಕೆ ಹಬ್ಬಿಸಿ ಬೆಳೆಯೆಂದು ನೀರೆರೆವಂತೆ ಆ ಖೇಚರೇಂದ್ರರು ಹೊಳೆವ ಗಿಂಡಿಯನ್ನೆತ್ತಿ ಧಾರೆಯೆರೆದರು. ಶೋಭನ, ಮಂಗಲ ಜಯ ಜಯ, ಎಂದು ಘೋಷವೆಲ್ಲೆಲ್ಲೂ ಮೊಳಗಿತು.

ಭರತೇಶನು ಅಲ್ಲಿಂದ ಹೊರಟು ಹೋಮಶಾಲೆಗೆ ಬಂದನು. ಉರಿಯುತ್ತಿರುವ ಅಗ್ನಿಕುಂಡಗಳನ್ನು ಕೈಹಿಡಿದ ಕನ್ನೆಯರೊಂದಿಗೆ ಪ್ರದಕ್ಷಿಣೆಗೈದನು. ಚಂದ್ರನು ಬಹುರೂಪವಾಗಿ ರೋಹಿಣಿಯು ಬಹುರೂಪ ಧರಿಸಿ ಮಂದರಾದ್ರಿಗೆ ಸುತ್ತುಬಂದಂತೆ ಅವರು ಸುತ್ತಿದರು. ಸೊಕ್ಕಾನೆಯೊಂದಿಗೆ ಹೆಣ್ಣಾನೆ ನಡೆವಂತೆ ಭರತೇಶನೊಂದಿಗೆ ಖೇಚರ ಕನ್ನೆಯರು ನಡೆದರು. ಮಕ್ಕಳ ಕೊಟ್ಟ ಖೇಚರೇಂದ್ರರು ಈ ಸೊಬಗನ್ನು ಎವೆಯಿಕ್ಕದೆ ನೋಡಿ ಹಿಗ್ಗಿದರು.

ಭರತೇಶನ ಸನ್ನೆಯಂತೆ ಹೆಣ್ಣು ಕೊಟ್ಟವರು ಮಂತ್ರಿಗಳೊಂದಿಗೆ ತಮ್ಮ ನಿವಾಸಗಳಿಗೆ

ತೆರಳಿದರು. ಭರತೇಶನು ಹೆಣ್ಣುಗಳೊಂದಿಗೆ ಬೇರೊಂದು ಮಂದಿರಕ್ಕೆ ತೆರಳಿದನು. ಸಜ್ಜೆ ಮನೆಯ ಪಟ್ಟಶಾಲೆಯಲ್ಲಿ ಎಲ್ಲವೂ ಸಜ್ಜಾಗಿದ್ದುವು. ಮುನ್ನೂರು ರೂಪಿನಲ್ಲಿ ಮುನ್ನೂರು ಶಯ್ಯಾಗೃಹಗಳನ್ನು ತುಂಬಿ ಭರತೇಶನು ತನ್ನ ಲೀಲೆಯಲ್ಲಿದ್ದನು. ಕಾಂತೆಯರೊಂದಿಗೆ ಸರಸದಲ್ಲಿ ಮೆರೆದನು.

ಅಂದಿನಿರುಳು ಕಾಮಕೇಳಿಯಲ್ಲಿ ಕಳೆಯಿತು. ಭರತೇಶನು ಕಾಮತೃಪ್ತಿಯಲ್ಲಿ ಕಣ್ಣು ತಿರುಗಿ ಮಾತು ಮುಗಿದು ನಿದ್ರಾಮುದ್ರೆಯಲ್ಲೊರಗಿದ್ದ ಕಾಂತೆಯರನ್ನು ಬೆಳಿಗ್ಗೆ ಬಿಟ್ಟಿದ್ದನು. ಆನಂತರ ಆತ್ಮಯೋಗದಲ್ಲಿ ಮೆರೆದನು. ಆಗ ತನು ತನ್ನದಲ್ಲವೆಂದೆಣಿಸುವನು. ನಿರಂಜನ ಸಿದ್ಧನ ಧ್ಯಾನದ ಅನುಭವದಲ್ಲಿದ್ದನು. ತನ್ನ ನಿಜಾಂಗದಲ್ಲಿದ್ದು ಆತನನ್ನು ನೋಡುತಿದ್ದನು. ಆಗ ಅರುಣೋದಯದ, ಸುಪ್ರಭಾತದ, ಹಾಡುಗಳ ನಾದ ಹಬ್ಬಿತು. ಮನೆಮನೆಯಲ್ಲಿದ್ದ ರೂಪುಬಯಲಾಗಿತ್ತು. ಅವರೆಲ್ಲರೆದ್ದು ಉಟ್ಟು ತೊಟ್ಟು ಯೋಗದಲ್ಲಿದ್ದ ರಾಯನ ಒತ್ತಿನಲ್ಲಿ ಕುಳಿತರು. ಹಂಸನಾಥನ ಹಾಡು ಕೇಳಲು ಭರತೇಶನು ಕಣ್ಣು ತೆರೆದನು. ಪೂರ್ವಾದ್ರಿಯನ್ನೇರಿಬಂದ ತರಣಿಮಂಡಲವನ್ನು ಕಂಡು ನಿತ್ಯ ಕರ್ಮಗಳಲ್ಲಿ ನಿರತನಾದನು.

## ೧೩

# ಭೂಚರಿಯರ ವೈವಾಹ

ಭರತೇಶನು ವಿನಮಿರಾಜನನ್ನೂ ಖೇಚರರನ್ನೂ ಭೂವರರನ್ನೂ ಕರೆಯಿಸಿಕೊಂಡು ಮನೆಯಲ್ಲಿ ಔತಣ ಮಾಡಿಸಿ ಘನತರವಾದ ಉಡುಗೊರೆಗಳನ್ನಿತ್ತು ಅವರೊಂದಿಗೆ ವಿನೋದವಾಡಿದನು.

''ಇಂದಿನಿಂದ ನೀವೆಲ್ಲರೂ ನಿಮ್ಮ ನಂದನೆಯರ ಮನೆಗೆ ಬಂದುಂಡು ಹೋಗುತ್ತಾ ಕೆಲವು ದಿನವಿರಬೇಕು,'' ಎಂದ ಭರತೇಶನ ವಚನವನ್ನು ಕೇಳಿ ಖೇಚರೇಂದ್ರರು ಸಂತಸದಿಂದ ತಮ್ಮ ಬೀಡುಗಳಿಗೆ ತೆರಳಿದರು.

ಭರತೇಶನು ಆಮೇಲೆ ತನ್ನ ಸತಿಯರ ದಾಸಿಯರನ್ನು ಕರೆಯಿಸಿ, ಅವರು ಅವರ ರಾಣಿಯರೊಂದಿಗಿರಬೇಕೆಂದು ನೇಮಿಸಿದನು. ಅನಂತರ ನಂಬುಗೆವಂತರನ್ನು ಕರೆದು, ನೂತನ ವಧುಗಳು ಹೇಳಿದುದನ್ನು ಇಂದಿನಿಂದಲೇ ತನಗೆ ತಿಳಿಸಬೇಕೆಂದು ಸೂಚಿಸಿ, ಉಡುಗೊರೆಯಿತ್ತು ಕಳುಹಿಸಿದನು. ಬಳಿಕ ಮುನ್ನಿನ ರಾಣಿಯರ ಓಲಗದಲ್ಲಿದ್ದು ನೂತನ ರಾಣಿಯರನ್ನಲ್ಲಿಗೆ ಕರೆಯಿಸಿದನು. ಅವರು ಬಂದೆರಗಿದಾಗ ಇವರು, ''ತಂಗಿಯರೇ, ಕನಕಲತಾಂಗಿಯರೇ ಬನ್ನಿ. ಸುಖವಾಗಿ ಬಾಳುವ. ಬನ್ನಿ.'' ಎಂದು ಎರಗಿದ ತಂಗಿಯರನ್ನೆತ್ತಿ ಅಪ್ಪಿಕೊಂಡರು. ಈ ರೀತಿಯಲ್ಲಿ ನಿರಾತಂಕವಾದ ಲೀಲೆಗಳಿಂದ ಭರತೇಶನು ಕೆಲವು ದಿನಗಳಿರುವಾಗ ಮತ್ತೊಂದು ಸಂತೋಷವು ಬಂತು.

ಗಜಗಳ ಗುಂಪಿನಲ್ಲಿ ಮಹಾಗಜವು ತೋರುವಂತೆ ರಾಜರ ಸಭೆಯಲ್ಲಿ ಭರತೇಶನಿದ್ದಾಗ ಸೇನಾಪತಿ ಜಯರಾಜನ ಬಿನ್ನವತ್ತಳೆಯೊಂದು ಬಂತು.

''ಸ್ವಸ್ತಿ ಶ್ರೀ ಮನ್ಮಹಾನಿಸ್ಸೀಮ ಸಾಮರ್ಥ್ಯಗೆ, ದುಸ್ತರ ರಿಪುರಾಜ ದಲ್ಲಣಗೆ, ಆಪ್ತರಾಜಸ್ತೋಮ ಸಂತೋಷಕರಗೆ, ಕಾಮಿನೀಜನ ಪಂಚಬಾಣಗೆ, ಷಟ್ಖಂಡ ಭೂಮಂಡಲಾಗ್ರಗಣ್ಯರಿಗೆ, ಜಾಣರಿಗೆ ಸುಕ್ಷೇಮವನ್ನು ಮಾಡುವ ಕೋವಿದಗೆ, ಸುಜನೇಂದು ಭರತಚಕ್ರೇಶಗೆ—

ದೇವರ ಊಳಿಗರ ವಿಜಯನು ಭಯಭಕ್ತಿಗಳಿಂದ ಸಾಷ್ಟಾಂಗವೆರಗಿ ಕೈಮುಗಿದೆದ್ದು ಮಾಡುವ ಬಿನ್ನಹವು. ಪಡುವಣ ಷಟ್ಖಂಡವು ಜೈಸಲು ಸಾಧ್ಯವಾಯಿತು. ಅಲ್ಲಿನ ನೃಪರೆಲ್ಲರೂ ಅಧ್ಯಾತ್ಮಸೂರ್ಯನಾದ ನಿನ್ನಡಿಗಳನ್ನು ಕಾಣುವ ತವಕದಲ್ಲಿದ್ದಾರೆ. ಕೆಲವರು ವಾರಣವಾಜಿಯನ್ನು ಆರಿಸಿರುವರು. ಇನ್ನೂ ಕೆಲವರು ವಾರಣಗಮನದ ರಾಜಪುತ್ರಿಯರನ್ನು ಸಿಂಗರಿಸಿರುವರು. ತಾವು ಕ್ಷತ್ರಿಯರೆಂಬ ಸಲುಗೆಯಿಂದ ತಮ್ಮ

ಪುತ್ರಿಯರನ್ನು ತಂದುಕೊಡುವ ಯಾತ್ರೆಯಲ್ಲಿರುವರು. ನಮ್ಮೊಡೆಯರಿಗೆ ವ್ರತಗಾತ್ರೆಯ ರಾಗಬೇಕೆಂದು ನಾನು ಸೂಚಿಸಿದೆನು. ವ್ರತಗಳನ್ನು ಕೈಕೊಳ್ಳಲು ಮುನಿಗಳು ಬೇಕು; ಧರ್ಮಪದ್ಧತಿಯಿಲ್ಲದ ಈ ಕ್ಷೇತ್ರದಲ್ಲಿ ಮುನಿಗಳಿಲ್ಲ, ಆದ್ದರಿಂದ ಆರ್ಯಭೂಮಿಗೆ ಹೋಗಿ ವ್ರತಗೊಳ್ಳಲು ಅವರೊಪ್ಪಿದರು. ಅಷ್ಟರಲ್ಲೊಂದು ವಿಸ್ಮಯವಾಯಿತು. ದೇವರ ಪುಣ್ಯವು ಉತ್ಕೃಷ್ಟವಲ್ಲವೆ? ಇಷ್ಟಯಾತ್ರೆಗೆ ಹೋಗುತ್ತಿರುವ ಚಾರಣರೊಬ್ಬರು ಆಗ ಥಕ್ಕನೆ ತಮ್ಮ ಪಾಳೆಯಕ್ಕಿಳಿದರು. ಅವರ ಕೈಯಿಂದ ಚಾರಿತ್ರವ್ರತವಾಯಿತು.

ಮುಂದಿನ ಬಿನ್ನಹವೊಂದಿದೆ. ಕುಂದಣದ ಬೊಂಬೆಗಳಂತಿರುವ ಮುನ್ನೂರಿಪ್ಪತ್ತು ಮಂದಿ ರಾಜಪುತ್ರಿಯರು ಚೆಂದದಿಂದ ಬರುತ್ತಿರುವರು. ನಾಳೆ ಬಂದು ಕಾಣುವರು. ಇಂತಿದು ಬಿನ್ನಹವು.

ಈ ಓಲೆಯನ್ನು ತಂದ ಚರನಿಗೆ ಬುದ್ಧಿಸಾಗರನು ಉಡುಗೊರೆಯಿತ್ತು ಕಳುಹಿಸಿದನು.

ಆ ದಿನ ಕಳೆಯಿತು. ಮರುದಿನ ಬಹುವಾದ್ಯನಾದಗಳ ಘೋಷದಲ್ಲಿ ವಿಜಯನು ಸಿಂಧುವನ್ನು ದಾಟಿದನು. ಅವನು ಆದಿಯ ಕಟಕದ ಹತ್ತಿರವೇ ಬೀಡುಬಿಟ್ಟನು. ಅದನ್ನು ತಿಳಿದ ಭರತೇಶನು ಒಳಚಾವಡಿಯಲ್ಲಿ ಓಲಗವಾಗಿ ವಿಜಯಾಂಕನನ್ನು ಬರಹೇಳಿದನು. ಹೆಣ್ಣುಗಳ ತಂದೆಯರನ್ನು ಹಿಂದಿಕ್ಕಿಕೊಂಡು ವಿಜಯರಾಜನು ಚಕ್ರಿಯ ಓಲಗಕ್ಕೆ ಹೋದನು. ಕಾಣಿಕೆಗೊಟ್ಟು, ಸಾಷ್ಟಾಂಗವೆರಗಿ ರಾಜನ ಒತ್ತಿನಲ್ಲಿ ತನ್ನ ಆಸನದಲ್ಲಿ ಕುಳಿತನು. ಮತ್ತಿನವರು ಬಂದು ಆರಸಗೊಂದಿಸಿ ಸೂಚಿಸಿದಲ್ಲಿ ಕುಳಿತರು. ರಾಜರು ಬಂದಾಗ ವಿಜಯರಾಜನು ಅವರ ಪರಿಚಯವನ್ನು ಭರತೇಶಗೆ ಮಾಡಿಕೊಟ್ಟನು. ಆ ರಾಜರೆಲ್ಲರೂ ಭರತೇಶನನ್ನು ಕಂಡು ಆಶ್ಚರ್ಯಪಟ್ಟರು.

ನಾಳಿನ ರಾತ್ರಿಗೆ ಉತ್ತಮ ಲಗ್ನವಿರುವುದೆಂದು ಜಯರಾಜನು ಸೂಚಿಸಿದನು. ಆದನ್ನಾಲಿಸಿದ ಸಭಿಕರೂ ಅಹುದೆಂದರು. ಆಮೇಲೆ ಭರತೇಶನು ಉದ್ದಂಡ ಭೂಪರೇ ಮುಂತಾದ ಅರಸರಿಗೆಲ್ಲ ಉಡುಗೊರೆಯಿತ್ತು ಅವರನ್ನು ಬೀಳ್ಕೊಟ್ಟನು. ಸಡಗರದಲ್ಲೇ ಆ ದಿನವೂ ಕಳೆಯಿತು. ಮರುದಿನ ಮದುವೆಯು ಸಂಭ್ರಮದಿಂದಾಯಿತು. ಕಮಲಗಳಲ್ಲಿ ತುಂಬಿ ರಮಿಸುವಂತೆ ಭರತೇಶನು ರಮಣಿಯರೊಡನೆ ರಮಿಸಿದನು. ರತಿಸುಖಾಂತ್ಯದ ನಿದ್ರೆಗೈದು ವಿಶ್ರಮಿಸಿದನು. ಉದಯಕಾಲದಲ್ಲಿ ಆ ಸತಿಯರೊಂದಿಗೆದ್ದು ನಿತ್ಯಕರ್ಮ ಗಳನ್ನು ತೀರಿಸಿ ಶೋಭೆಯಲ್ಲಿದ್ದನು. ಖೇಚರೇಂದ್ರರಂತೆಯೇ ಈ ಭೂಚರೇಂದ್ರರನ್ನೂ ಮನ್ನಿಸಿದನು. ಆಮೇಲೆ ಖೇಚರಾಂಗನೆಯರಂತೆ ಈ ಜಾಣೆಯರಾದ ಭೂಚರಾಂಗನೆ ಯರನ್ನೂ ಓಜೆಯಿಂದೊಡಂಬಡಿಸಿದನು. ಆಮೇಲೆ ಔತಣಮಾಡಿಸಿ, ವಿಜಯರಾಜನಿಗೆ ಜ್ಯೋತಿರ್ಮಯದ ಭೂಷಣಗಳ ಉಡುಗೊರೆಯಿತ್ತು ಕಳುಹಿಸಿದನು.

ಸುಖದಲ್ಲಿಂತು ಭರತೇಶನು ಕೆಲವು ದಿನಗಳೆಯಲು, ಸುಖದಮೇಲೆ ಉತ್ತಮ ಸುಖವೆ ಬರುವಂತೆ ಮತ್ತೊಂದು ಸುಖಚಿಹ್ನೆ ತೋರಿತು.

ಮೂಡಣ ಖಂಡವ ಸಾಧಿಸಿ ಜಯರಾಜನು ಬರುತ್ತಿರುವ ವಾರ್ತೆಯು ಭರತೇಶಗೆ ಬಂತು. ಡೌಡೆ, ತಂಬಟೆ, ಬೇರಿ ಮೊದಲಾದ ವಾದ್ಯದ ಗಾಢದಲ್ಲಿ ವಿಜಯರಾಜನ ವಿಜಯ

ಸೇನೆಯು ಭರತೇಶನ ಕಟಕವನ್ನು ಬಂದು ಸೇರಿತು. ಭರತೇಶನಿಗೆ ಬಂಟನಾದರೂ ಜಯರಾಜನು ಮಿಕ್ಕರಾಯರಿಗೆಲ್ಲ ರಾಯನಂತಿದ್ದನು. ತನ್ನ ಒಡೆಯನಿಗಾಗಿ ಗಜಹಯಗಳ ತಂದ ರಾಯರನ್ನು ಒಂದೆಡೆಯಲ್ಲಿ ಬೀಡುಬಿಡಿಸಿದನು. ಕಡುಚೆಲುವೆಯರ ತಂದ ಭೂಪರನ್ನು ಇನ್ನೊಂದೆಡೆಯಲ್ಲಿ ತಂಗಿಸಿದನು. ಪಯಣದಮೇಲೆ ಪಯಣವೆಸಗಿ ಬರುವಾಗಲೇ ಕರ್ಮಭೂಮಿಯನ್ನು ಹೊಕ್ಕು ಗುರುಕರುಣೆಯಿಂದ ನಿಯತವ್ರತಗಳನ್ನು ಧರಿಸಿಯೇ ಅವರೆಲ್ಲರೂ ಬಂದಿದ್ದರು. ಅದು ಜಯರಾಜನ ಜಾಣ್ಮೆ.

ಮಾತಿನ ಮಾಲೆಯೇಕೆ? ಭರತೇಶನು ಅವರನ್ನೆಲ್ಲ ಮೊದಲಿನ ರೀತಿಯಲ್ಲೇ ಕಂಡು ಕಪ್ಪಗೊಂಡನು. ಶುಭ ಲಗ್ನದಲ್ಲಿ ನಾನ್ನೂರು ಹೆಣ್ಣುಗಳನ್ನು ಮದುವೆಯಾದನು. ಅವರು ತಮ್ಮರೂಪಿಂದ, ಗುಣದಿಂದ ಭರತೇಶನಿಗೆ ಮಹಾನಂದವನ್ನುಂಟು ಮಾಡಿದರು. ಅಂಗಗಳಿಂದ, ತಕ್ಕ ಅಲಂಕಾರಗಳಿಂದ, ಕೊಂದುಕೊರತೆಗಳಿಲ್ಲದ ಅವರು ಮೀನಾಂಕರೂಪನಾದ ಭರತೇಶನನ್ನು ಮೆಚ್ಚಿಸಿದರು.

ಗುಣಕ್ಕೆ ಸೋಲದ ಸುಖಿ ಯಾವನು? ಆ ಸತಿಯರ ಗುಣವನ್ನೇ ಭರತೇಶನು ತನ್ನೊಳಗೆ ನೆನೆದನು. "ಸ್ವಚ್ಛರೂಪಿನ ಈ ಹೆಣ್ಣುಗಳು ಅತಿಕುಶಲೆಯರು. ಇವರು ಹುಟ್ಟಿದ ಭೂಮಿಗೆ ಮ್ಲೇಚ್ಛಖಂಡಗಳೆಂಬ ಹೆಸರಾಗಬಹುದೇ? ಧರ್ಮವರ್ತನೆಯಿಲ್ಲವೆಂದು ಮ್ಲೇಚ್ಛಖಂಡ ಗಳೆಂಬ ಹೆಸರಾಗಬಹುದೇ? ಧರ್ಮವರ್ತನೆಯಿಲ್ಲವೆಂದು ಮ್ಲೇಚ್ಛವೆಂದು ಕರೆದರು. ಧರ್ಮಚಾರಿತ್ರ ಛಾಂದಸಿಕೆಯಿಲ್ಲದಿರುವುದರಿಂದ ಇವರು ನಮ್ಮ ಪ್ರೌಢೆಯರಾದರು. ಅಲ್ಲಿ ಕಾಮಾರ್ಥವುಂಟು; ಧರ್ಮಮೋಕ್ಷಗಳೆಂಬ ನಾಮವಿಲ್ಲ. ಧರ್ಮಚಾರಿತ್ರ ಛಾಂದಸಿಕೆಯು ಸೋಂಕಾದರೆ ಇವರು ತಮ್ಮ ಕರ್ಮಭೂಮಿಯ ಕನ್ನೆಯರಂತಾಗುವರು. ಆದ್ದರಿಂದ ಧರ್ಮವನ್ನು ಕಲಿಸುವೆ."

ಈ ರೀತಿಯಲ್ಲಿ ಯೋಚಿಸಿದ ಭರತೇಶನು, ಮನಸ್ಸಿನಲ್ಲಾಗ ಆತ್ಮಗುರುವನ್ನು ಕೊಂಡಾಡಿದನು. ಕೈವಲ್ಯಸುಖವನ್ನು ಕೊಡುವ ಹಂಸನಾಥನನ್ನು ಭಾವಿಸುವ ಆತ್ಮಸಿದ್ಧರಿಗೆ ಯಾವ ಸುಖಗಳೂ ಸಿರಿಗಳೂ ಬಾರವು? ಬಂದ ಸುಖವ ಬಿಡಬಾರದು; ಬಾರದ ಸುಖವ ಬೇಕೆಂದು ಬಯಸಬಾರದು. ತನ್ನೊಳಗಿರುವ ಹಂಸನಾಥನನ್ನೇ ನೋಡುತ್ತಿರುವವನು ಎಂದೆಂದೂ ಸುಖಿಯು.

ವೇದಿತಾತ್ಮಜ್ಞಾನಿಯು ಹೆಣ್ಣುಗಳೊಡನೆ ನೆರೆದು ಮೊದಲಿನಂತೆ ಉದಯದೊಳಿದ್ದು ಅವರವರ ತಂದೆಗಳನ್ನೂ ದಳಪತಿಗಳನ್ನೂ ಮನ್ನಿಸಿದನು. ಹಗಲಿರುಳಿನ ಉತ್ಸಾಹದಲ್ಲಿಂತು ಆರು ತಿಂಗಳು ಲೀಲೆಯಲ್ಲೇ ಕಳೆದು ಹೋಯಿತು.

ಆರು ತಿಂಗಳಲ್ಲಿ ವಿಜಯಾರ್ಧಕವಾಟದ ಅಗ್ನಿ ಆರಿತು. ಆ ಬಳಿಕವೂ ಕೆಲ ಕಾಲ ಕಳೆದುಹೋಯಿತು. ಈ ಸಂತೋಷದಲ್ಲಿ ಹೋದ ದಿನಗಳೆಲ್ಲ ಮೂರು ದಿನಗಳೆಂಬಂತಿದ್ದುವು. ಅಂದು ಮಂತ್ರಿಯು ರಾಜನ ವೇಳೆಯನ್ನರಿತು ಒಲಗಕ್ಕೆ ಬಂದನು. ಲೀಲೆಯಿಂದಿರುವ ರಾಜೇಂದ್ರನ ಮುಂದೆ ಎಲ್ಲರೂ ಕೇಳುವಂತೆ ಬಿನ್ನವಿಸಿದನು.

"ಮೂರು ಖಂಡಗಳು ಸಾಧ್ಯವಾದುವು, ಇನ್ನು ಆಚೆಯ ಮೂರು ಖಂಡಗಳನ್ನು

ಗೆಲ್ಲಬೇಕು. ವಿಜಯಾರ್ಧಕವಾಟದ ಬೆಂಕಿ ಆರಿತು. ಇನ್ನು ಮುಂದಿನ ಪ್ರಯಾಣಕ್ಕೆ ಉದ್ಯೋಗಿಸಬೇಕು. ಸ್ತ್ರೀರತ್ನಗಳನ್ನಿತ್ತ ರಾಜರನ್ನೆಲ್ಲ ದಂಡಿಗೆ ಕರೆದಾಗ ಅವರೆಲ್ಲ ಕೃತಾರ್ಥರಾದರು. ಇನ್ನವರು ಅವರವರ ರಾಜ್ಯಗಳಿಗೆ ಹೋಗಲಿ. ಸರ್ವ ಭೂಪಾಲಕರಿಗೂ ಉಡುಗೊರೆಯಿತ್ತು ಕಳುಹಿಸುವುದು.''

ಮಂತ್ರಿಯ ಮಾತನ್ನು ಕೇಳಿ ಭರತೇಶನು, ರಾಯರನ್ನೆಲ್ಲ ನಿಲ್ಲಿಸಿ, ತಾನೆದ್ದು ರಾಜಾಲಯಕ್ಕೆ ನಡೆದನು. ಒಡನೆ ನೆನೆದು ಹಲವು ರೂಪಗಳನ್ನು ಧರಿಸಿ ತನ್ನ ಮಾನಿನಿಯರ ಮನೆಗಳನ್ನು ಹೊಕ್ಕನು. ಅಲ್ಲಲ್ಲಿ ಸತಿಯರೊಂದಿಗೆ ಸರಸವಾಡಿದನು.

''ವನಿತೆ, ನಿಮ್ಮಯ್ಯನು ಪ್ರಯಾಣಕ್ಕೆ ಅಣಿಯಾದರು. ಮುಂದೆ ನಿಮಗೇನಾಗಬೇಕು. ನಿಮ್ಮ ತಂದೆಯನ್ನು ಮನ್ನಿಸುವೆನು; ಆದರೆ ನಿಮ್ಮ ಅಮ್ಮನಿಲ್ಲಿಗೆ ಬಂದಿಲ್ಲ. ಅವರಿಗಾಗಿ ಉಡುಗೊರೆ ಕಳುಹಬೇಕು, ಅವರಿಗೆ ಯಾವುದರಲ್ಲಿ ಇಚ್ಛೆ? ಯಾವ ತೊಡಿಗೆಯಲ್ಲಿ ಪ್ರೀತಿ? ಯಾವ ಸೀರೆಯಲ್ಲಿ ಅರ್ತಿ ?'' ನಮ್ಮತ್ತೆಯ ಇಚ್ಛೆಯೇನೆಂದು ಭರತೇಶ ಕೇಳಿದರೆ ಅವರೆಲ್ಲ ನಗುವರಲ್ಲದೆ ಉತ್ತರವೀಯಲಿಲ್ಲ. ''ನನ್ನಾಣೆ ಹೇಳಿ''ಎಂದು ಒತ್ತಿ ಕೇಳಿದಾಗ ಮಾತ್ರ ಹೇಳಿದರು. ಚೆನ್ನೆಯರು ಹೇಳಿದಂತೆ ಉಡುಗೊರೆಯ ಒಡವೆಗಳನ್ನು ಅವರೆದುರಲ್ಲೇ ಕಟ್ಟಿಸಿದನು. ಅನಂತರ ಅವರವರ ದಾಸಿಯರನ್ನೂ ಕರೆದು ಅವರಿಗೂ ಮನ್ನಣೆಯಿತ್ತನು. ''ಇವನ್ನು ನಮ್ಮ ಅತ್ತೆಯವರಿಗೆ ಈಯಬೇಕು.'' ಕಟ್ಟಿದ ಉಡುಗೊರೆಗಳನ್ನವನು ಅವರೊಡನಿತ್ತನು. ''ಹೋದವರು ಅಲ್ಲೇ ನಿಲ್ಲುವುದಲ್ಲ ಬೇಗನೇ ಬರುವುದು.'' ಎಂದು ಎಚ್ಚರಿಸಿದನು. ಹೀಗೆ ಪ್ರೀತಿಯಿಂದೆಲ್ಲರನ್ನೂ ಪ್ರಯಾಣಕ್ಕೆ ಅಣಿಗೊಳಿಸಿ ತಾನು ಓಲಗಕ್ಕೆ ಬಂದನು.

ಅಲ್ಲಿ ರಾಜರೆಲ್ಲರು ಕಾದಿದ್ದರು. ''ನೀವೀಗ ನಿಮ್ಮ ಮಕ್ಕಳ ಮನೆಹೊಕ್ಕು ಬನ್ನಿ. ಆಮೇಲೆ ನಿಮ್ಮನ್ನು ಬೀಳ್ಕೊಡುವೆನು.'' ಎಲನೆಯರ ಅಯ್ಯಂದಿರನ್ನು ಕಳುಹಿಸಿದನು. ಅವರು ಸುತೆಯರ ಮನೆಗೆ ನಡೆದರು. ಆಗ ಭರತೇಶನು ಅಲ್ಲಿ ಉಳಿದ ದೊರೆಗಳಿಗೆ ರತ್ನರಂಜಿತವಾದ ಉಡುಗೊರೆಗಳ ಹರಿವಾಣಗಳನ್ನೆತ್ತಿ ಅವರಿಗೀಯುತ್ತ ನಗುತ್ತ ಸರಸದಲ್ಲಿ ನುಡಿದನು.

''ಖಚರ ಮುಖ್ಯರೂ ಮ್ಲೇಚ್ಛ ಮುಖ್ಯರೂ ಮೊದಲು ಬನ್ನಿ. ನಿಮಗೆ ಮೊದಲ ಮನ್ನಣೆ. ಚೆಲುಸುಂದರಿಯರ ಕೊಟ್ಟವರಿಗೆ ಚಕ್ರಿ ಮೊದಲು ಮನ್ನಣೆ ಮಾಡಿದನೆಂದು ನೀವಾಡುವಿರಿ.''

''ನಿಮ್ಮಲ್ಲಿ ಕೆಲವರು ಊರಿಗೆ ತೆರಳಬಹುದು; ಕೆಲವರು ನಿಮ್ಮ ಸೇನೆಯೊಂದಿಗಿರ ಬಹುದು.'' ಎಂದು ಅಲ್ಲೇ ನಿಂತಿದ್ದ ಸೇನಾಪತಿಯು ಊಹಿಸಿ ಹೇಳಿದನು.

''ಕೆಲವರು ಊರಿಗೆ ಹೋಗಿ ನೋಡುವುದೇನು? ಎಲ್ಲರೂ ಬಲವನ್ನು ಕೂಡಿಕೊಂಡು ರಾಜಮನ್ಮಥನ ಬಳಿಯಲ್ಲೇ ಇದ್ದು ಇಲ್ಲಿನ ಚೋದ್ಯಗಳನ್ನೂ ಲೀಲೆಗಳನ್ನೂ ನೋಡು ತ್ತಿರುವೆವು.'' ಎಂದವರು ಸಂತೋಷದಿಂದ ನುಡಿದರು.

''ಉತ್ತಮ. ನೀವೆಲ್ಲರೂ ಕಟಕದಲ್ಲಿದ್ದು ಮುಂದಾಗಿ'' ಎಂದು ದಳಪತಿ

ಜಯರಾಯನು ತಿಳಿಸಿದನು. ಉಡುಗೊರೆ ಹಿಡಿದವರು ಭರತೇಶನಿಗೆ ಅಡ್ಡಬಿದ್ದು ಗುಂಪಾಗಿ ಸಾಗಿದರು. ಅಷ್ಟರಲ್ಲಿ ಮಕ್ಕಳ ಮನೆಗಳಿಗೆ ಹೋಗಿದ್ದ ರಾಜರು ತಮ್ಮ ಮಕ್ಕಳನ್ನು ತಕ್ಕೈಸಿ ತಲೆದಡವಿ ಇಂಬಿಟ್ಟು ಬಂದರು. ಆಗ ಭರತೇಶನು ಭೂಚರರಾದ ಆ ರಾಜರನ್ನು ತನ್ನ ಗದ್ದುಗೆಯ ಒತ್ತಿಗೇ ಕರೆದು ಉಡುಗೊರೆ ಮಾಡಿದನು.

"ನೀವು ಸುಖವಾಗಿ ರಾಜ್ಯದಲ್ಲಿರಬೇಕು. ನಮ್ಮ ಮುಖ ನೋಡುವ ಬಯಕೆಯಾದಾಗ ಬರಬೇಕು." ಎಂದು, ಸಖರ ತಡೆಗೆ ನೋಡುತ್ತ ಭರತೇಶನು ನುಡಿದನು. "ಅವರ ಭಾಗ್ಯವೇ ಭಾಗ್ಯ ಸ್ವಾಮಿ. ನಿಮ್ಮ ರಾಜಭವನಕ್ಕೆ ತಡೆಯಿಲ್ಲದೆ ಬಂದು, ಸುವಿನಯದಲ್ಲಿ ಬಾಳುವ ಸಿರಿಯನ್ನು ಪಡೆದರು." ಎಂದವರು ಚಕ್ರಿಗೆ ನುಡಿದರು. ಕೈಮುಗಿದ ರಾಜರನ್ನೆಲ್ಲ ಒಮ್ಮೆಗೇ ವಂದಿಸಿ ಬೀಳ್ಕೊಟ್ಟನು. ಆಗತಾನೆ ಬಂದ ದಾಸಿಯರೂ ಭರತೇಶಗೆ ಎರಗಿ ತಮ್ಮ ರಾಜರೊಂದಿಗೆ ನಡೆದರು. ರಾಜನಿಂದ ಉಡುಗೊರೆಗೊಂಡ, ಅರಸರೆಲ್ಲ ಷಟ್ಖಂಡಕ್ಕೊಡೆಯರೆಂಬ ಉಬ್ಬಿನಲ್ಲಿ ನಡೆದರು.

## ೧೪

# ಮೈದುನನ ಮಾತು

ಹಲವರನ್ನು ಕಳುಹಿಸಿ ಪ್ರಧಾನಿ ಸಹಾಯರು ಚಕ್ರೇಶ್ವರನ ಕೆಲದಲ್ಲಿರಲು ಭರತೇಶ್ವರನು. ''ಮಿನಮಿಯ ಕಳುಹಬೇಕಲ್ಲವೆ?'' ಎಂದವರ ಮುಖ ನೋಡಿದನು; ಮತ್ತೆ ನುಡಿದನು.

''ವಿನಮಿ ಕೇಳು. ನಮಿಯು ತನ್ನೊಂದು ಘನತರವಾದ ಪ್ರೌಢಿಮೆಯನ್ನು ತೋರುತ್ತಿದ್ದಾನೆ. ತಾನಾರೆಂದು ನೆನೆದನೋ? ಜಿನ, ಜಿನ ಅವನೇನೂ ನಾಡಾಡಿಯಲ್ಲ. ಮೇಲಾಗಿ ಅವನೊಂದು ಬೆಳ್ಳಿಯ ಗೋಡೆಯ ಮೇಲಿರುವಷ್ಟೇ? ಹೊರ ಜಾಣ್ಮೆಯನ್ನು ಆಡಬಹುದಷ್ಟೆ!''

ಭರತೇಶನು ಒಂದಿಷ್ಟು ಕಠಿಣ ನುಡಿದದ್ದು ವಿನಮಿಗರಿವಾಯಿತು. ''ಅವನು ಕಾಣಿಸಿದ ಜಾಣ್ಮೆಯೇನು? ದೇವರು ಏನನ್ನು ಕೇಳುವಿರಿ? ಅಯ್ಯೋ, ಭಾವಾಜಿ ಹೀಗೆ ನೆನೆಯುವುದೆಂದರೆ ಇದು ನಮ್ಮ ಕರ್ಮದ ಫಲವಷ್ಟೆ.'' ಎಂದವನು ಭರತೇಶ ನಿಗುತ್ತರವಿತ್ತನು.

''ಸಾಕಯ್ಯ ಈ ನಿಮ್ಮ ವಿನಯ. ನಿಮ್ಮ ಮಾತು. ಸುಳ್ಳಿಲ್ಲದೆ ಸತ್ಯವಾದೀತೆ? ಅವನೇಕೆ ನಮ್ಮ ಬಳಿಗೆ ಬರಲಿಲ್ಲ ? ಈ ಕೊಂಕು ನಮಗೆ ತಿಳಿಯದೆ? ನಾನಿತ್ತ ಬಂದೆನೆಂದು ತಾನೊಂದು ವಿದ್ಯೆಯ ಸಾಧಿಸುವೆನೆಂದು ಧ್ಯಾನಿಸುತ್ತಿರುವನು. ನಾವು ತಿಳಿಯೆವೇ ಈ ತಂತ್ರವನ್ನು? ಬೇಡ ವಿನಮಿ; ನಮ್ಮ ಕೂಡೆ ಹೆಮ್ಮೆ ಮೆರೆವುದು ಬೇಡವೆಂದು ನಿಮ್ಮ ಅಣ್ಣಗೆ ಹೇಳು. ಮಾವನ ಮಗನೆಂದು ಈ ವಿಡಾಯವನ್ನು ತೋರಿಸುವುದೇ? ನಾವೂ ಬೇಕಾದರೆ ಅವನೊಡನೆ ಲೀಲಾವಿನೋದ ಮಾಡುವೆವು. ನಮಿ ತಾನೊಲಿಸುವ ವಿದ್ಯೆಯನ್ನು ನಾನು ಆತ್ಮಚಿಂತೆಯಲ್ಲಿ ನಿಂತು, ಉಚ್ಚಾಟನೆ ಸಂತತಿಯನ್ನು ಕಳುಹಿಸಲೇ? ತನ್ನ ವಿದ್ಯೆಯ ಕೇಡು ತನ್ನ ಕೇಡು—ಎಂಬಂತೆ ಅವನ ವಿದ್ಯೆಯಿಂದ ಅವನನ್ನೇ ಮೂಡೆಗಟ್ಟಿಸಲೆ? ಹೀಗೆ ಮಾಡುವುದು ಕ್ರಮವಲ್ಲವೆಂದು ಬಿಟ್ಟೆನು. ನಮ್ಮ ಮಂತ್ರವಿಕ್ರಮವನ್ನು ನೋಡುತ್ತೀಯಾ? ನಾನೀಗ ಭ್ರಮರಿಯೆಂಬ ವಿದ್ಯೆಯನ್ನು ಸಾಧಿಸುವ ಅವನನ್ನು ಭ್ರಮಗೊಳಿಸಲೇ? ಭೂತಗಳನ್ನು ನೆನೆದು ಉದ್ಯೋಗಿಸುವ ಮಂತ್ರಗಳು ಅವನಿಗೆ ವಿದ್ಯೆ. ವಿದ್ಯೆಗಳ ಒಡೆಯನಾದ ಹಂಸನಾಥನ ಧ್ಯಾನದ ಉದ್ಯೋಗ ನನಗೆ. ಮೋಕ್ಷ ಪದವಿಯನ್ನು ದಯಪಾಲಿಸುವ ಹಂಸನಾಥನ ಶಕ್ತಿಯನ್ನು ಅರಿಯರಲ್ಲಾ! ಬಯಕೆಯಿಂದಾವುದನ್ನಾದರೂ ಕುರಿತು ಧ್ಯಾನಿಸುವವರಿಗೆ ಈ ಲೋಕದಲ್ಲಿ ಯಾವ ಸಿದ್ಧಿಯೂ ಸೋತು ಎರಗದು, ನನಗಿದು

ದೊಡ್ಡದಲ್ಲವಾದರೂ ನಾನು ಅವನಿಗೆ ವಿಘ್ನ ಮಾಡುವವನಲ್ಲ. ನಿನಗಿಷ್ಟನ್ನು ಸೂಚಿಸಿದ್ದೇನೆ. ನೀನಿದನ್ನು ತಿಳಿದಿರು ವಿನಮಿ.''

ಭರತೇಶನ ಮಾತಿನ ಮೊನೆ ಮೈದುನಗೆ ನಾಟಿತು. ''ಮತ್ತೇನು? ದೇವರ ಸಾಮರ್ಥ್ಯ ನಮ್ಮನ್ನೇ ಒತ್ತುತ್ತೇಕಷ್ಟೆ. ಸೋದರತ್ತೆಯ ಮಗನಿಂದ ಹರುಷಗೊಂಡು ನಗಬಾರದು; ಅತ್ತವು ಎಂದಾಗಬೇಕು.'' ಎಂದು ವಿನಮಿಯು ನೊಂದು ನುಡಿದನು.

''ಹೋ. ವಾಕ್ಯ ಪ್ರೌಢಿಯಿಂದ ಯಾರನ್ನು ಚಾಳಿಸಲು ಬಂದೆ? ನೀವು ಸೋದರ ಮಾವನ ಮಕ್ಕಳೆಂಬುದನ್ನು ಭಾವಿಸಿಕೋ. ಮಾವನ ಮಕ್ಕಳು ನಂಟುಮಾಡುತ್ತಾರೆಂದು ನೀವು ಭಾವಿಸಿದಿರಿ. ಅಂದು ಮಾವಾಜಿ ''ನಮಿ–ವಿನಮಿ'' ಎಂದು ಒತ್ತಾಗಿ ಹೆಸರಿಟ್ಟುದನ್ನು ತಿಳಿಯಿರಿ. ನೀವು ನನಗೆ ನಮಿಸಬೇಡವೇ? ನಿಮ್ಮ ಅಯ್ಯಂದಿರ ವಿಮಲ ವಾಕ್ಯಗಳನ್ನು ಮೀರುವಿರೇ? ಅಪ್ಪಾಜಿ ನನಗೆ ಭರತೇಶನೆಂಬ ನಾಮವನ್ನು ಕರುಣಿಸಿದರು. ಅವರೆಂದಂತೆ ಭರತಭೂಮಿಯನ್ನೆಲ್ಲ ಆಳುತ್ತಿರುವೆನು ನೋಡಿ. ಅರರೆ ನೀವು ಮಾತ್ರ ಬಾಹಿರರಾದಿರಿ. ಕಚ್ಛ–ಮಹಾಕಚ್ಛ ಮಾವಾಜಿಯ ಸ್ವಚ್ಛವಾದ ಮಹಾಗರ್ಭದಲ್ಲಿ ಸ್ವೇಚ್ಛಾಚಾರಿಗಳಾದ ನೀವು ಹುಟ್ಟಿದಿರಿ.'' ಎಂದು ಭರತೇಶ ತುಚ್ಛವಾಗಿ ನಕ್ಕು ನುಡಿದನು. ''ಬರಿ ಮಾತಿನಲ್ಲಿ ವಿನಯವನ್ನು ನುಡಿದು ಮರೆಯಲ್ಲಿ ಕಾರ್ಯಸಾಧಿಸುವ ನಿಮ್ಮ ರೀತಿ ನಾನರಿಯನೇ? ಬಲ್ಲವರಲ್ಲಿ ಇದು ಸಾಧ್ಯವೇ –ವಿನಮಿ ಹೇಳು?''

''ದೇವರಿಗೆ ಯಾವ ಕಾರ್ಯವನ್ನು ಮರೆಸಿದೆವು? ನಮ್ಮ ಭಾವನೆಯನ್ನು ಒಂದಿಷ್ಟೂ ಮರೆಯಿಲ್ಲ ಭಾವಾಜಿ, ನೀನಿಂತು ತಿಳಿದೆಯಾದರೆ ನಾವಿನ್ನು ಪರರೇ ಆದೆವು.''

''ನೀನು ಪರನಲ್ಲ ವಿನಮಿ. ನಿನ್ನ ಹಿರಿಯನೊಬ್ಬನೆ ಪರನು. ಅದನ್ನೆಲ್ಲ ಬಲ್ಲೆನು ಹೇಳಬಾರದು. ನೀನಿದನ್ನು ತಿಳಿದಿರು. ಮುಂದೆ ತೋರಿಸುವೆನು; ಅವನ ಹೆಮ್ಮೆಯನ್ನು ಬಿಡಿಸುವರು. ಅವನ ಈ ಗೂಢವನ್ನು ರೂಢವಾಗಿ ಮಾಡುವರು. ಮುಂದೆ ನೀನೇ ನೋಡುವಿಯಂತೆ.'' ಎಂದು ಭರತೇಶನು ಹೇಳಿದನು. ತಾನು ಆಡಿದ ಮಾತು ಇಂಬಾದುದೋ ಎಂದವನು ನಾಗರ ದಕ್ಷಿಣ ವಿಟ ವಿದೂಷಕರೇ ಮುಂತಾದವರನ್ನು ಕೇಳಿದನು.

''ಸ್ವಾಮಿ. ಈ ಗುಣವಾಕ್ಯ ಯಾರಿಗೆ ಇಂಬಾಗದು? ಮತ್ತೆ ಯಾರ ಮನಸ್ಸನ್ನು ಸೋಲಿಸದು? ಇಂದು ಬಾರದಿರುವ ನಮಿರಾಜ ನಾಳೆ ಬಂದೇ ಬರುವನು.'' ಎಂದು ನಾಗರನು ಭರತೇಶನನ್ನು ಸ್ತುತಿಸಬೇಕೆಂದು ಬಿನ್ನವಿಸಿದನು.

''ದೇವರು ವಿನಮಿರಾಜಗೆ ಅವರ ಅಣ್ಣನಿರವನ್ನು ಸೂಚನೆ ಮಾಡಿದ ಮೇಲೆ ಅವನು ಬಂದು ಸಂಬಂಧ ಮಾಡಿಕೊಳ್ಳದಿರುವನೇ? ಮಾಡುವನು.'' ಎಂದು ಅನುಕೂಲ ನಾಯಕ ನುಡಿದನು.

''ನಮಿರಾಜನು ನಮ್ಮ ದೊರೆಗೇನು ಉಡುಗೊರೆಯಿತ್ತನು? ನಮ್ಮರಸನೇನು ತೊಡಿಗೆಯಿಲ್ಲದವನೇ? ಈ ಕಡು ಸಖಿಯು ಇಚ್ಛೆಗೆ ತಕ್ಕವಸ್ತುವನ್ನು ನೋಡಿಕೊಡಬೇಡವೇ. ಜೀವರತ್ನಗಳಲ್ಲಿ ಉತ್ತಮವನ್ನು ಕಳುಹಿಸದೆ ನಿರ್ಜೀವ ರತ್ನವನ್ನು ಕಳುಹಿಸಿದುದು ನಿಮಗೆ ತೇಜಸ್ಸೇ?'' ಎಂದು ವಿಟನು ವಿನಮಿ ಭಾವದಲ್ಲೇ ಚಿಂತಿಸುವಂತೆ ನುಡಿದನು.

''ವಿನಮಿ ರಾಜರಿಗೆ ಪಟ್ಟಗಟ್ಟಬೇಕು; ಅವರಿಗೆ ವಿನಯದ ಉಂಬಳಿ ಕೊಡಬೇಕು. ಭರತೇಶಗೆ ಇದೇನು ಘನವೇ?'' ಎಂದು ವಿನಮಿಯ ಚಿತ್ತ ಬೆದರುವಂತೆ ಶಠನಾಯಕ ನುಡಿದನು, ''ಹಿತವನ್ನು ಮಾಡುವನೇ ಬಂಧು ! ಬಂಧುವಾದರು ಅತಿನೋಯಿಸುವನು. ಈಗ ವೈರಿಯನ್ನು ನಾಶಮಾಡಬೇಕು.'' ಎಂದವನು ಚಕ್ರೇಶ್ವರನಿಗೆ ಹಿತವಚನ ಹೇಳಿದನು.

''ಠಕ್ಕಿನ ನಂಟನಿಗೆ ಠಕ್ಕು ಕಾಣಿಸಿ, ಒಂದು ದಿಕ್ಕಿನಲ್ಲಿ ಅವನನ್ನು ಬಿಸಾಡಬೇಕು'' ಎಂದು ವಿನಮಿಯ ಎದೆ ಸೊಕ್ಕು ಓಡಿಹೋಗುವಂತೆ ಕುಟಿಲ ನಾಯಕ ನುಡಿದನು. ''ಮೂಢರನ್ನು ಚಾಳಿಸುವಂತೆ ನಮ್ಮನ್ನು ನೋಡುವನು. ಪ್ರೌಢರಾಜನನನ್ನು ಚಾಳಿಸುವುದು ಅವನಿಗೊಂದು ಮೋಡಿಯೇ?'' ಎಂದವನು ತನ್ನ ಒಡೆಯನ ಗೂಢಾರ್ಥವರಿತು ಮಾತು ಮುಂದುವರಿಸಿದನು.

''ಹಿರಿದಾದ ಬೆಟ್ಟದ ಮೇಲಿರುವಾತನು ಸೊಕ್ಕದಿರುವನೇ? ಅವನನ್ನು ಭೂಮಿಯಲ್ಲಿ ಒತ್ತಿಡಬೇಕು'' ಎಂದು ಪೀಠಮರ್ದನ ತನಗರಿತಂತೆ ನುಡಿದನು. ''ತೆಗೆಯಬೇಡಿ; ಇರಿಸಬೇಡಿ. ಅವನು ಕುಳಿತ ಭೂಮಿಗೂ, ಭೂಮಿ ಸೋಂಕಿದ ಆಸನಕ್ಕೂ ಅಂಟಿಕೊಳ್ಳುವಂತೆ ಮಂತ್ರಿಸಿದರೆ ಸಾಕು.'' ಎಂದು ವಿದೂಷಕನು ಎಲ್ಲರೂ ನಗುವಂತೆ ಹೇಳಿದನು.

''ಒಲಿದೀಗ ತಮ್ಮನನ್ನು ಕಳುಹಿಸಿದ್ದಾನೆ. ಇನ್ನು ತಾನೇ ಸಂತೋಷದಿಂದ ಬರುವನು.'' ಎಂದು ರಸಿಕನಾಡಿದನು. ಇದರಿಂದ ವಿನಮಿಯ ಎದೆ ಹಸನಾದುದು. 'ಅಖಿಳ ಭೂಭು ಜರಿತ್ತ್ರಸಾರವಸ್ತುಗಳನ್ನು ಹಿಂದಿಕ್ಕುವ ಉತ್ತಮ ವಸ್ತುಗಳನ್ನು ನಮಿರಾಜನು ತಂದೀವನು.''

ಇವರಾಡಿದ ಮಾತುಗಳನ್ನು ಕೊನೆಗಾಣಿಸುವಂತೆ ಭರತೇಶನಾಗ ಹೀಗೆಂದನು. ''ನಿಲ್ಲಿ ಸಿಲ್ಲಿ ಅವನು ಕೊಡುವುದೇನು? ನಾನು ಉಲ್ಲಾಸದಿಂದ ಕೊಳ್ಳುವುದೇನು? ಖೂಳರಂತೆ ಅವನು ಬಾರದಿದ್ದರೆ ನಾನೇನು ನೊಂದುಕೊಳ್ಳುವೆನೇ?''

ಆಗ ರಾಯನ ಅಂತರ್ಯವನ್ನು ಅರಿತ ಖೇಚರ ಮಂತ್ರಿ ಒಯ್ಯಾರದಿಂದೆದ್ದು ಹೀಗೆಂದನು. ''ದೇವರು ಹೇಳುವುದು ನ್ಯಾಯವಾಗಿದೆ. ಮುಂದೆ ನಮ್ಮ ರಾಜನು ಬರುವನು ಸ್ವಾಮಿ. ವಿಜಯಾರ್ಧದಿಂದ ಆಚೆಗೆ ಹೋಗುವಾಗ ನಮ್ಮರಸನು ಬಂದು ಸನ್ಮಾನಿಸುವನು. ವಿನಯಾರ್ಥವಾಗಿಯಾದರೂ ನೀವು ನಮ್ಮರಸನನ್ನು ಕಾಣಬೇಕು. ವಸ್ತುಗಳ ಘನತೆಯನ್ನು ತ್ವರಿತದಿಂದ ನಾನೇ ತಂದು ಕಾಣಿಸುವೆನು.''

''ಭಾವಾಜಿ. ನಿನ್ನ ಚಿತ್ತವನ್ನು ನೋಯಿಸುವುದು ನಮಗೆಂತಹ ಘನತೆ? ನಿನಗೆ ಸಂತೋಷವಾಗುವಂತೆ ಮಾಡುವೆವು.'' ಎಂದು ಪ್ರೀತಿಯಿಂದ ವಿನಮಿ ನುಡಿದನು.

''ವಿನಮಿ ಕೇಳು, ಇದಕ್ಕಲ್ಲ, ನಿಮ್ಮಣ್ಣ ನಮ್ಮಲ್ಲಿ ಹೆಮ್ಮೆ ತೋರುವುದು ಗುಣವೇ? ನಿನಗಾಗಿ ತಾಳಿದೆನು. ನಿಮ್ಮನ್ನು ಹೆತ್ತ ತಾಯಿ, ಚಿಕ್ಕಂದಿನಲ್ಲಿ ನನ್ನನ್ನು ಎತ್ತಿ ಮುದ್ದಾಡಿದ್ದಳು. ಅದಕ್ಕಾಗಿ ತಾಳಿದೆನು.'' ಎಂದು ಭರತೇಶನು ಅತ್ತೆಗೆ ವಿನಯವೇರಿಸಿದನು. ''ಅರಿಯದೆ ನಮಿಯೊಂದು ಮಾಡಿದರೆ ನನ್ನ ಅಳಿಯನು ಹೆರರಂತೆ ಕಂಡನು,'' ಎಂದು ಅತ್ತಾಜಿ ಮರುಗುವಳು. ಅವಳಿಗಾಗಿ ಸೈರಿಸಿದೆನು. ನೀವೆಂತಹ ಗುಣಿಗಳು? ಇದಕ್ಕೆ ನಮ್ಮ

ಅತ್ತ್ಯಾಜಿಯನ್ನೂ ಮಾವಾಜಿಯನ್ನೂ ನೋಡಬೇಕು. ಭಾವಿಸಿದರೆ ಅವರಿಗೆ ನೀವು ಸರಿಯಲ್ಲ, ನೀವು ಮಾಯಾವಿತನ ಮಾಡುವಿರಿ.'' ಎಂದನು ಭರತೇಶ.

''ಅತ್ತ್ಯಾಜಿ ಮಾವಾಜಿ ಎಂದು ಚಕ್ರಿಯಿಂದ ಸತ್ಕೃತರಾದವರು ಯಾರಿದ್ದಾರೆ? ಇದಕ್ಕಿಂತ ತೇಜವಾದುದು ಯಾವುದಿದೆ? ನಮ್ಮ ದೊರೆಗೆ ಪುತ್ರಿಯರನ್ನಿತ್ತ ಅರಸರು ಪಲವರಿದ್ದಾರೆ. ಆದರೆ ಅತ್ತೆ ಮಾವಂದಿರೆಂದು ಕರೆಯಿಸಿಕೊಂಡವರಿಲ್ಲ. ನಮಿರಾಜಗೆ ನಾನು ಬಿನ್ನವಿಸುವುದು ಕ್ರಮವಲ್ಲ. ತನ್ನ ಭಾವನನ್ನು ತಾನೇ ಬಂದು ಕಾಣಬೇಕು'' ಎಂದನು ಬುದ್ಧಿಸಾಗರ ಮಂತ್ರಿ.

''ಭಾವಾಜಿ ಹಲವು ಮಾತೇಕೆ? ನೀನು ಉತ್ತರಕ್ಕೆ ಗಮಿಸುವಾಗ ನಮಿರಾಜ ಬಂದು ಕಾಣುವನು. ನಿಮ್ಮನ್ನು ಬಿಟ್ಟಿರುವುದು ನಮಗೆ ಬದುಕೆ? ಅಮ್ಮಾಜಿ ಮೊದಲ ದೇವರ ವಿಲಾಸವನ್ನು ಕೇಳಿ ಸುಮ್ಮಾನಗೊಂಡಿರುವಳು'' ಎಂದು ವಿನಮಿ ವಿನಯ ತೋರಿದನು.

''ನಿಮಗಿಂತ ಬೀಗರು ನಮಗಾರಿದ್ದಾರೆ? ನಿಮ್ಮ ಮನಸ್ಸಿಗೆ ಸಂತೋಷವನ್ನೇ ಮಾಡುವೆನು. ಮಾವನ ಮಕ್ಕಳೆಂದು ಪ್ರೀತಿಯೋಗವನ್ನು ಬಯಸಿದೆನು. ನೀವಾದರೂ ಇತರ ಲೋಗರಂತಿರಬೇಡಿ.'' ಎಂದು ಚಕ್ರೇಶ್ವರನು ಅನುರಾಗದಿಂದ ನುಡಿದು, ತನ್ನೊತ್ತಿಗೆ ಕರೆದು, ಉತ್ತುಂಗ ಉಡುಗೊರೆಯಿತ್ತನು. ಮಂತ್ರಿಗೆ ಮನ್ನಣೆಯಿತ್ತ ಮೇಲೆ ನಮಿರಾಜಗೆಂದು ಅತ್ತ್ಯಾಜಿಗೆಂದು ಕೊಡಿಸಿದನು. ಕೊನೆಯಲ್ಲಿ ಗಾರು ನುಡಿದರೆಂದು ನೋಯದಿರೆಂದು ಮೈದುನನನ್ನು ಅಪ್ಪಿದನು. ಭಾವನ ಭುಜ ಸೋಂಕಿದಾಗ ಹೊಸ ಭೂಷಣವಾದಂತಾಯಿತು ವಿನಮಿಗೆ. ''ಸಾಲದೆ ಈ ಭಾಗ್ಯ? ಚಕ್ರೇಶ್ವರನು ರಾಜರಲ್ಲಿ ಒಬ್ಬನನಾದರೂ ಆಲಿಂಗಿಸುವನೆ?'' ಎಂದು ಅಲ್ಲಿದ್ದವರು ಹೇಳಿದರು. ಸಂತೋಷದಿಂದ ವಿನಮಿ ಕೈ ಮುಗಿದು ಹೊರಟನು. ಖೇಚರ ಮಂತ್ರಿ ಸಾಷ್ಟಾಂಗವೆರಗಿ ದೊರೆಯನ್ನು ಬೀಳ್ಕೊಂಡನು. ಎಲ್ಲರೂ ವಿಮಾನವೇರಿ ಆಕಾಶಮಾರ್ಗವಿಡಿದು ತೆರಳಿದರು. ''ಇನ್ನು ಸುಭದ್ರಾ ದೇವಿಯನ್ನು ಕೊಡದಿದ್ದರಾಗುವುದೇ? ನಮಿರಾಜನನ್ನು ನಾವೇ ಒಡಂಬಡಿಸಬೇಕು.'' ಎಂದಾಡುತ್ತ ಅವರತ್ತ ತೆರಳಿದರು.

''ನಿಮ್ಮ ಮಾತಿಗವರು ಅಂಜಿದರು. ಲೇಸಾಯಿತಿದು.'' ಎಂದು ಭರತೇಶನು ಎಲ್ಲರಿಗೂ ಉಡುಗೊರೆಯಿತ್ತು ಮನ್ನಿಸಿ ಕಳುಹಿಸಿದನು. ವಿನಮಿಯನ್ನು ಗದರಿಸದೆ ರಾಜನು ತನ್ನ ಮನವನ್ನು ತಿಳಿಸಿದನು. ಎಂದವರು ಮಾತನಾಡುತ್ತ ತೆರಳಿದರು.

ಅಷ್ಟರಲ್ಲಿ ಕೃತಮಾಲನು ಬಂದನು. ದಳಪತಿಯು ಅವನನ್ನು ಕರೆತಂದು ಚಕ್ರಿಗೆ ತೋರಿಸಿದನು. ಆಗ ಭರತೇಶನು ಭದ್ರಮುಖವನ್ನು ಕರೆಯಿಸಿ ದಳಪತಿಗೂ ಅವನಿಗೂ ತಿಮಿಸ್ರಗುಹೆಯೊಳಗಿನ ದಾರಿಯ ಹೊಲಬನ್ನು ಕೃತಮಾಲನು ತಿಳಿದಿರುವನೆಂಬುದನ್ನು ತಿಳಿಸಿದನು.

''ಇವನು ತಿಮಿಸ್ರ ಗುಹೆಯ ಹೊಲಬು ಅರಿತವನು. ನೀವು ಇವನೊಡನೆ ಹೋಗಿ ಮೊದಲು ಹಾದಿಯನ್ನು ಸವರಿ ಸರಿಮಾಡಿರಿ. ಆಮೇಲೆ ದಂಡೆತ್ತಿ ಹೋಗಬಹುದು. ಮೊದಲು ಅಗಳನ್ನು ಅಗೆದು, ಮುಂದೆ ವಜ್ರದ ಬಾಗಿಲನ್ನು ತೆಗೆದು ಕತ್ತಲೆ ತುಂಬಿರುವ

ಗುಹೆಯನ್ನು ಕಾಕಿಣಿ ಪ್ರಭೆಯಿಂದ ದಾಟಬಹುದು. ಗುಹೆಯೊಳಗೆ ಸಿಂಧೂನದಿಯು ತೆಂಕುಮುಖವಾಗಿ ಹರಿಯುತ್ತದೆ. ಆ ನದಿಗೆ ಮೂಡಣೆಂದಲೂ ಪಡುವಣೆಂದಲೂ ಎರಡು ದಪ್ಪ ನದಿಗಳು ಹರಿದು ಬಂದು ಸೇರುತ್ತವೆ. ಪಡುವಣೆಂದ ಬರುವುದೇ ನಿಮಗ್ನ; ಅವು ಊರೂರ ನದಿಗಳಂತಲ್ಲ . ನಿಮಗ್ನದಲ್ಲಿ ಚೆಂಡನ್ನು ಬಿಟ್ಟರೆ ಅದು ಚೆಂಡಿನಂತೆ ತೇಲುವುದು. ಎಲ್ಲ ನದಿಗಳನ್ನು ಚರ್ಮ ರತ್ನದಿಂದ ದಾಟಬಹುದಾದರೆ ಇವುಗಳನ್ನು ಸಾಧ್ಯವಿಲ್ಲ. ಅದಕ್ಕಾಗಿ ಸೇತುವೆ ಹಾಕಬೇಕು. ಆ ಮೂಲಕ ಮುನ್ನಡೆದು ಗುಹೆಯ ಬಡಗಣ ಬಾಗಿಲನ್ನು ತೆಗೆಯಬೇಕು. ನಾವು ಮುಟ್ಟುವವರೆಗೆ ಕೃತಮಾಲನು ಸೇನೆಯೊಂದಿಗೆ ಅಲ್ಲಿರಲಿ. ಭದ್ರಮುಖನಿಗೆ ಸೇತುವೆಗಟ್ಟುವ ಕೆಲಸ. ಕೃತ ಮಾಲನಿಗೆ ಗುಹೆಯನ್ನು ಕಾಯುವ ಕೆಲಸ. ಕಾಲುವೆಯನ್ನು ತುಂಬಿಸಿ ಬಾಗಿಲನ್ನು ತೆಗೆಯುವ ಕೆಲಸ ಜಯರಾಜನಿಗೆ.

ಇಷ್ಟು ಹೇಳಿದ ಮೇಲೆ ಭರತೇಶ್ವರನು ವ್ಯಂತರ ಪ್ರಮುಖರನ್ನೂ ಖಚರರನ್ನೂ ಕರೆಯಿಸಿ ಕಳುಹಿಸಿದನು. ಗುಹೆಯೊಳಗಿನ ನದಿಗಳ ವಿಜ್ಞಾನವನ್ನು ಭರತೇಶನು ವಿವರಿಸಿದ ರೀತಿಗೆ ಬುದ್ಧಿಸಾಗರ ಮಂತ್ರಿಗೆ ಆಶ್ಚರ್ಯವಾಯಿತು. ''ಮೊದಲು ಕಂಡಂತೆ ಸ್ವಾಮಿಗಳು ತಿಳಿಸಿದಿರಲ್ಲ, ನಾನಲ್ಲಿಗೆ ಹೋಗಿ ನೋಡಿಬರಬೇಕು?'' ಎಂದವನು ಭಿನ್ನಹ ಮಾಡಿದನು. ''ಜೈನಶಾಸನದಲ್ಲಿ ಇದನ್ನು ನಾವು ಕೇಳಲಿಲ್ಲವೇ? ನೀನು ಕೇಳಿಲ್ಲದ್ದೆ?'' ಎಂದು ಭರತೇಶನೇ ಅವನನ್ನು ಕೇಳಿದನು. ''ಓದಿದಾಗ ತಿಳಿವೆವು; ಮತ್ತೆ ಮರೆವೆವು. ಸ್ವಾಮಿಗಳು ಅಂತಲ್ಲ'' ಎಂದು ಮಂತ್ರಿಯು ಭರತೇಶನ ಅರಿವನ್ನು ಕೊಂಡಾಡಿದನು. ಚಕ್ರಿಯು ಮಂತ್ರಿಯನ್ನು ಉಡುಗೊರೆಗಳಿಂದ ಮನ್ನಿಸಿ ಬೀಳ್ಕೊಟ್ಟು ತಾನು ಅರಮನೆ ಸೇರಿದನು. ದಾದಿಯರನ್ನೂ , ಅಯ್ಯಂದಿರನ್ನೂ , ಅಗಲಿದ ಚಿಂತೆಯಲ್ಲಿದ್ದ ಸತಿಯರನ್ನು ಕಂಡು ಆದರಿಸಿದನು.

೧೫

# ವೃಷ್ಟಿ ನಿವಾರಣೆ

ತಿಮಿಸ್ರ ಗುಹೆಯಲ್ಲಿ ಕೆಲಸಮಾಡಲು ಹೋದವರೆಲ್ಲ ಒಂದು ತಿಂಗಳ ತನಕ ತಮ್ಮ ಕೆಲಸವೆಸಗಿ ಮರಳಿಬಂದು ಚಕ್ರಿಯನ್ನು ಕಂಡರು. ತಾವು ಮಾಡಿದ ಕೆಲಸಗಳನ್ನು ವಿವರಿಸಿದರು. "ಭೂತಾರಣ್ಯ ದೇವರಾಣ್ಯಗಳಿಂದ ಹೆಮ್ಮರಗಳನ್ನು ತಂದೆವು. ತೆಂಕ ಬಡಗಲಿಗೆ ಐವತ್ತು ಯೋಜನಕ್ಕೆ ಸೇತುಗಟ್ಟಿದೆವು. ಆಮೇಲೆ ಮಾರಿಬಾಯಿ ತೆರೆದಂತಿರುವ ಗುಹೆಯನ್ನು ಹೊಕ್ಕು ಬಡಗು ದಾರವಂದದ ಕೀಲನ್ನು ಕಳಚಿದೆವು. ಸತ್ತ ಹುಲಿಯ ಉಗುರು ಕೀಳುವುದೇನು ಕಷ್ಟ? ಅದರಂತೆ ಬಿಸಿಯಾರಿದ ಗುಹೆಯ ಪ್ರವೇಶವು ಸುಲಭಸಾಧ್ಯವಾಯಿತು. ಕೃತಯುಗದ ಚಕ್ರಿಯ ಸೇವೆ ಸಿಕ್ಕಿದ ತಾನು ಧನ್ಯನೆಂದು ಕೃತಮಾಲನು ತನ್ನ ಸೇನೆಯೊಂದಿಗೆ ಅಲ್ಲಿ ಕಾದಿರುವನು. ಎಲ್ಲ ಕಾರ್ಯಗಳೂ ಸ್ವಾಮಿ ಸೂಚಿಸಿದಂತಾಯಿತು." ಎಂದು ಜಯರಾಜನು ತಿಳಿಸಿದನು. ಬಳಲಿದವರ ಆಯಾಸವಡಗಲೆಂದು ಭರತೇಶನು ಮತ್ತೊಂದು ತಿಂಗಳನ್ನೂ ಅಲ್ಲೇ ಕಳೆದನು.

ತಿಂಗಳ ಮೇಲೊಂದು ದಿನ ಭೂಮಿಯನ್ನೂ ಗಗನವನ್ನೂ ಮುಸುಕುವಂತೆ ಭೇರಿಗಳು ಮೊಳಗಿದುವು. ಶುಭಲಗ್ನದಲ್ಲಿ ಭರತೇಶನು ದಂಡೆತ್ತಿ ಸೇನೆಯೊಂದಿಗೆ ಮುನ್ನಡೆದನು. ಹಿಂದಿನಿಂದ ವ್ಯಂತರ ಸೇನೆ ಹಿಂಬಾಲಿಸಿತು. ಮಧ್ಯದಲ್ಲಿ ಗಣಬದ್ಧರ ಪಡೆ ನಡೆಯಿತು. ಸೋಪಾನಗಳನ್ನೇರಿ ಗುಹೆಯ ಒಳಹೊಕ್ಕು ಸಿಂಧೂ ನದಿಯ ದಂಡೆಯಲ್ಲಿ ಭರತೇಶನು ಎಚ್ಚರದಿಂದ ಸೇನೆಯನ್ನು ಮುನ್ನಡೆಸಿದನು. ಗುಹೆಯೊಳಗೆ ಗಾವುದಕ್ಕೊಂದು ಸೂರ್ಯಚಂದ್ರರಂತೆ ಕಾಕಿಣಿಯಿಂದ ಬೆಳಕನ್ನು ಬೀರಿಸಿದನು, ಆ ಬೆಳಕಿನಲ್ಲಿ ಕಟಕ ಮುಂದುವರಿಯಿತು. ಗುಹೆಯ ಪೂರ್ವ ಪಶ್ಚಿಮದ ಗೋಡೆಗಳಲ್ಲಿ ಚಂದ್ರ ಸೂರ್ಯರ ಸಾಲು ಶೋಭಿಸುತ್ತಿದ್ದರೆ ಗುಹೆಯ ಮಧ್ಯದಲ್ಲಿ ಅನೇಕ ಖಡ್ಗಳ ಕೀರಿಟಗಳ ಕಾಂತಿ ಶೋಭಿಸಿತು. ಹಗಲು ರಾತ್ರಿಯೆನ್ನದೆ ಗುಹೆಯೊಳಗೆ ಸಂಚರಿಸುತ್ತಿದ್ದರೂ ಚಕ್ರಿಯು "ಪೋಸ"ವನ್ನೂ ಸಂಧ್ಯಾಕೃತ್ಯಗಳನ್ನೂ ಮಾಡದಿರಲಿಲ್ಲ. ನಿಷ್ಠೆಯೆಂಬುದು ಭರತೇಶನಲ್ಲಿ ಮೂರ್ತಿಮತ್ತಾಗಿತ್ತು. ಅಲ್ಲಲ್ಲಿ ತಂಗುತ್ತ, ಮುಂದೆ ಸಾಗುತ್ತ ಹೋಗುತ್ತಿರುವಾಗಲೂ ಭರತೇಶನು ಗುರು ಹಂಸನಾಥನನ್ನು ನೆನೆಯುತ್ತಿದ್ದು ಯೋಗಭೋಗಗಳ ಸಮರಸದಲ್ಲಿ ಸಂತೋಷಗೊಳ್ಳುತ್ತಿದ್ದನು.

ಎಂದಿನಂತೆ ಸತಿಯರನ್ನು ಹಿಂದೆ ಬಿಟ್ಟಿರದೆ ಭರತೇಶನು ತನ್ನೊತ್ತಿನಲ್ಲಿ ಎಲ್ಲರನ್ನು ಕೂಡಿಕೊಂಡಿದ್ದನು. ಅರ್ಕಕೀರ್ತಿಯೇ ಮುಂತಾದ ಕುಮಾರರನ್ನು ಬುದ್ಧಿ

ಸಾಗರನೊಂದಿಗಿರಿಸಿ ತಾನು ಕಾಂತೆಯರೊಡನೆ ವಿಚಾರ ಮಾಡುತ್ತ ಆತ್ಮ ವಿಶುದ್ಧಿಯಲ್ಲೇ ಸಾಗುತ್ತಿದ್ದನು. ಲಲನೆಯರಿಗೆ ಅಂಜಿಕೆಯಾದೀತು ಅಲಸ್ಯನಾದೀತೆಂದು ಭರತೇಶನು ಪಲವು ರೂಪಾಗಿ ಎಲ್ಲರೊಡನೆಯೂ ಸರಸ ಸಲ್ಲಾಪದಿಂದಿರುತ್ತಿದ್ದನು. ಆಗ ಗಾನಕಾಂತೆಯರು ಆತ್ಮಕಲೆಯ ಕುರಿತು ಹಾಡುತ್ತಿದ್ದರು. ವಿಮಾನದಲ್ಲಿ ಎಲ್ಲರನ್ನೂ ಇರಿಸಿಕೊಂಡು ಅವರಿಗೆ ಆದರ ಅಭಿಪ್ರಾಯವನ್ನು ಭರತೇಶನು ಬಿತ್ತರಿಸಿದನು. ಎಲ್ಲರಿಗೂ ಕೆಲವೆಡೆಯಲ್ಲಿ ಸುಖವೂ ಕೆಲವೆಡೆಯಲ್ಲಿ ದುಃಖವೂ ಒದಗುವುದಾದರೆ ಬಲ್ಲವರಿಗೆ ಹೋದಲ್ಲಿ ಬಂದಲ್ಲಿ ಎಲ್ಲೆಲ್ಲೂ ಸುಖವೆಂಬುದು ಆಗ ಭರತೇಶನಿಗೆ ತೋರಿತು. ಈ ರೀತಿಯಲ್ಲಿ ಸೇತುವೆಯನ್ನು ದಾಟುತ್ತ ಅವರು ಗುಹೆಯ ಬಡಗು ಬಾಗಿಲಿನಿಂದ ಹೊರಬಂದರು. ಬಾಗಿಲ ಬಳಿಯಲ್ಲಿ ಕೃತಮಾಲನು ತೋರಣಕಟ್ಟಿ ಚಕ್ರಿಯನ್ನು ಸ್ವಾಗತಿಸಲು ದಳಪತಿಯೊಂದಿಗೆ ನಿಂತಿದ್ದನು.

ಲಾಯದಲ್ಲಿದ್ದ ಅಶ್ವಗಳು ಬಯಲಿಗೆ ಬಂದಾಗ ಉತ್ಸಾಹಗೊಂಡು ಹರಿದಾಡುವಂತೆ ಹೊರಗೆ ಬಂದ ಸ್ತ್ರೀಯರ ಕಣ್ಣುಗಳು ದಿಕ್ಕು ದಿಕ್ಕುಗಳಿಗೆ ಹೊರಳಿದವು. ರಾಣಿಯರೆಲ್ಲರೂ ಹೊರಬಂದ ಮೇಲೆ ಪಲವು ರೂಪದಲ್ಲಿದ್ದ ಭರತಚಕ್ರೇಶ್ವರರು ಒಂದೇ ರೂಪಾಗಿ ಗುಹೆಯಿಂದ ಹೊರಬರುವ ಪಡೆಯನ್ನು ನೋಡುತ್ತಿದ್ದನು. ತಗ್ಗಿಗೆ ನೀರು ಗುಳುಗುಳೆಂದು ಇಳಿಯುವಂತೆ ಗುಹೆಯ ಹೊಟ್ಟೆಯಿಂದ ಆನೆ ಕುದುರೆ ತೇರುಗಳಿಂದ ಕೂಡಿದ ಸೇನೆಯು ಗುಂಪು ಗುಂಪಾಗಿ ಹೊರಗೆ ಬರುತಿತ್ತು. ರಾಯನು ಕುಮಾರರನ್ನು, ಕೆಳೆಯರನ್ನು, ಮಂತ್ರಿ ಜನಗಳನ್ನು, ರಾಜರನ್ನು ಕವಿಗಳನ್ನು ಗಾಯಕರನ್ನು ಬ್ರಾಹ್ಮಣರನ್ನು ಎಲ್ಲರನ್ನೂ ವಿಚಾರಿಸಿದನು. ಭರತೇಶನು ಆಮೇಲೆ ನಡುವಣ ಮ್ಲೇಚ್ಛ ಖಂಡವನ್ನು ಮೆಟ್ಟಿನಿಂದು ಅಲ್ಲೇ ಬೀಡುಬಿಟ್ಟನು. ತೊರೆಯ ನೀರೊತ್ತಿ ಬರುವಂತೆ ಸೇನೆಯ ಸಾಲು ಮಾತ್ರ ಗುಹಾದ್ವಾರದಿಂದ ಬರುತ್ತಲೇ ಇತ್ತು. ಬಲವೆಲ್ಲ ಬಂದ ಮೇಲೆ ರಾಯನು ಕೃತಮಾಲನನ್ನು ಕರೆದು ಮನ್ನಿಸಿದನು. ಯಾವ ಕೆಲಸವಾದರೂ ಭರತೇಶಗೆ ಮರವೆಯೆಂಬುದಿಲ್ಲ.

ಸರ್ವ ಬಲವನ್ನು ಸಂತೈಸಿ ಅರಸನು ಮಧ್ಯದ ಭೂಮಿಯಲ್ಲಿರುವಾಗ ಒಂದು ಭಯಂಕರ ಘಟನೆ ನಡೆಯಿತು. ಆ ರಾಜ್ಯಕ್ಕೆ ಚಿಲಾತ ಮತ್ತು ಆವರ್ತಯೆಂಬವರು ಒಡೆಯರಾಗಿದ್ದರು. ಅವರು ಚಕ್ರಿಗೆ ಶರಣಾಗದೆ ಪಡೆಯೊಡನೆ ಬಂದು ಕಾದಿ ಸೋತು ಓಡಿದರು. ಓಡಿದವರು ಮತ್ತೊಂದು ತಂತ್ರವನ್ನು ಹೂಡಿದರು.

ಕಾಲಮುಖ ಮೇಘಮುಖ ಎಂಬ ಕುಲಾಧಿದೈವಗಳನ್ನು ಆಲಸ್ಯವಿಲ್ಲದೆ ಅರ್ಚಿಸಿ ಭಜಿಸಿದರು, ಆಗ ಅವು ಮೈದೂರಿದುವು. ''ನಮ್ಮನ್ನೇಕೆ ಜಪಿಸಿದರಿ'' ಎಂದು ದೈವಗಳು ಕೇಳಿದಾಗ ''ನಿಮ್ಮ ಭಕ್ತರು ಪರರಿಗೆರಗುವುದು ಸಮ್ಮತವೇ?'' ಎಂದವರಿಬ್ಬರೂ ದೈವಗಳ ಕಾಲಿಗೆರಗಿದರು. ''ಏಳಿ. ಇವನನ್ನು ಹಿಂದಕ್ಕೋಡಿಸಿ ನಿಮಗೆ ಸುಖವನ್ನುಂಟು ಮಾಡುವೆವು. ಏಳೆಂಟು ದಿನ ಸೈರಿಸಿ, ಕಾದಿ ಜಯಿಸಲು ನಮಗೆ ತಿಳಿಯದು. ಭೇದವಿಲ್ಲದೆ ಮಳೆಸುರಿಸಿ ಹಿಂಸೆಕೊಟ್ಟು ಕಳುಹಿಸುವೆವು.'' ಎಂದು ದೈವಗಳು ಅಭಯವಿತ್ತವು. ಅರಸರಿಬ್ಬರೂ ಎದ್ದು ಕೈಮುಗಿದರು.

ದೈವಗಳು ಮಾಯವಾದೊಡನೆ ಆನೆಗಳ ಹಿಂಡು ಒಡ್ಡಿದಂತೆ ಮುಗಿಲು ಆಕಾಶವನ್ನು ತುಂಬಿತು. ಕಾಳರಾಹು ಚಲಿಸುವಂತೆ ಅವು ಚಲಿಸಿದುವು. ಕಾಳರಾಕ್ಷಸರು ಕಾಳಗಕ್ಕೆಂದು ಪಾಳೆಯ ಬಿಟ್ಟರೋ ಎಂಬಂತೆ ಕಾಳಮೇಘಗಳ ಸಮೂಹವು ಕವಿದು ಕಡೆಗಾಲದ ಭಯವನ್ನು ಸೂಚಿಸಿತು. ನೀಲಗಿರಿಗಳೇ ಚಲಿಸುವಂತೆ, ತಮಾಲಲತೆಗಳು ಹಬ್ಬುವಂತೆ, ಅಂಧಕಾರದ ದಾಳಿಯೋ ಎಂಬಂತೆ ಮೇಘಜಾಲ ಒಟ್ಟುಗೂಡಿತು. ಸೂರ್ಯ ಚಂದ್ರರಿಗೂ ಮುಸುಕು ಹಾಕುವಂತೆ ಕಾರ್ಮುಗಿಲು ಸುತ್ತಲೂ ಹಬ್ಬಿತು. ಹಗಲು ಕತ್ತಲೆ ಕವಿದಂತಾಯಿತು.

ದೈವಗಳ ಸೂಚನೆಯಂತೆ ಮಿಂಚು ಚೆಲುವಾಗಿ ಅಲ್ಲಲ್ಲಿ ಮಿಂಚಿತು. ಅದರೊಂದಿಗೆ ಸಿಡಿಲು ಮೊಳಗಿತು. ಅದೇನೂ ಸಾಮಾನ್ಯವಲ್ಲ ! ಪಡೆಯನ್ನೊಡೆದು ಷಟ್ಖಂಡವನ್ನು ನಡುಗಿಸಿದ ಚಕ್ರೇಶನ ಪಡೆಯನ್ನೇ ನಡುಗಿಸುವಂತೆ ಸಿಡಿಲು ಅರ್ಭಟಿಸಿತು. ಅಷ್ಟರಲ್ಲಿ ಎಲ್ಲರನ್ನೂ ಹೊಡೆದೆಬ್ಬಿಸುವಂತೆ ಗಾಳಿ ಬೀಸಿತು. ಗುಡುಗು ಮಿಂಚುಗಳೆಂದು ಅತಿಮಳೆ ಸುರಿಯಿತು. ಮದಗಜಗಳ ಮದಧಾರೆಯೋ, ರಾಹುಗಳು ಉಗುಳುವ ವಿಷಧಾರೆಯೋ ಎಂಬಂತೆ ದೈವಗಳು ಸುರಿಸಿದ ವೃಷ್ಟಿಯೆಲ್ಲರಿಗೂ ಕಷ್ಟವನ್ನುಂಟುಮಾಡಿತು. ಅಲ್ಲಿ ಆಲಿಕಲ್ಲುಗಳು ಮಲ್ಲಿಗೆಯಂತೆ ಉದುರಿಬಿದ್ದುವು. ಆಕಾಶವೇ ಬಾಯಿ ತೆರೆದು ಉಗುಳಿದಂತೆ ಧಾರಾಕಾರವಾಗಿ ಮಳೆ ಸುರಿಯಿತು. ನೆಲವೆಲ್ಲ ಜಲವಾಯಿತು.

ಕೋಟೆಯನ್ನು ದಾಟಿ ಪಾಳೆಯಕ್ಕೆ ನೀರಿಳಿಯುವುದನ್ನು ಕಂಡು ಸೇನೆಯು ಚೆಲ್ಲಾಪಿಲ್ಲಿಯಾಯಿತು. ಅದನ್ನು ಕಂಡ ಭರತೇಶನು ಚರ್ಮರತ್ನವನ್ನು ಹಾಕುವಂತೆ ಹೇಳಿದನು. ಚರ್ಮರತ್ನವೆಂದರೆ ವಿಚಿತ್ರವಾದುದು. ಮೂವತ್ತಾರು ಗಾವುದ ಅಗಲಕ್ಕೂ ನಲ್ವತ್ತೆಂಟು ಯೋಜನವುದ್ದಕ್ಕೂ ಹಬ್ಬಿತು. ಹೀಗೆ ಮೇಲಿನಿಂದ ಛತ್ರಿರತ್ನ, ಕೆಳಗಿನಿಂದ ಚರ್ಮರತ್ನಗಳಿದ್ದುವು. ಆದರೂ ಕರಾಳ ಕತ್ತಲೆ ಹೆಚ್ಚಾಯಿತು. ಕೂಡಲೆ ಭರತೇಶನು ಕಾಕಿಣಿ ಚಕ್ರಗಳಿಂದ ಪಡೆಯಲ್ಲಿ ಬೆಳಕಾಗುವಂತೆ ಮಾಡಿದನು.

ಸುರಿಯುತ್ತಿರುವ ಮಳೆ ಈ ನಾಡಿಗೆ ಸಹಜವಾದುದೇ ಎಂದು ಭರತೇಶನು ಯೋಚಿಸಿದನು. ಕಾಲದೇಶಗಳ ಗುಣವೆಂದು ಭಾವಿಸಿದನು. ಆದರೆ ಏಳು ದಿನಗಳವರೆಗೆ ಮಳೆ ಸುರಿಯಲು ಇದು ದೈವಗಳ ಮಾಟವೋ ಎಂದು ಭರತೇಶ ಅನುಮಾನಿಸಿದನು. ಮಾಗಧಾಂಕಿತ ಜಯನಾಮರನ್ನು ಕೂಡಲೆ ಕರೆದು ಮೇಲ್ಭಾಗವನ್ನು ನೋಡಿಬರುವಂತೆ ಕಳುಹಿಸಿದನು.

ಅವರು ಮೇಲುಭಾಗಕ್ಕೆ ಹೋಗಿ ನೋಡಿದಾಗ ಸಾಲುಗೊಂಡಿದ್ದ ದೈವಗಳನ್ನು ಕಂಡರು. ಅದನ್ನು ಕೂಡಲೆ ಭರತೇಶನಿಗೆ ತಿಳಿಸಿ, ಅವನಿಂದ ಅಪ್ಪಣೆ ಪಡೆದು ಮತ್ತೆ ಮೇಲಕ್ಕೆ ಹಾರಿದರು. ಅವರ ಹಿಂದೆ ಉಳಿದ ವ್ಯಂತರರೂ ಗಣಬದ್ಧರೂ ಅವಸರವಾಗಿ ನಡೆದರು. ವ್ಯಂತರರು ಮಳೆಗೆ ಅಂಜದೆ ಮುಂದುವರಿದರು. ಜಯರಾಜನು ಖೇಚರರ ವಿಮಾನವೇರಿ ದಾಳಿಯಿಟ್ಟನು. ಸ್ವಾಮಿದ್ರೋಹಿಗಳನ್ನು ಹೊಡೆಯಿರಿ, ಹಿಡಿಯಿರಿ ಎಂಬ ಗುಲ್ಲು ಹಬ್ಬಿತು. ತಿತ್ತಿರಿ ತಂಬಟೆ ಭೇರಿ ಕಹಳೆಗಳ ಘೋಷ ಹೆಚ್ಚಿತು. ದೈವಗಳು ದೂರದಲ್ಲಿ ನಿಂತು ಕಠೋರ ಯುದ್ಧಕ್ಕೆ ತೊಡಗಿದುವು. ಸುರಿವ ಮಳೆಯನ್ನು ನಿಲ್ಲಿಸಿ ಗುಂಡಿನ ಮಳೆಯನ್ನು ಸುರಿಸಿದುವು.

ಅವುಗಳಿಂದ ತಪ್ಪಿಸಿಕೊಂಡು ವ್ಯಂತರಸೇನೆ ಮುಂದುವರಿಯಿತು. ದೈವಗಳು ಸುರಿಸಿದ ಕೆಂಡಗಳನ್ನು ಖೇಚರರು ಅಗ್ನಿಸ್ತಂಭನದಿಂದ ಪರಿಹರಿಸಿದರು.

ಇದನ್ನು ಕಂಡು ದೈವಗಳು ತಮ್ಮ ಪರಿವಾರದೊಂದಿಗೆ ಹಿಂದಕ್ಕೆ ಹೋದುವು. ಒಂದೆಡೆಯಿಂದ ಜಯರಾಜನೂ ಇನ್ನೊಂದೆಡೆಯಿಂದ ವ್ಯಂತರರೂ ಹೋರಾಡಿದರು. ಮತ್ತೊಂದೆಡೆಯಿಂದ ಮಾಗಧಾಂಕನೂ ಮುತ್ತಿದನು. ಹೀಗಾಗಿ ದೈವಗಳು ಮಾಡಿನ ಮೇಲಿನ ಕಾಗೆಗಳಂತೆ ಕೆಟ್ಟು ಓಡಿಹೋದುವು. ಕಾಲಮುಖನ ಹಿಡಿರಿಯಿರಿ. ಮೇಘಮುಖನ ಹಿಡಿಯಿರಿ—ಎಂದು ವ್ಯಂತರರು ಓಡಿಸಿದರು. ಆದರೆ ದೈವಗಳು ಹೇಮಾದ್ರಿಯನ್ನೇರಿ ನೆಗೆದು ಓಡಿ ಕಾಣದಾದವು.

ಕುಲದೈವಗಳು ಸುರಿಸುತ್ತಿದ್ದ ಮಳೆಯನ್ನು ನೋಡುತ್ತ ಹೆಮ್ಮೆಯಿಂದಿದ್ದ ಚಿಲಾತ ರಾಜನು ಓಡಿಹೋಗಿ ತಲೆಮರೆಸಿಕೊಂಡನು. ''ಮಳೆನಿಂತರೇನಂತೆ. ನಮ್ಮ ಕುಲದೈವಗಳು ಕಾದಿ ಗೆಲ್ಲುವುವು.'' ಎಂದು ಆವರ್ತರಾಜನಲ್ಲಿಯೇ ನಿಂತಿದ್ದನು. ಅವನನ್ನು ಜಯರಾಜನು ಹಿಡಿದನು. ಕಾಡಿಗೋಡಿದರೂ ಚಿಲಾತನ ಸುಳಿವನ್ನು ವ್ಯಂತರರು ತಿಳಿಯಬಹುದಾಗಿತ್ತು. ಆದರೆ ಓಡಿದವನ ಸುದ್ದಿ ಈಗ ಬೇಡವೆಂದವರು ಅವನನ್ನು ಬಿಟ್ಟುಬಿಟ್ಟರು. ಜಯರಾಜನು ಆವರ್ತನನ್ನು ಭರತೇಶನೆಡೆ ಕರೆದೊಯ್ದನು.

ಭೂಮಿಯನ್ನು ಮುತ್ತಿದ ಅಂಧಕಾರವು ಹರಿಯಿತು. ಪೂರ್ವಗಿರಿಯಲ್ಲಿ ಸೂರ್ಯ ಕಂಗೊಳಿಸಿದನು. ಆಗ ಚರ್ಮರತ್ನವನ್ನೆತ್ತಿದರು. ಆಗ ಸುರಶಿಲ್ಪಿ ಭರತೇಶಗೊಂದು ಚಾವಡಿಯನ್ನು ನಿರ್ಮಿಸಿದನು. ಅರಸನು ಅದರಲ್ಲಿ ಓಲಗವಿತ್ತನು.

ಜಯರಾಜನು ತಾನು ಬಂಧಿಸಿ ತಂದ ಆವರ್ತರಾಜನನ್ನು ಓಲಗಕ್ಕೆಳೆದು ತರಿಸಿ ಭರತೇಶನೆದುರು ಎರಗಿಸಿದನು. ತನ್ನ ಕೆಲಸದ ಹಿಗ್ಗಿನಿಂದ ಅವನು ಭರತೇಶನಿಗೆ ಕೈಮುಗಿದನು. ''ದೇವ ಚಿತ್ತೈಸು. ಇವನೆ ದೈವಗಳಿಂದ ನಮಗೆ ನೋವನ್ನುಂಟು ಮಾಡಿದವನು.'' ಎಂದು ಆಮೇಲೆ ನುಡಿದನು. ''ಮದುಳದಿಂದ ಬಂದು ಶರಣಾಗದೆ ನನಗೆದುರಾಗಿ ಕದನವಿತ್ತ ಇವನನ್ನು ಒದೆಯಿರಿ. ಅವನ ಮಕುಟವನ್ನುದುರಿಸಿರಿ.'' ಎಂದು ಭರತೇಶನು ಕೋಪಗೊಂಡನು. ಹಡಪದವನು ಕಿರೀಟ ಭಂಗಿಸಲು ಮುಂದಾದಾಗ ಭರತೇಶನವನನ್ನು ತಡೆದು, ಹಾವುಗೆಗಳನ್ನು ಹಿಡಿಯುವ ಬೋವನಿಗೆ ಸೂಚಿಸಿದನು. ಅವನು ಹಾವುಗೆ ಎತ್ತಲು, ''ಬೇಡ ಒದೆದು ಕೆಡಹು'' ಎಂದು ಹೇಳಿದನು ಭರತೇಶ. ಅದರಂತೆ ಬೋವನು ಒದೆದು ಮಕುಟ ಭಂಗ ಮಾಡಿದನು. ಧರೆಗೆ ಬಿದ್ದ ಕಿರೀಟ ಭರತೇಶಗೆದುರಾಗಬೇಡವೆಂದು ಸಾರುವಂತಿತ್ತು.

''ಇವನನ್ನು ಕಾವಲಿನಲ್ಲಿರಿಸು.'' ಎಂದಾಗ ದಳಪತಿಯವನ ಕಟ್ಟುಬಿಡಿಸಿ ಕಾವಲಮನೆಗೆ ಕಳುಹಿಸಿದನು.

''ಲೇಸ ಮಾಡಿದಿರಿ, ನೀವಿನ್ನು ನಿವಾಸ ಸೇರಿ, ಪಡೆಯ ಆಸರು ಆರಲಿ.'' ಭರತೇಶನವರನ್ನು ಬೀಳ್ಕೊಟ್ಟನು. ಭರತೇಶನು ದುಷ್ಟಗೆ ಶಿಕ್ಷೆ ವಿಧಿಸಿದನು. ಮುಂದೆ ವಿಶಿಷ್ಟರನ್ನು ರಕ್ಷಿಸುವನು.

ಬಳಿಕ ಇಷ್ಟಾರ್ಥದ ಅರಮನೆ ಸೇರಿದನು.

# ೧೬

# ಸಿಂಧುದೇವಿಯಾಶೀರ್ವಾದ

ಏಳು ದಿನಗಳಲ್ಲಿ ಆಲಸ್ಯದಿಂದಿದ್ದ ತನ್ನ ಲೋಲನೇತ್ರೆಯರನ್ನು ಭರತೇಶನು ಎರಡು ದಿನಗಳ ಸರಸ ಸಲ್ಲೀಲೆಗಳಿಂದ ಲಾಲನೆ ಮಾಡಿದನು. ಮಂಜು ತಾಗಿದ ತಾವರೆಗಳನ್ನು ಸೂರ್ಯನು ನಗಿಸುವಂತೆ ಆಲಸಿದ ಸೊಗಸಿನ ಹೆಣ್ಣುಗಳ ಮನಸ್ಸಿಗವನು ಪ್ರೀತಿಯನ್ನುಂಟು ಮಾಡಿದನು. ಭರತೇಶನೆಂದರೆ ಕೋವಿದ ನಲ್ಲವೇ? ಸುಗುಣಿಯಲ್ಲವೇ?

ಒಳಗೆ ತನ್ನ ಅಬಲೆಯರನ್ನೆಲ್ಲ ಮನ್ನಿಸಿದ ದೊರೆಯು ಮೂರನೆ ದಿನ ಹೊಳೆವ ಚಾವಡಿಯಲ್ಲಿ ಓಲಗವಾಗಿ ಕದನದ ಕಲಿಗಳನ್ನು ಮನ್ನಿಸಿದನು. ಕದನಕಲಿಗಳನ್ನು ಕರೆಯಿಸಿದಾಗ ಅವರೆಲ್ಲ ಬಂದು ಕೈಮುಗಿದು ನಿಂತರು. ಎಲ್ಲರನ್ನೂ ಸಂತೋಷದಿಂದ ನೋಡಿ, ''ಸಂದ ಸಂಗ್ರಾಮದಲ್ಲಿ ನೀವೆಲ್ಲ ದಂದುಗಪಟ್ಟಿರಿ.'' ಎಂದನು.

''ನಮಗೆ ಯಾವ ದಂದುಗ? ನಿನ್ನ ದಿವ್ಯ ನಾಮವನ್ನು ನೆನೆಯುತ್ತ ನಡೆಯುವಾಗ ನಮಗೆ ಸುವಿಲಾಸವಾಗಿರುವುದು'' ಎಂದು ಅವರೆಲ್ಲ ಪ್ರೀತಿಯಿಂದ ತಿಳಿಸಿದರು.

''ಹುಸಿಯಲ್ಲ ಈ ಮಾತು. ಮೊನ್ನೆ ತಾಮಸ ದೈವಗಳು ನಮ್ಮ ಅಸಮ ಸೇನೆಯನ್ನೊತ್ತಿ ಬಂದರು. ಆದರೂ ನಿಮ್ಮ ದಿವ್ಯ ನಾಮವನ್ನು ಕೇಳಿ ಯುದ್ಧಕ್ಕೆ ಹಿತವನ್ನೇ ಕೋರಿ ಆಚೆ ಸರಿದು ಓಡಿದರು.'' ಎಂದು ಸೇನಾಪತಿ ಜಯರಾಜನು ಬಿನ್ನಹಮಾಡಿದನು.

''ಹಾಗೆ ನಲಿದವರಾರು?'' ಎಂದು ಭರತೇಶನು ಮಾಗಧಾಂಕನನ್ನು ಕೇಳಿದನು. ಅವನಾಗ ವಿನಯದಿಂದ ಬಿನ್ನವಿಸಿದನು.

''ಮನುಜೇಂದ್ರ ಚಿತ್ತವಿಸು, ಅವರು ತಮ್ಮ ವ್ಯಂತರ ಜನತೆಗೆ ಆರಾಧ್ಯರು. ಒಬ್ಬನು ಸಿಂಧುದೇವನು; ಇನ್ನೊಬ್ಬ, ಗಂಗಾದೇವನು. ಅವರಿಬ್ಬರೂ ಬಂದು ದೈವಗಳ ಒಡ್ಡನ್ನೋಡಿಸಿದರು. ಅವರು ನಾಳೆ ನಾಡಿದು ಬಂದು ದೇವರನ್ನು ಕಾಣುವರು.'' ಇದನ್ನು ಕೇಳಿದ ಚಕ್ರೇಶನು ಅವರ ಮೇಲೆ ಒಲ್ಮೆಯನ್ನು ತೋರಿದನು. ಒಲಿದು ಸರ್ವರಿಗೂ ಮನ್ನಣೆಯಿತ್ತನು. ಆಮೇಲೆ ಸಭೆಯು ತಲೆದೂಗುವಂತೆ ಗೆಲವನ್ನು ಪಡೆದ ಜಯರಾಜನನ್ನು ಮನ್ನಿಸಿದನು.

''ಮೇಘಮುಖವನ್ನು ಗೆದ್ದಕಾರಣ ನಿನಗಿನ್ನು ಮೇಘೇಶನೆಂಬ ನಾಮ.'' ಎಂದು ಭರತೇಶನು ವೀರಾಗ್ರಣಿಗೆ ಅಮೋಘವಾದ ಬಿರುದನ್ನು ಕೊಟ್ಟನು. ಭರತೇಶನೆದ್ದು ಜಯರಾಜನ ತಲೆ ಸವರಿ, ''ನೀನು ನನಗೆ ಅರ್ಕಕೀರ್ತಿಯಂತೆ'' ಎಂದು ನುಡಿದನು. ''ಧನ್ಯನಾದೆನು ಸ್ವಾಮಿ'' ಎಂದು ಜಯರಾಜನು ರಾಜೇಂದ್ರನ ಅಡಿಗೆರಗಿದನು. ಇದರಿಂದ ದಳಪತಿಯ ಕೀರ್ತಿ ಹೆಚ್ಚಿತು. ಭರತೇಶನನ್ನು ಬುಧರೆಲ್ಲರೂ ಕೀರ್ತಿಸಿದರು.

ಆವರ್ತನ ತಮ್ಮ ಮಾಧವನೂ, ಚಿಲ್ಲಾತನೂ ಭರತೇಶನನ್ನು ಕಾಣಲು ಅಂಜುತ್ತಿರುವರೆಂದು ಭರತೇಶನಿಗೆ ತಿಳಿಸಿದರು.

"ದ್ರೋಹಿಗಳವರು. ಅವರನ್ನು ನೋಡಬಾರದು." ಎಂದು ಭರತೇಶನೊಮ್ಮೆ ನುಡಿದರೂ "ನೀನು ಉತ್ಸಾಹದಿಂದ ನುಡಿದ ಮಾತು ಬಾಹಿರವಾಗಬಾರದು. ಕರೆಸು" ಎಂದು ಭರತೇಶನು ನುಡಿದನು. ಮಹಾತ್ಮರು ಅಲ್ಪಕೋಪಿಗಳು.

ಕೊರಳಿಗೆ ಚಿಂದಿಯನ್ನು ಕಟ್ಟಿಕೊಂಡು ಬಂದ ಅವರಿಬ್ಬರನ್ನೂ ಚಕ್ರಿಯ ಕಾಲುಗಳಿಗೆರಗಿಸಿದರು. "ಶರಣಾಗತ ವಜ್ರಪಂಜರ. ದುರುಳರನ್ನು ಪಾಲಿಸು" ಎಂದವರು ಬಿನ್ನವಿಸಿದರು. ಭರತೇಶ ಕರುಣೆ ತೋರಿದನು; ಏಳಿ ಎಂದನು. ಅವರೆದ್ದು ಮತ್ತೆ ಹಿರಿದಾದ ಕಪ್ಪವನ್ನೊಪ್ಪಿಸಿದರು.

ಆಗ ರಾಜಾಂಗಲಕ್ಷಣನಾದ ಭರತೇಶನು "ಭಂಗಗಾಣಿಸಿದೆವು; ಇನ್ನೂ ಆವರ್ತನನ್ನು ನೋಡುವುದು ಒಳಿತಲ್ಲ; ಅವನಿನ್ನು ಧರೆಯನ್ನು ಹಿಂದಕ್ಕಿತ್ತು ಬೇರೆ ಉಂಬಳಿಯಲ್ಲಿರಲಿ. ಮಾಧವ ಬಾ, ನಿನ್ನಣ್ಣನಿಗೆ ಉಂಬಳಿಯ ಕೊಟ್ಟು ನೀನು ಈ ಧರಣಿಯನ್ನಾಳು. ನಿಮ್ಮಲ್ಲಿ ನನಗೆ ಕ್ರೋಧವಿಲ್ಲ. ನಿಮಗೆಲ್ಲರಿಗೂ ಮುಂದೆ ಸುಖವೊದಗುವುದು. ಮುಂದೆ ವೇಳೆಯರಿತು ನೀವು ಬರಬಹುದು." ಎಂದು ಹೇಳುತ್ತ ಮಾಧವನಿಗೂ ಚಿಲ್ಲಾತನಿಗೂ ಮನ್ನಣೆಯಿತ್ತು ಕಳುಹಿಸಿದನು.

ಆನಂತರ, ಭರತೇಶನು, "ವಿಜಯಾಂಕ, ನೀನು ಪಡೆಯೊಡನೆ ಮೂಡಣಖಂಡಕ್ಕೆ ನಡೆದು ಅವರನ್ನು ಗೆದ್ದುಕೊಂಡು ಬಾ, ಸೇನಾಪತಿ ಜಯರಾಜನು ಪಡುವಣ ಖಂಡಕ್ಕೆ ತೆರಳಲಿ." ಎಂದು ಅವರಿಬ್ಬರನ್ನೂ ಬೀಳ್ಕೊಟ್ಟನು.

ಆ ಸಮಯಕ್ಕೆ ಸರಿಯಾಗಿ ವಿಜಯಾರ್ಧದೇವನು ಬಂದು ಭೂಭುಜನಾದ ಭರತೇಶನನ್ನು ನಲ್ಮೆಯಿಂದ ಕಂಡನು. ಮೂರು ಲೋಕದಲ್ಲಿ ಭರತೇಶಗೆಣೆ ಯಾರೂ ಇಲ್ಲವೆಂದು ಅವನ ವಿಜಯದ ಉನ್ನತಿಯನ್ನು ಕೀರ್ತಿಸಿದನು.

"ವಿಜಯಾರ್ಧದೇವ, ನಿಮ್ಮ ಹಿಮವಂತನು ನಮ್ಮ ಬಳಿಗೆ ಸಂತೋಷದಿಂದ ಬಂದು ಕಾಣುವನೊ? ಅಥವಾ ನಾವು ಕಠಿಣರಾಗಬೇಕೋ ಹೇಳು?"

"ನೀವು, ಕಠಿಣವಾಗುವುದೇಬೇಡ. ಹಿಮವಂತದೇವನು ಕಟ್ಟುಗ್ರದವನಲ್ಲ, ನಾನು ಹೋಗಿ ಅವನನ್ನು ಕರೆದುಕೊಂಡು ಬರುವೆನು."

"ಹಾಗಾದರೆ ಒಳ್ಳಿತು." ಎಂದು ಭರತೇಶನು ನುಡಿಯಲು, ವಿಜಯಾರ್ಧನು ಆಕಾಶದತ್ತ ನೆಗೆದನು.

ನಾಟ್ಯಮಾಲನೂ ಅದೇ ಸಮಯವೆಂದು ಭರತೇಶನ ಬಳಿಗೆ ಬಂದು ಸಾಷ್ಟಾಂಗ ವೆರಗಿ, ಕಾಣಿಕೆಯಿತ್ತು ನಿಂತನು. "ಗುಹೆಯ ತುದಿಯಲ್ಲಿರುವ ನಾಟ್ಯ ಮಾಲೇಂದ್ರನಿವನು ಅಖಂಡ ಪ್ರತಾಪನು." ಎಂದು ಮಾಗಧೇಂದ್ರನು ಅವನ ಪರಿಚಯ ಮಾಡಿದನು. ಚಕ್ರಿಯು ಅವನನ್ನೂ ಮನ್ನಿಸಿ ಕಳುಹಿಸಿದನು.

ಮರುದಿನ ಮತ್ತೆ ಓಲಗ ಸೇರಿತು. ಆಗ ಗಂಗಾದೇವನೂ ಸಿಂಧೂ ದೇವನೂ

ಭರತೇಶನನ್ನು ನೋಡಲು ಬಂದರು. ಅವರು ಮೊದಲು ಮಾಗಧೇಂದ್ರರೇ ಮೊದಲಾದವರನ್ನು ಭರತೇಶನಲ್ಲಿಗೆ ಕಳುಹಿಸಿದರು. ಮಾಗಧೇಂದ್ರನು, ವ್ಯಂತರಪತಿಗಳನ್ನೆಲ್ಲ ಹಿಂದಿಕ್ಕಿಕೊಂಡು ಬಂದು ಭರತೇಶನಿಗೆ ಅಡ್ಡಬಿದ್ದನು. ತನಗೆ ಅಡ್ಡಬಿದ್ದಿರುವ ಮಾಗಧೇಂದ್ರ, ವರತನು, ಕೃತಮಾಳ, ಪ್ರಭಾಸ, ನಾಟ್ಯಾಂಕರನ್ನು ಭರತೇಶನು ಏಳಿರೆಂದು ಎಬ್ಬಿಸಿದನು; ಅವರ ಮನಸ್ಸಿನಲ್ಲಿದ್ದ ಕಾರ್ಯವನ್ನು ಕೇಳುವೆನೆಂದನು. ಕೂಡಲೇ ಅವರೆಲ್ಲರೂ ಎದ್ದರು. ಮಾಗಧನು, ಅರಸನೆದುರು ತುಟಿಗೆ ಸೆರಗನ್ನು ಹಿಡಿದುಕೊಂಡು ಬಿನ್ನಹಮಾಡಿದನು.

''ದೇವ ಬಿನ್ನಹ, ಸಿಂಧುದೇವನೂ ಗಂಗಾದೇವನೂ ಜಿನನ ಭಾವನೆ ಹಿಡಿದಿರುವರು. ನಮಗೆಲ್ಲ ಯಾವಾಗಲೂ ಪೂಜ್ಯಭಾವರಾಗಿರುವರು. ನಿನ್ನಲ್ಲಿಯೂ ಅವರಿಗೆ ಭಕ್ತಿಯಿದೆ. ಇದನ್ನು ನೀನರಿಯದವನಲ್ಲ. ಅವರನ್ನೂ ಮನ್ನಣೆಯಿಂದ ಕಾಣಿಸಿಕೊಳ್ಳಬೇಕು. ಕಾಣಿಕೆಯಿತ್ತು ಕಾಣಿಸಿಕೊಳ್ಳುವಷ್ಟು ಕೃಪೆಮಾಡಬೇಕು. ಇದು ನೀನು ನಮ್ಮವರೆಲ್ಲರಿಗೆ ಕೊಡುವ ತೇಜವೆಂದು ಭಾವಿಸುವೆವು.''

''ಆಗಲಿ. ಅದಕ್ಕಾಗಿ ನೀವೆಲ್ಲ ಹೀಗೆ ಅಡ್ಡಬೀಳಬೇಕೆ? ಮಾಗಧ, ನೀನೆಂದಂತೆ ಆಗಲಿ. ಅವರನ್ನು ಕರೆಸು.'' ಎಂದ ಭರತೇಶನ ಮಾತು ವ್ಯಂತರರಲ್ಲಿ ಅನುರಾಗವುಕ್ಕುವಂತೆ ಮಾಡಿತು. ಅದರಂತೆ ಸಿಂಧುದೇವ ಗಂಗಾದೇವರು ಬಂದು ಭರತೇಶಗೆ ಕಾಣಿಕೆಯಿತ್ತು ಜಮ್ಖಾನೆಯಲ್ಲಿ ಕುಳಿತರು.

ಲೇಸು ಮಾಡಿದವರನ್ನು ನಾನರಿಯೆನೇ? ನಿಮ್ಮನ್ನು ಉದಾಸೀನ ಮಾಡುವೆನೆ? ನೀವಿಷ್ಟು ಅಳುಕಿನಲ್ಲಿ ಈ ರೀತಿ ಬಂದುದೇಕೆ?'' ಎಂದು ಭರತೇಶನೇ ಮಾತನಾಡಿಸಿದನು.

''ಸ್ವಾಮಿ ನಾವೇನು ಲೇಸುಮಾಡಿರುವೆವು? ನಿನಗಿದಿರಾವುದುಂಟು? ನಿನ್ನ ಸೇವೆಯು ವ್ಯಂತರದಲ್ಲಿ ನಾವು ಪೂಜ್ಯರೆಂಬ ಭಾವ ನಮ್ಮನ್ನು ತಡಮಾಡಿತು ಷಟ್ಖಂಡವನ್ನು ಒಂದೇ ಕೊಡೆಯಲ್ಲಿ ಆಳುವವನ ಕಾಣುವವರು—ಎಂಬ ಭಾವನೆ ನಮಗುಂಟಾಯಿತು. ನಿನಗೆ ವಿರೋಧಿಯಾದವನು ತನಗೆ ತಾನೇ ವಿರೋಧವೆಸಗಿಕೊಂಡಂತೆ. ನಿನಗೆ ಹಿತವನ್ನು ನೆನೆದವನು ತನಗೆ ಹಿತವನ್ನು ನೆನೆದಂತೆ. ಮಲೆತವರನ್ನು ಮುರಿದಿಕ್ಕುವ ಮಣಿದವರನ್ನು ಸಲುಹುವ ಸಾಮರ್ಥ್ಯವುಳ್ಳ ನಿನ್ನನ್ನು ಕಾಣುವುದು ಪುಣ್ಯದ ಫಲವು.''

ಸಿಂಧುದೇವ ಗಂಗಾದೇವರ ಈ ಮಾತನ್ನು ವ್ಯಂತರರೂ ಸಹಜವೆಂದು ತಿಳಿಸಿದರು. ''ನಿಮಗೂ ನಮಗೂ ಭಾರವೇನು? ಬಂಧುತನದೊಂದು ಮಾತಿರಲಿ. ಕೊಡುವ ಕೊಳ್ಳುವ ಬೀಯಗತನ ಬೇಡ. ಅದನ್ನು ಮಾತಿನಲ್ಲಿ ಮಾಡುವೆವು. ಇನ್ನು ನಮ್ಮ ಮಡದಿಯರು ನಿಮ್ಮ ಅಕ್ಕಂದಿರು; ನಿಮ್ಮ ಸತಿಯರು ನಮ್ಮ ಒಡಹುಟ್ಟಿದ ತಂಗಿಯರು.'' ಎಂದು ಭರತೇಶನು ಎದೆಬಿಚ್ಚಿ ನುಡಿದನು.

ಶುಭ ಶಕುನದಲ್ಲಿ ಬಂದ ಇವರು ಪ್ರಭುವಿಗೆ ಮೈದುನರಾದರು. ಹಾಗೆ ಮೈದುನರಾದ ಅವರಿಗೆಲ್ಲ ಭರತೇಶನು ಭಾರಿ ಭಾರಿ ಉಡುಗೊರೆಯಿತ್ತನು. ''ನಿಮ್ಮ ಊರಲ್ಲಿದ್ದು ಜಿನಬಿಂಬವನ್ನು ನೋಡುವ ಮನಸ್ಸು ನಮಗುಂಟು. ನಾಳೆ ಬರುವೆವು. ನೀವು ಮುಂದೆ ತೆರಳಿರಿ.'' ಎಂದು ಅವರನ್ನು ಬೀಳ್ಕೊಟ್ಟನು. ಅವರು ಕೈಮುಗಿದು ನಲಿದುಬ್ಬಿ ಹೋದರು.

ಮರುದಿವಸ ಭರತೇಶನ ಸೇನೆಯು ಅಲ್ಲಿಂದ ಹೊರಟು ಹಲವು ಪಯಣಗಳಲ್ಲಿ ಸಿಂಧುಕೂಟವನ್ನು ಸೇರಿ, ಬಳಿಯಲ್ಲೇ ಪಾಳ್ಯಬಿಟ್ಟಿತು. ಆಗ ಸಿಂಧು ದೇವನು ಸುವಸ್ತುಗಳ ಉಲುಪೆಯೊಂದಿಗೆ ಬಂದು ಆ ವೀರಸೇನೆಯು ತಣಿವಂತೆ ಅವರನ್ನೆಲ್ಲ ಮನ್ನಿಸಿದನು. ಬಂದ ದಿನವೇ ಮೈದುನನು ಮಾಡಿದ ಉಪಚಾರದಿಂದಾಗಿ ಭರತೇಶನು ಮರುದಿವಸ ತೀರ್ಥಸ್ನಾನಾದಿಗಳನ್ನು ತೀರಿಸಿ, ಮುಂದಕ್ಕೆ ಪಯಣಿಸುವುದೆಂದು ಯೋಚಿಸಿದನು.

ಗಗನವನ್ನು ಮುಟ್ಟುವ ಹಿಮಶೈಲದಲ್ಲಿ ಹುಟ್ಟಿ ಅಲ್ಲಿಂದ ಹಾರಿ ದಕ್ಷಿಣ ಮುಖವಾಗಿ ಭೂಮಿಗೆ ಬೀಳುವ ಸಿಂಧು ನದಿಯನ್ನು ಸುಗುಣಿಯಾದ ಭರತ ಚಕ್ರೇಶ್ವರನು ನೋಡಿದನು. ಈ ಸಿಂಧುತಟಿನಿಯು ಮೊದಲು ಕಿರಿದು ಕಿರಿದಾಗಿ, ಮತ್ತೆ ಬರಬರುತ್ತ ಹಿರಿದು ಹಿರಿದಾಗಿ ಹರಿಯುತ್ತಿತ್ತು. ನೆಲದ ಮೇಲೊಂದು ಕಿರಿದಾದ ಪರ್ವತ ; ಅದರ ತುದಿಯಲ್ಲಿ ಪ್ರಜ್ವಲಿಸುವ ಜಿನಬಿಂಬವು ಮೆರೆಯುವುದು; ಆ ಬಿಂಬದ ತಲೆಯಿಂದಲೇ ಸಿಂಧು ನದಿಯು ಬೀಳುತ್ತಿರುವುದು. ಆ ಬಿಂಬವು ಸಿದ್ಧಾಸನದಲ್ಲಿ ಶೋಭಿಸುವುದು; ನೀರು ಶೋಭಿಸುವಂತೆ ಜಡೆ ತುಂಬಿರುವುದು. ಭಕ್ತರಿದನ್ನು ನೋಡಿ, ಈಶ್ವರ ಗಂಗೆಯನ್ನು ಧರಿಸಿರುವನೆನ್ನುವರು.

ಬುದ್ಧಿಸಾಗರ ಮಂತ್ರಿಯು ಬ್ರಾಹ್ಮಣರೊಡನೆ ಅಲ್ಲಿ ಸ್ನಾನ ಮಾಡಿ, ತನ್ನ ಪಾಪವು ಹರಿವಂತೆ ಜಿನೇಂದ್ರ ಬಿಂಬದ ಸ್ತುತಿಮಾಡಿದನು. ಬ್ರಾಹ್ಮಣರೆಲ್ಲರೂ ಪುಣ್ಯತೀರ್ಥದಲ್ಲಿ ಮಿಂದು ಜಿನೇಂದ್ರನ ಸಾವಿರನಾಮ ಮಂತ್ರಗಳನ್ನು ಜಪಿಸುತ್ತಿರುವುದನ್ನು ನೋಡಿ ಭರತೇಶ್ವರನು ಮೆಚ್ಚಿದನು. ಭೂಸುರರು ಆಚಮನವಮಾಡಿ ಭೂಮೀಶಗೆ ಜಯವಾಗಲೆಂದರು; ಅವರ ಭಕ್ತಿಯನ್ನು ಕಂಡು ಅರಸನಿಗೂ ಆಶ್ಚರ್ಯವಾಯಿತು. ಪುರುನಾಥನ ಸೃಷ್ಟಿಯವರಾದ ಅವರ ಶಿಷ್ಟಾಚಾರಕ್ಕೆ ಭರತಚಕ್ರಿಯು ಸಂತುಷ್ಟನಾದನು. ಚಕ್ರವರ್ತಿಗೆ ಜಯವಾಗಲೆಂದು ಬ್ರಾಹ್ಮಣರು ತಮ್ಮ ಜಪಾದಿಗಳನ್ನು ತೀರಿಸಿ ಅಲ್ಲಿಂದ ಹೊರಟರು.

ಭರತೇಶನು ತನ್ನ ಸತಿಯೊಡನೆ ತೀರ್ಥಕ್ಕಿಳಿದನು. ಮಾನಿನಿಯರಿಗೆ ತೀರ್ಥದ ಚೆಲುವನ್ನು ಕಾಣಿಸಿ, ಜಿನಬಿಂಬವನ್ನು ಸ್ತುತಿಸಿದನು. ಆಮೇಲೆ ಬ್ರಾಹ್ಮಣರಿಗೆ ಭೂರಿದಾನವಿತ್ತನು; ಅವರಿಗೆಲ್ಲ ಸತ್ರದಲ್ಲಿ ತೃಪ್ತಿಯಾಗಲೆಂದು ಮಂತ್ರಿಗೆ ಅಪ್ಪಣೆ ಕೊಟ್ಟನು. ಆವರು ಅರಸನನ್ನು ಹರಸಿದರು.

ಭರತೇಶನು ಬ್ರಾಹ್ಮಣರಿಂದ ಹರಕೆಗೊಳ್ಳುತ್ತಿರುವಾಗಲೇ ಅಲ್ಲಿಗೆ ಸಿಂಧು ದೇವನು ಬಂದು, ಸಿಂಧು ದೇವಿಯು ಅಣ್ಣನನ್ನು ಕಾಣುವಳೆಂದು ತಿಳಿಸಿದನು. ಕೂಡಲೇ ಅರಸನು ಒಳಿತೆಂದು ಒಳಸಾರಿ ವಿಲಾಸದ ಓಲಗದಲ್ಲಿ ಮೆರೆದನು. ದೇವಕಾಂತೆಯರನ್ನು ಬಳಸಿಕೊಂಡು ಸಿಂಧು ದೇವಿಯು ವಿಲಾಸದಿಂದ ಬಂದಳು. ಸಿಂಧು ದೇವಿಯು ಗರುವಿಕೆ ಗಾಡಿ ಶೃಂಗಾರ ಲಾವಣ್ಯಗಳಿಂದ ಮೈಸಿರಿಗೂಡಿ ನಡೆದು ಬರುವಾಗ ಭರತ ರಾಜೇಂದ್ರನ ತಂಗಿಯೆ ಸರಿಯೆಂಬ ರೀತಿಯಲ್ಲಿ ಶೋಭಿಸುತಿದ್ದಳು. ಕಳಸ ಕನ್ನಡಿ ಮೊದಲಾದವುಗಳನ್ನು ಹಿಡಿದಿರುವ ಮಂಗಳಾಂಗಿಯರು ಮುಂದೆ ನಡೆಯುತಿದ್ದರು. ಕೆಳದಿಯರು ನಿವಾಳಿ ಆರತಿಗಳನ್ನು ಹಿಡಿದುಕೊಂಡು ಒತ್ತಿನಲ್ಲಿ ಬರುತಿದ್ದರು. ಅಣ್ಣನ ನೂತನ

ದರ್ಶನವಾದುದರಿಂದ ಅವನ ಬಳಿಗೆ ಸಾರಲು ಆ ತಂಗಿ ಅಂಜುತ್ತಿರುವುದನ್ನು ಭರತೇಶ್ವರನು ಅರಿತನು. ''ಭೀತಿಯೇತಕ್ಕೆ ತಂಗಿ, ಬಾ'' ಎಂದು ಅಕ್ಕರೆಯಿಂದ ಆಕೆಯನ್ನು ಕರೆದನು.

ಸಿಂಧು ದೇವಿಯು ಅಣ್ಣನ ಬಳಿ ಸಾರಿ, ಹೊಳೆವ ಎಳೆಮುತ್ತಿನ ಅಕ್ಷತೆಗಳನ್ನು ಹಾಕಿ ''ಅಣ್ಣಾಜಿ ಸುಖ ಬಾಳು''ಎಂದಳು. ''ನನ್ನ ತವರು ಮನೆಯ ಚಂದಕಾರನಾದ ನೀನು ಅವಿಚಲವಾದ ಆರು ಖಂಡಗಳ ರಾಜ್ಯ ಸಂಪತ್ತನ್ನಾಳುತ್ತಿರು'' ಎಂದು ಅಣ್ಣನಿಗೆ ತಿಲಕವಿಟ್ಟಳು. ''ಭೂಮಿ ಆಕಾಶಗಳೆಗೆಲ್ಲ ನಿನ್ನ ಕೀರ್ತಿ ಶುಭ್ರಾಂಬರವಾಗಿ ಹಬ್ಬಲಿ'' ಎಂದವಳು ಅಣ್ಣನಿಗೊಂದು ದಿವ್ಯಾಂಬರವನ್ನು ಹೊದೆಸಿದಳು. ''ಯಾರು ನಿನಗೆ ಇದಿರಾಗುವರೋ ಅವರ ತಲೆಗಳನ್ನು ನಿನ್ನ ಪಾದಗಳಿಗೆ ಎರಗಿಸುವ ವೀರಸಿರಿಯನ್ನೂ ಜಯಸಿರಿಯನ್ನೂ ನೀನು ಆಳುತ್ತಿರು.'' ಎಂದವಳು ಚಕ್ರಿಗೆ ವೀರಕಂಕಣ ತೊಡಿಸಿದಳು. ಈ ರೀತಿ ಅಣ್ಣನನ್ನು ಹರಸಿದ ಮೇಲೆ ಅವನ ಒತ್ತಿನಲ್ಲಿರುವ ಹೆಣ್ಣುಗಳನ್ನೆಲ್ಲ ಕಣ್ಣಿನ ಪ್ರೀತಿ ಹೆಚ್ಚಾಗುವಂತೆ ನೋಡಿ ನಗುತ್ತ ಬಣ್ಣ ಬಣ್ಣಿಗೆಯಿಂದ ಅವರನ್ನು ಹರಸಿದಳು. ''ಚಿಂತೆಯೆಂಬುದು ಕನಸಿನಲ್ಲೂ ಕಾಣದೆ ನಿಮ್ಮ ಕಾಂತನೊಂದಿಗೆ ಇದ್ದು ಸಂತಾನಸಿರಿಯನ್ನು ಪಡೆದು ಸುಖವಾಗಿರಿ'' ಎಂದವರಿಗೆಲ್ಲ ಅಕ್ಷತೆ ತಳಿದಳು. ''ನಿಮ್ಮ ಹರೆಯ ಜಾರದಂತೆ, ನಿಮಗೆ ಮುಪ್ಪು ಬಾರದಂತೆ ಸವತಿ ಮತ್ಸರವಾಗದಂತೆ ನನ್ನ ಅಣ್ಣನೊಂದಿಗೆ ಸ್ಥಿರವಾಗಿ ಬಾಳಿ.'' ಎಂದು ಅವರಿಗೆಲ್ಲ ದೇವಾಂಗದ ಸೀರೆಯನ್ನು ಉಡುಗೊರೆಯಿತ್ತಳು.

ಅವರಾದರೋ ''ಹರಕೆಯಿರಲಿ. ವಸ್ತ್ರಬೇಡ''ವೆಂದರು. ಆಗ ರಾಜನವರೊಡನೆ ''ನಮ್ಮ ತಂಗಿ, ಹರಸಿ ಕೊಟ್ಟುದನ್ನು ಕೊಳ್ಳಿ. ಅದನ್ನು ಬಿಸುಡಬಾರದು'' ಎಂದನು. ಒಡನೆ ಅವರೆಲ್ಲ ಒಡಂಬಟ್ಟು ಉಡುಗೊರೆಯನ್ನು ಪಡೆದುಕೊಂಡರು.

''ನಾನಿತ್ತುದನ್ನು ನನ್ನ ಅಣ್ಣಾಜಿ ಸ್ವೀಕರಿಸಿದನು. ನೀವೇಕಿಂತು ಎರವು ಕಾಣುವಿರಿ?'' ಎಂದು ಸಿಂಧು ದೇವಿ ಹೇಳಿದಾಗ ಅವರು ನಗುನಗುತ್ತ ಸ್ವೀಕರಿಸಿದರು. ''ತಪ್ಪಿದ ಸಖಿಯರನ್ನೂ ಒಪ್ಪಿ ಪೊರೆವಿರಿ. ನೀವು ಒಂದು ತಪ್ಪನ್ನೂ ಮಾಡಿದವರಲ್ಲ. ಈ ಹಾರದಂತೆ ನೀವೆಲ್ಲ ಒಂದಾಗಿ ಒಪ್ಪಾಗಿರಬೇಕು.'' ಎಂದು ಹೇಳುತ್ತ ಅವರಿಗೆಲ್ಲ ಒಂದೊಂದು ಹಾರವಿತ್ತಳು. ಅಣ್ಣನ ರಾಣಿಯರಲ್ಲವೆ ನೀವು? ನೀವು ಹೆಣ್ಣುಗಳ ತಿಲಕಗಳು'' ಎಂದವರಿಗೆಲ್ಲ ಸಣ್ಣ ಸಣ್ಣ ಬೊಟ್ಟುಗಳನ್ನಿಡುತ್ತ ಸರಸದಲ್ಲಿ ಮನ್ನಿಸಿದಳು. ಮತ್ತೆ ಅಣ್ಣನೆಡೆಗೆ ಸರಿದಳು.

''ಅಣ್ಣಾಜಿ, ನೀನಿಂದು ಬಂದುದು ಉತ್ತಮವಾದುದು. ಮುಂದಕ್ಕೆ ಪಯಣವೆಂದಿರುವೆ. ಒಂದೇ ದಿವಸ ನನ್ನ ವಿನಯಕ್ಕಾಗಿ ತಡೆಯಬೇಕು.'' ಎಂದವಳು ಸನ್ಮಾನಿಸಿದಳು. ''ಆಗಲಿ ತಂಗಿ, ನಿನ್ನಿಶ್ಚೆ ಸಲ್ಲಲಿ, ನಾಳೆ ಹೋಗುವೆನು'' ಎಂದು ಅಣ್ಣನು ನುಡಿದನು. ಆ ಮಾತು ಕೇಳಿ ಸೋಗೆ ಗಣ್ಣಿನ ಸಿಂಧು ದೇವಿಯು ಭೂಮಿಯನ್ನೆಲ್ಲ ಆಳಿದಂತೆ ಸಂತೋಷಗೊಂಡಳು. ರಾಜೇಂದ್ರನು ತನ್ನವರೊಂದಿಗೆ ಎರಡು ಹೊತ್ತು ಆರೋಗಿಸಿ ಆನಂದಭರಿತನಾಗಿ ಇರುಳನ್ನು ಕಳೆದನು. ಮರುದಿನ ತಂಗಿಯನ್ನು ಕರೆಯಿಸಿ ಮನ್ನಿಸಿದನು.

''ಭಾ ಸಿಂದುದೇವಿ. ನಮ್ಮ ತಂಗಿ ಬ್ರಾಹ್ಮಿಲಾದೇವಿ ಕೈಲಾಸದಲ್ಲಿ ತಪಸ್ಸಿನಲ್ಲಿಸಂದಳು. ನಿನ್ನಂತೆ ಅವಳು. ನಮಗಿನ್ನು ಬ್ರಾಹ್ಮಿಲಾದೇವಿಯೂ ನೀನೆ.'' ಮಾನವ ಪತಿಯಾದ ಭರತೇಶನು ಆಕೆಯೊಡನೆ ನುಡಿದನು. ''ದೇವಾದಿದೇವನ ಸುತೆಯೆಂದು ಷಟ್ಖಂಡ ಪತಿಯ ಅನುಜಾತೆಯೆಂದು, ಉನ್ನತಿವೆತ್ತು ಧನ್ಯಳಾದೆನು.'' ಎಂದು ಸಿಂಧುದೇವಿಯು ತನ್ನ ಸಂತೋಷವನ್ನು ವ್ಯಕ್ತಪಡಿಸಿದಳು. ಭರತೇಶ್ವರನಾಗ ನವನಿಧಿಗಳಿಗೆ ಕಣ್ಣೊತ್ತಿ ತಂಗಿಯ ಸರ್ವಭವನಗಳಲ್ಲೂ ತೆರವಿಲ್ಲದಂತೆ ನವರತ್ನ ವಸ್ತ್ರಾದಿಗಳನ್ನು ತುಂಬಿಸಿದನು. ಅವಳ ಪರಿವಾರದ ದೇವಿಯರಿಗೂ ಮೈದುನನಿಗೂ ಮತ್ತೆ ಅವನ ಕೆಲಸದವರಿಗೂ ಉಡುಗೊರೆಯಿತ್ತನು. ಭರತೇಶನಂತೆ ಕೊಡುವವರು ಯಾರಿದ್ದಾರೆ?

''ಅಮ್ಮಾ, ನಮಗೆಲ್ಲರಿಗೆ ನೀನು ಒಸಗೆ ಮಾಡಿದೆ ; ಸನ್ಮಾನ ಮಾಡಿದೆ. ನಮ್ಮಲ್ಲಿ ಒಂದು ಒಸಗೆಯಾಗುವಾಗ ನಿಮ್ಮನ್ನೆಲ್ಲ ಕರೆಸಿಕೊಳ್ಳುವೆನು.'' ಎಂದು ಭರತೇಶನು ನುಡಿದನು. ಎಲ್ಲರೂ ಭರತೇಶನನ್ನು ಹೊಗಳಿದರು. ಆಗ ಭರತೇಶನ ಕಾಂತೆಯರೂ ಸರಸದ ರೂಢಿಯಂತೆ ಸಿಂಧುದೇವಿಗೆ ಮುತ್ತಿನ ಹಾರವನ್ನೂ ಮಾಣಿಕ್ಯದುಂಗುರವನ್ನೂ ಉಪಚಾರ ವಸ್ತುಗಳನ್ನೂ ಉಡುಗೊರೆಯಿತ್ತರು.

''ನಾನಿತ್ತಾಗ ನೀವು ಒಲ್ಲೆವೆಂದಿರಿ, ನಾನೀಗ ನಿಮಗೆ ಕೈ ನೀಡುವೆನೇ?'' ಎಂದು ಸಿಂಧುದೇವಿ ಹೋರಿದಳು. ಆದರವರು ಆಕೆಯನ್ನು ಬಿಡಲಿಲ್ಲ. ''ನಾವೇನು ಕೊಳ್ಳಲಿಲ್ಲವೇ, ಹಿಡಿ, ಹಿಡಿ.'' ಎಂದು ಕೊಟ್ಟೇಬಿಟ್ಟರು. ಅನಂತರ ಅವರು ಅನ್ಯೋನ್ಯ ಬಿಡಬಾರದೆಂದು ಅನ್ಯೋನ್ಯ ನೋಡಿ ಮಾತಾಡಿದರು. ಅನಂತರ ಅವರು ಬೀಳ್ಕೊಂಡರು.

ಪಾವನ ತೀರ್ಥದಲ್ಲಿ ಮಿಂದು ಪಾವನವಾಗಿ ಪಾಳೆಯವು ಗಂಗಾಕೂಟಕ್ಕೆಂದು ಎದ್ದಿತು.

## ೧೭

# ಅಂಕಮಾಲೆ

ಸಿಂಧುದೇವನನ್ನು ವಿನಯದಿಂದ ನಿಲ್ಲಿಸುತ್ತ ಭರತೇಶನು ತನ್ನ ಪಾಳೆಯದೊಂದಿಗೆ ಗಂಗಾಕೂಟದತ್ತ ಪ್ರಯಾಣ ಬೆಳೆಸಿದನು. ರಾಜ ಕಟಕವನ್ನು ಜಯಂತರಾಜನು ಮುನ್ನಡೆಸುತ್ತಿದ್ದನು. ಒಂದೆರಡು ಪಯಣಗಳಾದ ಮೇಲೆ ಪಾಳೆಯದೆಡೆಗೆ ಹಿಮವಂತದೇವನು ತನ್ನ ಮಂಡಿಯೊಂದಿಗೇ ಬಂದನು. ಹಿಮಶೈಲದ ಅಗ್ರದಲ್ಲಿ ಬಾಳುವಾತನು ಉತ್ತಮನೆಂದು ವಿಜಯಾರ್ಧದೇವನು, ಅವನು ಬಂದಾಗ ಕಾಣಿಸಿ ಕೊಂಡನು. ಇವರಿಬ್ಬರು ಭರತೇಶನನ್ನು ಒಂದೆರಡು ಬಿನ್ನಹದಲ್ಲಿ ಕಾಣಬಹುದೆಂದು ಮಂತ್ರಿ ಮಾಗಧರು ಸೂಚಿಸಿದರು.

ಹಿಮವಂತ ದೇವನಾದರೋ ಸ್ಥೂಲಕಾಯನು ಶ್ವೇತವರ್ಣನು. ರತ್ನ ಭೂಷಣಗಳಿಂದಲೂ, ಮಕುಟದ ಪ್ರಕಾಶದಿಂದಲೂ, ಹೊಳೆಯುವ ಅವನು ನಿವಾಳಿ ಕಾಣಿಕೆಗಳನ್ನು ಹೊರಿಸಿಕೊಂಡು ಬಂದನು. ಗಂಧಚಂದನ ಗೋಶೀರ್ಷಗಳೆಂಬ ಮಹಾ ಔಷಧಿಗಳನ್ನು ಹಿಂದೆಲ್ಲರಿತ್ತುದಕ್ಕೂ ಅಧಿಕವಾದ ಆಭರಣಗಳನ್ನು ತಂದು ಚಕ್ರೇಶ್ವರನಿಗೆ ಕಾಣಿಕೆಯಿತ್ತನು. ಭರತೇಶನ ಚೆಲುವನ್ನು ಆನಂದದಿಂದ ನೋಡುತ್ತ , ಭರತೇಶನನ್ನು ನೋಡಲು ಬಹು ದೃಷ್ಟಿಗಳನ್ನು ನೀಡೆಂದು ಅವನನ್ನೇ ಬೇಡಿಕೊಂಡನು. ಅಂತಹ ಚೆಲುವಿನ ದೊರೆ, ಭರತೇಶನು.

'ಏಳು, ಏಳು'' ಎಂದು ಚಕ್ರೇಶ್ವರನು ಆಸನ ತೋರಿದ ಬಳಿಕ ಆ ವಿನಯಶೀಲನು ಆಸೀನನಾದನು. ಬಳಿಯಲಿದ್ದ ವಿಜಯಾರ್ಧ ದೇವನನ್ನೂ ಭರತೇಶನು ಕುಳಿತುಕೊಳ್ಳಲು ಸೂಚಿಸಿದನು. ಇವರಿಬ್ಬರಿಗೂ ದೊರೆಯುವ ಮನ್ನಣೆಯನ್ನು ಪಾಲಿಸಿ ತೀರ್ಥಕೂಟಕ್ಕೆ ಹೋಗುವ ವೇಳೆಯಾಯಿತೆಂದು ಎಲ್ಲರೊಡನೆ ಭರತೇಶನೆದ್ದನು. ವಿಲಾಸದೋಲಗವಿಂತು ಹರಿಯಿತು.

ಭರತೇಶನು ಪಡುವಣೆಂದ ಮೂಡು ಮುಂತಾಗಿ ಗಂಗಾಕೂಟಕ್ಕೆ ನಡೆದನು. ಆಗ ಎಡದ ಭಾಗದ ಹಿಮಗಿರಿಯನ್ನು ಕಂಡು ಪ್ರೀತಿಯಿಂದ ಮಾಗಧನೊಡನೆ ಹೀಗೆಂದು ಹೇಳಿದನು :

''ಈ ಗಿರಿಯಲ್ಲೂ ವಿಜಯಾರ್ಧದಂತೆ ಒಂದು ಬಾಗಿಲಿದ್ದರೆ ಮುಂದೆ ಹೋಗುತ್ತಿದ್ದೆವು. ಎಲ್ಲವನ್ನು ನೋಡುತ್ತಿದ್ದೆವು, ಅಲ್ಲವೇ ಮಾಗಧ?''

''ಅಹುದು ನನ್ನೊಡೆಯ; ಹಿಮಾದ್ರಿಯಿಂದ ಆಚೆಯ ನೆಲದಲ್ಲಿರುವವರಿಗೆ ನಮ್ಮ ಆಶೆ ಹೆಚ್ಚು. ಗಿರಿಯಾಚೆ ಭೋಗ ಭೂಮಿಯಷ್ಟೇ. ಅಲ್ಲಿದ್ದ ಜನರು ಭೋಗಾಸಕ್ತರು.

ಸಮ್ಯಕ್ತ್ವವನ್ನು ಹೇಳಿದರೆ ಅವರು ತಾಳರು.ಅವರಲ್ಲಿ ವ್ರತವಿಲ್ಲ, ಅವರಿಗೆ ಶ್ರೇಷ್ಠರಾದ ವ್ರತಿಕರ ಸಂಗವಿಲ್ಲ. ವ್ಯಂತರರಿಗೂ ವ್ರತವಿಲ್ಲ, ಆದರೆ ನಮಗೆ ವ್ರತವಂತರ ಗೋಷ್ಠಿಯುಂಟು. ಆದ್ದರಿಂದಲೇ ನಿನ್ನ ನಿರೂಪ ಸಿದ್ಧಾಂತವನ್ನು ಕೇಳಿದೆವು. ಈ ನೆಲದಲ್ಲಿ ಧರ್ಮವಿಲ್ಲದ್ದಿರೂ ಮ್ಲೇಚ್ಛ ಮಾನವರು ಆರ್ಯಭೂಮಿಗೆ ಹೋಗಿ ಮಾನಿತವಾದ ವ್ರತಗಳನ್ನು ಕೈಕೊಳ್ಳುವರು. ಆದ್ದರಿಂದಲೇ ಪುಣ್ಯವಂತರು, ನಾವು ಸಮವಸರಣವನ್ನು ನೋಡುತ್ತೇವೆ. ಪೂಜೆ ಮಾಡುತ್ತೇವೆ. ಪ್ರೀತಿಯಿಂದ ಉತ್ತಮ ದಾನ ಮಾಡುತ್ತೇವೆ. ಹಿಮಗಿರಿಯಾಚೆಯವರಿಗೆ ಸಂಪತ್ತೊದಗುವುದೆ ಸ್ವಾಮಿ? ಚಿತ್ಪಜಕರಿಗೆ ಅನ್ನ ನೀಡಿದ ಫಲದಿಂದ ಆ ಭೂಮಿಯಲ್ಲಿ ಜನಿಸಿ ಆದರಿಂದುಂಟಾದ ಸುಖವನ್ನುಂಡು ಆಳಿದರು. ಆ ನಾಡಿನ ಅದ್ಭುತವನ್ನು ಏನೆಂದು ಹೇಳಲಿ? ಈ ಭವದಲ್ಲೇ ಮೋಕ್ಷಗಾಮಿಯಾದ ನಿನ್ನ ಸೇವೆಯು ಈ ಕ್ಷೇತ್ರದವರಿಗೆ ಅದೊಂದು ಪುಣ್ಯವೇ ಸರಿ. ಇನ್ನು ಆ ಕ್ಷೇತ್ರದವರಿಗೆ ಏನಾಗಬೇಕು? ಭೋಗಭೂಮಿಜರು ನಿನ್ನನ್ನು ಕಾಣುವ ಪುಣ್ಯವಿಲ್ಲದುದರಿಂದಲೇ ಹೇಮಾದ್ರಿಯ ತನ್ನೊಳಗಿಂದ ಬಾಗಿಲನ್ನು ಕೊಟ್ಟಿಲ್ಲ''....ಎಂದು ಮಾಗಧೇಂದ್ರನು ಉಬ್ಬಿ ಒಡೆಯನನ್ನು ಹೊಗಳಿದನು. ಅದನ್ನು ಕೇಳಿದ ವರತನು ಮುಂತಾದವರು ಸಂತೋಷಗೊಂಡರು. ಮಾಗಧೇಂದ್ರನು ಸ್ವಾಮಿಯ ಪರಮಾರ್ಥ ಗುಣಗಳನ್ನು ಕೊಂಡಾಡಿದನೆಂದು ಅವನನ್ನು ಹೊಗಳಿದರು. ಈ ರೀತಿಯಲ್ಲಿ ಅವರು ಮಾತನಾಡುತ್ತ ಗಂಗಾಕೂಟದ ಹತ್ತಿರ ಹತ್ತಿರ ಬರುತ್ತಿದ್ದರು.

ಆ ದಾರಿಯಲ್ಲಿ ಅಲ್ಲಲ್ಲಿ ತೋರಣ ಕಟ್ಟಿದರು. ಕರುಜನ್ನು ಸಿಂಗರಿಸಿದ್ದರು. ಭೂರಿಪಾತಕೆಗಳೂ ಗುಡಿಗಳೂ ಇದ್ದುವು. ಕೆಂಪು ಚಿಗುರುಗಳ ತೋರಣ, ಹಸುರು ಎಲೆಗಳ ತೋರಣ, ಬಂಗಾರದ ಹೂವಿನ ತೋರಣ, ಸೊಗಸಾದ ರತ್ನದ ತೋರಣ—ಮುತಾದ ತೋರಣಗಳೆಡೆಯಿಂದ ಭರತೇಶನು ಒಂದೆರಡು ಪಯಣವೆಸಗಿದನು. ಗಂಗಾನದಿಯಿನ್ನೂ ಗಾವುದವಲ್ಲಿದೆಯೆಂದಾಗ ಗಂಗಾದೇವನು ತನ್ನ ಸಂಗಸಂಪದವನ್ನೆಲ್ಲ ಕೂಡಿಸಿಕೊಂಡು ಬಂದು ಭಾವನಾದ ಭರತೇಶನನ್ನು ಇದಿರುಗೊಂಡನು. ಅವರು ಗಂಗಾ ನದಿಯೊತ್ತಿನಲ್ಲೇ ನಡೆದುಬಂದು ಅಲ್ಲೇ ಪಾಳೆಯಬಿಟ್ಟರು. ಗಂಗಾದೇವನು ಸೇತುಗಟ್ಟಿದ ಉಲುಪೆ ಹಿಡಿದು ಭಾವನ ಪಡೆಯನ್ನು ತಣಿಸಿದನು.

ಮೈದುನನು ಮಾಡಿದ ವಿನಯದಿಂದ ಆ ದಿನ ಹೋಯಿತು. ಮರುದಿನ ಸೋದರನನ್ನು ಕಾಣುವೆನೆಂದು ಗಂಗಾದೇವಿ ಬಂದಳು. ತನ್ನ ಆಬಲೆಯರನ್ನು ಕೂಡಿಕೊಂಡು ಬಂದಿರುವ ಅಣ್ಣನ ಬಳಿ ಸಾರಲು ಅವಳು ಅಂಜುತ್ತಿದ್ದಳು. ಅದನ್ನರಿತ ಭರತೇಶನು ತಾನೇ ಅವಳನ್ನು 'ಬಾ' ಎಂದು ಕರೆದುಕೊಂಡನು.

ಅಣ್ಣನೊಡನೆ ಗಂಗಾದೇವಿಯು ಆಮೇಲೆ ಸಲುಗೆಯಿಂದಲೇ ಮಾತನಾಡಿದಳು. ''ಅಣ್ಣಾಜಿ. ನೀನಿಲ್ಲಿದ್ದರೆ ಯಾರು ಮೆಚ್ಚುವರು? ನಾನೊಂದು ಚೆಲುವಾದ ಮನೆಯನ್ನು ಮಾಡಿಸಿದ್ದೇನೆ. ಅಲ್ಲಿಗೆ ಬಾ. ನೀನಿಲ್ಲಿಗೆ ಬರುವಿಯೆಂದು ಕೇಳಿ ನವೀನ ಗೃಹವನ್ನು ಮಾಡಿಸಿದೆನು. ನಿನಗದು ಗಣ್ಯವಲ್ಲ; ಆದರೂ ನನ್ನದೊಂದು ಸನ್ಮಾನವನ್ನು ಸಲ್ಲಿಸು. ತೀರ್ಥವಂದನೆಯನ್ನು ನಾಳೆ ಮಾಡು; ನಡೆದು ಬಂದ ದಾಸರೆಲ್ಲ ಇಂದಿಲ್ಲಿ ನಿಲ್ಲಲಿ.

ಒಡಹುಟ್ಟಿದವಳ ಈ ಮಾತನ್ನು ವ್ಯರ್ಥಮಾಡದೆ ಮನ್ನಿಸು. ನಾವು ಬಡವರು–ಸಿರಿಯಲ್ಲಿ, ಭರತೇಶನ ಒಡಹುಟ್ಟಿದವಳೆಂಬ ತೇಜಸ್ಸೇ ಭೂಮಿಯಲ್ಲಿ ನಮಗೆ ಅಧಿಕವಾಗಿದೆ. ಆದರಿಂದ ಏಳು.''

ಈ ರೀತಿಯಲ್ಲಿ ತಂಗಿಯು ಕ್ರಮ ತಪ್ಪದಂತೆ ಪ್ರೀತಿಯಿಂದ ಸೆರಗುಹಿಡಿದು ಕರೆದುದನ್ನು ಕಡೆಗಣಿಸುವನೇ, ಭರತೇಶನು? ಅದಕ್ಕೊಪ್ಪಿದನು.,

''ಅಕ್ಕ ಬರುವೆನು; ಸೆರಗನ್ನು ಬಿಡು. ನಿನ್ನ ಮನಸ್ಸಿನ ಪ್ರೀತಿಯನ್ನು ಕೆಡಿಸುವೆನೆ?'' ಎಂದು ನಕ್ಕು ನುಡಿದಾಗ ಆಕೆ ಸೆರಗನ್ನು ಬಿಟ್ಟಳು. ಭರತೇಶನು ಬೆಡಗಿನಿಂದ ಎದ್ದನು. ''ಬನ್ನಿರೇ ನೀವು, ನನ್ನ ಅಣ್ಣಾಜಿಯೊಡನೆ ಮನ್ನಿಸಿ'' ಎಂದು ಗಂಗಾದೇವಿಯು ಭರತೇಶನ ರಾಣಿಯರನ್ನು ಕರೆದಳು. ಅವರೆಲ್ಲರೂ ನಗುತ್ತಸುಪ್ರಸನ್ನಚಿತ್ತದಿಂದ ಎದ್ದರು. ಭರತೇಶನ ದಳವು ಇದ್ದಲ್ಲೇ ಇತ್ತು ಅವನು ಮಾತ್ರ ತನ್ನ ಸತಿಯರನ್ನು ಕೂಡಿಕೊಂಡು ಹತ್ತಿರವಿದ್ದ ಹೊಸ ರಾಜಗೃಹಕ್ಕೆ ಹೊರಟನು. ''ತುಂಗ ಭೂಪನನ್ನು'' ನಾನು ಕರೆಯಲು ಅಂಜಿದೆನು. ಈಗ ಇವನು ತಂಗಿಯೊಡನೆ ಹೋಗುತ್ತಿರುವನು. ಗಂಗೆಯ ಭಾಗ್ಯವೆ.'' ಎಂದು ಗಂಗಾದೇವನು ಸಂತೋಷಗೊಂಡನು.

ರಾಜೀವ ವನಕ್ಕೆ ಹೆಣ್ಣು ಹಂಸಗಳೊಡನೆ ರಾಜಹಂಸವು ಹೋಗುವಂತೆ ಆಕೆ ಚೆಲುವಿನ ಕಾಂತಾಜನ ಕೂಡಿದ ಚಕ್ರಿಯನ್ನು ರಾಜಗೃಹಕ್ಕೆ ಹೊಗಿಸಿದಳು.

ಒಳಗಿನ ಕೋಟೆ, ಹೊರಗಿನ ಕೋಟೆ; ಬೀಡು ಮಾಡ, ಚಾವಡಿ, ಎಲ್ಲೆಲ್ಲೂ ಬಣ್ಣದ ಕೆಲಸದ ಬಾಗಿಲುಗಳು; ಲಲಿತವಾದ ಭೋಜನ ಶಾಲೆ; ಚೆಲುವಾದ ಚಂದ್ರಶಾಲೆಗಳ ಒಳಹೊಕ್ಕು ನೋಡಿ ನೋಡಿ ಚಕ್ರಿಯು ಮೆಚ್ಚಿದನು. ತುಂಬಿ ಮೊರೆವಂತಹ ಪರಿಮಳದ ಸಾರಣೆಗಳ ಚೆಲುವಿನ ಬೊಂಬೆಗಳು, ಶೋಭಿಸುವ ಗೋಡೆಗಳು, ಕೆಂಪು ಹರಳು ಮತ್ತು ಪಚ್ಚೆ ಹವಳಗಳು, ತುಂಬಿರುವ ಲಂಬಣಗಳ ಸೌಂದರ್ಯವನ್ನು ತನ್ನ ಸುಂದರಿಯರೊಡನೆ ಭರತೇಶನು ನೋಡಿದನು. ಅಲ್ಲಿ ಹಲವು ಶಯ್ಯಾಗೃಹಗಳು. ಅವುಗಳಲ್ಲಿ ಮಣಿಮಂಚ, ಹೂ ಮಂಚ, ಸೆಳೆಮಂಚ, ತೂಗು ಮಂಚಗಳು ಸೊಗಸಾಗಿದ್ದವು. ಅಲ್ಲಿ ತಳಿರುಯ್ಯಾಲೆಯಲ್ಲಿದ್ದು ಸೇವೆಗೆ ಸಿದ್ಧವಾದ ಪುತ್ಥಳಿಗಳನ್ನು ದಿಟ್ಟಿಸಿ ನೋಡಿ ಅವನು ತಲೆಯಲ್ಲಾಡಿಸಿದನು. ಇನ್ನೊಂದೆಡೆಯಲ್ಲಿ ದಿವ್ಯಾನ್ನ ಪಾನಕ್ಕೆ ತಕ್ಕ ಸುವಸ್ತುಗಳ ಅವ್ಯಯವಾದ ಹೇಮಭಾಂಡಿಗಳೂ, ನವ್ಯವಾದ ಕರ್ಪೂರ ತಾಂಬೂಲ ವಿಲೇಪನ ದ್ರವ್ಯಗಳೂ ತುಂಬಿರುವುದನ್ನು ವೀಕ್ಷಿಸಿದನು ಚಕ್ರಿ. ಮಂಗಲಮಯವಾದ ಆ ಗೇಹವನ್ನು ಕಂಡು ರಾಯನು ತನ್ನಂಗನೆಯರ ಮೊಗವನ್ನು ನೋಡಿದನು.

''ಭೃಂಗನೇತ್ರೆಯರೇ, ಕಂಡಿರಾ ನನ್ನ ತಂಗಿ ಮಾಡುತ್ತಿರುವ ಒಸಗೆಯನ್ನು'' ಎಂದು ಭರತೇಶನು ಮೆಚ್ಚಿ ನುಡಿದನು.

''ನಿಮ್ಮ ತಂಗಿಯೇನನ್ನೂ ಮಾಡಿಲ್ಲ, ಇಷ್ಟೆಲ್ಲವೂ ನಮ್ಮ ಸೋದರನ ತಿಟ್ಟಗಳು. ಹಮ್ಮನ್ನಾಡದಿರಿ; ಸಾಕು'' ಎಂದು ಆ ರಾಣಿಯರು ನುಡಿದು ತಮ್ಮಲ್ಲೇ ಒಂದಿಷ್ಟು ಪ್ರೀತಿಯನ್ನು ತೋರಿಸಿದರು.

''ಕಂಡೆಯಾ ತಂಗಿ, ಈ ಹೆಂಗಳ ಆಟವನ್ನು?''

''ಕಂಡೆ ಅಣ್ಣಾಜಿ. ಹೆಣ್ಣುಗಳು ಮಂಡಿಸಿ ತವರೂರನ್ನೇ ಹೊಗಳುವರು'' ಎಂದು ಮಂಡಳೇಶ್ವರನ ತಂಗಿ ನುಡಿದಳು.

ಆ ಮೇಲೆ ಮಜ್ಜನ ಭೋಜನಗಳಾದುವು. ಭರತೇಶನು ಆ ಇರುಳು ಸೆಜ್ಜೆವನೆಯಲ್ಲಿ ವಿಶ್ರಮಿಸಿದನು. ಆ ಸಜ್ಜನಾನಂದನು ಮರುದಿನ ತೀರ್ಥದ ಕೆಲಸಗಳಿಗೆ ಇಚ್ಛೆ ಮಾಡಿದನು.

ಸಿಂಧು ನದಿಯು ಬೆಟ್ಟದಿಂದ ಭೂಮಿಗೆ ಬೀಳುವಂತೆ ಜಿನೇಶಬಿಂಬದ ಜಡೆಯಮೇಲೆ ಬೀಳುವ ಗಂಗಾವಾರಿಯನ್ನು ಭರತೇಶನು ನಿಟ್ಟಿಸಿ ನೋಡಿದನು. ಅರುಹನ ಪ್ರತಿಮೆಯೆಂಬ ಅಮಳಚಂದ್ರನನ್ನು ಕಂಡು ಹಿಮಾದ್ರಿಯೆಂಬ ಸುರುಚಿರ ಶಶಿಕಾಂತವು ಕರಗಿ ಸೋರುತ್ತಿರುವುದೋ ಎನ್ನುವಂತೆ ಪುಣ್ಯಗಂಗೆಯು ಬರುತಿತ್ತು, ಅಲ್ಲಿ ಮಿಂದವರ ಪಾಪಗಳನ್ನು ತನ್ನ ಆರ್ಭಟೆಯಿಂದಲೇ ಓಡಿಸುವಂತೆ ಭೋರ್ ಭೋರೆಂದು ಆ ತೀರ್ಥವು ಇಳಿಯುತಿತ್ತು, ಮಾನಸ ಸರೋವರದ ಹಂಸಗಳಂತೆ ಪ್ರಧಾನನೊಂದಿಗೆ ಬ್ರಾಹ್ಮಣರು ಆ ನದಿಯಲ್ಲಿ ಮಿಂದು ಜಿನನನ್ನು ಕೀರ್ತಿಸುವ ಆನಂದಕ್ಕೆ ಅರಸನು ಅಮೋದಗೊಂಡನು. ವಿಪ್ರರು ಹೋದ ಬಳಿಕ ತಾನು ಪತ್ನಿಯರೊಂದಿಗೆ ಹೋದನು. ಚಕ್ರವರ್ತಿಯು ಪ್ರಸನ್ನನಾಗಿ ಆ ತನ್ನ ಸುಪ್ರಿಯೆಯರಿಗೆಲ್ಲ ತೀರ್ಥಪ್ರಸಿದ್ಧಿಯನ್ನು ತೋರಿಸಿದನು. ಜಿನನನ್ನು ಕೊಂಡಾಡಿ, ತೀರ್ಥವನ್ನು ಮಿಂದು ಬ್ರಾಹ್ಮಣರೊಂದಿಗೆ ಜನರಿಗೆಲ್ಲ ದಾನವಿತ್ತನು.

ಭರತೇಶನು ಆ ದಿನವೂ ಅರಮನೆಯೊಳಗಿದ್ದು ಶ್ರೀ ಗುರು ಹಂಸನಾಥನನ್ನು ಭಜಿಸಿ, ಹಿರಿದು ಕರ್ಮಗಳನ್ನು ನಿರ್ಜರೆಮಾಡಿ, ಮರುದಿನ ತೆರಳಲು ಯೋಚಿಸಿದನು.

''ತಂಗಿ ಬಾ. ನಾನು ಈ ರೀತಿಯಲ್ಲಿ ದಂಡುಮಾಡಿದ ನೋವು ಹಿಂಗಿದುದೆ? ಅಕ್ಕ. ಗಂಗಮ್ಮ ನೀನು ಲೇಸನ್ನೇ ಮಾಡಿದೆ.'' ಎಂದು ಅಣ್ಣನು ಮೃದು ವಚನಗಳಿಂದ ತಂಗಿಯನ್ನು ಮನ್ನಿಸಿದನು. ''ಇಬ್ಬರು ತಂಗಿಯರು ನನಗಿದ್ದಾರೆ. ಅವರಿಬ್ಬರೂ ತಪಸ್ಸು ತಾಳಿದರು. ಆ ನೋವನ್ನು ನೀನೂ ಸಿಂಧೂದೇವಿಯೂ ಜಾರಿಸಿದಿರಿ. ಸೌಂದರಾದೇವಿಯು ನಿನ್ನಂತೆಯೇ. ಬ್ರಾಹ್ಮಿಲಾದೇವಿಯು ಸಿಂಧು ದೇವಿಯಂತೆ. ಅವರಿಬ್ಬರೂ ಕೈಲಾಸದಲ್ಲಿದ್ದಾರೆ. ನಿಮ್ಮನ್ನು ಒಸಗೆಯೊಂದಿಗೆ ಕರೆಸಿಕೊಳ್ಳುವೆನು.''

''ಸರಿಯಾರು ನಮಗಿನ್ನು? ಜಿನನ ಕುಮಾರಿಯರು, ಭರತೇಶನ ತಂಗಿಯರು ಎಂಬ ಸಂಪತ್ತು ನಮಗಾಯಿತು.'' ಎಂದಾಕೆ ರೋಮಾಂಚದ ಮೈಯಲ್ಲಿ ಅಣ್ಣನೊಡನೆ ಹೇಳಿದಳು.

ಆಮೇಲೆ ಭರತೇಶನು ಚಿಂತಾಮಣಿಗೆ ಆಜ್ಞೆಯಿತ್ತು ಹೊಸಮನೆ ತುಂಬುವಂತೆ, ಭೂಷಣ ವಸ್ತ್ರಗಳನ್ನು ಸಂತೋಷದಿಂದ ತುಂಬಿಸಿದನು. ಮತ್ತೆ ಸೇವೆಯ ಹೆಂಗಸರಿಗೂ ಮನ್ನಣೆ ಮಾಡಿದನು. ಗಂಗಾದೇವಿಗೂ ಪರಿವಾರದವರಿಗೂ ಉಡುಗೊರೆಯಿತ್ತು ಮನ್ನಿಸಿದನು. ಅರಸಿಯರೂ ಒಂದೊಂದು ಉಡುಗೊರೆಯಿತ್ತರು. ಗಂಗಾದೇವಿಯೂ ಅರಸಿಯರಿಗೆ ಉಡುಗೊರೆಯಿತ್ತಳು. ಹೀಗೆ ಅವರು ಸರಸದಿಂದ ಮಾತನಾಡಿ ಒಬ್ಬರನ್ನೊಬ್ಬರು ಬೀಳ್ಕೊಂಡರು.

ಗಂಗಾದೇವನನ್ನು ವಿನಯದಿಂದ ನಿಲ್ಲಿಸಿ, ಜಿನನಿಗೆ ಕೈಮುಗಿದು ಭರತ ರಾಜೇಂದ್ರನು ಆನೆಯನ್ನೇರಿದನು. ಆಗ ಕಹಳೆ, ಕೊಂಬು, ನಿಸ್ಸಾಳ, ಭೇರಿಗಳು ಮೊಳಗಿದುವು. ಆ

ಸಮಯದಲ್ಲೇ ಬಂದ ಇಬ್ಬರು, ಮೂಡಣ ಪಡುವಣ ಖಂಡಗಳು ವಶವಾದುವೆಂಬ ಒಸಗೆಯ ಓಲೆಯನ್ನು ಭರತೇಶಗೊಪ್ಪಿಸಿದರು. ಆ ನಾಡಿನ ಅರಸುಗಳು ನಮ್ಮವರೊಡನೆ ಬರುತ್ತಿರುವರೆಂದು ಅವರು ಬಿನ್ನವಿಸಿದರು. ಅಲ್ಲಿಗೆ ಉತ್ತರ, ಪೂರ್ವ, ಪಶ್ಚಿಮ ಖಂಡಗಳಿಗೆ ದಂಡೆತ್ತುವ ಕಾರ್ಯಮುಗಿದು ಭರತೇಶನು ಮಧ್ಯಮ ಖಂಡದಲ್ಲಿ ದಕ್ಷಿಣಕ್ಕೆ ತಿರುಗಿದನು.

ನಡುವಣ ಖಂಡದ ನಟ್ಟನಡುವೆ ಕಾಳದ ಎಡೆಯಲ್ಲಿ ಮೇಟಿಯಿರುವಂತೆ ನಿಡಿದಾದ ವೃಷಭಾದ್ರಿಯಿರುವುದಿಲ್ಲಿ. ಅಲ್ಲಿಗೆ ಭರತೇಶನು ಉಬ್ಬಿನಲ್ಲಿ ಬರುತ್ತಿದ್ದನು. ಭೂಮಿಯನ್ನೆಲ್ಲವೂ ತನ್ನ ವಶವಾಗಲು ಕೊಬ್ಬಿದ ವಿಜಯಪರ್ವತವನ್ನೇರಿ ಆ ಗರ್ವಿತಾರಾಶಿದಲ್ಲಣನು ಬಂದನು. ನೀಲಗಿರಿಯನ್ನು ಸುವರ್ಣಾದ್ರಿಯೇರಿಬರುವಂತೆ ಆನೆಯನ್ನೇರಿ ಬರುವ ಭರತೇಶನನ್ನು ಸುರಪತಿಯೋ ಕಾಂತಿ ಪಸರಿಸುವ ನರಪತಿಯೋ ಎಂದು ಪಡೆಯು ಬೆರಗಾಗಿ ನೋಡುತಿತ್ತು.

ಭರತೇಶನೇರಿದ ಆ ಗಜವು ತೊಡೆಸನ್ನೆಯಿಂದ ಭರತೇಶನು ಸೂಚಿಸಿದಂತೆ ಸಾಗುತ್ತಿತ್ತು, ಅವನು ಒತ್ತಿದಂತೆ ಆ ಗಜವು ಒದಗುತ್ತಿತ್ತು. ಹೂಂಕಾರರಿಂದ ಕೂರಂಕುಶವನ್ನು ಕುಂಭಕ್ಕಿಟ್ಟು ಒತ್ತುವನು, ಅದು ಒಮ್ಮೆ ಮೆಲ್ಲಗೆ ನಡೆವುದು. ಒಮ್ಮೆ ಗಂಭೀರವಾಗಿ ನಡೆವುದು, ಹೂದೋಟದಲ್ಲಿ ಗಾಳಿಸುಳಿದಂತೆ ಅದು ಗುಡ್ಡಗಳನ್ನೂ ಗಿರಿಗಳನ್ನೂ ದಾಟುವುದು. ಮಿಂಚನ್ನು ಕೈಹಿಡಿದು ಕಾರ್ಮುಗಿಲನ್ನೇರಿ ಖಚರ ಬರುವಂತೆ ರಾಜೇಂದ್ರನು ಅಪರಂಜಿ ಅಂಕುಶದಿಂದ ಎಡಬಲಕ್ಕೆ ಸನ್ನೆ ಮಾಡುತ್ತ ನಡೆದು ಬಂದನು.

ಭರತೇಶನು ಆನೆಯನ್ನೇರಿ, ಕುದುರೆಯನ್ನೇರಿ, ಶಿಬಿಕೆಯ ವಿಮಾನ ರಥಗಳನ್ನೇರಿ ಹಲವು ಪಯಣಗಳಲ್ಲಿ ಭರತೇಶನು ವೃಷಭಾದ್ರಿಗೆ ಬಂದನು.

ವೃಷಭಾದ್ರಿಯು ನೂರು ಗಾವುದ ಉದ್ದ, ನೂರು ಗಾವುದ ಅಂಗಲವಾಗಿ, ನೋಡಲು ಪಗಡೆಯ ಕಾಯಂತೆ ತೋರುತ್ತಿತ್ತು, ಕಾಲ ಕಾಲದಲ್ಲಾದ ಚಕ್ರವರ್ತಿಗಳು ಅಲ್ಲಿ ತಮ್ಮ ಅಂಕಮಾಲೆಯನ್ನು ಬರೆಸುವರು. ಆ ಶೈಲವೆಲ್ಲವೂ ಇಂತಹ ಲಿಪಿಗಳಿಂದ ತುಂಬಿರುವುದನ್ನು ನೋಡಿ ಭರತರಾಜೇಂದ್ರನ ಗರ್ವವೆಲ್ಲ ಸೋರಿಹೋಯಿತು.

''ಎಷ್ಟು ಮಂದಿ ಆಳಿದರೊ. ಈ ಗಿರಿಯಲ್ಲಿ ಬರೆಯದ ಸ್ಥಳ ಬೆರಳಿಡುವಷ್ಟೂ ಇಲ್ಲ. ಚಿನ ಚಿನ ! ಭೂಮಿಯೆಲ್ಲ ತನ್ನದೆಂದು ಉಬ್ಬುವ ಮನುಷ್ಯನು ಮರುಳನೇ ಸರಿ.'' ಎಂದು ಭರತೇಶನು ತನ್ನೊಳಗೇ ಯೋಚನಾಪರನಾದನು. ಆಗ ವಿದೂಷಕನು ತನ್ನ ತಿಳಿವಿನ ಹೋಲಿಕೆಗಳನ್ನಿತ್ತು ಆ ಗಿರಿಯೆಂದರೆ ಹಲವರೊಂದಿಗೆ ಬಾಳಿದ ಗಣಿಕೆಯೆಂದು ತಿಳಿಸಿ ರಾಜೇಂದ್ರನನ್ನು ನಗಿಸಲು ಯತ್ನಿಸಿದನು. ವಿಟನು ಇನ್ನೊಂದೇ ಮಾತನ್ನು ಹೇಳಿದನು. ಈ ಧರೆಯೆಂಬ ವೇಶ್ಯೆಗೆ ಈ ಗಿರಿಯೊಂದು ದೂತಿಯೆಂದಾಡಿದನು.

ತನ್ನ ಅಂಕಮಾಲೆಯನ್ನು ಬರೆಯಲು ಸ್ಥಳವಿಲ್ಲದಿರುವುದನ್ನು ನೋಡಿದ ಭರತೇಶನು ಅಲ್ಲಿ ಬರೆದೊಂದು ಶಾಸನವನ್ನು ಒರೆಸುವಂತೆ ತನ್ನ ಕಿಂಕರನಿಗೆ ಹೇಳಿದನು. ಆತ್ಮತತ್ತ್ವವನ್ನು ಮುಟ್ಟಿ ಬರೆದ ಲಿಪಿಗಳನ್ನವರು ಮುಟ್ಟಲಿಲ್ಲ. ಆತ್ಮತತ್ತ್ವಕ್ಕೆ ಹೊರಗಾದ ಲಿಪಿಗಳನ್ನವರು ಒರೆಸಿದರು. ಆಗ ಅಲ್ಲಿದ್ದ ಶಾಸನದೈವಗಳು ಪ್ರತಿಭಟಿಸಿದುವು. ಹಿಂದಣ ಚಕ್ರಿಗಳ ಹೆಸರುಗಳನ್ನು ಅಳಿಸಬಾರದೆಂದು ಎದುರಾದುವು. ಕೂಡಲೇ ಭರತೇಶನು

ಮಾಗಧಾದಿಗಳಿಂದ ಆ ಭೂತಗಳಿಗೆ ಹೊಡೆಯಿಸಿದನು. ಆಗ ಅವರ ಹೆಂಡಿರು ಬಂದು ಕ್ಷಮೆ ಕೇಳಲು ಭರತೇಶನು ಅವರನ್ನು ಬಿಡುಗಡೆ ಮಾಡಿದನು.

ಅನಂತರ ಭರತೇಶನು ಹಂಸತತ್ವವನ್ನೊಳಗೊಂಡ ಜೈನಶಾಸನವನ್ನು ಬರೆಯಿಸಿದನು. ವಜ್ರಶಾಸನನೆಂಬ ಜಾಣನಾದ ಕರಣಿಕನು ಅದನ್ನು ಬರೆದನು.

> ಸ್ವಸ್ತಿ ಶ್ರೀಮನ್ಮಹಾ ತ್ರೈಲೋಕ್ಯರಾಜೇಂದ್ರ ಮಸ್ತಕಮಣಿಗಣ ಕಿರಣ ಪ್ರಸ್ತಾರಿತಾಂಘ್ರಿಪಯೋಜನ ಪೂತಿಕರ್ಮಸ್ತೋಮ ಮಥನ ವಿಕ್ರಮನ ತ್ರಿಜಗದಂತರ್ಬಹಿರವಗಮೇಕ್ಷಣನ ತತ್ರಿಜಗದದ್ಭುತ ಶಕ್ತಿಯುತನ ಅಜರನನಂತ ಸೌಖ್ಯನ ವೃಷಭೇಶನ ನಿಜಕುಮಾರನು ನಿರಾಮಯನು ಹಂಸೋಪಮಾನ ಸಾರಗ್ರಾಹಿ ಶ್ರೀಗುರು ಹಂಸನಾಥೇಕ್ಷಣೋತ್ಸಾಹಿ ಸಂಸೇವ್ಯ ಸನ್ಮೋಹಿ ತದ್ಭವಕರ್ಮ ವಿಧ್ವಂಸಿ ಸುಜ್ಞಾನಾವಗಾಹಿ ಶೃಂಗಾರಯೋಗಿ ಶುದ್ಧಾತ್ಮಾನುರಾಗಿ ರಾಜ್ಯಾಂಗನಾಗಿಯು ಸಂಗತ್ಯಾಗಿ ಅಂಗಜಾಜನ ವನಮಧುಮಾಸ ದಿವ್ಯಮುಕ್ತ್ಯಂಗನಾ ಚಿತ್ತವಿಲಾಸ ಹುಂಡಾವಸರ್ಪಿಣಿ ಕಾಲದಾದಿಯೊಳು ಷಟ್ಖಂಡವ ಭರತಚಕ್ರೇಶಾ ಚಂಡನಾಳ್ದನು ಸುಮಂಗಲ ಮಹಾ ಶ್ರೀ ಶ್ರೀ ಮಂಡನವಸ್ತು ಹಿ ಸ್ವಾಹಾ.

ಮಣಿಮಾಲೆಯಂತಹ ಅಕ್ಷರಗಳನ್ನು ಕಾಕಿಣಿಯಿಂದ ಬರೆದಾದ ಮೇಲೆ ಚಕ್ರೇಶ್ವರನು ಗಣಕನಿಗೆ ಉಚಿತವಾದ ಉಡುಗೊರೆಗಳನ್ನಿತ್ತನು. ಅನಂತರ ಅಲ್ಲಿಯೇ ಪಾಳೆಯಬಿಟ್ಟನು. ಆಮೇಲೆ ಎಲ್ಲರನ್ನೂ ಲಾಲಿಸಿ, ಬೀಡುಗಳಿಗೆ ಬೀಳ್ಕೊಟ್ಟನು. ಅಷ್ಟು ಹೊತ್ತಿಗೆ ಬಾಲರ ಫೌಜು ಅಲ್ಲಿಗೆ ಬಂದು ಸೇರಿತು. ಭರತೇಶನು ಸಜ್ಜಾದ ಅರಮನೆಯನ್ನು ಸೇರಿದನು.

# ೧೮

# ಮಂಗಲಯಾನ

ಷಟ್ಖಂಡ ವಿಜಯಿಯಾದ ಭರತೇಶನು ತನ್ನ ವಿಜಯ ಪ್ರಶಸ್ತಿಯನ್ನು ಬರೆಯಿಸಿ, ಅಲ್ಲಿಯೇ ಎಂಟು ದಿನಗಳವರೆಗೆ ತಂಗಿದನು. ವಿಜಯಾರ್ಧದ ಪಿತ್ತಿನಲ್ಲಿ ಸೇನೆಯನ್ನು ನಿಲ್ಲಿಸಿ, ವಿಜಯರಾಜನು ಬಂದು ಭರತೇಶನನ್ನು ಕಂಡನು.

''ವಿಜಯಾಂಕ, ನೀನೇಕೆ ಬಂದೆ? ನಮ್ಮ ಪಡೆಯನ್ನು ಎಲ್ಲಿ ಬಿಟ್ಟಿರುವೆ? ಅದಕ್ಕೆ ಯಾರು ಕರ್ತರಾಗಿದ್ದಾರೆ?'' ಎಂದು ಭರತೇಶನೇ ಕೇಳಿದನು.

''ಪಡುವಣ ಖಂಡಕ್ಕೂ ಮೂಡಣ ಖಂಡಕ್ಕೂ, ಹೋಗಿದ್ದ ಪಡೆಗಳೀಗ ಒಂದೆಡೆಯಲ್ಲಿ ಕೂಡಿರುವುವು. ಖಂಡ ಪ್ರತಾಪ ಗುಹೆಯ ಪ್ರವಾಹದ ಮಧ್ಯ ಖಂಡದಲ್ಲಿ, ಗಂಗೆಯ ಪಿತ್ತಿನಲ್ಲಿ ನಮ್ಮ ದಂಡುಗಳೆರಡೂ ಒಂದಾಗಿ ಮೇಘೇಶ್ವರನನ್ನು ಕೂಡಿಕೊಂಡಿರುವುವು.'' ಎಂದು ಜಯರಾಜನು ತಿಳಿಸಿದನು.

''ನಾವು ಮುಂದೆ ಹೋಗುವ ಹಾದಿಯನ್ನು ತಿಳಿದು, ಅಲ್ಲಿ ಸೇನೆಯನ್ನು ತಂದಿರಿಸಿದಿರಾ? ಅದು ಅಂದವಾಯಿತು. ಸಾಕು, ಈಗ ನೀನಿಲ್ಲಿಗೇಕೆ ಬಂದೆ?''

''ಪೂರ್ವಖಂಡದ, ಪಶ್ಚಿಮ ಖಂಡದ ಅರಸರಲ್ಲಿ ಕೆಲವರು ಭರತೇಶನಿಗಾಗಿ ಅಪೂರ್ವ ವಸ್ತುಗಳನ್ನು ಅಲ್ಲಿಗೆ ತಂದರು. ಕೆಲವರು ಹೆಣ್ಮಗಳನ್ನು ತಂದಿರುವರು. ಪಡುವಣ ಖಂಡದ ಅಧಿರಾಜನಾದ ಕಲಿರಾಜನು, ಮೂಡಣ ಭೂಮಿಯ ಒಡೆಯನಾದ ಕಾಮರಾಜನು, ತಮ್ಮ ಚೆಲುವಿನ ಪುತ್ರಿಯರನ್ನೂ ತಂದಿರುವರು. ಅವರನ್ನು ಅನುಸರಿಸಿ, ಮಧ್ಯಖಂಡ ರಾಜರೆಲ್ಲರೂ ಮಾಧವ, ಚಿಲಾತರನ್ನು ಮುಂದಿಟ್ಟುಕೊಂಡು ಯುವತಿಯರನ್ನೂ ಆನೆ ಕುದುರೆಗಳನ್ನೂ, ತಂದಿರುವರು. ನಿನ್ನನ್ನು ಕಾಣಬೇಕೆಂದು ಕಾದಿರುವರು. ಇನ್ನೊಂದು ಮಾಡಿದೆ. ಸುಮತಿ ಸಾಗರನು, ಉತ್ತರ ಶ್ರೇಣಿಯಲ್ಲಿ ಹುಟ್ಟಿದ ಖೇಚರಪತಿಗಳನ್ನು ಕರೆದುಕೊಂಡು ಬಂದು ಅಣ್ಣನೊಡನೆ ಅವರನ್ನು ಬಿಟ್ಟು ಹೋಗಿರುವನು. ಒಂದೊಂದು ಖಂಡದಿಂದ ನಾನ್ನೂರು ಹೆಣ್ಣುಗಳು ಬಂದಿದ್ದರು. ಖೇಚರರು ಎಂಟನೂರು ಹೆಣ್ಣುಗಳ ತಂದಿದ್ದರು. ಇವರೆಲ್ಲ ಕೂಡಿದರೆ ಎರಡು ಸಾವಿರ, ಇದೇನೂ ಚೋದ್ಯವಲ್ಲ. ನಿನ್ನ ಮದುವೆಗೆ ಹೆಣ್ಣುಗಳನ್ನು ತರಲು ಚಾರಣರೆ ನಮ್ಮ ಪಾಳಯಕ್ಕೆ ಇಳಿದು ಬರುವುದು ಚೋದ್ಯವಾಗಿದೆ. ಇದರಿಂದ ನಮ್ಮ ಭರತೇಶನ ಪುಣ್ಯಕ್ಕೆ ಎಣೆ ಇಲ್ಲದಾಗಿದೆ. ನಮಗೆಲ್ಲ ಸಂತೋಷವಾಗಿದೆ. ಆ ಹೆಣ್ಣುಗಳೆಲ್ಲರೂ ವ್ರತ ಮಾಡಿಕೊಂಡಿರುವರು. ಅದನ್ನು ಸೂಚಿಸಲು ಬಂದೆನು.''

ಸತಿಯರ ಸುದ್ದಿಯದು ವಿಶೇಷವಲ್ಲ. ನೀವು ಅಣ್ಣತಮ್ಮಂದಿರು ಬಹಳ ಸಾಹಸ ಪಟ್ಟಿರುವಿರಿ. ಅದನ್ನೆಲ್ಲ ಬಲ್ಲೆನು. ಬಳಲಿದ್ದಿಯಲ್ಲ, ಮುಂದೆ ನಡೆ. ಗುಹೆಯ ಕವಾಟವನ್ನು ಒಡೆಯುವಾಗ ಬರುವ ಬೆಂಕಿಯು ಕೆಟ್ಟುಹೋಗುವವರೆಗೆ ಬಹಳ ಕೆಲಸ ಮಾಡುವುದಕ್ಕಿದೆ. ಅದಕ್ಕಾಗಿ ನೀವು ಅಗಳಿನ ಕೆಲಸವನ್ನು ಮಾಡಿರಿ. ನಾವು ಮೆಲ್ಲ ಮೆಲ್ಲನೆ ಹಿಂದಿನಿಂದ ಬರುತ್ತೇವೆ'' ಎಂದು ಭರತೇಶನು ಅವನಿಗೆ ಉಡುಗೊರೆಯಿತ್ತು ಸನ್ಮಾನಿಸಿ ಕಳುಹಿಸಿದನು. ಜೊತೆಯಲ್ಲಿ ನಾಟ್ಯಮಾಲನನ್ನೂ ಕಳುಹಿಸಿದನು.

ಅಷ್ಟರಲ್ಲಿ ಭೇರಿ ಮೊಳಗಿತು. ಭರತೇಶನು ಹಿಂದೆ ಬಿಟ್ಟ ಬೀಡಿಗೆ ಮುಂದೆ ನಡೆದನು. ತಡಮಾಡದೆ ಅಲ್ಲಲ್ಲಿ ಬೀಡುಬಿಡುತ್ತ ಹಲವು ಪಯಣದಲ್ಲಿ ಬಂದು ಮೊದಲೇ ತಂಗಿರುವ ಸೇನೆಯ ಸಮೀಪದಲ್ಲಿ ಆನೆಯನ್ನೇರಿ ವಿಡಾಯದಿಂದ ಮುಂದುವರಿದನು. ತನ್ನನ್ನು ಇದಿರುಗೊಳ್ಳಲು ಬಂದಿದ್ದ ಮೇಘೇಶ್ವರನೊಂದಿಗೆ ಇಂಪಿನ ಮಾತುಗಳನ್ನಾಡಿ, ಅರಮನೆಯತ್ತ ನಡೆದನು. ಆಗ ಮದುವೆಯ ಹೆಣ್ಣುಗಳು ಮಾಳಿಗೆಯನ್ನೇರಿ ಚಕ್ರೇಶ್ವರನ ಸೊಬಗನ್ನು ನೋಡಿದರು. ಹೊರಗೆ ತಪ್ಪು ತೂಪು–ತೋರದೆ ನೀರೆಯರು ಒಂದೊಂದು ಮರೆಯಲ್ಲಿ ನಿಂತುಕೊಂಡು ಮಿರುಗುತ್ತಿರುವ ಆ ಚೆಲುವಿನ ಅರಸನನ್ನು ನೋಡಿ ಬೆರಗಾದರು.

ಈತನೇ ಚಕ್ರೇಶನೆಂದವರು ಎದೆಯಲ್ಲಿ ಆಡುವರು. ಆದರೆ ಮಾತಿನಲ್ಲಿ ಹೇಳಲು ನಾಚುವರು. ಅವನನ್ನು ಕಂಡಾಗ ಕಾತರವು ಅವರನ್ನು ಕವಿವುದು. ರೋಮವು ನೆಗೆದು ಮೈಬಾತು ಕಂಪಿಸುವುದು. ತಮ್ಮನ್ನು ಸೋಲಿಸಿದ ಅರಸನನ್ನು ನೋಡುವಾಗ, ಬೀಸುವ ಚಾಮರಗಳು ಕಣ್ಣಾಲಿಗೆ ಅಡ್ಡಬಂದವೆಂದು ಎದೆಯಲ್ಲೇ ಕೋಪಗೊಳ್ಳುವರಲ್ಲದೆ ಅನ್ಯರಿಗೆ ತಿಳಿಸಲು ಅಂಜುವರು. ಬೇರೆಯವರಿಲ್ಲದಿರುವ ಒಂದೆಡೆಯಲ್ಲಿದ್ದ ಇಬ್ಬರು, ''ಇಷ್ಟು ದೊಡ್ಡ ಆನೆಯನ್ನೇರಿ ಬರುವಾಗ ಛತ್ರವೊಂದಿದ್ದರೆ ಸಾಕು; ನರೆತ ತಲೆಯಂತಿರುವ ಚಾಮರವೇಕಪ್ಪ?'' ಎಂದು ತಮ್ಮೊಳಗೆ ಹೇಳಿಕೊಂಡರು. ಹತ್ತಿರ ಬಂದು ಕೆಲವರು ನೋಡುತ್ತಿದ್ದಾಗ ಆನೆಯು ಒಂದಿಷ್ಟು ನಿಂತರೆ, ಪ್ರೀತಿಯಿಂದ ನೋಡುತ್ತಿದ್ದರು. ಮುಂದೆ ಹೋದಾಗ ಮತ್ತೊಬ್ಬರೇಕೆ ಬಂದು ನೋಡುವುದಿಲ್ಲ ಎನ್ನುತ್ತಿದ್ದರು. ಆನೆಯು ಆನುತ್ತ ಹೋಗುತ್ತಿದ್ದಾಗ ಲೇಸೆಂದು ನೋಡುತ್ತಿದ್ದರು. ಅದು ಮುಂದೆ ಹೋದಾಗ, ''ಆನೆಗೆ ಮಂದಗಮನವೆನ್ನುವರು; ಇದು ವೇಗದ ಆನೆ; ಲೇಸಲ್ಲ''ವೆಂದು ಅವರೇ ಗೊಣಗುಟ್ಟುವರು. ಅಷ್ಟರಲ್ಲಿ ಭರತೇಶನು ಮದಗಜದಿಂದ ಇಳಿದು ಎಲ್ಲರನ್ನೂ ಕಳುಹಿಸಿ ತಾನು ಅರಮನೆಯನ್ನು ಪ್ರವೇಶಿಸಿದನು. ತಮಗೆಂದು ಮದುವೆಯಾಗುವುದೋ ಎಂದು ಅಬಲೆಯರಾಗ ಬೆದೆಬೆದೆಗೊಂಡರು.

ಭರತೇಶನು ಬಂದ ದಿನವೇ ಮೇಘೇಶ್ವರನು ಅಲ್ಲಿಗೆ ಬಂದು ನೆರದಿದ್ದ ವಿಶ್ವದ ರಾಜರನ್ನೆಲ್ಲ ಕರೆತಂದು ಚಕ್ರೇಶ್ವರನಿಗೆ ತೋರಿಸಿದನು. ಅವರಾಗಿ ಇತ್ತ ಅಶ್ವಗಜಾದಿ ವಸ್ತುಗಳನ್ನೆಲ್ಲ ಚಕ್ರಿಯು ಒಪ್ಪುಗೊಂಡನು. ರಾಜರನ್ನೆಲ್ಲ ಒಲಿದು ಮನ್ನಿಸಿದನು. ಆ ಮೇಲೆ ಪ್ರಖ್ಯಾತವಾದ ತಮಿಸ್ರ ಗುಹೆಯಂತೆ ಖಂಡಪ್ರತಾಪ ಗುಹೆಯಲ್ಲಿದ್ದ ಬಾಗಿಲನ್ನು ಒಡೆದು ಮರುದಿನ ಭರತೇಂದ್ರನು ಬಂದು ರಾಜಗೃಹವನ್ನು ಹೊಕ್ಕನು. ಅಮರಾವತಿಯಂತೆ

ಸೇನೆಯಲ್ಲೆಲ್ಲ ಸಿಂಗಾರವಾಯಿತು. ಅಷ್ಟರಲ್ಲಿ ವಾದ್ಯಘೋಷಗಳು ಶರಧಿಯಂತೆ ಮೊಳಗಿದವು. ಭರತೇಶನು ಎರಡು ಸಾವಿರ ಹೆಣ್ಣುಗಳನ್ನು ಒಂದೆ ಹಸೆಯಲ್ಲಿ ಪಾಣಿ ಗ್ರಹಣ ಮಾಡಿಕೊಂಡನು. ಕಲಿರಾಜಸುತೆ ರಾಜಮತಿ, ಕಾಮರಾಜಸುತೆ ಮೋಹಿನೀದೇವಿ ಮತ್ತು ಇತರ ಹರೆಯ ಹೆಣ್ಣುಗಳೆಲ್ಲರೂ ಭರತೇಶನ ಮನಸ್ಸನ್ನು ಇಂಪಿನಿಂದಲೂ ಸೊಂಪಿನಿಂದಲೂ ಜಕ್ಕುಲಿಸಿದರು. ಮಾಧವರಾಜ ಚಿಲಾತರಾಜ ಪುತ್ರಿಯರು ತಮ್ಮ ಮೃದುಮಾರ್ದವತೆಗಳಿಂದ ಭರತೇಶನಿಗೆ ಅವರ ತಂದೆಯರು ಮಾಡಿದ ಅಪರಾಧವನ್ನು ಕಳೆದು ದೂಡಿದರು. ಅಂಬರೇಚರಿಯರೂ ಭರತೇಶನ ಸನ್ನಿಧಿಯಲ್ಲಿ ಸುಖಪಟ್ಟರು, ಭರತೇಶನಾದರೋ ಅವರನ್ನೆಲ್ಲ ಇಂಬರಿತು ಒಂದಿರುಳಲ್ಲೇ ತಮ್ಮ ತಮ್ಮ ತವರೂರ ಹಂಬಲ ಮರೆಯುವಂತೆ ಮೆರೆಯಿಸಿದನು. ಆ ಹೆಣ್ಣುಗಳ ಜನಕರನ್ನೂ ಮನ್ನಿಸಿ, ಸರಸದಲ್ಲಿದ್ದನು. ಇತ್ತ ಭರತೇಶನು ತನ್ನ ಅಂಗನೆಯರೊಂದಿಗೆ ಸರಸಾಂಗನಾಗಿರುವಾಗ ಅತ್ತ ನಮಿರಾಜನ ಆಪ್ತಜನರು ಅವನೊಂದಿಗೆ ಮಾತನಾಡುತ್ತಿದ್ದರು.

''ದೇವರು ತಮ್ಮ ತಂಗಿಯನ್ನು ಚಕ್ರಿಗೆ ಕೊಡುವುದೇ ಉತ್ತಮ'' ಎಂದು ನಮಿರಾಜನ ಬಾಂಧವರು ಒಡಂಬಡಿಸಿದರು. ಅದನ್ನೇ ಲೇಸೆಂದು ಸುಮತಿ ಸಾಗರನೂ ಅವನ ಸೋದರನೂ ನುಡಿದರು.

''ಕೊಡಬಾರದೆಂದು ನಾನು ಹೇಳಿದೇನೆ? ನನ್ನ ಊರಿಗೆ ನಡೆದು ಬಂದರೆ ಕೊಡಬಹುದು. ಕುಡಿಯರ ಹಾಗೆ ಹೆಣ್ಣನ್ನು ಕೊಂಡು ಹೋಗಿ ಕೊಡುವುದು ರಾಜರಿಗೆ ನಡತೆಯೆ? ಅವನಿಗೆ ಸಿರಿ ಹೆಚ್ಚಿದೆ ; ಅದು ನಿಜ. ರಾಜವಂಶದಲ್ಲಿ ನಾನು ಅವನಿಗೆ ಸರಿಯಲ್ಲವೇ? ನೀವೇ ಹೇಳಿರಿ. ಇಲ್ಲಿಗೆ ಬರಲಿ; ನೀವೆಲ್ಲ ಮೆಚ್ಚುವಂತೆ ತಂಗಿಯನ್ನು ಧಾರೆಯೆರೆದು ಕೊಡುವೆನು'' ಎಂದು ನಮಿರಾಜನು ಅವರ ಮಾತಿಗೆ ಉತ್ತರವಿತ್ತನು. ''ನಾವು ನುಡಿಯಲು ಅಂಜುತ್ತೇವೆ. ಅಂಜಿದರೆ ಕಾರ್ಯ ಕೆಡುತ್ತದೆ. ಭೂಮಿಯಲ್ಲಿರುವ ಅರಸರೆಲ್ಲ ಹೆಣ್ಣುಗಳನ್ನು ಕೊಡುವಾಗ ಚಕ್ರಿಯನ್ನು ತಮ್ಮೂರಿಗೆ ಕರೆದರೆ; ಅವರಂತೆ ನೀನೂ ಕೊಡಬೇಕು. ಅವರು ಕ್ಷತ್ರಿಯರಲ್ಲವೇ? ಚಕ್ರಿಯ ಮುಂದೆ ಗರ್ವವ ತೋರಿಸಲು ಅಂಜಿ ಕೊಟ್ಟರು. ನೀನಿದನ್ನು ತಿಳಿಯಬೇಕು. ಅವನ ಸೀಮೆಯಲ್ಲಿದ್ದ ನಾವೂ ಹೀಗೆ ಹೇಳುವುದು ಉಚಿತ?'' ಎಂದುಅವನ ಆಪ್ತರು ತಿಳಿಸಿದರು.

''ನಿನ್ನ ತಮ್ಮನೊಡನೆ ಮಂತ್ರಿಯೊಡನೆ, ಅವನು ಮೊನ್ನೆ ತೋರಿದ ಮಾತನ್ನು ಮರೆತೆಯಾ? ಇದು ಚೆನ್ನಲ್ಲ, ಕೊಡು,ಕೊಡು, ಚಕ್ರಿಯ ಬಳಿಗೆ ಹೋಗುವುದು ಬನ್ನವಲ್ಲ'' ಎಂದು ಉತ್ತಮರು ಸೂಚಿಸಿದರು. ''ಮಾನಹಾನಿಯನ್ನು ನೋಡದೆ ಆ ರಾಜರೆಲ್ಲ ಹೆಣ್ಣು ಕೊಟ್ಟರು. ನಾನಂತೂ ಕೊಡಲಾರೆ. ಅದು ಹಾಗಿರಲಿ ನನ್ನ ತಮ್ಮನೊಡನೆ ಮಾತನಾಡಿದವನು ನನ್ನನ್ನೇನು ಮಾಡುವನು? ಅವನು ಮಾಡುವುದನ್ನು ಕಾಣುವೆನು. ಆವರ್ತರಾಜನನ್ನು ಕಿತ್ತು ಮಾಧವಗೆ ಇಲ್ಲದ ಪಟ್ಟಗಟ್ಟಿದುದನ್ನು ಬಲ್ಲೆನು. ಗಲ್ಲಿಸಿ ನನ್ನನ್ನು ಅಂಜಿಸುವ ಈ ತಂತ್ರವನ್ನು ಬಲ್ಲೆ, ಅದಕ್ಕೆ ನಾನು ಅಲ್ಲಾಡಲಿಲ್ಲ, ಎರಡು ಶ್ರೇಣಿಯ ಖಚರರನ್ನು ಕಳುಹಿಸಿದೆನು. ಬರಲೆಂದು ತಮ್ಮನನ್ನು ತ್ವರಿತದಲ್ಲಿ ಕಳುಹಿಸಿದೆನು. ನನ್ನಲ್ಲಿ ತಪ್ಪೇನು? ಮೊದಲೇ ತಾಳಿಬಂದಿಯನ್ನು ಕಟ್ಟಿಸಿ ಮದುವೆಗೆ ಬರುವ ಶೌರ್ಯವುಂಟೇ? ನೀವೇ ಹೇಳಿ ಅಲ್ಲದಿದ್ದರೆ ಸುಮ್ಮನಿರಿ. ಅವನೇ ತನ್ನ ತೋಳ ಬಲ್ಮೆಯನ್ನೂ ತೋರಲಿ.''

ನಮಿರಾಜನು ತನ್ನ ನಿರ್ಣಯವನ್ನು ಹೇಳಿಬಿಟ್ಟನು. ನಮಿರಾಜನಿಗೆ ತಿಳುಹಲಾರದ ತಮ್ಮ ಅಸಹಾಯಕ ಪರಿಸ್ಥಿತಿಯನ್ನು ಆಪ್ತರೆಲ್ಲರೂ ಗುಪ್ತವಾಗಿ ಯಶೋಭದ್ರೆಗೆ ಸೂಚಿಸಿದರು. ಆಗ ಅವಳು ಪ್ರಾಪ್ತರನ್ನು ಕರೆದು ನಮಿರಾಜನನ್ನು ಕರೆಯಲು ಕಳುಹಿಸಿದಳು. ತಾಯ ಕರೆಯನ್ನು ಮನ್ನಿಸಿ ನಮಿರಾಜನು ಕೂಡಲೇ ತಾಯ ಬಳಿಗೆ ಬಂದನು. ಅವನನ್ನು ಆದರದಿಂದ ಬರಮಾಡಿಕೊಂಡು ತಾಯಿ ಕೇಳಿದಳು.

"ಏನಣ್ಣಾ, ಭರತೇಶನಿಗೆ ಅನುಜೆಯ ಕೊಡೆನೆಂದು ನೀನತಿ ರಭಸ ತೋರಿದೆಯಂತೆ. ಆ ರಾಜನಿಗೆಂದು ಬೆಳೆದ ಹೆಣ್ಣನ್ನು ಕೊಡಬೇಕು. ಗ್ಲಾನಿ ತೋರಿಸಬೇಡ."

"ಕೊಡೆನೆಂದು ನಾನು ಹೇಳಲಿಲ್ಲ ಅಮ್ಮ, ಭರತೇಶನು ತಾನಿಷ್ಟು ಪೊಡವಿಗಳ ಒಡೆಯನೆಂಬ ಹೆಮ್ಮೆಯಿಂದ ಹಿಡಿಬಿಟ್ಟೆಯಲ್ಲಿ ಹೆಣ್ಣು ಬೇಡಿದರೆ ಅದಕ್ಕೆ ನಾನು ಒಪ್ಪುವುದಿಲ್ಲ, ಮದುವೆಗಾದರೆ ತಾಳಿಬಂದಿಯ ಕಟ್ಟಿ, ಬಳಿಕ ಹೆಣ್ಣಿನ ಮನೆಗೆ ಹೋಗಿ ಧಾರೆಯನ್ನೆರೆಸಿಕೊಳ್ಳಬೇಕಷ್ಟೆ? ಅಮ್ಮ ನೀನು ತಿಳಿಯದ್ದೇ ಇದು? ಭರತೇಶನಿರುವ ಬೀಡಿಗೆ ಹೆಣ್ಣನ್ನು ಕೊಂಡುಹೋಗಿ ಕೊಡು–ಕೊಡು, ಎಂದು ಮಂತ್ರಿಗಳು ಹೇಳಿದರು; ವಿನಮಿ ಹೇಳಿದನು; ಬಾಂಧವರು ಹೇಳಿದರು. ನಾನು ತಲೆಯಲ್ಲಾಡಿಸಿದೆ."

"ಚಕ್ರಿ ಬರುವನೆ ನಿನ್ನ ಮನೆಗೆ? ಅದು ನೃಪರ ಕ್ರಮವೆ? ನೀನಿದನ್ನು ತಿಳಿದುಕೊಳ್ಳು. ವಕ್ರವಿಲ್ಲದೆ ಕೊಡು; ಕೊರತೆಯಿಲ್ಲ."

"ಹೆಣ್ಣು ಬೇಕಾದರೆ ಬರಬೇಕು. ನಾವು ನಮ್ಮ ಬಣ್ಣಿಗೆ ತಪ್ಪಿ ಕೊಡುವೆವೆ? ಹೆಣ್ಣು ಗಂಡಿನ ತೋಳುತೊಡೆಯ ಚೆಂದವನ್ನು ಯಾರೂ ತಪ್ಪಿಸಿ ಬಣ್ಣಿಸಬಾರದು."

"ಮಗನೆ, ನೋಯದಿರು. ಆರು ಖಂಡದ ನೃಪರು ಚಕ್ರಿಗೆ ದಾಸರಲ್ಲವೆ? ಅವನು ಮನೆಗೆ ಬರುವನೇನು? ಚಕ್ರಿಯಿದ್ದಲ್ಲಿಗೆ ನಾವೇ ಹೋದರೇನು ಕೊರತೆ? ನಿನಗವನು ಸೋದರತ್ತೆಯ ಮಗನು. ನೀನು ಅವನ ಮಾವನ ಮಗನು. ಈ ಅವಿನಯವನ್ನು ಬಿಟ್ಟು ಮನುವಂಶ ತಿಲಕನಿಗೆ ಹೆಣ್ಣನ್ನು ಕೊಟ್ಟು ನೋಡು."

"ಅಮ್ಮ ಹಾಗೆ ಹೇಳಬೇಡ."

"ಬೇಡವಾದರೆ ನಿನ್ನ ತಂಗಿ ನಿನ್ನ ಮನೆಯೊಳಗಿರಲಿ. ಬ್ರಾಹ್ಮಿ ಸೌಂದರಿಯರ ಗೋಷ್ಠಿಗೆ ನಾನು ತೆರಳುವೆನು. ನನಗದುವೆ ಸಂತೋಷ. ಹೆಣ್ಣೊಂದನ್ನು ಪಡೆದುದನ್ನು ಭರತೇಶನಿಗಿತ್ತು ನನ್ನ ಕಣ್ಣಿ ಹಬ್ಬವನ್ನು ಕಣ್ಣಿನಲ್ಲೆ ಇಟ್ಟುಕೊಂಡಿದ್ದೆ. ಇನ್ನು ಆತ್ಮಕಾರ್ಯವನ್ನು ಮಾಡುವೆನು. ಅಣ್ಣ ನೀನು ಒಪ್ಪುವುದಿಲ್ಲವೇ? ಚೆಲುವಿನಲ್ಲಿ ಇಂದ್ರನನ್ನೆ ನಗಿಸುವ ಚಕ್ರಿಗೆ ಸತಿಯಾಗಿ ನನ್ನ ಮಗಳು ಶಚಿಯಾಗುವುದು ಪಾಡಲ್ಲವೆ? ಇವರನ್ನು ಜೋಡಿಸಲೊಲ್ಲೆಯಾ? ಹಾಗಾದರೆ ಸುಮ್ಮನಿರು. ನಾನೊಮ್ಮೆ ಕೈಲಾಸ ಗಿರಿಯನ್ನು ನೋಡುವೆನು."

"ನೀವು ಹೋಗಬೇಡಿ. ನಿಮ್ಮ ಅಳಿಯನಿಗೆ ಮಗಳನ್ನು ಕೊಟ್ಟು ಈ ವಿನಮಿಯನ್ನು ಕೂಡಿಕೊಂಡು ಶ್ರೀವಿಲಾಸದಲ್ಲಿರಿ. ನಾನೇ ತಪೋವನಕ್ಕೆ ಹೋಗುವೆನು. ರಾಜಗೌರವ ತಪ್ಪಿ ಬದುಕುವ ಸಿರಿಗಿಂತಲೂ ಶ್ರೀ ಜಿನದೀಕ್ಷೆಯೆ ಲೇಸು. ಓಜೆಯಲ್ಲಿದ್ದುದನ್ನು ಹೇಳಿದವ, ನಾನೆ ಹೋಗುವೆನು. ಅಮ್ಮಾಜಿ ನೀವು ಸುಮ್ಮಗಿರಿ."

ಮಗನ ಈ ಮಾತಿಗೆ ತಾಯಿ ಅಳುಕಿದಳು. "ಮಗನೇ ನೀನಿಷ್ಟು ಹೆಚ್ಚಾಗದಿರು. ಆ ಚಕ್ರಿ ನಿನ್ನ ನಿಳಯಕ್ಕೆ ಬಾರನು. ತಾಳಿ ಬಂದಿಯ ಕಟ್ಟಲು ಪ್ರೀತಿಯಿಂದ ಕೊಡುವೆಯಾ?"

''ಇಲ್ಲಿಗೆ ಆಪ್ತರನ್ನು ಕಳುಹಿಸಿ ಚಕ್ರಿಯ ತಾಳಿಬಂದಿಯನ್ನು ಕಟ್ಟುವಂತಿಲ್ಲ. ತನ್ನಲ್ಲಿಗೇ ಬರಲಿ ಎನ್ನುವನು. ಇಲ್ಲಿ ಆ ಮಂಗಲಕಾರ್ಯವಾಗುವುದಾದರೆ ಸಾಕು. ಸಲ್ಲೀಲೆಯಿಂದಲೆ ಕೊಡುವೆನು?''

ತಾಯಿಗೆ ಈ ಸೂಚನೆ ಒಪ್ಪಿತವಾಯಿತು. ''ನನ್ನ ಹೆಗ್ಗಡಿತಿಯನ್ನು ನಿನ್ನ ಮಂತ್ರಿಯನ್ನು ಕಳುಹಿಸಿ ನನ್ನ ಅಳಿಯನಿಗೆ ಹೇಳಿಸುವೆನು.''

''ಮನ್ನಣೆಯಾದರೆ ಯಾಕೆ ಕೊಡಲಾರೆನು. ಆಗಲಿ ಒಪ್ಪಿದೆನು.'' ಎಂದು ನಮಿರಾಜನು ತಿಳಿಸಿದನು. ತನ್ನ ದಾಸಿಯಾದ ಕಾಳಿಂದಿಯು ಭರತೇಶನು ಬಾಲಕನಾಗಿರುವಾಗಲೇ ಬಲ್ಲವಳು. ತನ್ನ ಮಗಳ ಮೇಳದ ಮಧುವಾಣಿ ಕಡು ಜಾಣೆಯು, ಅವರಿಬ್ಬರಿಂದ ಹೇಳಿಸುವೆನೆಂದು ಯಶೋಭದ್ರದೇವಿಯು ಎಣಿಸಿದಳು. ದಾಸಿಯರಿಗೆ ತಕ್ಕ ಮಾತುಗಳನ್ನು ಕಲಿಸಿಕೊಟ್ಟು, ಯೋಗ್ಯವಾದ ಉಡುಗೊರೆಗಳನ್ನೂ ಕಟ್ಟಿಕೊಟ್ಟು, ಮಂತ್ರಿಯೊಡನೆ ಅವರನ್ನು ಯಶೋಭದ್ರಾದೇವಿಯು ಭರತೇಶನಲ್ಲಿಗೆ ಕಳುಹಿಸಿದಳು.

ಅವರು ವಿಮಾನವೇರಿ ಸಾಗಿದರು.

ವಿಮಾನವೇರಿದ ಅವರು ಭರದಿಂದ ಬಂದು, ಭರತೇಶನ ಓಲಗ ಹರಿದಾಗ ಅವನನ್ನು ಕಂಡರು. ಭರತೇಶನು ಬಂದ ಮಂತ್ರಿಯೊಡನೆ ಅವರು ಬರಲು ಕಾರಣವೇನೆಂದು ಕೇಳಿದಾಗ ಆ ನರ್ಮಸಚಿವನು ಹೀಗೆಂದನು.

''ಏನು ಕಾರ್ಯವೋ ನಾನರಿಯೆ. ದೇವರ ಅತ್ತ್ಯಾಜಿಯವರು ತಮ್ಮ ಮಾನಿನಿಯರನ್ನು ಕಳುಹಿಸಿದರು. ನಾನು ಅವರೊಡನೆ ಬಂದೆನು. ಅವರೀಗ ಹೊರಗಿದ್ದಾರೆ.''

ಅದು ಹೆಣ್ಣಿನ ಒಸಗೆಯೆಂಬುದನ್ನು ಭರತೇಶನಾಗಲೇ ಅರಿತನು. ಆದರೆ ಅರಿಯದವನಂತೆ ಮಂತ್ರಿಯನ್ನು ಇಂಬಾಗಿರಿಸಿಕೊಂಡು ಹೊರಸಭೆಯಿಂದೆದ್ದು ಒಳ ಚಾವಡಿಗೆ ಹೋಗಿ, ಚೆಲುವಿನ ಎರಕದ ಓಲಗದಲ್ಲಿ ಕುಳಿತನು. ಒಳಗಿದ್ದ ಪಂಡಿತೆಯನ್ನೂ ಹೊರಗಿದ್ದ ಅತ್ತ್ಯಾಜಿಯ ಮಾನಿನಿಯರನ್ನು ಕರೆಯೆಂದನು. ಪಂಡಿತೆಯು ಒಡನೆ ಬಂದು ಚಕ್ರಿಯ ಬಳಿ ಸೇರಿದಳು. ಖಚರಿಯರೂ ಅರಸನೆಡೆಗೆ ಬಂದರು.

''ಬಹುಕಾಲವಾಗಿ ನನ್ನೊಡನೆಯನನ್ನು ಕಂಡೆನ್ನು ಮಹಿಮೆವೆತ್ತೆನು.'' ಎಂದು ಹೇಳುತ್ತ ಕಾಳಿಂದಿಯು ಯಶೋಭದ್ರಾದೇವಿಯರು ಕಳುಹಿಸಿದ ಉಡುಗೊರೆಗಳನ್ನು ಚಕ್ರಿಯ ಮುಂದಿಟ್ಟು ನಮಸ್ಕರಿಸಿದಳು. ''ಚಿಕ್ಕ ಪಾದಗಳನ್ನು ಅಂದು ನೋಡಿದ್ದೆನು. ಈಗ ದೊಡ್ಡ ಚೊಕ್ಕ ಪಾದಗಳಾಗಿವೆ.'' ಎಂದು ಚಿಕ್ಕಚಿಕ್ಕನೆ ಭರತೇಶನ ಪಾದಗಳನ್ನು ಕಣ್ಣಿಗೊತ್ತಿಕೊಂಡಳು.

''ಬಲ್ಲೆಯ ಸ್ವಾಮಿ, ನಾನು ಯಾರೆಂದು?''

''ಕಾಳಿಂದಿಯಲ್ಲವೆ?''

''ಬಲ್ಲವರ ಬಲ್ಲಹನಲ್ಲವೆ ನೀನು. ಒಂದಿಷ್ಟೂ ಮರೆತಿಲ್ಲ'' ಎಂದು ಹೇಳುತ್ತ ಮತ್ತೊಮ್ಮೆ ಕಾಳಿಂದಿ ನಮಸ್ಕರಿಸಿದಳು. ಅಷ್ಟರೊಳಗೆ ''ನಿನ್ನ ಅತ್ತೆ ಕಳುಹಿಸಿದ ಉಡುಗೊರೆಗಳಿವು.'' ಎಂದು ಬಿನ್ನವಿಸಿದಳು.

ಆಗ ಮಧುವಾಣಿಯು ಬಂಗಾರದ ತಾವರೆಯ ಕಾಣಿಕೆಯನ್ನಿಟ್ಟು ಪ್ರೀತಿಯಿಂದ ಕೈಮುಗಿದಳು. ''ಈಕೆ ನಿನ್ನ ಅತ್ತ್ಯಾಜಿಯ ಮಗಳ ವಿಲಾಸಿನಿ ಇವಳ ಮಾತೆಲ್ಲ ಕಣ್ಣಾಣೆ. ಮಧುವಾಣಿಯೆಂದು ಅವಳ ಹೆಸರು.'' ಎಂದು ಕಾಳಿಂದಿ ಮಧುವಾಣಿಯ ಪರಿಚಯ ಮಾಡಿಕೊಟ್ಟಳು.

ಭರತೇಶನು ಅವರಿಬ್ಬರನ್ನೂ ಕುಳ್ಳಿರಲು ಹೇಳಿ, ''ಅತ್ತ್ಯಾಜಿಯರಿಗೆ ಕ್ಷೇಮವೇ? ನಮಿ ವಿನಮಿಯರಿಗೂ, ನಾಡಿನ ಎಲ್ಲರಿಗೂ ಕ್ಷೇಮವೆ?'' ಎಂದು ಕಾಳಿಂದಿಯೊಡನೆ ವಿಚಾರಿಸಿದನು.

''ನೀನು ಬಂದುದರಿಂದ ನಿಮ್ಮ ಅತ್ತೆಗೆ ಮೊದಲು ಪರಿಣಾಮವಾಗಿದೆ. ನಮಿರಾಜರಿಗೂ ವಿನಮಿರಾಜರಿಗೂ ಸರ್ವರಿಗೂ ಸಂತೋಷವಾಗಿದೆ.''

''ನಾನಿತ್ತ ಬಂದುದರಿಂದ ಅತ್ತ್ಯಾಜಿಯವರಿಗೆ ಅರ್ತಿಯಾಗುವುದು; ಅದು ಸತ್ಯದ ನುಡಿ. ಮಿಕ್ಕ ಮಾತು ಸತ್ಯವಲ್ಲ.''

''ಹಾಗೆನ್ನಬೇಡ, ಸರ್ವರಿಗೂ ಅತ್ಯಂತ ಮೋದವಾಗಿದೆ. ನೀನು ಬಂದುದರಿಂದ ಬಡವರಿಗೆ ನಿಧಿ ಬಂದ ಹಾಗೆ, ಸಮುದ್ರ ಚಂದ್ರನನ್ನು ಕಂಡಂತೆ. ನಮ್ಮ ರಾಜರು ಪ್ರೀತಿಸುವರು. ಅಲ್ಲವೆ ಮಧುವಾಣಿ? ನೀನೆ ಹೇಳು.'' ಎಂದು ಕಾಳಿಂದಿ ನುಡಿದಳು.

''ನೃಪರಲ್ಲಿ ಉತ್ತಮರೆಂದು ಹೇಳುತ್ತಾರೆ. ಆದರೆ ಇವನ ಬಳಿಗೆ ಬಂದು ಭಾವಿಸಿದರೆ ಇವನಲ್ಲಿ ಗುಣಗಳೇನುಂಟು? ಈ ಕಪಟದ ದೊರೆಯೊಡನೆ ನುಡಿವನೆ?'' ಎಂದು ಚಪಲೆಯಾದ ಮಧುವಾಣಿಯು ರಾಜೇಂದ್ರನ ಮುಂದೆ ನುಡಿಯತೊಡಗಿದಳು.

''ನನ್ನಲ್ಲಿ ಯಾವುದು ಕಪಟ? ಹೇಳು.'' ಎಂದು ಭರತೇಶನು ನಗುತ್ತ ಆಕೆಯನ್ನು ಕೇಳಿದನು.

''ಯಾವುದೆಂದು ಕೇಳುವೆಯಾ? ನೀನು ಕ್ಷೇಮವಾರ್ತೆಯನ್ನು ಕೇಳುವ ಒಂದು ಭಾವವು ಅದನ್ನು ಹೇಳುವುದು. ಅತ್ತೆಯ, ಮೈದುನರ, ಕ್ಷೇಮವನ್ನು ಕೇಳಿದೆ; ಮತ್ತೊಬ್ಬರ ಕ್ಷೇಮವನ್ನೇಕೆ ಕೇಳಲಿಲ್ಲ? ಇದು ಚಿತ್ತ ಶುದ್ಧಿಯೋ? ಕಪಟವೋ?'' ಎಂದಾಕೆ ಅಧಿಕ ಮೋಹನವನ್ನು ಬಿತ್ತುವಂತೆ ಹೇಳಿದಳು.

''ಮತ್ತೆ ಯಾರಿದ್ದಾರೆ?'' ಎಂದು ಭರತೇಶ ಕೇಳಿದೊಡನೆ ''ಇಲ್ಲವಲ್ಲವೇ? ಇದ್ದಾರೆಂದು ಉತ್ತರ ಹೇಳಿ. ನಿಮ್ಮತ್ತೆಯ ಮಗಳಿರುವುದನ್ನು ನೀ ತಿಳಿದುಕೋ'' ಎಂದು ಮಧುವಾಣಿ ತಿಳಿಸಿದಳು.

''ಮಗಳೊಬ್ಬಳಿದ್ದಾಳೆಯೇ ನಮ್ಮ ಅತ್ತ್ಯಾಜಿಗೆ?'' ಎಂದು ರಾಜೇಂದ್ರನು ನಗುತ್ತ ನುಡಿದನು.

''ನೋಡು, ನೋಡು, ಜಗಕತಿ ಕುಟಿಲನು ನೀನು. ಆಕೆ ನಿನ್ನ ನಾಲಗೆಯೊಳಗಿಲ್ಲ, ನಿನ್ನ ಎದೆಯಲ್ಲಿದ್ದಾಳೆ. ನೀನು ನನ್ನನ್ನು ಇಂತೂ ಚಾಳಿಸುವುದೇ ಠಕ್ಕರ ದೇವಾ?''

''ಅತ್ತೆಯ ಮಗಳ ವಿಲಾಸಿನಿಯೆಂದು ನಿನ್ನನ್ನು ತೋರಿಸಿದಾಗ, ಅತ್ತಿತ್ತ ತುಟಿಯಲ್ಲಾಡಿಸದೆ ನೀನಿದ್ದೆಯಲ್ಲವೇ? ಅವಳಾಗ ನಿನ್ನೆದೆಯಲ್ಲೇ ಇದ್ದಳು. ಆಗಲಿ, ಭವನದಲ್ಲಿ ಎಲ್ಲರಿಗೂ ಕ್ಷೇಮವೇ ಎಂದಾಗ ಆಕೆಯನ್ನೂ ಕೇಳಿದೆನಲ್ಲವೆ? ಅದನ್ನೇಕೆ ತಿಳಿಯೆ? ಆ ಗುಣವಚನದಲ್ಲಿ ಸೇರಿಲ್ಲವೇ? ಬೇರೆ ತೂಗಿ ಕೇಳಬೇಕೆ?''

"ಅಹುದಹುದು, ಮನೆಯೊಳಗೆಲ್ಲರಿಗೆ ಕ್ಷೇಮವೇ ಎಂದು ಸ್ವಾಮಿ ಕೇಳಿದನಷ್ಟೆ?" ಎಂದ ಕಾಳಿಂದಿಯು ಭರತೇಶನ ಪಕ್ಷವಹಿಸಿ ಮಧುವಾಣಿಯನ್ನೇ ಒತ್ತಿನುಡಿದಳು.

ಮತ್ತೆ ಮಧುವಾಣಿ ರಾಯನೊಡನೆ ತಾನೇ ಮಾತನಾಡಿದಳು; "ದೇವ ಕೇಳು; ಅದಕ್ಕಲ್ಲ, ನಿನ್ನ ಚೆಲುವನ್ನೂ ನಮ್ಮ ದೇವಿಯ ಚೆಲುವನ್ನೂ ನೋಡಿ ಲಾವಣ್ಯ ಸರಿಯಾದುದರಿಂದ ಸಂತೋಷದಿಂದ ನುಡಿದೆನು. ಒಂದು ರತ್ನವನ್ನು ಎರಡುಮಾಡಿ ಸ್ತ್ರೀ ಪುರುಷ ರೂಪೆಂದು ನಿರ್ಮಿಸಲು ಅವಕ್ಕೆ ಆತ್ಮಬಂದಂತೆ ನಿಮ್ಮಿಬ್ಬರ ಅಂದವೊಪ್ಪಿರುವುದರಿಂದ ನನಗೆ ಮೆಚ್ಚಾಯಿತು. ಮತ್ತಾರೂ ಇಲ್ಲದೆ ಏಕಾಂತದಲ್ಲಿರುವ ನನ್ನ ಸಖಿಯ ಹೃದಯವು ತಮಗೆ ಮಾರುಹೋಗಿದೆ. ಆಕೆಯ ಅಂಗಗಳು ಪುಣ್ಯ ನಿರ್ಮಿತವಲ್ಲವೆ? ಅದೂ ಒಂದು ಸೌಭಾಗ್ಯವೆ. ಹೊನ್ನ ತೋಳುಗಳಂತೆ ಹೊಳೆಯುತ್ತಿರುವ ನಿಮ್ಮಿಬ್ಬರ ಚೆನ್ನಾದ ತೋಳುಗಳನ್ನು ನೋಡಿದೆವು. ರತ್ನದ ಬೊಂಬೆಯಂತಿರುವ ಮೈಯನ್ನು ಈ ತೋಳುಗಳು ಸುತ್ತಿಕೊಂಡರೆ ಎಷ್ಟು ಸೊಗಸು ! ಕೆಂಪು ಹಲ್ಲು, ಕೆಂಪು ತುಟಿ, ನಗೆಮೊಗ, ಉದ್ದವಾದ ಕಣ್ಣುಗಳು— ಇವುಗಳ ಹೊಂದಿಕೆಯನ್ನು ನಿಮ್ಮಿಬ್ಬರಲ್ಲೂ ಕಂಡೆನು. ತಾವರೆಗೆ ತಾವರೆಯನ್ನು ಬೆರಸಬೇಕಲ್ಲದೆ ಬೇರೊಂದರ ಹಂಬಲವೆ? ನಿಮ್ಮಿಬ್ಬರನ್ನೂ ನೋಡಿದರೆ, ಅಡಿಯಾಗಲಿ, ಮುಡಿಯಾಗಲಿ, ಮೊಗವಾಗಲೀ, ಕೊರಳಾಗಲೀ, ತೋಳಾಗಲೀ ಕಡೆದು ಸೇರಿಸಿದಂತೆ, ಇನ್ನೊಂದು ಆಶ್ಚರ್ಯವಲ್ಲವೆ? ನೀನಾದರೆ ಹಲವರು ಪೂಜಿಸುತ್ತಿರುವ ದೇಹಾರದಂತಿರುವೆ. ಅವಳಾದರೊ ಯಾರ ಪೂಜೆಗೂ ದೊರೆಯದ ದೇವತೆಯಂತಿರುವಳು. ಆರ ಪೂಜೆಗೂ ಸಿಕ್ಕದಿರುವ ದೇವತೆ, ನೀನು ಎದೆಯಲ್ಲಿಟ್ಟು ಧ್ಯಾನಿಸುವಾಗ ಬಾರದಿರಳು; ಪಾಲಿಸುವಳು. ನಿಜವಾಗಿಯೂ ನೀನು ಮಹಾರಾಯನಾದೆ. ನಿನ್ನ ಬದುಕು ಮಹತ್ವದ್ದಾಯಿತು:"

'ಭರತೇಶನಾಗ ಮುಗುಳು ನಗೆ ನಕ್ಕನು.

"ಹೌದು. ನಿನಗಿನ್ನು ನಗೆಯೆ. ದೇವಸ್ತ್ರೀಯರ ನಗೆಯಂತಿರುವ ನೀರೆಯು ಕೈಸೇರುವಾಗ ನಗೆಯಲ್ಲದೆ ಮತ್ತೇನು? ಬೆಳೆಯುತ್ತಿರುವಾಗಲೆ ನಿಮ್ಮತ್ತೆ ಇವಳನ್ನು ಅಳಿಯನಿಗಲ್ಲದೆ ಮತ್ತಾರಿಗೂ ಕೊಡೆನೆಂದೇ ಸಲಹಿದಳು. ಇವಳೀಗ ನಿನ್ನ ಮನಸ್ಸನ್ನು ಸೂರೆಗೊಳ್ಳುವಂತೆ ರಂಜಿಸುತ್ತಿದ್ದಾಳೆ. ಅವಳ ನೋಟವೆಂದರೆ ಕೋಟಿ ಮನ್ಮಥರ ಬಾಣಗಳ ಮುಸುಕದಂತೆ, ಯಾರೂ ಸೂಡದ ಮಾಲೆಯಂತೆ, ಯಾರೂ ತೊಡದ ಆಭರಣಗಳಂತೆ, ಚಕೋರವು ತೊಡಕದಿರುವ ಬೆಳದಿಂಗಳಂತೆ, ಸೇರಿ ನೋಡದ ಚಿತ್ರದಂತೆ, ಕಚ್ಛ ನೃಪಾಲನ ಕುಮಾರಿ ನಿನಗೆ ಮೀಸಲಾಗಿರುವಳು. ತುಂಬಿ ವಾಸಿಸದ ತಾವರೆಯಂತೆ, ಗಿಳಿ ಚುಂಬಿಸದ ಸವಿಯಾದ ಹಣ್ಣಿನಂತೆ, ಜವ್ವನೆ ಹೆಣ್ಣು ನಿನಗೆ ಮೀಸಲಾಗಿರುವಳು. ಈ ಧರೆಯಲ್ಲಿ ನೀನೇನು ಪುಣ್ಯವಂತನೊ."

ಎಂದ ಮಧುವಾಣಿಯ ಮಾತುಗಳು ರಾಜೇಂದ್ರನಿಗೆ ರುಚಿಯಾಗುತಿದ್ದುವು. ಅವನು ನಗುತ್ತ, "ಈಗ ನೀವು ಬಂದ ಕಾರ್ಯವೇನೆಂದು ಜೋಲಿಯಾಗದಂತೆ ಹೇಳಿ" ಎಂದು ಕೂಡಲೇ ನುಡಿದನು.

"ನಮಗೇನು ಕಾರ್ಯ? ನಿಮ್ಮತ್ತೆ ನಿಮಗೆ ತನ್ನ ಕುವರಿಯನ್ನು ಕೊಡುವೆನೆಂದು

ನಮ್ಮನ್ನು ಅವಸರದಿಂದ ಅಟ್ಟಿದರು. ನಾವು ಬಂದೆವು. ಆಕೆಯ ವಿವೇಕವೊಂದನ್ನು ಕೇಳು. ವಿನಮಿರಾಜನು, ಮಂತ್ರಿ ಬಂಧುಗಳು, ಎಲ್ಲರೂ ನಿನಗೆ ಹೆಣ್ಣು ಕೊಡಲು ಒಪ್ಪಿದರು. ಆದರೆ ಘನತರ ಭಾಗ್ಯವಂತನಿಗೆ ಕೊಡಲು ಅನುಮಾನಿಸಿದನು ದೊಡ್ಡರಸು. ಸಿರಿ ಸರಿಯಿಲ್ಲದಿದ್ದರೆ ನಾವು ಕುಲದಲ್ಲಿ ಸರಿಯಿಲ್ಲವೆ ಎನ್ನುವನು ನಮ್ಮ ಅರಸು. ಇದನ್ನರಿತು ತಾಯಿ ಮಗನನ್ನು ಬಳಿಗೆ ಕರೆದು ಬುದ್ಧಿ ಹೇಳಿ, ಮದುವೆಗೆ ಜೋಕೆ ಮಾಡೆಂದಳು. ಅದಕ್ಕೆ ಅವನು, ಮನಸ್ಸೊಪ್ಪದು ಅವ್ವಾಜಿ; ನಾವು ಹೆಣ್ಣು ಕೊಟ್ಟಾಗ ನಗೆಗೆಡೆಯಾದೀತು. ನೇರವಾಗಿ ತಾಳಿಬಂದಿಯ ಕಟ್ಟಿಮನೆಗೆ ಬಂದರೆ ಧಾರೆಯೆರೆದು ಕೊಡಬಹುದು. ಖಡ್ಗದ ಮೊನೆಯನ್ನು ತೋರಿಸಿ ಕೊಡು ಕೊಡು ಎಂದರೆ ಯಾರು ಕೊಡುತ್ತಾರೆ? ಅವನಿಗಿಂತಲೂ ಅಧಿಕರಾದ ಬಂಧುಗಳಿಲ್ಲವೆಂಬುದು ನಿಜ. ಆದರೆ ಅವನು ನಮ್ಮನ್ನು ಯಾವುದಕ್ಕೂ ಸರಿಸಮಾನರೆಂದು ಕಾಣನು. ಮಾತೆ, ಆತನಲ್ಲಿ ಪ್ರೀತಿಮಾಡೆನ್ನುವುದು ಮಾತೆ? ಎಂದು ದೊಡ್ಡರಸು ತಾಯಿಗೆ ಹೇಳಿದರು.

ತನ್ನ ಮಾವನಿರುತಿದ್ದರೆ ನನ್ನ ಅಳಿಯನು ಸನ್ನದ್ಧನಾಗಿ ಬರುತಿದ್ದನು. ಅವನು ಚಕ್ರೇಶನಲ್ಲವೆ? ನಿನ್ನ ಮನೆಗೆ ಬರಲಾರನು. ಇನ್ನೊಂದು ಮಾತನ್ನು ಕೇಳೆಂದು ತಾಯಿ ಹೇಳಿದಳು. ಅವನು ತಾಳಿಬಂದಿಯನ್ನು ಕಟ್ಟಿಸುವನು. ಆಮೇಲೆ ಅವರ ಅರಮನೆಗೆ ಹೋಗಿ ಹೆಣ್ಣುಕೊಡುವ. ಇದನ್ನು ನೀನೊಪ್ಪಬಹುದಲ್ಲವೇ? ಎಂದು ಹೇಳಲು ದೊಡ್ಡರಸು ಒಪ್ಪಿದರು. ಅದನ್ನು ನಾವರಿತು ಹೇಳಲೆಂದು ಇಲ್ಲಿಗೆ ಬಂದೆವು.''

ಎಂದು ಮಧುವಾಣಿ ಎಲ್ಲವನ್ನೂ ತಿಳಿಸಿದಳು. ರಾಜೇಂದ್ರನಾಗ ರಾಜಾಂಗರೂಢಿಯ ನಮಿರಾಜನ ಎಣಿಕೆಗೂ ಅತ್ತ್ಯಾಜಿಯ ಗುಣಕ್ಕೂ ಮನಸ್ಸಿನಲ್ಲಿ ಮೆಚ್ಚಿದನು. ಆದರೆ ಅದನ್ನು ತೋರಗೊಡದೆ ಹೀಗೆಂದನು.

''ಈ ಮೊದಲು ಸರ್ವರೂ ಹೆಣ್ಣುಕೊಟ್ಟಂತೆ ಕೊಡಲು ಹೇಳು. ಈ ಬಿನ್ನಾಣವು ಸಲ್ಲದೆಂದು ಹೇಳು.''

''ನಿನ್ನತ್ತೆ ಈ ಮಾತನ್ನು ಕೇಳಿದರೆ ಮುಖ ಖಿನ್ನವಾಗದೆ?''

''ಹಾಗಾದರೆ ಅತ್ತ್ಯಾಜಿಯವರ ಮಾತನ್ನು ಮುರಿಯೆನು. ಸಂತತಿಯನ್ನೂ ಅರಸರನ್ನೂ, ಬಂಧುಗಳನ್ನೂ ಕಳುಹಿಸಿ ತಾಳಿ ಬಂದಿ ಕಟ್ಟಿಸುವೆನು.''

ಅದನ್ನು ಕೇಳಿದೊಡನೆ ಅವರ ಮುಖವೆಲ್ಲ ಕಾಂತಿಯಿಂದ ಹೊಳೆಯಿತು. ಭರತೇಶನು ಅವರಿಗೆ ಉಡುಗೊರೆಯಿತ್ತು ಮನ್ನಣೆಮಾಡಿ ಕಳುಹಿಸಿದನು. ಆಮೇಲೆ ಪಂಡಿತೆಯೊಡನೆ ಒಂದು ಕಾರ್ಯವನ್ನು ಯೋಚಿಸಿಕೊಂಡು ಅರಮನೆಗೆ ನಡೆದನು. ಅಲ್ಲಿ ಮಂಡಿಸಿದ ಆಸನದಲ್ಲಿ ಖಿನ್ನ ಮುಖದಿಂದ ಕುಳಿತುಕೊಂಡನು.

ಅಷ್ಟರಲ್ಲಿ ಅಲ್ಲಿಗೆ ಸೌಂದರಿಯರ ತಂಡವೇ ಬಂತು. ರಾಜೇಂದ್ರನ ಇರವನ್ನು ಕಂಡ ಅವರು ಪಂಡಿತೆಯನ್ನು ವಿಚಾರಿಸಿದರು. ''ರಾಜೇಂದ್ರನಿಗೆ ಇದೊಂದು ಕಲ್ಯಾಣದ ವಾರ್ತೆ ಬಂದಿತೆಂದು ಕೇಳಿದೆವು. ಇದರಲ್ಲಿ ಚಿಂತೆಗೇನು ಕಾರಣ?'' ಬಂದ ಒಸಗೆಯಲ್ಲಿ ಮೂರು ಅಸಮಾನ್ಯ ಮಾತುಗಳು ಹುಟ್ಟಿದುವೆಂದೂ ರಾಜೇಂದ್ರನು ಚಿಂತಿಸುತ್ತಿರುವನೆಂದೂ ಪಂಡಿತೆ ಅವರಿಗೆ ತಿಳಿಸಿದಳು.

"ಹೆಣ್ಣನ್ನು ಹೆತ್ತವರು ಪಡೆದಾಗಲೇ ಆಕೆಯನ್ನು ಸ್ವಾಮಿಗೆಂದೇ ನುಡಿದಿದ್ದರು. ಈಗ ಕೊಡುವೆವೆಂದೂ ಹೇಳಿದರು. ಆದರೆ ಮೊದಲು ತಾಳಿಬಂದಿಯ ಸಂಗಡಿಸುವುದೊಂದು, ಪಟ್ಟಿಬಾಸಿಗ ಕಟ್ಟಿ ಮದುವೆಯಾಗುವುದೊಂದು, ಪಟ್ಟಗದ್ದುಗೆಯಲ್ಲಿ ರಾಜೇಂದ್ರನ ಮುಟ್ಟಿಕುಳ್ಳಿರುವುದೊಂದು, ಎಂಬುದು ಮೂರು ಆಗಬೇಕೆಂದರು. ಇದರಿಂದ ಚಿಂತೆ ಹುಟ್ಟಿದೆ. ನಮ್ಮ ಒಡೆಯರಾದರೊ ಇತರರಂತೆ ಈ ಹೆಣ್ಣಿನದೂ ಆಗಲಿಯೆಂದರು. ಆದರೆ ಅವರು ಅದಕ್ಕೊಪ್ಪುವುದಿಲ್ಲ. ಆದರೆ ತನ್ನ ಸತಿಯರನ್ನೂ ಬಲವಂತ ಮಾಡಲಾರದೆ ಒಡೆಯ ಚಿಂತೆಗೊಳಗಾದರು."

ಪಂಡಿತೆಯ ಮಾತನ್ನು ಕೇಳಿದ ಲಲನೆಯರಿಗೆ ಸಂತೋಷವಾಯಿತು. ರಾಜೇಂದ್ರಗೆ ತಮ್ಮ ಮೇಲಿನ ಅಭಿಮಾನವನ್ನು ಅರಿತುಮೆಚ್ಚಿದರು. ಅವರು ಮೊದಲು ತಮ್ಮೊಳಗೇ ಮಾತನಾಡಿ ಕೊನೆಗೆ ಇಂತೆಂದರು.

"ತಾಯಿಯ ಒಡಹುಟ್ಟಿದವನ ಮಗಳು ಉತ್ತಮ ನಾಯಿಕೆಯಲ್ಲವೆ. ಇದಕ್ಕೇಕೆ ಚಿಂತೆ? ಬೇಡಿದ ತೇಜಿಗಳನ್ನು ಕೊಟ್ಟು ಸುಖದಲ್ಲಿ ಮದುವೆಯಾಗಲಿ, ಅದು ನಮ್ಮ ಸರ್ವರ ಸಮ್ಮತ. ಕ್ಷತ್ರಿಯರಿಗೆ ಪಟ್ಟದರಸಿಯಿರುವುದು ಕ್ರಮವಲ್ಲವೆ? ನಾವಿದನ್ನು ಸಲ್ಲದೆನ್ನುವುವೆ? ಆಕೆಗೆ ಬಂದ ತೇಜವೇ ನಮ್ಮ ತೇಜವೆಂದು ತಿಳಿದೆವು. ವಲ್ಲಭನ ಇಚ್ಛೆಗೆ ಇದಿರಾಗುವವಳು ರಾಜಸುತೆಯಲ್ಲ. ನಾವೇನು ಬಳ್ಳಮಾನದ ಬಣಜಿಗರ ಪುತ್ರಿಯರೇ? ಎದೆಯಲ್ಲಿ ಒಂದಿದ್ದು, ಮಾತಿನಲ್ಲೊಂದು ನುಡಿಯೆವು. ರಾಜೇಂದ್ರನವಳನ್ನು ಸಂತೋಷದಲ್ಲಿ ತರಲಿ."

ಈ ಮಾತಿನಿಂದ ಭರತೇಶನ ಚಿಂತೆ ನೀಗಿತು. ಆ ಸಂತೋಷದಲ್ಲಿ ಆ ದಿನ ಕಳೆಯಿತು. ಮರುದಿನ ಭರತೇಶನು ತನ್ನ ಮಂತ್ರಿಯೇ ಮುಂತಾದವರೆದುರಿನಲ್ಲಿ ಒಸಗೆ ತಂದ ಹೆಣ್ಣುಗಳಿಗೂ ಖೇಚರ ಮಂತ್ರಿಗೂ ಉಚಿತವಾದ ಉಡುಗೊರೆಯಿತ್ತು ಮನ್ನಣೆಮಾಡಿ ಬೀಳ್ಕೊಟ್ಟನು. ಭಂಡಾರತಿಯೆಂಬ ತನ್ನ ಹೆರ್ಗಡತಿಯೊಡನೆ ತೊಂಡಿಲುಂಗಾರ, ತಾಳಿಬಂದಿ ಭೂಷಣದ ಕರಡಿಗೆಯನ್ನು ಕೊಟ್ಟು ಅವರೊಂದಿಗೆ ಕಳುಹಿಸಿದನು. ಪಡೆಯ ರಕ್ಷಣೆಗಾಗಿ ಚಿಯಂತಾಂಕನೊಬ್ಬನುಳಿದು, ಉಳಿದ ವ್ಯಂತರ, ಮ್ಲೇಚ್ಛ, ವಿದ್ಯಾಧರ ಮುಖ್ಯರೆಲ್ಲರನ್ನೂ ತಾಳಿಬಂದಿಯೊಂದಿಗೆ ಕಳುಹಿಸಿದನು. ಭರತೇಶನೊಲಿದ ಚಪ್ಪನ್ನ ದೇಶದ ಅರಸು ಮಕ್ಕಳೂ ಅಗ್ಗಳೆಯರೂ ತಾಳಿಬಂದಿಯ ಮಂಗಳವಸ್ತುಗಳು ಕೂಡಿರುವ ಮಂಗಲಯಾನದೊಂದಿಗೆ ಸೇರಿಕೊಂಡರು. ತಾಳಿಬಂದಿಯ ಒಸಗೆ ಅತ್ತ ಸಾರಲು ಭರತೇಶನಿತ್ತ ತನ್ನ ತಂಗಿಯರಿಗೆ ಹೇಳಿ ಕಳುಹಿಸಿದನು.

# ೧೯

# ಉಂಗುರ–ಉಡಿಗೆ

ದುರ್ಧರಿಪುರಾಯ ಮಥನನಾದ ಭರತಚಕ್ರೇಶ್ವರನ ಅರಸರು, ಸ್ಪರ್ಧಿಸುತ್ತಿರುವ ವಾದ್ಯಕೋಟಿಯ ಘೋಷವೇಳುತ್ತಿರಲು, ವಿಜಯಾರ್ಧಪರ್ವತವನ್ನು ಹತ್ತಿದರು. ನೆಲದ ಮೇಲೆ ನಡೆಯುವಂತೆಯೇ ಅವರೆಲ್ಲ ವಿಮಾನಗಳನ್ನೇರಿ ಗಗನಮಾರ್ಗದಲ್ಲಿ ಮುಂದುವರಿದರು. ಚಳಚಳನೆ ಸಾಗುತ್ತಿರುವ ಅಂಗಶೃಂಗಾರದ ಪ್ರಕಾಶವು ತಳತಳನೆ ಹೊಳೆಯುತ್ತಿತ್ತು.

ಅವರು ಆ ರೀತಿಯಲ್ಲಿ ಸಾಗುತ್ತಿರುವಾಗ ಭರತೇಶನ ಮಂತ್ರಿ ಬುದ್ಧಿಸಾಗರನು ಖೇಚರ ಮಂತ್ರಿಯೊಡನೆ ಒಂದು ವಿಷಯವನ್ನು ಪ್ರಸ್ತಾಪಿಸಿದನು.

''ನಮ್ಮ ಅರಸುಗಳು ನಿಮ್ಮರಸಗೆ ಕೈಮುಗಿವರಲ್ಲದೆ ಕಾಣಿಕೆ ಕೊಡುವಂತಿಲ್ಲ. ಆಗ ನಿಮ್ಮರಸನೂ ಕೈಮುಗಿಯಬೇಕು. ಕೆಳೆಯರೂ ನಾನೂ ಕಾಣಿಕೆಯಿಕ್ಕಿ ಕೈಮುಗಿದು ಕಾಣುವೆವು. ಆದರೆ ಚಕ್ರಿಯಂತೆ ತನಗೂ ಎಲ್ಲ ಮಾನ ಮರ್ಯಾದೆಗಳು ಸಲ್ಲಬೇಕೆಂದರಾದೀತೆ? ವಿಪ್ರನಾದ ನಾನೂ ನನ್ನ ಮಿತ್ರರೂ ಅರಸನ ಇಚ್ಛೆಗಾರರೂ ಇಷ್ಟು ತೇಜವನ್ನು ಸಂಧಾನಿಸುವೆವು. ರಾಜರೂ ವ್ಯಂತರೇಂದ್ರರೂ ಮಾನಿಗಳೆಂಬುದನ್ನು ನೀನು ನಿಮ್ಮರಸನಿಗೆ ತಿಳಿಸಬೇಕು. ಮದುವೆಗೆ ಬಂದವರನ್ನು ಆಳಿನಂತೆ ಕಾಣುವರೆ? ಅರಮನೆಗೆ ಬಂದ ತೇಜವೇನು ಕಿರಿದೆ? ಇದಕ್ಕೆ ನೀವೊಪ್ಪಬೇಕು.''

''ಅದು ಕಾರ್ಯ; ಲೇಸು,'' ಎಂದು ಖೇಚರ ಮಂತ್ರಿ ಒಪ್ಪಿದನು.

ಆಮೇಲೆ ಸುಮತಿ ಸಾಗರನು ಭರದಿಂದ ಮುಂದೆ ಸಾಗಿ ಈ ವಾರ್ತೆಯನ್ನು ನಮಿರಾಜನಿಗೆ ತಿಳಿಸಿದಾಗ, ಅವನು ಸಂತೋಷಗೊಂಡನು. ಕಾಳಿಂದಿ ಮಧುವಾಣಿಯರು ಹೋಗಿ ಯಶೋಭದ್ರಾದೇವಿಗೆ ಈ ಸಂಗತಿಯನ್ನು ಹೇಳಿದಾಗ ಅವಳು ಸಂತೋಷದಲ್ಲಿ ಓಲಾಡಿ, ಒಡತಿಯೆಂಬ ಅಭಿಮಾನವನ್ನೂ ಮರೆತು ತೋಳೆರಡು ತುಂಬಿ ಅವರನ್ನು ಅಪ್ಪಿಕೊಂಡಳು. ಅವರು ನಗರದ ಸಮೀಪಕ್ಕೆ ಬಂದರೆಂಬುದನ್ನು ಕೇಳಿ, ನಮಿರಾಜನು ಗರುವಿಕೆಯಿಂದ ತನ್ನ ದೊರೆಗಳನ್ನೂ ಮಂತ್ರಿಗಳನ್ನೂ ಇದಿರುಗೊಳ್ಳಲು ಸಿಂಗಾರದ ಠೀವಿಯಿಂದ ಕಳುಹಿಸಿದನು. ಬುದ್ಧಿಸಾಗರನು ಭೂಮಂಡಲದ ರಾಜರನ್ನೊಡಗೊಂಡು ಬರುವಾಗ ಸಮುದ್ರಕ್ಕೆದುರಾಗಿ ಹೋಗುವ ನದಿಯಂತೆ ಈ ಮಂತ್ರಿ ಬರುತ್ತಿದ್ದನು.

''ಸ್ವಾಮಿಯ ಮಂತ್ರಿಗೆ ಅವನ ಮಂತ್ರಿಯೇ? ನಮ್ಮ ದೊರೆಗಳಿಗೆ ಅವನ ದೊರೆಗಳೆ? ಪ್ರೇಮದ ತಮ್ಮನನ್ನು ಕಳುಹಿಸಬಾರದಿತ್ತೇ? ನಿಲ್ಲಿ ನಿಲ್ಲಿ?'' ಎಂದು ಭರತೇಶನ ಶತನು ನುಡಿದನು.

''ಅದರಿಂದ ಖೋಡಿಯೇನು? ನಮ್ಮ ಸ್ವಾಮಿಗೆ ಹೆಣ್ಣು ಜೋಡಿಸುವುದೊಂದೆ ಕಾರ್ಯವನ್ನು ನೋಡಬೇಕು. ಇವನ್ನೆಲ್ಲ ನೋಡಲಾಗದು'' ಎಂದು ಗುಟ್ಟಾಗಿ ಹೇಳಿದಾಗ ಶಠನು ತನ್ನ ಮಾತು ನಿಲ್ಲಿಸಿದನು.

''ಮೊದಲೆ ಹೆಣ್ಣನ್ನು ಕೊಡಲೊಲ್ಲದ ಅತಿ ಡೊಂಕುಮಾಡಿ ದೇಶದ ಹಂಗನ್ನೇ ತೊರೆದು ಮಾತನಾಡಿದವನಂತೆ. ಇದನ್ನೆಲ್ಲ ಈಗ ನೆನೆಯುವುದೇ? ಸೈರಿಸು,'' ಎಂದು ಚತುರನಾದ ಸಾಗರನು ತಿಳಿಸಿದನು.

''ಮುಂದೆ ದೊರೆಯನ್ನು ಸೋಲಿಸು. ನೀರೆಯು ಕೈಸೇರುವಾಗ ನಮಗಿಷ್ಟು ಸೋಲೇ? ಸರಸಮೋಹಗಳಲ್ಲಿ ಜಗಳ ಸಲ್ಲದು'' ಎಂದು ವಿಟನು ಹೇಳಿದನು.

''ಸೊಕ್ಕಿದವನ ಪಂಥ ದಕ್ಕಲಿ; ಹೋಗುವ' ಎಂದು ಕುಟಿಲನೂ ನುಡಿದನು.

''ನಮ್ಮ ದೊರೆಯ ಸೋದರಮಾವನ ಮಕ್ಕಳಲ್ಲವೆ ಇವರು? ಭರತೇಶನ ತೇಜವೆ ನಮಗೆ? ಅವರು ದೊರೆಗಳಿಗೆ ಇದಿರು ಬಂದಾರು. ನಮಗೆ ಯಾಕೆ ಬರುವರು?'' ಎಂದು ಬುದ್ಧಿಸಾಗರನು ತಿಳಿಸಿ ಮುಂದುವರಿದನು.

ಸಂತೋಷದಿಂದ ಇವರು ಬರಲು ನಮಿರಾಜನ ಮಂತ್ರಿ ಬಂದು ಇವರನ್ನು ಇದಿರುಗೊಂಡು ವಿನಯದ ನುಡಿಗಳನ್ನಾಡಿದನು. ಅನಂತರ ಅವರೆಲ್ಲರೂ ಗಗನವಲ್ಲಭ ಪುರವನ್ನು ಹೊಕ್ಕರು.

ಅವರು ಕಡೆಯ ಹಜಾರಕ್ಕೆ ಬರುವಾಗ ನಮಿರಾಜನು ಪಟ್ಟಗದ್ದುಗೆಯ ಒತ್ತಿನಲ್ಲಿ ನಿಂತು ಬರುವವರನ್ನೆಲ್ಲಾ ನೋಡಿದನು. ಆಗ ಬರುವ ಅರಸರ ಕಟ್ಟಿಗೆಕಾರರು ತಮ್ಮ ತಮ್ಮ ದೊರೆಗಳ ಬಿರುದನ್ನು ಹೇಳಿ, ಪರಿಚಯ ಮಾಡಿಸಿದರು.

''ಭರತರಾಜನ ಭಾಗ್ಯಕ್ಕೆ ಆಧಾರನು. ಸರ್ವ ನರಲೋಕಕ್ಕೆ ದೇವತೆಗಳ ಗುರುವಿನಂತಿರುವವನು, ಈತನೇ ಬುದ್ಧಿಸಾಗರ ಮಂತ್ರಿ ಶ್ರೇಷ್ಠನು'' ಎಂದು ವೇತ್ರಧರರು ಹೊಗಳಿದರು. ''ಇವರಿಬ್ಬರು ಭರತೇಶನ ಮಹಾ ಭುಜಗಳಿಗೆ ಸಮಾನರಾದ ಮೇಘೇಶ್ವರ ರಾಜ ಮತ್ತು ವಿಜಯರಾಜರು'' ಎಂದು ಹೇಳಿದರು. ಅನಂತರ ಮಾಗಧೇಂದ್ರ, ವರತನುದೇವ, ಪ್ರಭಾಸೇಂದ್ರನನ್ನೂ, ಅವರ ಯುವರಾಜರಾದ ಧ್ರುವಗತಿ, ಸುರಕೀರ್ತಿ, ಪ್ರತಿಭಾಸೇಂದ್ರರನ್ನೂ ತೋರಿಸಿದನು. ಆಮೇಲೆ ತಮಿಸ್ರಗುಹೆಯ ಕೃತಮಾಲೇಂದ್ರ ಆಲೀಢಖಂಡ ಗುಹೆಯ ನಾಟ್ಯಮಾಲೇಂದ್ರ, ವಿಜಯಾರ್ಧದೇವ, ಹಿಮವಂತದೇವ— ಎಂದು ಮುಂತಾಗಿ ನಮಿರಾಜನಿಗೆ ತಿಳಿಸಿದರು. ಅನಂತರ ಉಳಿದೆಲ್ಲರ ಪರಿಚಯವನ್ನೂ ನಮಿರಾಜನಿಗೆ ಮಾಡಿಸಿದರು. ಆಮೇಲೆ ಆರ್ಯಖಂಡದ ಐವತ್ತಾರು ದೇಶಗಳ ಅರಸರ ಪರಿಚಯನಾಯಿತು. ಕೊನೆಯಲ್ಲಿ ಭರತೇಶನ ಒಡಲಿಗೆ ಅಷ್ಟಾಂಗದಂತಿದ್ದ ಬುದ್ಧಿಸಾಗರ ಮಂತ್ರಿಗೆ ಅನುಕೂಲರಾಗಿರುವ ಜಾಣರ ಪರಿಚಯವೂ ಆಯಿತು.

ತರವರಿತು ಎಲ್ಲರಿಗೂ ಆಸನ ಕೊಡಲಾಯಿತು. ಸಿಂಹಾಸನದ ಬದಿಯಲ್ಲಿ ಹಸೆಯಲ್ಲಿ ಬುದ್ಧಿಸಾಗರ ಮಂತ್ರಿಯನ್ನು ಕುಳ್ಳಿರಲು ಹೇಳಿದನು.

''ಬುದ್ಧಿಸಾಗರ ಮಂತ್ರಿ ಕೇಳು. ಈ ದೊರೆಗಳೂ ಈ ವ್ಯಂತರೋದ್ಧಾರರಿವರು ಅಲ್ಲದಿರಲ್ಲ, ಇಂದು ಭರತೇಶನ ಸಂಪತ್ತಿನ ವೃದ್ಧಿಯಾಗಿದೆ. ಪರ್ವತದಂತಿರುವ ಇವರ

ಮಧ್ಯದಲ್ಲಿರುವ ಸಾರ್ವಭೌಮನಿಗೆ ಸರಿಯಾರುಂಟು? ಕೋಸಲವೆಲ್ಲಿ? ಹಿಮಾದ್ರಿಯೆಲ್ಲಿ? ಭೂಮಂಡಲವನ್ನೂ ಮೂರು ಸಾಗರಗಳನ್ನೂ ವಶಪಡಿಸಿಕೊಳ್ಳುವುದು ಸುಲಭವೆ? ಭರತೇಶನಂತೆ ಭಾಗ್ಯವನ್ನು ಯಾರು ಪಡೆದಾರು ? ಎಲ್ಲರೂ ಬಯಸಿದರೂ ಬರಲಾರದು. ಅದು ಬರಬೇಕಾದರೆ ಪೂರ್ವದಲ್ಲಿ ಪುಣ್ಯವನ್ನು ಮಾಡಿರಬೇಕು. ಅವನ ಸಿರಿಗೂ ಗುಣಕ್ಕೂ ಎಣೆಯಿಲ್ಲ'' ಎಂದು ನಮಿರಾಜನು ಹೇಳಿದನು.

''ಅಹುದು. ನಿಮ್ಮ ಭಾವನವರ ಭಾಗ್ಯಕ್ಕೆ ಎಣೆಯಿಲ್ಲ. ಅವರ ಘನತೆಯನ್ನು ನೋಡಿ ನೀನೇ ಮೆಚ್ಚಬೇಕು. ಸಿರಿಯು ಹೆಚ್ಚಲ್ಲ. ಅವನ ಜಾಣ್ಮೆಗೆ, ಕೀರ್ತಿಗೆ, ಸೌಂದರ್ಯಕ್ಕೆ, ಶೃಂಗಾರಕ್ಕೆ, ವಿಕ್ರಮಕ್ಕೆ, ಸುರಲೋಕವೇ ತಲೆದೂಗುವುದು. ನಿನ್ನ ಭಾವನು ಈ ನರಲೋಕದ ದೊರೆಯೇ? ಪುರುಷರಲ್ಲಿ ಎಣೆಯಿಲ್ಲ. ಅವನಿಗೆ ಸೌಂದರ್ಯದಲ್ಲಿ ಎಣೆಯಿಲ್ಲದ ತರುಣಿಯನ್ನು ಕೊಡಲು ಎಣಿಸಿದ ಜಾಣ್ಮೆಗೆ ಎಣೆಯಿಲ್ಲ —ನಮಿರಾಜ, ತಂದೆಗಳ ಕಾಲದಲ್ಲಿ ನಡೆದ ಬೀಯಗತನ ಮಕ್ಕಳ ಕಾಲದಲ್ಲಿ ಕೆಡಬಾರದೆಂದು ಉತ್ತಮ ಕಾರ್ಯವನ್ನೇ ನೀನು ನೆನೆದೆ, ನಿನ್ನ ವರ್ತನೆಗೂ ಎಣೆಯಿಲ್ಲ'' ಎಂದು ಬುದ್ಧಿಸಾಗರನು ಹೇಳಲು ನಮಿರಾಜನು ಇಂತೆಂದನು.

''ನಾನೇನನ್ನು ನೆನೆದಿರುವೆ? ಅವನ ಪುಣ್ಯವೇ ತಾನಾಗಿ ಪ್ರೇರೇಪಿಸಿತು. ಅದನ್ನು ಈ ರಾಜರೆಲ್ಲರ ಮುಂದೆ ಮಾಡುವ ಆನಂದವನ್ನು ಮಾತ್ರ ಬಯಸಿದೆ. ಇವರೆಲ್ಲ ನಮ್ಮ ಬಂಧುಗಳಾದರೂ ನಮ್ಮರಮನೆಗೆ ಬನ್ನಿ ಎಂದರೆ ಬರುವವರೇ? ನನಗಿವರನ್ನು ಕಾಣಬೇಕೆಂದು ಮದುವೆ ನೆವನದಿಂದ ಬರಿಸಿದೆನು.'' ಆ ಮಾತಿಗೆ ಎಲ್ಲರೂ ಪ್ರೀತಿಪಟ್ಟರು.

''ನೀವಿನ್ನು ಸ್ನಾನ ಭೋಜನಕ್ಕೆ ಏಳಿರಿ'' ಎಂದು ನಮಿರಾಜನು ಅವರನ್ನೆಲ್ಲ ಸಿಂಗರಿಸಿದ ಅರಮನೆಗಳಿಗೆ ಕಳುಹಿಸಿದನು. ಅವರಿಗೆಲ್ಲ ಬೇಕು ಬೇಕಾದ ಉಲುಪೆಗಳನ್ನು ಕಳುಹಿಸಿದನು. ಅತ್ತ ಯಶೋಭದ್ರಾದೇವಿಯು ಭಂಡಾರವತಿ ಮೊದಲಾದವರನ್ನು ಕಂಡು ಅರಮನೆಯೊಳಗೆ ಇಂಬಾಗಿ ಇರಿಸಿಕೊಂಡಳು.

ಮರುದಿನ ಎಲ್ಲರೂ ಬಂದು ನಮಿರಾಜನೊಡನೆ ತಾವು ಬಂದ ಒಸಗೆಗೆ ತಯಾರಾಗಲು ಕೇಳಿಕೊಂಡರು.

''ಇಷ್ಟೇಕೆ ತವಕ? ಸೈರಿಸಿ. ನಾಲ್ಕು ದಿವಸವಿರಲಾಗದೆ? ನೀವು ನಿಮ್ಮ ನಗರಕ್ಕೆ ಯಾಕೆ ಬರುತ್ತೀರಿ? ಇಂದು ಹೆಣ್ಣಿನ ನೆವನದಿಂದ ಬಂದಿರಿ; ಅದು ನನ್ನ ಪುಣ್ಯವು; ಇನ್ನು ನಾವು ಮಾಡುವ ಆರ್ತಿಗಳೆಲ್ಲ ಸಂದ ಬಳಿಕ ಹೋಗಿರಿ.''

ಎಂದು ನಮಿರಾಜನು ಅವರನ್ನು ಮನ್ನಿಸಲೆಂದು ನಿಲ್ಲಿಸಿಕೊಂಡನು. ಅದರಂತೆ ಗಾಯನ ಗೋಷ್ಠಿಯಲ್ಲಿ, ಸಾಹಿತ್ಯ ಗೋಷ್ಠಿಯಲ್ಲಿ, ನವೀನ ನಾಟಕ ಶಾಲೆಯಲ್ಲಿ ಲೀಲೆಯನ್ನು ತೋರಿಸಿ, ಅವರನ್ನೆಲ್ಲ ಮನ್ನಿಸಿದನು. ವಾದ್ಯಾವಳಿ, ಮಹೇಂದ್ರಜಾಲಿನಿ, ವಸಂತೋದ್ಯೋಗಿ ಮೊದಲಾದ ಗೋಷ್ಠಿಗಳಾದುವು. ವಿದ್ಯಾಧರನಲ್ಲವೆ ನಮಿರಾಜ? ಒಂದೊಂದು ಚೋದ್ಯವನ್ನು ತೋರಿಸಿ ಮನ್ನಿಸಿದನು. ಆಗ ಅವರೆಲ್ಲ ಆ ಮನ್ನಣೆಗಳೆಲ್ಲಾ ಸಾಕೆಂದು ಇನ್ನು ಉಂಗುರ ಉಡಿಗೆಯಾಗಲೆಂದೂ ಮತ್ತೆ ಸಕಲ ವಿದ್ಯಾಧರ ಕಲೆಯನ್ನು ತೋರಿಸಬಹುದೆಂದೂ ತಿಳಿಸಿದರು.

"ಆ ಕಾರ್ಯವಾದ ಮೇಲೆ ನೀವು ನಿಲ್ಲುವಿರಾ? ಏಕೆ ತತ್ತರಗೊಂಬುದು?" ಎಂದವರನ್ನು ನಿಲ್ಲಿಸಿದನು.

"ಒಡೆಯನ ಕಾರ್ಯವನ್ನು ಮರೆತು ಹೋಗಿರುವುದು ಸರಿಯೇ?"

"ನಿಮ್ಮ ಒಡೆಯನ ಕಾರ್ಯದ ಲಗ್ನಕ್ಕೆ ತಡವುಂಟು."

ಈ ರೀತಿಯಲ್ಲಿ ಅವರನ್ನು ತಡೆದು ನಿಲ್ಲಿಸಿಕೊಂಡು ದಿನದಿನಕ್ಕೆ ಒಂದೊಂದು ರೀತಿಯ ಭೂಷಣ ವಸ್ತ್ರಗಳ ಉಲುಪೆಗಳಿಂದಲೂ, ದಿನ ದಿನಕ್ಕೆ ಒಂದೊಂದು ರೀತಿಯ ಗೋಷ್ಠಿಯಿಂದಲೂ, ಅವರನ್ನು ಹದಿನಾರು ದಿನ ನಿಲ್ಲಿಸಿಕೊಂಡು ಸನ್ಮಾನದಿಂದ ಮನ್ನಿಸಿದನು. ಅಯ್ವತ್ತಾರು ಬಾರಿ ತನ್ನರಮನೆಗೆ ಎಲ್ಲರನ್ನೂ ಕರೆಸಿಕೊಂಡು ಔತಣ ಮಾಡಿಸಿದನು. ಉಡಿಗೆ ಉಡುಗೊರೆಗಳನ್ನಿತ್ತನು. ಈ ರೀತಿಯಲ್ಲಿ ನಮಿರಾಜನು ಮಾಡಿದ ಸನ್ಮಾನಗಳಿಗೆ ಸ್ನೇಹಿತರು ಮೆಚ್ಚಿದರು. ಪ್ರಧಾನಿ ಭಾಷೆಂದನು : ವ್ಯಂತರೂ ರಾಜರೂ ಸುಖಮುಖರಾದರು.

ಉದ್ದಂಡರಾಜರೇ ಮುಂತಾಗಿ ಬಂದಿದ್ದ ಅರಸರೆಲ್ಲರೂ ತಮ್ಮ ಮುದ್ದು ಗೆಲಸವನ್ನು ಮಾಡಬೇಕೆಂದು ಹೇಳಿದಾಗ ನಮಿರಾಜನು ಬಿರುದಿನವರ ಅನುಮತಿಯಿಂದ ಮುಂದಿನ ಮಂಗಲಕಾರ್ಯಗಳಲ್ಲಿ ನಿರತನಾದನು.

ಅಂದು ಹಗಲು ಜಿನೇಂದ್ರ ಪೂಜೆಯನ್ನೂ, ಮುನಿಭುಕ್ತಿಯನ್ನೂ ಬ್ರಾಹ್ಮಣ ಸಂತರ್ಪಣೆಯನ್ನೂ ಮಾಡಿ ರಾತ್ರಿಗೆ ಮಂಗಲಕಾರ್ಯವನ್ನೂ ಮಾಡತೊಡಗಿದನು. ಸಿಂಗರಿಸಿದ ಪುರದಲ್ಲಿ ಆನೆ, ಕುದರೆ ರಥ ಪತಾಕೆಗಳೂ ವಿಮಾನಗಳೂ ಸಂಗಡಿಸಿದುವು. ಮಂಗಲಮುಖಿಯೆಂಬ ಹೆಣ್ಣಾನೆಯನ್ನು ಸಿಂಗರಿಸಿ ಅದರ ಮೇಲೆ ಉಂಗುರ ತೊಂಡಿಲು ತಾಳಬಂದಿಗಳನ್ನು ಕುಂಭಗಳ ಮೇಲೆ ಇರಿಸಿದರು. ಹೆಂಗಸರು ಗಂಡಾನೆಯನ್ನೇರಿದರೆ ಅಭಿಮಾನ ಭಂಗವೆಂದು ಬಲ್ಲವರು ಹೇಳುತ್ತಾರೆ. ಪುರುಷ ಗಂಡಾನೆಯನ್ನೇರಿದಾಗ ಸ್ತ್ರೀಯು ಆ ಪುರುಷನೊಂದಿಗೆ ಏರಿ ಹೋಗುವುದು ಕ್ರಮ. ಹಾಗಾಗಿ ಮಂಗಲ ಮುಖಿಯನ್ನು ಸಿಂಗರಿಸಿ ಮೆರವಣಿಗೆಗೆ ಅಣಿಗೊಳಿಸಿದರು. ಮಾಣಿಕ್ಯಗಳನ್ನು ತೊಟ್ಟು ಆನೆಯಯನ್ನೇರಿ ಮಧುವಾಣಿಯು ಚಿನ್ನದ ಹರಿವಾಣದಲ್ಲಿ ಉಡಿಗೆಗಳನ್ನಿಟ್ಟುಕೊಂಡು ಕೇರಿಕೇರಿಗಳಲ್ಲಿ ತೋರಿಸಿಬಂದಳು. ಜಗಲಿಯಲ್ಲಿ ಮಾಡದಲ್ಲಿ, ದೀಪಗಳೂ ಪಂಜು ದೀವಿಗಳೂ ಚೆಲ್ಲಿದಂತಿದ್ದು ಗಗನವಲ್ಲಭಪುರವು ನಕ್ಷತ್ರಗಳಿಂದ ಶೋಭಿಸುವ ಗಗನದಂತೆ ತೋರಿತು.

ದುಂದುಭಿ ಡಿಂಡಿಮ ನಿಸ್ಸಾಳಗಳೆಂಬ ವಾದ್ಯಗಳು ಮೊಳಗಿ ಚಕ್ರಿಯ ಸೌಂದರ್ಯ ಉದ್ಘಾಷವು ವೃಂದಾರಲೋಕವನ್ನೂ ಮುಟ್ಟಿತು. ಮೆರವಣಿಗೆಯು ಹೋಗುತ್ತಿರುವಾಗ ಪಾತ್ರ ನಿವಾಳಿಗಳು ಅಲ್ಲಲ್ಲಿ ಆರತಿಯೆತ್ತಿ ಸ್ತೋತ್ರ ಶೋಭನಗಳನ್ನು ಹಾಡುತಿದ್ದರು. ಪ್ರಾತ ಚಾಮರವೇತ್ರಗಳನ್ನು ಹಿಡಿದವರೆಲ್ಲ ಮುಂದುವರಿದು, ಮೆರವಣಿಗೆಯು ಕ್ಷತ್ರಿಯರ ಮಂದಿರಕ್ಕೆ ಬಂತು. ಆಗ ನಮಿರಾಜನು ವಿನಯದಿಂದ ಬಿನ್ನವಿಸಿದನು. ಅವನು ತನ್ನ ಮಂತ್ರಿಯನ್ನು ಅಲ್ಲೇ ನಿಲ್ಲಿಸಿ, ತಾನು ತನ್ನ ರಾಜಮಂದಿರಕ್ಕೆ ಹೋದನು. ಅಲ್ಲಿ ಶೃಂಗಾರವಾದ ತಂಗಿಯನ್ನು ತೆರೆಯಮರೆಯಲ್ಲಿ ಸುಮಂಗಲೆಯರೊಂದಿಗೆ ನಿಲ್ಲಿಸಿದನು.

ತಾಯಿಯೊಂಟಿಗೆ ತಂಗಿಯು ಮಂಗಲಗೃಹದಲ್ಲಿ ಶೋಭಿಸಲು ದಿಬ್ಬಣದ ಜನರನ್ನು ಒಳಗೆ ಕರೆಯಿಸಿಕೊಂಡನು.

ವೇಷಭೂಷಣಗಳ ಪ್ರಕಾಶದಿಂದ ಶೋಭಿಸುವ ಅವರೆಲ್ಲರೂ ಬಂದು ದೀರ್ಘಗೃಹವೆಂಬ ಕೊಳದ ನಡುವೆ ತಾವರೆಯಂತೆ ಬೆಡಗಿನಿಂದ ಒಪ್ಪಿರುವ ಬಂದಿಯ ಹರಿವಾಣವನ್ನು ನೋಡಿದರು. ಅದನ್ನು ಜಾಣರಾದ ಅರಸರೆಲ್ಲ ತಮ್ಮ ಸ್ವಾಮಿಯ ಪ್ರಾಣಕಾಂತೆಯ ತೊಡವೆಂದು ಕಾಣಿಕೆಯನ್ನಿಟ್ಟರು. ಅದನ್ನು ಕಂಡ ಹೆಣ್ಣಿನ ತಾಯಿ ಹಿಗ್ಗಿದರು. ಎಲ್ಲರಿಗೂ ಆಸನಗಳನ್ನು ಅಳವಡಿಸಿದ ಮೇಲೆ ನಮಿರಾಜನೂ ಕುಳಿತನು. ಆಗ ಬ್ರಾಹ್ಮಣರು ಸಿದ್ಧಾಂತ ವಿನ್ಯಾಸದಲ್ಲಿ ಮಂಗಳಾಷ್ಟಕವನ್ನು ಓದಿದರು. ಅದರೊಂದಿಗೆ ಗಾಯನವೂ ಆಯಿತು. ಹೆಂಗಸರು ಶೋಭನವನ್ನೂ ಹಾಡಿದರು. ಅಷ್ಟರಲ್ಲಿ ಶ್ರೇಷ್ಠವಾದ ಲಗ್ನವು ಬಂತೆಂದು ಹೇಳಿದಾಗ ನಮಿರಾಜನೊಮ್ಮೆ ತಿರುಗಿ ನೋಡಿದನು. ಆಗ ಅವನ ಮಂತ್ರಿಯು, ''ಭರತೇಶನು ಕಳುಹಿಸಿದ ಬಂಗಾರವೀಗ ದೇವರ ತಂಗಿಗೆ ಸಲ್ಲಲಿ'' ಎಂದು ಹೇಳಿದನು.

''ನಮ್ಮ ದೇವರ ಮನೆಯಲ್ಲಿ ಬಂಗಾರ ಹಲವುಂಟು. ಉಂಗುರ ತೊಂಡಿಲು ಬಂದಿ ಮತ್ತು ಹೊನ್ನ ಕರೆಯ ಸೀರೆಗಳಿವು ನಾಲ್ಕು ಪುಣ್ಯಾಂಗನೆಗೆ ಸಲ್ಲಲಿ'' ಎಂದು ಮಂತ್ರಿಯು ಹೇಳಿದನು. ಅದನ್ನು ನೋಡಿದ ಗೆಳೆಯರು ರಾಜರಿಂದ ಕಪ್ಪವನ್ನುಕೊಳ್ಳುವ ಭರತೇಶನು ನಮಿರಾಜನ ತಂಗಿಗೆ ಕಪ್ಪವನ್ನು ಕಳುಹಿಸಿರುವನೆಂದು ನಗೆಯಾಡಿದರು. ನಮಿರಾಜನು ಸಂತೋಷದಿಂದ ಆಭರಣದ ಹರಿವಾಣವನ್ನೆತ್ತಿ ಮಧುವಾಣಿಯ ಕೈಗಿತ್ತನು. ಶ್ರೀ ದೇವಿಗೆ ಅರುಣನು ಪದ್ಮವನ್ನೊಯ್ಯುವಂತೆ ಆಕೆ ಅದನ್ನು ತೆರೆಯಾಚೆಗೆ ಕೊಂಡು ಹೋದಳು. ಜಯ ಶೋಭನ ಹಾಡುಗಳು ಗೀತಾವಾದ್ಯಗಳ ಮಂಗಳ ಘೋಷವೆಬ್ಬಿಸುವಾಗ ಸಖಿಯರು ತೊಂಡಿಲು ಉಂಗುರ,ಸೀರೆ ಬಂದಿಗಳನ್ನು ಮದುಮಗಳಿಗೆ ಅನುಗೊಳಿಸಿದರು. ಕತ್ತಲೆಯಲ್ಲಿ ಪದ್ಮವು ಅರಳಿದಂತೆ ಮುತ್ತಿನ ತೊಂಡಿಲು ತಲೆಯಲ್ಲಿ ಒಪ್ಪಿತು; ಭರತೇಶನ ಸಾಮರ್ಥ್ಯವನ್ನು ಎತ್ತಿ ತೋರಿಸುವಂತೆಯೂ ಇತ್ತು; ರತ್ನದ ಕೀಲಣೆ ಗುಣಕೆಯಿರುವ ತಾಳಿಬಂದಿಯು ಆಕೆಯ ಕೊರಳಲ್ಲಿ ಶೋಭಿಸಿತು. ಭರತೇಶನಿನ್ನು ಈ ನೀರೆಯ ಕೈವಶನಾಗಿ ಇರುವನೋ ಎನ್ನುವಂತೆ ಅರಸನ ರೂಪಿನ ಸಣ್ಣ ಮುದ್ರಿಕೆ ಆಕೆಯ ಕಿರುಬೆರಳಲ್ಲಿ ಒಪ್ಪಿತು. ಚಿನ್ನ ಮುತ್ತುಗಳ ಸರಗಿನ ಸೀರೆಯು ಆಕೆಯ ಮೈಗೆ ಸಿರಿಸಿಂಗಾರ ದಂತೆ ಒಪ್ಪಿತು. ತಾಳಿಬಂದಿಯನ್ನು ಕಟ್ಟಿದಾಗ ಹೊಸಕಾಂತಿಯಿಂದ ಮದುಮಗಳು ಶೋಭಿಸಿದಳು.

ಆ ಮೇಲೆ ಯಶೋಭದ್ರಾದೇವಿಯು, ಶ್ರೀ ಸುಭದ್ರಾದೇವಿಯನ್ನು ''ಭರತರಾಜನ ರಾಣಿವಾಸಕ್ಕೆ ತಲೆಮಣಿಯಾಗಿ ಸುರಸುಖದಲ್ಲಿ ಓಲಾಡು'' ಎಂದು ಹರಸಿ ಮುತ್ತಿನ ಸೇಸೆ ಹಾಕಿದಳು. ನಮಿರಾಜನ ಅರಸಿಯರೂ ವಿನಮಿರಾಜನ ಹೆಂಡಿರೂ ಬಾಂಧವರೆಲ್ಲರ ಕಾಂತೆಯರೂ ಸುಭದ್ರಾ ದೇವಿಗೆ ಸೇಸೆ ತಳಿದರು. ನಮಿರಾಜನು ತುಂಬಿದ್ದ ಜನರೆಲ್ಲರಿಗೂ ತಾಂಬೂಲವನ್ನೂ ವಸ್ತ್ರಭೂಷಣಗಳನ್ನು ಇತ್ತು ಅವರನ್ನು ಬೀಳ್ಕೊಟ್ಟನು.

ಬುದ್ಧಿಸಾಗರ ಮಂತ್ರಿಯಾಗ ಮುಂಬಾಗಿಲವರೆಗೆ ಹೋದವನು. ಅಲ್ಲಿಂದಲೇ ಮರಳಿ

ಬಂದನು. ''ಇವುಗಳನ್ನು ಸ್ವಾಮಿಯು ಕಳುಹಿಸಿರುವನು. ಇದು ಅತ್ತಾಜಿಗೆ, ಇದು ಮೈದುನರಿಗೆ ಇದು ಈ ಮನೆಯ ಮಾನಿನಿಯರಿಗೆ'' ಎಂದು ವಸ್ತ್ರಾಭರಣಗಳನ್ನು ತರಿಸಿ ಮನೆಯನ್ನು ತುಂಬಿಸಿದನು. ಹರುಷದಲ್ಲೇ ಆ ರಾತ್ರಿ ಕಳೆದುಹೋಯಿತು. ಬೆಳಗಾದೊಡನೆ ಎಲ್ಲರಿಗೂ ಔತಣವಾಯಿತು. ನಮಿರಾಜನು ನೆರೆದ ಬಂಧುಗಳೊಡನೆ ಇನ್ನೊಂದು ಕಾರ್ಯಕ್ಕೆ ನೆರವಾಗಬೇಕೆಂದು ಕೇಳಿಕೊಂಡನು.

''ಭರತೇಶನ ಮಂತ್ರಿಗಳು ಪರಿವಾರದೊಡನೆ ಮುಂದೆ ನಡೆಯಲಿ. ನಾವು ಹೆಣ್ಣನ್ನು ಕೊಟ್ಟವರಲ್ಲವೆ, ಹಿಂದಿನಿಂದ ಹೋಗುವ. ಅದಕ್ಕೆ ನೀವೆಲ್ಲರೂ ನಮ್ಮೊಡನಿರಬೇಕು.''

ಅದಕ್ಕೆಲ್ಲರೂ ಒಪ್ಪಿಕೊಂಡರು. ಬುದ್ಧಿಸಾಗರನ ಫಲವೂ ದಕ್ಕಿತೆಂದು ನಮಿರಾಜನು ನುಡಿದು, ಉಳಿದವರಿಗೆಲ್ಲ ಉಡುಗೊರೆಯಿತ್ತು ವ್ಯಂತರರ ಬೀಡಿಗೆ ನಡೆದನು. ಹಿಮವಂತಿದೇವ, ವಿಜಯಾರ್ಧದೇವ, ಮಾಗಧ—ಮೊದಲಾದವರೊಡನೆ ಮಮತೆಯ ಮಾತನ್ನಾಡಿ ಮನ್ನಣೆಯಿತ್ತು ಮರಳಿ ಬಂದನು.

ಅನಂತರ ನಮಿರಾಜನು ಒಳಗಿನ ಚಾವಡಿಯಲ್ಲಿ ಕೆಳೆಯರನ್ನೂ ಮಂತ್ರಿಗಳನ್ನೂ ಕರೆಸಿ ಮಾತನಾಡಿದರು.

''ನಿಮ್ಮ ಅರಸನ ಕಾರ್ಯವು ಗೆಲವಾಯಿತಲ್ಲವೆ?''

''ಇಳೆಗೊಡೆಯನಾದ ದೊಡ್ಡ ದೊರೆಗಳನ್ನು ನಿನ್ನ ಬಾಗಿಲಿಗೆ ಬರಿಸಿಕೊಂಡ ಮೇಲೆ ಗೆಲವು ನಿನ್ನದೋ? ನಮ್ಮ ಅರಸನದೋ? ನೀನೇ ಹೇಳು.''

''ಅದು ಸಾಕು, ನಾಳೆ ವಿನಮಿ ಬಂದು ಚಕ್ರಿಗೆ ಮದುವೆಗೆ ಮಾಡುವನು. ಸಂತೋಷದಿಂದ ನೀವಿನ್ನು ತೆರಳಬೇಕು.'' ಎಂದು ನಮಿರಾಜನು ಗದಕಿನ ಮಾತನ್ನಾಡಿದನು.

''ಹದಿನಾರು ದಿನ. ನೀನು ಹೇಳಿದಂತಿದ್ದು ಕೊನೆಯಲ್ಲಿ ನೀನಿಲ್ಲದೆ ನಾವು ಹೋಗುವವೇ? ನೀನಿಲ್ಲದೆ ಮದುವೆಯು ರಮ್ಯವಾದೀತೆ? ನೀನಿದನ್ನು ನುಡಿಯುವುದೇ?'' ಎಂದವರು ಕೇಳಿದರು.

ನಾನೆಂತು ಬರಲಿ? ನನ್ನನ್ನು ಕಂಡಾಗ, ನಿಮ್ಮರಸನು, ''ಬಾ ನಮಿನಾಮ'' ಎಂದು ಕರೆಯುವನು. ''ಏನಿರ್ಪೆ ನಮಿರಾಜ'' ಎಂದು ಕರೆವುದನ್ನು ಬಿಟ್ಟು ಅವನು ಹಾಗೆ ಕರೆಯುವುದು ಗುಣವೇ? ರಾಜವಂಶದಲ್ಲಿ ಹುಟ್ಟಿದವರನ್ನು ರಾಜರೆನ್ನದೆ ಪೂಜಿತಗೆಡಿಸಿ ಹೇಳಿದರೆ ರಾಜತ್ವಕ್ಕದು ಭಂಗವಲ್ಲವೆ? ನಾನು ಬರಲಾರೆನು. ಷಟ್ಖಂಡ ಪತಿಗೆ ಕೈಮುಗಿದು ಕಾಣಿಕೆಯಿತ್ತು ಬೇರೆಡೆಯಲ್ಲಿ ಕುಳಿತುಕೊಳ್ಳುವೆನು. ಮಾತನಾಡುವಾಗ ನೀವು ತಾವೆನಬೇಕು. ರಾಜನೆಂದು ನಡೆಸಿಕೊಳ್ಳಬೇಕು ನನ್ನನ್ನು.''

''ನಮ್ಮ ಚಕ್ರಿಯಿಂದ ಈ ಮೊದಲು ಯಾರೂ ರಾಜರೆಂದು ಕರೆಸಿಕೊಂಡವರಿಲ್ಲ. ನಿನ್ನನ್ನು ಇನ್ನು ರಾಜನೆಂದು ಕರೆಸುವೆವು. ಸತಿಯರ ಜನಕರನು ಬನ್ನಿ. ಕುಳ್ಳಿರಿ ಎನ್ನುವನು. ನಿನ್ನನ್ನೂ ಅಂತೇ ಕರೆಸಬೇಕೇನು?''

''ನೀವದನ್ನು ಮಾಡಿಸಬೇಡವೇ?''

''ನಾವು ಅಳುಕುವೆವು. ನಿನ್ನ ಭಾವನೆಂದರೆ ದೇವೇಂದ್ರನ ನಡೆಗೂ ನಗುವನು. ಆ ವಾಕ್ಯವೊಂದು ಬೇಡ ನಿನಗೆ.''

''ನರಪತಿ ತಾನಾಗಿ ಸುರಪನನ್ನು ನಗುವನು ಎಂದು ಹೇಳಿ ನನ್ನನ್ನು ಉಬ್ಬಿಸುವಿರಿ. ಒಳ್ಳೆದಿದು.''

''ದೇವೇಂದ್ರನು ಮೋಕ್ಷಗಾಮಿಯೆ? ಅವನಿಗೆ ಗರುವಿಕೆಯಿಲ್ಲ, ನಮ್ಮರಸನ ಗಂಭೀರಕ್ಕೆ ಅಂಬುಧಿಯೂ ಎಣೆಯಲ್ಲ, ಜಿನನಿದಿರಲ್ಲಿ ವಿಜೃಂಭಿಸಿ ಕುಣಿವನೆಂದು ದೇವೇಂದ್ರನನ್ನೂ ನಗುವನು.''

''ಹಾಗಾದರೆ ತಾನೂ ತೆಪ್ಪಗೆ ಅರ್ಚಿಸಲಿ, ನುತಿಸಲಿ, ನರ್ತಕಿಯರ ರೀತಿಯಲ್ಲಿ ಕುಣಿದಾಡುವುದೇಕೆ? ಜನಭಕ್ತಿಯಿಂದು ಸರ್ವಾಂಗ ಭ್ರಾಂತಿಯನ್ನು ತೋರಿಸುವುದೇಕೆ? ನೀರೆಯರನ್ನು ಕೂಡಿಕೊಂಡು ಇಂದ್ರನ ಆನೆಯನ್ನೇರಿ ಜಿನನ ಸಭೆಗೆ ಬರುವಾಗ ಎಲ್ಲರಿಗೂ ತೋರಿಸುವ ಚಪಲವೇಕೆ? ತನ್ನ ನಲ್ಲಳ ಲಜ್ಜೆಯನ್ನು ಮಾರಬೇಕೆ? ಹೆಂಡತಿಯನ್ನು ಬಿಟ್ಟು ಬಂದು ಜಿನನನ್ನು ಕಂಡರೆ ಆಗುವುದಿಲ್ಲವೆ? ಪುಂಡರೂ ಪೋಕರೂ ದಂಡನ್ನೋಯ್ಯುವಾಗ ಹೆಂಡತಿಯರನ್ನೂ ಕೊಂಡುಹೋಗುವ ಅಂದವೇಕೆ?

''ಅವನ ಗಂಭೀರಕ್ಕೆ ಅವನೆ ಸಾಟಿ. ಸಂಪ್ರೀತಿಯಿಂದ ನಿನ್ನನ್ನು ನಮಿರಾಜನೆನ್ನುವನು ಅಷ್ಟು ಸಾಲದೆ? ನೀವು ತಾವೆಂದು ನುಡಿಯನು. ನೀನು ಪ್ರೀತಿಸಿ ಬಂದರೆ ಸಾಕು.''

''ಇದಕ್ಕೆ ಒಪ್ಪಿದೆನು. ಇಂದು ನೀವು ತೆರಳಿ. ನಾವು ನಾಳೆ ಬರುವೆವು.''

ಈ ರೀತಿಯಲ್ಲಿ ವಾಗ್ವಾದವಾದಮೇಲೆ ಅವರೆಲ್ಲ ಸಂತೋಷದಿಂದ ಕುಪ್ಪಸ ಸಿಡಿವಂತೆ ಮೈಯುಬ್ಬಿ ನಮಿರಾಜಗೆ ಕೈಮುಗಿದು ಹೊರಟರು.

ಭರತೇಶನೆಡೆಯಿಂದ ಬಂದಿದ್ದ ನಂಬುಗೆಯ ಜನರಿಗೆ, ಭಂಡಾರವತಿಗೆ ಇತರ ಹೆಂಗಸರಿಗೆಲ್ಲ ತಾಯಿಯು ಕೈಮುಟ್ಟಿ ಉಡುಗೊರೆ ಕೊಡಲೆಂದು ಅಣ್ಣತಮ್ಮಂದಿರಿಬ್ಬರೂ ಒಡವೆ ವಸ್ತುಗಳನ್ನು ಕಳುಹಿಸಿದರು. ಮಕ್ಕಳಿಬ್ಬರೂ ಕಳುಹಿಸಿದ ವಸ್ತುಗಳನ್ನೆಲ್ಲ ತಾಯಿಯು ಉಡುಗೊರೆಯಿತ್ತಳು.

ಆಗ ಭಂಡಾರವತಿಯು ಸುಭದ್ರಾದೇವಿಗೆ ಕೈಮುಗಿದು ನುಡಿದಳು.

''ಏಳಿ ದೇವಿಯರೆ. ನಮ್ಮೂರಿಗೆ ಹೋಗುವ. ರಾಜರನ್ನೆಲ್ಲ ಕೂಡಿಕೊಂಡು ಮಂತ್ರಿಗಳು ಹೆಬ್ಬಾಗಿಲಲ್ಲಿ ಸಮಯ ಕಾಯುತ್ತಿದ್ದಾರೆ. ನಮಸ್ಕರಿಸಿ ತಾಯಿಗೆ; ಅಷ್ಟರಲ್ಲಿ ಪಲ್ಲಕ್ಕಿ ಬರುವುದು. ನಮ್ಮ ಚಕ್ರಿಯು ನಿಮ್ಮ ಹಾದಿಯನ್ನೇ ನೋಡುತ್ತಿರುವರು.''

ಸುಭದ್ರಾದೇವಿ ನಗುತ್ತ ತಲೆತಗ್ಗಿಸಿದಳು.

ಆಗ ನಂಬುಗೆಯ ದಾಸಿಯರು ಹತ್ತಿರ ಬಂದು ಕೈಮುಗಿದು ಹೇಳಿದರು.

''ಅಮ್ಮಾ, ಚಿತ್ತೈಸಬೇಕು. ಇನ್ನು ಲೋಗರ ಮನೆಯಾಕೆ? ನಮ್ಮ ಮನೆಗೆ ಹೋಗುವ, ನಿಮ್ಮ ಮೇಲೆ ಅರಸ ಕೋಪಿಸಲಾರ. ತಡವೇಕಾಯಿತೆಂದು ನಮ್ಮ ಮೇಲೆ ಕೋಪಿಸುವನು. ನೀವು ನಾಳೆ ಬಂದರೆ ಮದುವೆಯು ನಾಡಿದ್ದಾಗುವುದು. ಅದನ್ನು ನಮ್ಮ ಸ್ವಾಮಿ ಸಹಿಸುವನೇ? ಏಳಿ, ಇಂದೇ ನಮ್ಮೊಡನೆ ಬನ್ನಿ.''

''ನಾಳೆ ನೀವು ಹೋದರೇನು? ಇದು ಹೋಗದಿದ್ದರೆ ನಿಮ್ಮರಸನಿಗೆ ಏನಾಗುವುದು?'' ಎಂದು ಇನ್ನೊಬ್ಬಳು ಕೇಳಿದಳು.

ಸುಭದ್ರಾದೇವಿ ಈ ಮಾತುಗಳನ್ನು ಕೇಳುವಾಗಲೂ ಹೊಳೆಯುವ ಉಂಗುರವನ್ನು ನೋಡುತ್ತ ನಗುತಿದ್ದಳು.

''ಉಂಗುರದೊಳಗಿದ್ದ ರೂಪು ನಿಮಗೆ ಸುಖಸಂಗವನ್ನು ಮಾಡುವುದೇ? ನನ್ನ ಸಂಗಡ ಬನ್ನಿ. ಸ್ವಾಮಿಯನ್ನು ತೋರಿಸುವೆನು.'' ಎಂದೊಬ್ಬ ರಸಿಕಳು ನುಡಿದಳು.

ಈ ರೀತಿಯಲ್ಲಿ ಒಬ್ಬೊಬ್ಬರೊಂದೊಂದು ವಿನೋದವನ್ನಾಡುವಾಗಲೂ ಸುಭದ್ರಾದೇವಿಯು ಅಂತಿಂತೆಂದು ಹೇಳದೆ ಅದನ್ನು ಕೇಳಿ ನಗುತ್ತ , ಮನ್ಮಥನನ್ನು ಆರಾಧಿಸುವ ಮೋಹಿನಿದೇವಿಯಂತೆ ಶೋಭಿಸುತ್ತಿದ್ದಳು.

''ಇನ್ನೇಕೆ ತವಕ? ನಿಮ್ಮೊಡತಿ, ನಿಮ್ಮೊಡೆಯನ ಸನ್ನಿಧಿಗೆ ನಾಳೆಯೇ ಬರುವಳು. ನಮ್ಮ ಮನೆಯು ಖಿನ್ನವಾಗುವುದು.'' ಎಂದು ತಾಯಿ ಯಶೋಭದ್ರಾದೇವಿ ಹೇಳಿದಳು.

''ಮೃದುವಾದ ಪದ್ಮಗಳು ಇವು. ನಾಳೆ ಚಕ್ರಿಯನ್ನು ಒದೆದು ಲೀಲೆಯನ್ನು ಮಾಡುವವು.'' ಎಂದು ಅಲ್ಲಿನ ಹೆಂಗಸರೆಲ್ಲ ಸುಭದ್ರಾದೇವಿಯ ಕಾಲುಹಿಡಿದು ಕಣ್ಣಿಗೊತ್ತಿಕೊಂಡು ವಿನೋದದಲ್ಲಿ ಬೀಳ್ಕೊಟ್ಟರು. ನಂಬುಗೆವಂತರೆಲ್ಲ ಬಂದು ಸಾಷ್ಟಾಂಗವೆರಗಿ ಸಂತುಷ್ಟಿಯಿಂದ ಬೀಳ್ಕೊಂಡರು. ಎಲ್ಲರೂ ಯಶೋಭದ್ರಾದೇವಿಯನ್ನೂ ನೋಡಿ ನಮಸ್ಕರಿಸಿ ಅಲ್ಲಿಂದೆದ್ದು ಹೊರಟರು.

ಭಂಡಾರವತಿ ಮೊದಲಾದವರನ್ನು ಕೂಡಿಕೊಂಡು ಬುದ್ಧಿಸಾಗರ ಮಂತ್ರಿಯು ಅತ್ತ ಹೋದಾಗ ಇತ್ತ ನಮಿರಾಜನು ಆನಂದದಿಂದ ತುಂಬಿದವನಾಗಿ ತಾಯಿಯ ಅರಮನೆಗೆ ಒಂದು ಮಾತೆಯನ್ನು ಕಂಡನು.

''ಅಮ್ಮಾಜಿ. ಅಂದು ಆನುಜೆಯನ್ನು ಕೊಡುಕೊಡು ಎಂದು ಹೇಳಿದಿರಿ ನೀವು. ಕೊಡುವ ಮೈಸಿರಿ ತಪ್ಪಿ ಕೊಡಬಾರದೆಂದೆನು ನಾನು, ಕಡೆಗೆ ಯಾವುದು ಒಳಿತಾಯ್ತು? ಸರ್ವ ಭೂಪಾಲರನ್ನೂ ಕರೆಸಿಕೊಂಡು ಈ ರೀತಿ ವೈಭವ ಪೂರ್ವಕವಾಗಿ ಉತ್ಸವದಿಂದ ಕೊಡದೆ ಆತನ ಗರ್ವಕ್ಕೆ ಅಂಜಿ ಕೊಡಲು ನಾವೇನು ಭೂಮಿಯ ಕುಡಿಯರೆ? ದೊಡ್ಡ ದೊಡ್ಡವರೆಲ್ಲ ಬಂದಾಗ ಉಂಗುರ ಉಡಿಗೆಯನ್ನು ಮಾಡಿ ದೊಡ್ಡಿತಾಗುವಂತೆ ಹೆಣ್ಣನ್ನು ಕೊಡದೆ ಅಡ್ಡೆಯ ಹೊರೆಯಂತೆ ಕೊಂಡೊಯ್ದುಕೊಡುವುದೇ? ಲೋಭವನ್ನು ತೊರೆದು ದಿಬ್ಬಣಿಗರನ್ನು ಹೇಮ ವಸ್ತ್ರಾದಿಗಳಿಂದ ತಣಿಸಿ, ಶೋಭನ ಮಾಡದೆ ಚೂರ್ಣಕ್ಕೆ ಮಾಡುವಾಗ ಉತ್ಸವ ಬೇಡವೆ? ಅವನು ಇತ್ತಬಾರದಾದನು. ಬಂದಿದ್ದರೆ ಅವನ ಸೇನೆಯನ್ನೂ ತಣಿಸುತಿದ್ದೆನು. ಭೂನಾಥರಲ್ಲಿ ಅಗ್ರಗಣ್ಯನಲ್ಲವೆ? ಸಮಾಧಾನದಲ್ಲಿ ಸುಖವಾಗಿರಲಿ.''

''ಇಷ್ಟು ಸಾಲದೆ ಮಗನೆ, ನೀನೂ ಆತನೂ ಉತ್ಕೃಷ್ಟದ ರಾಜರು. ಎಲ್ಲರಿಗೂ ತುಷ್ಟಿಮಾಡಿದೆ. ಚಂದವಾಯಿತು. ನನ್ನ ಇಷ್ಟಾರ್ಥವೂ ಸಂದುದು.'' ಎಂದು ತಾಯಿಯು ಮನಮೆಚ್ಚಿ ಎದೆಬಿಚ್ಚಿ ನುಡಿದಳು.

''ಈ ರೀತಿಯಲ್ಲಿ ವೈಭವದ ಒಸಗೆ ಮಾಡದೆ ಏಕಾಂತವಾಗಿ ತಂಗಿಯನ್ನು ಕೊಟ್ಟರೆ ಆವನು ಆವಳನ್ನು ತನ್ನ ಕಾಂತೆಯರಲ್ಲಿ ಹೆಚ್ಚೆಂದು ಕಾಣುವನೆ? ಹೀಗೆ ಮಾಡದಿರುತಿದ್ದರೆ ನನ್ನ ತಂಗಿಯನ್ನು ಹತ್ತರೊಡನೆ ಹನ್ನೊಂದಾಗಿ ಎಣಿಸುತಿದ್ದನು. ಲೆಕ್ಕವಿಲ್ಲದ ಸವತಿಯರ ನಡುವೆ ನನ್ನ ತಂಗಿ ಹೊಕ್ಕು ಬಾಳುವಂತೀಗ ಆಯಿತು. ಇದನ್ನೆಲ್ಲ ಯೋಚಿಸದೆ ನೀವಂದು ನನ್ನ ಅಳಿಯನಿಗೆ ಹೆಣ್ಣನ್ನು ಕೊಡು; ಇಲ್ಲವಾದರೆ ನಾನು ಮನೆಯನ್ನು ಬಿಟ್ಟುಹೋಗುವೆನೆಂದಿರಿ. ಈಗ ಸಂತೋಷವಾಯಿತಲ್ಲವೆ?

ನಮಿರಾಜನ ಉದ್ಧೂತ್ತಕ್ಕೆ ತಾಯಿ ನಕ್ಕಳು. "ಅಹುದಣ್ಣಾ, ಹೆಣ್ಣಿನ ಬುದ್ಧಿ ಬೂದಿಯ ಕೂಡಿತು ಎಂಬ ಸುದ್ದಿಯುಂಟು. ನೀನದನ್ನು ಅರಿಯೆಯಾ? ನಮ್ಮ ವಂಶವನ್ನು ಉದ್ಧರಿಸಿದೆ, ತಂಗಿಗೆ ಸರಿಯಾಯಿತು. ನನಗೆ ಅರ್ತಿಯಾಯಿತು. ರಾಜಾಂಗ ಗೌರವವಾಯಿತು ನಿನಗೆ. ಉತ್ತುಂಗ ಭಾಗ್ಯದಿಂದ ಸುಖವಾಗಿ ಬಾಳು." ಎಂದು ತಾಯಿಯು ತನ್ನ ಮಗನನ್ನು ಹರಸಿ ಆಲಂಗಿಸಿದಳು. ನಮಿರಾಜನು ತಾಯಿಯ ಅಡಿಗಳಿಗೆರಗಿ ಸಡಗರದಿಂದ ತನ್ನ ಅರಮನೆಗೆ ನಡೆದನು.

# ೨೦

# ನಮಿರಾಜವಿಜಯ

ಭರತೇಶ್ವರನು, ತನ್ನ ಕಟಕದಲ್ಲಿದ್ದುಕೊಂಡು ಸಚಿವನು ದಿನಂಪ್ರತಿ ಕಳುಹಿಸಿದ ಓಲೆಗಳಿಂದ ಖಚರೇಂದ್ರನಾದ ನಮಿರಾಜನು ಮಾಡುವ ಮಂಗಳದ ರಚನೆಗಳನ್ನು ಅರಿತು ಮೆಚ್ಚುತಿದ್ದನು. ಬಂದಿ ಒಸಗೆಯು ಈ ರಾತ್ರಿಯಾಯಿತು. ತನ್ನ ಮಂತ್ರಿಯು ಇಂದು ಬರುವನೆಂದು ಅರಿತಿದ್ದರೂ ಅದನ್ನು ಯಾರಿಗೂ ತಿಳಿಸದೆ ಭರತೇಶನಿದ್ದನು.

ಅಷ್ಟರಲ್ಲಿ ಮತ್ತೊಂದು ಒಸಗೆಯಾಯಿತು. ಅಂದು ಉದಯ ಕಾಲದಲ್ಲಿ ಬಡಗು ದಿಕ್ಕಿನಲ್ಲಿ ವಿಮಾನ ಪಡೆಯೊಂದು ಆಕಾಶದಲ್ಲಿ ತೋರಿತು. ಅದರ ಸಡಗರದ ಧ್ವನಿಯನ್ನು ಕೇಳಿ, ಅದು ಸಿಂಧುದೇವಿ ಗಂಗಾದೇವಿಯರು ಬರುವುದೆಂದು ಭರತೇಶನು ತಿಳಿದು, ಜಯಂತಾಂಕನನ್ನು ಕರೆದು ಅವರನ್ನು ಇದಿರಾಗಲು ಕಳುಹಿಸಿ ತಾನು ಹೊರಚಾವಡಿಯಲ್ಲಿದ್ದನು.

ಹಲವು ವಿಮಾನಗಳು ಬರುತ್ತಿದ್ದುವು. ಅವು ತನ್ನ ಸೋದರಿಯರ ವಿಮಾನಗಳೆಂದು ತಿಳಿದೊಡನೆ ಹಲವು ಪುರುಷರೂ ಯುವತಿಯರೂ ಸೇವೆಗೆ ಸಿದ್ಧರಾದರು. ಅಷ್ಟರಲ್ಲಿ ಅವರೆಲ್ಲರೂ ವಿಮಾನದಿಂದಿಳಿದು ಬಂದು ಒಳಹೊಕ್ಕರು. ಆಗ ನಂಬುಗೆಯ ದಾಸಿಯರು ಬಂದು ತೆರೆಯನ್ನು ಕಟ್ಟಿದರು. ಹಲವು ಮಂಗಲ ವಸ್ತುಗಳ ಮಧ್ಯದಲ್ಲಿರುವ ಕಲಶ ಕನ್ನಡಿಗಳಂತೆ ಸಿಂಧುದೇವಿ ಗಂಗಾದೇವಿಯರು ಅಮರಕಾಂತೆಯರ ಎಡೆಯಲ್ಲಿ ಒಪ್ಪಿದರು. ಅವರು ಅಣ್ಣನನ್ನು ಕಂಡು ಆರ್ತಿಗೊಂಡರು. ತಮ್ಮನ್ನು ನೋಡಿ ಬಣ್ಣವಡೆದ ಅಣ್ಣನ ಬಳಿಗೆ ಹೋಗಿ ತಮ್ಮ ಕೆಳದಿಯರಿಂದ ನಿವಾಳಿಯನ್ನಿಡಿಸಿದರು. ವಿವಾಹವು ಬೇಗನೇ ಆಗಲೆಂದು ಮುತ್ತಿನ ಅಕ್ಷತೆಯನ್ನು ಹಾಕಿದರು. ಭರತೇಶನು ಅವರನ್ನು ಸ್ವಾಗತಿಸಿ ಮಂಗಲಾಸನಗಳನ್ನು ಕೊಡಿಸಿದನು. ಹೊಸದೊಂದು ಮಂಗಲವೊದಗಿದಂತೆ ಅವರು ಆಸನಗಳಲ್ಲಿ ಕುಳಿತರು.

''ಒಸಗೆಗೆ ಒದಗಿ ಬಂದರೆನ್ನ ತಂಗಿಯರು. ಅವರ ಪ್ರೀತಿಯನ್ನು ನಿಟ್ಟಿಸಿದೆಯಾ ಪಂಡಿತೆ?'' ಎಂದು ಚಕ್ರಿಯು ಕೆಲದಲ್ಲಿದ್ದ ಪಂಡಿತೆಯನ್ನು ಕೇಳಿದನು.

''ಹಸೆನಿಲ್ಲುವ ಹಿರಿಯಣ್ಣನ ಬಳಿಗೆ ಬಾರದೆ ಅವರು ತಾಮಸವನ್ನು ಮಾಡುವರೇ? ಹೆಣ್ಣುಗಳು ತವರೂರಿನ ವೈಭವಕ್ಕೆ ಕಿವಿಗೊಟ್ಟು ಲವಲವಿಕೆಯಿಂದ ಬರುವರಲ್ಲವೆ ಸ್ವಾಮಿ? ಗೌರವದ ಮಂಗಲಕ್ಕೆ ತವಕದಿಂದ ಬಾರದೆ ತಡೆಮಾಡುವರೆ?'' ಎಂದವಳು ತಿಳಿಸಿದಳು.

''ಒಡಹುಟ್ಟಿದ ಹೆಣ್ಣಿಲ್ಲದವರ ಮದುವೆಯು ಬಣ್ಣವಾಗಿರುವುದೆ?'' ಎಂದು ಚಕ್ರಿಯ ಕೇಳಿದರೆ,'' ಬಣ್ಣವಾಗಿರುವುದು–ಬಿಳಿಯೆಲೆ ಇಲ್ಲದವರಿಗೆ ಹಣ್ಣು ಎಲೆಯಿರುವಂತೆ'' ಎಂದು ಪಂಡಿತೆ ನುಡಿದಳು. ''ಸೋದರಿಯರು ಹೊರಗಾದ ಮದುವೆಯೆಂದರೆ ಅದು

ಬೂದಿಯಲ್ಲಿ ಓಕುಳಿಯಾಡಿದಂತೆ, ಸಾದಿಲ್ಲದವರು ಧೂಪದ ತಿಲಕವನ್ನಿಟ್ಟ ಗಾದೆಯಂತೆ–'' ಎಂದವಳು ತನ್ನ ಮಾತನ್ನು ಸಮರ್ಥಿಸಿಕೊಂಡಳು. ಆಕೆ ಪಂಡಿತೆಯಲ್ಲವೆ!

ಭರತೇಶನಾಗ ನಗುತ್ತ ಅವಳ ಹೆಗಲ ಮೇಲೊಂದು ಸೀರೆಯನಿಟ್ಟನು. ಅನಂತರ ತಂಗಿಯರ ಮುಖವನ್ನು ನೋಡಿ, ''ಮೋಡಗಳ ಸೋಂಕಿನಿಂದ ಬಳಲಿದಿರಿ—ಅಕ್ಕ, ಗಾಳಿಗೆ ಕೂದಲು ಕೆದರಿಹೋಯಿತು.'' ಎಂದು ಕ್ಷೇಮದ ಮಾತನ್ನಾಡಿದನು.

''ನಮಗೆ ಬಳಲಿಕೆಯಿಲ್ಲ ಅಣ್ಣಾಜಿ. ನಿನ್ನ ಮನೆಗೆ ಬರುವಾಗ ತೆಲುಗಾಳಿಯಲ್ಲದೆ ಬಿರುಗಾಳಿಯಿಲ್ಲ ನಿರ್ಮಲದಲ್ಲೇ ಬಂದೆವು. ನಾವು ಅಂತರಿಕ್ಷದಲ್ಲಿ ಬರುವಾಗ ಅಲ್ಲಲ್ಲಿಯ ವ್ಯಂತರರ ಸತಿಯರು ನಮ್ಮನ್ನು ಕಂಡು, ನಿಮ್ಮಂತೆ ವ್ರತ ಮಾಡಿದವರು ಯಾರೂ ಇಲ್ಲವೆಂದು ಕೀರ್ತಿಸಿದರು. 'ಭರತರಾಜನ ತಂಗಿಯರಾದ ನೀವು ನಮ್ಮಲ್ಲಿ ಕರುಣೆಯನ್ನು ಬಿಡದಿರಿ ! ಎಂದವರು ಕೈಮುಗಿದರು. ಅಣ್ಣ ನಾವು ಅವರನ್ನು ವಿನಯದಿಂದ ಸಂತಯಿಸಿ ಬಂದೆವು; ನಿನ್ನಾಣೆ. ಕೆಲವರು ನಮ್ಮ ಹತ್ತಿರ ಬಂದು ಹೋದರು; ಕೆಲವರು ದೂರದಲ್ಲಿ ನಿಂತೇ ನಮಸ್ಕರಿಸಿದರು. ಕೆಲವರು ಕುಲಹೀನ ನಾರಿಯರಂತೆ ಸುಮ್ಮನೆ ಸಾಗಿಹೋದರು. ಇವರೇಕೆ ಸುಮ್ಮನೆ ಹೋಗುವರೆಂದು ನಾವು ವಿಚಾರಿಸಿದಾಗ ಅವರ ಗಂಡಂದಿರ ಹಲ್ಲುಗಳನ್ನು ನಿಮ್ಮ ಭಟರು ಕುಟ್ಟಿ ತೆಗೆದರೆಂದು ತಿಳಿದೆವು. ಬಲ್ಲಿದನ ಅಂಕಮಾಲೆಗೆ ತಡೆಯಿಡುವುದೇಕೆ? ಹಲ್ಲು ಕಳೆದುಕೊಳ್ಳುವುದೇಕೆ? ಎಂದು ನಗುತ್ತ ಬಂದೆವು.'' ಎಂದು ಅವರು ಅಣ್ಣನ ಗೆಲುವಿಗೆ ಬಿಗಿ ನುಡಿದರು. ಆಗ ಅವನೂ ನಕ್ಕನು.

ಅಷ್ಟರಲ್ಲಿ ಒಳಗಿನಿಂದ ಅರಸಿಯರು ಅಟ್ಟಿದ ಕೆಳದಿಯರು ಸಂಭ್ರಮದಿಂದ ಬಂದು, 'ಏಳಿ ಏಳಿ' ಎಂದು ದೇವಿಯರನ್ನೆಬ್ಬಿಸಿ ಒಳಕ್ಕೆ ಕರೆದೊಯ್ದರು.

ಅವರು ಅತ್ತ ಹೋದಾಗ ಇತ್ತ ತೆರೆಕೋಟೆಯು ಸರಿದುಹೋಯಿತು. ಆಗ ಜಯಂತರಾಜನು ಭರತೇಶನ ಮೈದುನರನ್ನು ಸಂತೋಷದಿಂದ ಇದಿರುಗೊಂಡನು. ಮದುವೆಯ ಸಡಗರಕ್ಕಾಗಿ ಕಟಕದವರೆಗೆ ಕಟ್ಟಿದ ಕದಕಟ್ಟು ತೋರಣಾದಿಗಳನ್ನು ನೋಡುತ್ತ ಬಂದ ಮೈದುನರು ತೋರಣಗಳನ್ನೆಲ್ಲ ನೋಡಿಕೊಂಡು ಮುಂದೆ ನಡೆದರು. ನೃಪಶಿರೋಮಣಿ ಭರತೇಶನಲ್ಲಿಗೆ ಬಂದು ಮಣಿಯ ಕಾಣಿಕೆಗಳನ್ನು ನೀಡಿ ಕೈಮುಗಿದರು. ಚಕ್ರೇಶ್ವರನು ಅವರಿಗೆ ಪಟ್ಟಿಗದುಗ್ಗೆಗಳನ್ನು ಕೊಡಿಸಿ ಗೌರವಿಸಿದನು. ಪ್ರೀತಿಯಿಂದವರು ಚಕ್ರೇಶನೊತ್ತಿನಲ್ಲೇ ಕುಳಿತರು. ಸುರಸೇನೆಯು ಕೂಡ ಇದನ್ನು ನೋಡಿ ಕಾಣಿಕೆಯಿತ್ತು ಕೈಮುಗಿದು ನಿಂತಿತು.

''ಜಯಂತಾಂಕ, ಇವರೂರಿಗೆ ನಾವೂ ಹೋದಾಗ ಮಾಡಿದ ತೋರಣಗಳಿಗೆ ಸರಿಯಾಗುವಂತೆ ನಮ್ಮಲ್ಲೂ ತೋರಣಗಳನ್ನು ರಚಿಸಬೇಕೆಂದು ಹೇಳಿದ್ದೆನಷ್ಟೆ. ಹಾಗಾಯಿತೇ?''

''ಇವರು ಎರಡು ಮೂರು ಗಾವುದದಷ್ಟು ಸಿಂಗರಿಸಿದ್ದರು. ನಾವಾದರೋ ನಾಲ್ವತ್ತೆಂಟು ಗಾವುದವನ್ನೂ ದಿವಿಜಪುರದಂತೆ ಮಾಡಿರುವೆವು ಸ್ವಾಮಿ. ತಾವೇ ನೋಡಬಹುದು.'' ಎಂದು ಜಯಂತಾಂಕನು ಚಕ್ರಿಯ ಪ್ರಶ್ನೆಗುತ್ತರಿಸಿದನು.

"ಚೆನ್ನಾಯ್ತು ಬೀಯಗರು ಮಾಡಿದುದಕ್ಕೆ ಮಿಗಿಲಾಗಿ ನಾವು ಮಾಡಿತೋರಿಸಬೇಕು." ಎಂದು ಭರತೇಶ ನುಡಿದಾಗ ಮೈದುನರೆಲ್ಲರೂ ಮುಗುಳ್ನಗೆ ನಕ್ಕರು.

"ಅದನ್ನು ನಾವೆಂದು ಮಾಡಿದುದಲ್ಲ; ನಮ್ಮ ಮನೆಯಲ್ಲಿ ಬಾಳುವವರು ಮಾಡಿದರೆ ನಮಗೆಲ್ಲ ಇದೇಕೆ?" ಎಂದವರು ವಿವರಿಸಿದರು. "ನಿಮ್ಮ ಮನೆಯಲ್ಲಿ ಬಾಳುವವರು ಮಾಡುವಂತೆಯೇ ನಮ್ಮ ಮನೆಯಲ್ಲಿ ಬಾಳುವವರೂ ಮಾಡಿರುತ್ತಾರೆ. ಸುಮ್ಮನಿರುವರೇ?" ಎಂದು ಚಕ್ರೇಶನು ಸುಮ್ಮಾನ ಸೂಸುವಂತೆ ನುಡಿದನು. ಹೀಗೆ ಸರಸಗಳನ್ನಾಡಿದ ಮೇಲೆ, "ನೀವು ಬಂದುದು ಸಿರಿಗೆ ಸಿಂಗಾರವಾದಂತಾಯಿತು. ಸುರರು ರಚಿಸಿದ ಗೃಹಗಳಲ್ಲಿ ನೀವಿಂದು ವಿಶ್ರಮಿಸಿರಿ." ಎಂದವರನ್ನು ಚಕ್ರೇಶನು ಮನ್ನಿಸಿದನು.

ದೇವರಿಗೆ, ಕಡಿಮೆಯಿಲ್ಲವಾದರೂ ನಾವು ನಮ್ಮ ಇಷ್ಟಭಾವಗಳನ್ನು ಸಲ್ಲಿಸಬೇಕು. ವಿವಾಹ ಕಾಲದಲ್ಲಿ ತಾವಿದನ್ನು ತೊಡಬೇಕು." ಎಂದು ಹೇಳುತ್ತ ಭೂಷಣಾವಳಿಗಳನ್ನು ಕೊಟ್ಟರು. ಅವರು ಕೊಟ್ಟ ದಿವ್ಯವಸ್ತ್ರಗಳನ್ನೂ ಭೂಷಣಗಳನ್ನೂ ಗಂಧದ್ರವ್ಯಗಳನ್ನೂ ಕಾವ್ಯಕರ್ಣಾವತಂಸನೆಂಬ ಬಿರುದುಳ್ಳ ಭರತೇಶನು ನವ್ಯವಾದ ಪ್ರೀತಿಯಿಂದಲೇ ಸ್ವೀಕರಿಸಿದನು.

ಇನ್ನು ನಿಮ್ಮ ಅರಮನೆಗಳಿಗೆ ಹೋಗಿರೆಂದು ಚಕ್ರಿಯು ಸೂಚಿಸಲು ಅವರು ಪ್ರಸನ್ನರಾಗಿ ತೆರಳಿದರು. ಕೂಡಲೇ ಉನ್ನತ ವಸ್ತುಗಳನ್ನೂ ಉಲುಪೆಗಳನ್ನೂ ಚಕ್ರಿಯು ಮೈದುನರಿಗಾಗಿ ಕಳುಹಿಸಿದನು. ಸುರಸೇನೆಯನ್ನು ಸತ್ಕರಿಸಬೇಕೆಂದು ಜಯಂತಾಂಕನನ್ನು ನೇಮಿಸಿ ಅವನನ್ನು ಕಳುಹಿಸಿದನು. ಆಮೇಲೆ ಓಲಗದಿಂದ ಅರಮನೆಗೆ ಎದ್ದನು. ದಾಸಿಯರು "ಪಾದವೆಚ್ಚರಿಕೆ ! ಪೈಸರ ! ಪರಾಕು ಅವಧಾನ !" ಎಂದು ಘೋಷಿಸುತ್ತಿರಲು ಭರತೇಶನು ಒಳಗೆ ನಡೆದನು. ಅಲ್ಲಿ ಅವನ ತಂಗಿಯರು ರಾಣಿಯರೆಡೆಯಲ್ಲಿದ್ದರು. ಅವರನ್ನು ಕಂಡೊಡನೆ "ಹೊತ್ತಾದುದು ಅಕ್ಕ. ಇನ್ನು ತಡಮಾಡದೆ ನಿಮ್ಮ ಅರಮನೆಗೆ ತೆರಳಿರಿ" ಎಂದನು. ರಾಣಿಯರೂ ಒಪ್ಪಿದರು. ಆಗ ಅವರು, "ಇವು ಮಂಗಲಾರ್ಥಕ್ಕೆ ಸಲ್ಲಲಿ" ಎಂದು ಮಂಗಲಾಭರಣಗಳನ್ನು ಅವನ ಮುಂದಿರಿಸಿದರು. ಮಂಗಲಕಾರ್ಯಕ್ಕೆ ಅಂಗನೆಯರಾದ ನೀವು ಬಂದುದೆ ಮೇಲು. ಈ ಉಪಚಾರದ ಅಂಗ ಬೇರೇಕೆ?" ಎಂದು ಕೇಳಿದರೂ ಮುತ್ತೈದೆಯರು ಹರಸಿತ್ತುದು ತನಗೆ ಉತ್ತಮವೆಂದು ಅವುಗಳನ್ನು ಕೈಕೊಂಡನು. ಅನ್ನಪಾನವನ್ನು ಕೊಳ್ಳುವ ತಂಗಿಯರಾದರೆ ತನ್ನ ಮಂದಿರದಲ್ಲೇ ನಿಲ್ಲಿಸುತ್ತಿದ್ದರು; ಸುರಸತಿಯರಾದುದರಿಂದ ಭಿನ್ನಗೃಹಕ್ಕೆ ಕಳುಹಿಸಿದನು.

ಅಂದಿನ ಹಗಲು ಸಂತಸದಲ್ಲಿ ಸಾಗಿತು. ರಾತ್ರಿಯಲ್ಲಿ ವಾದ್ಯಗೋಷಗಳು ದಶದಿಕ್ಕುಗಳಿಗೂ ಹಬ್ಬುತ್ತಿರಲು ನಗೆಯನ್ನು ಸೂಸುವ ಸರ್ವರೊಡಗೂಡಿ ಮಂತ್ರಿಯು ಭೂವರನಿಗೆ ಕೈಮುಗಿದನು. ಗೆಳೆಯರೂ, ವ್ಯಂತರರೂ, ಅಮರರೂ ಎಲ್ಲರೂ ಬಂದಿದ್ದರು. ಭರತೇಶನಾಗ ಮಂತ್ರಿಯನ್ನು ವಿಚಾರಿಸಿದನು :

"ನಮಿರಾಜನು ದಕ್ಷನಲ್ಲವೆ? ಹೆಣ್ಣಿನ ಪಕ್ಷದ ದೊರೆಗಳನ್ನೆಲ್ಲ ದಾಕ್ಷಿಣ್ಯದ ವಿನಯದಿಂದ ತಡೆದುಕೊಂಡಿರುವನು. ಇಷ್ಟುದಿನ ಜೋಲಿ ಮಾಡಿದನು. ಇನ್ನು ತಡವಿಲ್ಲ, ನಾಳೆ ಬರುವನು."

ಸ್ವಾಮಿ, ಈ ಮೊದಲೆ ಓಲೆಗಳ ಮೂಲಕ ಎಲ್ಲವನ್ನೂ ಆಗಾಗ್ಗೆ ತಿಳಿಸಿರುವೆನು. ಎಲ್ಲ ಕಾರ್ಯಗಳನ್ನೂ ತಿಳಿಸಿರುವೆನು. ಇನ್ನು ಹೇಳುವುದೇನು?'' ಎಂದು ಮಂತ್ರಿಯು ತಿಳಿಸಿದನು.

ಅನಂತರ ಭರತೇಶನು, ಮಾಗಧಾಂಕ ಪ್ರಭಾಸಾಂಕ, ಹಿಮವಂತ. ವಿಜಯಾರ್ಧದೇವ ಮತ್ತು ಇತರ ವ್ಯಂತರ ಸ್ತೋಮದವರಿಗೆಲ್ಲ ಬಳಲಿದಿರೆಂದು ಉಪಚರಿಸಿ ಮಾತನಾಡಿದನು. ಆದರಂತೆ ಮೇಘೇಶ್ವರ, ವಿಜಯಾಂಕರನ್ನೂ ಲಲಿತವಂಶದ ರಾಜಪುತ್ರರೆಲ್ಲರನ್ನೂ ಒಳ್ಳೇ ಮಾತುಗಳಿಂದ ಮನಿಸಿದನು. ಆ ಮಾತಿಗೇ ಅವರೆಲ್ಲ ತಣಿದರು. ಮತ್ತೆ ಚಕ್ರೇಶನವರಿಗೆಲ್ಲ ಉಡುಗೊರೆಯಿತ್ತನು. ಕೊನೆಯಲ್ಲಿ ಮಂತ್ರಿಗೆ ಉಡುಗೊರೆಯನ್ನು ಹಿಡಿಯಲು ಕೇಳಿದಾಗ ಅವನು ತಡೆದು ನಿಂತನು.

ಆಗ ಮಿತ್ರರೆಲ್ಲರೂ ದೊರೆಗೆ ಸಾಷ್ಟಾಂಗವೆರಗಿ ನಿಂತರು. ಧಾತ್ರೀಶನು, ತಮ್ಮ ಬಿನ್ನಪವನ್ನು ಲಾಲಿಸಬೇಕೆಂದು ಹೇಳಿಕೊಂಡರು. ಜ್ಞಾನಿಗಳಾದ ಅವರು ಅಲ್ಲಿದ್ದುದನ್ನು ಕೇಳಲಾರರೆಂದು ಚಕ್ರೇಶನವರಿಗೆ ಹೇಳಿರೆಂದೂ ಸೂಚಿಸಿದನು.ಆಗ ಮಂತ್ರಿಯು ಚಕ್ರಿಯೊಡನೆ ಹೇಳಿಕೊಂಡನು.

''ಒಂದು ಸೊಲ್ಲಿನ ತೇಜವುಂಟು. ಅದನ್ನು ಸಲ್ಲದೆಂದು ಹೇಳಬಾರದು. ನಮಿರಾಜನೆಂದು ನೀನು ಅವನನ್ನು ಕರೆಯಬೇಕು. ಅವನು ಬಲುಮಾನಿ. ನಿನ್ನೊತ್ತಿಗೆ ಬರುವುದಕ್ಕೆ ಇಷ್ಟು ಅಳುಕುತ್ತಿರುವನು. ನಾವೆಲ್ಲ ಹೇಳಿ, ಒಪ್ಪಿಸಿ ಬಂದಿರುವೆವು. ರಾಜನೆಂಬ ಹೆಸರು ನಿನ್ನ ಮಾವನ ಮಗನಿಗಿರಲಿ, ನೀವು –ತಾವು ಎಂದವನನ್ನು ಕರೆಯಬೇಕೆಂದೂ ಬಯಸಿದನು. ನಾವದನ್ನು ಬಿಡಿಸಿದವು. ಈ ಮಾತನ್ನು ನಡೆಸಿಕೊಡಬೇಕು.'' ಅದನ್ನೇ ಮಿತ್ರರೂ ಒತ್ತಿ ಹೇಳಿದರು.

ನಮಿರಾಜನ ಈ ಗುಣಕ್ಕೆ ಭರತೇಶನು ತಲೆದೂಗಿದನು. ತನ್ನೊಳಗೇ ಮೆಚ್ಚಿದನು. ಕ್ಷತ್ರಿಯರ ಕುಲದ ಓಜೆ ಇವನಿಗಲ್ಲದೆ ಇಲ್ಲವೆಂದು ಅದನ್ನು ತನ್ನೆದೆಯಲ್ಲೇ ಇಟ್ಟುಕೊಂಡು ಹೊರಗೆ ಹೀಗೆ ಹೇಳಿದನು :

'ಈ ಷಟ್ಖಂಡಕ್ಕೆ ರಾಜನು ನಾನೊಬ್ಬನಲ್ಲದೆ ರಾಜರಿಬ್ಬರಿರುವರೇ? ಸರ್ವರೂ ಅವನನ್ನು ರಾಜನೆಂದೇ ಆಡಲಿ. ನಾನಂತೂ ಕರೆಯುವುದು ಓಜೆಯೇ? ನೀವೆ ಹೇಳಿ. ಕಾಣಿಕೆಯಿತ್ತು ಮೈಮುರಿದ ಮೇಲೆ ಅವನಿಗೆ ಈ ಭೂಮಿಯಲ್ಲಿ ಒಡೆತನವುಂಟೇ? ರಾಣಿಯ ಅಣ್ಣನಿಗೆ ಒಂದು ತೇಜವನ್ನು ಕೊಡು. ನಿನಗೆ ಊಣೆಯವಿಲ್ಲ.'

''ಈ ತೇಜವನ್ನು ಕೊಡಬಾರದು; ಆದರೆ ನಿಮ್ಮ ನುಡಿಯನ್ನು ಕೆಡಿಸಬಾರದು ಕೊಟ್ಟೆನು.''

ಒಡನೆ ಅವರೆಲ್ಲರೂ ಅಡಿಗೆರಗಿದರು. ಒಡೆಯನಿತ್ತ ಉಡುಗೊರೆಗಳನ್ನು ಪಡೆದು ಎಲ್ಲರೂ ಒಂದಾಗಿ ಅತ್ತ ಸಾಗಿದರು. ಆಗ ಅಲ್ಲಿಗೆ ಭಂಡಾರವತಿ ಬಂದಳು.

''ಒಡೆಯ, ನಿಮ್ಮ ಒಡತಿಯನ್ನು ಕಂಡೆನು. ನಿನ್ನ ಚಿತ್ತವನ್ನು ಸೆಳೆಯುವಂತೆ ಇರುವಳು. ನೀನಿನ್ನು ಷಟ್ಖಂಡ ರಾಜ್ಯವನ್ನೂ ಮರೆಯುವೆ. ಅವಳ ರೂಪವನ್ನು ಬಣ್ಣಿಸಲರಿಯೆನು. ನೋಡಿದ ಹೆಣ್ಣುಗಳ ಎದೆಯೇ ಮೋಹಿಸುವುದು. ಆ ಹೆಣ್ಣುಗಳರಸಿಯನ್ನು ಕಂಡಮೇಲೆ

ಅನ್ಯರನ್ನು ಕಣ್ಣೆಟ್ಟು ನೋಡುವೆಯ ನೀನು? ಕರ್ಣಾಂಕಿತ ಅಕ್ಷಿಗಳಿಂದ ಒಪ್ಪುವಳು. ಸುವರ್ಣಲತಾಂಗಿ, ಬೆಡಂಗಿ, ಬೆರಳು, ತೋಳು, ಕೊರಳು, ಸಿರಿಮುಡಿ—ಇವು ನಿನ್ನನ್ನು ಸೋಲಿಸಲು ಒಂದೊಂದು ಸಾಕು. ಆ ಸ್ವರ್ಗ ತರುಣಿಯರ ತರಳೆ ಗೆಲ್ಲುವುದು ನಿಜ. ಜಿನನಾಣೆ! ಅವಳ ನಡೆಯ ಮುಂದೆ ಆನೆಯ ನಡೆಯ ಚೆಲ್ವಿಕೆಯೆ? ಸವಿಮಾತಾಡಲು ವೀಣೆ ಮೋಹಿಸುವುದೆ? ಬೆಳುದಿಂಗಳು ಅವಳ ನಗೆಗೆ ಇದಿರೆ? ಕನ್ನಡಿಯೆ ಅವಳ ಕದಪಿಗೆ? ಪುರುಷರಲ್ಲಿ ನಿನ್ನನ್ನೇ ಕಂಡೆ, ಸ್ತ್ರೀಯರಲ್ಲಿ ಆ ಸುಂದರಿಯನ್ನೇ ಕಂಡೆ. ನಿನ್ನಾಣೆ! ಎರಡಕ್ಕೆ ಎರಡೇ ಸರಿಯಲ್ಲದೆ ಇನ್ನಿಲ್ಲ'' ಎಂದವಳು ಪೊರೆಯಿಟ್ಟು ಹೊರಟಳು.

''ಬರಿದೆ ಹೋಗದಿರು. ಬಾ, ಬಾರೆ.'' ಎಂದು ಕರೆದು ಮಿರುಗುವ ಪದಕವೊಂದನ್ನು ಇತ್ತು ಭರತೇಶನು ಅವಳನ್ನು ಬೀಳ್ಕೊಟ್ಟನು.

ಭರತೇಶನು ಚಾವಡಿಯಿಂದ ಅರಮನೆಗಾಗಿ ಎದ್ದನು. ಆ ರಾತ್ರಿಯು ಲೀಲಾವಾಕ್ಯದಲ್ಲೇ ಕಳೆದುಹೋಯಿತು. ಮರುದಿನದ ಸಭೆಯಲ್ಲಿ ಠೀವಿಯಿಂದಿರುವಾಗ ದೇವತೆಗಳಂತೆ ವಿಮಾನ ಪತಾಕೆ ಆಕಾಶವನ್ನು ತುಂಬಿಕೊಂಡಿತು. ವಾದ್ಯಗೋಷಗಳೊಂದಿಗೆ ನಮಿರಾಜನು ಮೂರನೆಯ ಜಾಮದಲ್ಲೇ ಹೊರಟು ಬರುತ್ತಿದ್ದನು. ಅವನೊಡನೆ ಅವನ ಬಂಧುಗಳೂ ಆರ್ಯಭೂಮಿಯ ನೂರಹತ್ತು ಪಟ್ಟಣದ ಖೇಚರರೂ ಸುತ್ತಣದ ಮ್ಲೇಚ್ಛರೂ ಕೂಡಿಕೊಂಡು ನೆಲವನ್ನೆಲ್ಲ ಕಿತ್ತು ಎತ್ತುವಂತೆ ಬರುತಿದ್ದರು. ನಮಿರಾಜನು ತನ್ನೊಡನೆ ತಾಯಿ—ತಂಗಿಯರನ್ನೂ ಅವಳ ಕೆಳದಿಯರನ್ನೂ ಕೂಡಿ ಕೊಂಡಿದ್ದನಾದರೂ ತನ್ನ ಸ್ತ್ರೀಯರನ್ನೆಲ್ಲ ಮನೆಯಲ್ಲೇ ಬಿಟ್ಟು ಬಂದಿದ್ದನು. ಅಂತಹ ವಿಡಾಯಕಾರನು ನಮಿರಾಜ.

ಭರತರಾಜನು ತನ್ನನ್ನು ಸರಿಸಮಾನನೆಂದು ಮನ್ನಿಸಲಾರ; ಅದರಂತೆ ಅವನ ಸ್ತ್ರೀಯರೂ ತನ್ನವರನ್ನು ಮನ್ನಿಸಲಾರರು. ರಾಜ್ಯಾಂಗವಿದನ್ನು ಅರಿತುದರಿಂದಲೇ ಅವರನ್ನು ಬಿಟ್ಟುಬಂದಿದ್ದನು. ನಂಟರು ಸರಿಯಾಗಿ ಕಂಡರೆ ಅವರೊಡನೆ ಕೂಡಿರಬಹುದು. ಅದಿಲ್ಲವಾದರೆ ಸುಮ್ಮನಿರುವುದೇ ಲೇಸೆಂದು ನಮಿರಾಜನು ಬಗೆದನು.

ಭರತ ಚಕ್ರೇಶ್ವರನ ಕಟಕದಲ್ಲಿ ಕಟ್ಟಿದ ತೋರಣ ಗುಡಿಗಳನ್ನು ಸಿಂಗರಿಸಿದ ಕುರುಜು ಮಾಡಗಳನ್ನು ಝಲ್ಲಿ ಪಟ್ಟೆಗಳನ್ನು ನಮಿರಾಜನು ನೋಡಿದನು. ನಾಲ್ವತ್ತೆಂಟು ಗಾವುದದಲ್ಲಿರುವ ಪಾಳೆಯದಲ್ಲಿ ಮುಗಿಲಿನಂತೆ ಮೇಲ್ಕಟ್ಟುಗಳೂ ಸೂರ್ಯಚಂದ್ರ ಮಂಡಲಗಳಂತೆ ಮಾಣಿಕದ ಕನ್ನಡಿಗಳೂ ಹೊನ್ನಿನ ಕೆಲಸಗಳೂ ಕಾಣಿಸುತ್ತಿದ್ದುವು. ವಜ್ರ, ಮಾಣಿಕ, ಹವಳದ ಮಾಲೆಗಳಿಂದಲೂ ಮುತ್ತಿನ ಕುಚ್ಚುಗಳಿಂದಲೂ ಪಾಳೆಯ ತುಂಬಿ ತೋರುತ್ತಿರಲು ನೋಡಿ ನಮಿರಾಜನು ಅಚ್ಚರಿಗೊಂಡನು. ಅವನ ವಿಡಾಯವು ನುಚ್ಚುನೂರಾಯಿತು. ಕುಂಕುಮ, ಸಾಧು, ಜವಾದಿ, ಕಸ್ತೂರಿಗಳೆಲ್ಲ ಪಾಳೆಯಲ್ಲಿ ಚೆಲ್ಲಿರಲು ಅದಕ್ಕಾಗಿ ತುಂಬಿಗಳು ಝೇಂಕರಿಸುತ್ತಿರುವುದನ್ನು ಕಂಡು ನಮಿರಾಜನು ಮಂಕನಂತಾದನು. ಆನೆ ಕುದುರೆ ರಥಪದಾತಿಗಳು ಸಿಂಗಾರವಾಗಿದ್ದು ಜನವಾರಿಧಿಯಂತೆ ಶೋಭಿಸುತ್ತಿರುವುದನ್ನು ನೋಡಲು ಎರಡು ಕಣ್ಣುಗಳು ಸಾಲವು ಎಂಬಂತೆ ನಮಿರಾಜನು ವಿಸ್ಮಯದಿಂದ ಸುತ್ತಲೂ ನೋಡಿದನು.

''ಬೀಡುಬಿಟ್ಟಲ್ಲಿ ಇಷ್ಟು ಸಿರಿಯಿರುವುದಾದರೆ ತನ್ನ ಪಟ್ಟಣದಲ್ಲಿರುವಾಗ ಅವನ ವೈಭವವೆಷ್ಟೋ ! ಭರತೇಶನಂತೆ ಹುಟ್ಟಬೇಕು''—ಎಂದು ನಮಿರಾಜನು ಪ್ರೀತಿಯಿಂದ ತನ್ನ ಭಾವನನ್ನು ನೆನೆದನು. ''ಇವನು ನಮ್ಮನ್ನು ಅವನು ಇವನು ಎಂದು ನುಡಿಯ ಸಲ್ಲದೆ? ಈತನಿಗೆ ಇಂದ್ರನೂ ಎಣೆಯೆ? ನಮ್ಮ ಮೂಳಗರ್ವವನ್ನು ಸುಡುಸುಡು'' ಎಂದು ನುಡಿಯದಿದ್ದರೂ ನಮಿರಾಜನು ಎದೆಯಲ್ಲಿ ನೆನೆದನು. ನೋಡದೆ ಯಾವುದೂ ಸೊಗಸಲ್ಲ, ಬಹಳ ಹೆಮ್ಮೆಯಿಂದಿದ್ದರೂ ನಾನು ಇವನಿಗೆ ಸಮಾನನೆ? ನಮ್ಮನ್ನು ಗಂಡೆಂದೇ ತಿಳಿವ. ನಲ್ಲದೆ ಬೇರೆಯಲ್ಲ''—ಎಂದು ನಮಿರಾಜನು ತಲೆದೂಗಿದನು, ''ಕುಲದಲ್ಲಿ ನಾನು ಇವನಿಗೆ ಸರಿಯೆಂಬ ತೇಜಕ್ಕೆ ನಾನಿವನೊಡನೆ ಛಲವನ್ನು ಮಾಡಿದೆನು. ಇನ್ನು ಇವನಿದಿರಲ್ಲಿ ನನಗೆ ಗರ್ವವು ಸಲ್ಲುವುದೇ?''—ಎಂದು ತನ್ನೊಳಗೇ ಸೋಲನಪ್ಪಿಕೊಂಡನು. ''ನನ್ನ ಗರ್ವವನ್ನೀಗಲೇ ಬಿಡುವೆನು. ಇವನಿಗೆ ನನ್ನ ಒಡಹುಟ್ಟಿದವಳನ್ನು ಕೊಡುವೆನು. ಅವಳಿನ್ನು ಪಡೆಯುವ ಭಾಗ್ಯಕ್ಕೆ ಸರಿಯಿಲ್ಲ''—ಎಂದು ಪ್ರೀತಿಪಡುತ್ತ ನಮಿರಾಜನು ಬಂದನು. ನಾಲ್ವತ್ತೆಂಟು ಗಾವುದದ ಅಳತೆಯಲ್ಲಿ ರತ್ನಗಳ ಕಳೆಯು ಹೊಲದಂತೆ ಸಿಂಗಾರವಾಗಿರುವ ಅಳಿಯನ ಪಾಳೆಯದ ಘನತೆಯನ್ನ ಕಂಡು ಅತ್ತೆಯು ಉಬ್ಬಿಹೋದಳು.

ಅವರು ಬಂದು ಮುಟ್ಟಿದರು ಎನ್ನುವಾಗ ಭರತೇಶನು ರಾಜಸಂಪತ್ತಿಗೆ ಸರಿಯಾಗಿ ಮಂತ್ರಿಯೇ ಮುಖ್ಯರಾದವರನ್ನು ಇದಿರ್ಗೊಳ್ಳಲು ಕಳುಹಿಸಿದನು. ಅವರು ಬಂದು ಸಂತೋಷದಿಂದ ಇದಿರ್ಗೊಂಡರು. ಆಗ ಖೇಚರರ ವಾದ್ಯ ಘೋಷಗಳೂ, ಇದಿರ್ಗೊಳ್ಳುವವರ ವಾದ್ಯಘೋಷಗಳೂ, ಪಾಳೆಯದ ಭೇರಿ ಕಹಳೆಗಳ ಘೋಷಗಳೂ ಒಟ್ಟು ಸೇರಿ ಭೂತಳವನ್ನೆಲ್ಲ ತುಂಬಿಬಿಟ್ಟುವು.

ನಮಿರಾಜನು ವಿಮಾನದಿಂದಿಳಿದು ನಮಿರಾಜಗೆ ಅತ್ಯಾಜಿಗೆಂದು ಸಜ್ಜಾಗಿದ್ದ ಅರಮನೆಗೆ ಹೆಂಗಸರನ್ನು ಕಳುಹಿಸಿ, ತಾನು ಭಾವನೆಡೆಗೆ ಬಂದನು. ಅವನು ತನ್ನ ಮಂತ್ರಿಯಾದ ಸುಮತಿಸಾಗರ ತಮ್ಮನಾದ ವಿನಮಿ ಮೊದಲಾದವರನ್ನೆಲ್ಲ ಕರೆಯಿಸಿ ಕೊಂಡು ಅವರೆಲ್ಲರೊಡನೆ ಓಜೆಯಿಂದ ಬಂದನು.

ಬೆರಗಾದ ಸಿಂಗಾರ, ಬೆರಗಿನ ನಗೆನೋಟಗಳಿಂದ, ಭರತರಾಜನಿಗೆ ತಕ್ಕ ಮೈದುನನು ಎಂಬಂತೆ ಬರುತಿದ್ದನು. ಅವನ ಅಂಗದ ಚೆಲುವನ್ನು ನೋಡಿ,

ಈ ಅರಸನು ಮನ್ಮಥನಂತಿರುವನು; ಇವನ ತಂಗಿ ಸೌಂದರಿಯೆಂದು ಹೇಳಲೇ ಬೇಕು; ಎಂದು ಆ ಪಾಳೆಯದವರೆಲ್ಲ ಭಾವಿಸಿದರು. ನಮಿರಾಜನಲ್ಲಿ ಅಧಿಕ ಪ್ರಭೆಯಿದ್ದರೂ ಅದು ಚಕ್ರಿಯೆದುರಲ್ಲಿ ಹಗಲಿನ ಸೊಡರುಗಳಂತಾಯಿತು ! ದೇವೇಂದ್ರನ ಸಭೆಯನ್ನು ನಾಚಿಸುವಂತಹ ರತ್ನದ ಚಾವಡಿಯ ಮಧ್ಯದಲ್ಲಿ ಸಿಂಹಾಸನವೇರಿರುವ ಭಾವವನ್ನು ನಮಿರಾಜನು ದೂರದಿಂದಲೇ ನೋಡಿದನು. ನಮಿರಾಜ, ನಿನ್ನ ತಂಗಿಯರು ಲಕ್ಷವಿದ್ದರೂ ಕೊಡು; ಒಬ್ಬ ಪುರುಷನು ಒಬ್ಬ ಮಡದಿಯನ್ನಾಳುವಂತೆ ಆಳುವನು ಎನ್ನುವ ಮೋಡಿಯಲ್ಲಿ ಭರತೇಶನಿದ್ದನು. ದೊಡ್ಡವನ ಏಳಿಗೆಗೆ ದೊಡ್ಡವನು ಸೋಲುವಂತೆ ಹೆಡ್ಡನು ಸೋಲುವುದಿಲ್ಲ, ಭರತೇಶನಿಗೆ ಅಡ್ಡಬೀಳುವವನಲ್ಲದೆ ಮೈಯೊಡ್ಡತಕ್ಕವನಲ್ಲವೆಂದು ಅವನು ಮನಸ್ಸಿನಲ್ಲೇ ನೆನೆದನು.

ರಾಜಾಧಿರಾಜ ಮಾರ್ತಾಂಡ, ರಾಜೋತ್ತಂಸ, ವಿಭವ ದೇವೇಂದ್ರ, ಚಿತ್ತೈಸೆಂದು ವೇತ್ರಧರರು ನಮಿರಾಜನು ಬರುವುದನ್ನು ಸಾರಿದರು. ಭಾವಜಾಯತದ ಭಾವನನ್ನು ಕಾಣುವೆನೆಂದು ಸದ್ಭಾವಕನಾದ ತಮ್ಮ ಮಾವನ ಮಗನು, ಮೈದುನನು, ಬಂದನೆಂದು ಅವರು ಪರಾಕು ಹೇಳಿದರು.

ಭರತೇಶನಾಗ ಹಾಡುತ್ತಿರುವ ಗಾಯನವನ್ನು ನಿಲ್ಲಿಸಿ ಒರಗಿದ ಮೂಡೆಯಲ್ಲೇ ಒರಗಿ ಮೈದುನನನ್ನು ನೋಡುತ್ತಿದ್ದನು. ನಮಿರಾಜನು ಭರತೇಶನ ಬಳಿ ಸಾರಿ ಕಾಣಿಕೆಯನ್ನಿತ್ತು ಕೈಮುಗಿದನು. ಸುಗುಣ ಸಾಗರನಾದ ಭರತೇಶನಾದರೋ ನಗುತ್ತ ಅವನನ್ನು ಅಪ್ಪಿಕೊಂಡು ತಕ್ಕೈಸಿ ಪಕ್ಕದಲ್ಲಿರುವ ಗದ್ದುಗೆಯಲ್ಲಿ ಕುಳ್ಳಿರಿಸಿಕೊಂಡನು. ಆಮೇಲೆ ಬಂದವರನ್ನೆಲ್ಲ ಕಂಡು ಮನ್ನಿಸಿ ಕುಳ್ಳಿರಿಸಿದನು.

"ಹಲವು ದಿನಗಳ ಬಳಿಕೀಗ ಕಂಡೆನು ನಮಿರಾಜನನ್ನು" ಎಂದು ಭರತೇಶನು ನುಡಿದನು. ಗದ್ದುಗೆಯಿತ್ತು ತಕ್ಕೈಸಿಕೊಂಡುದರಿಂದಲೂ ನಮಿರಾಜನೆಂದುದರಿಂದಲೂ ಅವನಲ್ಲಿ ಹರುಷವುಕ್ಕಿತು. ಇತ್ತಗದ್ದುಗೆ ಕಿರಿದಾದರೂ ತೇಜ ಕಿರಿದಲ್ಲ!

"ಭಾವ. ನಿನ್ನನ್ನು ಬಹುಕಾಲಕ್ಕೆ ಕಂಡೆನೆಂಬಾ ವಾಕ್ಯವಾಡುವುದೇಕೆ? ದೇವರ ದರುಶನ ಬಹುಕಾಲವಾಗಿ ನನಗೆ ಸಂಭಾವಿಸಿತು" ಎಂದು ನಮಿರಾಜನು ನುಡಿದನು.

"ನೀನೆನ್ನ ಕಾಣಬೇಕೆಂದು ಭಾವಿಸಲಿಲ್ಲ, ನಾನೇ ನಿನ್ನನ್ನು ನೋಡಲು ನಾನಾ ತಂತ್ರವನ್ನೊಡ್ಡಿದೆ. ಸ್ನೇಹವು ಏನನ್ನು ಮಾಡಿಸದು?"

"ದೇವರ ಮೇಲಾಸೆಯಿಲ್ಲದುಂಟೆ ? ಮಹಾವಿಭುವನ್ನು ಬಂಧುವೆಂದು ಭಾವಿಸಿದಾಗ ನಾನೇ ಅಂಜಿ ದೂರದಲ್ಲಿದ್ದೆನು. ದೇವರು ಅರಿಯದ್ದುಂಟೇ?"

"ಬಡವ ಬಲ್ಲಿದನನ್ನು ನಮ್ಮವನೆಂದು ಹೇಳಿದರೆ ಲೋಕ ನಗುವುದು. ಬಲ್ಲಿದನು ಬಡವನನ್ನು ತನ್ನವನೆಂದು ಹೇಳಿದರೆ ಸಿರಿಯು ಮೆರೆಯುವುದು."

"ಅಹುದು.ನೊಡ್ಡವರು ಹೇಗೆ ಹೇಳಿದರೂ ಸಲ್ಲುತ್ತದೆ. ಅದಕ್ಕೆ ಅಡ್ಡವಿಲ್ಲ.ಆದ್ದರಿಂದ ಗುಡ್ಡದ ಮೇಲಿದ್ದೆ; ಬರಹೇಳಲು ನಾನೇನು ಒಡ್ಡಿ ನಿಂತೆನೇ? ಬಂದೆನು."

"ನೀನು ನುಡಿ ಜಾಣನು. ಲೇಸು. ಲೇಸು." ಎಂದು ಹೇಳಿ ಭರತೇಶನು ಪ್ರೀತಿಯಿಂದ ನಮಿರಾಜನನ್ನು ನೋಡಿದನು.

"ನುಡಿಜಾಣ್ಮೆ, ನಡೆಜಾಣ್ಮೆ, ನನಗೊ ದೇವರಿಗೊ—ಎಂಬುದನ್ನು ಸಂಗಡದ ಈ ರಾಜರೇ ಹೇಳಲಿ?"

"ಸ್ವಾಮಿಯೇ, ನುಡಿಜಾಣನೂ ನಡೆಜಾಣನೂ ಅಹುದು. ಮತ್ತೆ ಆ ಮಹಾತ್ಮನೇ ಜಾಣನೆಂದು ಹೇಳುವುದರಿಂದ ಭೂಮಿಯಲ್ಲಿ ನೀವಿನ್ನು ಜಾಣರು." ಎಂದು ಮಾಗಧಾಂಕರೇ ಮೊದಲಾದ ರಾಜರು ನುಡಿದರು.

ಮೈದುನನೆಂಬ ಸೊಕ್ಕಿನಿಂದ ಉಬ್ಬಿ ನುಡಿಯದೆ, ಬಾಯಿ ತೆರೆದು, ತಾನೆ, ಸೋತು ಅರಿಸಿ ಅರಿಸಿ ಸವಿನುಡಿಗಳನ್ನಾಡುವುದನ್ನು ಕಂಡು ಸರ್ವರೂ ಮೆಚ್ಚಿದರು. ಭೂತಳಾಗ್ರಣಿಯೊಡನೆ ಸೋತು ನುಡಿದ ಮಾತುಗಳು ಮಾತೆಯಂತೆ ಪೊರೆಯುತ್ತವೆ. ಭೂತದಂತೆ ಉಬ್ಬಿ ನುಡಿದ ಮಾತು ವಜ್ರಘಾತದಂತಾಗದೆ? ಹರಿಯುತ್ತಿರುವ ಕಿರಿದಾದ

ತೊರೆಯಲ್ಲಿ ಬಗ್ಗಿದ ಮರಗಳೆಲ್ಲ ಸ್ಥಿರವಾಗಿ ಬಾಳುವವು. ಅದಕ್ಕೆ ಇದಿರಾದ ಮರಗಳು ಬೇರುಕಿತ್ತು ಬಿದ್ದು ಹೋಗುತ್ತವೆ. ಬಲ್ಲವರು ದೊಡ್ಡವರಿಗೆ ಇದಿರಾಗುತ್ತಾರೆಯೆ?'' ಎಂದು ಎಲ್ಲರೂ ಮಾತಾಡಿದರು. ಭರತೇಶನೂ ಒಲಿದನು.

''ಮಾವಾಜಿಯರ ಬಸಿರಲ್ಲಿ ಬರತಕ್ಕವನು ಭಾವಜ್ಞನು. ಗುಣದಿಂದ ಕೂಡಿದವನು. ನಮಿರಾಜಾ, ಸಾವಿರ ಮಾತುಗಳೇಕೆ? ರಾಜಾವಲಂಬನ ದಕ್ಷನು ನೀನೇ. ಚಕ್ರರತ್ನವನ್ನು ಪಡೆದ ನಾನು ರಾಜಪರಾಕ್ರಮದಲ್ಲಿ ಬಾಳಬಹುದು. ವಿಕ್ರಮದಲ್ಲಿ ಕ್ಷತ್ರಿಯಾಂಗದಲ್ಲಿ ಬಂದ ನೀನು ವಿಕ್ರಮಾನ್ವಯ ಶುದ್ಧನಾಗಿರುವೆ. ಕೊಡುಕೊಳೆಯ ಸೌಂದರ್ಯವೂ ನುಡಿಯ ಬೆಡಗೂ, ಪಾಡುಪಂಥಗಳೂ, ಜಡಿ ಮುಡಿ ಗಾಡಿ ಮೋಡಿಗಳೂ, ಕ್ಷತ್ರಿಯರಿಗೆ ಕೂಡಿದ್ದರೆ ಲೇಸು. ಹುಚ್ಚು ನಡತೆಗೆ ನಾನು ಮೆಚ್ಚೆನು. ಆದರೆ ನೀನು ಮಾತ್ರ ನನ್ನ ತಲೆತೂಗಿಸಿದೆ.''

ಎಂದಾಗ ನಮಿರಾಜನು ಕೂಡಲೇ ಸುರುಚಿರವಾದ ಆಭರಣ ವಸ್ತ್ರಗಳ ಉಡುಗೊರೆಯನ್ನು ಮುಂದಿಟ್ಟನು.

''ನಿನ್ನನ್ನು ನಾನು ಮೆಚ್ಚಿದೆನೆಂದರೆ ನೀನು ನನಗೆ ಮೆಚ್ಚುಗಳನ್ನು ಕೊಡುವುದೇಕೇ?''

''ನಿನ್ನ ನುಡಿಗೆ ಮನ ಕರಗಿತು. ಚಿತ್ತೈಸು. ಇವು ವಿನಯಾರ್ಥ ನಿನಗೆ ಸಲ್ಲಲಿ.''

''ಬಂದ ಮೈದುನನನ್ನು ಮನ್ನಿಸುವೆನೆಂದು ನಾನು ನೆನೆದರೆ ನೀನು ಮುಂದಾದೆ.'' ಎಂದು ಹೇಳುತ್ತ ಒಂದಕ್ಕೆ ಎರಡರಷ್ಟು ಉಡುಗೊರೆಗಳನ್ನು ಕೊಟ್ಟು ಬಂಧುಗಳನ್ನೆಲ್ಲ ಮನ್ನಿಸಿದನು.

''ಸ್ವಾಮಿಯನ್ನು ನಮಿರಾಜನು ಸಂಧಿಸಿದಾಗ, ಮೊದಲು ನಮಗೊಂದು ಆಸೆಯಿತ್ತು. ಈಗ ಆ ಕಾಮಾರ್ಥವು ಸಂದಿತು. ನಮ್ಮ ಸ್ವಾಮಿಯನ್ನು ಹೊಂದಿದವರಿಗೆ ಕ್ಷೀರಸಾಗರವು ಹೊಂದಿದಂತೆ ಇಂಪನ್ನುಂಟುಮಾಡುವುದು. ದಿನದಿನಕ್ಕೆ ಆನಂದ ಹೊಂದುವುದು ಎಂದು ಸಖರೆಲ್ಲರೂ ಸಂತೋಷದಿಂದ ಹೇಳಿದರು.

ಆಗ ಬುದ್ಧಿಸಾಗರನು, ನಮ್ಮ ಇಷ್ಟಾರ್ಥವು ಸಿದ್ಧಿಸಿತೆಂದು ಸಂತೋಷಗೊಂಡನು. ಭಾವಮೈದುನರ ಲೀಲೆ ಸಮೃದ್ಧವಾಯಿತೆಂದನು. ನಾಳೆ ವಿವಾಹವನ್ನು ಅರ್ತಿಯಿಂದ ಕಾಣುವೆವೆಂದೂ ಇಂದು ಭೂಪಾಲರನ್ನೆಲ್ಲ ಕಳುಹಬೇಕೆಂದೂ ಬುದ್ಧಿಸಾಗರ ಮಂತ್ರಿಯು ಭರತೇಶನನ್ನು ಕೇಳಿಕೊಂಡನು. ಪೋಸಕ್ಕೆ ವೇಳೆಯಾಯಿತೆಂದು ಹೇಳಿದಾಗ ಭರತಚಕ್ರಿಯು ನಮಿರಾಜನನು ಬೀಳ್ಕೊಟ್ಟನು. ನಮಿರಾಜನು ಹತ್ತೆಂಟು ಹೆಜ್ಜೆ ನಡೆದ ಮೇಲೆ ಭರತೇಶನು ಇತರರನ್ನೂ ಕೈಬೀಸಿ ಬೀಳ್ಕೊಟ್ಟನು.

ಅನಂತರ ಚಕ್ರಿಯು ಮುತ್ತಿನ ಗದ್ದುಗೆಯಿಂದೆದ್ದು ಮಂದಿರದ ಕಡೆಗೆ ಕಾಲಿಟ್ಟನು. ಒಂದೆರಡು ಹೆಜ್ಜೆಯಿಡುವಷ್ಟರಲ್ಲಿ ದಾದಿಯೊಬ್ಬಳು ಬಂದು. ನಮಿರಾಜನು ತನ್ನರಸಿಯರನ್ನು ಬಿಟ್ಟು ತಾನೊಬ್ಬನೇ ಬಂದಿರುವನೆಂಬುದನ್ನು ಭರತೇಶನಿಗೆ ನಿವೇದಿಸಿದಳು. ಅವನಾಗ ಅಲ್ಲಿಯೇ ನಿಂತು ನಮಿರಾಜನನ್ನು ಬಳಿಗೆ ಕರೆಯಿಸಿಕೊಂಡನು. ಎಲ್ಲರೊಡಗೂಡಿ ಬರುವ ನಮಿರಾಜನನ್ನು ಒಬ್ಬನನ್ನೇ ಬಳಿಗೆ ಕರೆದು, ತನ್ನ ತೋರವಾದ ಕೈಗಳಿಂದ ಅವನ ಕೈವಿಡಿದು ಮೆಲ್ಲನೆ ಮಾತಾಡಿದನು.

"ಚೆನ್ನಾಯಿತು, ನೀನು ಬಂದಿರುವೆ; ನಿನ್ನ ಸತಿಯರನ್ನು ಊರಲ್ಲಿರಿಸಿ ಬಂದೆಯಲ್ಲವೆ? ನನ್ನ ತಂಗಿಯರು ಇತ್ತ ಬಾರದಿದ್ದರೆ ನನ್ನ ಅರ್ತಿಯು ಸಲುವುದೇ?"

"ಅವ್ವಾಜಿಯಿದ್ದಾಳೆ; ನಾನಿದ್ದೇನೆ; ತಮ್ಮನಿದ್ದಾನೆ; ಬಂಧುಗಳಿದ್ದಾರೆ; ನಿಮ್ಮ ವೈಭವಕ್ಕೇನೂ ಕಡಿಮೆಯಿಲ್ಲ. ಹೆಮ್ಮಕ್ಕಳು ಅವರು ಯಾಕೆ?"

"ನಾನು ನನ್ನ ಒಡಹುಟ್ಟಿದವರು ಎಂದರೂ ನೀನು ನಿನ್ನ ಪ್ರಪಂಚವನ್ನು ಬಿಡಲಾರೆ. ಬೇಗನೆ ಕರೆಸುತ್ತೇನೆಂದು ಹೇಳದೆ ಹೀಗೆ ಹೇಳುವುದೇ ನಮಿರಾಜ? ನೀನು ಎರವು ಮಾಡಲು ನಾನೇನೂ ನೋವು ಮಾಡಿಲ್ಲ ನಿನಗೆ. ನನ್ನ ತಂಗಿಯರು ನನ್ನ ಲೇಸನ್ನು ನೋಡಬೇಕು." ಭರತೇಶನು ನೊಂದು ನುಡಿದುದು ನಮಿರಾಜನಿಗೆ ತಿಳಿಯಿತು.

"ಬೀಡುಬಿಟ್ಟಲ್ಲಿಗೆ ಅವರೇಕೆ ಬರುವುದೆಂದು ನಾನೇ ಓರೆ ಮಾಡಿ ಮನೆಯಲ್ಲಿ ಬಿಟ್ಟುಬಂದೆ. ನೀನು ನೋಡಬಹುದು; ರಾತ್ರಿಯಲ್ಲೇ ಕರೆಸುತ್ತೇನೆ."

"ಅದಲ್ಲ ನಮಿರಾಜ. ಅತ್ತಾಜಿ ಕೂಡಿ ನೀವೆಲ್ಲ ಇಲ್ಲಿಗೆ ಬರಲು, ಅಲ್ಲಿದ್ದ ಅವರು ಮರುಗಲಾರರೆ? ಅದು ಸೊಗಸಲ್ಲ. ಇನ್ನಾಯಿತು ಲೇಸು. ನಮ್ಮ ಹೆಂಗಸರೂ ನಿಮ್ಮ ಹೆಂಗಸರ ಕಂಡು ಸುಮ್ಮಾನದಲ್ಲಿ ಆರ್ತಿ ಮಾಡಲಿ. ನೀನು ಹೆಮ್ಮಕ್ಕಳ ಇಚ್ಛೆಯನ್ನು ಅರಿಯೆಯ? ಒಸಗೆಗೆ ಸುಮ್ಮಾನಗೊಳ್ಳುತ್ತಾರೆ."

ಇವರಿಬ್ಬರೇ ಮೆಲ್ಲಗೆ ಮಾತನಾಡಿಕೊಂಡು ಒಬ್ಬನು ಒಳಕ್ಕೆ ಹೋದನು. ಇನ್ನೊಬ್ಬನು ಹೊರಗೆ ಹೋದನು. ನಮಿರಾಜನು ತನ್ನ ಸುಗಂಧ ನಿವಾಸಕ್ಕೆ ಹೋದನು. ಅಲ್ಲಿ ಮೊದಲೆ ತುಂಬಿದ್ದ ಊಳಿಗದ ಹೆಣ್ಣುಗಳು ಎಲ್ಲವನ್ನೂ ಅಣಿಗೊಳಿಸಿದ್ದರು.

ಅಂದು ಭರತಚಕ್ರೇಶನೂ ನಮಿರಾಜನೂ ವಿಮಲಾನ್ನಪಾನಾದಿಗಳನ್ನು ಸ್ವೀಕರಿಸಿ ಅಮಲ ಲೀಲಾಂಗದಲ್ಲಿದ್ದರು.

## ೨೧

# ಮದುವೆಯ ಸಂಭ್ರಮ

ಶ್ರೀ ವೃಷಭನಾಥರ ಸತಿಯರಾದ ಯಶಸ್ವತೀ ದೇವಿ ಮತ್ತು ಸುನಂದಾ ದೇವಿಯರ ಅಣ್ಣಂದಿರೇ ಕಚ್ಛರಾಜ ಮತ್ತು ಮಹಾಕಚ್ಛರು.ಕಚ್ಛ ನೃಪನ ತಮ್ಮನೇ ಮಹಾಕಚ್ಛನು. ಅವರಿಬ್ಬರೂ ಅಮೃತ ಭೋಗಿಗಳು. ಕಚ್ಛರಾಜನಿಗೆ ಸುಭದ್ರಾದೇವಿ, ನಮಿರಾಜರೂ ಮಹಾಕಚ್ಛನಿಗೆ ಇಚ್ಛಾದೇವಿ, ವಿನಮಿರಾಜರೂ ಮಕ್ಕಳು.ಇಚ್ಛಾದೇವಿ ಅಂದಿನ ಸ್ಮರನೆನಿಸಿದ ಬಾಹುಬಲಿಯ ಸತಿಯಾಗಿ ಪೌದನಪುರದಲ್ಲಿ ಸುಖಬಾಳುತ್ತಿದ್ದಳು. ಭರತೇಶನಿಗೆ ಸುಭದ್ರಾ ದೇವಿಯನ್ನು ಕೊಡುವ ಸಂಭ್ರಮಕ್ಕೆ ಅವರಿಬ್ಬರು ಬಂದಿರಲಿಲ್ಲ.

ಭರತೇಶನು ತಮ್ಮನ್ನು ಒಡಹುಟ್ಟಿದರೆಂದು ನುಡಿದನಲ್ಲಾ— ಎಂಬ ಸಂತೋಷದಿಂದ ನಮಿರಾಜನ ಮಡದಿಯರುಹೊರಟು ಬಂದರು. ವಿನಮಿರಾಜನ ತಾಯಿ ಶುಭದೇವಿಯು, ಆತನ ಐನೂರ್ವರು ಮಡದಿಯರನ್ನೂ ನಮಿರಾಜನು ಎಂಟು ಸಾವಿರ ಅರಸಿಯರನ್ನೂ ಕೂಡಿಕೊಂಡು ಅಂದಿನ ಸೂರ್ಯೋದಯಕ್ಕೆ ಬಂದರು. ಬಂದರೆಂಬುದನ್ನು ಕೇಳಿ ಭರತೇಶನು ಮನಸಿನಲ್ಲೇ ಆನಂದಗೊಂಡನು. ಇನ್ನು ಮುಂದೆ ಚೆಂದವೆಂದನು. ಬೆಳಗಾದೊಡನೆ ಜಿನಮಂದಿರದ ಒಸಗೆಗೆ ನಡೆದನು.

ಮದುವೆಯ ಉತ್ಸವಕ್ಕೆಂದು ಆ ದಂಡಿನ ಮಧ್ಯದಲ್ಲೇ ಒಂದು ಜಿನಾಲಯವೆದ್ದಿತು. ಅಲ್ಲಿಯೇ ರಾಜರ ಮನೆಯ ದೇಹಾರಗಳು ಅವಸರಕ್ಕೆ ತಕ್ಕಂತೆ ನೆಲೆಸಿದ್ದುವು.

ಭರತೇಶನಾದರೋ, ತಾನೆ ಪೂಜಿಸಿದರೆ ಮೋಕ್ಷಶೃಂಗಾರ ತನಗೆ ಸಲ್ಲದೆಂದೂ, ಭೂರಿವಿಪ್ರರು ಪೂಜೆಮಾಡಿದರೆ ಮೋಹನ ಶೃಂಗಾರವೊದಗುವುದೆಂದೂ ನೋಡಿ, ಬಾರಿಸಲ್ಪಡುವ ವಾದ್ಯಕೋಟಿಗಳು ಒಪ್ಪುತ್ತಿರುವಾಗ ಬಹಳ ವಸ್ತುಗಳಿಂದ ಜಿನಪೂಜೆ ಯಾಯಿತು. ಆ ರಾಜನಿಗಿದು ಸಂಕಲ್ಪ ಪೂಜೆಯಾದರೆ ಬೇರೆಯವರಿಗೆಲ್ಲ ಮೇರು ಪೂಜೆಯಾಗಿತ್ತು ಜಿನಪೂಜೆಯಾದಮೇಲೆ ಬ್ರಾಹ್ಮಣರಿಗೆ ಅಭ್ಯಂಗಪೂರ್ವಕವಾಗಿ ಸತ್ರದಲ್ಲಿ ಸಂತರ್ಪಣೆಯಾಯಿತು. ಅವರೆಲ್ಲರೂ ತಣಿಯುವಂತೆ ಕನಕವಸ್ತುಗಳನ್ನೂ ಕರ್ಪೂರ ವೀಳೆಯವನ್ನೂ ಚಂದನಾದಿಗಳನ್ನೂ ಕೊಟ್ಟನು. ಸತಿ ಸುಭದ್ರಾದೇವಿಯೂ, ಪತಿ ಭರತೇಶನು ಉಚಿತವಾದ ಸುಖದಲ್ಲಿ ಬಾಳಲೆಂದು ಅವರೆಲ್ಲ ಹಿತದ ಆ ಇಚ್ಛಾಭೋಜನವುಂಡು, ದಾನವನ್ನು ಕೊಂಡು ಹರಿಸಿದರು. ಇಂತಹ ಊಟವನ್ನು ಈ ಮೊದಲು ಉಂಡುದಿಲ್ಲವೆಂದೂ ಇಂತಹ ದಾನವನ್ನು ಈ ಮೊದಲು ಪಡೆದುದಿಲ್ಲವೆಂದೂ ಅವರು ಮೆಚ್ಚುತ್ತ ತಲೆಯಲ್ಲಾಡಿಸುತ್ತ ಕಣ್ಣುಮುಚ್ಚುತ್ತ, ಪ್ರೀತಿಯಿಂದ ಹರಸಿದರು.

ಹರದರು, ರಾಯಸದವರು, ಗಣಿಕೆಯರು ಎಂದೆಲ್ಲ ರೀತಿಯ ಪರಿವಾರದೊಳಗಿರುವ

ಸರ್ವರನ್ನೂ ಪರಮಾನ್ನದಿಂದ ಭರತೇಶನು ತೃಪ್ತಿಪಡಿಸಿದನು. ಕೇರಿ ಕೇರಿಗಳಲ್ಲಿ ಸುರಶಿಲ್ಪಿಯು ಭೋಜನ ಶಾಲೆಗಳನ್ನು ಸಾಲು ಸಾಲಾಗಿ ನಿರ್ಮಿಸಿದ್ದನು. ಗೃಹಪತಿಯ ಪ್ರೇರಣೆಯಂತೆ ಪಾಳೆಯದವರಿಗೆಲ್ಲ ಹಾಲನ್ನ ಭಕ್ಷ್ಯಗಳ ಊಟವು ಕ್ಷಣದಲ್ಲಾಯಿತು. ಕಟಕದೊಳಗೆ ಅಲ್ಲಲ್ಲಿ ವಸ್ತ್ರಗಳನ್ನು ರಾಶಿಹಾಕಿ, ಎಲೆಯಡಿಕೆ ಕರ್ಪೂರಗಳನ್ನು ರಾಶಿ ರಾಶಿಯಾಗಿಟ್ಟುಕೊಂಡು ಆ ಮಹಾಸೇನೆಯು ತಣಿಯುವಂತೆ ಹಂಚಲಾಯಿತು. ಅನಂತರ ಸೇನೆಯ ಆನೆ, ಕುದುರೆಗಳಿಗೆ ಮಡ್ಡಿ, ಬಾಣು, ಕಡಲೆ, ಕಬ್ಬುಗಳನ್ನು ಹಾಕಿದರು.

ಪರಿವಾರವು ತಣಿದ ಮೇಲೆ ವ್ಯಂತರರನ್ನು ಭೂಷಣ, ಪರಿಮಳ ವಸ್ತ್ರಗಳಿಂದ ತಣಿಸಿ ಭರತೇಶನು ತನ್ನರಮನೆಗೆ ಎದ್ದನು. ಅಲ್ಲಿ ನರಪತಿ, ಖಗಪತಿ, ಖಗಮಂತ್ರಿ ತನ್ನ ಮಂತ್ರಿ ಮತ್ತು ಸಖರು ಎಂದು ಎಲ್ಲರನ್ನೂ ತಾನೇ ಕೈಮುಟ್ಟಿ ಮನ್ನಣೆಮಾಡಿ ತೃಪ್ತಿಪಡಿಸಿದನು. ಅರಸು ಮಕ್ಕಳಿಗೂ ಅವರ ಮಡದಿಯರಿಗೂ ಉಣಲಿಕ್ಕೂ ತೊಡಲಿಕ್ಕೂ ಇತ್ತು ಅವರನ್ನು ಬಲುಪ್ರೀತಿಯಿಂದ ಕಳುಹಿಸಿದನು. ಗಂಗಾದೇವಿಗೆ, ಸಿಂಧುದೇವಿಗೆ, ತನ್ನ ಎಲ್ಲ ತಂಗಿಯರಿಗೆ ಸುರಪರಿವಾರದವರೆಲ್ಲರಿಗೆ–ತಕ್ಕ ಸನ್ಮಾನಗಳನ್ನಿತ್ತು ಮನ್ನಿಸಿದನು. ಅನಂತರ ತನ್ನ ಅತ್ತೆಯರಿಬ್ಬರಿಗೂ, ನಮಿರಾಜ, ವಿನಮಿರಾಜರಿಗೂ ಅವರ ಸತಿಯರಿಬ್ಬರಿಗೂ ಬೋನಕುಡಿಕೆಗಳನ್ನು ಕಳುಹಿಸಿದನು. ಆ ನಲವತ್ತೆಂಟು ಗಾವುದ ನೆಲದಲ್ಲಿರುವ ಎಲ್ಲರನ್ನೂ ತಣಿಸಿದ ಮೇಲೆ ಮುನಿಭುಕ್ತಿಯೊಂದು ಕಡಿಮೆಯಾಯಿತೆಂದು, ಅದನ್ನೂ ಭಾವನೆಯಿಂದಲೇ ಮುಗಿಸಿದನು. ಭರತೇಶನು ಮಾಡುವ ಓಸಗೆಯನ್ನು ನೋಡಿ ಅವನ ಅತ್ತೆಯರ ಚಿತ್ತ ಹಣ್ಣಾಯಿತು. ನಮಿರಾಜನೂ ಬಣ್ಣವೇರಿದನು.

ಅಂದಿನ ಹಗಲಿನ ಮೊದಲಿನ ಭಾಗವು ಈ ರೀತಿಯಲ್ಲಿ ಸಾಗಿತ್ತು. ಮತ್ತಿನ ಭಾಗದಲ್ಲಿ ಭರತೇಶನು ಕಟಕದೊಳಗೆ ಕುಂಕುಮ ಗಂಧ ಕದಂಬಗಳಲ್ಲಿ ಓಕುಳಿಯಾಡಿಸಿದನು. ಕಸ್ತೂರಿ ಕರ್ಪೂರಗಳನ್ನೂ ಬೆರಸಿದ ಪನ್ನೀರ ಕೊಪ್ಪರಿಗೆಗಳನ್ನೂ ದೋಣಿಗಳನ್ನೂ ಕೇರಿ ಕೇರಿಗಳಲ್ಲಿ ಸಾಲು ಸಾಲಾಗಿ ಇರಿಸಿದನು. ಪರಿವಾರದವರೆಲ್ಲರೂ ವಸಂತವಾಡಿದರು. ಎಲ್ಲರೂ ಹೊನ್ನಹಂಡೆಗಳನ್ನೂ ಜೀರ್ಕೊಳವಿಗಳನ್ನೂ ಉಪಯೋಗಿಸಿಕೊಂಡರು. ಅವರ ಆಟವು ಆನೆ ಸೊಂಡಿಲುಗಳಿಂದ ನೀರು ಸೂಸಿದಂತಾಗುತಿತ್ತು. ಅವರಿಂತು ಓಕುಳಿಯಾಡುವಾಗ ಬೊಂಬುಳಿ, ಪಟಹ, ಮೃದಂಗ, ತಿತ್ತಿರಿ, ಕಹಳೆ ಮುಂತಾದ ವಾದ್ಯಗಳೂ ಮೊಳಗುತ್ತಿದ್ದುವು. ಓಕುಳಿಯ ನೀರನ್ನು ತುಂಬಿ, ಚೆಲ್ಲಿ, ಹರಿದು ಸೇನಾ ಸಾಗರವು ಕುಣಿಯಿತು. ಚೆಲ್ಲಾಟವಾಡಿದ ಶ್ರೀಗಂಧ, ಕುಂಕುಮ ಕೂಡಿದ ಪನ್ನೀರಿಂದ ಕಟಕದ ನೆಲವೆಲ್ಲ ಕೆಸರಾಯಿತು. ಅದನ್ನು ಕಂಡರೆ ಬೇಸಗೆಯಲ್ಲಿ ಮಳೆಗರೆದಂತಿತ್ತು; ಆನೆಯ ಮೇಲಣ ಅಂಬಾರಿಯಲ್ಲಿ ಗಾನ ನರ್ತನಗಳು ಮೆರೆದುವು. ಆನಂದವೊಂದು ಭರತೇಶನ ಸೇನೆಯನ್ನೆಲ್ಲ ಕೂಡಿಕೊಂಡು ಅಲ್ಲಿಂದ ಅರಮನೆಯನ್ನು ಸೇರಿತು.

ಗಂಗಾದೇವ, ಸಿಂಧುದೇವ ಮತ್ತು ನಮಿರಾಜರು, ಅರಮನೆಗೆ ಬಂದು ಶ್ರೇಷ್ಠವಾದ ಮಂಗಳಾಭರಣಗಳನ್ನು ಸೋದರಿಗಿತ್ತು ಮರಳಿದರು. ಆಗ ಅವರ ಕಾಂತೆಯರು ತಾವು ಮದುಮಗಳಿಗೆ ಸುವಸ್ತುಗಳನ್ನು ಪದಿಸಬೇಡವೆಯೆಂದು ಕೇಳಿದರು.

''ನಿಮ್ಮ ಅಣ್ಣನು ಒಪ್ಪಿದರೆ ನೀವು ಹೋಗಬಹುದು'' ಎಂದವರು ಹೇಳಿದರು. ಕೂಡಲೆ ಅವರು ಅನುರಾಗದಿಂದ ಅಣ್ಣನೊತ್ತಿಗೆ ಹೋಗಿ ಕೇಳಿದರು.

''ಮದುವೆಗೆ ಸಿಂಗರಿಸಿದ ಹೆಣ್ಣನ್ನು ನಾವು ನೋಡಿದರಾಗದೆ ಅಣ್ಣ?''

''ತ್ವರಿತವಿಷ್ಟೇಕೆ ಅಕ್ಕ? ಸೈರಿಸಿ; ರಾತ್ರಿಗೆ ನಮ್ಮರಮನೆಯಲ್ಲೆ ನೋಡಬಹುದು. ಪರರ ಮನೆಗೆ ನೀವು ನುಗ್ಗಿಕೊಂಡು ಹೋಗುವುದು ಬಲ್ಲವಿಕೆಯೇ?''

''ಇಲ್ಲಿ ಪರರ ಗೃಹ ಯಾವುದು? ಗಗನವಲ್ಲಭವೆಂಬ ಪುರವೇ ನಿಮ್ಮ ಕಟಕದಲ್ಲಿದೆ. ಬರಹೇಳಿದಂತೆ ಬಂದಿದ್ದರೂ ನಾವು ಹೋಗುವುದರಿಂದ ನಮಗೆ ಪರಿಭವವೇನು ಅಣ್ಣ?''

''ಕರೆಬಂದಾಗ ಅದನ್ನು ಸ್ವೀಕರಿಸಿಕೊಂಡು ಹೋಗದೆ, ತಾವಾಗಿ ಬಂಧುಗಳು ಬಂದರೆ, ಯಾಕೆ ಅವರು ಬಂದರು; ನಾವೇನು ಕರೆದವೇ ಎನ್ನುವರು.ಆಗ ನಮ್ಮ ತೂಕ ತಗ್ಗುವುದು.''

''ಅಣ್ಣ ನೀನೊಲಿದು ನಂಟರೆಂದರೆ ನಂಟರಾಗುವರು; ಬಂಟರು ಎಂದರೆ ಬಂಟರಾಗುವರು.ಅವರೇನು ಪರರೆ ನಮಗೆ? ಅವರ ಸನ್ಮಾನವೇನು? ಅವರು ಒಲಿದಿಟ್ಟುದೇನು? ಇದರಲ್ಲಿ ತಿಣ್ಣವೇನೂ ಇಲ್ಲ, ಆರು ಖಂಡದಲ್ಲಿ ಬಾಳುವವರಲ್ಲಿ ಒಂದು ಹೆಣ್ಣನ್ನಿವರು ಇಷ್ಟು ಪ್ರೀತಿಯಿಂದ, ಇಷ್ಟು ಸಿರಿಯನ್ನು ಹಣ್ಣಿದರೆ ಆ ಹೆಣ್ಣನ್ನು ನೋಡುವ ಆರ್ತಿಯಾಯಿತು ನಮಗೆ; ಅಣ್ಣಾಜಿ ಇದಕ್ಕೆ ನೀನೇನೆನ್ನುವೆ?''

''ನಿಮ್ಮ ಆರ್ತಿ ಸಲಲಿ'' ಎಂದು ಭರತೇಶನವರನ್ನು ಬೀಳ್ಕೊಟ್ಟನು. ಅವರು ಆಗಲೇ ಹೋಗಿ ಆ ಮನೆಯನ್ನು ಹೊಕ್ಕರು.

ಅಳಿಯನ ತಂಗಿಯರು ಬಂದರೆಂದು ಅತ್ತೆ ನಲಿದು ಸುಮ್ಮಾನ ಮಾಡಿದಳು. ಸೇವಕಿಯರಿಂದ ಅವರ ಕಾಲು ತೊಳೆಯಿಸಿ, ನಿವಾಳಿಡಿಯಿಸಿ ಕುಳ್ಳಿರಲು ಹೇಳಿದಳು. ಯಶೋಭದ್ರಾದೇವಿಯ ಮಾತಿಗವರೊಪ್ಪಲಿಲ್ಲ ''ಇಲ್ಲಿ ಬೇಡ; ನಾವು ನಮ್ಮ ಅತ್ತಿಗೆಯ ಒತ್ತಿನಲ್ಲಿ ಕುಳಿತಿರುವೆವು. ಅವಳೆಲ್ಲಿರುವಳು'' ಎಂದವರು ಕೇಳಿದಾಗ ಯಶೋಭದ್ರಾದೇವಿ ಅವರನ್ನು ಮಣೆಮಾಡಕ್ಕೆ ಕರೆದೊಯ್ದಳು.

ಅಲ್ಲಿ ಅವರು, ಮೋಹನವನ್ನು ಸೂಸುತ್ತಿರುವ ಸಿಂಗರದೊಟ್ಟು ತನ್ನ ವಿಲಾಸಿನಿಯರ ಬಳಸಿನಲ್ಲಿರುವಂತೆ ಸುಭದ್ರಾದೇವಿಯನ್ನು ಕಂಡರು. ಆಕೆ ಮನ್ಮಥನ ಪುಣ್ಯದೇವತೆ ಯಂತಿದ್ದಳು.

''ನಿನ್ನ ಅರಸನ ತಂಗಿಯರು ಬಂದರಕ್ಕ; ಏಳು, ಅವರನ್ನು ಮನ್ನಿಸು'' ಎಂದು ತಾಯಿ ಮಗಳಿಗೆ ಹೇಳಿದಳು. ಸುಭದ್ರಾದೇವಿಯೆದ್ದು ಇದಿರಾಗಿ ಬಂದಳು. ಅನ್ಯೋನ್ಯ ಪ್ರೇಮವನ್ನು ನಡಲೆಂದು ಅವರು ಅಲಂಗಿಸಿಕೊಂಡರು. ನಸುನಗುವ ಕಣ್ಣುಗಳಿಂದ ಒಬ್ಬರನ್ನೊಬ್ಬರು ಒಪ್ಪಿಕೊಂಡರು. ಅವರು ಮೂವರು ಒಂದಾಗಿ ಕುಳಿತರು; ಯಶೋಭದ್ರಾದೇವಿ ತಾನೊಬ್ಬಳೇ ಕೆಲದಲ್ಲಿ ಕುಳಿತಳು. ಅವರ ಸುತ್ತಮುತ್ತು ಸೇವೆಯ ನರ ಸುರ ಸತಿಯರು ಬಳಸಿದ್ದರು.

ಸುಭದ್ರಾದೇವಿಯ ಹಾವಭಾವಗಳನ್ನು ಮಾತಾಡುವಂತೆ ಮಾಡಿದ ಸಿಂಗರವನ್ನೂ ಅವರು ನೋಡಿದರು. ಅವಳು ನಾಡಾಡಿ ಹೆಣ್ಣಲ್ಲವೆಂದೂ ಚಕ್ರವರ್ತಿಯನ್ನು ಮರುಳು ಮಾಡಬಲ್ಲವಳೆಂದೂ ಅವರು ನೆನೆದರು.

ಕಾರಿರುಳಿನಲ್ಲಿ ಮಿನುಮಿನುಗಿ ಕಾಣಿಸುತ್ತಿರುವ ತಾರೆಗಳ ಬಿಂಬದಂತೆ, ಅವಳ ತೋರ ಮುಡಿಯಲ್ಲಿ ಮುತ್ತಿನ ಬಲೆಯ ಶೃಂಗಾರವೊಪ್ಪಿತ್ತು. ನೀಲಕುಂತಳವನ್ನೂ ಎಳೆ ಮುತ್ತಿನ ಬೈತಲೆಯನ್ನೂ ಅವರು ಮೆಚ್ಚಿದರು. ಹರಳೋಲೆ, ಮಕರಿಕಾಪತ್ರ, ಮೂಕುತಿ, ಸಣ್ಣಗೆರೆಯ ತಿಲಕ—ಎಲ್ಲವೂ ಮಿನುಗುವುದನ್ನು ಕಂಡು ಆ ಸುರಸತಿಯರು ಸೋತರು. ಇನ್ನು ನರಸತಿಯರು ಸೋಲುವುದು ಆಶ್ಚರ್ಯವೇ? ಕೊರಳಲ್ಲಿ ಚಿಂತಾಕು, ಮಣಿಸರ. ಬಂದಿಗಳು ಒಪ್ಪಿದ್ದುವು. ಹಸ್ತಕಡಗ, ಗೌಳಸರ, ಬಳೆ, ಭುಜಕೀರ್ತಿ, ಉಂಗುರು. ತಾಲೆಗಳೆಲ್ಲವು ಆ ಹಸ್ತಿಗಮನೆಯ ಹಸ್ತದಲ್ಲಿ ಮೆರೆದುವು. ಸಿರಿವಿಡಿದು ಉಟ್ಟ ಸೀರೆಯ ಮೇಲೆ ಮಿಂಚಿನ ಗೊಂಚಲಂತೆ ಬಂಗಾರದ ಗೊಂಡೆಯವು ಶೋಭಿಸಿತು. ಸುಭದ್ರಾದೇವಿಯ ಪಾದಗಳಲ್ಲಿ ಪೆಂಡೆಯಗಳು ಒಪ್ಪಿದ್ದುವು. ಬಳಿಯುಗುರುಗಳಿಗೆ ಅಲತಗೆಯನ್ನು ಹಚ್ಚಿದ್ದರು. ಮಿಂಚುವ ಪಿಲ್ಲಿಯನ್ನು ತೊಡಸಿದ್ದರು. ಅನುರಾಗವನ್ನು ಚೆಲ್ಲುವಂತೆ ಆಕೆಯ ಕೆಂಪುಪಾದಗಳು ತೋರುತಿದ್ದುವು. ಅವಳ ಅಪರಂಜಿ ವರ್ಣದ ಮೈಗೆ ಅಂಜನ ವರ್ಣದ ಸಣ್ಣರವಕೆಯು ಒಪ್ಪಲಾಗಿ ರಂಜಿಸುತ್ತಿತ್ತು. ಮಂಜು ವಸ್ತ್ರದ ಮೇಲು ಸೆರಗು ಆಕೆಗೆ ವಿಶೇಷ ಬೆಡಗನ್ನು ತಂದಿತ್ತು. ಜೂಳಿಯ ಚಿನ್ನದ ಹೂ, ತಾವರೆ ಹೂ, ತಾಳೆಹೂ, ತೋಳುಬಂಕಿ ಕರ್ಣಸರಪಣಿ, ಮೊದಲಾದ ಆಭರಣಗಳೆಲ್ಲವು ಆಕೆಗೆ ಒಪ್ಪಿತವಾಗಿದ್ದುವು. ಸುಭದ್ರಾದೇವಿಯು ಸ್ವಭಾವ ಶೃಂಗಾರಾಂಗಿಯಾಗಿದ್ದಳು. ಹೂವಿಂದ ನಾರು ಮೆರೆವಂತೆ ಆಕೆಯಿಂದ ಆಭರಣಗಳು ಪಾವನವಾದವು. ಆಕೆಯ ಅಂಗವನ್ನು ಸೇರಿ ಅವು ಕಲಾಭರಿತವಾದುವು. ಇನ್ನಾಕೆ ಭರತರಾಜೇಂದ್ರನಿಂದ ಮಹಾ ಭೂಷಣಾಂಗಿ ಯಾಗುವಳು.

ಸುಭದ್ರಾದೇವಿಯು ತನ್ನ ಸಖಿಯರು ಕೊಡುತಿದ್ದ ವೀಳ್ಯದೆಲೆಯ ಘಳಿಗೆಯನ್ನು ಕೊಳ್ಳುತ್ತ,ಸಮ್ಮುಖದಲ್ಲಿದ್ದ ಅಮರಕಾಂತೆಯರ ಮುಖವನ್ನು ನೋಡುತ್ತ ಸುಮ್ಮನಿದ್ದಳು.

''ನೀನೇ ನಮ್ಮಣ್ಣನನ್ನು ಸೋಲಿಸುವವಳು.'' ಎಂದು ಭರತೇಶನ ಸೋದರಿಯರು ಹೇಳಿದರೂ ಅವಳು, ತನಗದು ದೊಡ್ಡದೇ ಎಂದು ಕೇಳುವಂತೆ ನಗುನಗುತ್ತ ಮೌನವಾಗಿಯೇ ಇದ್ದಳು.

''ಈ ತಿಲಕ, ಈ ತುರುಬು, ಈ ಹೂ—ಚಕ್ರ ಧರನನ್ನು ಸೋಲಿಸುವುದು. ಮಾತಾಡು ಹೆಣ್ಣೆ'' ಎಂದವರು ಹೇಳಿದಾಗ ಲಜ್ಜೆಯಿಂದ ತಲೆಬಾಗಿಸಿದಳಲ್ಲದೆ ಸುಭದ್ರಾದೇವಿ ಮಾತನಾಡಲಿಲ್ಲ. ಕೈಯಿಂದವರು ಅವಳ ಮುಖವನ್ನೆತ್ತಿ ನೋಡಿ, ''ಅಯ್ಯಯ್ಯೋ ನಿನ್ನ ಜಾಣ್ಮೆಯೆ, ಮೈಯ್ಯುಳ್ಳ ಮದನ ನಿನ್ನನ್ನು ಮೆಚ್ಚುವನೆ? ನಮ್ಮೊಡನೆ ಕೂಡಲೆ ನುಡಿ'' ಎಂದವರು ನುಡಿದಾಗಲೂ ಅವಳ ಅಡ್ಡಮೋರೆ ಮಾಡಿ ಮೌನವಾಗಿದ್ದಳಲ್ಲದೆ ಮಾತನಾಡಲಿಲ್ಲ.

''ಸರಸ ಗುಣಗಳಿಲ್ಲದ ಇವಳ ರೂಪವು ಕಾಸರಕನ ಹಣ್ಣಿನಂತೆ'' ಎಂದವರು ಕೆರಳಿಸಿ ಮಾತನಾಡಿದರೂ ಅವಳು ನಕ್ಕಳೇ ಹೊರತು ಕೆರಳಿ ನುಡಿಯಲಿಲ್ಲ. ''ಆಕೆಯಿಂದು ನುಡಿಯಳು: ನಾಳೆ, ನಾಡಿದ್ದು ನೀವೊಮ್ಮೆ ಬಂದು ಮಾತಾಡಿ ನೋಡಿ. ಒಂದೊಂದು ನುಡಿಯಿಂದಲೆ ನಮ್ಮನ್ನು ಕಟ್ಟಿಬಿಡುವಳು. ಇಂದಿಗೆ ಸಾಕು'' ಎಂದು ಮಧುವಾಣಿಯು

ಮಧ್ಯೆ ಮಾತನಾಡಿದಳು. ''ನಿಮ್ಮ ಪಾಡೇನು? ನಿಮ್ಮ ಅಣ್ಣ ನುಡಿಗಳನ್ನೂ ಒಮ್ಮೊಮ್ಮೆ ಕಟ್ಟಿ ನಿಲ್ಲಿಸುವಳು. ನಮ್ಮ ದೇವಿಯ ಮುಂದೆ ಪರರಿಗೆ ಜಾಣ್ಮೆಯೇನು? ಅಮ್ಮ ಸೈರಿಸಿರಿ'' ಎಂದು ಮಧುವಾಣಿ ಮತ್ತೂ ನುಡಿದಳು.

''ಅಲ್ಲವೇ ಮತ್ತೆ? ಇವಳೇನು ತನ್ನ ಪತಿಯೊಡನಲ್ಲದೆ ಅನ್ಯರೊಡನೆ ನುಡಿಯೆನೆಂಬ ಛಲವೆ? ಒಳ್ಳಿತು. ಅದನ್ನು ನಮ್ಮಣ್ಣನಿಗೆ ಹೇಳುವೆವು.'' ಎಂದವರು ಹೇಳಿದರು. ಆಗ ಆ ನಲ್ಲೆ ನಾಚಿ ಬೆದರಿದಳು.

''ಯಾಕೆ ಕಾಡುವಿರಿ? ನಿಮ್ಮಣ್ಣನೊಡನಾಗಲೀ, ನಿಮ್ಮೊಡನಾಗಲೀ ಈ ಕನ್ಯೆ ನುಡಿದು ಗೆಲ್ಲುವಳೆ? ಸಾಕು; ಸೈರಿಸಿರಿ. ನಿಮ್ಮ ಅಣ್ಣನ ಕೀರ್ತಿಯೇನು? ನೀವಾದರೋ ದೇವ ಸ್ತ್ರೀಯರು. ನಮ್ಮಲ್ಲೇನುಂಟು? ನಮ್ಮವರೆಂದು ಕೂಡಿಕೊಂಡರಿ'' ಎಂದು ಮದುಮಗಳ ತಾಯಿ, ಯಶೋಭದ್ರಾದೇವಿ ಹಮ್ಮುಇಲ್ಲದೆ ನುಡಿದಳು.

''ದೇವಕನ್ಯೆಯರಿಗೆ ಮಿಗಿಲಾದ ಹೆಣ್ಣನ್ನು ಪಡೆದಿರಿ. ರಾಜಕುಲೋತ್ತಂಸನಿಗೆ ಇವಳನ್ನು ಮದುವೆ ಮಾಡಿಕೊಂಡುವ ಸೌಭಾಗ್ಯವನ್ನು ಪಡೆದಿರಿ. ನೀವೇ ಭಾಸುರ ಪುಣ್ಯವಂತೆ, ಇವಳ ವಿವಾಹವೇ ಕಾರಣವಾಗಿ ನಾವಿಂದು ತವರು ಮನೆಯ ಕಾಣುವಂತಾಯಿತು. ಇದರಿಂದ ಇವಳಿಗಿಂತ ಹಿತವಂತರು ನಮ್ಗಿನ್ನಾರು?'' ಎಂದು ಭರತೇಶನ ಸೋದರಿಯರು ಸಂತೋಷದಿಂದ ಆಡಿದರು.

ಈ ರೀತಿಯಲ್ಲಿ ವಿನಯದ ಮಾತುಗಳನ್ನಾಡಿ ಮತ್ತೆ ಅಣ್ಣನ ವನಿತೆಗೆ ಆಭರಣ ವಸ್ತ್ರಗಳನ್ನು ಅನುರಾಗದಿಂದಿತ್ತು ಹೋಗುವೆವೆಂದು ಅವರೊಂದು ವಿನೋದವನ್ನು ಮಾಡಿದರು. ''ಅತ್ತಿಗೇ,ನೋಡುವೆವು ಉಂಗುರಗಳ'' ಎಂದು ಹೇಳಿ ಅವನ್ನು ಬೆರಳಿಂದ ಒತ್ತಿ ತೆಗೆದು; ''ಕುರುಹೆಂದು ಇವನ್ನು ಕೊಟ್ಟಳೆಂದು ನಿನ್ನ ಪುರುಷನಿಗೆ ಕೊಡುವೆವೆಂದ''ವರು ಕೂಡಲೆ ಎದ್ದರು.ಅವರು ಎದ್ದಾಗ ಸುಭದ್ರಾದೇವಿ ಅವರಿಬ್ಬರ ಕೈಗಳನ್ನೂ ಕುಳಿತಲ್ಲಿಂದಲೇ ಹಿಡಿದುಕೊಂಡು ಚಾಳಿಸಿ ಹೋಗುವವರಿಂದ ಅವನ್ನು ಬಲವಾಗಿ ಹಿಡಿದು ತೆಗೆದು ಕೊಂಡಳು. ಅದನ್ನು ಕಂಡು ಸುಭದ್ರಾದೇವಿಯು ನಿಜವಾಗಿಯೂ ಸ್ತ್ರೀರತ್ನವೆಂದೂ ಆ ರತ್ನಕ್ಕಾಗಿ ತಮ್ಮಣ್ಣ ಕಾದುದು ಸಹಜವೆಂದೂ ಮನಗಂಡರು. ತಮ್ಮ ಶಕ್ತಿಗೂ ಮಿಕ್ಕ ಶಕ್ತಿಯನ್ನವಳಲ್ಲಿ ಕಂಡ ಅವರು ನಮ್ಮ ಚಕ್ರಿಯ ಸೊಕ್ಕನ್ನಿಳಿಸಲು ಇವಳೇ ತಕ್ಕವಳೆಂದು ಬಗೆದರು. ಅರ್ತಿಗೊಂಡರು. ಅವಳಂತಹ ಶಕ್ತಿ ಗಂಭೀರ ಶೃಂಗಾರ ಯಾರಿಗಿದೆಯೆಂದು ಮೆಚ್ಚುಗೆ ತೋರಿದರು.

''ಸಂಧಾನಕ್ಕೆಂದು ಬಂದವರು ಸೂರೆಮಾಡಿದರೆಂಬ ಚೆಲುವನ್ನು ತೋರಿಸಿದರಿ'' ಎಂದು ಸುಭದ್ರಾದೇವಿ ಒಂದೇ ಒಂದು ಮಾತನ್ನಾಡಿದಳು. ಆ ನುಡಿ ಹೊರಹೊಮ್ಮಲು ಅವರಿಗದು ಸ್ವರ್ಗವೀಣೆಯ ನುಡಿಸಿದಂತೆ ಕಿವಿಗಿಂಪಾಯಿತು. ನುಡಿಗೇಳಬೇಕೆಂದು ತಾವು ಮಾಡಿದ ಕಾರ್ಯ ಫಲಿಸಿತೆಂದು ಅವರು ಸಂತೋಷದಿಂದ ನಲಿದರು. ಮತ್ತೊಮ್ಮೆ ಆಕೆಯನ್ನು ಮಾತನಾಡಿಸಬೇಕೆಂದು ಅವರು ಮಾಡಿದ ಪ್ರಯತ್ನವೆಲ್ಲ ವಿಫಲವಾಯಿತು. ಅವಳು ಮೊದಲಿನಂತೆಯೇ ಮೌನತಳೆದಳು. ಅವಳ ಈ ಗಾಂಭೀರ್ಯವನ್ನು ಕಂಡು ದೇವಕಾಂತೆಯರು ಆಕೆಯನ್ನು ಇನ್ನಷ್ಟು ಆರ್ತಿಯಿಂದ ಕಂಡರು. ''ಪ್ರವರ ಶಕ್ತಿಯನ್ನು ನಿನ್ನ

ತವರು ಮನೆಯಲ್ಲಿ ತೋರುವೆಯಲ್ಲವೆ? ನಮ್ಮ ತವರಿಗೆ ಬಂದಾಗ ನಾವೇ ಹೇಳುವೆವು.'' ಎಂದವರು ನಗುತ್ತ ಹೊರಟರು. ಆಗ ಯಶೋಭದ್ರಾದೇವಿ ಅವರಿಗೆ ಮಂಗಳ ವಸ್ತುಗಳನ್ನಿತ್ತು ಅವರನ್ನು ಮನ್ನಿಸಿದಳು. ಅವರೂ ಉತ್ಸಾಹದಿಂದ ನಲಿದು ಉತ್ತಮ ವಸ್ತುಗಳ ಉಡುಗೊರೆಗೊಟ್ಟು ಬೀಳ್ಕೊಂಡರು.

ಅವರು ನೆಟ್ಟಗೆ ಚಕ್ರೇಶನಲ್ಲಿಗೆ ನಡೆದು. ''ಅಣ್ಣಾಜಿ ಮದುವೆಯ ಹೆಣ್ಣನ್ನು ಕಂಡೆವು. ಮೊದಲು ನೀನು ಮಾಡಿಸಿದ ಉತ್ಸವವು ಅಧಿಕವೆಂದು ಭಾವಿಸಿದ್ದೆವು. ಆ ಸತಿಗೆ ಅದು ತಕ್ಕದಾಗಿದೆ. ಆಕೆಯ ಶೃಂಗಾರ ಗಂಭೀರಗಳೇ ಸಾಕು. ಮತ್ತೆ ಆಕೆಯನ್ನು ನೋಡಿದರೆ ಒಂದು ರತ್ನ ಶಲಾಕೆಯು ಹೆಣ್ಣಾಗಿ ಹುಟ್ಟಿತೆಂದು ಲೋಕದ ಹೆಣ್ಣುಗಳೇ ಹೇಳುವಂತಿರುವಳು.''

''ಅಕ್ಕಾಜಿ, ಅದನ್ನೆಲ್ಲ ಹಂಸನಾಥನೆ ಬಲ್ಲನು, ನೀವೆಲ್ಲ ಇಷ್ಟು, ಬಣ್ಣಿಸುವುದೇಕೆ?'' ಎಂದು ಭರತೇಶನು ನುಡಿದನು.

''ಅಣ್ಣಾ ಆಕೆಯ ವಿಚಾರದಲ್ಲಿ ನಿನಗಾವ ಸಂಶಯವು ಬೇಡ, ಆಕೆಯನ್ನು ಕಂಡು ನಾವೇ ಸೋತೆವು. ಅಣ್ಣ ಕೇಳು, ಅಮ್ಮಾಜಿ ಬಣ್ಣಪಟ್ಟು ಬಂದರೆ ಎಲ್ಲ ಸಂಭ್ರಮಗಳೂ ಆದಂತಾಯಿತು. ಆಗ ನಮ್ಮ ಕಣ್ಣ ಹಬ್ಬಕ್ಕೆ ಎಣೆಯುಂಟೆ ಹೇಳು?''

''ಅಕ್ಕ , ನಾನೂ ನಿಮ್ಮಂತೆ ನೆನೆದೆನು.ಮೊದಲೇ ವಿಮಾನ ಕಳುಹಿಸಿ ಕರೆಯಿಸಲೆಂದರೆ ಅದಕ್ಕೊಂದು ತೊಂದರೆಯಿದೆ.ಅಮ್ಮಾಜಿ ಬರುವಾಗ ಚಿಕ್ಕಮ್ಮನೂ ಬರಬೇಕು. ಆದರೆ ಬಾಹುಬಲಿಯಿದಕ್ಕೆ ಒಪ್ಪಲಾರ,ಆದರಿಂದ ತಮ್ಮ ಕಠಿಣ ಗುಣಗಳನ್ನು ಸುಮ್ಮನೆ ಹಬ್ಬಿಸುವುದೇಕೆ? ಇಂದಿನ ಮಟ್ಟಿಗೆ ತಾಳಿರಿ.''

ಎಂದು ಭರತೇಶನು ತಾಯಿಯ ಬರವನ್ನು ಇಚ್ಛಿಸಿ ಮಾತನಾಡಿದ ಸಹೋದರಿಯರನ್ನು ಸಂತೈಸಿದನು.

ಅಷ್ಟಕ್ಕೆ ಇರುಳಾಯಿತು. ಹುಣ್ಣಿಮೆಯೆಂದು ಚಂದ್ರನ ಪ್ರಕಾಶ ಬಿಂಬಿಸಿತು. ಇದು ನರಲೋಕವಲ್ಲ; ಜೋತಿರ್ಲೋಕವೆನ್ನುವಂತೆ ಸೊಡರುಗಳೂ ಪಂಜುಗಳೂ ತೋರಿದುವು. ವಿಜಯ ಪರ್ವತವೆಂಬ ಪಟ್ಟದಾನೆಯ ಮೇಲೆ ಭರತೇಶನ ಬಾರಿಗ, ಧ್ವಜ, ಚಾಮರಗಳು ಮೆರೆದುವು. ಪಟ್ಟದಾನೆಯ ಮೇಲೆ ಪರರು ಏರಬಾರದೆಂದು ಅದರ ಮೇಲೆ ಅರಸನ ಭಾವಚಿತ್ರವನ್ನಿರಿಸಿ ಶೃಂಗರಿಸಿ ಪಟ್ಟಬಾಸಿಗವನ್ನು ಮುಂದಿಟ್ಟು ಮೆರೆಯಿಸಿದರು. ಮಧುವಾಣಿಯು ಮದುವಣಗಿತ್ತಿಯ ರತ್ನಾಂಗ ಪಟ್ಟದ ತೊಂಡಿಲನ್ನು ಹಿಡಿದು ಮಂಗಲಮುಖಿಯನ್ನೇರಿದಳು. ಹಿಂದಿನಿಂದಲೇ ವಿಜಯ ಪರ್ವತವು ಬರುತಿತ್ತು. ಈ ರೀತಿಯಲ್ಲಿ ಮೆರವಣಿಗೆ ಸಾಗಿತು. ಮಾನವಲೋಕದ ಮಂಗಲದಂಪತಿಗಳ ಆಭರಣಗಳನ್ನು ತಳೆದಿರುವ ಆನೆಗಳು ಗಂಭೀರವಾಗಿ ನಡೆದುವು.

ಅರಸ ಅರಸಿಯರ ಮದುವೆಯನ್ನು ಅರಮನೆಯಲ್ಲಿ ಕಾಣುವುದು ಕಷ್ಟವೆಂದು ಜನರೆಲ್ಲರೂ ಕರಿಗಳ ಮದುವೆಯನ್ನು ಕಣ್ಣಾರೆ ಕಂಡರು. ಆಗ ದೇವಲೋಕದಲ್ಲಿ ಮಾರ್ದನಿಯಾಗುವಂತೆ ವಾದ್ಯಕೋಟಿಗಳು ಮೊಳಗಿದವು. ಘುಳಘುಳಿಸುವ ಸಾಗರದಂತೆ ಸಾರ್ವಭೌಮನ ಸೇನೆಯು ಜಯಜಯವೆಂದು ಕಲಕಲಿಸಿತು. ಊರಲ್ಲೆಲ್ಲ ಪರಿವಾರದವರು

ಉರಿಬಾಣಗಳನ್ನೂ ಪುಷ್ಪ ಬಾಣಗಳನ್ನೂ ಬಿಡುವ ಕೆಲಸದಲ್ಲಿ ಮಗ್ನರಾದರು. ಅದೆಲ್ಲವೂ ಆಕಾಶದ ತಾರೆಗಳು ಭೂಮಿಗಿಳಿದು ಬಂದಂತೆ ತೋರಿತು.

ಮೆರವಣಿಗೆಯು ಸೇನೆಯ ಮಧ್ಯಕ್ಕೆ ಬಂದಾಗ ಹಿಮವಂತದೇವನು ನಾಗಯಕ್ಷಿಣಿಯರ ನೃತ್ಯವನ್ನು ಮಾಡಿಸಿದನು. ಅದನ್ನು ಕಂಡು ವಿಜಯಾರ್ಧ ದೇವನು ಆಕಾಶದಲ್ಲಿ ಗಂಧರ್ವಗಣಿಕೆಯರಿಂದ ಮಯೂರ ಕುಣಿತವನ್ನು ತೋರಿಸಿದನು. ಖೇಚರರಾಜರೂ ಖೇಚರಿಯರಿಂದ ನೃತ್ಯವನ್ನಾಚರಿಸಿದರು. ಭೂಚರಿಯರು ಭೂಮಿಯ ಮೇಲೆ ಕುಣಿದರು.

ಆಮೇಲೆ ಮೆರವಣಿಗೆಯು ಅರಮನೆಯತ್ತ ತಿರುಗಿತು. ಬಾಸಿಗ ತೊಂಡಿಲುಗಳನ್ನು ಅರಮನೆಗೊಯ್ದರು.ಆಗಲೆ ಸೇನೆಯ ಮಧ್ಯದಲ್ಲಿ ಆನೆಗಳ ಮದುವೆಯಾಯಿತು. ಆನೆದಂಪತಿಗಳು ಕರಪಿಡಿದು ನಡೆದಾಗ ಸರ್ವಸೇನೆಯೇ ಖೋ ಎಂದು ನಲಿಯಿತು. ಹೊರಗಿಂತು ಕರಿಗಳ ವಿವಾಹ ಸಂಭ್ರಮವಾಗುತ್ತಿರಲು ಅರಮನೆಯೊಳಗೆ ನವರತ್ನಗಳಿಂದ ರಚಿತವಾದ ಬಾಸಿಗವನ್ನು ಭರತೇಶಗೆ ಕಟ್ಟಿ ಸಿಂಗರಿಸಿದರು. ಅದನ್ನು ಧರಿಸಿದಾಗ ಮುಖವೆಂಬ ಚಂದ್ರನಿಗೆ ಪರಿವೇಷವೊಪ್ಪಿದಂತದು ಶೋಭಿಸಿತು. ಅಂದು ತನ್ನ ತಂದೆ ರಾಜ್ಯಪಟ್ಟವನ್ನು ಕಟ್ಟಿದ್ದರೆ, ಇಂದು ಈ ರತಿರಾಜ್ಯಪಟ್ಟವನ್ನು ತಾನೇ ಕಟ್ಟಿಕೊಂಡನು ಎಂದು ಹೇಳುವಂತೆ ಲೋಕಪೂಜ್ಯನು ವಿವಾಹದ ಪಟ್ಟವೇರಿದನು. ಅತ್ತ ಸುಭದ್ರಾದೇವಿಗೂ ಚಕ್ರೇಶ್ವರನ ಸತಿಯೆಂಬ ಬಿಂಕದಿಂದಲೇ ಸಿಂಗರಿಸಿ ಪಟ್ಟಗಟ್ಟಿದರು. ಅವರಿವರೆಲ್ಲರು ಲಗ್ನ ಸಮೀಪಿಸಿತೆಂದು ಆಡುತ್ತ ಅತ್ತಿತ್ತ ಸರಿಯುತ್ತ ಉತ್ಸಾಹದ ಸಂಭ್ರಮದಲ್ಲಿದ್ದರು. ಮದುಮಕ್ಕಳೂ ಈ ಉತ್ಸಾಹದಲ್ಲಿ ಮೆರೆದಿದ್ದರೆಂದು ಬೇರೆ ಹೇಳಬೇಕಾಗಿಲ್ಲ.

## ೨೨

# ಸ್ತ್ರೀರತ್ನ

ಇನ್ನೇನು—ಲಗ್ನವು ಸಮೀಪಿಸಿತು. ಎಂದಾಗ ನಮಿರಾಜನು ತನ್ನ ತಂಗಿಯನ್ನು ಸಂತೋಷದಿಂದ ಪಲ್ಲಕಿಯಲ್ಲಿರಿಸಿಕೊಂಡು ಮದುವೆಯ ಮಂಟಪಕ್ಕೆ ಹೊರಟನು. ಹೆಣ್ಣಿನ ಕಡೆಯ ರಾಜರನ್ನೆಲ್ಲ ಕೂಡಿಕೊಂಡು ಬಣ್ಣ ಬೆಳಕಿನ ಚೆಲುವಿನಿಂದ ತಣ್ಣಸವಾದ ಬೆಳದಿಂಗಳಲ್ಲಿ ಕೋಟಿ ದೀವಟಿಗೆಗಳ ಬೆಳಕನ್ನೂ ಮೀರಿಸುವ ಬೆಳಕಿನಲ್ಲಿ ಬರುತಿದ್ದನು. ಆಗ ಆಕಾಶದಲ್ಲಿ ಖೇಚರಿಯರೂ ಗಂಧರ್ವ ಮಾನಿನಿಯರೂ ಭೂಮಿಯಲ್ಲಿ ಭೂನಾರಿಯರೂ ನರ್ತಿಸುತಿದ್ದರು.

ಮದುವೆ ಮಂಟಪದಿಂದ ಬುದ್ಧಿಸಾಗರ ಮಂತ್ರಿಯು, ವ್ಯಂತರ ರಾಜರು ಸಮೇತ ಹೆಣ್ಣಿನ ದಿಬ್ಬಣವನ್ನು ಎದುರುಗೊಳ್ಳಲು ಹೊರಟನು. ತೇರು, ಆನೆ, ಕುದುರೆಗಳಿಂದ ಈ ದಿಬ್ಬಣದಲ್ಲಿ ನೇಜಿಯ ಹಸುರೆಲೆಗಳ ಸುತ್ತಿಗೆಗಳೂ, ಕನ್ನೆಯರು ಹಿಡಿದಿರುವ ಕಳಸಕನ್ನಡಿಗಳೂ ಶೋಭಿಸುತ್ತಿದ್ದುವು. ಇಮ್ಮುಖವಾಗಿ ಬಂದ ದಿಬ್ಬಣ ಒಟ್ಟುಸೇರಿಕೊಂಡು ಮತ್ತೆ ಒಮ್ಮುಖವಾಗಿ ನಡೆಯಿತು. ಎರಡು ದಿಬ್ಬಣಗಳ ವಾದ್ಯಘೋಷಗಳು ದಶದಿಕ್ಕುಗಳಲ್ಲೂ ತುಂಬಿದವು.

ಹೀಗೆ ಬಂದ ದಿಬ್ಬಣವು ನೃಪನ ಅರಮನೆಯೆದುರು ನಿಂತಿತು. ಆಗ ಮದುಮಗಳಿದ್ದ ಪಲ್ಲಕಿಯನ್ನು ಮದುವೆಯ ಗೃಹಕ್ಕೆ ಉಲ್ಲಾಸದಿಂದೊಯ್ದುರು. ನಮಿರಾಜನು ಜನನಿಯರಿಬ್ಬರನ್ನೂ ಕೂಡಿಕೊಂಡು ತಂಗಿಯ ಪಲ್ಲಕ್ಕಿಯ ಹಿಂದಿನಿಂದಲೇ ಅರಮನೆಯನ್ನು ಪ್ರವೇಶಿಸಿದನು. ಅವನೊಡನೆ ವಿನಮಿರಾಜ ಗಂಗಾದೇವ ಸಿಂಧೂ ದೇವ ಮೊದಲಾದವರೂ ಇದ್ದರು.

ಮಂತ್ರದ ವಿಪ್ರರನ್ನು ಕೂಡಿಕೊಂಡು ಚಕ್ರೇಶನ ಮಂತ್ರಿಯಾದ ಬುದ್ಧಿಸಾಗರನು ಆಮೇಲೆ ಒಳಹೊಕ್ಕನು. ಮದುವೆಯ ಮಂಟಪವು ಮಂತ್ರ ಶಾಲೆಯಂತೆ ಕೆಲವೇ ಜನರಿಂದ ಸಂತೃಪ್ತಿಪಡೆದಿತ್ತು, ಕನ್ನೆಯು ಮುತ್ತಿನ ಮೆಟ್ಟಕ್ಕಿಯ ಮೇಲೆ ನಿಂತಳು.ಆಗ ಮುತ್ತಿನ ತೆರೆಯನ್ನು ಹಿಡಿದರು. ಅಲ್ಲಿಯೇ ಮಾನಿನಿಯರು ಸ್ವರವೆತ್ತಿ ಶೋಭನಧವಳಗಳನ್ನು ಹಾಡುತ್ತಿದ್ದರು. ಮೆಟ್ಟಕ್ಕಿಯ ಮೇಲೆ ನಿಂತ ನಲ್ಲೆಯೇ ದಟ್ಟಿಸಿ ಬರಿಸಿದಳೋ ಎಂಬಂತೆ ಭರತೇಶನೂ ಸುಲಗ್ನ ಸಮೀಪಿಸಿತೆಂದು ಮಂಟಪಕ್ಕೆ ಹೊರಟನು. ಅವನೊಂದಿಗೆ ಕಿನ್ನರ ಕಿಂಪುರು ಷಾಂಗನೆಯರು ಭಿನ್ನರುಚಿಯಲ್ಲಿ ಹಾಡುತಿದ್ದರು. ಭರತೇಶನ ಬೆನ್ನಲ್ಲೇ ಅವನ ತಂಗಿಯರೂ ಅಮರ ವಿಲಾಸಿನಿಯರೂ ಇದ್ದರು. ಭರತೇಶನಾದರೊ, ಬಲಗೈಯಲ್ಲಿ ಬಂಗಾರದ ಒರೆಯ ಕಠಾರಿಯನ್ನು ಧರಿಸಿದ್ದನು. ಹೊಳೆಯುವ ಹಾವುಗೆಗಳನ್ನು

ಮೆಟ್ಟಿದ್ದನು. ದೇವ ಶೃಂಗಾರದಿಂದ ಶೋಭಿಸುವ ಭರತೇಶನು ಚಾವುಸೀಗುರಿಗಳ ಮೋಡಿಯಲ್ಲಿ ಮದುವೆ ಮಂಟಪಕ್ಕೆ ಬರುತಿದ್ದನು. ''ಸದಮಲಾತ್ಮಾರಾಮ, ಷಟ್ಖಂಡನಾಯಕ, ಸುದತೀಜನಾನಂದ ರೂಪಾ, ಚದುರರ ದೇವ, ಜಯಜಯ'' ವೆಂದು ಪಾಠಕರು ಹೊಗಳುತ್ತಿರುವಾಗ ಭರತೇಶನು ಬಂದು ಮದುವೆಯ ಮನೆಯನ್ನು ಹೊಕ್ಕನು. ತೆರೆಯ ಮರೆಯಲ್ಲಿ ನಿಂತಿದ್ದ ನಲ್ಲೆಯನ್ನು ನೋಡುವನೋ ಎಂಬಂತೆ ಮುತ್ತಿನ ಮೆಟ್ಟಕ್ಕಿಯನ್ನು ಮೆಟ್ಟಿನಿಂತನು.

ಆಗ ದಿವಿಜರು ಸಿದ್ಧಾಂತ ಸಂಪಾದಿತ ಮಂಗಲಾಷ್ಟಕಗಳನ್ನು ಓದಿದರು. ''ಆದಿಚಕ್ರಿಗೆ, ಸುಭದ್ರಾದೇವಿಗೆ ಅಧಿಕ ಲೀಲೋದಯ ದೊರಕೊಳ್ಳಲಿ''—ಎಂದು ಮಂಗಲಾಷ್ಟಕವನ್ನೋದಿದರು. ಅನಂತರ ಮದುವೆಯ ವಿಧಿ ಸಾಗುತ್ತಿದ್ದಾಗ ಎರಡು ಕಡೆಯವರೂ ಕೇಳುವ, ಹೇಳುವ ಆಯುತವೆಂಬ ಮಾತು ಮೆರೆಯಿತು. ಅಷ್ಟರಲ್ಲಿ ನಡುವಣ ತೆರೆಯನ್ನು ಸರಿಸಿದಾಗ ಎಲ್ಲರೂ ಜಯಕಾರ ಮಾಡಿದರು. ಪ್ರಮದೆಯ ಕೈಗೆ ಹೂಮಾಲೆಯನ್ನು ಕೊಟ್ಟು ''ನಿನ್ನ ರಮಣಗೆ ಸೂಡು,'' ಎಂದು ನಮಿರಾಜ, ವಿನಮಿರಾಜ, ಸಿಂಧುದೇವ ಗಂಗಾದೇವರು ಸಂಭ್ರಮದಲ್ಲಿ ಹೇಳಿದರು. ನಾಚಿಕೆಯಿಂದ ತಲೆತಗ್ಗಿಸಿದ ವಧುವಿನ ಕೈಗಳನ್ನು ಮಧುವಾಣಿಯು ಎತ್ತಿಸೂಚಿಸಲು ಧವಳ ಕಲ್ಯಾಣ ಶೋಭನದ ಘೋಷವು ಪ್ರತಿಧ್ವನಿಗೊಡುತ್ತಿರಲು ಸುಭದ್ರಾದೇವಿಯು ಪ್ರಾಣಕಾಂತಗೆ ಮಾಲೆಹಾಕಿದಳು. ''ನಿನ್ನಿಂದ ನನಗೆ, ನನ್ನಿಂದ ನಿನಗೆ ತಾಪವುಕ್ಕಿ ಹೊಯ್ಮಾಲೆಯಾಗಿತ್ತು, ಇನ್ನು ಹೊಯ್ಮಾಲೆಯಿಲ್ಲ; ಅದೇ ಹೂಮಾಲೆಯಾಯಿತು''—ಎಂಬ ಗೌರವದಲ್ಲಿ ಆಕೆ ಮಾಲೆ ಸೂಡಿದಳು. ದುಂಡುದೋಳುಗಳನ್ನೆತ್ತಿ ಆಕೆ ಮಾಲೆಹಾಕಿದಾಗ ತ್ರಿಜಗದ ಭಾಗ್ಯವೇ ಬಂದು ಒಲೈಸಿದಂತಾಯಿತು ನೃಪನಿಗೆ. ಮಾಲೆಯನ್ನಿಕ್ಕುವಾಗ ಗಂಡನ ಮುದ್ದುಮೊಗವನ್ನು ಕಾಣುತ್ತನಗುತ್ತ, ಲಜ್ಜೆಯಿಂದವಳು ತಲೆತಗ್ಗಿಸಿದಳು. ಭರತೇಶನಾಗ ನಗುತಿದ್ದನು.ಮೊದಲೇ ದೇವಲೋಕದ ತೊಡಿಗೆಯ ತೊಟ್ಟ ಸ್ವಭಾವ ಸುಂದರನಾದ ಭರತೇಶನಿಗೆ ಮಾಲೆಹಾಕಿದಾಗ ಹೊಸ ಕಾಂತಿಯೊಂದು ತುಂಬಿತು. ಅದೆಂತಹ ಸಂತೋಷ ! ಆಮೇಲೆ ನಾಲ್ವರು ಸಹೋದರರು ತಂಗಿಯ ಕೈಯನ್ನೆತ್ತಿ ಚಕ್ರೇಶನ ಕೈಗೆ ಹತ್ತಿಸಿದರು.ಅದು ಸಕಲೇಂದ್ರಿಯ ಸುಖದ ಸಂಪತ್ತು ಕೈ ಸೇರುವಂತಾಯಿತು.

''ದೊಡ್ಡವನಲ್ಲವೆ ನೀನು? ಲೋಗರಿಗೆ ಕೈಯೊಡ್ಡದವನಲ್ಲವೆ? ನಮ್ಮ ರಾಜನಿಗೆ ಕೈಯೊಡ್ಡಬಹುದೆ?'' ಎಂದು ನಗುತ್ತ ಮಧುವಾಣಿಯು ಕೇಳಿದಳು. ನಮಿರಾಜನದನ್ನು ಕೇಳಿ ನಸುನಕ್ಕನು.ಚಕ್ರೇಶನದಕ್ಕೆ ಸಂತೋಷಗೊಂಡು ತನ್ನ ಎಡಗೈಯಿಂದಲೇ ಮಿರುಗುವ ಹಾರವೊಂದನ್ನು ತೆಗೆದು ಅವಳ ಮೇಲಿಟ್ಟನು; ಇನ್ನು ಮಾತನಾಡಬೇಡವೆಂದು ನಗುತ್ತ ಸೂಚಿಸಿದನು.

ಕರತಳಗಳು ಸೋಂಕಿದಾಗ ಒಬ್ಬೊಬ್ಬರ ಮೈಯಲ್ಲೂ ಪುಳಕಗಳು ಅಂಕುರಿಸಿದುವು. ಬಿನ್ನಾಣದಿಂದ ತಂದ ಎಳೆಲತೆಯನ್ನು ಬಾವನ ವಕ್ಷವೆಂಬ ವೃಕ್ಷಕ್ಕೆ ಹಬ್ಬಲಿತ್ತು, ಪನ್ನೀರು ಎರೆಯುವಂತೆ ನಮಿರಾಜನು ಹೊನ್ನಗಿಂಡಿಯಲ್ಲಿ ಧಾರೆಯೆರೆದನು. ಅಂಗಜಾಗಮ ಸಿದ್ಧಿರಸ್ತು, ಲೀಲಾಸ್ತು, ಸುಸಂಗೋಸ್ತು ಜಯ ಜಯ ಎಂಬರವರಿಂದ ತಂಗಾಳಿಯು

ಹೂವಿನ ಪರಿಮಳವನ್ನು ಹಿಡಿಯುವಂತೆ ಭರತೇಶನು ತನ್ನ ಅಂಗನೆಯ ಬೆರಳನ್ನು ಹಿಡಿದನು. ನಲ್ಲೆಯ ಕೈಹಿಡಿದು, ಅಲ್ಲಿಂದ ನಡೆದು ಒತ್ತಿನಲ್ಲೇ ಹೊಗೆಯನ್ನು ಕಳೆದು ಉಲ್ಲಾಸದಿಂದ ಉರಿವ ಹೋಮಕುಂಡವನ್ನು ಓಜೆಯಿಂದಲೂ ಚೆಲುವಿನಿಂದಲೂ ಕೂಡಿ ಮೆಲ್ಲನೆ ಬಲವಂದನು. ಇನಿಯಳ ಕೈಹಿಡಿದು ಚಂದ್ರಬಿಂಬದ ಒತ್ತಿನಲ್ಲಿ ವಿನೋದಕ್ಕೆ ಆಡುತ್ತಿರುವ ಕಾಮನಂತೆ ಭರತೇಶನು ತನ್ನ ಮಾನಿನಿಯ ಹಸ್ತಾಂಗುಲಿ ಹಿಡಿದುಕೊಂಡು ಅಗ್ನಿಕುಂಡಕ್ಕೆ ಸುತ್ತುಬಂದನು. ಅಳಿಯನೊಡನೆ ಹೋಗುತ್ತಿರುವ ಮಗಳ ಗಾಡಿಯನ್ನು ಹೆಣ್ಣುಗಳ ಮರೆಯಲ್ಲಿ ನಿಂತು ನೋಡಿ ನೋಡಿ ಪುಲಕಗೊಂಡು ಆನಂದರಸದಲ್ಲಿ ಓಲಾಡಿದಳು, ಯಶೋಭದ್ರಾದೇವಿ.

ಭರತೇಶನು, ನಮಿರಾಜ ಮುಂತಾದ ರಾಜರನ್ನೂ, ಮಂತ್ರಿಗಳೇ ಮೊದಲಾದ ವರನ್ನೂ ಸಂಭ್ರಮದ ನೋಟದಲ್ಲಿ ಬೀಳ್ಕೊಟ್ಟು ರಮಣಿಯ ಕೈಹಿಡಿದುಕೊಂಡು ಲೀಲೆಯಿಂದ ಉತ್ತಮವಾದ ರಾಜಗೃಹವನ್ನು ಪ್ರವೇಶಿಸಿದನು.

ಗಂಡಹೆಂಡಿರ ಪಟ್ಟಬಾಸಿಗ, ಬೆನ್ನಿನ ಪಚ್ಚೆದಂಡೆ, ನಡುವಿನ ಚಿಂತಾಕು, ತೊಂಡಿಲು, ರವಕೆ ಮುಂತಾದ ಕಿರಿದಾದವುಗಳನ್ನು ಊಳಿಗದ ಹೆಂಗಸರು ತಮ್ಮೊಳಗೆ ಸೆಳೆಕೊಂಡರು. ಹೋಗಲೆಂದವನ್ನು ಭರತೇಶನು ಹೊರ ಪಟ ಶಾಲೆಯಲ್ಲೇ ಕೊಟ್ಟು ಅನುರಾಗದಿಂದ ಒಳಗೆ ಹೋಗುವಾಗ ಗಂಗಾದೇವಿ ಸಿಂಧುದೇವಿಯರು ಬಂದು ಪ್ರೀತಿಯಿಂದ ಬಾಗಿಲನ್ನು ತಡೆದರು.

"ನಿಲ್ಲಣ್ಣ, ನೀನೆಮ್ಮ ತವರುಮನೆಗೆ ಹೇಳದೆ ಎಲ್ಲಿಯ ಹೆಣ್ಣನ್ನು ಕೈ ಹಿಡಿದು ಗೆಲವಿನಿಂದ ಬರುತ್ತಿರುವೆ. ನಮ್ಮೊಡನೆ ಅವಳೀಗ ಸೊಲ್ಲಿಸಿ ಒಳಗೆ ಬರಲಿ."…..

ಎಂದು ಅಣ್ಣನೊಡನೆ ನುಡಿದು ಮತ್ತೆ ಮದುಮಗಳನ್ನೇ ಕೇಳಿದರು.

"ಆರು ಹೆಣ್ಣೇ ನೀನು? ನಿನ್ನ ಹೆಸರೇನು? ನೀನು ನಿಮ್ಮ ಭೂರಿ ಕುಟುಂಬವನ್ನು ಬಿಟ್ಟು ಯಾರ ಹಿಂದೆ ಬಂದಿರುವೆ? ನಿನಗಿವನು ಏನಾಗಬೇಕು? ಹೇಳು?"

ಆಮೇಲೆ ಆ ದಿವಿಜೆಯರು ಅಣ್ಣನ ಚೆಲುವನ್ನು ಕಂಡರು.

"ಕಟಕದಲ್ಲಿ ಈತನನ್ನು ಕೂಡಿಕೊಂಡೀಗ ಬರುತಿಪ್ಪಾಳೆ. ಇವನಿಗೆ ಅನೇಕ ಸ್ತ್ರೀಯರಿದ್ದಾರೆ. ಅವರನ್ನು ಮರೆಯಿಸಿ, ಮಹಾರಾಜನನ್ನು ಬೇರೆಮಾಡಿಕೊಂಡು ಈಕಡೆಗೆ ಬಂದಿರುವೆ, ಭಾಪು. ನೀನು ಬಲು ಮಾಯಕಾತಿ. ನಿನ್ನನ್ನು ನೋಡಲೆಂದು ನಿನ್ನ ತವರು ಮನೆಗೆ ಬಂದರೆ, ಉನ್ನತವಾದ ಶಕ್ತಿಯನ್ನು ಕಾಣಿಸಿದೆ; ಇಲ್ಲೀಗ ಅದನ್ನು ತೋರಿಸೊಮ್ಮೆ ನೋಡುವೆವು."

ಎಂದವರು ಅಣ್ಣನ ಮೇಲಿನ ನೋಟವನ್ನು ಅತ್ತಿಗೆಯ ಮೇಲಿರಿಸಿ ಮೂದಲಿಸಿದರು. ಆಗ ಚಕ್ರಿಯು ಮುನ್ನಾದುದೇನೆಂದು ಕೇಳಿದನು. ಅದಕ್ಕವರು ತವರುಮನೆಯಲ್ಲಾದುದನ್ನು ತಿಳಿಸಿದರು.

"ನಿನಗೆ, ಆಕೆಯ ಉಂಗುರವನ್ನು ತಂದುಕೊಡಬೇಕೆಂದು ಅನುಪಿಸಿ ಬರುವಾಗ, ಒಬ್ಬೊಬ್ಬರನ್ನು ಒಂದೊಂದು ಕೈಯಲ್ಲಿ ತೊನೆದು ನಿಲ್ಲಿಸಿಕೊಂಡಳು. ಕುಳಿತಲ್ಲಿಂದ ಏಳದೆ ಇಬ್ಬರನ್ನು ಬರಸೆಳೆದು ಉಂಗುರಗಳನ್ನು ಸೆಳೆದುಕೊಂಡಳೀಕೆ. ಆ ಬಲುಮೆಯನ್ನಿಲ್ಲಿ ತೋರಲೀಗ."

ಅದಕ್ಕೆ ಭರತೇಶನು ತನ್ನೊಳಗೇ ಮೆಚ್ಚಿ ನಸುನಕ್ಕನು. ''ನುಡಿ ಹೆಣ್ಣೆ'' ಎಂದರೆಲ್ಲವರು, ಆಕೆ ಸುಮ್ಮನಿರುವಳು. ''ಇಲ್ಲದಿದ್ದರೆ ತಪ್ಪನ್ನು ಕೊಡು, ನಿನ್ನನ್ನು ಬಿಡುವೆವು.'' ಎಂದರವರು. ಆಗ ಭರತೇಶನೇ ತಂಗಿಯರನ್ನು ಸಮಾಧಾನಪಡಿಸಿದನು.

''ನನ್ನೊಳಗೆ ಆದವರು ಮಾಡಿದ ತಪ್ಪನ್ನು, ಅಕ್ಕಾ, ನನ್ನದೆಂದು ಕಾಣಿರಿ. ನಾನು ನಿಮ್ಮನ್ನು ಮನ್ನಿಸುವೆನು.'' ಆಗ ಅವರು ಮನ್ನಣೆಯೇನೆಂದು ಕೇಳಿದರು.

ರನ್ನ ಚಿನ್ನಗಳಲ್ಲಿ ಮಾಡಿದ ಮಾಡಗಳನ್ನೂ ಒಬ್ಬೊಬ್ಬರಿಗೆ ಹೊನ್ನುಯ್ಯಾಲೆಯನ್ನೂ ಹನ್ನೆರಡು ಕೋಟಿ ಗ್ರಾಮಗಳನ್ನೂ ಕೊಡುವೆನು. ಹಿಡಿಯಿರಿ, ರನ್ನ ಮುದ್ರಿಕೆಯನ್ನು'' ಎಂದು ಭರತೇಶನು ಇತ್ತನು.

ಆಗ ಅವರು, ಸ್ತ್ರೀಪುರುಷರಿಬ್ಬರೂ ಸುಖಬಾಳಿರೆಂದು ಸೇಸೆ ತಳಿದರು. ಜಗಕ್ಕೆ ಅಗ್ರಗಣ್ಯನಾದ ಭರತೇಶನ ಸೋದರಿಯರು ಅಗಣಿತವಾದ ಐಶ್ವರ್ಯ ಲಾಭದಲ್ಲಿ ಬಾಗಿಲ ತೆರೆದು ಅಲ್ಲಿಂದ ಹೋದರು. ಭರತೇಶನು ಸತಿಯೊಂದಿಗೆ ಒಳಗೆ ಹೋದನು. ಅಲ್ಲಿದ್ದ ಸೇವಕಿಯರು ಸಕಲ ವಸ್ತುಗಳನ್ನಿಟ್ಟು ಕಾಲ್ತೊಳೆದು ಹೋದರು.

ಆತ್ಮಾರಾಮನಾದ ಭರತೇಶನು ಅರಿಯದ ಸುಕಲೆಯುಂಟೆ? ಸೌಭದ್ರಾ ದೇವಿ ತನ್ನ ರಮಣನನ್ನು ಅಪ್ಪಿ ಕಣ್ಣು ಮುಚ್ಚಿದರೆ ಭಾವುಕನಾದ ಅವನು ಸಚ್ಚಿದಾನಂದ ವಸ್ತುವನ್ನು ಅಪ್ಪಿ ಕಣ್ಮು ಮುಚ್ಚಿದನು. ದೇಹ ದೇಹವನ್ನು ಸೋಂಕಿದ್ದರೂ ಅವನ ಮನವು ಆತ್ಮ ಕಲೆಯನ್ನು ನೆಮ್ಮಿತ್ತು. ಭರತೇಶನ ಆ ನೆಲೆಯು ಆತ್ಮಗಾಮಿಗೆ ಗಮ್ಯವಲ್ಲದೆ ನಾಡಬಳಕೆಗಾರರಿಗೆ ಗೋಚರವಲ್ಲ. ಮಂಗಳ ನಿದ್ರೆಯಲ್ಲಿ ಎರಡು ಘಳಿಗೆ ಕಣ್ಣುಗಳನ್ನು ಮುಚ್ಚಿದ್ದು ತನ್ನಂಗನೆಗೆ ಅರಿಯದಂತೆ, ಓಜೆಯಿಂದೆದ್ದು ಆತ್ಮಸಂಗದಲ್ಲಿದ್ದನು.

ಹಂಸತೂಲಿಕಾತಲ್ಪದ ಮೇಲೆ ಸಿದ್ಧಾಸನನಾಗಿ ಕುಳಿತು, ಒಪ್ಪಿನಿಂದ ಹಂಸನಾಥನನ್ನು ನೋಡುವೆನೆಂದು ಕಣ್ಣುಗಳನ್ನು ಮುಚ್ಚಿ, ಹೊಸ ಬೆಳಕಿನ ರೂಪದಲ್ಲಿರುವುದನ್ನು ಕಂಡನು.

ಹೊಸ ಮದುಮಗಳ ರತಿಯಲ್ಲಿ ಜಾಡ್ಯವೆಲ್ಲ ಝಾಡಿಸಿ ಹೋಯಿತು. ಮನಸ್ಸಿಗೆ ಗೆಲುವಾಯಿತು. ಭರತೇಶನಿಗೆ, ಬಿಸಿಯನ್ನು ಬಿಟ್ಟ ಸೂರ್ಯನಂತೆ ಅವನಂಗದಲ್ಲೇ ಆತ್ಮ ಕಾಣಿಸುತಿತ್ತು. ಪರಮಾತ್ಮಯೋಗದಲ್ಲಿರುವಾಗ ಕರ್ಮವು ಜಲಜಲನೆ ಹರಿದು ಹೋಗುವುದು.

ಎರಡು ಘಳಿಗೆಯ ಮೇಲೆ ಸುಭದ್ರಾದೇವಿ, ನಿದ್ರೆ ಸರಿಯಲು ಮೈಮುರಿದು ಎದ್ದಳು. ಅವಳ ಕಂಕಣದ ಕಾಲುಗೆಜ್ಜೆಯ ನಾದವನ್ನು ಕೇಳಿ ಚಂದ್ರಮುಖಿಯೆದ್ದಳೆಂದು ಭರತೇಶನು ಹಂಸನಾಥನಿಗೆ ವಂದಿಸಿ ಕಣ್ಣುಗಳನ್ನು ತೆರೆದನು. ಬೆಳಗಾಗುವ ಮುಹೂರ್ತದಲ್ಲಿ ಇಬ್ಬರೂ ಜಲವನ್ನು ಮುಕ್ಕುಳಿಸಿ ವೀಳ್ಯವನ್ನು ಕೈಕೊಂಡು, ಸರಸವಾಡುತ್ತಿದ್ದರು. ಅಷ್ಟರಲ್ಲಿ ಮುಂಜಾವದ ಧಾರೆ ಹೊಳೆಯಿತು. ಎರಡು ಜಾವದಲ್ಲಿ ಪ್ರೀತಿಯನ್ನು ರಂಜಿಸಿದ ನಿದ್ರೆಯೂ ಸರಿಯಿತು.

ಸುಭದ್ರಾದೇವಿಯೆಂದರೆ ಭಕ್ತಿಯ ಬೊಂಬೆಯೇ ಆಗಿದ್ದಳು. ''ನಾನಲ್ಲವೆ, ದೇವರ ಊಳಿಗದವಳು''— ಎಂದು ಹೇಳಿ, ಅವಳೇ ಸಂಧಾನಿಸುವ ವೀಳ್ಯವನ್ನು ತಾನೇ ಕೈಯೆತ್ತಿ ಪತಿಗಿತ್ತಳು.

''ಪುತ್ಥಳಿಯು, ವೀಳ್ಯವನ್ನು ಕೊಡಲಿ; ನೀನು ನನ್ನ ಒತ್ತಿನಲ್ಲಿರು.''

''ಚಿತ್ತೈಸಬೇಕು; ಸೇವೆ ನನ್ನದು ; ಇದು ನನ್ನ ಬೇಡಿಕೆ.''

ಗಂಡ ನುಡಿದರೆ ತಾನೂ ನುಡಿಯುತ್ತಿದ್ದಳು ಸುಭದ್ರಾದೇವಿ. ಪಡಿಮಾತಿನಲ್ಲಿ ನೀವು ತಾವು ಎನ್ನುವಳು; ಅಯ್ಯಜೀಯ ಎನ್ನುವಳು. ಸರಸದ ವೇಳೆಯಲ್ಲಿ ನೀನು ತಾನೆಂದು ತನ್ನೊಳು ಒಂದಾದವಳು ಈಗ ಗಂಭೀರೆಯಾಗಿ ಪತಿಭಕ್ತಿಗೊಪ್ಪುವ ನಯದಿಂದ ನುಡಿವುದನ್ನು ಕಂಡು ತನ್ನ  ಸತಿಯ ಈ ಗುಣಕ್ಕೆ ರಾಯನು ಮೆಚ್ಚಿದನು. ಅದು ರಾಜಸುತೆಯರ ಲಕ್ಷಣವಲ್ಲವೇ?

ಸರಸಿಗಳಿಬ್ಬರು ಸರಸದೊಂದಿಗೆ ವೀಳಯ ಮೆಲ್ಲುವುದೆಂದರೆ ಅದೂ ಒಂದು ಕಲೆಯೇ ಸರಿ. ಅಂತಿತ್ತು, ಆ ಸತಿಪತಿಯರು ಕೊಟ್ಟ, ಕೊಂಡ, ಸವಿದ ಆ ಎಲ್ಲ  ಕ್ರಿಯೆ ನವಿರೇಳುವಂತಿದ್ದುವು.

ಆಕೆ ಸೋದರಮಾವನ ಮಗಳು; ಮೇಲೆ ಅಮರ ಸ್ತ್ರೀಯರನ್ನೂ ಮೀರಿಸುವ ರೂಪವುಳ್ಳವಳು; ಎಂದಮೇಲೆ ಆದಿಯಿಂದ ತೊಡಗಿ ಅಂತ್ಯದವರೆಗಿನ ಅವರ ಸರಸದಾಟವೆಂದರೆ ಅದೊಂದು ವಿಲಾಸವೆ. ಅವನೆಂದರೆ ಸೋದರತ್ತೆಯ ಮಗನು; ತೇಜಸ್ಸಿನಲ್ಲಿ ಮೂಡುವ ಆದಿತ್ಯನು; ಮೇಲಾಗಿ ಷಟ್ಖಂಡದ ಅರಸು. ಆ ದೇವಿಗೂ ಅವನಿಗೂ ಆದ ಆ ಮನಸ್ಸಿನ ಏಕಕವೆಂದರೆ ಚಿನ್ನವನ್ನು ಕಾಸಿ ಬೆಸೆದಂತೆ.

ಅಂದು ಒಂದಿರುಳನ್ನು ಭೋಗದಲ್ಲಿ ತೀರಿಸಿದರು.

ಅನಂತರ ಭರತೇಶ ತನುಶುಚಿಗೈದು ಹಾಸಿಗೆಯಲ್ಲಿ ವಿಶ್ರಮಿಸಿದನು. ಆಗ ಸೂರ್ಯನು ಉದಯಿಸುವುದನ್ನು ಕಂಡು ಸಜ್ಜೆವನೆಯ ಬಾಗಿಲಲ್ಲಿ ಗಾಯನವಾರಂಭಿಸಿದರು. ಭೂಪಾಳಿ ಧನ್ನಾಸಿರಾಗವನ್ನು ಸತಿಯರು ಆಲಾಪಿಸುತ್ತ ಹಂಸನನ್ನು ಹಾಡಿದರು. ಆಗ ಭರತೇಶನು ತನ್ನ  ನಾರಿಯನ್ನು ಕೂಡಿಕೊಂಡು ಹೂವಿನ ಬಾಗಿಲನ್ನು ತೆರೆದು ಆ ರಮ್ಯಗೃಹದಿಂದ ಹೊರಬಂದನು.

## ೨೩

## ಸೇಸೆ

ಸತಿಯನ್ನು ಮಜ್ಜನ ಮಾಡಿಸಿ ತರಬೇಕೆಂದು ಭಂಡಾರವತಿಗೆ ಹೇಳಿ, ರಾಜೇಂದ್ರನು ತಾನೊಂದು ಮನೆಯನ್ನು ಹೊಕ್ಕು ಮಜ್ಜನಾಯತನಾಗಿ ಬಸದಿಯತ್ತ ಸಾಗಿದನು. ಅಲ್ಲಿ ಜಿನ ಪೂಜೆಗೈದು ಆತ್ಮಯೋಗವನ್ನು ಮಾಡಿದನು. ಆ ಮೇಲೆ ಮೋಹನದ ಶೃಂಗಾರಾಂಗನಾಗಿ ಮನೆಯೊಳಗೆ ಭದ್ರಶಾಲೆಯ ಸಿಂಹಾಸನದಲ್ಲಿ ರಾಜಿಸಿದನು ರಾಜೇಂದ್ರ.

ಗಂಡನಲ್ಲಿರಲು, ಇಲ್ಲಿ ಸತಿಗೆ ಮಜ್ಜನ ಮಾಡಿಸಿದರು. ಆ ಕಾರ್ಯದಲ್ಲಿ ಭಂಡಾರವತಿಗೆ ರತಿಚಂದ್ರೆಯೆಂಬವಳೂ ನೆರವಾದಳು. ಮಜ್ಜನಮುಗಿಯುವಷ್ಟರಲ್ಲಿ ಅಲ್ಲಿಗೆ ಮಧು ವಾಣಿಯೂ ಬಂದು ಮುಟ್ಟಿದಳು. ಸಖಿಯನ್ನು ಕಂಡೊಡನೆ ಸುಭದ್ರಾದೇವಿ, ಲಜ್ಜೆಯಿಂದ ನಗುತ್ತ ಮುಖವನ್ನು ಬಾಗಿಸಿದಳು. ಆದರೆ ಮಧುವಾಣಿ ಬಿಡಲಿಲ್ಲ. ''ಸುಖ ಸುಗ್ಗಿಯಾದುದೇ? ಲೇಸು !'' ಎಂದು ತನ್ನ ಕೈಯಿಂದ ಮುಖವನ್ನೆತ್ತಿ ಕೇಳಿದಳು. ಸುರಸೆಯಾದ ಮಧುವಾಣಿಯ ಮಾತೆಂದರೆ ಅದು ಕಾಮನರಮನೆಯಲ್ಲಿ ಪಳಗಿದ ಪಂಡಿತವಕ್ಕಿಯ ಒಳ್ನುಡಿಯಂತೆ.

ಮಧುವಾಣಿಯ ಮಧುರ ಪ್ರಶ್ನೆಗಳಿಗೆ ರತಿಚಂದ್ರೆಯೇ ಉತ್ತರವಿತ್ತಳಲ್ಲದೆ ಗಂಭೀರ ಧೀರೆಯಾದ ಸುಭದ್ರಾದೇವಿಯು ತುಟಿ ಅಲ್ಲಾಡಿಸಲಿಲ್ಲ.

''ಚಂದ್ರಮುಖಿಗೆ ನಖರೇಖೆಯೆಂಬುದು ಅರ್ಧಚಂದ್ರಾಭರಣವಲ್ಲವೆ? ದೇವಿಗಿದು ರಾಯನಿತ್ತ ರಕ್ಷೆಯಲ್ಲವೆ? ಇದರಿಂದ ಬಾಧ್ಯ ಕೆಡುವುದು ತ್ರಾಣ ಕೊಡುವುದು; ಭರತರಾಜನ ಸಂಗದಿಂದ ಸುಭದ್ರಾದೇವಿ ಸೌಭಾಗ್ಯವತಿಯಾದಳು.''

ಈ ಮಾತಿಗೆ ಎಲ್ಲರೂ ಹರುಷಗೊಂಡು ಅಹುದೆಂದರು. ಅನಂತರ ಸ್ನಾನಗೃಹದಿಂದ ಶೃಂಗಾರ ಗೃಹಕ್ಕೆ ಹೋದರು. ಶೃಂಗಾರ ಗೃಹಕ್ಕೆ ಬಂದ ಮೇಲೆ ದಾಸಿಯರು ಸುಭದ್ರಾದೇವಿಗೆ ಮೋಹನ ಶೃಂಗಾರವನ್ನು ತೊಡಿಸಿದರು. ಆ ಹರಿಣಾಕ್ಷಿಯನ್ನು ಭರತೇಶನಲ್ಲಿಗೊಯ್ಯುವೆವೆಂದು ಅವರು ಊಹಿಸುತ್ತಿರುವಾಗಲೇ ಒಂದು ಲೀಲೆ ಯಾಯಿತು.

ಗಂಗಾದೇವಿ, ಸಿಂಧುದೇವಿಯರು ಅಲ್ಲಿಗೆ ಬಂದು ರಾಜಸತಿಯನ್ನು ಸಂಧಿಸಿದರು. ಮಂದಹಾಸದಿಂದ ಒಬ್ಬರನ್ನು ಒಬ್ಬರು ಆಲಿಂಗಿಸುತ್ತಪ್ರೀತಿಯಿಂದ ಒಂದಾಗಿ ಕುಳಿತರು.

''ನಿನ್ನೆ ನೀವು ರೋಡಾಡಿ ಹೋದಿರಿ. ಇಂದು ಏನನ್ನು ಮಾಡಬೇಕೆಂದು ಎಣಿಸಿರುವಿರಿ? ನೀವು ನೋಡಲು ಬಂದವರೋ, ಕಾಡಲು ಬಂದವರೋ, ಹೇಳಿ?'' ಎಂದು ರಾಯನರಸಿಯು ಕೇಳಿದಳು.

"ಅತ್ತಿಗೆ ನಿನ್ನ ಮೈಯನ್ನು ನೋಡಬಂದೆವಲ್ಲದೆ ನಿನ್ನನ್ನು ಕಾಣಲು ಬಂದವರಲ್ಲ" ಎಂದವರು ನಗೆಯೊಡನೆ ವಿನೋದವಾಡಿದರು.

ಸುಭದ್ರಾದೇವಿ ಮೊದಲು ನಕ್ಕಳು. 'ಇಂದೇನು ನೋಡುವಿರಿ? ನೋಡುವವರು ಆಗಲೇ ಬರಬೇಕಿತ್ತು?' ಎಂದವಳು ಕೊಂಕುನಗೆಯೆಸಳುಗಳಿಂದ ಅತ್ತಿಗೆಯರನ್ನು ಕೆಣಕಿದಳು.

"ಕೊರಳಿಗಿಷ್ಟು ಚಂದನಲೇಪನವೇಕೆ? ಇದು ಬೇಚರ ಜಾತಿಯ ಸಿಂಗಾರವೋ?" ಎಂದವರು ಮೊದಲಿಸಿದರು.

"ಚಂದನದ ವಿಚಾರದಲ್ಲಿ ನಿಮಗಿಷ್ಟೇಕೆ ಲೋಭ? ಮುತ್ತಿನ ಸರಗಳನ್ನೂ ತಾಳಿ ಬಂದಿಯನ್ನೂ ಅನ್ಯರಿಗೆ ತೋರುತ್ತಿರಬೇಕೆ? ತೊಡಿಗೆಯೂ ಪರಿಮಳದ ಲೇಪನವೂ ಕಷ್ಟವೇ?"

"ಕೈಗಳಲ್ಲಿ ನಿನ್ನೆಯ ಬಳೆಗಳಿಲ್ಲ; ಇಂದೀಗ ಹೊಸಬಳೆಗಳು ಬಂದಿವೆ. ನಿನ್ನ ನಿನ್ನೆಯ ರೀತಿಯೇ ಬೇರೆ; ಇಂದಿನ ರೀತಿಯೇ ಬೇರೆ. ಇದೇನು?"

"ಹಳೆ ಬಳೆಗಳನ್ನು ಬಿಟ್ಟು ಹೊಸ ಬಳೆಗಳನ್ನು ತೊಟ್ಟರೇನು? ಅದರಿಂದ ಭೂಮಿಯಲ್ಲಿ ಕೊರತೆಯೇ? ಬಳೆಗಳ ಗುರುತು ನಮಗಿಷ್ಟು ಇರಬೇಕಾದರೆ ನೀವೇನು ಬಳೆಗಾತಿಯರೇ?"

"ಆಗಲಿ ; ನೀನು ನಮ್ಮನ್ನು ಜರೆದರೆ ನಮಗೇನೂ ನೋವಿಲ್ಲ; ಚೆನ್ನಾಗಿ ಬಾಯಿ ತೆರೆದು ಮಾತನಾಡು, ಮೂಗಿಗೆ ತಾವರೆಯನ್ನು ತಾಗಿಸಿಕೊಂಡೇಕೆ ಮಾತನಾಡುವೆ?"

"ಹೊಸತೊಂದು ತಾವರೆಯನ್ನು ಕೈಯಲ್ಲಿ ಹಿಡಿದುಕೊಂಡು ವಾಸಿಸುತ ಮಾತನಾಡಿದರೇನು? ನಸು ಬಾಯಿದೆರೆದರೆ ಸಾಲದೆ? ಹಲ್ಲುಗಳನ್ನು ಲೆಕ್ಕಿಸಬೇಕೇ ನೀವು?"

ತಾವರೆ ಹೂವನ್ನು ತಿನ್ನಬೇಡವೆಂದು ಅವರು ಸುಭದ್ರಾದೇವಿಯ ಕೈಯಿಂದ ಅದನ್ನೆಳೆದುಕೊಂಡರು; ಮತ್ತು ಸುಖಿಯಾಗಿ ಬಾಳೆಂದು ಹರಸಿದರು.

"ಸುಖದ ಬಾಳೇ ಬಾಳು; ದುಃಖದ ಬಾಳೇ ಸಾವು—ಎಂಬುದು ನಿಜವಾದ ತಿಳಿವಳಿಕೆ" ಎಂದಳು ದೇವಿ.

ಹೀಗೆ ಅವರು ಮಾತನಾಡುತ್ತ ನಗೆಯಾಟವಾಡಿದರು. "ಚಂಡೆ, ನೀನು ನಮ್ಮ ಅಣ್ಣನ ಜೀವನವನ್ನೇ ಸೂರೆಗೊಂಡೆ." ಎಂದು ಅಪ್ಪಿಕೊಂಡು, ಹಣೆಯಿಟ್ಟು ಮುಂಡಾಡಿದರು.

ಅಷ್ಟರಲ್ಲಿ ತಡವೇಕಾಯಿತೆಂದು ಅರಸನ ಬಳಿಯಿಂದ ಕಾರ್ಯದ ಹೆಣ್ಣುಗಳು ಬಂದರು. ಆಗ ಸುಭದ್ರಾದೇವಿಯು ಅತ್ತಿಗೆಯರನ್ನು ಬಳಲಿದಿರಿಯೆಂದು ಆಲಂಗಿಸಿ ಕಳುಹಿಸಿದಳು.

ಆ ಮೇಲೆ ಸುಭದ್ರಾದೇವಿಯು ಬಸದಿಗೆ ಹೋಗಿ ಆರುಹನಿಗೆ ವಂದಿಸಿ ತನ್ನ ಪುರುಷನಿಲ್ಲಿದ್ದಲ್ಲಿಗೆ ಹೋದಳು. ಆಗ ಕೋವಿದನಾದ ಭರತೇಶನು ಒಂದು ಕಾರ್ಯವನ್ನೇ ಯೋಚಿಸಿದನು. ಅವನು ಒಬ್ಬ ಉಳಿಗದವಳನ್ನು ಕರೆದು ಕಿವಿಯಲ್ಲೇನೋ ಹೇಳಿದನು. ಕೂಡಲೇ ಅಲ್ಲಿದ್ದ ಊಳಿಗದವರೆಲ್ಲರೂ ಭದ್ರಶಾಲೆಗೆ ಹೋದರು. ದೇವಿಯವರೊಬ್ಬರೇ ಮೊದಲು ಹೋಗಬೇಕೆಂದೂ ದೇವನು ಅಲ್ಲಿರುವನೆಂದೂ ಅವಳು ದೇವಿಗೆ ಹೇಳಿದಳು.

ಸುಭದ್ರಾದೇವಿಯು ಅವಳ ಕೈಗೊಂದು ಮಾಣಿಕ್ಯವಿತ್ತು ಕಳುಹಿಸಿದಳು. ಮಧುವಾಣಿ, ವಿಣಾಕ್ಷಿಯರನ್ನು ತಕ್ಕ ಸ್ಥಾನಗಳಲ್ಲಿ ನಿಲ್ಲಲೆಂದು ಕಳುಹಿಸಿದಳು.

ಅನಂತರ ಸುಭದ್ರಾದೇವಿಯು ಭರತೇಶನಿದ್ದಲ್ಲಿಗೆ ನಡೆದಳು, ಅವಳ ಮೈಯ್ಯ ಕಂಪಿಗೆ ತುಂಬಿಗಳು ತುಂಬುತಿದ್ದುವು. ಹಂಸಗಳು ಆಕೆಯ ಕಾಲ ಬಳಿಯಲ್ಲೇ ಸಾಗುತ್ತಿದ್ದವು. ಖಗಗಳನ್ನು ಕೂಡಿಕೊಂಡು ಬರುತ್ತಿರುವ ಇವಳು ಖಗವನಿತೆಯೋ ಎಂಬಂತೆ ಕಾಣುತಿದ್ದಳು. ಕಾಲುಗಳ ಅಂದುಗೆ, ಹೊನ್ನಿನ ಸಂಕಲೆಗಳಿಂದವಳು ಒಪ್ಪಿ; ಬಿರುದಿನ ಮದಗಜದಂತೆ ಅವಳು ಬರುತ್ತಿದ್ದಳು.

ಒಬ್ಬನೇ ಸಿಂಹಾಸನವೇರಿ ಕುಳಿತಿದ್ದ ಪತಿಯನ್ನು ಕಂಡು ಆಕೆ ಉಬ್ಬಿನಲ್ಲಿ ಬಂದಳು.

''ಒಬ್ಬಳೇ ಒಂದು ಮನೆಯನ್ನು ಹೊಕ್ಕು ಬರುತ್ತಿರುವ ಈ ಗಬ್ಬಿ ಯಾರು? ಭೂಚರಿಯಂತೆ ಬರಲು ಅಂಜುವಳೇನು? ಹಾಗಾದರೆ ಇವಳು ಖೇಚರಿಯೋ? ಇವಳು ಖೇಚರಿಯೇ ಅಹುದು. ಅದನ್ನು ಸೂಚಿಸಲೆಂದೇ ಒಬ್ಬಳಾಗಿ ಬಂದಳು ;''

''ಒಬ್ಬಳೇ ಅಲ್ಲ; ಈಗ ಕೇಳುವವರೊಬ್ಬರು, ನಾನೊಬ್ಬಳು. ಹೀಗೆ ಈ ಮನೆಯಲ್ಲಿ ಇಬ್ಬರಿದ್ದೇವೆ. ಹಾರುವ ತುಂಬಿಗಳಿವೆ. ಅಡಿಯಿಟ್ಟು ನಡೆಯುವ ಹಂಸಗಳಿವೆ; ಹೀಗಾಗಿ ನಾವು ಸರ್ವರೂ ಇರುವೆವು.''

ಎಂದು ಸುಭದ್ರಾದೇವಿಯು ಭರತೇಶನ ಬಳಿಗೆ ಸಾಗಿದಳು.

''ಬಾಲೆ ನೀನಾರು?''

''ನೀನಾರೆಂದು ಯಾರು ಕೇಳುತ್ತಾರೋ ಅವರ ಊಳಿಗದವಳು.''

''ನೀನೀಗ ಕೇಳುವವನ ಪ್ರಾಣ ಪಾಲಕಿಯಲ್ಲವೆ?''

ಇನ್ನು ಲಘುವಾಕ್ಯ ಸಲ್ಲದೆಂದು ಅವಳು, ಕಾಣಿಕೆಗೊಟ್ಟು ಕೈಮುಗಿದಳು. ಅವಳಿತ್ತ ಕಾಣಿಕೆಯನ್ನು ಘನವಾಗಿ ಕಾಣದೆ ಅವನು ವಿನೋದಕ್ಕಾಗಿ ಕೈ ಮುಗಿದನು. ''ಅಯ್ಯೋ, ನಮ್ಮನ್ನೇಕೆ ನೋಯಿಸುವಿರಿ?'' ಎಂದು ಹೇಳಿ, ಅವಳು ಅವನ ಕಾಲಿಗೆ ತನ್ನ ಹಣೆಯನ್ನಿಟ್ಟಳು. ಆಗ ಆ ಸೊಬಗನ್ನು, ಅವಳನ್ನು ಕೈಯಿಂದ ಹಿಡಿದೆತ್ತಿ, ''ದೋಷವಿಲ್ಲ'' ಎಂದು ಒಲಿದು ಮೈಯನ್ನು ತಡವಿದನು.

''ಮೊದಲು ನಾನು ಮಾವಾಜಿಗೆ ಕೈಮುಗಿದವನಲ್ಲವೆ? ಮಾವಾಜಿ ತಪಸ್ಸಿಗೆ ಹೋದರು. ನೀನು ಮಾವನ ಮಗಳಷ್ಟೆ. ಈಗ ಆ ತೇಜವು ನಿನಗಿರಲಿ.''

ಸುಭದ್ರಾದೇವಿಯು ನಗುತ್ತ ಕಣ್ಣಾಲಿಗಳನ್ನು ಚಲಿಸದೆ ಆತುರದಿಂದ ಭರತೇಶನನ್ನೇ ನೋಡುತ್ತ ಅವನ ನುಡಿಗಳನ್ನೇ ಕೆಳಗೆ ನಿಂತು ಆಲಿಸುತಿದ್ದಳು. ''ಮೇಲಕ್ಕೆ ಚಿತ್ತೈಸಿ, ದೇವಿಯರು ನಿಂತು ಓಲೈಸುವುದೇಕೆ?'' ಎಂದವನೇ ಕೈಗಳನ್ನು ಹಿಡಿದು ಮೇಲಕ್ಕೆಳೆದು ಅವಳ ಚೆಂದುಟಿಗಳನ್ನು ಚುಂಬಿಸಿದನು. ಆಕೆ ಅವನ ತನುಸೋಂಕಿ ಕುಳಿತಳು.

''ದೇವ, ನಿನ್ನ ಒಡಹುಟ್ಟಿದವರಿಂದು ಬಂದು ನಾನಾವಿಧಿ ಮಾಡಿದರು.'' ಎಂದು ತಾವರೆಯನ್ನು ಎಳೆದುಕೊಂಡುದೇ ಮುಂತಾದ ಸಂಗತಿಗಳನ್ನೆಲ್ಲ ತಿಳಿಸಿದಳು. ಅವನು ಅದನ್ನೆಲ್ಲ ಕೇಳಿದನು ; ಆಕೆ ತೋರಿದುದನ್ನೇ ನೀನೇ ನೋಡೆಂದು ಕನ್ನಡಿಯಿಂದಾಕೆಗೂ ತೋರಿಸಿದನು.

"ನನ್ನನ್ನು ಒಬ್ಬಳನ್ನೇ ಕರೆಸಿದುದೇಕೆ?"

"ತರುಣಿಯರೆಲ್ಲರೀಗ ಬಂದು ನಿನಗೂ ನನಗೂ ಸೇಸೆಯನ್ನಿಡುವರು. ಅದನ್ನು ವಿರಚಿಸುವುದಕ್ಕಾಗಿ ಬರಿಸಿದೆನು."

"ಎತ್ತರದ ಸಿಂಹಾಸನವನ್ನೇರಿ ಕುಳಿತಿದ್ದರೆ ನಿಮ್ಮ ಅರಸಿಯರು ಅಳಲುವರು. ಅದಕ್ಕಾಗಿ ಪುಟ್ಟಗದ್ದುಗೆಯಲ್ಲಿ ಕೆಳಗೇ ಇರುವೆನು."

"ಮೊದಲೇ ನಾನು ಅವರೊಂದಿಗೆ ಒಡಂಬಡಿಕೆಮಾಡಿಕೊಂಡಿರುವೆನು. ಅದರಲ್ಲಿ ನೀನೇನನ್ನೂ ಎಣಿಸಬೇಡ."

"ಹೃದಯವರಿತ ಮೇಲೆ ಮುಂದೆ ನಾನೇ ಹೇಳುವೆನು. ಇಂದಿಗಿದು ಬೇಡ. ರಾಜಪುತ್ರಿಯರಷ್ಟೆ. ಅವರು ತೇಜಕ್ಕಾಗಿ ಬಾಳುವರು; ತೇಜಕ್ಕಾಗಿ ಬದುಕನ್ನೂ ತೊರೆವರು. ಮುಂದೆ ನಾನು ಸೌಜನ್ಯದಲ್ಲೇ ಕಾರ್ಯ ಮಾಡಿಸಿಕೊಳ್ಳುವೆನು. ಇಂದು ಬೇಡ. ಸವತಿಯರಲ್ಲವೇ? ಮತ್ಸರ ಹುಟ್ಟಿದರೆ ಶೋಕವನ್ನುಂಟು ಮಾಡುವರು; ತಾವು ಶೋಕಗೊಳ್ಳುವರು. ದಿನರಾತ್ರಿ ರೊಚ್ಚೆಯಾದುದು ಬದುಕೆ? ಛಿ, ಸವಿಯೇ? ಪ್ರಾಣೇಶ, ನಿನ್ನ ಕೃಪೆ ನನಗುಂಟೆಂದು ಕೋಣೆಯೆಲ್ಲವೂ ಬಲ್ಲುದು. ಇನ್ನು ಕೋಣೆಯಲ್ಲಿ ನಾವಿಷ್ಟು ಕೆಳಗಿದ್ದರೇನು ಕಡಿಮೆ?"

ಭರತೇಶನಾದರೊ, ತನ್ನ ಒತ್ತಿನಲ್ಲಿ ಹೀಗೆಯೇ ಮಾಡುವಳೆಂದು ಮೊದಲೆ ನೆನೆದಿದ್ದನು. ತನ್ನವಳ ಆಂತರ್ಯವನ್ನು ಪರೀಕ್ಷಿಸಿ ನೋಡಿದನು. ಅದು ತನ್ನಂತೆ ಇದೆಯೆಂದು ತಿಳಿದು ಮೆಚ್ಚಿದನು. ಆಗಲೇ ಊಳಿಗದವರನ್ನು ಕರೆದು ಸಿರಿಗದ್ದುಗೆಯನ್ನು ಕೆಳಗಿರಿಸಲು ಹೇಳಿದನು. ಅವರು ಹಾಗೇ ಮಾಡಲು ಅವರಿಬ್ಬರೂ ಅದರಲ್ಲಿ ಕುಳಿತರು,

ಅಷ್ಟರಲ್ಲಿ ಅಲ್ಲಿಗೆ ಅತ್ತಿಗೆಯರು ಬಂದರು. ಆಗ ಸುಭದ್ರಾದೇವಿಯು ಇದಿರೆದ್ದು ಹೋಗಿ, ಅವರನ್ನು ಅಪ್ಪಿಕೊಂಡು, ತನ್ನ ಒತ್ತಿನಲ್ಲಿರುವ ಮಂಗಲವಾದ ಆಸನಗಳಿಗೆ ಕರೆದೊಯ್ದು ಕುಳ್ಳಿರಿಸಿದಳು. ಅವರ ಹಿಂದಿನಿಂದಲೇ ಕಾಣಿಕೆಯೊಂದಿಗೆ ಬರುತ್ತಿದ್ದ ರಾಣಿಯರನ್ನು ಕಂಡೊಡನೆ ಗದ್ದುಗೆಯಿಂದೆದ್ದು ಅವರನ್ನು ಇದಿರ್ಗೊಳ್ಳಲು ಮುಂದೆ ಹೋದಳು.

ಈ ಮದುವೆಯ ಏಳಿಗೆಯನ್ನು ಕಂಡು ಈಗಾಗಲೇ ನಾಚಿಗೊಂಡ ಆ ರಾಣಿಯರು ಗರ್ವದ ಗುಂಜನ್ನೇ ಬಿಟ್ಟುಬರುತ್ತಿದ್ದರು. ಆದರೆ ತಮ್ಮೆದುರಾಗಿ ಗದ್ದುಗೆಯಿಂದೆದ್ದು ಬರುತ್ತಿರುವ ಸುಭದ್ರಾದೇವಿಯ ಗುಣಕ್ಕೆ ಅವರೆದೆ ಸೋತುಹೋಯಿತು.

"ನೀನು, ಹೀಗೆ ಬರಬಾರದಕ್ಕ ." ಎಂದವರು ಆಕೆಯನ್ನು ಗೌರವಿಸಲೆಂದೇ ನುಡಿದರು. "ಅಕ್ಕಾಜಿಯರೇ, ಬರಬಹುದು." ಎಂದವಳು ಪ್ರೀತಿಯಿಂದ ತಿಳಿಸಿದಳು. ಸುಭದ್ರಾದೇವಿಯ ಸಣ್ಣಸ್ವರದ ಸವಿಗೆ ಅವರೆಲ್ಲರೂ ಸೋತುಹೋದರು. ಅವರು ಹತ್ತಿರಕ್ಕೆ ಬಂದೊಡನೆ ಅವರಿಗೆ ಕೈಮುಗಿದು ಸ್ವಾಗತಿಸಿದಳು. ಅವರಾದರೋ ಅಕ್ಕರೆಯಿಂದ ಕೈಮುಗಿದು ಅಪ್ಪಿಕೊಂಡು ಅಟ್ಟಹಾಸಗಳನ್ನೇ ಮಾಡಿದರು.

''ಇದೆಲ್ಲ ಸಲ್ಲದಕ್ಕ. ನೀನು ಸುಮ್ಮಗಿದ್ದರೆ ನಾವೆಲ್ಲ ಸಂತೋಷದಿಂದ ಬರುವೆವು.''

''ಮೊದಲು ಬಂದವರಿಗೆ ಕಡೆಯಲ್ಲಿ ಬಂದವಳು ಮದವನ್ನು ತೋರುವುದು ಸಲ್ಲದು.''

ಅನಂತರ ರಾಣಿಯರೆಲ್ಲ ಸಾಲುಸಾಲಾಗಿ ಬಂದು ರಾಜನಿಗೆ ರತ್ನಗಳ ಕಾಣಿಕೆಯಿತ್ತು ಕೈಮುಗಿದು, ಮೃದುವಾದ ತಲ್ಪದಲ್ಲಿ ಕುಳಿತರು. ಸುಭದ್ರಾ ದೇವಿಯು ಅವರೆಡೆಗೆ ಹೋಗಿ ಕುಳಿತುಕೊಳ್ಳಲು, ಅವರೆಲ್ಲ ಆಕೆಯನ್ನು ವಿನಯದಿಂದ ತೊಡೆಯ ಮೇಲಿರಿಸಿಕೊಂಡರು.

''ಅಕ್ಕ ನೀನು ಗದ್ದುಗೆಯಲ್ಲೇ ಇರು, ನೀನು ನಮ್ಮ ಕಡೆಗೆ ಬರುವುದು ಒಪ್ಪದು.''

''ಇರುವ ಅಕ್ಕಂದಿರನ್ನು ಬಿಟ್ಟು ನಾನು ಬೇರೆ ಇದ್ದರೆ ಏನಾದೀತು? ನಮ್ಮ ಕುಲವೊಂದು, ಈ ಸ್ತ್ರೀವೇಷವೊಂದು, ನಮ್ಮ ಸದ್ಧರ್ಮವೊಂದು. ಒಲವಿನ ಪ್ರಾಣೇಶನೊಬ್ಬನೇ; ಹಾಗಿರುವಾಗ ಕೆಳಗಾದರೇನು? ಮೇಲಾದರೇನು? ಆಸನದಲ್ಲಾದರೇನು? ಹಸೆಯಲ್ಲಾದರೇನು? ಪುರುಷನ ಗದ್ದುಗೆಯನ್ನು ಏರಿದಳು ಎಂಬಾಗ ಗದ್ದುಗೆ ಪುರುಷನಿಗೊ. ಸತಿಗೊ? ಅವನು ಕರುಣಿಸಿ ಕರೆದಾಗ ಅಲ್ಲಿ ಕುಳಿತುಕೊಳ್ಳುವರು; ಕೋಪಿಸಿದಾಗ ದೂರದಲ್ಲಿರುವರಲ್ಲವೆ? ಸ್ವಾಮಿಯ ಮಂಚದಲ್ಲಿ ನಾವೆಲ್ಲ ಸಮಂಚಿತಾಂಗಿಯರಷ್ಟೆ. ನಿಮಗೆ ನಮಗೆ ಹಿಂದು ಮುಂದಿನ ಮಾತೇಕೆ?''

ಸುಭದ್ರಾದೇವಿಯ ವಿನಯಕ್ಕೆ ಅವರೆಲ್ಲರೂ ಮೆಚ್ಚಿದರು; ಮನಸ್ಸಿನಲ್ಲಿ ಒಂದಾದರು.

''ಸಚ್ಚರಿತೆಗಾಗಿ ನಮ್ಮ ಮಾತನ್ನು ಮನ್ನಿಸುವೆಯೋ? ಇಲ್ಲವೆ ನುಚ್ಚುನೂರು ಮಾಡುವೆಯೋ?'' ಎಂದವರು ಕೂಡಲೇ ಕೇಳಿದರು.

''ನಾನು ನಿಮ್ಮ ಮಾತನ್ನು ಮೀರೆನು.''

''ಮೀರೆಯಾದರೆ ಇನ್ನು ಗದ್ದುಗೆಯನ್ನು ಏರು.'' ಕೂಡಲೆ ಸುಭದ್ರಾದೇವಿಯು ಎದ್ದಳು; ಅವಳ ಸವತಿಯರೂ ಎದ್ದರು. ಇದನ್ನು ನೋಡಿದ ಭರತೇಶನು ಅವಳ ನಡತೆಗಾಗಿ ಮನದಲ್ಲಿ ಮೆಚ್ಚುತಿದ್ದನು. ಎದ್ದ ಸುಭದ್ರಾದೇವಿಯು ಗದ್ದುಗೆಯ ಬಳಿಯಲ್ಲೇ ನಿಂತಿರುವುದನ್ನು ಸತಿಯರು ಕಂಡು ''ಗದ್ದುಗೆಗೆ ಇವಳನ್ನು ಕರೆದುಕೋ, ಸ್ವಾಮಿ.'' ಎಂದವರು ಭರತೇಶನೊಡನೆ ಹೇಳಿದರೂ ಅವನು ಸುಮ್ಮನೆ ಅವರ ಮುಖವನ್ನು ನೋಡುತ್ತ ನಗುತಿದ್ದನು. ಆಗ ಅವರೆಲ್ಲರೂ ಪಕ್ಕದಲ್ಲಿದ್ದ ಗಂಗಾದೇವಿ, ಸಿಂಧುದೇವಿಯರೊಡನೆ, ''ನಿಮ್ಮಣ್ಣನಿಗೆ ನೀವೇ ಹೇಳಿ'' ಎಂದರು. ಕೂಡಲೆ ಅವರೆದ್ದು ನಗುತ್ತ ''ಬೆಳ್ಳಿಯ ಬೆಟ್ಟದ ಹೆಣ್ಣನ್ನು ಒತ್ತಿಗೆ ಕರೆದುಕೊಳ್ಳಣ್ಣ'' ಎಂದರು. ಮೂರು ಲೋಕದ ಸ್ವಾಮಿಯ ಮಗನೆಂದು ಗರ್ವದಿಂದ ಲೆಕ್ಕಿಸನೆಂದು ರಾಣಿಯರು ಭಾವಿಸಿದರು. ಕೊನೆಗೆ ಅವರೆಲ್ಲರೂ ಕೂಡಿ ಸುಭದ್ರಾದೇವಿಯನ್ನು ಗದ್ದುಗೆಗೇರಿಸಿಕೊ ಎಂದ ಮೇಲೆಯೇ ದೇವಿಯನ್ನು ಕರೆದು ಒತ್ತಿನಲ್ಲಿ ಕುಳ್ಳಿರಿಸಿಕೊಂಡನು. ಆಗ ಅಲ್ಲೊಮ್ಮೆ ನಗೆಗಡಲ ಅಲೆಗಳೆದ್ದುವು.

ಕೂಡಲೇ ಗಂಗಾದೇವಿ, ಸಿಂಧುದೇವಿಯರೆದ್ದು, ಜೋಡಾಗಿ ಮುತ್ತಿನ ಅಕ್ಷತೆಯನ್ನು ಇಟ್ಟು ದಂಪತಿಗಳನ್ನು ಹರಸಿದರು. ಅರಸನ ಪದಕವನ್ನು ತೆಗೆದು ಅರಸಿಯ

ಕೊರಳಿಗಿಟ್ಟರು; ಅರಸಿಯ ಪದಕವನ್ನು ಅವನಿಗಿಟ್ಟರು. ಅಮೇಲೆ ತಮ್ಮ ಕೈಯಿಂದಲೇ ಒಂದೊಂದು ಹಾರವನ್ನು ಅವರಿಬ್ಬರ ಕೊರಳಿಗೂ ಇಟ್ಟರು. ಅಣ್ಣನಿಗೆ ದೇವಾಂಗ ವಸ್ತ್ರವನ್ನೂ ಅತ್ತಿಗೆಗೆ ದೇವಾಗದ ಸೀರೆಯನ್ನೂ ಉಡುಗೊರೆಯಿತ್ತರು. ''ಶ್ರೀವಿಲಾಸದಿಂದ ಬಾಳಿರಿ'' ಎಂದು ಹರಸಿದರು.

''ಮೊನ್ನೆ ಭೂಷಣವಿತ್ತರಿ ಅಕ್ಕ. ಮತ್ತೆನಮಗಿಂದು ಮನ್ನಣೆಮಾಡುವುದೇಕೆ?'' ಎಂದು ಭರತೇಶನು ಸಹಜವಾಗಿ ನುಡಿದನು.

''ಭೇದವಿಲ್ಲದೆ ದಿನಚರಿ ಕೊಟ್ಟರೇನಣ್ಣ?'' ಎಂದವರು ಅವನನ್ನೇ ಕೇಳಿದರು.

''ನಿಮ್ಮ ಹರಕೆಯಿಂದಾಗಿ ನನಗೀ ಸಂಪತ್ತು ದಿನಚರಿಯಾಗಿ ಬಂದುದಲ್ಲವೆ? ನಿಮಗೆ ಮನತಣಿಯುವುದೆಂಬುದೇ ಇಲ್ಲ. ಮತ್ತೆ ಮತ್ತೆ ಕೊಡುತ್ತಿದ್ದರೆ ಆಗದು.'' ಎಂದು ತಂಗಿಯರಿಗೆ ಇಂಪಿನ ಮಾತನ್ನಾಡಿದನು.

ಆ ಮೇಲೆ ರಾಣಿಯರೆಲ್ಲರೂ ಸೇಸೆಯನ್ನಿಟ್ಟರು. ಸರಿಯಾದ ಶಕ್ತಿ ರೂಪಗಳಿದ್ದು ಗುಣದಿಂದ ಎಲ್ಲರನ್ನೂ ಗೆದ್ದಳೆಂದು ಅವರೆಲ್ಲರೂ ಹೊಗಳಿದರು. ಆರತಿ ನಿವಾಳಿಸಿ ಮುಂತಾದ ಕೆಲಸಗಳಲ್ಲಿ ವಾರನಾರಿಯರೆಲ್ಲ ಮುಳುಗಿದರು. ಸುರಕಾಂತೆಯರು ಭೋರೆಂದು ಹೂಮಳೆಯನ್ನೇ ಕರೆದರು. ಸಂಗೀತ ಧವಳಶೋಭನಗಳೆಲ್ಲವೂ ನಿಂತ ಮೇಲೆ ಭರತೇಶನು ತಂಗಿಯರಿಗೆ ಉಡುಗೊರೆಯಿತ್ತನು. ರಾಣಿಯರಿಗೂ ವಾರನಾರಿಯರಿಗೂ ಎಲ್ಲರಿಗೂ ಉಡುಗೊರೆಯಿತ್ತು ಮನ್ನಿಸಿದನು.

ಅನಂತರ ಕಳದಿಯರನ್ನೂ ತಂಗಿಯರನ್ನೂ ಮದುಮಗಳೊಂದಿಗೆ ಭೋಜನ ಗೃಹಕ್ಕೆ ಕಳುಹಿಸಿದನು. ಕಳಕಂಠೆಯೆಂಬ ಸೇವಕಿಗೊಂದನ್ನು ಸೂಚಿಸಿ ನಮಿರಾಜನೆಡೆಗೆ ಕಳುಹಿಸಿದನು. ತನ್ನ ರಾಣಿಯರ ಕಡೆಗೆ ತಿರುಗಿ ''ನಮಿರಾಜನ ಅರಸಿಯರು ಅಲ್ಲಿಗೆ ಬರುವರು; ಅವರನ್ನು ಮಮಕಾರದಿಂದ ನೋಡಿಕೊಳ್ಳಿ'' ಎಂದು ಸೂಚಿಸಿದನು. ಎಲ್ಲರನ್ನೂ ಕಳುಹಿಸಿದ ಮೇಲೆ ಭರತೇಶನು ಭೋಜನಶಾಲೆಗೆ ನಡೆದನು.

ಕಳಕಂಠೆಯು ನಮಿರಾಜನೆಡೆಗೆ ಓಡಿಬಂದು ಕೈಮುಗಿದು ''ಇಲ್ಲಿಗೆ ಚಕ್ರೇಶ್ವರನು ಲಲನೆಯೊರೊಡನೆ ಬರುತ್ತಿರುವನು'' ಎಂದು ತಿಳಿಸಿದಳು. ಆ ಮಾತು ಕೇಳಿದೊಡನೆ ನಮಿರಾಜನು ಥಕ್ಕನೆದ್ದನು, ಭರತೇಶನು ಮಾನಿನಿಯರನ್ನು ಕೂಡಿಕೊಂಡು ಬರುತ್ತಿರುವುದೇಕೋ ಎಂದು ಅನುಮಾನಿಸುತ್ತಾ ಅವನೆದುರಿಗಾಗಿ ಹೋಗುವಾಗ ಕಳಕಂಠೆಯು, ''ಭರತೇಶನು ಆನಂದದಿಂದ ತನ್ನ ನಾರಿಯರೊಂದಿಗೆ ಊಟಕ್ಕಾಗಿ ಹೊರಟಿದ್ದನು'' ಎಂದು ಮಾತು ಕೂಡಿಸಿದಳು.

ನಮಿರಾಜನು ಅಲ್ಲೆ ನಿಂತುಬಿಟ್ಟನು.

''ಹುಸಿಮಾತಿದೆಂದು ಇಲ್ಲೇಕೆ ನಿಂತೆ? ನಿನ್ನ ಭಾವನು ಬಂದರೆ ಅರೋಗಿಸುವೆನೆಂದು ಹೇಳಿದನು. ಹಾಗಲ್ಲವಾದರೂ ಅವನಿಂದು ಇಲ್ಲಿಗೆ ಬಾರದಿರನು.'' ಎಂದು ವಿವರಿಸಿದಳು ಕಳಕಂಠೆ. ನಮಿರಾಜನು ವಿನಮಿ, ಸಿಂಧುದೇವ, ಗಂಗಾದೇವರನ್ನೊಮ್ಮೆ ನೋಡಿದನು.

ಆವರಾಗ, ''ಮನು, ಕುಲಾಗ್ರಣಿಯ ಸೇವಕಿಯಲ್ಲವೆ, ತಂತ್ರದಲ್ಲಿ ತೊನೆದು ಬಿಳಿಸಿದಳು'' ಎಂದರು.

''ಬರುವೆನು ಎಂದು ಹೇಳಿಕಳುಹಿಸಿದಾಗಲೇ ಭರತೇಶನು ಬಂದಿರುವುದೂ ನಿಜ. ಇಂದು ನೀವಿಬ್ಬರೂ ಹೋಗಿಬರಬಹುದು'' ಎಂದು ನಮಿರಾಜನು ಸಿಂಧುದೇವನ ನನ್ನು ಗಂಗಾದೇವನ ಮನೆಗೆ ಕಳುಹಿಸಿದನು.

''ನಿಮ್ಮನ್ನು ಮನೆಮುಟ್ಟಿ ಬಂದು ಹೋಗಬೇಕೆಂದು ನಮ್ಮ ಸ್ವಾಮಿ ಹೇಳಿದನು. ನೀವು ಸುಮ್ಮನೆ ನಡೆಯಿರಿ'' ಎಂದು ಕಳಂಕಠೆಯು ನಮಿರಾಜನು ನಡೆಯುವಂತೆ ಮಾಡಿದಳು. ಅದರೊಡನೆ ಅತ್ತೆಮ್ಮನವರು ತನ್ನ ತಂಗಿಯರು ಬರದೆ ಅತ್ಯಂತ ಸಂತೋಷವಾಗದೆಂದು ನಿತ್ಯವಿನೋದಿ ಭರತೇಶನು ಸೂಚಿಸಿದನೆಂಬುದನ್ನೂ ತಿಳಿಸಿದಳು.

''ನಿಮ್ಮ ಒಡೆಯನ ಭಲವೇ ನೆರವೇರಲಿ. ಹೋಗು; ಅಮ್ಮಾಜಿಗೆ ತಿಳಿಸು. ಎಲ್ಲರನ್ನೂ ಕರೆದುಕೊಂಡು ಬಾ'' ಎಂದು ಮನೆಗೆ ಕಳುಹಿಸಿ ನಮಿರಾಜನು ತಮ್ಮವರೊಡನೆ ನಡೆದನು. ಅರಮನೆಗೆ ಹೋಗಿ ಕಾಲು ತೊಳೆದು ಮಂದಿರವನ್ನು ಸೇರಿ, ಸರಸದಿಂದಲೆ ಕಲ್ಯಾಣಪತಿಗೆ ಉಡುಗೊರೆಯಿತ್ತು, ಕೈಮುಗಿದನು. ಆಗ ಭರತ ಚಕ್ರೇಶ್ವರನು ನಾಲ್ವರನ್ನೂ ಅಪ್ಪಿಕೊಂಡು ಮನ್ನಿಸಿದನು. ಅವರೆಲ್ಲರೂ ಸೊಗಸಾಗಿ ಮಾತುಗಳನ್ನಾಡುತ್ತ ಒಂದೆಡೆಗೆ ಕುಳಿತರು.

ಆಗ ಕಳಕಂಠೆಯು ಖೇಚರ ಸತಿಯರನ್ನೆಲ್ಲ ಭದ್ರಶಾಲೆಗೆ ಕರೆದುಕೊಂಡು ಬಂದಳು. ಭರತೇಶನ ರಾಣಿಯರೆಲ್ಲರೂ ಶುಭದೇವಿಗೆ ಯಶೋಭದ್ರೆಗೆ ತಮ್ಮ ತಾಯಿಗಳೆಂದು ಭಕ್ತಿಯಿಂದ ನಮಸ್ಕರಿಸಿದರು. ಅವರೂ ಪುತ್ರಿಯರೆಂಬ ನ್ಯಾಯದಿಂದಲೇ ಅಪ್ಪಿ ಕೊಂಡರು. ನಮಿರಾಜ, ವಿನಮಿರಾಜರ ಪತ್ನಿಯರನ್ನು ಭರತೇಶನ ಪತ್ನಿಯರು ಸಮತೆ ಯಿಂದ ಅತ್ತಿಗೆ ನಾದಿನಿಯರೆಂದು ಬಹಳ ಸಂಭ್ರಮದಿಂದ ಅಪ್ಪಿಕೊಂಡರು. ಅಷ್ಟರಲ್ಲಿ ಕಳಕಂಠೆಯು ಹೊತ್ತಾಯಿತೆಂದು ಅವರಿಗೆ ಅವರ ಅರಮನೆಗೆ ಹೋಗಲು ತಿಳಿಸಿ, ಆ ಮೇಲೆ ಖೇಚರಿಯರನ್ನು ಊಟದ ಮನೆಗೆ ಕರೆದುಕೊಂಡು ಬಂದಳು.

ಇತ್ತ ಊಟದ ಮನೆಯಲ್ಲಿ ಭರತ ಚಕ್ರೇಶ್ವರನು ಮೈದುನರೊಂದಿಗೆ ವಿನೋದದಲ್ಲಿದ್ದನು. ಅತ್ತ ಯಶೋಭದ್ರಾದೇವಿಯು ಅಡಿಗೆಯ ಮನೆಗೆ ಹೋಗಿ ಮಗಳನ್ನು ಕಂಡು ಸಂತೋಷಗೊಂಡಳು. ನಿನ್ನಿನ ಕಾಂತಿಗಿಂತಲೂ ಅಧಿಕವಾದ ಕಾಂತಿಯಿಂದ ಸೊಗಸಾಗಿ ಬರುತ್ತಿರುವ ಮಗಳನ್ನು ತನ್ನೆದುರಲ್ಲೇ ಕಂಡು ತನ್ನ ಪ್ರೀತಿಸಂದುದೆಂದು ಆನಂದಗೊಂಡಳು. ನಗುತ್ತ ಲಜ್ಜೆಯಿಂದ ಬಂದು ನಮಿಸಿದ ಮಗಳನ್ನು, ನಗುತ್ತ ದೃಷ್ಟಿ ತೆಗೆದು ಹರಸಿ ಅಪ್ಪಿಕೊಂಡಳು. ಆನಂದವು ಕಣ್ಣಲ್ಲಿ ಹನಿಗೊಂಡಿತು. ಮೈಪುಳಕಗೊಂಡಿತು. ಚಿಕ್ಕಮ್ಮಗೂ ನಮಿಸಿದಾಗ ಅವಳು ಹರಸಿ ಅಪ್ಪಿಕೊಂಡಳು. ಆಮೇಲೆ ಅಣ್ಣಂದಿರ ಹೆಂಡತಿಯರನ್ನು ನೋಡಿ ನಾಚಿದರೂ ಅಪ್ಪಿಕೊಂಡು ಮನ್ನಿಸಿದಳು.

ಓರೆಮೊಗದಿಂದ ಏಕೆ ಅಪ್ಪಿದೆ? ಮನೆಗೆ ಬಂದರೆ ಗೌರವಗೆಡಿಸಿ ನಮ್ಮನ್ನು

ಕಾಣುವುದೇ? ಎಂದು ಅವರು ಸರಸದ ಮಾತುಗಳನ್ನಾಡಿದರು. ಅವರು ಅಷ್ಟಕ್ಕೇ ಬಿಡಲಿಲ್ಲ. ಚಿಕ್ಕಂದಿನ ಹಲವು ಮಾತುಗಳನ್ನಾಡಿ ಕಾಡಿದರು. ಆಗ ಈ ಸರಸ ಸಾಕೆಂದು ಅತ್ತೆ ಸೊಸೆಯರಿಗೆ ತಿಳಿಸಿ ಅದನ್ನು ನಿಲ್ಲಿಸಿದಳು. ಅಲ್ಲಿಂದವರು ಊಟದ ಮನೆಯ ಒತ್ತಿಗೆ ಹೋಗಿ, ಹರದೆಯ ಹಿಂದೆ ಕುಳಿತು ರಾಜರಾಡುತ್ತಿರುವ ಮಾತುಗಳನ್ನು ಕೇಳುತಿದ್ದರು.

ಮಾತುಮಾತಿನ ಮೇಲೆ ನಮಿರಾಜನೊಮ್ಮೆ ''ಭೂಮಿಯ ನೀವು, ನಮ್ಮನ್ನು ಔತಣಕ್ಕೆ ಠಕ್ಕಿನಿಂದ ಬರಿಸಿದ ರೀತಿಯು ಲೇಸಾಗಿದೆ'' ಎಂದು ಭರತೇಶನಿಗೆ ತಿಳಿಸಿದನು.

''ಮನೆಗೆ ಬಂದು ಪ್ರಾರ್ಥಿಸಿ, ಸಮ್ಮಾನಕ್ಕೆ ಕರೆಯುವುದು ಪದ್ಧತಿ; ಆದರೆ ಹಾಗೆ ಮಾಡಲು ನನಗಿಲ್ಲಿ ಸಹೋದರರಿಲ್ಲ. ಆದ್ದರಿಂದ ಈ ವಿನೋದವಾಡಿದೆ. ಇದರಲ್ಲಿ ಠಕ್ಕು ಇಲ್ಲ. ನೀವು ಬಾರದಿರುತ್ತಿದ್ದರೆ ನಾನೇ ಬರುತ್ತಿದ್ದೆ; ನನ್ನ ಸೋದರಿಯರ ಮನೆಗೆ ನಾನು ಬಂದರೆ ಕೊರತೆಯೇನು? ಹೆಣ್ಣು ಕೊಟ್ಟೆಯೊ, ಚಿನ್ನ ಕೊಟ್ಟೆಯೊ—ಎಂಬೊಂದು ಮಾತುಂಟು. ಹೆಣ್ಣಕೊಟ್ಟ, ಹಮ್ಮೆ ನಿವಗೆ. ಆದರೆ ಹೆಣ್ಣು ಕೊಟ್ಟ ಕಡೆಯಲ್ಲೂ ನನಗಿಲ್ಲ ಗರ್ವ. ಇದು ಬಣ್ಣದ ಮಾತಲ್ಲ ಕೇಳಿ. ನನ್ನ ತಂಗಿಯರಿದ್ದಾಗ ನನ್ನ ಸತಿಯರೊಂದಿಗೆ ನಾನು ಸಿಂಧು ದೇವ ಮತ್ತು ಗಂಗಾದೇವನ ಮನೆಗೆ ಹೋಗಲಿಲ್ಲವೆ? ನಾನು ಓಲೆ ಕಳುಹಿಸಿದಾಗ ಅವರೂ ತಮ್ಮ ಸೋದರಿಯರಿದ್ದ ಮನೆಗೆ ಬಂದುದಿಲ್ಲವೆ?''

''ಯಾಕೆ ಈ ಮಾತು? ದೂತಿ ಸೂಚಿಸಿದಾಗ ನಾವು ಮಾತೆಯರನ್ನೂ ಮಡದಿಯರನ್ನೂ ಕೂಡಿಕೊಂಡು ಪ್ರೀತಿಯಿಂದ ಬಂದೆವಲ್ಲ, ಗರ್ವ ಯಾರಿಗಿದೆ?''

''ನೀವಿಂದು ಗರ್ವಿಗಳಲ್ಲ ; ಮೊದಲು ಗರ್ವಿಗಳಾಗಿದ್ದಿರಿ'' ಎಂದು ಹೇಳಿದ ಭರತೇಶನು ಸಿಂಧುದೇವ, ಗಂಗಾದೇವರನ್ನು ನೋಡಿದನು, ಮತ್ತೆ ಮಾತು ಮುಂದು ವರಿಸಿದನು. ''ಉಣ್ಣಲು ಅರಿಯದ ಇವರಿಬ್ಬರಿಗೆ ನಾವೆರಡು ಹೆಣ್ಣುಗಳನ್ನು ಕೊಟ್ಟೆವು, ನಮಿರಾಜ, ಈ ಹೆಣ್ಣುಗಳೂ ಅವರಂತೆ ಊಟವನ್ನು ಮರೆತರು. ನಿನ್ನ ಅಣ್ಣಂದಿರ ಆಟವನ್ನು ನೋಡು''

''ಅದು ಪುರುಷರ ಜಾಣ್ಮೆಯಲ್ಲವೆ? ಸೇರಿದ ಸತಿಯರು ತಮ್ಮಂತಾಗುವುದು ಸಹಜ. ಇದರಿಂದ ನಮ್ಮವರು ಚದುರರೆಂದು ತಿಳಿದಿರಿ.''

''ಜಿನ ! ಜಿನ ! ನಿಮ್ಮವರ ಏಳಿಗೆಗೆ ನೀವೇ ಬೀಗುವುದೇ? ಸಾಕು. ನಮ್ಮ ಮನೆಯಲ್ಲಿ ಹುಟ್ಟಿದ ತಂಗಿಯರು ಹೊಕ್ಕ ಮನೆಯ ಇಚ್ಛೆಯನ್ನರಿತು ವರ್ತಿಸುವರು. ಪುರುದೇವನ ಸುತೆಯರು, ಭರತೇಶನ ಅನುಜೆಯರು ನಾವೆಂದು ಗರ್ವಿಸುವುದಿಲ್ಲ, ತಮ್ಮ ಪುರುಷ ಇದ್ದಂತೆ ಇರುವರು. ಇದು ನಮ್ಮ ಸೋದರಿಯರಿಗೆ ಸಹಜ. ಇವರಿಬ್ಬರು ಕಣ್ಣು ಬಿಟ್ಟವರು. ನೀವಿಬ್ಬರು ನವಿಲಂತೆ ಆಕಾಶದಲ್ಲಿ ಆಡುವವರು. ನಿಮಗೆ ಕೊಟ್ಟ ನಮ್ಮ ತಂಗಿಯರು ನಿಮ್ಮಂತೆ ಬವಣೆಗೊಂಡರು; ಹೋಗಿ.''

ತೆರೆಯ ಮರೆಯಲ್ಲಿದ್ದು ಈ ಮಾತನ್ನು ಕೇಳುತಿದ್ದ ಭರತೇಶನ ತಂಗಿಯರು ಕೇಳಿ ಮನಸ್ಸಿನಲ್ಲಿ ಅರಳಿ, ಮೈಯಲ್ಲಿ ಬಾತು ಹೋದರು. ಭರತೇಶನ ಮಾತಿಗೆ ''ನಾವಿಬ್ಬರುಣ್ಣ

ದಿದ್ದರೇನಾಯಿತು. ನಮ್ಮವರಾದ ನಮಿ ವಿನಮಿ ರಾಜರು ನಿಮ್ಮ ಪಂಕ್ತಿಯಲ್ಲಿದ್ದು ಉಣ್ಣುವವರಲ್ಲ.'' ಎಂದು ಸಿಂಧುದೇವ. ಗಂಗಾದೇವರು ಹೇಳಿದರು.

''ನಿಮ್ಮವರು ಉಂಡರೆ ನಿಮಗೆ ತೃಪ್ತಿಯೆ? ಈ ತೃಪ್ತಿ ಸಮ್ಮತವೆ? ಇರಲಿ ನಿಮ್ಮಿಚ್ಛೆ'' ಎಂದು ಭರತೇಶನು ಅವರಿಗೆ ಉಡುಗೊರೆ ಇತ್ತನು. ಅವರೆದ್ದು ಹೋದರು. ಒಳಗೆ ಇದ್ದು ಗಂಗಾದೇವಿ, ಸಿಂಧೂದೇವಿಯರೂ ತಮ್ಮ ಮನೆಗೆ ಹೋದರು. ಆಮೇಲೆ ಭರತೇಶನು ಮೈದುನರಿಬ್ಬರೊಡನೆ ನಿರ್ಮಲವಾಗಿ ಊಟ ಮಾಡಿದನು. ಒಂದು ಪಂಕ್ತಿಯಲ್ಲಿ ಅಳಿಯನೂ ಮಕ್ಕಳಿಬ್ಬರೂ ಆರೋಗಿಸುವ ಚೆಂದವನ್ನೂ, ಮಗಳು ಅವರಿಗೆ ಎಡೆಮಾಡುವ ಚೆಂದವನ್ನೂ ನೋಡಿದ ಯಶೋಭದ್ರದೇವಿ. ಶುಭದೇವಿಯರ ಒಂದೆದೆಯು ನೂರಾಯಿತು. ಭೋಜನವಾದ ಮೇಲೆ ಭರತೇಶನು, ''ನೀವು ನನ್ನ ಮಾವಾಜಿಯ ಸುತರಾದರೆ ಒಂದಿಷ್ಟು ದಿನ ನಮ್ಮ ಮನೆಗೆ ಬಂದು ಭೋಜಿಸಬೇಕು. ನೀವು ಇರುವಷ್ಟು ದಿನ ಅತ್ತ್ಯಾಜಿಯವರೂ ನಮ್ಮ ಮನೆಯಲ್ಲಿರಲಿ,'' ಎಂದನು. ಅವರು ಆಗಲಿ ಎಂದು ಒಪ್ಪಿದರು. ಆಮೇಲೆ ಮೈದುನರನ್ನು ಉಡುಗೊರೆಯಿತ್ತು ಕಳುಹಿಸಿದನು. ಬಳಿಕ ಭೋಗದೇವೇಂದ್ರನಾದ ಭರತೇಶ ಚಂದ್ರಶಾಲೆಯನ್ನು ಸೇರಿ ತೂಗುಮಂಚದಲ್ಲಿ ಒರಗಿದನು.

ಯಶೋಭದ್ರಾದೇವಿಯು, ತನ್ನ ಮಗಳು, ಸೊಸೆಯರು ಮತ್ತು ಶುಭದೇವಿಯ ರೊಡನೆ ಮಗಳ ಮನೆಯಲ್ಲಿ ಅಮೃತಾನ್ನವನ್ನು ಸವಿದಳು. ತರುಣಿಯರೆಲ್ಲರೂ ತಣಿದ ಮೇಲೆ ಅವಳು ತನ್ನ ಮಗಳನ್ನು ಕರೆದು ಅವಳ ಅರಸನನ್ನು ನೋಡಿ ಬರಲು ಕಳುಹಿಸಿದಳು. ಅವಳು ಬಂದು ಭರತೇಶನನ್ನು ಮಂಚದಲ್ಲಿ ಕಂಡಳು. ತನ್ನೆಡೆಗೆ ಬಂದ ಸತಿಯೊಡನೆ ಸರ್ವರೂ ತೃಪ್ತಿಪಟ್ಟ ರೀತಿಯನ್ನು ತಿಳಿದು ಸಂತೋಷಪಟ್ಟು ಭರತೇಶನು, ಅತ್ತಾಜಿಯನ್ನು ಕಾಣಲು ತಾನೇ ಬರುವೆನೆಂದು ಅವಳನ್ನೇ ಹಿಂದಕ್ಕೆ ಕಳುಹಿಸಿದನು. ನಗುತ್ತಾ ಉಬ್ಬಿನಲ್ಲಿ ಬರುವ ಮಗಳನ್ನು ಕಂಡು ತಾಯಿಗೆ ಹಿರಿದಾಗಿ ಹರ್ಷವಾಯಿತು. ''ಏನಕ್ಕ ನಗೆ ಹೆಚ್ಚಾಯಿತು? ಎಂದು ತಾಯಿಯನ್ನು ಬಿಗಿದಪ್ಪಿಕೊಂಡು ''ನಿನ್ನನ್ನು ಕಾಣಲಿಕ್ಕೆ ನಿನ್ನ ಅಳಿಯನು ಇಲ್ಲಿಗೆ ಬರುತ್ತಿರುವನು'' ಎಂದು ಕೂಡಲೇ ಹೇಳಿದಳು.

''ಇಲ್ಲಿಗೆ ತಾನೇಕೆ ಬರಬೇಕು, ನಾನೆ ಬಂದಲ್ಲಿ ಸಂಧಿಸುವೆನು. ಹೋಗು'' ಎಂದು ಮಗಳನ್ನು ಮುಂದೆ ಕಳುಹಿಸಿ, ಸೇವೆಯ ಹೆಂಗಸರೊಡನೆ ನಡೆದಳು ಯಶೋಭದ್ರಾದೇವಿ. ಅತ್ತೆಯು ಬಂದು ಬಂಗಾರದ ತೆರೆಯ ಹಿಂದೆ ನಿಂತು ಮುಖವನ್ನು ಮಾತ್ರ ತೋರಲು ಭರತೇಶನು ಮಂಚದಿಂದಿಳಿದು ಕೈಮುಗಿದನು. ಅತ್ತೆ ರೋಮಾಂಚವೆದ್ದು ಅರಳಿದಳು. ಎದುರಿದ್ದ ಅತ್ತೆಗಾಗಿ, ತನ್ನ ಸತಿಯ ಕೈಯಲ್ಲಿ ಉಡುಗೊರೆ ಇತ್ತು ಕಳುಹಿಸಿದನು ಅಳಿಯ. ಅದನ್ನು ಸ್ವೀಕರಿಸಿದಳು ಅತ್ತೆ. ಅಳಿಯನನ್ನು ಹರಸಿದಳು. ಆ ಮೇಲೆ ಹಾರವೊಂದನ್ನು ಮಗಳ ಕೈಗೆ ಕೊಟ್ಟು ಹಿಂತಿರುಗಿದಳು.

ಅತ್ತೆ ಅತ್ತಹೋದೊಡನೆ ಈ ವಾರ್ತೆ ಎಲ್ಲೆಲ್ಲೂ ಹಬ್ಬಿತು. ನಮಿರಾಜನಿಗೆ ತಿಳಿಯಿತು. ಮಧುವಾಣಿ ಆದರಿಂದ ಉಬ್ಬಿ ಹೇಳಿದಳು. "ಷಟ್ಖಂಡದ ಒಡೆಯನು ಯಾರಿಗೂ ಇದಿರೇಳುವುದಿಲ್ಲ; ಮಣಿಯುವುದಿಲ್ಲ. ಅದು ಸುಭದ್ರಾದೇವಿಯ ವಿಶೇಷ. ಆದರಿಂದಲೇ ಯಶೋಭದ್ರಾದೇವಿ ಬಂದಾಗ ಇದಿರೆದ್ದು ನಮಿಸಿದನು. ಮಾವನ ಸತಿಯೆಂದು ಉಪಚರಿಸಿದನು. ಸ್ತ್ರೀಯರಲ್ಲಿ ತನ್ನ ಮಾತೆಯರಿಬ್ಬರಿಗಲ್ಲದೆ ಅತಿ ಭಕ್ತಿಯಿಂದ ಯಾರನ್ನೂ ನಮಿಸಲಾರನು. ರತಿವಿನೋದಾರ್ಥವಾಗಿ ಹೆಂಡತಿಯರಿಗೆ ಎರಗುವನು. ಆತ್ಮರತನಾದ ಅವನಿಗೆ ಅದು ವ್ರತಭಂಗವಲ್ಲ. ಕಿರಿಯತ್ತೆಯ ತಂಗಿಯರಿಗೆ ಅವರ ಸೇವಕಿಯರಿಗೆ ಅವರವರಿಗೆ ತಕ್ಕಂತೆ ಮನ್ನಣೆಯನ್ನು ಕಳುಹಿಸಿದನು. ಕಳಕಂಠೆಯನ್ನು ಕರೆಸಿ ಅವಳಿಗೂ ಮನ್ನಣೆಮಾಡಿದನು. ಮರೆಹು ಎಂಬುದು ಭರತೇಶನಿಗಿಲ್ಲ."

ಎಲ್ಲರೂ ಅವರವರ ಅರಮನೆಗೆ ಹೋದರು. ಮಾತೆಯೊಬ್ಬಳು ಮಾತ್ರ ಮಗಳ ಮನೆಯಲ್ಲಿ, ಅಳಿಯನ ಅಪೂರ್ವ ಸಂಪತ್ತನ್ನು ಪ್ರೀತಿಸುತ್ತ ದೇವಲೋಕದಲ್ಲಿರುವಂತೆ ಇದ್ದಳು.

ಜಗದ ಜಂಜುಡವೆಲ್ಲ ತೀರಿಹೋಯಿತು, ನಡುಹಗಲಾಯಿತು. ಭರತೇಶನು ಹಗಲು ನಿದ್ರೆಗಾಗಿ, ನಗೆಗಣ್ಣನಲ್ಲೆಯೊಂದಿಗೆ ಸಜ್ಜೆಮನೆಯನ್ನು ಸೇರಿದನು.

"ನಡೆದು ನಡೆದು ಬಳಲಿರುವೆ. ನಡೆಯದಿರು"—ಎಂದು ಮಡದಿಯನ್ನು ತಾನೆತ್ತಿಕೊಂಡು ದಡದಡನೆ ಅಡಿಯಿಟ್ಟು ಶಕುನಿ ಮಂಚದ ಮೇಲೆ ಅವಳನ್ನು ಮಲಗಿಸಿದನು. ಲೇಸು ತಟ್ಟಿರುವ ಮನಸ್ಸು, ಹೊಸ ಮೋಹದಿಂದ ಮತ್ತವಾದ ಮನಸ್ಸು, ಇವುಗಳಿಂದಾಗುವ ಲೇಸನ್ನು ಬಲ್ಲ ಅವರು ಬಲ್ಲಂತೆ ವರ್ತಿಸಿದರು.

## ೨೪

# ಪುತ್ರವೈವಾಹ

ಸರಸದ ಸೇಸೆಯ ಮರುದಿನ ಭರತೇಶ ಸಾರ್ವಭೌಮನಿಗೆ ಭೂಸುರರು ಅಕ್ಷತೆಯಿಟ್ಟರು.ಕವಿಗಳು ಚಕ್ರಿಯನ್ನು ಕೀರ್ತಿಸಿದರು. ರಾಜರು ಬಂದು ಕಾಣಿಕೆಯಿತ್ತರು. ಮಹಾಸೇನೆಯೂ ಕಾಣಿಕೆ ಸಲ್ಲಿಸಿತು. ಭರತೇಶನಾಗ ಅವರೆಲ್ಲರನ್ನೂ ಉಚಿತವಾದ ಉಡುಗೊರೆಗಳಿಂದ ಸನ್ಮಾನಿಸಿದನು. ಪ್ರಜೆ ಪರಿವಾರವನ್ನೂ ಸಾರ್ವಭೌಮನು ಮನ್ನಿಸಿದನು. ಹೀಗೆ ಮಿಗಿಲಾದ ಸಮ್ಮಾನದಲ್ಲಿ ಕೆಲವು ದಿವಸಗಳು ಸುಖದ ಸೊಮ್ಮಿನಲ್ಲಿ ಉರುಳಿಹೋದುವು. ನಮಿರಾಜನ ಸತಿಯರಿಗೂ ಹೆಮ್ಮಕ್ಕಳಿಗೂ ಹಲವು ಬಾರಿ ಸಮ್ಮಾನಗಳಾದುವು. ಇವರ ನಿವಾಸಕ್ಕೆ ಅವರೂ, ಅವರ ನಿವಾಸಕ್ಕೆ ಇವರೂ ಹೋಗಿ ಬಂದರು. ಈ ರೀತಿಯ ಸುವಿನೋದದಲ್ಲಿ ಕಾಲ ಕಳೆದು ಹೋಯಿತು.

ಹೀಗಿರುವಾಗ ಮತ್ತೊಂದು ರಾತ್ರಿ ಭರತೇಶನು ತನ್ನ ಮೈದುನರೊಂದಿಗೆ ವಿನೋದದಲ್ಲಿದ್ದನು. ಆವನ ಮೈದುನರ ಅರಸಿಯರೂ ಅತ್ತೆಯರೂ ತನ್ನ ರಾಣಿಯರೂ ಅಲ್ಲಿ ತೆರೆಯ ಮರೆಯಲ್ಲಿದ್ದರು. ತನ್ನ ನಾಲ್ವರು ಮೈದುನರಲ್ಲೂ ಭರತೇಶನು ಒಂದೊಂದು ವಿನೋದದ ಮಾತನ್ನಾಡುತ್ತಿದ್ದನು. ಮೊದಮೊದಲು ಲೀಲಾವಿನೋದ ಮಾಡಿದರು ಮತ್ತೆ ಭರತೇಶನು ನಮಿರಾಜನನ್ನು ಒತ್ತೊತ್ತಿನುಡಿದನು.

ಆಗ ಅಲ್ಲಿದ್ದ ಮಧುವಾಣಿಯೂ ಮಧ್ಯೆ ಮಾತು ಸೇರಿಸಿದಳು.

''ಒತ್ತಿ ನುಡಿಯದಿರು ನೀನು. ನಮ್ಮರಸುಗಳು ನಿನಗೇನು ಕಡಿಮೆ ಮಾಡಿದರು? ಲೋಕದಲ್ಲಿನ ಶ್ರೇಷ್ಠ ವಸ್ತುವನ್ನೇ ನಿನಗೆ ಕೊಟ್ಟರು. ಉತ್ತಮ ವಸ್ತುವನ್ನು ತಂದಿತ್ತವರೊಡನೆ ಮೆತ್ತಗೆ ಸೋತು ನುಡಿಯದೆ ಒತ್ತಿ ನುಡಿಯುವುದೇ? ಇದು ನಿನಗೆ ಸಲ್ಲುವುದೆ?''

''ನಿನ್ನರಸುಗಳು ಏನನ್ನು ತಂದಿತ್ತರು? ನನ್ನ ಒಡವೆಯನ್ನು ತಂದು ನನಗೆ ಸನ್ನಾಹ ಗೈದರೆ ಅದೊಂದು ಅಧಿಕವೆ?''

''ನಟನೆ ಬೇಡ. ನಮ್ಮ ಅರಸುಗಳು ನಿನಗೆ ಒಲಿದುಕೊಟ್ಟ ಮೇಲೆಯೇ ನಿನ್ನ ಒಡವೆಯಾಗುವುದು.''

''ಮಾವನ ಮಗಳು ಸೋದರ ಅಳಿಯನಿಗೆಂದು ಭೂವಲಯವೇ ಬಲ್ಲುದು, ಇದನ್ನು ತಿಳಿದುಕೋ. ನೀವು ಕೊಟ್ಟದ್ದೇನು? ಚಕ್ರಿ ಪಡೆದುದೇನು? ಹೋ. ಈ ದೊಡ್ಡಸ್ತಿಕೆಯನ್ನು ಮರೆತುಬಿಡು. ತಾಯಿಯ ಅಣ್ಣ ಕಚ್ಛೇಂದ್ರನು ಮಗಳನ್ನು ತನ್ನ ಅಳಿಯನಿಗೆ ಕೊಡನೆ? ಒಮ್ಮೆ ಕೊಡದಿದ್ದರೆ ಶ್ರೀಯಶಸ್ವತಿಯ ಹಿರಿಯ ಮಗನು ಬಿಡುವನೇ?''

''ನಿನ್ನ ಮಾವಾಜಿ ತಪಸ್ಸಿಗೆ ಸಾಗಿದರು; ನಮ್ಮ ರಾಜರಲ್ಲವೆ ನಿನಗೀಗ ಕೊಟ್ಟವರು? ಕೋಪದಿಂದ ಕೊಡೆನೆಂದರೆ ಏನು ಮಾಡುತಿದ್ದೇ?''

''ಒಬ್ಬ ನಮಿರಾಜನು ಕೊಡನೆಂದರೆ ನನಗಲ್ಲಿ ಸರ್ವರೂ ಸಹಾಯರಾಗಿದ್ದಾರೆ.''

''ಸರ್ವ ಸಹಾಯದವರಿದ್ದರೂ ನನೆದರ್ಥಿ ಕೈಸೇರುವುದೆ? ಕೇಳು. ಆಗಲಿ ನಿನ್ನವರಾದ ಆ ಸರ್ವರು ಯಾರು?''

''ನಿನಗದು ತಿಳಿಯದೆ? ಇಬ್ಬರೂ ಅತ್ಯಾಚಿಯರು, ವಿನಮಿ, ಎಂಟು ಸಾವಿರದ ಐನೂರು ಮಂದಿ ಸೋದರಿಯರು, ಭೂಮಿಯೇ ನನಗೆ ಬೇಕೆನ್ನುವರು.''

''ಹೆಣ್ಣುಗಳೆಲ್ಲ ಯಾವಾಗಲೂ ಅಣ್ಣನ ಪಕ್ಷವೇ. ನಮ್ಮರಸನು ಹೆಣ್ಣನ್ನು ಕೊಡೆನೆಂದು ಹೇಳುತಿದ್ದರೆ?''

''ನನ್ನ ತಂಗಿಯರು ಇವನಿಗೆ ಉಣ್ಣಲಿಕ್ಕೇ ಇಕ್ಕುತ್ತಿರಲಿಲ್ಲ.''

''ಅಯ್ಯೋ ಒಂದು ಹೆಣ್ಣಿನ ಮಾತೇನಿಂದು? ಇದರಲ್ಲೇನು ಕುಂದು? ಅಕ್ಕ ಸೋದರಿಯರನ್ನು ಮೊದಲೆ ಕೊಟ್ಟಿದ್ದೆವಲ್ಲವೆ?'' ಎಂದು ನಮಿರಾಜನು ಮೇಲೆ ಬಿದ್ದು ನುಡಿದನು.

''ಹಲವು ಸೋದರಿಯರನ್ನು ನಿನಗೆ ನಾನು ಮೊದಲೇ ಕೊಟ್ಟುದನ್ನು ಮರೆಯದಿರು. ಬಹಳ ಸಿರಿಯುಳ್ಳವರು ಬಡವರಿಟ್ಟ ಒಸಗೆಯನ್ನು ಹುಲ್ಲಿನಂತೆ ಕಾಣುತ್ತಾರೆ. ಇವನಿಗೆ ನಮ್ಮ ತಂಗಿಯರಿಂದ ಸರಿಯಾಯಿತಲ್ಲದೆ ಮುತ್ತಾವುದರಿಂದಲೂ ಅಲ್ಲ.''

ಭರತೇಶನ ಈ ಮಾತಿಗೆ ನಮಿರಾಜನು ನಕ್ಕನು.

''ಎಂಟು ಸಾವಿರದೈನೂರಿಬ್ಬರು ನನಗಿಲ್ಲಿ. ನನ್ನನ್ನು ಅಂಟಿಕೊಂಡಿರುವ ನಂಟಿನ ನನ್ನ ಪಕ್ಷದವರು. ನಿಮಗಾದರೊ ಲಕ್ಷ ಪಕ್ಷದವರು. ಅದರಿಂದ ನೀವು ಬಂದೆದ್ದು ಬಂದಿರಿ. ನೀವು ನಾಲ್ವರು. ಒಬ್ಬನಾಗಿರುವ ನಮ್ಮ ಪಕ್ಷ ಕಿರಿದು. ಸಮಯವರಿತು ನೀವು ಒತ್ತಬಹುದು.''

ಎಂದು ಭರತೇಶನೂ ನಗುತ್ತ ಮಾತು ಮುಂದುವರಿಸಿದನು.

ಅಷ್ಟರಲ್ಲಿ ಅತ್ತೆಯರು ಕೊಟ್ಟ ನಿವಾಳಿಯನ್ನು ಮಧುವಾಣಿಯು ತಂದು ಬಿತ್ತರದಲ್ಲಿ ಚಕ್ರಿಗಿಟ್ಟಳು. ಹೊತ್ತಾಯಿತು, ಸಾಕೆಂದು ತನ್ನ ಅರಸುಗಳಿಗೂ ಸೂಚಿಸಿದಳು. ''ಹೌದು; ಅಧಿಕ ಪ್ರಸಂಗವೇ ಆಯಿತು.'' ಎಂದು ನಾಲ್ವರು ಮೈದುನರೂ ಚಕ್ರಿಗೆ ನಿವಾಳಿಯಿಟ್ಟು ಆನಂದವನ್ನುಂಟುಮಾಡಿದರು. ಆಮೇಲೆ ಗಂಗಾದೇವ ಸಿಂಧುದೇವರ ಹೆಂಗಸರು ಬಂದು ನಿವಾಳಿಯಿಟ್ಟರು.ಅಷ್ಟರಲ್ಲಿ ನಮಿವಿನಮಿರಾಜರ ರಾಣಿಯರೂ ತಮ್ಮ ಅಣ್ಣನಿಗೆ ನಿವಾಳಿಯನ್ನು ಕಳುಹಿಸಿದರು.

ನಮಿರಾಜನ ಪುತ್ರಿಯರು ಇನ್ನೂರು ಮಂದಿ ವಿನಮಿನರಾಜನ ಪುತ್ರಿಯರು ಐವತ್ತು ಮಂದಿಯೂ ಹೊನ್ನ ಬೊಂಬೆಗಳಂತೆ, ಮಾವನಿಗಾಗಿ ಚೆನ್ನಾದ ನಿವಾಳಿಗಳನ್ನು ತರುತಿದ್ದರು. ವರುಷಾರುತಿಂಗಳೊಳಗೆ ಮದುವೆಗೆ ಸಲ್ಲುವ ಹರೆಯದ ಈ ಕೋಮಲಾಂಗಿಯರು ಸರಿಸರಿಕೆಯಿಂದ ಬರುತಿದ್ದರು. ಅವರು ಜಾತಿ ಶೃಂಗಾರದಿಂದ ಕಣ್ಣಿಗೆ ಮೋಹಿಸುತ್ತಿದ್ದರು.

''ಇವರಾರು ಮಧುವಾಣಿ.'' ಭರತೇಶನು ಕೇಳಿದ.

''ನಿನ್ನ ತಂಗಿಯರ ಆತ್ಮಭವೆಯರು.''

ಪ್ರವರರಾದ ಅರ್ಕಕೀರ್ತಿ, ಆದಿರಾಜ ಮುಂತಾದ ತನ್ನ ಮಕ್ಕಳ ಪುಣ್ಯವೆ–ಎಂದು ಭರತೇಶನು ಮನದಲ್ಲೇ ಭಾವಿಸಿದನು.

ಆ ಬಾಲೆಯರು ಬಂದು, ಮಾವನಿಗೆ ನಿವಾಳಿಯಿಟ್ಟು, ಓಜೆಯಿಂದ ವಂದಿಸಿದರು. ಕೂಡಲೇ ಭರತೇಶನು ಅವರಷ್ಟೇ ರೂಪವಾಗಿ ಅವರನ್ನೆಲ್ಲರ ತಲೆಯನ್ನೂ ಸವರಿ ಮುದ್ದಾಡಿದನು. ಅವರೆಲ್ಲರಿಗೂ ತೊಡಿಗೆಗಳನ್ನಿತ್ತು ಮತ್ತೆ ಎಡಗೈಯನ್ನು ಎತ್ತಿ ಕೈಲಕ್ಷಣವನ್ನು ನೋಡಿದನು. ಆ ಮೇಲೆ ಮೈದಡವಿ "ನೀವು ನಮ್ಮ ಮನೆಗೆ ಬಂದ ಬೆಡಗು ಲೇಸಾಯಿತು. ಅರ್ಕಕೀರ್ತಿ, ಆದಿರಾಜರು ಕಡು ಚೆಲವರು. ಅವರನ್ನು ನೀವೊಮ್ಮೆ ನೋಡಿದರೆ ಅವರನ್ನು ಬಿಡಲಾರಿರಿ." ಎಂದು ವಿನೋದವಾಡಿದರು

ನಾಚಿಗೆಯಿಂದ ಸಿಡಿದು, ಅವರೆಲ್ಲರೂ ಒಳಹೊಕ್ಕರು.

"ಮೊದಲು ಸಿಕ್ಕಿದುದೆ ಸಾಕು ನಮಗೆ. ಇನ್ನು ಅಧಿಕಾರದಲ್ಲಿರುವವರಲ್ಲಿ ನಮಗೇಕೆ ಪುದು? ಎಂದಾಗ ನಮಿರಾಜನು ನುಡಿದನು.

"ಮೊದಲು ನಿನ್ನ ತಂಗಿಯರು ನನ್ನ ಮನೆಯನ್ನು ಹೊಕ್ಕು ಆದ ಕದನವೇನು? ಇದಕ್ಕೆ ನೀವು ನಾವು ಚಿಂತಿಸುವುದು ಬೇಡ. ನಿಮ್ಮ ನಮ್ಮ ಸುದತಿಯರು ಯಾವ ರೀತಿಯಲ್ಲಿ ಕಾಣುತ್ತಾರೋ ಹಾಗೆ ನಾವು ಹದಗೊಳಿಸುವ ಮುಂದೆ; ಇಂದಿಗೆ ತಾಳು." ಎಂದು ಭರತೇಶನು ಸಂಪ್ತನ್ನು ತೋರುವ ಮಾತನ್ನಾಡಿದನು.

ಅಷ್ಟರಲ್ಲಿ ಭರತೇಶನ ಪುತ್ರಿಯರು ಶೃಂಗಾರವೆತ್ತ ಸುರಕನ್ನೆಯರಂತೆ ತಳತಳಿಸುವ ತನುಕಾಂತಿಯಿಂದ, ನಿವಾಳಿಯನ್ನು ಹಿಡಿದುಕೊಂಡು ಬರುತಿದ್ದರು.

"ಯಾರಪ್ಪ ಇವರು? ನಮ್ಮಮ್ಮರೋ? ಅಕ್ಕರೊ? ವಾರಣಗತಿಯನ್ನು ಝುಂಕಿಸುತ್ತ ಬರುತ್ತಿರುವ ಕಾರ್ಯವೇನು?" ಭರತೇಶನು ತನ್ನ ಕುಮಾರಿಯರನ್ನು ನೋಡಿ ನಗುತ್ತ ನುಡಿದನು.

ಬೆಳೆಯುವ ಪ್ರಾಯದ ಐನೂರು ಮಂದಿ ಹೊಳೆಯುವ ನಿವಾಳಿಯನ್ನಿಡಲು, ಅವರನ್ನೆತ್ತಿ ತೊಡೆಯಲ್ಲಿ ಕುಳ್ಳಿರಿಸಿಕೊಂಡು ವಾತ್ಸಲ್ಯದಿಂದ ಮೈದಡವಿದನು.

"ಅದು ನಿಮ್ಮ ಮಾವಂದಿರಲ್ಲವೆ;ನೋಡಿ. ನಿಮ್ಮ ಇದಿರಲ್ಲಿ ಕುಳಿತಿರುವವರು. ಅವರಿಗೆ ನಮಿಸಿರಿ."

"ಅವರು ಕೈಮುಗಿದುದು ಚಕ್ರೇಶ್ವರನಿಗಿರಲಿ." ಎಂದು ಮಾವಂದಿರು ನುಡಿದರೂ ಬಾಲೆಯರೆಲ್ಲ ಎದ್ದು ಕೈಮುಗಿದರು. ಸಾಷ್ಟಾಂಗವೆರಗಿದರು. ಇವರು ಅನ್ಯರನ್ನು ಹೊಂದುವವರಲ್ಲ; ತಂದೆಯನ್ನೆ ಹೊಂದಿದವರು–ಎನ್ನುವಂತೆ ಕೆಲವರು ತಂದೆಯ ತೊಡೆಯ ಮೇಲಿದ್ದೇ ವಂದಿಸಿದರು. "ಮಾವನೆಂದು ಇವರು ನಮಗೆ ನಮಸ್ಕರಿಸುವ ಕ್ರಮವೋ ಸೇವೆಗೆ ಘನಭೂಪತಿಯ ಮುಂದುವರಿದ ಫಲವೋ–" ಎಂದು ಗಂಗಾದೇವ ಸಿಂಧುದೇವರು ಮನಸ್ಸಿನಲ್ಲೇ ಭಾವಿಸಿದರು.

"ನೀವು ದೊಡ್ಡವರಾದಾಗ ನಮ್ಮನ್ನು ಬಿಟ್ಟು ಹೋಗುವಿರಿ, ಅಮ್ಮ ಅದಕ್ಕೀಗಲೇ ಮರುಕವಾಗುವುದು." ಎಂದು ಭರತೇಶನು ಅವರನ್ನು ತೂಪಿರಿದು ತಕ್ಕೈಸಿ ಮುದ್ದಿಸಿದನು.

"ಎಲ್ಲಿದ್ದರೂ ನನ್ನ ಪುತ್ರಿಯರಿಗೆ ತಕ್ಕ ವಲ್ಲಭರಿರುವರು. ಇವರೇ ಅವರ ಜಾಡ್ಯವನ್ನು ಕೊಲ್ಲುವರು. ಮತ್ತೆ ಅವರ ದಾರಿದ್ರ್ಯವನ್ನು ನಾನೆ ಕೊಲ್ಲುವೆನು"

"ಭರತಚಕ್ರಿಯ ಈ ಮಾತನ್ನು ಕೇಳಿ ಪುತ್ರಿಯರೆಲ್ಲ ನಾಚಿಕೆಯಿಂದು ಎದ್ದು

ಒಳಮನೆಗೆ ಸಾಗಿದರು. ಇನ್ನು ಮಾತನಾಡುವುದಿಲ್ಲವೆಂದರೂ ಅವರು ಕುಡಿಮಿಂಚಿನಂತೆ ಓಡಿದರು. ತೆರೆಯ ಮರೆಯನ್ನು ಸೇರಿದ ಮೇಲೆ ಮಧುರಾಜಿ ಕುಮಾರಿಯು ಮರೆಯಿಂದಲೆ ಮುಖವನ್ನು ತೋರಿಸಿ, ''ಅಪ್ಪಾಜಿ, ಇನ್ನು ನಿನ್ನ ಹತ್ತಿರ ಬಾರೆವು'' ಎಂದಳು.

''ಏನು ಕಾರಣ ಬಾರಿರಿ?'' ಎಂದು ಕೇಳಿದರೆ, ''ಹೋಗು. ನೀನು ಮನುಷ್ಯನೇ ಅಲ್ಲ; ನೀನು ನಮ್ಮ ಮಾನವನ್ನೆ ಕೆಡಿಸಿದೆ; ನಾವದರಿಂದ ಬಾರೆವು'' ಎಂದವರು ತಮ್ಮ ನೋವನ್ನು ತೋಡಿಕೊಂಡರು. ಅಲ್ಲಿಗದು ಮುಗಿಯಲಿಲ್ಲ,

''ಕಂಡವರ ಮುಂದೆ ನೀನಿಂದು ಮಂಡಲಪತಿಗೆ ತಾಗದ ಮಾತನ್ನು ಆಡಿದೆ, ನೀನೇ ಯೋಚಿಸಿ ನೋಡು.''

ನಿಮಗೆಲ್ಲರಿಗೆ ಒಬ್ಬೊಬ್ಬ ಗಂಡಬೇಕೆಂದು ನುಡಿದೆನು. ಈ ಮಾತು ಕೇಳಿದ ಅವರು ಛೀ ಛೀಯೆಂದು ನಾಚಿಕೆಯಿಂದ ತಲೆಯನ್ನೇ ಕೊಡಹಿಕೊಂಡರು. ಆಗ ಒಳಗಿದ್ದವರೆಲ್ಲರೂ ನಕ್ಕರು. ''ಅಪ್ಪಾಜಿ, ಹಲವಾರು ನಿನಗಾಗಿ ನಗುವರು. ನನಗೆ ನಾಚಿಕೆಯಾಗುತ್ತಿದೆ. ಇದೊಂದು ಹಾಸ್ಯವೇ ಆಯಿತು'' ಎಂದು ಬಾಲೆ ಮತ್ತೂ ಮಾತುಕೂಡಿಸಿದಳು. ಈ ಮಾತನ್ನು ಕೇಳಿ ಭರತೇಶ ಎದೆತುಂಬಿ ನಕ್ಕನು.

''ಅಯ್ಯಯ್ಯೋ, ನೀನೊಬ್ಬ ಅರಸು ಬಂದೆ, ಸರ್ವರೂ ತನ್ನನ್ನು ನಗಲು ಒಂದಿಷ್ಟೂ ನಾಚಿಕೆಪಡದೆ ನೀನೂ ನಗುತ್ತಿರುವೆ. ಹೋಗು ಹೋಗು.'' ಎಂದು ಅಧಿಕಾರದಿಂದ ಎಂಬಂತೆ ತಲೆಯನ್ನು ಝುಂಕಿಸಿದಳು.

''ನನ್ನನ್ನು ನಗುವರ ಬತ್ತಿನಲ್ಲಿಡಬೇಡ ಮಗಳೆ. ನನ್ನೊತ್ತಿಗೆ ಬಾ.''

''ನಿನ್ನ ಹತ್ತಿರ ಒಮ್ಮೆ ಬಂದು ನೊಂದುದೇ ಸಾಲದೆ? ಇನ್ನೊಲ್ಲೆ, ಹೋಗು.''

''ಮಧುರಾಜಮ್ಮ, ತಪ್ಪು ನನ್ನದು. ನೀವೊಮ್ಮೆ ಇಲ್ಲಿಗೆ ಬಂದರೆ ನಿಮಗೆಲ್ಲ ತಪ್ಪು ತೆರುವೆನು. ನಿಮ್ಮ ಚಿತ್ತಕ್ಕೆ ಬರುವಂತೆ ನಡೆಯುವೆನು.''

''ಎಲ್ಲರ ಮುಂದೆಯೂ ಬರಲು ನನಗೇನು ಲಜ್ಜೆಯಿಲ್ಲವೇ? ಹೋಗು.'' ಎಂದಾಕೆ ನುಡಿಯುತ್ತಿದ್ದಾಗಲೇ ಭರತೇಶನು ರತಿಚಂದ್ರಿಕೆಗೆ ಸನ್ನೆ ಮಾಡಿ ಸೂಚಿಸಿದನು. ಅವಳು ಮಧುರಾಜಿಯನ್ನೆತ್ತಿಕೊಂಡು ತಂದಿತ್ತಳು.

ಮಾವನವರನ್ನು ತಂದೆಯನ್ನು ನೋಡಿ ಹೆಚ್ಚಾದ ನಾಚಿಕೆಯಿಂದ ಚಕ್ರಿಯ ತೊಡೆಯಲ್ಲಿ ತನ್ನ ತಾವರೆಗೈಯಿಂದ ಮೋರೆ ಮುಚ್ಚಿಕೊಂಡು, ಪ್ರೀತಿಯಿಂದ ಮೌನವಾಗಿದ್ದಳು ಮಧುರಾಜಿ. ಭರತೇಶನು ನೋಡಕ್ಕಯೆಂದರೆ ಆಕೆ ನೋಡಲಿಲ್ಲ; ನುಡಿಯೆಂದರೆ ನುಡಿಯಲಿಲ್ಲ, ತನ್ನ ಮಗಳನ್ನು ತಾನೇ ನೋಡುವನು, ಮುತ್ತು ಕೊಡುವನು; ಮುದ್ದಾಡುತಿದ್ದನು ಭರತೇಶನು.

''ನಿನ್ನನ್ನು ಮೆಚ್ಚಿ ಸರ್ವರೂ ನೋಡುತ್ತಿರುವಾಗ, ನೀನು ಕಣ್ಣು ಮುಚ್ಚಿರುವುದು ಅವರಿಗೆ ಅರಿಯದೆ? ಮಧುರಮ್ಮ ಕಣ್ಣುತೆರೆ'' ಎಂದಾಗ ಕಣ್ಣು ಮುಚ್ಚಿಯೇ ನಗುತಿದ್ದುದು ಆ ಹಸುಳೆ.

''ನಮ್ಮನ್ನು ನೋಡದೆ ಕಣ್ಣು ಮುಚ್ಚಿರುವ ಸೊಮ್ಮೇನು? ನಿಮಗಿಂದು ಧ್ಯಾನವೋ? ಶಿವಸಿದ್ಧಿಯನ್ನು ನೀವು ನಿಮ್ಮಲ್ಲೆ ಕಂಡು ಅನುಭವಿಸಿದ್ದರೆ ನಮಗೂ ಒಂದಿಷ್ಟು ಬುದ್ಧಿ

ಕಲಿಸಿರಿ.'' ಎಂದು ಗಲ್ಲವನ್ನು ಅಲುಗಿ ಕೇಳಿದನು. ಮೋಹನದೊಂದು ಪುತ್ಥಳಿಯನ್ನು ಮಾಡಿ ಜೀವವನ್ನು ತುಂಬಿಸಿ, ಮೋಹನಸಿದ್ಧನು ಆಡಿಸುತ್ತಿರುವ ಊಹೆಯಲ್ಲೇ ಮಗಳನ್ನು ಮುಟ್ಟಿಸುತ್ತ ನಗುತ್ತ ಭರತೇಶನೊಮ್ಮೆ ಶ್ರೀ ಹಂಸನಾಥಯೆಂದನು. ಆಮೇಲೆ ''ಮಾನ ಭೂಷಣೆ, ಲಜ್ಜೆಕಾಶಿ, ಸೌಜನ್ಯ ನಿಧಾನೆ, ಗಂಭೀರೆ ಸುಶೀಲೆ, ಏನಮ್ಮ ಮಧುರಾಜಿ ತಪ್ಪನ್ನು ಮನ್ನಿಸು'' ಎಂದು ಮೊದಲಿತ್ತ ತೊಡಿಗೆಯನ್ನು ತೆಗೆಸಿ ಹೊಸ ತೊಡಿಗೆಯನ್ನಿತ್ತು ತೊಡಿಸಿದನು. ಆಮೇಲೆ ಇದು ನಿನಗಿತ್ತ ಅಪರಾಧವೆಂದು ಆಕೆಯನ್ನು ತೊಡೆಯಿಂದಿಳಿಸಿದನು. ಮಧುರಾಜಿ ಅಂಚೆಯಂತ ಒಳಗೋಡಿದಳು.

''ಕಂಡಿರಾ, ನಿಮ್ಮಣ್ಣನ ಆಟವನ್ನು? ಹೊರಗೆ ಎಡೆಗೊಂಡ ಗಂಭೀರ. ಒಳಗೆ ಕಂಡ ಬಚ್ಚೆಯ ನಡೆನುಡಿಗಳು. ''ಎಂದು ಭರತೇಶಸತಿಯರು ಖಚರಿಯರೊಡನೆ ಉಸುರಿದರು.

''ಅಣ್ಣಾಜಿ ಏನು ಮಾಡಿದನು? ತನ್ನ ಪುತ್ರಿಯರನ್ನು ಚಿತ್ತಾನುರಾಗದಿಂದ ಮುದ್ದಿಸಿದನು. ಜಗಕ್ಕಿದು ಹೀನವೇ?'' ಎಂದು ನಮಿರಾಜನ ಮಾನಿನಿಯರು ನುಡಿದರು.

ಆ ರೀತಿಯಲ್ಲಿ ಅಂದಿನ ಸರಸ ಸವಿನೋದದ ಓಲಗ ಹರಿಯಿತು.

ಮತ್ತೊಂದು ದಿನ ಭರತೇಶನು ಸರಸಗೋಷ್ಠಿಯಲ್ಲಿರುವಾಗ ಒಂದು ಮಧುರವಾದ ತಂತ್ರವನ್ನು ನೆನೆದನು. ನಮಿರಾಜನ ಕುಮಾರರಾದ ಕನಕರಾಜ, ಕಾಂತರಾಜ, ಮುಂತಾದ ಮುನ್ನೂರು ಮಂದಿ ಬಂದು ಮಾವನಿಗೆ ಕಾಣಿಕೆಯಿತ್ತು ಕುಳಿತರು. ಅವರ ಹಿಂದಿನಿಂದ ವಿನಮಿರಾಜನ ಪುತ್ರರು ಶಾಂತರಾಜನೇ ಮೊದಲಾದ ನೂರು ಮಂದಿ ಬಂದು ಮಾವನನ್ನು ಕಂಡರು. ಅವರೆಲ್ಲರೂ ಜಂಬುಖಾನೆಗಳಲ್ಲಿ ಕುಳಿತರು.

''ಖಚರ ಕುಮಾರರಿವರು ಚೆಲುವರಾಗಿದ್ದಾರೆ. ಇವರು ಕಲಿತ ಕಲೆಗಳೇನು?'' ಎಂದು ಭರತಚಕ್ರಿಯು ಒಲಿದು ಕೇಳಿದನು. ''ಸಾಧಿತ ವಿದ್ಯೆಯಲ್ಲೂ ಇವರು ವಿದ್ಯಾಧರ ಲೋಕಕ್ಕೆ ಅಗ್ರಗಣ್ಯರು. ಶಸ್ತ್ರಶಾಸ್ತ್ರಗಳಲ್ಲೂ ಇವರು ಅಗ್ಗಳರು; ಸಮ್ಯಕ್ತ್ವ ಚರಿತ್ರ ಸಂಪನ್ನರು.'' ಎಂದು ಬಳಿಯಲ್ಲಿದ್ದ ಮಧುವಾಣಿಯು ಚಕ್ರಿಗೆ ತಿಳಿಸಿದಳು.

ಭರತೇಶನಾಗ ತನ್ನ ಅಣುಗರನ್ನೂ ಬರಲು ಹೇಳಿ ಕಳುಹಿಸಿದನು. ಅವರಾಗ ಸಾಲು ಸಾಲಾಗಿ ಬರುತ್ತಿದ್ದರು. ಮೊದಲು ಬಂದ ಮಧುರಾಜ ವಿಧುರಾಜರು ಮುಂದೆ ಹೋಗಿ ತಂದೆಗೆ ಕಾಣಿಕೆಗೊಟ್ಟು ಮಾವಂದಿರಿಗೆ ಕೈಮುಗಿದು ಜಂಬುಖಾನೆಯಲ್ಲಿ ಕುಳಿತರು.

ಮಕ್ಕಳನ್ನು ನೋಡಿದ ಭರತೇಶನು ಮನಸ್ಸಿನಲ್ಲೊಂದು ತಂತ್ರವನ್ನಿಟ್ಟನು. ''ಮಧುರಾಜ, ವಿಧುರಾಜ, ನಿಮ್ಮ ಶಾಸ್ತ್ರಾನುಭವವನ್ನು ತೋರಿಸಿರಿ'' ಎಂದವನು ಅವರನ್ನು ಕೇಳಿದನು. ಅವರು ಒಮ್ಮೆ ವ್ಯಾಕರಣದಲ್ಲಿ ಶಬ್ದ ಸಿದ್ಧಿಯನ್ನು ತೋರಿಸಿದರು. ಒಮ್ಮೆ ತರ್ಕವಿತರ್ಕದಲ್ಲಿ ಮಹೋನ್ನತವನ್ನು ಮುಟ್ಟಿದರು. ಒಂದಿಷ್ಟೂ ಕುಂದಿಲ್ಲದಂತೆ ಸ್ವರ್ಗ ಭಾಷೆಯನ್ನು ಆಡಿದರು. ಆಗಮದಲ್ಲಿ ಹರಿವರಿಯಾಗಿ ಹರಿದು, ಕಾವ್ಯಾಗಮದಲ್ಲಿ ಕಳೆಯನ್ನು ತೋರಿ, ಭೋಗಿಸಿದ ಭೋಗವು ವ್ಯಕ್ತವಾಗುತ್ತಿದ್ದರೂ ಚತುರರಾದ ಅವರೂ ಯೋಗವನ್ನೂ ಎಳೆಎಳೆಯಾಗಿ ತೋರಿಸಿದರು. ಭರತಶಾಸ್ತ್ರದಲ್ಲಿ, ನಾಟಕದಲ್ಲಿ, ಕವಿತೆಯಲ್ಲಿ, ಆನೆ ಕುದುರೆಗಳ ಪರೀಕ್ಷೆಯಲ್ಲಿ ಅವರೆಲ್ಲರೂ ಭರವಾಗಿದ್ದು ಭರತಚಕ್ರಿಯ ಪುತ್ರರೆಂದೆಲ್ಲರೂ ಮೆಚ್ಚಿ ನುಡಿವಂತೆ ತಮ್ಮ ವಿದ್ಯಾಕೌಶಲ್ಯಗಳನ್ನು ತೋರಿದರು.

ಅದನ್ನು ಕೇಳಿದ ಅನೇಕರು ಸಾಕುಸಾಕೆನುವಂತೆ ತಲೆದೂಗುತ್ತಿದ್ದರು. ಆಗ ಭರತೇಶನು ಲೋಕರಂಜನೆ ಸಾಕೆಂದು ತಿಳಿಸಿ, ಮೋಕ್ಷಸಿದ್ಧಿಗೆ ತಕ್ಕ ಜೋಕೆಯನ್ನು ಹೇಳುವಂತೆ ಸೂಚಿಸಿದನು. ಮಕ್ಕಳು ನುಡಿವ ಚೆಲುವಿಕೆಗೆ ಭರತೇಶನು ಮೆಚ್ಚಿದರೂ ಅದನ್ನು ಒಳಗೇ ಅಡಗಿಸಿಕೊಂಡು, ಕರ್ಮಕೆಡುವ ತಂತ್ರವೇನೆಂದು ಕೇಳಿದನು.

''ಭೇದ ರತ್ನತ್ರಯವನ್ನು ಹಿಡಿದು ಸಾಧಿಸಿ, ಮತ್ತೆ ಅಭೇದ ರತ್ನತ್ರಯವನ್ನು ಹಿಡಿದರೆ ಕರ್ಮವು ವೇಧಿಸಲ್ಪಟ್ಟು ಜಾರಿದಾಗ ಅಮೃತದ ಹಾದಿಯು ತೋರುವುದು'' ಎಂದವರು ತಿಳಿಸಿದರು.

''ಅವುಗಳ ಲಕ್ಷಣವೇನು?''

''ಗುರುದೇವ, ವಿವಿಧಾಗಮಾರ್ಥದ ಚಿಂತೆಯು ವ್ಯವಹಾರದಲ್ಲಿ ಹೊಂದಿಕೊಳ್ಳುವುದೇ ಅದರ ನಿಶ್ಚಯ.'' ಎಂದು ಕುಮಾರರು ವಿವರಿಸಿದರು.

ನಮಿರಾಜ:—ಅದು ಲೇಸು, ಲೇಸು,

ಭರತೇಶ :—ನೀನು ಕಂಡ ಲೇಸಾವುದು ಹೇಳು?

ನಮಿರಾಜ :— ಮೊದಲು ಭೇದದಲ್ಲಿ ಆಡಿ ಆ ಮೇಲೆ ತನ್ನಲ್ಲಿ ತಾನು ನಿಲ್ಲುವುದು.

ಭರತೇಶ :—ವ್ಯವಹಾರ ಸಾಲದೇ? ನಿಶ್ಚಯವೇಕೆ?

ನಮಿರಾಜ :— ವ್ಯವಹಾರದಿಂದ ಸ್ವರ್ಗವೊದಗುವುದು. ಶಿವಸಿದ್ಧಿಯ ನಿಶ್ಚಿತದಿಂದಾಗುವುದು. ಅದಕ್ಕೆ ಆತ್ಮಾನುಭವವೆ ಬೇಕು,

ನಮಿರಾಜನ ಈ ಮಾತಿಗೆ ಭರತೇಶನು ಮೆಚ್ಚಿದನಾದರೂ ಅದನ್ನು ಒಳಗಿಟ್ಟುಕೊಂಡು ತಾನದನ್ನು ಮೆಚ್ಚಲಾರೆನೆಂದು ಭರತೇಶನು ಹೇಳಿದನು. ಮಕ್ಕಳಿಗೆ ತಿಳಿಯದು. ಆದುದರಿಂದವರು ಮಾವಾಜಿಯ ಮಾತು ಸರಿಯೆಂದೇ ಹೇಳಿದರು. ಆಗಲೂ ಭರತೇಶನು ಒಪ್ಪಿಕೊಳ್ಳದೆ ನಮಿರಾಜನಾಡಿದ ಮಾತು ಒಳಿತೆ ಎಂಬುದನ್ನು ಮುಂದೆ ಬರುವ ಎಲ್ಲರೊಡನೆಯು ಕೇಳುವೆನೆಂದನು.

ಅಷ್ಟರಲ್ಲಿ ಪುರುರಾಜ. ಗುರುರಾಜರು ಬಂದರು. ಭರತೇಶನು ಅವರನ್ನೂ ಕೇಳಿದನು. ಅವರೂ ಮಾವಾಜಿ ಕಂಡ ಅರ್ಥವೇ ಪರಮಾರ್ಥವೆಂದರು. ಆದರೆ ಚಕ್ರಿಯು ಮಾತ್ರ ಒಪ್ಪೆನೆಂದನು. ಶ್ರೀರಾಜ, ಮಾರಾಜರೂ ಬಂದಾಗಲೂ ಚಕ್ರಿ ಇದೇ ಪ್ರಶ್ನೆಯನ್ನು ಕೇಳಿದನು, ಅವರೂ ಅದೇ ಉತ್ತರ ಹೇಳಿದರು. ರತಿರಾಜ, ಮತಿರಾಜ, ಮೋಹನರಾಜ, ಮುಂತಾಗಿ ಸಾವಿರದಿನ್ನೂರು ಮಕ್ಕಳನ್ನು ಕೇಳಿದರೂ ಸರಿಯೆಂದೇ ಹೇಳಿದರು. ಹಂಸರಾಜ, ರತ್ನರಾಜ, ಸಂಸುಖರಾಜ, ನಿರಂಜನಸಿದ್ಧರನ್ನು ಕೇಳಿದಾಗಲೂ ಅದೇ ಉತ್ತರ ಬಂತು. ಅಷ್ಟರಲ್ಲಿ ಅಲ್ಲಿಗೆ ಅರ್ಕಕೀರ್ತಿ, ಆದಿರಾಜ, ವೃಷಭರಾಜರು ಬಂದರು.

''ದೊಡ್ಡಣ್ಣ ಚಿಕ್ಕಣ್ಣ ವೃಷಭಣ್ಣಾ ನಿಮ್ಮ ದೊಡ್ಡ ಮಾವನಿಗೂ ನನಗೂ ಒಂದು ಒಡ್ಡಾರವೊಡ್ಡಿದೆ. ಇದನ್ನು ನೀವು ತಿದ್ದಿಕೊಡಿ'' ಎಂದು ಚಕ್ರಿಯು ಈ ಮೂವರನ್ನೂ ಕೇಳಿದನು.

''ದೇವರಿಗೂ ಮಾವಾಜಿಗೂ ಆದ ಕಾರ್ಯಕ್ಕೆ ಪುರುದೇವನ ಓಲಗಕ್ಕೆ ಹೋಗಿ ಕೇಳಬೇಕಲ್ಲದೆ ನಾವು ತಿದ್ದುವ ದಕ್ಷರೇ?'' ಎಂದು ಆ ಮೂವರು ಓಜೆಯಿಂದ ನುಡಿದರು.

''ಮುಕ್ತಿಗೆ ಆತ್ಮನೇಕೆ? ಹೊರಧರ್ಮ ಸಾಲದೇ? ಎಂದು ನಾನು ಕೇಳಿದೆ. ಸ್ಥೂಲಧರ್ಮದಿಂದ ಸ್ವರ್ಗ, ತನ್ನಿಂದ ಶಿವನೆಂದು ಈತನು ಹೇಳಿದನು, ನೀವೇನು ಹೇಳುವಿರಿ?'' ಮತ್ತೆ ಭರತೇಶನು ಕೇಳಿದನು.

ಮುಕ್ತಿಗೆ ಆತ್ಮಾನುಭವವೇ ಬೀಜವೆಂದು ಹೇಳುತ್ತಿರುವ ತಮ್ಮ ಅಯ್ಯನು ಇಂದೇಕೆ ಹೀಗೆ ಹೇಳುತ್ತಿರುವನು? ಇದರಲ್ಲೇನು ತಂತ್ರವೊ? ಎಂದು ಕುಮಾರರೆಲ್ಲ ಮನಸ್ಸಿನಲ್ಲೇ ಯೋಚಿಸಿದರು. ಕಂಡುದನ್ನು ಹೇಳಿರೆಂದು ಚಕ್ರಿ ಒತ್ತಾಯಿಸಿದರೂ ಅವರು ಅಂಜುತಿದ್ದರು. ಕೊನೆಗೇ ಭರತೇಶನೇ ತನ್ನಾಣೆಯಾಗಿ ಕಂಡುದನ್ನು ಹೇಳೆಂದು ಅರ್ಕಕೀರ್ತಿಯನ್ನು ಕೇಳಿದನು. ಆಗಲೂ ಮಾವಾಜಿಯ ಮಾತನ್ನೇ ಸತ್ಯವೆಂದನು ನುಡಿದನು.

ಭರತೇಶ :—ನಿನ್ನ ಸೋದರೆಲ್ಲರೂ ಅತ್ತಲಾದರು. ನೀನೂ ಅವರನ್ನೇ ಅನುಸರಿಸಿದೆ. ನನ್ನಕಡೆಗೆ ಯಾರೂ ಇಲ್ಲ.

ಅರ್ಕಕೀರ್ತಿ :—ಸ್ವಾಮಿ, ನಿನ್ನಾಣೆಯಿಟ್ಟರೂ ಅವು ತಪ್ಪುವವೇ? ಮನ್ನಿಸು ಅದೇ ಸರಿ.

ಭರತೇಶನಾಗ ಬಳಿಯಿದ್ದ ರತಿಚಂದ್ರನೆಡೆಯತ್ತ ತಿರುಗಿ ನೋಡಿದನು.

ಭರತೇಶ :— ರಚಿಚಂದ್ರ, ಇವರು ಹೀಗೇಕೆ ಮಾತನಾಡಿದರು?

ರತಿಚಂದ್ರ :— ಇವರು ಮಾವನ ಸುತೆಯರನ್ನು ಕಂಡು ಅವರ ಪಕ್ಷವಹಿಸಿ ಹೀಗೆಂದರು.

ಭರತೇಶ : ಹಾ ! ಅಹುದಹುದು. ಅದೇ ಸರಿ. ನನ್ನ ಮಾವನ ಮಗಳನ್ನು ನನಗೆ ಕೊಡುವಾಗ ಇವನು ತನ್ನ ಉದ್ದದ ಒಡ್ಡನ್ನು ತೋರಿದನು. ಈಗ ನನ್ನ ಪುತ್ರಿಯರನ್ನು ಕೊಟ್ಟಾನೆ? ಇವರು ಬರಿದೇಕೆ ನನ್ನನ್ನು ಬಿಟ್ಟು ಮಾತನಾಡಿದರು?

ನಮಿರಾಜ : ತಂಗಿಯನ್ನಿವಗೆ ಕೊಟ್ಟುದರಿಂದ ನನ್ನಂಕೆಗಾದನು. ಅಳಿಯಂದಿರಿಗೆ ಮೊದಲೇ ಸುತೆಯರನ್ನು ಕೊಟ್ಟಿರುವೆನು. ಇದನ್ನಿನ್ನು ಕೆಡಿಸಬಾರದು.

ನಮಿರಾಜನಾಡಿದ ಈ ಮಾತನ್ನು ಕೇಳಿ ಭರತೇಶನು ಹೋ ಎಂದು ನಗುತ್ತ, ತಾನು ನೆನೆದುದು ಆಯಿತೆಂದರು.

ಭರತೇಶಕುಮಾರರ ರೂಪಿಗೆ ಸೋತಿದ್ದ ನಮಿರಾಜನು ಅವರ ವಿದ್ಯಾಪರಿಣತೆಗೂ ಸೋತ ಮೇಲೆ ಅವರಿಗೆ ಸುತೆಯರನ್ನು ಕೊಡದೆ ಇರುವವನೆ? ಇದನ್ನೆಲ್ಲ ಕೇಳಿದ ದಿವಿಜೆಯರಾದ ನಮಿರಾಜ ವಿನಮಿರಾಜರ ಪತ್ನಿಯರೂ ಸಂತೋಷದಿಂದ ಬೀಗಿದರು.

''ಸಾಕ್ಷಾತ್ ಜನಕನೆಂದರೂ ಈ ನನ್ನ ಮಕ್ಕಳು ನನ್ನ ಪಕ್ಷಕ್ಕೆ ಮಾತನಾಡಲಾರರು. ಮೋಕ್ಷ ಮಾರ್ಗವನ್ನು ತಪ್ಪದೆ ಹೇಳಿದರು. ಎಂದು ಭರತೇಶನು ಪರೀಕ್ಷಿಸಿ ನುಡಿದನು.

''ಕಚ್ಛರಾಜನ ತಂಗಿಯ ಮಗನ ಮಕ್ಕಳು ತಮ್ಮ ಇಚ್ಛೆಬಂದಂತೆ ಮಾತನಾಡ ಲಾರರು.'' ಎಂದು ನಮಿರಾಜನು ತನ್ನ ತಂದೆಯ ಒತ್ತಿನಿಂದ ನುಡಿದನು.

''ಹೌದು ಅದು ನಿಜವೆ. ಶ್ರೀ ಪುರುನಾಥನ ಮಗನ ರೂಪಿನಿಂದ ಬಂದವರೆಲ್ಲರೂ ಸತ್ಯವನ್ನೇ ಹೇಳುತ್ತಾರೆಯೇ? ಮೊನ್ನೆ ನೀನು ದೊಡ್ಡವರಿಗೆ ಹೆಣ್ಣು ಕೊಡುವುದಿಲ್ಲವೆಂದು ಹೇಳಿದೆ ! ಈಗ ಕೊಡುವೆನೆಂದು ಹೇಳಿದೆ. ಈಗ ನನ್ನ ಅರ್ತಿಯು ಸಂದಿತು.'' ಎಂದು ಭರತೇಶನು ಮೈತುಂಬಿ ಮಾತನಾಡಲು ನಮಿರಾಜನು ತನ್ನ ಆರ್ತಿಯು ಅದೇ ಎಂದನು.

''ಆತ್ಮವನ್ನು ಅಲ್ಪವೆಂದು ಕೆಲವರು ಹೇಳುತ್ತಾರೆ. ಆದರೆ ನಮಗಿಂದು ಆತ್ಮರುಚಿಯು ದೃಢವಾಯಿತು.'' ಎಂದು ಸಿಂಧುದೇವ ಗಂಗಾದೇವರು ಉಬ್ಬಿ ಹರಸಿದರು. ಭರತೇಶನು ಅಳಿಯಂದಿರಿಗೂ ಕುಮಾರರಿಗೂ ಮನ್ನಣೆಯಿತ್ತು ಅವರವರ ನಿಲಯಗಳಿಗೆ ಬೀಳ್ಕೊಟ್ಟನು.

ಅನಂತರ ಭರತೇಶನು ಒಳಗಿದ್ದ ತಂಗಿಯರ ಅಭಿಪ್ರಾಯವೇನೆಂದು ವಿಚಾರಿಸಿದನು.

''ಮಕ್ಕಳ ಮದುವೆಯೆಂದರೆ ಲೇಸಾದುದು. ಅದರಲ್ಲೂ ಹೆಣ್ಣು ಮಕ್ಕಳ ಮದುವೆಯೆಂದರೆ ಮತ್ತಷ್ಟೂ ಮೋಹ'' ಎಂದು ತಂಗಿಯರು ತಿಳಿಸಿದರು.

''ನಿಮ್ಮ ಪುತ್ರಿಯರನ್ನು ನಮ್ಮ ಅಣುಗರಿಗೆ ಇತ್ತ ಮೇಲೆ ನಿಮಗೆ ಉಮ್ಮಳವಾಗದಂತೆ ನಮ್ಮ ಪುತ್ರಿಯರನ್ನು ನಿಮ್ಮ ಅಣುಗರಿಗೆ ಸುಮ್ಮಾನದಿಂದಲೇ ಕೊಡುವೆನು.'' ಎಂದು ಭರತೇಶನು ಮನಸ್ಸಿನಲ್ಲಿದ್ದುದನ್ನು ನುಡಿದನು.

ತಾವು ಯಾವುದನ್ನು ಕಂಡಿರೋ ಅದೇ ಆಗಲಿ ಎಂದು ಆ ಸತಿಯರೆಲ್ಲ ನುಡಿದರು, ಇದನ್ನು ಕೇಳಿದ ದಾಸಿಯರೆಲ್ಲ ಮತ್ತೆ ಮದುವೆ, ಮದುವೆಯೆಂದು ಗಲಭೆಮಾಡಿದರು. ಭರತೇಶನು ಅಂದು ಎಲ್ಲರನ್ನೂ ಮನ್ನಿಸಿ ಬೀಳ್ಕೊಟ್ಟನು.

ಆಮೇಲೆ ವಿವಾಹದ ವೈಭವಕ್ಕಾರಂಭವಾಯಿತು. ಅವರವರ ಹೆಸರಿಗೆ ತಕ್ಕ ಶುಭಲಗ್ನದಲ್ಲಿ ವಿವಾಹಗಳು ವೈಭವದಿಂದಾದವು. ಉಂಗುರ ಉಡಿಗೆ, ಹೆಣ್ಣು ಗಂಡುಗಳ ಸಿಂಗಾರ, ಸೇಸೆ, ಪ್ರಭಾವನೆ, ಎಲ್ಲವೂ ಕ್ರಮವಾಗಿ ಸಾಗಿತು. ಅರ್ಕಕೀರ್ತಿಗೆ ಕುಂಜಾಜಿ, ಆದಿರಾಜನಿಗೆ ಗುಣಮಂಜರಿ, ವೃಷಭರಾಜನಿಗೆ ಕುಂಜರವತಿಯರು ಸತಿಯರಾದರು. ಹಂಸರಾಜನಿಗೆ ಸುಮನಾಜಿಯೂ ರತ್ನರಾಜಗೆ ಮನೋರಮೆಯೂ ಸತಿಯರಾದರು. ಕನಕಾವತಿಗೆ ಕನಕರಾಜನೂ ಮನುದೇವಿಗೆ ಕಾಂತರಾಜನೂ, ಕನಕ ಪದ್ಮಿನಿಗೆ ಶಾಂತರಾಜನೂ ಪತಿಗಳಾದರು. ಹೀಗೆ ನಮಿ ವಿನಮಿರಾಜರ ಪುತ್ರರಿಗೆ ವಿವಾಹವಾಯಿತು.

ಈ ರೀತಿಯಲ್ಲಿ ಭರತೇಶನ ಸಾವಿರ ಮಂದಿ ಪುತ್ರರರಿಗೂ ಐನೂರು ಮಂದಿ ಪುತ್ರಿಯರಿಗೂ ವೈಭವದಿಂದ ವಿವಾಹವಾಯಿತು.

## ೨೫

# ಜಿನದರ್ಶನ

ಮಂಗಲ ಕಾರ್ಯಗಳು ಮುಗಿದ ಬಳಿಕ ಭರತೇಶನು ರಾಜಲೀಲಾಂಗದಲ್ಲಿರುವಾಗ ಒಂದು ದಿನ ಬುದ್ಧಿಸಾಗರ ಮಂತ್ರಿಯು ಓಲಗಕ್ಕೆ ಬಂದು ಕಾಣಿಕೆಯಿತ್ತನು. ಭರತೇಶನು ಕಾಣಿಕೆಯಿತ್ತುದರ ಕಾರಣವೇನೆಂದು ಕೇಳಿದಾಗ ಮಂತ್ರಿಯು ಕೈಮುಗಿದು ಬಿನ್ನವಿಸಿದನು.

''ತೊಡಗಿದ ಕಾರ್ಯವನ್ನು ನಿರ್ವಹಿಸುವ, ತಡೆಯಿಲ್ಲದ ಅತಿಶಯದ ಸಂಪತ್ತಿನ ಒಡೆಯನಾದ ಸ್ವಾಮಿಯೇ, ಮೂರು ವಾರಿಧಿಯ ಮಧ್ಯದ ಹೇಮಗಿರಿಯವರೆಗೆ ತೋರುವ ಧರೆಯಲ್ಲ ತಮಗೆ ಸಾಧ್ಯವಾಯಿತು. ಆರು ಖಂಡಗಳನ್ನೂ ಗೆದ್ದು ವೃಷಭಾದ್ರಿಯಲ್ಲಿ ವೀರ ಶಾಸನದ ರೇಖೆಯನ್ನು ತೋರಿಸಿದೆ. ಹದಿನಾಲ್ಕು ರತ್ನಗಳೂ ನಿನ್ನನ್ನು ಕೂಡಿದುವು. ಸುತರಿಗೆಲ್ಲ ವಿವಾಹ ಮಾಡಿದೆ. ಇನ್ನಿಲ್ಲಿ ಮಾತಾಡುವಂತಹ ಉದ್ಯೋಗವೇನೂ ಇಲ್ಲ. ನಗರಿಗೆ ಬಿಜಯ ಮಾಡು ಸ್ವಾಮಿ. ಇತ್ತ ಬಂದು ಚಿರಕಾಲವಾಯಿತು. ಪುರಜನರು ನಿನಗಾಗಿ ಹಾರೈಸುತ್ತಿದ್ದಾರೆ. ಅವರು ಕರೆಕರೆಗೊಳ್ಳುತ್ತಿದ್ದಾರೆ. ಅವ್ವಾಜಿ ಅನುದಿನ ನೆನೆಯುತ್ತಿರುವರು. ತಮ್ಮಂದಿರೆಲ್ಲ ಆಸೆಯಿಂದಿರುವರು. ನಿನ್ನ ಎರಡೂ ಬದಿಯಲ್ಲಿರುವ ಮೈದುನರನ್ನು ಬೀಳ್ಕೊಟ್ಟು ಬಿಜಯ ಮಾಡು ಸ್ವಾಮಿ.''

ಚಕ್ರಿಯು ಮಂತ್ರಿಯ ಮಾತನ್ನು ಲೇಸೆಂದು ಒಪ್ಪಿಕೊಂಡನು. 'ನಮಿ ವಿನಮಿ ರಾಜರೊಡನೆ ಕೂಡಲೇ ಮಾತು ಮುಂದುವರಿಸಿದನು.

''ನಮಿ ವಿನಮಿ ರಾಜರೇ, ನಿಮ್ಮ ನಮ್ಮ ಜನಕರಲ್ಲಿ ಆವರಿದ ಬಂಧುತ್ವವು ಇಂದು ನಮಗೆ ಸಮನಿಸಿತು. ಇದು ಮುಂದೆ ನಮ್ಮ ಸುತರಿಗಾಗಿರುವುದು ಉತ್ತಮವೆಂದು ತಿಳಿಯಿರಿ.'' ಎಂದು ಹೇಳಿದವನೇ ತಾನು ಉಡುವಂತಹ, ತೊಡುವಂತಹ ವಸ್ತ್ರ ಭೂಷಣಗಳನ್ನು ಅವರಿಗೆ ಸಮ್ಮಾನಮಾಡಿದನು. ಆ ನೃಪರಿತ್ತುದನ್ನು ತಾನು ಕೈಕೊಂಡು ಅವರನ್ನು ಅಪ್ಪಿಕೊಂಡನು. ಚಕ್ರಿಯು ನಿಜವಾಗಿಯೂ ಅತಿಶಯ ಸುರಸನು. ಅನಂತರ ಅಳಿಯಂದಿರಿಗೂ ಹಯಗಜ ಭೂಷಣಗಳನ್ನೂ ದೇಶಪುರಗಳನ್ನೂ ಕೊಟ್ಟನು. ಅವರು ಕೂಡ ತಮ್ಮ ಅಳಿಯಂದಿರಿಗೆ ಅನರ್ಘ್ಯ ವಸ್ತುಗಳನ್ನು ಕೊಟ್ಟರು.

ಸುಮತಿಸಾಗರ ಮುಂತಾದ ಮಂತ್ರಿಗಳಿಗೂ ಸೇನೆಯವರಿಗೂ ಭರತೇಶನು ಉಡುಗೊರೆಯಿತ್ತನು. ಹೆಣ್ಣು ಕೊಟ್ಟ ಖಚರರಿಗೆ ಸಾಕುಸಾಕೆನುವಷ್ಟು ಮನ್ನಣೆ ಮಾಡಿದನು. ಆಮೇಲೆ ಅರಮನೆಗೆ ಎದ್ದನು. ಅತ್ತೆಯರಿಗೆ ತಂಗಿಯರಿಗೆ, ಕೆಲಸದ ಹೆಣ್ಣುಗಳಿಗೆ, ಸಿರಿತುಂಬುವಂತೆ ಉಡುಗೊರೆಮಾಡಿದನು. ಹೆಣ್ಣು ಮಕ್ಕಳನ್ನು, ಅವರ ಪೆಟ್ಟಿಗೆ ಹೊತ್ತ ದಾಸಿಯರೊಂದಿಗೆ ಬಣ್ಣಿಸಿ ಬೀಳ್ಕೊಡುವಾಗ ಭರತೇಶನ ಎದೆ

ಹಣ್ಣಾಯಿತು. ಮರುಕವೆನ್ನುವುದು ಸಾಮಾನ್ಯವಲ್ಲ. ಆ ಕುವರಿಯರ ಒತ್ತಿನಲ್ಲೇ ಕಂಬನಿ ತುಂಬಿದ ಕುಲಸತಿಯರನ್ನು ನೋಡಿ ಮರುಕದಿಂದ ಸಂತೈಸಿದನು. ಬಾಗಿ ಕಂಬನಿ ತುಂಬಿರುವ ಸುತೆಯರನ್ನು ಕಂಡ ಚಕ್ರಿಯು, ''ಹೀಗಾಗಬಾರದಕ್ಕ ; ನೀವೊಮ್ಮೆ ಹೋಗಿರಿ; ಬೇಗನೆ ಕರೆಯಿಸಿಕೊಳ್ಳುವೆನು'' ಎಂದು ಹೇಳಿ ಅವರನ್ನು ಅನುರಾಗದಿಂದ ಬೀಳ್ಕೊಟ್ಟನು. ಅವರೂ ತಮ್ಮ ಪುತ್ರಿಯರನ್ನು ಸಂತೈಸಿ ವಸ್ತುಗಳನ್ನು ಕೊಟ್ಟು, ಬೇಗನೇ ಬೀಳ್ಕೊಟ್ಟರು. ಹೆಣ್ಣು ಮಕ್ಕಳು ಅನ್ಯೋನ್ಯ ವಿನಯದಿಂದ ಬೀಳ್ಕೊಂಡರು. ಸರ್ವರಿಗೂ ಉಮ್ಮಳವಾಯಿತು.

ಮಂಗಲಮುಖಿ ಮಧುವಾಣಿ ವಿಮಾನ ರತ್ನಗಳನ್ನು ಬಳುವಳಿಗೊಟ್ಟು ಹಿಂತಿರುಗುವಾಗ ಅಣ್ಣ, ತಂಗಿ, ತಾಯಿ ಎಂದೆಲ್ಲರೂ ದುಃಖಗೊಂಡರು. ಮಮಕಾರವಿದ್ದಲ್ಲಿ ದುಃಖವುಂಟೆಂದು ಆ ಸಮಯದಲ್ಲಿ ಪ್ರತ್ಯಕ್ಷವಾಯಿತು.

ನಮಿ ವಿನಮಿರಾಜರು ಪರಿಸ್ಪಂಧದಿಂದ ತಮ್ಮ ಊರಿಗೆ ತೆರಳಿದರು.

''ಬಾ ಸಿಂಧುದೇವ, ಗಂಗಾದೇವ ಬಾ, ನೀವು ನಮ್ಮ ಲೇಸಿಗೆ ಬಂದುದು ಚೆನ್ನಾಯಿತು. ಈ ಸರಸವನ್ನು ಬಿಡಬೇಡಿ.'' ಎಂದವರನ್ನು ತಕ್ಕೈಸಿ ಹೊಳೆಯುವ ಉಡುಗೊರೆಗಳನ್ನು ಕೊಟ್ಟನು.

''ಗಂಗಮ್ಮ ಭಾ, ಸಿಂಧುದೇವಿ ಬಾ, ನಿಮ್ಮಿಂದ ಮದುವೆ ಸೊಬಗಾಯಿತು. ನಾವಿನ್ನು ಪಯಣ ಮುಂದುವರಿಸುವೆವು. ನೀವು ಹೋಗಿ ಬನ್ನಿ.'' ಎಂದು ಇಂಗಿತದ ಉಡುಗೊರೆಗಳನ್ನು ಕೊಟ್ಟನು. ಸುರಶಿಲ್ಪಿಯ ತಮ್ಮನನ್ನು ಕರೆದು, ತನ್ನ ತಂಗಿಯರಿಗೆ ಎರಡೆರಡು ಉಪ್ಪರಿಗೆಗಳನ್ನು ವಿರಚಿಸಿ, ರತ್ನ ಚಿನ್ನದಲ್ಲಿ ಉಯ್ಯಾಲೆಯನ್ನು ನಿರ್ಮಿಸೆಂದು ಹೇಳಿ ಬೀಳ್ಕೊಟ್ಟನು. ಕುಮಾರರ ಮದುವೆಯಲ್ಲಿ ಬಾಗಿಲು ತಡೆದಾಗ ಆ ಕುವರರಿಗೆ ಭೂತಳವನ್ನು ಕೊಟ್ಟನು.

ಕೊನೆಯಲ್ಲಿ ಚಕ್ರೇಶ ಕಾಂತೆಯರೊಂದಿಗೆ ಅಣ್ಣನಿಗೆ ಮಂಗಲಾಕ್ಷತೆ ಹಾಕಿ ಸಿಂಧುದೇವಿ ಗಂಗಾದೇವಿಯರು ಹೋದರು.

ಆಮೇಲೆ ಮೇಘೇಶ್ವರ, ವಿಶ್ವಕರ್ಮರನ್ನು ನೋಡಿ, ದಾರಿಮಾಡಿ ಬನ್ನಿಯೆಂದು ಹೇಳಿದೊಡನೆ ಅವರು ಹೋಗಿ ದಾರಿ ಮಾಡಿ ಬಂದರು. ಅಗಳು ಹೂಳಿತು; ಸೇತುಗಟ್ಟಿ ಮೊದಲಿನಂತೆ ಆಚೆಯ ಬಾಗಿಲು ತೆರೆಯಿತು. ಅವರ ಈ ಕೆಲಸವನ್ನು ಕಂಡು ಭರತೇಶನು ಅವರನ್ನು ನಗುತ್ತ ಮನ್ನಿಸಿದನು. ಮಾಕಾಳನಿಂದ ಪತ್ರಿಕೆ ಬರೆಯಿಸಿ, ಮಾತೆಯರಿಗೆ ಉಡುಗೊರೆ ಕಟ್ಟಿಸಿದನು. ನಂಬುಗೆವಂತರಿಬ್ಬರನ್ನು ಕರೆದು ಅವರನ್ನು ಅಯೋಧ್ಯಾಪುರಿಗೂ ಪೌದನ ಪುರಿಗೂ ಮುಂದಾಗಿ ಓಲೆಗಳನ್ನು ಕಳುಹಿಸಿದನು.

ಈ ರೀತಿಯಲ್ಲಿ ಜೋಲಿಯ ದಿನಗಳು ತೀರಿದವು.

ಮರುದಿನ ವೀರಕಟಕದ ಲಗ್ಗೆಯಲ್ಲಿ ಈರಾರು ಭೇರಿಗಳು ಭೋರೆಂದು ಸೂಳೈಸಿದುವು. ಭರತೇಶನು ಉಬ್ಬಿನಲ್ಲಿದ್ದನು. ಕೂಡಲೆ ಕಡಲ ತೆರೆಯಂತೆ ವಾದ್ಯಘೋಷದೊಡನೆ ಸೇನೆಯು ಚಲಿಸತೊಡಗಿತು. ಈ ಮಹಾಸೇನೆಯಲ್ಲಿ ಆನೆ ಕುದುರೆ ತೇರುಗಳ ಚಲನೆಗೆ ಭೂಮಿ ಸಾಲದೆಂದು ಖೇಚರರ ಮತ್ತು ವ್ಯಂತರರ ಸೇನೆಗಳು

ಆಕಾಶಮಾರ್ಗವೊಂದನ್ನು ಗೊತ್ತುಮಾಡಿದರು. ಎಲ್ಲರಿಗೂ ಚತುರಂಗ ಸೇನೆಯಾದರೆ ಭರತೇಶನಿಗೆ ವ್ಯಂತರ ಸೇನೆಯೂ ಖಗ ಸೇನೆಯೂ ಕೂಡಿ ಷಡಂಗಸೇನೆಯಾಗಿತ್ತು. ಆರು ಖಂಡವನ್ನು ಸ್ವಾಧೀನಮಾಡಿಕೊಂಡವನಿಗೆ ಆ ರಂಗದಸೇನೆಯು ಓಲೆಸುತ್ತಿರುವ ಮೂರು ಲೋಕಗಳನ್ನು ದಾಟಿ, ಕೀರ್ತಿಯ ಬಲ್ಗಾರಿಕೆಯಲ್ಲಿ ಬರುತಿದ್ದನು.

ಅಂದು ಅಯೋಧ್ಯೆಯಿಂದ ಹೊರಡುವಾಗ ತನಗೊಂದು ಕಂದನಿಗೊಂದೊಂದು ಎರಡು ಫೌಜುಗಳಿದ್ದುವು. ಇಂದು ಊರಿಗೆ ಮುಖಮಾಡುವಾಗ ಫೌಜುಗಳು ಮೂರಾದುವು. ಕಲ್ಯಾಣವಾದ ಸಾವಿರ ಸುತರಿಗೊಂದು ಸೇನೆ. ಅದರಲ್ಲಿ ವ್ಯಂತರ ಖಗಬಲವನ್ನು ಸೇರಿಸಿದನು. ಅದು ಅರ್ಕರಾಜನ ಫೌಜೆಂದು ಮುಂದುವರಿಯುತಿತ್ತು. ತೊಟ್ಟಿಲಲ್ಲಿರುವ ಕಿರಿಯ ಕಂದನ ಸೇನೆಯೊಂದು ಅದರ ಹಿಂದೆ ಸಾಗಿತ್ತು. ನಡೆಯುವಾಗ ಅತ್ತೆಸೊಸೆಯರೊಂದಾಗಿದ್ದರೆ ಬೀಡು ಬಿಡುವಾಗ ಅವರೆಲ್ಲರೂ ತಮ್ಮ ಪುರುಷ ರೊಂದಿಗಿರುತ್ತಿದ್ದರು. ಈ ರೀತಿಯಲ್ಲಿ ಸೇನೆಯು ಸಾಗುತ್ತ ಗುಹೆಯ ಬಳಿಗೆ ಬಂದಿತು.

ಸೊಸೆಯರು ಗುಹೆಯೊಳಗಿಂದ ಬರುವುದು ಬೇಡವೆಂದೂ ಅವರು ತಮ್ಮ ವಲ್ಲಭರೊಂದಿಗೆ ಗಿರಿಯ ಮೇಲಿಂದ ಬರಲೆಂದೂ ತಿಳಿಸಿದನು. ಈ ಮಾತನ್ನು ಮಂತ್ರಿಯು ಚದುರೆಂದನು, ಮಾಗಧನು ಮೆಚ್ಚಿದನು. ಅವರಿಬ್ಬರು ಅರಸನೆಂದಂತೆ ಅವರನ್ನು ವಿಮಾನದ ಮೂಲಕ ಸಾಗಿಸಿದರು. ತಾನು ವಿಮಾನ ಮೂಲಕ ಸಾಗಬಹುದಾಗಿದ್ದರೂ ಭೂನಾಥನು ತೇರಾನೆ ಕುದುರೆಗಳ ಸೇನೆಗೆ ರಕ್ಷಕನಾಗಿ ಗುಹೆಯೊಳಗಿಂದಲೇ ಸಾಗಿದನು. ಇನ್ನೊರ್ವರು ಕುವರರನ್ನು ಅವರ ಸುಖರೊಡನೆ ಹೋಗುವಂತೆ ಮಾಡಿದನು. ತಾನು ಯುವತಿಯರಿಗೆಲ್ಲ ನಲ್ಮೆಯನ್ನು ತೋರುತ್ತ ಗುಹಾಭವನದಲ್ಲಿ ಮುಂದುವರಿದನು. ಚಂಡತಮಿಸ್ರ ಗುಹೆಯೊಳಗೆ ಅಂದು ಹೋದಂತೆಯೇ ಭರತೇಶನು ತನ್ನ ದಂಡನ್ನು ಸಾಗಿಸಿಕೊಂಡು ಬಂದನು. ಗುಹೆಯ ದ್ವಾರದಲ್ಲಿ ತೂಗುವ ತೋರಣವನ್ನು ದಳಪತಿಯೊಡಗೂಡಿ ಕಟ್ಟಿಸಿದನು. ನಾಟ್ಯಮಾಲನು ಅಲ್ಲಿಯೇ ಬಾಗಿಲು ಕಾದಿದ್ದನೆಂದು ಅವನನ್ನು ಕರೆಸಿ ಮನ್ನಿಸಿದನು. ತಂದೆ ಹಲವು ಪಯಣಗಳಲ್ಲಿ ಬಂದಿದ್ದರೆ ನಂದನರು ಒಂದೇ ದಿನದಲ್ಲಿ ಬಂದಿದ್ದರು. ಅವರೆಲ್ಲರೂ ಬಂದು ಭರತೇಶನಿಗೆರಗಿದಾಗ ಅವರನ್ನೆಲ್ಲ ರಾಗಿಸಿದನು. ಗಿರಿಯ ಒತ್ತಿನಲ್ಲೇ ಗಂಗೆಯ ತಡಿಯಲ್ಲಿನ ಆ ಸುಂದರವಾದ ಎಡೆಯಲ್ಲಿ ಬೀಡುಬಿಟ್ಟನು.

ಅಲ್ಲಿಂದ ಪಡೆಯೆತ್ತಿ ನಡೆದ ರಾಜಮಾರ್ತಾಂಡನಾದ ಭರತೇಶನು ವಿಜಯಾರ್ಧ ಗಿರಿಯನ್ನು ದಾಟುತ್ತ ಮುಂದುವರಿದನು. ತಮ್ಮ ನಾಡಿಗೆ ಬಂದೆವೆಂದು ರಾಜಕಟಕದವರೆಲ್ಲ ಹಾಡುತ್ತ ನಗುತ್ತ ನಲ್ಮೆದೋರುತ್ತ ಆಡುತ್ತ ಮುಂದೆ ಸಾಗಿದರು. ಬೆಂಕಿಯ ಗುಹೆಯಿಂದ ಹೊರಬಂದ ಅವರು ತಮ್ಮ ನಾಡನ್ನು ಕಂಡು ''ತೆಂಕನಾಡೆ, ತಂಬೆಲರೆ, ಸುಖ ಸೋಂಕೆ ಹಾ ಹಾ.'' ಎಂದು ಕೊಂಡರು.

''ಕಾರ್ಯಾರ್ಥಕ್ಕೆ ಪರದೇಶಕ್ಕೆ ಹೋದೆವಷ್ಟೆ. ಈ ಚಾತುರ್ಯಕ್ಕೆ ನೀನಲ್ಲದೆ ಬೇರಾರುಂಟು? ಆರ್ಯಖಂಡವೆ, ಅಮೃತಖಂಡವೆ, ಮಹೈಶ್ವರ್ಯವೆ, ಇಷ್ಟು ಕಾಲ

ದಂಡಿನಲ್ಲಾದೆವು. ಇನ್ನು ನಮ್ಮ ನಮ್ಮ ಮನೆಗಳನ್ನು ಸೇರುವೆವು'' ಎಂದು ಅವರೆಲ್ಲ ತಮ್ಮೊಳಗಾಡುತ್ತಾ ನಗುತ್ತ ಸಾಗಿದರು. ಇಳಿಜಾರಿನಲ್ಲಿ ಸುಳಿದಾಡಿ ವೇಗದಿಂದ ಹರಿವಹೊನಲಿನಂತೆ ರಾಜಕಟಕ ಮುಂದುವರಿದುದು ಆಶ್ಚರ್ಯವಲ್ಲ, ಊರಿಗೆ ಪಯಣವೆಂದರೆ ಯಾರಿಗಾಗುವುದಿಲ್ಲ, ಅಧಿಕ ಸಂತೋಷ? ಅಂದು ದಳಪತಿಯು ಹೇಳಿದಲ್ಲೇ ಬೀಡುಬಿಡುತ್ತಿದ್ದರು. ಇಂದಾದರೆ ಹಾಗಲ್ಲ, ಒಂದಿಷ್ಟು ನಡೆದರೇನೆಂದು ಭಟರೇ ಕೇಳುತ್ತಿದ್ದರು.

ಹೀಗೆ ಪಯಣವು ದಕ್ಷಿಣ ದಿಕ್ಕಿಗಾಗಿ ಸಾಗಿಬರುತ್ತಿರುವಾಗ, ರಾಜೇಂದ್ರನು ತನ್ನ ಎಡದಿಕ್ಕಿನಲ್ಲಿರುವ ಕಡುಬಿಳುಪಾದ ಕೈಲಾಸಗಿರಿಯನ್ನು ದೂರದಿಂದಲೇ ಕಂಡು, ಅಲ್ಲಿಯೇ ಪಾಳೆಯಬಿಡಬೇಕೆಂದನು. ದಳಪತಿಯು ಅಲ್ಲೇ ಬೀಡು ಬಿಡಿಸಿದನು. ಭರತಚಕ್ರಿಯು ಮಡದಿಯರನ್ನು ಬೀಡಿನಲ್ಲಿ ಸಂತವಿಟ್ಟು ಕೈಲಾಸಗಿರಿಗೆ ಹೊರಟನು. ಅವನೊಡನೆ ಅವನ ಸಾವಿರದ ಇನ್ನೂರು ಗಣಬದ್ಧರೂ, ಅಣುಗರೂ, ದೇವತೆಗಳೆಲ್ಲರೂ ಕೂಡಿಕೊಂಡರು. ಅವರೆಲ್ಲ ದೇವತೆಗಳಂತೆ ವಿಮಾನಗಳಲ್ಲಿ ಗಗನಮಾರ್ಗಾವಲಂಬಿಗಳಾದರು. ವಾಯು ವೇಗದಿಂದವರು ಕೈಲಾಸಗಿರಿಯನ್ನು ಹತ್ತಿ ಸಮವಸರಣವನ್ನು ಸೇರಿದರು.

ಭರತಚಕ್ರಿಯು ವಿಮಾನಗಳನ್ನೆಲ್ಲಾ ಹೊರಗೆ ಇಂಬಾದ ಸ್ಥಳದಲ್ಲಿರಿಸಿ, ಮಕ್ಕಳೊಡಗೂಡಿ ಕೋಟೆಯನ್ನು ಸೇರಿದನು. ಅಲ್ಲಿನ ದ್ವಾರಪಾಲಕರೊಡನೆ ನಾವಿಲ್ಲಿ ಹೋಗಬಹುದೇ? ಎಂದು ಭರತೇಶನು ಕೇಳಿದನು. ಅವರಾಗ, ''ಹೋಗಬಹುದು; ಬರಬಹುದು'' ಎಂದು ಹೇಳಿ ತಲೆಬಾಗಿ ನಮಸ್ಕರಿಸಿದನು.

''ನಡುನಾಡು, ಮೇಲ್ನಾಡು, ಕೆಳನಾಡೆಂಬ ಮೂರು ಪೊಡವಿಗಳ ಒಡೆಯನ ಹಿರಿಯ ಮಗನಿಗೆ ತಡೆಯುಂಟೆ? ನಾಳೆಯ ಮೋಕ್ಷದ ಒಡೆಯ ನೀನಲ್ಲವೆ.''

ಎಂದವರು ಹೇಳಿದಾಗ ಭರತೇಶನು ಒಳಹೊಕ್ಕು ಮಾನಸ್ತಂಭದ ಒತ್ತಿನ ಕನಕ ಕುಂಡದಲ್ಲಿ ಕಾಲತೊಳೆದು, ಮಡಿಯುಟ್ಟುಕೊಂಡು ಜಿನನ ಸಭೆಗಾಗಿ ಮುಂದೆ ನಡೆದನು; ತನ್ನ ತಂದೆಯೆಡೆಗೆ ಅತಿಭಕ್ತಿಯಿಂದ ಸಾಗುತ್ತಿರುವ ತಂದೆಯನ್ನು ನೋಡಿ ಇದು ತಮಗೆ ಕಲಿಸುವ ಓಜೆಯೆಂದು ಮಕ್ಕಳು ತಮ್ಮಲ್ಲೆ ನೆನೆದುಕೊಂಡರು. ಮುಂದೆ ಎರಡು ಹೊನ್ನಿನ ಕೋಟೆಗಳು; ಅನಂತರ ಮಾಣಿಕ್ಯದ ಒಂದು ಕೋಟೆ; ಅದರಿಂದತ್ತ ಮೂರು ಬಂಗಾರದ ಕೋಟೆಗಳು. ಭರತೇಶನು ಮುಂದಿನ ಆಕಾಶಕ್ಕೇರಿದ ಎರಡು ಸ್ಫಟಿಕ ಕೋಟೆಗಳ ಅಂದವನ್ನು ನೋಡುತ್ತ ಮುಂದೆಸಾಗಿದನು. ಎಂಟು ದ್ವಾರಗಳಲ್ಲೂ ದ್ವಾರಪಾಲಕ ರಿರುವರು. ಒಂಭತ್ತನೆಯ ದ್ವಾರದಲ್ಲಿ ಅವರಿಲ್ಲ, ಭರತೇಶನು ತನ್ನ ಕುಮಾರರೊಂದಿಗೆ ದ್ವಾರಪಾಲಕರ ಸಾರಾನುಮತದಂತೆ ಬರುತಿದ್ದನು.

''ನಾಗೇಂದ್ರ, ನಿಲ್ಲು ; ದೇವೇಂದ್ರ, ವಂದಿಸು; ದಿಕ್ಪಾಲಕರೆಲ್ಲಾ ಕೆಲಕ್ಕಾಗಿ; ಯೋಗಿಗಳೆಲ್ಲಾ ಕುಳಿತಿರಿ''—ಎಂದು ವೇತ್ರಧಾರಿಗಳು ಹೇಳುತ್ತಿದ್ದರು. ''ಗರುಡರು ಇಲ್ಲಿರಿ; ಯಕ್ಷರು ಇಲ್ಲಿರಿ; ಸಿದ್ಧರು ಇಲ್ಲಿರಿ; ಇಲ್ಲಿ ಗಂಧರ್ವರು ಇರಿ. ನರರು ಅತ್ತ, ಸುರರು ಇತ್ತ. ''—ಎಂದು ಕಟ್ಟಿಗೆಕಾರರು ಹೇಳುತಿದ್ದರು. ಅಲ್ಲಿಯೆ ರಂಭೆ, ಊರ್ವಶಿ, ತಿಲೋತ್ತಮೆ,

ಮೇನಕೆಯರ ನೃತ್ಯಗಳು ಲೇಸೆಂಬ ಮಾತುಗಳನ್ನೆಲ್ಲ ಭರತೇಶನು ಕೇಳುತಿದ್ದನು. ಅಲ್ಲಿ ಎತ್ತಿದ ಮುತ್ತಿನ ಸತ್ತಿಗೆಗಳು ಮೂರು ಮೆರೆಯುತ್ತಿದ್ದವು. ಅರವತ್ತು ನಾಲ್ಕು ಇಕ್ಕುವ ಚಾಮರ ಗಳಿದ್ದುವು. ಹತ್ತಿರದಲ್ಲೆ ಅಶೋಕೆಯ ತರುವಿರುವ ಜಿನನ ಸಂಪತ್ತನ್ನು ನೋಡುತ್ತ ಭರತೇಶನು ಬರುತ್ತಿದ್ದನು.

ಅಲ್ಲಿ ಹೂಮಳೆ ಸುರಿಯುತ್ತಿತ್ತು; ಉರಿವ ಪ್ರಭಾಮಂಡಲದ ಕಾಂತಿ ಹೊಳೆಯುತಿತ್ತು, ದೇವಕಹಳೆಗಳು ಮೊರೆಯುತಿದ್ದವು. ಸಿಂಹಪೀಠದ ತಾವರೆಯನ್ನು ಸೋಂಕದೆ ಇರುವ ತನ್ನ ತಂದೆಯ ಅಚ್ಚರಿಗೆ ಹಿಗ್ಗುತ್ತ ಬರುತಿದ್ದನು. ಸಾವಿರ ಎಸಳುಗಳ ಹೊನ್ನತಾವರೆಯ ಮೇಲೆ ಸಿದ್ಧಾಸನದಲ್ಲಿ ಎರಡು ಕೋಟಿ ವಾಸರ ಮಣಿಯ ಪ್ರಭೆಯಲ್ಲಿ ಶೋಭಿಸುವ ತನ್ನ ತಂದೆಯ ಲೇಸಿಗಾಗಿ ಪ್ರೀತಿಪಡುತ್ತ ಬರುತ್ತಿದ್ದನು. ಪರಮನ ಸಭೆಯ ಸುರರೂ ಸಿದ್ಧರೂ ಯಕ್ಷರೂ ಕಿಂಪುರುಷರೂ ಭರತೇಶನು ಬರುವುದನ್ನು ಕಾಣುತ್ತ ಆಶ್ಚರ್ಯಪಟ್ಟರು.

ಬರುತ್ತಿರುವ ಈ ಅಧಿಕ ಲಾವಣ್ಯನು ಯಾರು? ಚೆಲುವಿನ ಕುಮಾರರೊಂದಿಗೆ ಬರುತ್ತಿರುವವನು. ತಾರಾದ್ರಿಯಲ್ಲಿ ಇಂತಹ ರೂಪವನ್ನು ನಾವೆಂದಿಗೂ ಕಂಡುದಿಲ್ಲ, ಮೂರು ಲೋಕಗಳಲ್ಲಿರುವ ಸೊಬಗನ್ನೆಲ್ಲ ತಾನೇ ಸೂರೆಗೊಂಡಿರುವವನು. ಅದನ್ನು ಆದಿಜಿನನಿಗೆ ತೋರಲೆಂದು ಬರುತ್ತಿರುವನು.

ಎಂದವರು ಪ್ರೀತಿಯಿಂದ ಕಣ್ಣೂರಿ ನೋಡಿದರು. ಹತ್ತಿರಬರಲು—''ಇವನು ಭರತೇಶನಷ್ಟೆ. ದೇವೋತ್ತಮನ ಮಗನಷ್ಟೆ. ಮತ್ತಾರಿಗೆ ಈ ಸಿರಿ ಸಲ್ಲುವುದು?'' ಎಂದು ಚಿತ್ತದಲ್ಲೇ ನಲಿದು ನೋಡಿದರು. ಈ ರೀತಿಯಲ್ಲಿ ಭರತೇಶನು ಹರುಷದಿಂದ ಒಳಗೆ ಹೋಗುತ್ತಿರುವಾಗ ಸುರವೇತ್ರಧರರು ಪುರುನಾಥನಿಗೆ ಭರತೇಶನು ಬಂದನೆಂದು ಹೇಳಿದರು.

ಭರತೇಶನು ಒಳಗೆ ಹೋಗಿ, ಅಂಬರಾಂಗಣದ ಪದ್ಮದಲ್ಲಿ ವಾಸವಾಗಿರುವ ಪುರುನಾಥನ ಅಡಿಗಳಲ್ಲಿ ರತ್ನಾಂಜಲಿಯನ್ನು ಸುರಿದು ತೋಳುಗಳನ್ನು ನೀಡಿ ಸಾಷ್ಟಾಂಗವೆರಗಿದನು. ಆಗ ಆವನ ಸರ್ವಾಂಗದಲ್ಲೂ ಪುಳಕವುಂಟಾಯಿತು. ಅನಂತರ ಕುಮಾರರು ಕಾಂಚನ ಕುಸುಮಾಂಜಲಿಯನ್ನು ಮಾಡಿ ಸಾಷ್ಟಾಂಗವೆರಗಿದರು. ಹಲವು ಬೊಂಬೆಗಳನ್ನು ಒಂದು ಸೂತ್ರದಲ್ಲಿ ಒಡ್ಡಿ ಆಡಿಸುವಂತೆ ತಂದೆ ಮಕ್ಕಳು ಕಂಡರು. ಭರತೇಶನು ಮೂರು ಸಲ ಸಾಷ್ಟಾಂಗವೆರಗಿ ಕೈಮುಗಿದು ಸ್ತೋತ್ರಮಾಡಿದನು. ಆ ಸುಪುತ್ರರೂ ಅವನನ್ನೇ ಅನುಸರಿಸಿದರು. ಆಗ ಭರತಚಕ್ರಿಯ ಕರತಳಗಳು ಕಂಪಿಸುತಿದ್ದವು. ಕಣ್ಣುಗಳಿಂದ ಆನಂದಾಶ್ರು ಸುರಿಯುತಿತ್ತು. ನಗೆಮೊಗದಿಂದವನು ತನ್ನ ಸದ್ಗುರುವನ್ನು ಕೀರ್ತಿಸಿದನು.

''ಸುತ್ರಾಮ, ಶತಮುಕುಟಾನರ್ಘ್ಯ, ರತ್ನಾಂಶು, ಚಿಸ್ರಿತ ಚರಣಾಬ್ಜ, ಸುಜ್ಞಾನದರ್ಶನ ಸುಖಶಕ್ತಿ ಕಾಂತಿ ಮನೋಜ್ಞ. ಪ್ರಾಜ್ಞಜಿನಾರ್ಚಿತ. ಜಯಜಯ ಸ್ವಾಮಿ ಸರ್ವಜ್ಞ ಸದಾಶಿವ.

ಸರ್ವರಿಗೂ ಬಾರದ ಮಾತುಗಳಿಂದ ಭರತೇಶನು ತನ್ನ ತಂದೆಯಾದ ಶ್ರೀಮಂದರ ಸ್ವಾಮಿಯನ್ನು ವಂದಿಸಿ ಕೀರ್ತಿಸಿ ಸುಖಿಯಾದನು. ಅವನು ದೇವತೆಗಳು ಮಾಡಿದ ಜಲದಲ್ಲಿ

ಸುತರೊಂದಿಗೆ ಮಿಂದು, ಸಿಂಗರಿಸಿಕೊಂಡನು. ಚಿಂತಾಮಣಿಯಿತ್ತ ವಸ್ತುಗಳಿಂದ ಪುರುದೇವನ ಪೂಜೆ ಮಾಡಿದನು. ತೀರ್ಥ, ಅಕ್ಷತೆ, ಪುಷ್ಪ, ಚರು, ದೀಪ, ಧೂಪ, ಫಲ, ಅರ್ಘ್ಯ ಪ್ರಾರ್ಥನೆಗಳಿಂದ ತೀರ್ಥನಾಥನನ್ನು ಪೂಜಿಸಿದನು. ಸಭೆಯು ಜಯ ಜಯವೆಂದು ಘೋಷಿಸಿತು. ನೋಡಿದ ದೇವತೆಗಳೆಲ್ಲ ತಲೆದೂಗುವಂತೆ ಭರತಚಕ್ರಿಯು ಅಷ್ಟ ವಿಧಾರ್ಚನೆಗೈದನು. ಆ ಮೇಲೆ ಮುನಿಗಳಿಗೆರಗಿ, ದೇವೇಂದ್ರ ಮೊದಲಾದವರೊಡನೆ ಮಾತನಾಡಿ, ಹನ್ನೊಂದನೆಯ ಕೋಷ್ಠದಲ್ಲಿ ಕುಳಿತನು. ಪರಮನ ಸಭೆಗೆ ಹೊಸ ಸಿರಿ ಬಂದಂತಾಯಿತು.

ಭರತೇಶನು ತನ್ನ ಗುರುಗಳನ್ನು ನೋಡುತಿದ್ದನು.

# ೨೬

# ತೀರ್ಥಾಗಮ

ಮಂಗಲಮಹಿಮನಾದ ಜಿನೇಶನ ತಳತಳಿಸುವ ಪಾವನಾಂಗದಲ್ಲಿ ಭರತೇಶನು ತನ್ನ ಕಣ್ಣುಗಳನ್ನು ಸುಳಿದಾಡಿಸಿ, ಚಿತ್ತಕ್ಕೆ ಆನಂದ ತರಂಗವನ್ನುಂಟು ಮಾಡಿಕೊಂಡನು. ಕುಮಾರರಾದರೋ ನೋಡುತ್ತ, ನಗುತ್ತ ತಲೆದೂಗುತ್ತ ಕೈಮುಗಿದು, ಉಬ್ಬುತಿದ್ದರು. ಮೂರು ಲೋಕಗಳಲ್ಲೂ ಅದ್ಭುತವಾಗಿರುವ ಅಜ್ಜನ ಉಜ್ವಲಕ್ಕೆ ಅವರು ಅವಯವ ತುಂಬಿ ಪುಳಕಗೊಂಡರು.

ಆಗ ಅರ್ಕಕೀರ್ತಿಯು ಪುರುರಾಜ, ಮಾಣಿಕ್ಯರಾಜ, ವೃಷಭರಾಜ, ಗುರುರಾಜ, ಆದಿರಾಜರನ್ನು ಕರೆದು, ಸ್ವಾಮಿಯ ಹೆಸರನ್ನು ಪಡೆದ ಅವರಿಗೆ ಸರಿಸಮಾನರಿಲ್ಲವೆಂದು ಪ್ರೀತಿಯಿಂದ ಹೇಳಿದನು. ಆಗ ಅಲ್ಲಿದ್ದ ಕೋವಿದರು, ವಿಮಲನಾಮಗಳೆಲ್ಲವೂ ದೇವರನಾಮಗಳಾಗಿವೆಯೆಂದು ಅರ್ಕಕೀರ್ತಿಗೆ ತಿಳಿಸಿದರು.

ಭರತೇಶನಾಗ ಈ ಮೂವರನ್ನು ನೋಡಿ, ಹಣೆಗೆ ಕೈಯನ್ನು ತಾಗಿಸಿ, ಗಲಭೆ ಸಾಕೆಂದು ಸೂಚಿಸಿದನು. ಅನಂತರ ಅವನು ತನ್ನ ಮೆಲ್ಲೆದೆಯಲ್ಲಿ ಒಂದನ್ನು ನೆನೆದನು. ಆಗ ಜಿನೇಶನಲ್ಲಿ ದಿವ್ಯನಾದ ಹೊರಹೊಮ್ಮಿತು, ಆ ದಿವ್ಯನಾದವು ನವೀನವಾದ ಸುಧಾಸಾಗರವು ಉದ್ಘೋಷಿಸಿದಂತೆ ಗಂಭೀರ ಮೃದುಮಧುರತೆಗಳಿಂದ ಕೂಡಿ ಕಿವಿಗಳಿಗೂ ಚಿತ್ತಕ್ಕೂ ಇಂಪಾಗಿತ್ತು. ಅದರಲ್ಲಿ ಹದಿನೆಂಟು ಶ್ರೀ ಮಹಾಭಾಷೆಗಳೂ ಏಳನೂರು ಸಾಮಾನ್ಯ ಭಾಷೆಗಳೂ ಇದ್ದುವು, ಆ ಮಹಾದೇವನ ಮುಖಪದ್ಮದಲ್ಲಿ ದಿವ್ಯ ನಾಮಸ್ಫುರವು ವಿರಾಜಿಸಿತು.

ಆಕಾಶದ ರೀತಿಯನ್ನು ಹೇಳಿ, ಅಲ್ಲಿರುವ ಮೂರು ಗಾಳಿಗಳನ್ನೂ ಆ ಗಾಳಿಗಳಲ್ಲಿ ಅಡಗಿರುವ ಮೂರು ಲೋಕಗಳನ್ನೂ ಆ ದಿವ್ಯಧ್ವನಿಯು ಹೇಳಿತು; ಮತ್ತೆ ಆ ಜಗತ್ತಿನಲ್ಲಿರುವ ವಸ್ತುಗಳನ್ನು ಭರತೇಶನಿಗೆ ವಿವರಿಸಿತು. ಪಂಚಾಸ್ತಿಕಾಯ, ಷಡ್ದ್ರವ್ಯ ಸಪ್ತತತ್ವ, ನವಪದಾರ್ಥಗಳನ್ನು ಹಂಚಿದಂತೆ ಸೂಚಿಸಿದಾಗ ಭರತೇಶನು ರೋಮಾಂಚನಗೊಂಡು ಕೇಳುತ್ತಿದ್ದನು. ವ್ಯವಹಾರದ ನಿಶ್ಚಿತಮಾರ್ಗಗಳನ್ನೂ ಅವುಗಳ ಭೇದಾಭೇದಗಳನ್ನೂ ವಿಶುದ್ಧ ಭಕ್ತಿಗಳನ್ನೂ ಆ ಶಿವನಾದವು ಸೂಚಿಸುತ್ತಿರುವುದನ್ನವನು ಕೇಳಿ ಮೋಕ್ಷವನ್ನಾಳಿದಂತೆ, ಎದೆಯಲ್ಲಿ ಉಬ್ಬಿದನು. ಹಂಸತತ್ವವನ್ನೂ ಹಂಸತತ್ವದ ಸಾಮರ್ಥ್ಯವನ್ನೂ ಹಂಸನಂತೆ ಜಿನಸಿದ್ಧನಿರುವುದನ್ನೂ ಸಂಸಿದ್ಧಿನಾಯಕನಾದಆದಿಜಿನೇಶನು ಸೂಚಿಸಲು ನೃಪಕುಲೋತ್ತಮನಾದ ಭರತನು ಕೇಳಿ ಆನಂದಪಟ್ಟನು.

ಭರತೇಶನು ತನಗೆ ಕೈವಲ್ಯವೊದಗುವ ರೀತಿಯನ್ನು ಮೊದಲೇ ಜಿನರಲ್ಲಿ ಕೇಳಿದ್ದನು. ಈಗ ಪುತ್ರರಿಗೆ ಕೈವಲ್ಯವೊದಗುವ ವಿಚಾರವನ್ನು ಕೇಳಿದನು. ಜನಕರಲ್ಲಿ ಹೇಗಿರುವುದೋ ಪುತ್ರಮೋಹ.

''ಸಾವಿರದಿನ್ನೂರ್ವರು ಅಣುಗರೂ ಈ ಭವದಲ್ಲಿ ಕೈವಲ್ಯಪಡೆವರೋ? ಮುಂದಿನ ಜನ್ಮದಲ್ಲಿ ಮುಕ್ತಿಪಡೆವರೋ? ಚಿತ್ತೈಸಬೇಕು ಸ್ವಾಮಿ''

ಆಗ ಇವರೆಲ್ಲರೂ ಈ ಜನ್ಮದಲ್ಲಿ ಮುಕ್ತರಾಗುವರೆಂಬ ಪ್ರವಚನವು ಹೊರ ಹೊಮ್ಮಿತು.

''ಯುವದೀಕ್ಷೆಗೊಳ್ಳುವರೊ? ವೃದ್ಧದೀಕ್ಷಿತರಾಗಿ ಶಿವನನ್ನು ಸೇರುವರೋ?'' ಎಂದು ಭರತೇಶನು ವಿವರ ಕೇಳಿದನು. ''ಇಂದ್ರಿಯ ಸುಖಗಳನ್ನು ಪ್ರಾಯದಲ್ಲೇ ಅನುಭವಿಸಿ. ಜಿತೇಂದ್ರಿಯರಾಗಿ ಮುಕ್ತಿಹೊಂದುವರು.'' ಅದನ್ನು ಕೇಳಿ ರಾಜನು ಸಂತೋಷ ಗೊಂಡನು. 'ಬಾಲ್ಯದಲ್ಲೇ ದೀಕ್ಷೆಗೊಳ್ಳಲು ಇವರಲ್ಲಿಬ್ಬರು ಮನಸ್ಸು ಮಾಡುವರು. ಆದರೆ ಅದರಲ್ಲೇ ಜೋಲಿಗೆಬಿದ್ದು ಭೋಗದಲ್ಲೇ ತಣಿದು ಮತ್ತೆ ಮೋಕ್ಷ ಪಡೆಯುವರು.''

ಈ ಮಾತನ್ನು ಕೇಳಿದ ಚಕ್ರಿಗೆ ಸಂತೋಷವಾಯಿತು ''ಈ ಜಿನವಾಕ್ಯವು ತಪ್ಪದು. ನಾನು ನನ್ನ ಸುತರೊಂದಿಗೆ ರಾಜ್ಯವನ್ನಾಳಿದ ಮೇಲೆ ಮುಪ್ಪಿನಲ್ಲಿ ಮುಕ್ತಿಪಡೆಯುವೆನು'' ಎಂದು ಭರತೇಶನು ತನ್ನ ಅಪ್ಪಾಜಿಯ ಅಡಿಗಳಿಗೆರಗಿದನು.

ಆ ಮೇಲೆ ದಿವ್ಯನಾದವು ಸುಮ್ಮನಾಯಿತು. ಉಳಿದವರೆಲ್ಲ ''ನಮ್ಮ ಅಯ್ಯನು, ನಮ್ಮ ಅಜ್ಜನು'' ಎಂದು ಪ್ರೀತಿಯಿಂದಾಡುತಿದ್ದರು. ಆದರೆ ಜಿನೇಶನಿಗೆ ಮಾತ್ರ ನಮ್ಮವರೆಂಬ ಮಮತೆಯಿರಲಿಲ್ಲ. ಸ್ನೇಹವೆಂಬುದು ಮೋಹಕರ್ಮದ ಸೊಮ್ಮು. ಅದು ಮೋಹಕರ್ಮ ದಲ್ಲಿದ್ದುದರಿಂದ ಮೊದಲು ಸ್ನೇಹಮಾಡಿದನು. ಆದರೆ ಮೋಹಕರ್ಮವನ್ನು ಸುಟ್ಟ ಅತಿಸಾಹಸಿಗೆ ಸ್ನೇಹವೆಂಬುದಿಲ್ಲ.

''ಮಂದಿಯನ್ನು ಹಾದಿಯಲ್ಲಿರಿಸಿ ಬಂದಿರುವೆ ಚಕ್ರಿ. ನಂದನರ ಭವಿಷ್ಯತ್ತಿನ ಅರ್ಥವನ್ನು ಕೇಳಿರುವೆ. ಇಂದಿಗೆ ಸಾಕು. ಇನ್ನು ಹೋಗು. ಅತಿಜೋಲಿಯು ಬೇಡ'' ಎಂದು ವೃಷಭಸೇನಾರ್ಯರು ಹೇಳಿದರು.

''ಇಲ್ಲಿರಿ ಎಂದು ಹೇಳದೆ ಬೇಡಿಗೆ ಹೋಗೆಂದು ಸೊಲ್ಲಿಸುವುದೇ''

''ಅಲ್ಲಿದ್ದರೇನು ನಿಮ್ಮ ಆತ್ಮನು ಇಲ್ಲಿರುವನು. ಅದನ್ನು ಬಲ್ಲೆವು. ಹೋಗು.''

ಆಗ ಭರತೇಶನು ದೇವರಾಜ್ಞೆಯನ್ನು ಮೀರಬಾರದೆಂದು ನಂದನರೊಡನೆ ಎದ್ದು ಜಿನೇಶ್ವರನಿಗೆ ವಂದಿಸಿದನು. ''ಪುನರಪಿದರ್ಶನಂ ಅಸ್ತು'' ಎಂದು ಚಂದದಿಂದ ಬೀಳ್ಕೊಂಡನು. ಅಲ್ಲಿರುವ ಆರ್ಯರನ್ನೂ ಯೋಗಿಗಳನ್ನೂ ವಂದಿಸಿ ದೇವೇಂದ್ರನೊಡನೆ ಸಂಪ್ರೀತಿಯನ್ನು ನುಡಿದನು. ದೇವೇಂದ್ರನಾಗ ಭರತೇಶ್ವರನ ಪುತ್ರಸಂಪತ್ತಿಗೆ ತಲೆದೂಗಿ ಆವನನ್ನು ಹೊಗಳಿದನು.

''ಚಕ್ರೀ, ಯಾವ ಪುಣ್ಯದ ಫಲದಿಂದ ಈ ಲಾವಣ್ಯ ಸೂಸುವ ಸುತರನ್ನು ಪಡೆದೆ? ದೇವಲೋಕದಲ್ಲೂ ನಿನ್ನ ಸಂಪತ್ತುಗಳಿಲ್ಲ. ನಿನ್ನಂತೆ ಸರ್ವರೂ ಚೆಲ್ವರಾಗಿರುವರು. ಇದು ಈ ಲೋಕದಲ್ಲೇ ಆಶ್ಚರ್ಯವಾಗಿದೆ.''

ಭರತೇಶನು ಇಂದ್ರನನ್ನೂ ನಾಗೇಂದ್ರನನ್ನೂ ವಿನಯದಿಂದ ವಂದಿಸಿ ಬೀಳ್ಕೊಂಡನು. ಈ ರೀತಿಯಲ್ಲಿ ಸಮವಸರಣಸಭೆಯಿಂದೆದ್ದು ಬಂದನು. ಬರುವಾಗ ಅಲ್ಲಿರುವ ದ್ವಾರಪಾಲಕರಿಗೆ ಉತ್ತಮವಾದ ಮಣಿಹಾರಗಳನ್ನು ಕೊಡುತ್ತ ಎಲ್ಲರೂ ಜಯಕಾರ ಮಾಡುತ್ತಿರುವಾಗ ಭರತೇಶನು ಕುಮಾರರೊಡನೆ ಮುಂದೆ ಸಾಗಿದನು.

ಅವರು ಸೋಪಾನವಿಳಿದು ವಿಮಾನವನ್ನೇರಿ ಆ ಪುಣ್ಯಪರ್ವತವನ್ನು ಬಿಟ್ಟು ತಮ್ಮ ಕಟಕದ ಕಡೆಗೆ ಆಕಾಶಮಾರ್ಗವಾಗಿ ಸಾಗಿದರು. ಇವರನ್ನು ಹದಿನಾರು ಸಾವಿರ ಗಣದೇವರೂ ಕೂಡಿಕೊಂಡಿದ್ದರು. ಭರತೇಶನೂ ಕಿರಿಯಕುಮಾರರೂ ಒಂದು ಪುಷ್ಪಕವನ್ನೇರಿದ್ದರೆ ಉಳಿದ ಪುತ್ರರು ಬೇರೊಂದು ಪುಷ್ಪಕವನ್ನೇರಿದ್ದರು. ದೇವರನ್ನು ಈ ಮೊದಲು ಕಂಡು ತಿಳಿಯದ ಕುಮಾರರು ಅಂದು ಕಂಡುದರಿಂದ ಕೃತಾರ್ಥವಾದೆವೆಂದು ಆನಂದಪಟ್ಟರು. ಸಮವಸರಣದ ಸಂಪತ್ತನ್ನೂ, ಆ ಪುರುನಾಥನ ಕಮಲವನ್ನು ಸೋಂಕದೆ ತೋರುತ್ತಿರುವ ಘನವನ್ನೂ, ಸೂರ್ಯಚಂದ್ರರಂತಿರುವ ತೇಜಸ್ಸನ್ನೂ, ಹೊಗಳುತ್ತ ಸಂತೋಷದಲ್ಲಿ ಸಾಗಿದರು. ತಾವು ಸವಿಮಾತುಗಳನ್ನು ತಂದೆಯೊಡನೆ ಆಡುವರು. ತಂದೆಯಾಡಿದುದನ್ನು ಕೇಳುವರು. ಈ ರೀತಿಯಲ್ಲಿ ತಮ್ಮ ಸಂಪತ್ತು ಭುವನ ವಿಸ್ಮಯವೆನುತ್ತ ಮುಂದೆ ಸಾಗಿದರು. ಭರತೇಶನ ಸುತರೆಲ್ಲರೂ ಸ್ವಾಮಿಯ ಮಹಿಮೆಯನ್ನೇ ನುಡಿಯುತ್ತ ಕೊಬ್ಬಿನಿಂದ ನಗುತ್ತ ನಡೆಯುತ್ತಿದ್ದರು. ಅವನ ಇನ್ನೂರು ಮಂದಿ ಕಿರಿಯ ಮಕ್ಕಳಲ್ಲಿ ಇಬ್ಬರು ಮಾತ್ರ ಸುಮ್ಮನೆ ಬರುತಿದ್ದರು. ಜಿನರಾಜ ಮತ್ತು ಮುನಿರಾಜರೆಂಬ ಆ ಇಬ್ಬರು ಮಾತ್ರ ಜಿನನನ್ನು ಕಂಡಾ ಕ್ಷಣದಿಂದಲೇ ತಾವು ಜಿನದೀಕ್ಷೆಗಳಿಸಿ ತಂದೆಗೆ ಹೇಳಲು ಅಂಜಿ, ಚಿಂತಿಸುತ್ತ ನಡೆಯುತಿದ್ದರು.

ಅಣ್ಣಂದಿರಿಗೆ ಮಾಡಿದಂತೆ, ನಾಳೆ ಜನಕನು ನಮಗೂ ಮದುವೆ ಮಾಡಿಸುವನು. ಆದ್ದರಿಂದ ಬಾಲ್ಯಕಾಲದ ದೀಕ್ಷೆಯೇ ಲೇಸು ಎಂದವರು ನೆನೆದರು. ನಮ್ಮನ್ನು ದೀಕ್ಷೆಗೆ ಕಳುಹೆಂದು ಅಯ್ಯನ ಕೆಂಪಾದ ಅಡಿದಾವರೆಗಳಿಗೆರಗಿದರೆ ಕಳುಹಲಾರನು. ಒಡಹುಟ್ಟಿದವರೂ ಬಿಡರು, ಎಂದವರು ಒಳಗೊಳಗೇ ಎಣಿಸುತ್ತ ನಡೆದರು. ಈಗಂತೂ ಕಳುಹಲಾರರು; ಅದನ್ನು ತಿಳಿದರಂತೂ ಮುಂದೆ ಅದಕ್ಕೆ ಕಾಳವಿಳಂಬ ಮಾಡುವರು. ಆದ್ದರಿಂದ ಮೂಕರಂತೆ ಊರಿಗೆ ಹೋಗಿ ಮತ್ತೆ ಬಂದು ಅತಿಥಿಗಳಾಗುವೆವು, ಎಂದವರು ಭಾವಿಸಿದರು. ಉಳಿದವರೆಲ್ಲರೂ ಮುಂದೆ ಸಾಗುತಿದ್ದ ಸೇನೆಯನ್ನು ನೋಡುತಿದ್ದರೆ ಇವರಿಬ್ಬರು ಶಿರು ತಿರುಗಿ ಕೈಲಾಸಗಿರಿಯನ್ನೇ ನೋಡುತ್ತ ಮೌನವಾಗಿ ನಡೆಯುತಿದ್ದರು.

ಇವರ ಚಿತ್ತವು ದೀಕ್ಷೆಯತ್ತ ತಿರುಗಿದುದನ್ನು ಚಕ್ರಿಯು ಅಂತರಂಗದಲ್ಲೇ ಅರಿತನು. ಮರುಕದಿಂದ ಒತ್ತಿಗೆ ಕರೆದುಕಂಡನು. ಒಡನೆ ಅವರೊಡನೆ ಮಾತನಾಡಿದನು.

''ಏನಣ್ಣ. ಜಿನರಾಜು, ಮುನಿರಾಜು? ಸುತರೆಲ್ಲರೂ ಸುಮ್ಮಾನದಲ್ಲಿ ನಡೆಯುತ್ತಿರುವಾಗ, ನೀವು ಮಾತ್ರ ಬಳಲಿದಂತಿರುವಿರಿ. ನಮಗಿದರ ಸಂಧಾನವನ್ನು ತೋರಿಸದೆ ಮಾತನಾಡಿ. ತಾಯಂದಿರನ್ನು ನೆನೆದಿರ? ಕೈಲಾಸಕ್ಕೆ ಬಂದುದರಿಂದ ಮೈಗಳು ನೊಂದುವೋ? ನಿಮ್ಮ ಬಾಯಿಗಳನ್ನು ಮುದ್ರಿಸಿ ಚಿಂತಿಸುವುದೇನಣ್ಣ? ನಮಗಿದೊಂದು ಬೇಗೆಯಾಗಿದೆ.''

‘‘ದೇವರಿಗಿಂತಲೂ ಜನನಿಯರು ಅಧಿಕರೇ? ಜಿನನ ಹತ್ತಿರಕ್ಕೆ ಹೋಗಲು ನಮಗೆ ಆಲಸ್ಯವುಂಟೇ? ದೇವರೂ ಕುಮಾರರು ಮಾತನಾಡುತ್ತಿರುವುದನ್ನು ಭಾವಿಸುತ್ತ ಸದ್ಭಾವದಲ್ಲಿ ಬರುತ್ತಿರುವೆವು.’’

‘‘ಮುಂದೆ ನೋಡದೆ ನೀವು ಹಿಂದಕ್ಕೆ ತಿರುತಿರುಗಿ ನೋಡುವುದೇಕೆ?’’

‘‘ಇನ್ನೆಂದು ಕಾಣುವೆವೋ ಸ್ವಾಮಿಯ ಪುಣ್ಯಶೈಲವನ್ನೆಂದು ತಿರುತಿರುಗಿ ನೋಡಿದೆವು. ಸ್ವಾಮಿ ಗಿರಿಯ ಚೆಲುವಿಕೆಯ ಚಿತ್ತೈಸು.’’ ‘‘ಲೇಸು.’’ ‘‘ಸ್ವಾಮಿ ಆದರ ಅಗ್ರದ ಪರಮನ ಸಭೆಯನ್ನು ಚಿತ್ತೈಸು.’’ ‘‘ಲೇಸು.’’ ‘‘ಅದು ಧರೆಗೆ ವಿಸ್ಮಯವಲ್ಲವೆ’’ ‘‘ಲೇಸು.’’ ‘‘ಅದರಿಂದ ನೋಡಿದೆವು.’’ ‘‘ಲೇಸು.’’

ಮತ್ತೆ ಭರತೇಶನು ಮಾತನ್ನು ಮತ್ತೊಂದು ರೀತಿಗೆಳೆದು ಮುಂದುವರಿಸಿದನು. ‘‘ಅಣ್ಣಾ ನಿಮ್ಮ ಮನದ ಅನುಭವವನ್ನೆಲ್ಲ ಬಲ್ಲೆನು. ಅದನ್ನೀಗ ಎಣಿಸಬೇಡಿ. ಅದನ್ನು ನಾವೂ ನೀವೂ ಒಂದಾಗಿ ಮುಂದೆ ಮೆಲ್ಲಗೆ ಮಾಡುವ. ಈಗ ಭೋಗದಲ್ಲಿ ಕೆಲವು ದಿವಸವಿದ್ದು ಮತ್ತೆ ದೀಕ್ಷಾಗಮಕ್ಕೆ ಹೋಗುವ. ಈಗಲೇ ತವಕಿಸದಿರಿ’’ ಅವರಿಗಿದು ಬಾಗಿಲು ತೆರೆದಂತಾಯಿತು.

‘‘ವಂಚಿಸಿ ಬರುವೆವು ಎಂದಿದ್ದೆವು. ಅದೀಗ ಇವರಿಗೆ ತಿಳಿಯಿತು. ಇನ್ನು ಮೇಲೆ ವಂಚಿಸುವುದಕ್ಕಾಗದು. ಸಂಚಿತಾರ್ಥವನ್ನು ಕಾಣಬೇಕಾದರೆ ಹೇಳಿಯೇ ದೀಕ್ಷೆಗೆ ಹೊರಡಬೇಕು’ ಎಂದವರು ಎಣಿಸಿದರು. ಅವರು ನುಡಿಯಲು ಅಂಜಿದ್ದರು. ತಂದೆಯ ಮಾತು ಅವರಿಗೆ ನುಡಿಯಲು ಬಿಟ್ಟಂತಾಯಿತು. ಅಯ್ಯನ ಅಡಿಗೆರಗಿ, ದೀಕ್ಷೆಗೆ ಕಳುಹೆಂದು ಕಾಲು ಹಿಡಿದು ಬೇಡಿಕೊಂಡರು.

‘‘ಎಳೆ ಹರೆಯದಲ್ಲೇ ಮುಕ್ತಿಯನ್ನಾಳಬೇಕು. ನಮ್ಮನ್ನು ಕಳುಹಿಸಲು ಮನಸ್ಸು ಮಾಡು.’’ ಎಂದೊಡನೆ ಚಕ್ರೇಶ ತಳಮಳಗೊಂಡನು. ಕಣ್ಣುಗಳಿಂದ ನೀರ ಹನಿಗಳು ದುರಿದುವು. ‘‘ಕೆಟ್ಟೆ, ಕೆಟ್ಟೆನು, ಹಾ, ಹಾ. ನೀವು ನನ್ನನ್ನು ಬಿಟ್ಟು ಬೆಳ್ಳಿ ಬೆಟ್ಟಕ್ಕೆ ಹೋಗುವೆವೆಂಬ ಮಾತನ್ನು ಬಿಟ್ಟು, ನನ್ನನ್ನು ರಕ್ಷಿಸಬೇಕು’’ ಎಂದವರನ್ನು ಎತ್ತಿಕೊಂಡು ಅತ್ಯಂತ ಪ್ರೀತಿಯಿಂದಪ್ಪಿಕೊಂಡನು.

‘‘ನೀವಿಲ್ಲದಿದ್ದರೆ ನನಗೆಂತಹ ಸೌಭಾಗ್ಯವಿದೆ. ನನಗಿಂತಹ ನೋವನ್ನುಂಟು ಮಾಡುವಿರಾ ಮಕ್ಕಳೇ? ನಾವೂ ನೀವೂ ಒಂದಾಗಿ ದೀಕ್ಷೆಗೊಳ್ಳುವ. ಈ ವೇಳೆಯಲ್ಲಿ ಬೇಡ.’’

‘‘ದೇವರಿಗೆ ಕುಮಾರರು ಕಡಿಮೆಯೆ? ನಾವಿಬ್ಬರೂ ಅಚಲವಾದ ತಪವನ್ನು ಕೈಗೊಂಡು ಯಮನನ್ನು ಅಟ್ಟಿದರೆ ಅದು ನಿನ್ನ ಕೀರ್ತಿಯಲ್ಲವೆ ಸ್ವಾಮಿ?’’

‘‘ಆ ಕೀರ್ತಿ ಬೇಡ. ನೀವು ನನ್ನೊಡನಿರಿ. ನನಗೀ ಕೀರ್ತಿಯೇ ಸಾಕು.’’

‘‘ಕಾಕು ಮಾಡುವ ಯಮನೊಳಗಾಗಿ ಬಾಳುವುದು ಸಾಕು.’’

‘‘ಯಮ, ನಮಗೇನನ್ನು ಮಾಡುವನು ಅಣ್ಣ? ನಾವು ಅಭವದಲ್ಲೇ ಮುಕ್ತರೆಂದು ಆದಿಜಿನರು ವಿವರಿಸಿದರಲ್ಲವೆ? ಅದನ್ನು ನೀವು ಮರೆತಿರುವಿರಿ; ಸ್ವಲ್ಪ ತಾಳ್ಮೆಯಿಂದಿರಿ. ಈ ಭವದಲ್ಲೇ ನೀವು ಮುಕ್ತರಲ್ಲವೆಂದಾದರೆ ನಿಮ್ಮ ಲಾಭಕ್ಕೆ ನಾನು ಅಡ್ಡಿ ಬರುವೆನೆ? ವೈಭವದಲ್ಲಿ

ನಾಲ್ಕು ದಿನವಿದ್ದು ಹೋಗುವ. ನೀವೀಗ ನಮ್ಮ ಪುರವನ್ನೇ ನೋಡಿಲ್ಲ; ನಮ್ಮ ಅವ್ವಾಜಿ ನಿಮ್ಮ ಲಲ್ಲೆಯನ್ನು ಕಂಡಿಲ್ಲ; ಈಗಲೇ ನೀವು ಹೋಗುವುದು ಎಲ್ಲರ ಮನಸ್ಸಿಗೂ ಬರುವುದೆ? ಕಿರಿಯ ತಂದೆಗಳು ಹಲವರಿದ್ದಾರೆ; ಅವರ ಮೈಯ್ಯ ಕುರುಹನ್ನು ನೀವು ನೋಡಿ ನಮ್ಮ ಮರುಕವನ್ನು ಬಿಡಿಸಿ, ಮತ್ತೆ ದೀಕ್ಷೆಗೆ ನಡೆಯಿರಿ.ಜಗತ್ತೇ ತಿಳಿಯುವಂತೆ ಕಳುಹಿಸುವೆನು.''

''ವಿಚಿತ್ರ ಸಂಪತ್ತಿನಲ್ಲಿ ಸಿಕ್ಕಿದ ಮೇಲೆ ದೀಕ್ಷೆಗಿಚ್ಚೆ ಬರುವುದೇ ? ಆ ಕಡೆಯ ಸುದ್ದಿ ಬೇಡ. ನಮ್ಮನ್ನು ಒಳ್ಳೇ ಮನಸ್ಸಿನಿಂದ ಕಳುಹಿಸು. ಪುರವನ್ನು ಕಿರಿಯ ತಂದೆಗಳನ್ನು, ಹೆತ್ತವ್ವಾಜಿಯರನ್ನು ಚರ್ಮದೃಷ್ಟಿಯಿಂದ ನೋಡುವ ಬೆರಗೇಕೆ? ಸುಜ್ಞಾನದಿಂದಲೇ ನೋಡುವೆವು. ನಮ್ಮನ್ನು ಬೇಗನೇ ಕಳುಹಿಸಿಬಿಡು.''

''ಇದು ಸಲ್ಲದಪ್ಪ. ನೀವು ನನ್ನ ಮನಸ್ಸಿಗಿಷ್ಟು ತಲ್ಲಣತೋರುವುದು ಚದುರೆ? ಇನ್ನು ತಪದ ಸುದ್ದಿಯನ್ನುಸೊಲ್ಲಿಸದಿರಿ'' ಎಂದವರ ಗಲ್ಲವನ್ನು ಸವರಿದನು. ''ಹೊಲ್ಲದ ಕೆಲಸವನ್ನು ನೆನೆದೆವೆ? ದೇವರು ಸಲ್ಲವೆಂದು ಹೇಳುವುದೇಕೆ ಒಳ್ಳಿತ ನೆನೆದಿರಿ; ಗೆಲ್ಲಿರಿ, ಎಂದು ಕಳುಹು''ಎಂದವರು ತಂದೆಯ ಪಾದಗಳಿಗೆರಗಿದರು.

ನುಡಿಯುವ ಯಾವ ನಾಡುನುಡಿಗಳಿಗೂ ಅವರು ಒಡಂಬಡುತ್ತಿದ್ದಿಲ್ಲ; ಅವರು ಹೇಳುವ ಯಾವ ಮಾತಿಗೂ ಅವನೂ ಒಡಂಬಡುತಿದ್ದಿಲ್ಲ.ಈ ರೀತಿಯಲ್ಲಿ ಅವರು ಮೂವರು ಮಾತನಾಡುತ್ತಿರುವಾಗ ಸರ್ವರೂ ಮಿಡುಕದೆ ಆಲಿಸುತಿದ್ದರು.

ಪುತ್ರರ ಈ ತವಕವನ್ನು ನೋಡಿದ ಮೇಲೆ, ಇದಕ್ಕೊಂದುಮಾಡಬೇಕೆಂದು ಎಣಿಸಿದನು. ಒಂದು ಕಠಿಣ ತಂತ್ರವನ್ನು ಮನಗಂಡು ಮತ್ತೇ ಅವರನ್ನು ಮಾತಾಡಿಸಿನು.

''ಸರ್ವಥಾ ದೀಕ್ಷೆಗೆ ಹೋಗಬೇಕೆ?'' ''ಬೇಕು'' ಆಗಲಿ. ಭೂಮಿಗೆ ಉತ್ತಮ ವಾದುದನ್ನೇ ನೆನೆದಿರಿ. ಒಬ್ಬೊಬ್ಬನು ಒಂದೊಂದು ವಸ್ತುವನ್ನು ನನಗೆ ಕೊಟ್ಟು ಇಬ್ಬರೂ ತೆರಳಿರಿ''

''ನಮ್ಮಲ್ಲೇನುಂಟು–ದೇವರಿಗೆ ಕೊಡುವಂತಹ ವಸ್ತು?'' ಎಂದವರು ಒಮ್ಮುಖವಾಗಿ ಕೇಳಿದರು.

''ಸುಮ್ಮನೆ ಕೊಡುವೆವೆಂದು ಹೇಳಿಬಿಡಿ'' ಎಂದ ಉಮ್ಮಳವು ಮಿಗುವಂತೆ ಭರತೇಶನು ಹೇಳಿದನು.

''ತೊಟ್ಟಿರುವ ಸರ್ವವನ್ನೂ ತೊರೆದು ದೀಕ್ಷೆಗೆ ಹೋಗುವ ನಮಗೆಂತಹ ಆಸೆ ಕೊಡುವೆವು. ಏನೆಂದು ನಿರೂಪಿಸು.''

ಕುವರರ ಮಾತು ಕೇಳಿದೊಡನೆ ಭರತೇಶನು ಅಂಗೈಯನ್ನು ನೀಡಿದನು. ''ಒಬ್ಬನು ಕರ್ಪೂರವನ್ನಿಲ್ಲಿರಿಸಿ, ಮತ್ತೊಬ್ಬನು ಎಣ್ಣೆಯನ್ನು ಹನಿಸಿ, ಇಬ್ಬರೂ ಹೋಗಿರಿ. ಜಿನನಾಣೆ ತಡೆಯಲಾರೆನು'' ಉಬ್ಬಿದ ಕಣ್ಣೀರಲ್ಲೆ ಹೇಳಿದನು. ಇದನ್ನು ಕೇಳಿದೊಡನೆ ಅವರಿಬ್ಬರೂ ಗಡಗಡನೆ ಕಂಪಿಸಿದರು. ಅಷ್ಟರಲ್ಲಿ ಕುವರರೆಲ್ಲರೂ ಕಂಪಿಸಿದರು.

''ಸುಡು ಸುಡು ನಿಮ್ಮ ಬಾಳಿಕೆಯನ್ನು'' ಎಂದಾಗ ಅರ್ಕಕೀರ್ತಿಯು ಅವರಿಬ್ಬರನ್ನೂ ಜರಿದು ನುಡಿದನು. ''ಸ್ವಾಮಿ ಕೈಯ್ಯೊಡ್ಡಿ ವಿಷವನ್ನು ಬೇಡುವಂತಾಯಿತೆ? ನಾವು ಈ

ಮಾತನ್ನು ಕೇಳಿದೆವೆ? ಹಾ ! ಜಿನ! ಜಿನ! ಗುರುಹಂಸನಾಥ!'' ಎಂದವನು ಕಿವಿಮುಚ್ಚಿದನು.

ಅವರು ಅಣ್ಣನ ಮೊಗವನ್ನು ನೋಡಿ ಕಣ್ಣನೀರು ಗುಳುಗುಳು ಸುರಿಯುತ್ತಿರಲು ಪೊಣ್ಣನೆ ಕಾಲಿಗೆಬಿದ್ದರು.'' ಇನ್ನು ದಿಕ್ಷೆಯೆಂದು ಹಣ್ಣುವುದಿಲ್ಲ; ಕ್ಷಮಿಸು.'' ಎಂದರು. ''ಅರಿಯದೆ ಮಾತಾಡಿದೆವು; ನಮ್ಮ ಮಕ್ಕಳಾಟಿಕೆಯನ್ನು ಮರೆತುಬಿಡು ಸ್ವಾಮಿ'' ಎಂದು ಬೇಡಿಕೊಂಡರು.

ಕೂಡಲೇ ಭರತೇಶನು ಕಿರಿಯರನ್ನು ತೆಗೆದೆತ್ತಿ ತಕ್ಕೈಸಿಕೊಂಡನು. ಸಂತಾನದ ಮೋಹ ಕಿರಿದಲ್ಲ. ರಾಜನಾಗ ಮಕ್ಕಳಿಗೆ ಮುತ್ತನ್ನಿತ್ತು ಮೈಯನ್ನು ಸವರಿದನು. ಸುತರು, ''ನೋಯಿಸಿದೆವು ಸ್ವಾಮಿ'' ಎಂದರೆ, ''ಇಲ್ಲ ಅಣ್ಣ , ಇಲ್ಲ ಅಣ್ಣ ಈಗ ನನ್ನೆದೆಯು ಸೀಯವಾಯಿತು'' ಎಂದನು. ಆಗ ತಂದೆ ಮಕ್ಕಳ ಕಣ್ಣನೀರನ್ನು ತೊಡೆದನು; ತಂದೆಯು ಕಣ್ಣೀರನ್ನವರು ತಮ್ಮ ಕೆಂಪು ತಳಿರಿನಂತಿರುವ ಕೈಗಳಿಂದ ತೊಡೆದರು. ತಳಮಳವು ನಿಂತಿತು. ಮನಸ್ಸಿಗೆ ತೃಪ್ತಿಯಾಯಿತು.

ಅರ್ಕಕೀರ್ತಿಯು ತನ್ನ ವಿಮಾನದಿಂದಿಳಿದು ಭರತೇಶನ ಬಳಿಗೆ ಬಂದನು. ಬಂದವನೇ ತಂದೆಯ ಉಡಿಗೆ ತೊಡಿಗೆಗಳನ್ನು ಬದಲಾಯಿಸಿ, ಲೇಪನಾದಿಗಳಿಂದ ಸಿಂಗರಿಸಿ, ತಂದೆಯ ಅಡಿಗಳಿಗೆರಗಿದನು. ಅನಂತರ ಕಾಣಿಕೆಯಿತ್ತು ನಿವಾಳಿಸಿ ನಿಂತುಕೊಂಡನು. ಭರತೇಶನೂ ಮಕ್ಕಳ ಅಲಂಕಾರದಲ್ಲಿ ಸ್ವಲ್ಪ ಕಾಲವನ್ನು ಕಳೆದನು. ಈ ರೀತಿಯಲ್ಲಿ ಉಮ್ಮಳವೆಲ್ಲ ಕಳೆದುಹೋಗಿ ಸರ್ವರಿಗೂ ಮಂಗಳವಾಯಿತು. ಭರತೇಶನಾಗ ಜಿನರಾಜ, ಮುನಿರಾಜ ರೊಡನೆ ಮಾತನಾಡ ತೊಡಗಿದನು.

''ಜಿನರಾಜು, ಮುನಿರಾಜು, ಕೇಳಿರಣ್ಣ ಇದೆಲ್ಲ ಇಂದಿಗೇ ಆಯಿತು. ಮನೆಗೆ ಹೋದ ಮೇಲೆ ನೀವು ನಮ್ಮನ್ನು ನೆನೆಯದೆ ಚಾಳಿಸಿ ಹೋದರೆ ಹೇಗೆ?'' ''ದೇವರಿಗೆ ಅರಿಕೆ ಮಾಡದೆ ಹೋಗೆವು''— ಎಂದವರು ಹೇಳಿದರು. ಹೇಳಿದರೂ ತಾನು ನಂಬಲಾರೆನೆಂದು ಭರತೇಶನು ಹೇಳಿದನು. ಅವರಾಗ ಅವನ ಪಾದಗಳನ್ನು ಮುಟ್ಟಿ ಆಣೆಯಿಟ್ಟು ಹೇಳಿದರು. ಅದೂ ಸಾಲದೆಂದು ಭರತೇಶನು ವಾದಿಸಿದನು.

''ಅದು ಸಾಲದು. ನನಗೊಂದು ಹೊಣೆಯೂ ಬೇಕು.''

''ಸ್ವಾಮಿ ಇದಕ್ಕೇಕೆ ಹೊಣೆ? ತಮ್ಮ ಪಾದದಾಣೆಯಿಂದಧಿಕವೆ? ಸಾಕು; ತಪ್ಪದು ನಂಬು.''

''ದೊಡ್ಡಣ್ಣ ಚಿಕ್ಕಣ್ಣರನ್ನು ಹೊಣೆಗೊಟ್ಟು ಅವರನ್ನು ಒಕ್ಕಣೆಸಿರಿ. ಯಾವ ಎಣೆಕೆಯೂ ಇಲ್ಲದೆ ನಾವು ತೆಪ್ಪಗಿರುವೆವು.''

''ದೇವರ ಪಾದಗಳ ಆಣೆಯೇ ಸಾಕು. ನಮ್ಮ ಅಂಕೆಯೇಕೆ?'' ಎಂದು ಅರ್ಕಕೀರ್ತಿಯು ಕೂಡಲೇ ಹೇಳಿದನು. ಆದರೂ ಭರತೇಶನು ಹೊಣೆಬೇಕೆಂದೇ ಹೇಳಿದನು. ಕೊನೆಗೆ ಅಣ್ಣಂದಿರನ್ನು ಹೊಣೆಯಾಗಿರೆಂದು ಜಿನರಾಜ ಮುನಿರಾಜರು ಬೇಡಿಕೊಂಡರು. ''ಇವರು ಮರೆಮಾಚಿ ಹೋಗಲಿಕ್ಕಿಲ್ಲ, ನಾವು ಇವರಿಗೆ ಹೊಣೆ'' ಎಂದು ಆದಿರಾಜನು ಹೇಳಿ ಕೈಮುಗಿದನು.

"ಆಗಲಿ. ದೇವರಿಗೂ ಅಣ್ಣಾಜಿಯವರಿಗೂ ಚೆನ್ನಾಗಿ ಬಿನ್ನವಿಸಿದೆವು. ನಾವು ಹೋಗೆವು." ಎಂದು ಅಣ್ಣಂದಿರಿಬ್ಬರ ಪಾದಗಳನ್ನೂ ಅವರಿಬ್ಬರೂ ಮುಟ್ಟಿದರು. "ಅಯ್ಯನ ಅಂಘ್ರಿಗಳನ್ನು ಮುಟ್ಟಿದುದೇ ಸಾಕು." ಎಂದವರು ಕೈಯನ್ನು ನೂಕಿದರೂ ಇವರು ಕೇಳಲಿಲ್ಲ. "ಅಯ್ಯ ನಿಮಗೆ ಸ್ವಾಮಿ, ನಮಗೆ ನೀವು ಒಡೆಯರು." ಎಂದು ಉಯ್ಯಾಲೆಯಂತೆ ಒಲಿದು ಮುಟ್ಟಿದರು. "ದೇವ, ಇವರಿಗೆ ಹೊಣೆ; ನಾವೆಲ್ಲರೂ ಮೈಗಾವಲು" ಎಂದು ಉಳಿದ ಸುತರೆಲ್ಲರೂ ಹೇಳಿ ಕೈಮುಗಿದರು.

ಭರತೇಶನಿಗೆ ಸಂತೋಷವಾಯಿತು. ಸುತರೆಲ್ಲರೂ ತಮ್ಮ ತಮ್ಮ ಪುಷ್ಪಕಗಳನ್ನೇರಿ ಬರುತ್ತಿದ್ದರು. ಭರತೇಶನು ಹಿರಿಯನಾದ ಅರ್ಕಕೀರ್ತಿಯೊಡನೆ ಆಗತಾನೇ ನಡೆದುದನ್ನು ಹೇಳಿ, "ನೋಡೋಣ, ನಿನ್ನ ತಮ್ಮಂದಿರ ಆಟವನ್ನು" ಎಂದನು. ಅದಕ್ಕೆ ಎಲ್ಲರೂ ನಕ್ಕರು.

ಅಲ್ಲಿದ್ದವರಲ್ಲೆಲ್ಲ ಕಿರಿಯರಾದ ಸುತರಿಬ್ಬರು, ಮುದ್ದು ನುಡಿಗಳಿಂದ ತಂದೆಯೊಡನೆ ಮತ್ತೊಂದು ಕಾರ್ಯವನ್ನು ನುಡಿದರು. ಮಾಣಿಕ್ಯರಾಜ, ಮನ್ಮಥರಾಜ ಎಂಬ ಅವರಿಬ್ಬರೂ ಮಾಣಿಕ್ಯದ ಬೊಂಬೆಗಳಂತಿದ್ದರು. ಅವರು ತಮ್ಮ ಮನಸ್ಸಿಗೆ ಕಂಡು ಬಂದ ಒಂದನ್ನು ಪಿತಗೆ ಬಿನ್ನೈಸಿದರು.

"ವೃಷಭಸೇನಾಚಾರ್ಯರೇ ಮೊದಲಾದವರು ದೀಕ್ಷೆಗೊಂಡಾಗ, ದೇವರು ಅವರನ್ನು ಕೆಲವು ದಿವಸ ತಾಳಿರಿಯೆಂದು ತಡೆದಿರಿಸಬೇಡವೆ? ಅವರು ದೀಕ್ಷೆಗೊಳ್ಳುವಾಗ ದೇವರು ಪ್ರೇಕ್ಷಿಸಿ ಸುಮ್ಮನಿದ್ದುದಕ್ಕೆ ಈ ಕ್ಷಿತಿ ಮೆಚ್ಚುವುದೇ?"

ಕುವರರು ನಿರ್ದಾಕ್ಷಿಣ್ಯವಾಗಿ ನುಡಿದರು.

"ಅಹುದು ನಾವೇನು ಮಾಡಬೇಕು?" "ದೇವರು ಜವಾಬ್ದಾರಿ ವಹಿಸಿ ತಡೆಯಬೇಕು." "ತಡೆಯಲು ಸಹಜವಾಗಿ ಅವರು ನಿಲ್ಲುವರೆ?" "ನಿಲ್ಲಲಾರರೆ? ಅಹಹ! ಅವರು ಹಿರಿಯಣ್ಣನಿಗೆ ಮಾರ್ನುಡಿದರೆ?" "ಸಾಕು; ನಿಲ್ಲಿಸಿ. ಈಗ ನಿಮ್ಮ ಅಣ್ಣಂದಿರು ನಮ್ಮನ್ನು ಬಿಟ್ಟುಹೋಗುವೆವು ಎಂದು ಹೇಳಿದ ಜೋಕೆಯನ್ನು ನೀವು ಕಾಣಲಿಲ್ಲವೆ? ಹಾಗೆ ಅವರೂ ನನ್ನನ್ನು ಪರಾಕಿಸಿ ಹೋಗಲಾರರೆ? ನನ್ನ ಪುತ್ರರೇ ನನ್ನನ್ನು ಚಾಳಿಸಿ ಹೋಗುವೆವು ಎಂದುದನ್ನು ಕಂಡ ಮೇಲೆ, ಬೆನ್ನ ಹಿಂದೆ ಬಂದವರು ನನ್ನ ಮಾತು ಕೇಳುವರೆ? ತರಳರಾಗಿದ್ದು ಈಗ ನೀವು ತಾವು ಎನ್ನುವಿರಿ; ದೇವರು ದೇವರು ಎನ್ನುತ್ತೀರಿ. ನೆರೆದಾಗ, ಎಂದು ಚಾಳಿಸಿ ಹೋಗುವಿರೋ? ಯಾವ ನಂಬುಗೆ? ಗರ್ಭದಲ್ಲಿರುವಾಗಲೇ ನಾವು ನಮ್ಮ ಭಾಗ್ಯವೆಂದುಕೊಂಡಿರುವೆವು. ಆದರೆ ನೀವು ನಮ್ಮನ್ನೇ ನಿರ್ಭಾಗ್ಯರನ್ನಾಗಿ ಮಾಡುವಿರಿ. ಮಗು ಗಂಡಾಗಬೇಕೆಂದು ನಿಮ್ಮ ಮಾತೆಯರು ಆಸೆಗೊಂಡು ಪಡೆದು ಸಲಹುವರು. ನೀವು ಮಾತ್ರ ಓಡಿಹೋಗಿ ದೀಕ್ಷೆಗೊಳ್ಳುವಿರಿ. ಒಳಿತಾದುದನ್ನು ಉಣಲಿತ್ತು ನಿಮ್ಮನ್ನು ಸಲಹುವೆವು; ಮುಪ್ಪಿನಲ್ಲಿ ನಮ್ಮನ್ನು ಸಾಕುವಿರೆಂದು. ನೀವು ಮಾತ್ರ ಹಾರಿ ಹೋಗುತ್ತೀರಿ? ಬಾಲ್ಯದಿಂದ ಸಾಕಿ ಸಲಹಿದ ನಮ್ಮ ಸಾಲ ಬೆಂಬಿಡುವುದೆ ನಿಮ್ಮ . ನನ್ನನ್ನು ನೋಡಿ; ನನ್ನ ತಂದೆ ರಾಜ್ಯದಲ್ಲಿ ಇಂಬು ಮಾಡಿದಂತೆ ಇರುವೆನು. ನಮ್ಮ ಅಮ್ಮನು ಊಡಿದ ಮೊಲೆಹಾಲಿನ ಋಣಕ್ಕೆ ಆಕೆಯ ಆಜ್ಞೆಯಂತೆ ನಡೆಯುತ್ತಿದ್ದೇನೆಯಲ್ಲವೆ? ಪಡೆದವರ

ಸಾಲವೆಂಬುದು ಕಷ್ಟತರವಾದುದು. ಸುತರಾದವರು ಒಡಂಬಡಿಸಿ ಹೋಗಬೇಕು. ಸಿಡಿದು ಹೋದರೆ ಸಾಲ ಬಿಡುವುದೆ? ಮುಕ್ತಿಯನ್ನು ಪಡೆಯಬಹುದೆ?'' ಎಂದು ಮಕ್ಕಳು ಅಂಜುವಂತೆ ಭರತೇಶನು ಮಾತನಾಡಿದನು. ಇಬ್ಬರಲ್ಲದೆ ಮಿಕ್ಕ ಅಣುಗರಾರು ದೀಕ್ಷೆಗೊಳ್ಳುವಂತಿಲ್ಲವೆಂದು ಸರ್ವಜ್ಞರಾದ ಪುರುದೇವರು ನುಡಿದಿದ್ದರು.ಅದನ್ನು ಬಲ್ಲನಾದರೂ ಭರತೇಶನು ವಿನೋದಕ್ಕಾಗಿ ಇಷ್ಟು ಮಾತನಾಡಿದನು. ಆ ಮಾತು ಅಷ್ಟಕ್ಕೆ ನಿಲ್ಲಲಿಲ್ಲ. ಭರತೇಶನ ಮುದ್ದು ಮಕ್ಕಳಲ್ಲವೆ ಅವರು? ಮಾತು ಮುಂದುವರಿಸಿದರು.

''ಅವರು ಹೋಗುವವೆಂದರು. ದೇವರು ಅದಕ್ಕೊಪ್ಪೆನೆಂದು ನಿರೂಪಿಸಲು ಅಣ್ಣಂದಿರು ನಿಂತರು. ಈ ರೀತಿಯಲ್ಲಿ ಅಂದೇಕೆ ಮಾಡಲಿಲ್ಲ?''

''ಬಸುರಲ್ಲಿ ಬಂದವರ ವಿಚಾರದಲ್ಲೇ ನಾನಿಷ್ಟು ಸಾಹಸಮಾಡ ಬೇಕಾಯಿತು. ಸೋದರರು ಥಕ್ಕನೆ ಮಾತನ್ನು ಕೇಳುವರೆ?''

''ನಾವೀಗ, ದೊಡ್ಡಣ್ಣ-ಚಿಕ್ಕಣ್ಣರು ಎಂದುದನ್ನು ಯಾವುದನ್ನೂ ಮೀರುವುದುಂಟೆ? ಅವರು ಮಾತ್ರ ದೇವರು ಹೇಳಿದುದನ್ನು ಮೀರುವರೆ? ದೇವರು ಅವರನ್ನು ಸಂಭಾವಿಸಲಿಲ್ಲ?''

''ನೋಡಿದ್ಯೆ ದೊಡ್ಡಣ್ಣ, ನಿಮ್ಮ ಸೋದರರನು ಆಡುವ ನುಡಿಗಳ'' ಎಂದು ಭರತೇಶನು ಅರ್ಕಕೀರ್ತಿಯನ್ನು ಕೇಳಿದನು.

''ಆಡಬಾರದೆ? ದೇವರೆಂದು ತಡೆಯದೆ ಓರೆಮಾಡಿದ ಹಾಗಾಯಿತಲ್ಲ'' ಅರ್ಕಕೀರ್ತಿ ಉತ್ತರವಿತ್ತನು.

''ನೀನೂ ನಿನ್ನ ಅನುಜರೆಂದುದನ್ನೇ ಮೆಚ್ಚಿದೆ?'' ''ಅದಲ್ಲವೆ ಸ್ವಾಮಿ?'' ''ನಾನಂದು ತಡೆಯಲಿಲ್ಲವೆ ನನ್ನ ಸೋದರರನ್ನು ? ಅನುಮಾನವೇ?'' ''ನಿನ್ನ ಮಾತೆಂದು ಹೇಳುವಾಗ ನಿನ್ನ ಸೋದರರೆಲ್ಲ, ನನ್ನ ಸೋದರರು ತಮ್ಮ ಅಣ್ಣಂದಿರನ್ನು ಕಂಡು ಅಂಜುವಂತೆ ಅಂಜುವರಲ್ಲವೆ?'' ''ನನ್ನವರು ಹಾಗಲ್ಲ. ಆದರಿಂದ ನಾನು ನಿನ್ನಂತೆ ಪುಣ್ಯವಂತನಲ್ಲ. ಧರೆಯ ದೊಡ್ಡಿತನ್ನು ಹೇಳಬೇಡ. ಅನುಜರ ಭಕ್ತಿ ಒರೆದಲ್ಲಿ ನೀನು ಅಗ್ರನು. ಮಲತಾಯಿಗಳ ಮಕ್ಕಳೆಂಬುದಿಲ್ಲದೆ ಸರ್ವರೂ ಒಂದಾಗಿ ನಿನ್ನೊಡನಿರುವರು. ಏಕ ಗರ್ಭಜರಾಗಿಯೂ ನನ್ನವರು ಒಲಿದು ನನ್ನಲ್ಲಿರಲಿಲ್ಲ. ನೀನೂ ಸಾವಿರದ ಇನ್ನೂರ್ವರು ಅನುಜರೂ, ಒಂದಾಗಿ ಲೇಸಾಗಿದ್ದೀರಿ. ಸಾಹಸಿಗಳಾದ ನೂರ್ವರು ಅನುಜರು ನನಗೆ, ಅವರು ನನ್ನ ವ್ಯಾಸಂಗದಲ್ಲಿ ಕಾಣುವರೇ? ಅದರಲ್ಲಿ ನಾನು ಲೇಸನ್ನೆ ಬಯಸುವೆನು. ನನ್ನವರು ಲೆಕ್ಕಿಸರು; ಆದರೂ ನಾನೇ ಅವರ ಇಚ್ಛೆಯಂತಿರುವೆನು. ತಪಸ್ಸುಗೊಂಡವರು ನನ್ನಲ್ಲಿ ಅತಿ ಭಕ್ತಿವಂತರು. ಅದಕ್ಕನುಗುಣವಾಗಿ ನಾನವರನ್ನು ತಡೆದೆನೆಂದು. ಆದರವರು ನನಗೆ ಸ್ವಪರಾರ್ಥವನ್ನು ಹೇಳಿ ನನ್ನನ್ನೊಪ್ಪಿಸಿ ತೆರಳಿದರು. ಅವರಿಗೆ ನಮೋಸ್ತು ! ನನ್ನ ಮುಂದಿರುವ ಸೋದರರು ಗಾಢಗರ್ವಿಗಳು. ವಿವರವನ್ನೆಲ್ಲ ತಿಳಿದಿರಲ್ಲ . ಇದನ್ನೆಲ್ಲ ಹೊರಗಾಡಬಾರದು.'' ಎಂದು ಕುವರರಿಗೆ ಬುದ್ಧಿ ಹೇಳಿದನು.

''ಜಿನ ! ಜಿನ ! ಅಪ್ಪಾಜಿಯವರಿಗೆ ಚಿಕ್ಕಯ್ಯಂದಿರು ಅನುಕೂಲವಲ್ಲವೆ?'' ಎಂದು

ಮನದಲ್ಲಿ ನೊಂದುಕೊಂಡರು. ಮತ್ತೆ ಇಂಪಿನ ಸರಸ ಸಲ್ಲಾಪಗಳಲ್ಲಿ ತಲ್ಲೀನರಾಗಿ ಮುನ್ನಡೆದರು. ಅರಸಂಚೆಯು ಮರಿಗಳಿಗೆ ಓಟೆಯನ್ನು ಕಲಿಸುತ್ತ ಭರದಲ್ಲಿ ಬರುವಂತೆ ಭರತ ಚಕ್ರೇಶ್ವರನು ಸುತರೊಡನೆ ಸರಸ ಸಲ್ಲಾಪವಾಡುತ್ತ ಅತ್ಯಧಿಕ ಲೀಲೆಯಿಂದ ಬರುತ್ತಿದ್ದನು.

"ನಮ್ಮ ದೊರೆಯಿಂದು ತೀರ್ಥವಂದನೆಯ ಪರಮಲಾಭದಲ್ಲಿ ಬರುತ್ತಿದ್ದಾನೆ" — ಎಂದು ಅತಿಭಕ್ತಿಯಿಂದ ಕೂಡಿತ್ತು ರಾಜಕಟಕ. ಆ ಭಕ್ತಿಯಿಂದಲೇ ರಾಜೇಂದ್ರನ ಸೇನೆಯು ಭರತೇಶನನ್ನು ಇದಿರುಗೊಳ್ಳಲು ಅಣಿಮಾಡಿತು.

ಕಲಶ, ಕನ್ನಡಿ, ತೋರಣ ಸಿಂಗರಿಸಿದ ಆನೆತೇರುಗಳು. ನರ್ತಿಸುತ್ತಿರುವ ಪಾತ್ರಗಳು. ಇತ್ಯಾದಿಗಳಿಂದ ನೃಪಸೇನೆಯು ಭರತೇಶನನ್ನು ಇದಿರುಗೊಂಡಿತು. ದಳಪತಿ, ಮಂತ್ರಿ, ಮಾಗಧ ಮೊದಲಾದವರೂ, ಗೆಳೆಯರೂ, ರಾಜರೂ ಬಂದು ನಿವಾಳಿಯಿಟ್ಟು ಎರಗಿದರು. ಆಗ ಭರತೇಶನು ಅವರಿಗೆ ಸೇಸೆ ಹಾಕಿದನು.

ಹಿಮವಂತದೇವ, ವಿಜಯಾರ್ಧ ದೇವರು ತಮ್ಮ ಹಿಮಗಿರಿ ಮತ್ತು ವಿಜಯಾರ್ಧ ಗಿರಿಗಳ ವಿಶಿಷ್ಟವಾದ ಗಮಕದೊಂದಿಗೆ ಬಂದು ಭರತೇಶನಿಗೆ ನಿವಾಳಿಯಿಟ್ಟು ಎರಗಿದರು. ಚಕ್ರೇಶನವರಿಗೆ ಹೂವುಗಳನ್ನಿತ್ತು ಮನ್ನಿಸಿದನು. ಹೀಗೆ ಜಯಜಯೆನ್ನುವ, ಕೈಮುಗಿವ, ವಾದ್ಯಗಳನ್ನು ಬಾಜಿಸುವ ಕೀರ್ತಿಸುವ, ತನ್ನ ಪ್ರಿಯ ಕಟಕಕ್ಕೆ ಸೇಸೆ ಹಾಕುತ್ತ, ಅವರನ್ನು ಪ್ರೀತಿಯಿಂದ ನೋಡುತ್ತ ಭರತೇಶನು ಬರುತ್ತಿದ್ದನು.

ಭರತೇಶನು, ತನ್ನ ಸೇನೆಯ ಆನೆ, ಕುದುರೆ, ತೇರು, ಒಂಟೆ, ಎತ್ತು ಮುಂತಾದ ಸೇನೆಯೆಲ್ಲಕ್ಕೂ ಜಿನಪಾದ ಗಂಧವನ್ನು ಚೆಲ್ಲಿಸಿ, ಅವರಿಗೆ ಸುಕೃತವನ್ನು ತೋರಿಸಿದನು. ಪುಷ್ಪಕವನ್ನು ಅಟ್ಟಿ ನಾಲ್ವತ್ತೆಂಟು ಗಾವುದದಲ್ಲಿರುವ ಪಡೆಯೆಲ್ಲಕ್ಕೂ ಅನುಪಮವಾದ ಗಂಧವನ್ನು ಚೆಲ್ಲಿಸಿ, ಜಿನತೀರ್ಥದ ಪ್ರೋಕ್ಷಣೆ ಮಾಡಿಸಿದನು. ಇದರಿಂದ ಪಡೆಯು ಸುಖಿಯಾಯಿತು. ಒಂದು ಸಾವಿರ ಪ್ರಜೆಗೆ ಒಬ್ಬ ಬ್ರಾಹ್ಮಣನು ತೀರ್ಥವನ್ನು ಚಿಮ್ಮುವಂತೆ ಮಾಡಿದನು. ಈ ರೀತಿಯಲ್ಲಿ ಒಂದು ನಿಮಿಷದಲ್ಲಿ ಪಡೆಯೆಲ್ಲಾ ತೀರ್ಥದಿಂದ ನೆನೆದು ಹೋಯಿತು.

"ನನ್ನನ್ನು ಓಲೈಸಿದ ಪ್ರಜೆಗಳೂ ನನ್ನ ಪಡೆಯೂ ಸುಖವಾಗಿ ಬಾಳಲೆಂದು ಮನ್ನೆಯರ ಒಡೆಯನಾದ ಭರತೇಶನು ತಾನೇ ತೀರ್ಥವನ್ನು ತಳಿದನು. ವಿಪ್ರರ ಮೇಲೆ ತನ್ನ ಹಸ್ತಮುಟ್ಟಿ ಗಂಧವನ್ನು ಚಿಮ್ಮಲು, ಅವರು ಸುಪ್ರಯೋಜನಗೊಂಡೆವೆಂದರು. ಅವರಾಗ ಅವನನ್ನು ತೀರ್ಥಯೋಗಿಯೆಂದು ಕೀರ್ತಿಸಿದರು.

ಅಷ್ಟರಲ್ಲಿ ಭರತೇಶನ ಪುತ್ರರು ವಿಮಾನಗಳಿಂದ ಇಳಿದು, ಅಲ್ಲಲ್ಲಿ ಇಡುತಿದ್ದ ನಿವಾಳಿ, ಆರತಿ, ಪುಷ್ಪಪಲ್ಲವ ಫಲಗಳ ಪೂಜೆಗಳನ್ನು ಸ್ವೀಕರಿಸುತ್ತ ಮುಂದೆ ಬಂದರು. ಬಳಿಗೆ ಬಂದವರಿಗೂ, ನಮಸ್ಕರಿಸಿದವರಿಗೂ, ಸರ್ವಜನರಿಗೂ ಭರತೇಶನು ಸುತರ ಕೈಯಿಂದ ಗಂಧಪುಷ್ಪಗಳನ್ನು ಕೊಡಿಸುತ್ತ ಎಲ್ಲರೊಡನೆ ರಾಜಗೃಹಕ್ಕೆ ನಡೆದು ಬರುತಿದ್ದನು. ನಗೆಯಿಂದ ನುಡಿಯಿಂದ ನೋಟದಿಂದ ಕೈಸನ್ನೆಯಿಂದ ಅಲ್ಲಲ್ಲಿ ಸರ್ವಜನರನ್ನೂ ಬೀಳ್ಕೊಡುತ್ತ ಸುಗುಣನಾದ ಚಕ್ರೇಶನು ತನ್ನ ಸುಪುತ್ರರೊಂದಿಗೆ ರಾಜಗೃಹವನ್ನು ಪ್ರವೇಶಿಸಿದನು.

ಅಷ್ಟರಲ್ಲಿ ಅಲ್ಲಿ ಇದಿರುಗೊಳ್ಳಲು ಕಾದಿದ್ದ ಶೃಂಗಾರಗೊಂಡ ರಾಣಿಯರು ರತ್ನದಾರತಿ ನಿವಾಳಿಗಳಿಂದ, ಅಂಗಜರೂಪನಾದ ಭರತೇಶನ ಪಾದಪದ್ಮಗಳಿಗೆರಗಿದರು. ಸಮವರಸರಣವನ್ನು ಸೋಂಕಿರುವ ಚರಣಗಳಿವೆಂದು ರಮಣಿಯರು ಹೊಗಳುತ್ತ ಪ್ರೀತಿಯಿಂದ ಕಾಲು ಹಿಡಿಯುತಿದ್ದರು. ಅದನ್ನು ನೋಡುತ್ತ ಭರತೇಶನೂ ನಗುತಿದ್ದನು.

ಆಗ ತನುಜರೆಲ್ಲರೂ ತಾಯಂದಿರಿಗೆ ಸೇಸೆಯಿಕ್ಕಿ ಆದಿಜಿನನ ಪೂಜೆಗೈದುದನ್ನು ನೆನೆದರು. ಅದನ್ನು ತಾಯಂದಿರಿಗೂ ಒಡಂಬಡಿಯೆಂದು ಕೇಳಿಕೊಳ್ಳಲು ಮಾತೆಯರೂ ಪ್ರೀತಿಯಿಂದ ''ಇಚ್ಛಾಮಿ ಇಚ್ಛಾಮಿ'' ಯೆಂದರು. ತಮಗೆರಗುತಿದ್ದ ಪುತ್ರರನ್ನು ಮಾತೆಯರು ಹಿಡಿದೆತ್ತಿ, ''ಎರಗಬೇಡಣ್ಣ ನೀವು, ನಮಗಿಂದು ಮಕ್ಕಳಲ್ಲ; ಶ್ರೇಷ್ಠವಾದ ತೀರ್ಥಪಥಿಕರು; ನಾವೇ ನಮಸ್ಕರಿಸಬೇಕು''— ಎಂದು ಅವರೆಲ್ಲರೂ ಅಣುಗರ ಕಾಲುಗಳಿಗೆರಗಿದರು. ಆಗ ಸುಕುಮಾರರೆಲ್ಲರೂ ''ಸಲ್ಲದು ಅಮ್ಮಾಜಿ''ಯೆಂದು ದೂರಸರಿದರು. ಆದರೂ ಅವರೆಲ್ಲರೂ ಅಣುಗರ ಮೆಲ್ಲಡಿಗಳ ಮುಟ್ಟಿ ಕಣ್ಣೊತ್ತಿಕೊಂಡರು. ಕೂಡಲೇ ಕುಮಾರರೂ ಎರಗಿದರು. ಮಾತೆಯರು ಬೇಡಬೇಡವೆಂದರೂ ಎರಗಿದ ಕುಮಾರರನ್ನು ಅವರು ಅಪ್ಪಿಕೊಂಡು ಹರಸಿದರು. ಅದನ್ನು ನೋಡಿ ಭರತೇಶನು ಅನುರಾಗವಶನಾದನು.

ಅಷ್ಟರಲ್ಲಿ ಸೊಸೆಯರೂ ಬಂದು ಮಾವನಿಗೆರಗಿದರು. ಅವರ ಮೇಲೆ ಸಂತೋಷದಿಂದ ಗಂಧವನ್ನು ಚಿಮ್ಮಿಸಿದನು. ''ಹೊಸ ಪೂಜೆಗೆ ಒಡಂಬಡಿ ಅಮ್ಮ!'' ಎಂದು ಭರತೇಶನು ಸೂಚಿಸಿದಾಗ ಅವರು ತಲೆತಗ್ಗಿಸಿ,'' ಇಚ್ಛಾಮಿ'' ಎಂದರು. ಅವರೆಲ್ಲರೂ ತಂತಮ್ಮ ಪುರುಷರನ್ನು ಕಂಡರಲ್ಲದೆ ನಮಿಸಲಿಲ್ಲ! ಹೊಂದಲಿಲ್ಲ, ನಾಚಿಕೆಯಿಂದ ನಗುತ್ತ ಹಿಂದೆ ಸರಿದು ಅತ್ತೆಯರೊಂದಿಗೆ ನಿಂತುಕೊಂಡರು. ಅಂದು ಚಕ್ರೇಶನು ಸುಪುತ್ರರೊಡನೆ ಪಂಕ್ತಿಯಲ್ಲಿ ಆರೋಗಣೆ ಮಾಡಿ ರಾಗಾನುಲೀಲೆಯಲ್ಲಿದ್ದನು.

# ೨೭

# ಅಂಬಿಕಾದರ್ಶನ

ಪುರುದೇವರ ಪಾದ ಗಂಧೋದಕದಿಂದ ಸುಪವಿತ್ರವಾದ ಭರತೇಶನ ದಂಡು ನಿಸ್ಸಾಳ ಕಹಳೆಗಳು ಮೊಳಗುತ್ತಿರಲು ಮುಂದಿನ ಪ್ರಯಾಣವನ್ನು ಕೈಗೊಂಡಿತು. ಹಾಗೆ ಹೊರಟ ಪಯಣವು ನಿಂತಲ್ಲಿ ನಿಲ್ಲದೆ ಕೆಲವು ಪಯಣಗಳ ಮೇಲೆ ಒಂದೆಡೆಯಲ್ಲಿ ಬೀಡುಬಿಟ್ಟಿತು.

ಭರತೇಶನು ತಿರುಗಿ ಬರುತ್ತಿರುವನೆಂಬ ವಾರ್ತೆಯನ್ನು ಪೌದನ ಪುರದಲ್ಲಿರುವ ಯಶಸ್ವತೀ ದೇವಿಯು ಕೇಳಿ ಸಂತೋಷಗೊಂಡಳು. ಆ ಸಂತೋಷ ಭರದಲ್ಲಿ ವಾರ್ತೆಯನ್ನು ತಂದ ದೂತರಿಗೆ ಮನ್ನಣೆಯಿತ್ತಳು. ಮಗನು ಕಳುಹಿಸಿದ ಉಡುಗೊರೆಗಳನ್ನು ತಾನೂ ಉಟ್ಟುಕೊಂಡಳು. ತಂಗಿಗೂ ಕೊಟ್ಟಳು. ಅದರಿಂದ ಅವರಿಬ್ಬರಿಗೂ ಅರ್ತಿಯಾಯಿತು. ಅದನ್ನು ಬಾಹುಬಲಿಗೂ ತಿಳಿಸಿ, ಮೂರು ಲೋಕವನ್ನು ಆಳಿದಂತಹ ಸಂತೋಷದಲ್ಲಿದ್ದರು.

ಚಕ್ರಿಯ ಸೇನೆ ಬಂದಿರುವುದಲ್ಲಿಗೆ, ಇಲ್ಲಿಗೆ ಮುಟ್ಟಲಾಯಿತೆಂಬ ವಾರ್ತೆ ಹುಟ್ಟಿದುದನ್ನು ಕೇಳಿ, ತಾಯಿಗೆ ಕಂದನನ್ನು ಬರುವ ದಾರಿಯಲ್ಲೇ ಕಾಣಬೇಕೆಂಬ ಅರ್ತಿ ಹೆಚ್ಚಾಯಿತು. "ಇನ್ನು ಹತ್ತೆಂಟು ದಿನಗಳಲ್ಲಿ ದಂಡು ನಮ್ಮ ಪುರದ ಮುಂದುಗಡೆಗೆ ಬರುವುದು'' ಎಂದು ಸೂಚಿಸಿದರೆ, ಪಡೆದ ತಾಯಿಗೆ ಅಷ್ಟುದಿನಗಳು ತಡೆದಿರುವುದು ಅಸಾಧ್ಯವಾಯಿತು. "ಸಾಕೇತಪುರಕ್ಕೆ ದೊಡ್ಡಣ್ಣನು ಹೋಗಲಿ; ಆಮೇಲೆ ನಾವು ಜೋಕೆಯಲ್ಲಿ ಹೋಗಿ ನೋಡುವ; ನಿಮಗಿಷ್ಟು ತವಕ ಏತಕ್ಕೆ?'' ಎಂದ ತಂಗಿಯ ಮಾತನ್ನು ಯಶಸ್ವತಿದೇವಿ ಕೇಳಲಿಲ್ಲ. "ಭರತಣ್ಣನು ಎಲ್ಲಿರುವನೋ ಅದೇ ನನಗೆ ಪುರ. ನನ್ನೆದೆ ತರಹರಿಸದು? ನಾನು ಹೋಗುವೆನು. ಅವನು ಪುರವನ್ನು ಹೊಕ್ಕಾಗ ನೀವೆಲ್ಲ ಬನ್ನಿರಿ.'' ಎಂದವಳು ತಂಗಿಯನ್ನು ನಿಲ್ಲಿಸಿದಳು. "ಇಂದು ನೀವಿಷ್ಟು ಸೈರಿಸಿಕೊಳ್ಳಿ. ಚಕ್ರೇಶನಿಗೆ ನಾನು ದೂತರನ್ನು ಕಳುಹಿಸುತ್ತೇನೆ. ಆಮೇಲೆ ಹೋಗುವುದೇ ಲೇಸು'' ಎಂದು ಬಾಹುಬಲಿಯು ತಿಳಿಸಿದನು. "ದೂತರನ್ನು ಕಳುಹಿಸಿದಾಗ ಅವನು ಸೇನೆಯೊಂದಿಗೆ ಇದಿರ್ಗೊಳ್ಳಲು ಬರುವನು. ಈ ರಚ್ಚೆ ಏತಕ್ಕೆ? ಗುಪ್ತವಾಗಿ ಹೋಗುತ್ತೇನೆ. ನನ್ನ ಮಾತಿಗೊಪ್ಪು; ಆರೂ ಅರಿಯದಂತೆ ದುಳದುಳನೆ ಹೋಗಿ ಬಿಡಾರವನ್ನು ಹೊಕ್ಕಾಗ ಭರತಣ್ಣನೂ ಅವನ ನಾರಿಯರೂ ಬೆಕ್ಕಸಪಡಬೇಕು. ಪಲ್ಲಕ್ಕಿಯಲ್ಲಿ ತಡವಾದೀತು. ಪುಷ್ಪಕವೇರಿ ಹೋಗುವೆನು.'' ಎಂದು ಬಾಹುಬಲಿಯನ್ನು ಒಡಂಬಡಿಸಿ ಬೀಳ್ಕೊಂಡಳು.

ಚರರನ್ನೂ ನಂಬುಗೆವಂತರನ್ನೂ ಊಳಿಗದ ಹೆಣ್ಣುಗಳನ್ನು ಕೂಡಿಕೊಂಡು ಯಶಸ್ವತೀ ದೇವಿ ಪುಷ್ಪಕವೇರಿ ಆಕಾಶದಲ್ಲಿ ಬರುತ್ತಿದ್ದಳು. ಕ್ಷಣಕ್ಕೆ ಪುಷ್ಪಕವೂ ಕಟಕದ ಹತ್ತಿರಕ್ಕೆ ಬಂದಿತು. ಕಣ್ಣಳತೆಗೆ ಮಿಕ್ಕ ಈ ಪಡೆಯನ್ನು ಕಂಡು ಮನದಲ್ಲೇ ಅರ್ತಿಗೊಂಡಳು.

''ನಾವು ತೆಂಕುದಿಕ್ಕಿಗೆ ಸಾಗುತ್ತಿರುವಾಗ ತೆಂಕಣಿಂದ ಬರುತ್ತಿರುವವರು ಯಾರು?'' ಎಂದು ಪಡೆಯೆಲ್ಲ ಗಗನಾಂಕಕ್ಕೆ ದೃಷ್ಟಿಯಿಟ್ಟು ನೋಡುತ್ತಿತ್ತು ''ವಾದ್ಯವಿಲ್ಲ , ಎತ್ತಿದ ಧ್ವಜವಿಲ್ಲ; ಆದರೂ ಉತ್ತಮವಾಗಿದೆ.'' ಎಂಬ ಚೋದ್ಯದಿಂದ ಪಡೆಯು ನೋಡುತ್ತಿರುವಾಗಲೆ ಯಶಸ್ವತೀ ದೇವಿಯು ಕಾಲ್ದಳವನ್ನು ಸೇರಿದಳು. ಕೂಡಲೇ ''ನಮ್ಮ ಸ್ವಾಮಿಯ ಅಂಬಿಕೆಯು ಬಿಜಯ ಮಾಡಿಸಿದರು'' ಎಂದು ಸುರವೀರ ನಂಬುಗೆವಂತರು ಅಂಗೈಯನ್ನೆತ್ತಿ ಖೋಯೆಂದು ಡಂಗುರ ಸಾರಿದರು. ಅದನ್ನು ಕೇಳಿದೊಡನೆ ಎಲ್ಲರೂ ಹಣೆಯಲ್ಲಿ ಕೈಯಿಟ್ಟು ಜಯ, ಜಯವೆಂದು ಬೊಬ್ಬಿರಿದರು. ಆ ಜಯ ಘೋಷವು ಅವರಿವರಿಂದಾಗಿ ಆಚೆ ಈಚೆಯವರಿಂದಾಗಿ, ಸೇನೆಯಲ್ಲಿ ತುಂಬಿಕೊಂಡಿತು. ಕೂಡಲೇ ಬಡಿವ ತಂಬಟೆ ಭೇರಿಗಳಿಂದ, ಮಿಡಿವ ಕಹಳೆ ಕೊಂಬುಗಳಿಂದ, ಸುಡುವ ಪೆಟಲುಗಳಿಂದ, ಹಾರುವ ಗುಡಿತೋರಣಗಳಿಂದ, ಮಿಡಿವ ಪಾಯ್ದಳವು ಸಡಗರಗೊಂಡಿತು. ಕುದುರೆಯನ್ನೇರಿ, ಆನೆಯನ್ನೇರಿ, ತೇರನ್ನೇರಿ, ಬಂದವರೆಲ್ಲರೂ ಜಯ ಜಯವೆಂದರು. ಷಟ್ಖಂಡದರಸನ ತಾಯಿಗೆ ತಕ್ಕಂತಹ ಸಡಗರವಾಯಿತು ! ಧರೆಯಗಲದಲ್ಲಿ ಬಿಟ್ಟ ಆ ದಂಡಿನಲ್ಲಿದ್ದ ಮೂರವರೆ ಕೋಟಿ ವಾದ್ಯಗಳು ಮೊಳಗಿದುವು. ನಲ್ವತ್ತೆಂಟು ಕೋಟಿ ಧ್ವಜಗಳು ಸುರಲೋಕವನ್ನು ಮುಟ್ಟುವಂತೆ ಮೇಲಕ್ಕೇರಿದವು.

ಅರಮನೆಯಲ್ಲಿದ್ದ ಚಕ್ರೇಶ್ವರನು ಇದನ್ನು ಕೇಳಿ, ನೋಡಿ ಬರಲೆಂದು ತೊತ್ತುಗಳನ್ನು ಕಳುಹಿಸಿದನು. ಅವರು ಕಡೆಯ ಬಾಗಿಲವರೆಗೆ ಬಂದು ನೋಡಿ ಆಶ್ಚರ್ಯದಿಂದ ಹಿಂದೆ ಓಡಿದರು. ''ಒಡೆಯ, ಬಿನ್ನಹ. ನಮ್ಮ ಕಟಕವು ಕಡಲ ಕಲಕಿದಂತಾಗಿ ಭೂಮಿ ಆಕಾಶಗಳನ್ನು ತುಂಬಿದೆ.'' ಬಾಗಿಲ ಗೊಲ್ಲರೂ ಬಂದು ಇದನ್ನೇ ಹೇಳಿದರು.

''ಧರೆಯನ್ನು ಗೆದ್ದು ಪ್ರೈಮರೆತು ಬರುತ್ತಿರುವ ಸಮಯವನ್ನು ಕಾದು ಅರಿಗಳಾದವರು ನಮ್ಮ ಮೇಲೆ ಬಿದ್ದರೇ?'' ಎಂದು ಚಕ್ರೇಶ್ವರನು ನೆನೆದನು. ಸಂದರಿಯರಿಗೆಲ್ಲ ಅಂಜದಿರೆಂದು ಹೇಳಿ, ಸೌನಂದಕವೆಂಬ ಖಡ್ಗವನ್ನು ಕುಂದಕಣ ಒರೆಯಿಂದ ಎಳೆದನು. ಹರೆಯಿಂದ ಹೊರಬಂದ ಹಾವು ನಿಮಿರಿ ನಿಂತಂತೆ ಆಯಿತು ! ಯಮನ ನಾಲಗೆಯಂತೆ ಮೆರೆವ ಖಡ್ಗವನ್ನು ಹಿಡಿದುಕೊಂಡು ಯುವತಿಯರ ಒತ್ತಿನಿಂದ ಭರತೇಶನು ಎದ್ದುಬಂದನು. ಉಟ್ಟಿದ್ದ ಪಟ್ಟೆ, ತೊಟ್ಟಿದ್ದ ಭೂಷಣ ಸಹಿತ ಬಿಟ್ಟ ಸೆರಗನ್ನು ಎಡಗೈಗೆ ಸುತ್ತಿಕೊಂಡು ನಿಸ್ಸೀಮರೊಡೆಯನಾದ ಭರತೇಶನು ಹೊರಬಂದನು. ನಿಡುದೋಳನ್ನು ನೀಡಿ, ಹಿಡಿದ ಖಡ್ಗವನ್ನು ಒತ್ತಿ ಝಡಿದು, ಚಕ್ರೇಶ್ವರನು ನೋಡಿದನು. ಆಗ ಭೂಕಂಪವಾದಂತೆ, ಸಮುದ್ರ ಉಕ್ಕಿದಂತೆ ಆಯಿತು. ಅಷ್ಟರಲ್ಲಿ ಕೂರಸಿ ಧರಿಸಿದ ಕುವರರೂ ಅಲ್ಲಿಗೆ ಬಂದು ಕೈಮುಗಿದು ನಿಂತರು. ಗಣಬದ್ಧರೂ ಒದಗಿಬಂದರು. ಮುಂದಿರುವ ಫೌಜನ್ನು ನೋಡುತ್ತಿರುವಾಗ ಶೂರರೂ ವೀರರೂ ಮುಂದೆ ಬಂದು ಚಕ್ರಿಗೆ ಮಣಿದು ಕಾರ್ಯಗತಿಯನ್ನು ಪ್ರಶಂಸಿಸಿದರು. ''ಗುರುಹಂಸನಾಥ! ಅಮ್ಮಾಜಿ ಬಿಜಯ ಮಾಡಿದ ಪರಿಯೆ ಭಾಪು!'' ಎಂದು ನಗುತ್ತ ಕರವಾಳವನ್ನು ಭಟನ ಕೈಗಿತ್ತನು. ಶೂರ ವೀರರಿಗೆಲ್ಲ ಮನ್ನಣೆಮಾಡಿದನು. ಗಾಳಿಯೆದ್ದಷ್ಟರಲ್ಲಿ ಪುಷ್ಪಕವು ಬಂದು ಹೊರ ಪಾಳೆಯಿಂದ ಒಳಹೊಕ್ಕಿತು. ಮೇಲಿನ ಲೋಕದ ದಿವಿಜೆಯಂತೆ ಯಶಸ್ವತೀ ದೇವಿ

ಪುಷ್ಪಕದಿಂದ ಇಳಿದಳು. ಹೊದೆದ ದೂವಟುವನ್ನೆ ನಿವಾಳಿಯಿಟ್ಟು ತನ್ನತಾಯಿ ಇದಿರಲ್ಲಿ ಭರತೇಶನು ಸಾಷ್ಟಾಂಗವೆರಗುವಷ್ಟರಲ್ಲಿ ತಾಯಿ ಕೈಯೊಡ್ಡಿ ತಡೆದಳು.

''ಆದುಟಿಲ್ಲ; ನಾನು ಅಡ್ಡಬೀಳಬೇಕು.'' ಎಂದನು ಭರತೇಶ.

''ಬೀದಿಯಲ್ಲಿ ಬೇಡ'' ಎಂದಳು ಯಶಸ್ವತೀದೇವಿ.

ಅವರಿಬ್ಬರಲ್ಲಿ ವಾದವಾಗುತ್ತಿದ್ದಾಗಲೇ ಅರ್ಕಕೀರ್ತಿಯು ವಸ್ತ್ರವನ್ನು ಹಾಸಿದನು. ಚಕ್ರಿಯು ಆದರದಿಂದ ಅಡ್ಡಬಿದ್ದನು. ಕೂಡಲೆ ಆ ಜಗನ್ಮಾತೆಯು ಅವನನ್ನೆತ್ತಿ ತಕ್ಕೈಸಿ ಮೈಯ್ದಡವಿ ಹರಸಿದಳು. ''ಪಿರುಜವ್ವನವು ಜಾರದೆ, ನರೆ ತಲೆದೋರದೆ, ಚಿರ ಬಾಳು ಕಂದ. ಆರು ಖಂಡವನ್ನು ಬಹುದಿನ ಆಳಿ, ಮುಕ್ತಿಯನ್ನು ಸೂರೆಗೊಳ್ಳು.''

ತಕ್ಕೈಸಿದಾಗ ಅವರಿಬ್ಬರ ಮೈಯುಬ್ಬಿ ಪುಳಕಗಳು ಕಿಕ್ಕಿರಿದವು. ಉಕ್ಕುವ ಆನಂದಾಶ್ರು ಸೆರೆಗಳೆದ್ದುವು. ತಾಯಿ ಮಕ್ಕಳ ಮೋಹವಿನ್ನೆಂತೊ! ''ಅರವತ್ತು ಸಾವಿರ ವರ್ಷವಾಯಿತಣ್ಣಾ ನೀನು ನನ್ನ ಪಕ್ಕದಿಂದ ಅಗಲಿ. ಮರಿಯಾನೆ ! ಇಂದು ಸಂಟಿಸಿದೆ'' ಎಂದು ಅಪ್ಪಿಕೊಂಡು ಮರುಕದಿಂದ ನುಡಿದಳು.

''ಜಿನಸಿದ್ಧ ! ವರ್ಷ ಅಷ್ಟಾಯಿತೆ ಅಮ್ಮಾಜಿ?''

''ಮಗು. ಅದು ತಪ್ಪಲ್ಲ; ನಾನು ಲೆಕ್ಕಗೊಂಡಿರುವೆ'' ಎಂದವಳು ಹೇಳಿದಾಗ ಚಕ್ರಿ ತಲೆದೂಗಿದನು. ಮತ್ತೆ ಅರ್ಕಕೀರ್ತಿ ನಿವಾಳಿಯಿಟ್ಟು ಅಡ್ಡಬಿದ್ದು ಎದ್ದನು. ಒತ್ತಿನ ಸುತರೆಲ್ಲರೂ ಅವನಂತೆ ಎರಗಿದರು. ''ಪುರದಿಂದ ಹೊರಡುವಾಗ ಅರ್ಕಕೀರ್ತಿಯೊಬ್ಬನೇ ತೊಟ್ಟಿಲಲ್ಲಿರಲಿಲ್ಲವೇ? ಈ ನೆರೆದ ಕುವರರೆಲ್ಲರೂ ಅವನ ಸೋದರರು.'' ಎಂದು ಭರತಚಕ್ರಿ ಸೂಚಿಸಿದನು.

ಆಗ ಯಶಸ್ವತೀದೇವಿ ಅರ್ಕಕೀರ್ತಿಯನ್ನು ತಕ್ಕೈಸಿ ಹರಸಿದಳು. ಅಲ್ಲಿದ್ದ ''ಕುಮಾರರನ್ನು ಹರಸಿದಳು. ಜಿನ ! ಜಿನ ! ನಿನ್ನಂತೆ ಪುಣ್ಯವರ್ಧನರು ಯಾರಿದ್ದಾರೆ. ಭರತಣ್ಣ? ನಿನ್ನ ಪುತ್ರರು ನರಲೋಕದವರಲ್ಲ, ಈ ಕಡುಚೆಲುವರನ್ನು ಸುರಲೋಕದಿಂದ ತಂದೆಯಾ?''

ಮಕ್ಕಳ ಮಾತಿನ್ನು ಸಾಕೆಂದು ಭರತೇಶನು ಬೇರೆ ಮಾತೆತ್ತಿದನು.

ಮತ್ತೆ ಭರತೇಶನು ತಾಯೊಡನೆ ಮಾತನಾಡಿದನು : ''ನೀವಿಂತು ಚಿತ್ತೈಸುವುದನ್ನು ಸೂಚಿಸದೆ ತವಕದಲ್ಲಿ ಬರಬಹುದೆ? ನಮ್ಮ ದಂಡನ್ನು ಸಿಂಗರಿಸಿ, ಅಲ್ಲಲ್ಲಿ ನೃತ್ಯಗಳನ್ನು ಅಳವಡಿಸಿ, ನಿಮ್ಮನ್ನು ನಾನು ಇದಿರ್ಗೊಳ್ಳದೆ ತಾವು ಈ ರೀತಿಯಲ್ಲಿ ಬರುವುದೆ?'' ಎಂದು ಸ್ನೇಹದಿಂದ ಸಂಕಟಗೊಂಡವನಂತೆ ನುಡಿದನು. ಅವನ ಹೃದಯದ ಭಾವ ಅಷ್ಟಕ್ಕೇ ತಣಿಯಲಿಲ್ಲ. ''ಚಿನ್ನ ಬೆಳ್ಳಿಯ ಪುಷ್ಪ, ಕಮಲ, ಕಾಶ್ಮೀರಬಾವನ್ನಗಳಲ್ಲಿ ಕಟಕವು ಆಡುತ್ತಿರುವಾಗ, ದೊರೆಗಳನ್ನು ಕೂಡಿಕೊಂಡು, ಸಾಲುಮಕ್ಕಳ ಜೊತೆಯಲ್ಲಿ ನಾನು ನಡೆದು ಬಂದು ಎರಗುವಂತೆ ಮಾಡದೆ ಈ ರೀತಿಯಲ್ಲಿ ನೀವು ಹರಿದಾಳಿ ಮಾಡಬಹುದೆ? ಸಾರಗೆಟ್ಟ ಅಖಿಳ ಕಾರ್ಯಗಳಿಗೂ ಕಟಕವನ್ನು ಉಪಯೋಗಿಸಿಕೊಂಡೆನು. ಗೌರವಾನ್ವಿತರಾದ ಅಂಬಿಕೆಗಿದಿರಾಗಿ ಹಯಗಜರಥಗಳು ಬರಲಾರವೆ? ಅಲ್ಲಲ್ಲಿ ಪಾತ್ರಗಳ ಕಾಣಿಸಿ, ಹೆಣಗುವ ಮಲ್ಲರ ತೋರುತ್ತ, ನಿಮ್ಮ ಪಲ್ಲಕಿಯನ್ನು ಹಿಡಿದು ನಾನು ಓಲೈಸಬಾರದೆ? ಹೀಗೆ ಜಿಲ್ಲನೆ ಬರುವುದೆ?''

ಆದರೂ ಭರತೇಶನಿಗೆ ಸಮಾಧಾನವಾಗಲೊಲ್ಲದು. ಮಾತು ಮುಂದುವರಿಯಿತು. ''ನನಗೆ ಭಾಗ್ಯವಿಲ್ಲ, ದೇವರ ಪಾದಸೇವೆಗೆ ನನ್ನ ಸೇವೆಯು ಯೋಗ್ಯವಲ್ಲ, ಈ ಗೀತ ಪಾತ್ರಗಳು ಭೋಗ್ಯವಲ್ಲ, ಬೇಕಾದ ಸೇವೆಯನ್ನೆಲ್ಲ ನೋಡುವ. ಆಕಾಂಕ್ಷೆ ನಿಮಗಿಲ್ಲ ನನ್ನನ್ನೇಕೆ ಹೆತ್ತಿರಿ? ಷಟ್ಖಂಡವನ್ನು ಆಳೆಂದು ಏಕೆ ಹಾಲುಣಿಸಿದಿರಿ?'' ಎಂದು ವೈರಾಗ್ಯವು ಕೈಮಿಗಲು ನೊಂದು ನುಡಿದನು.

''ಅಂತು ನೋಯದಿರಣ್ಣ, ನನಗೆ ಈ ಲೋಕಾಂತವರ್ತನೆಗಳು ಸೇರುವುದಿಲ್ಲ, ಹೀಗೆ ಒಳ್ಳಿತು. ಏಕಾಂತದಲ್ಲಿ ಕಂಡಾಗ ನನಗೆ ಸಂತೋಷವಾಗುವುದು. ತುಂಬಿದ ಕೊಳದಂತೆ ಪಡೆಯಿರಲಿ; ನಾನು ಏಕಾಕಿಯಾಗಿಲ್ಲಿಗೆ ಬರುವೆನೆಂದಾಗ ನಂಬುಗೆವಂತರು ಇಷ್ಟು ಗದ್ದಲ ಮಾಡಿದರು'' ಎಂದು ತಾಯಿ ಮಗನನ್ನು ಸಮಾಧಾನಪಡಿಸಿದಳು.

ಆಗ ಯಶಸ್ವತೀದೇವಿಯೊಡನೆ ಬಂದಿದ್ದ ನಂಬುಗೆವಂತರಾದ ಶೂರರು ವಿಷಯ ತಿಳಿಸಿದರು. ''ದೇವ ಬಿನ್ನಹ. ಚಿಕ್ಕಸ್ವಾಮಿ, ದೂತರನ್ನು ದೇವರಲ್ಲಿಗೆ ಮುಂದಾಗಿ ಅಟ್ಟುವೆನೆಂದರು. ಇವರು ಬೇಡವೆಂದೇ ಬಂದರು. ಹಾಗಾಗಿ ನಾವು ಹೀಗೆ ಮಾಡಿದೆವು. ಒಡೆಯರ ಜನನಿ ಚಿತ್ತೈಸಿದರೆಂದಿಷ್ಟು ನುಡಿದೆವು. ಅಷ್ಟರಲ್ಲಿ ಕಟಕವು ಸಡಗರಗೊಂಡಿತು'' ಎಂದವರು ಹೇಳಿದಾಗ ಭರತೇಶನು ಅವರಿಗೆ ಮನ್ನಣೆ ಮಾಡಿದನು.

''ಒಳ್ಳೇದನ್ನೆ ಮಾಡಿದಿರಿ. ನೀವು ಹಾದಿಯಲ್ಲಿಷ್ಟು ಹೇಳಿದ್ದರಿಂದ ಇಷ್ಟಾದರೂ ನೀವು ಗುಟ್ಟಾಗಿ ಬಂದರೂ ನಿಮ್ಮ ಬಲ್ಮೆಯನ್ನು ಮೇದಿನಿಯು ತಿಳಿಯದೇ ಪ್ರಕಟಮಾಡಿತು. ಪೊಡವಿಗೆ ಅಗ್ಗಳೆಯರಾದ ನೀವು ಬಡವರ ಹಾಗೆ ಅಡಿಯಿಟ್ಟರೂ ವಿಪರೀತದಿಂದ ಧರೆನಡುಗಿತು. ಸೇನೆ ಕಲಕಿತು. ನಾನು ಖಡ್ಗಧರಿಸಿ ಇಲ್ಲಿಗೆ ಬಂದೆನು'' ಎಂದು ಭರತೇಶನೇ ನಕ್ಕು ನುಡಿದನು.

''ಸಾಕು. ನಿನ್ನ ಬಲ್ಪನ್ನು ಅದುಮಿಕೊಂಡು ನನ್ನನ್ನೇ ಲೋಕರಂಜನೆ ಮಾಡುವೆ'' ಎಂದು ಆ ತಾಯಿ ವ್ಯಾಕುಲ ಹಿಂಗಿದ ಮಗನ ಮೈದಡವಿ ಸಂತೋಷಪಟ್ಟಳು. ಭರತಚಕ್ರಿಯು ಕೂಡಲೆ ಯಶಸ್ವತೀದೇವಿಯನ್ನು ಹೊರಗಣ ಪೌಳಿಯಿಂದ ನಡುವಣ ಪೌಳಿಗೆ ಅಡಿಯಿಡಿಸಿದನು. ಚಿಕ್ಕಮ್ಮನ ಒಡಹುಟ್ಟಿದ ತಮ್ಮನ ಕ್ಷೇಮವನ್ನು ಕೇಳಿದನು. ನಡುವಣ ಚಾವಡಿಯನ್ನು ಸೇರಿದಾಗ, ತಾಯಿಯನ್ನು ಗದ್ದುಗೆಯಲ್ಲಿ ಕುಳ್ಳಿರಿಸಿ, ಎಡಬಲಗಳಲ್ಲಿ ತಾನೂ ಕುವರರೂ ನಿಂತುಕೊಂಡು ಓಲೈಸಿದರು.

ಅತ್ತೆ ಬಂದುದನ್ನು ಸೊಸೆಯವರು ಕೇಳಿ, ನವ್ಯಸಂಪತ್ತು ಬಂದಂತೆ ಅರ್ತಿಪಡುತ್ತ ಒತ್ತಿಬಂದರು. ತಮ್ಮ ಮನದ ಸಂತಸದಂತೆ ತತ್ತರಗೊಂಡರು.

ಸಡಿಲಾದ ಮುಡಿಯನ್ನು ಸಾಗಿಸದೆ, ಸೇವಕಿಯರನ್ನು ತಾಗದೆ, ಪತಿಗೆ ಶಂಕಿಸದೆ, ಸೊಕ್ಕಿದಾನೆಯ ಹಿಂಡಿನ ತಡೆಯನ್ನು ತೆಗೆದಾಗ ಲಗ್ಗೆಯಿಂದ ಬರುವಂತೆ ಅವರು ನಡೆತಂದರು. ಅಂದುಗೆ ಝಲ್ಲು ಝಲ್ಲೆನಲು, ಬಳೆಕಂಕಣಗಳು ಸಂಧಿಸಿ ಝಣ ಝಣರೆನಲು, ಕುಂದಣಗೆಜ್ಜೆ ನೇವಳಗಳು ಕಿಣಿಮಿಣಿಯೆಲು ರಾಣಿಯರೆಲ್ಲ ನಲಿದು ಬಂದರು. ಅವರ ತನುಕಾಂತಿ ಧಗಧಗಿಸುತಿತ್ತು, ದೇಹ ಗಂಧದ ಪರಿಮಳದ ಹೊಳೆಯೇ ಹರಿದಂತಿತ್ತು, ಕನಕ ತಲೆಗಳ ಸಮೂಹವೇ ನಡೆದು ಬರುವಂತೆ ಸಜ್ಜನ ಸತಿಯರೆಲ್ಲ ಬಂದರು.

ಗೆಲುವಿನಿಂದ ಬರುತ್ತಿರುವ ಸೊಸೆಯರನ್ನು ಅತ್ತೆಯ ಕಣ್ಣುಗಳು ತುಂಬಿಕೊಂಡು ಉಬ್ಬಿ ನಗುತ್ತ ಮತ್ತೂ ನೋಡಿದಳು. ''ನನ್ನನುಜರ ಸುತೆಯರು ಬಂದರೋ, ನನಗೆ ನಲಿವನ್ನು ತಂದರೋ'' ಎಂದವಳು ಭಾವಿಸಿದಳು. ಮೊಗವೆಲ್ಲ ನಗೆ, ತನುವೆಲ್ಲ ಪುಳಕ, ಕಣ್ಣಲ್ಲಿ ಸುರಿವ ಸಂತೋಷಭಾಷ್ಪ! ಹೀಗಿರುವ ಆ ಸೊಸೆಯರು ಅತ್ತೆಯೆಡೆಗೆ ಸಾಗಿ ವಸ್ತ್ರನಿವಾಳಿಯಿಟ್ಟು, ಅವಳ ಪಾದಗಳಿಗೆ ಹಣೆತಾಗಿಸಿ ನಮಸ್ಕರಿಸಿದರು.

ತರತರದಲ್ಲಿ ಬಂದು ನಮಿಸುವ ಸೊಸೆಯರೆಲ್ಲರನ್ನೂ ನೋಡಿ ನಗುತ್ತ ಯಶಸ್ವತೀ ದೇವಿಯು ಅವರ ತಲೆಯೆತ್ತಿ ಪರಿಷೆಯ ದೇವತೆಯಂತೆ ಹರಸುತ್ತಿದ್ದಳು.

ವಂದನೆ ಮುಗಿದ ಮೇಲೆ—

''ಅತ್ತೆಮ್ಮ. ನಾವೆಲ್ಲ ಅಂದು ಕೈಕೊಂಡ ನೇಮಗಳು ಇಂದಿಗೆ ಸಂಪೂರ್ಣವಾದುವು.''

''ಬಸುವ್ರತ ಸಂದುವೆ? ಲೇಸು.''

''ಕಂಡಿರಾ ಅತ್ತೆಮ್ಮ ನಿಮ್ಮಲ್ಲಿ ವ್ರತವನ್ನು ಕೈಕೊಂಡು ಹೋದುದರ ಫಲದಿಂದ ತಲೆಗೆ ಮದ್ದನ್ನು ಇಡದೆ ಸಂತೋಷಪಡೆದು ಬಂದೆವು.''

''ಇವರು ಕೈಕೊಂಡ ವ್ರತವೇನು?'' ಎಂದು ಹೂವಿಂದ ಅಮೃತವನ್ನು ಸೇವಿಸುತ್ತ ನೃಪತಿ ಕೇಳಿದನು.

''ನಾನು ಬೇಡವೆನ್ನುತ್ತಿದ್ದರೂ ಅಂದವರು ಕೇಳದೆ ವ್ರತವನ್ನು ಕೈಕೊಂಡರು. ಏನೆನ್ನಲಿ?'' ಎಂದು ತಾಯಿ ಮಗನಿಗೆ ಉತ್ತರವಿತ್ತಳು.

''ಇವರಷ್ಟು ಭಕ್ತಿ ನನಗಿಲ್ಲದಾಯಿತು. ನೇಮವನ್ನು ಮಾಡಲಿಲ್ಲ.''

''ಅವರ ಭಕ್ತಿಯೆ ನಿನ್ನದಲ್ಲವೆ? ನೋಯದಿರು'' ಎಂದು ನೊಂದ ಮಗನನ್ನು ತಾಯಿ ಸಂತವಿಸಿದಳು.

ಮುನ್ನಿನ ಸತಿಯರು ನಮಿಸಿದ ಕೂಡಲೆ ಹೊಸ ಕನ್ನೆಯರು ಬರುತಿದ್ದರು. ಅವರನ್ನು ನೋಡಿ, ''ಇವರೂ ನನ್ನನುಜನ ಸುತೆಯರೋ?'' ಎಂದು ಯಶಸ್ವತೀದೇವಿ ವಿಚಾರಿಸಿ ಕೊಂಡಳು. ಅತ್ತೆಗಿದು ತಿಳಿಯದು ಚೆನ್ನಾಯಿತೆಂದು ಅಲ್ಲಿದ್ದ ಸೊಸೆಯರು ಹೇಳಿಕೊಂಡರು. ಉದ್ದಂಡರಾಜನ ಪುತ್ರಿಯರೂ, ಖೇಚರರ ಪುತ್ರಿಯರೂ ನಿವಾಳಿಯಿಟ್ಟು ಎರಗಿದರು. ದೇವಿ ಮುದ್ದಿಂದ ಹರಸಿದಳು. ಸೊಸೆಯರು ನಮಿಸಿದ ಮೇಲೆ ಸೊಸೆಯರ ಸೊಸೆಯರು ನಮಿಸಿದರು.

ಆಗ ಚಕ್ರೇಶನು ತಾಯೊಂದಿಗೆ ಸಂತೋಷದಿಂದ ನುಡಿದನು. ''ನಿಮ್ಮ ಸೊಸೆಯರನ್ನು ನೀವಂದು ಹರಸಿದ್ದರಿಂದ ಇಂದು ಸಮ್ಮಾನದಲ್ಲಿ ಬಾಳುತಿದ್ದಾರೆ, ಅಮ್ಮಾಜಿ. ಇವರು ನಮ್ಮ ಸೊಸೆಯರು, ಇವರನ್ನೂ ನೋಡಿ, ನೀವು ಹರಸಬೇಕು.''

''ಹೌದೇ ಅರಸಣ್ಣ, ನಿನ್ನ ಸೊಸೆಯರು ನನ್ನ ಮಹಿಮೆಯ ಸೊಸೆಯರಂತೆ ಬಹುಸುಖದಲ್ಲಿ ಬಾಳಲಿ.'' ಎಂದು ಮಗನ ವಿನೋದಕ್ಕಾಗಿ ಗಹಗಹಿಸಿ ನಕ್ಕಳು.

ಸರ್ವರೂ ಬಂದರೂ ಅಕ್ಕಾಜಿಯೇಕೆ ಬರಲಿಲ್ಲವೆಂದು ಹೆಣ್ಣುಗಳು ನೋಡುತ್ತಿರುವಾಗ, ಭೂಮಿಯ ಸಿರಿಯು ಬರುವಂತೆ ಸಾರ್ವಭೌಮ ಪಟ್ಟದರಸಿಯು ಬಂದಳು.

ಸಿಂಗರಿಸಿದ ಸಖಿಯರ ಸಮೂಹದಲ್ಲಿ ತನ್ನಂಗ ಶೃಂಗಾರವು ವೆಗ್ಗಳಿಸುವಂತೆ ಅಂಗದ ಕಾಂತಿಯಲ್ಲಿ ಮಡುಗಟ್ಟಿ ತುಳುಕುವಂತೆ ಸುಭದ್ರಾದೇವಿ ವಿಲಾಸದಿಂದ ಬಂದಳು. ತುಂಬು ಜವ್ವನ, ತುಂಬಿದ ಅಂಗ, ಮತ್ತೆ ಅದರಲ್ಲಿ ತುಂಬಿ ತುಳುಕುವ ಲಾವಣ್ಯ! ತುಂಬಿದ ಸೌಂದರ್ಯದಲ್ಲಿ ಬರುತ್ತಿದ್ದ ಸೊಸೆಯನ್ನು ಯಶಸ್ವತೀ ದೇವಿಯು ಪ್ರೀತಿಯಿಂದ ಕಣ್ತುಂಬ ನೋಡುತ್ತಿದ್ದಳು.

''ಕಚ್ಛೇಂದ್ರ ಸುತೆ ಸುಭದ್ರಾದೇವಿ ಗುಣರತ್ನಗುಚ್ಛದಲ್ಲಿ ಶೋಭಿಸುವ ಸ್ತ್ರೀ ರತ್ನ ! ಅಬ್ಧಾವಾಧಾನ ಸಾರಿ ಬರುತ್ತಿರುವಳು.'' ಎಂದು ಕಂಬಿಕಾಂತಿಯರು ತಿಳಿಸಿದರು.

''ನಿಲ್ಲಿರೌ ರಚ್ಚೆ ಸಾಕು'' ಎಂದು ಕೈಸನ್ನೆಯಲ್ಲೆ ಎಲ್ಲರನ್ನೂ ಸುಮ್ಮನಿರಿಸಿ ಗಂಭೀರವನ್ನು ಎಲ್ಲರಿಗೂ ತಿಳಿಸುವಂತೆ ಸುಭದ್ರಾ ದೇವಿಯು ಬಂದಳು.

''ತಡವೇಕೆ? ನಿಮಗಿಷ್ಟು ಹೊತ್ತಕ್ಕೆ?''

''ಕಡೆಯಲ್ಲಿ ಬಂದವಳು ನಾನು. ನಿಮ್ಮೊಡನೆ ಬರುವುದು ಬೆಡಗೆ?''

ತಂದೆಯೊಡನೆ ಹುಟ್ಟಿದವಳಲ್ಲವೆ. ತನ್ನ ತಂದೆಯನ್ನು ಕಂಡಂತೆ ಆ ಸೊಸೆಯು ನಲಿದು ಬಂದಳು. ಸೊಸೆಯು ಬಂದಾಗ ತನ್ನಣ್ಣ ಬಂದಂತೆ ಆ ದೇವಿ ಸಂತೋಷಪಟ್ಟಳು. ಪಟ್ಟೆನಿವಾಳಿಯಿಟ್ಟು ಜೊತೆಗೊಂದು ಹಾರವಿಟ್ಟು ಸುಭದ್ರಾ ದೇವಿ ಎರಗಿದಳು. ಅತ್ತೆಯು ಅವಳನ್ನು ತೆಗೆದಪ್ಪಿಕೊಂಡು ಅಕ್ಕರೆಯಿಂದ ಹರಸಿದಳು. ''ಕಿರಿಯಂದು ನಿಮ್ಮನ್ನು ಕಂಡಿದ್ದೆನು. ಅಷ್ಟಕ್ಕೆ ಪೊರಸಾರಿ ದೂರ ಹೊರ ಹೋದಿರಿ ನೀವು. ಇಂದು ನಿಮ್ಮನ್ನು ಕಂಡು ನನ್ನ ಕಣ್ಣರ್ತಿಗೊಂಡಿತು'' ಎಂದು ಸೊಸೆ ನುಡಿದಳು. ಅಣ್ಣನನ್ನೇ ಕಂಡಂತಾಯಿತು, ತನಗೆಂದು ಅತ್ತೆ ನುಡಿದಳು. ಹೀಗೆ ಇಬ್ಬರ ಹೃದಯಗಳೂ ಹಣ್ಣಾದುವು. ಕಣ್ಣುಗಳಲ್ಲಿ ಇಬ್ಬರಿಗೂ ಆಶ್ರುವುಕ್ಕಿತು. ಸೋದರಿಕೆಯ ಮೋಹವೆಷ್ಟಿದೆ !

ಅಷ್ಟರಲ್ಲಿ ಘಳಿಯಾರದಲ್ಲಿ ಶಂಖನಾದವಾಯಿತು. ಇನ್ನು ಆರೋಗಣೆಗೇಳುವುದೆಂದು ತಾಯಿಯನ್ನು ಭರತೇಶ ಬಿನ್ನವಿಸಿದನು. ಅಷ್ಟರೊಳಗೆ ಊಳಿಗದ ಹೆಣ್ಣುಗಳು ಬಂದು ನಿವಾಳಿಯಿಟ್ಟು ಅಡ್ಡಬಿದ್ದರು. ಯಶಸ್ವತೀದೇವಿ ಅವರನ್ನು ಹರಸಿದಳು. ಮಗನಿಗೆ, ಮೊಮ್ಮಕ್ಕಳಿಗೆ, ಸೊಸೆಯರಿಗೆ, ಸೊಸೆಯರ ಸೊಸೆಯರಿಗೆ, ಊಳಿಗದವರಿಗೆ–ಹೀಗೆ ಎಲ್ಲರಿಗೂ ಉಡುಗೊರೆಯಿತ್ತಾಗ ಅವರೆಲ್ಲರೂ ಸಂತೋಷಗೊಂಡರು.

ಎಲ್ಲರಿಗೂ ಹೊಸಹಬ್ಬವಾಯಿತು.

ಚಾವಡಿಯಿಂದೆದ್ದ ಸರ್ವರು ಬೇರೆ ಬೇರೆ ಆವಾಸಗಳನ್ನು ಸೇರಿ, ಮಿಂದು, ದೇವಪೂಜೆಯನ್ನು ಮಾಡಿ ಭೋಜನಗೃಹಕ್ಕೆ ಮಹಾವಿಭವದಿಂದ ಹೊಕ್ಕರು. ತನ್ನ ಸೊಸೆಯರ ಫೌಜು ಬರುವವರೆಗೂ ಆ ಜಗನ್ಮಾತೆಯು ಭೋಜನಶಾಲೆಯಲ್ಲಿ ಉಯ್ಯಾಲೆಯಲ್ಲಿ ಅಭಿರಾಜಿಸುವ ಗದ್ದುಗೆಯಲ್ಲಿದ್ದಳು. ಅಷ್ಟರಲ್ಲೆ ಅವರೆಲ್ಲರೂ ಅಲ್ಲಿಗೆ ಬಂದರು. ತಾಯಿಯನ್ನು ಪೂಜಿಸುವೆನೆಂದು ಭರತೇಶನು ಒಂದಿಷ್ಟು ದೂರದಲ್ಲಿ ಸಿಂಹಾಸನವನ್ನಿಡಿಸಿ ಚಿತ್ತೈಸಬೇಕೆಂದು ಆಕೆಯನ್ನು ಕೇಳಿಕೊಂಡನು.

''ಅಂದೊಮ್ಮೆ, ಪರ್ವೋಪವಾಸದ ನೆವನದಿಂದ ಸಂಧಿಸಿದಾಗ ಪೂಜೆಗೊಪ್ಪಿದೆನು. ಇಂದೊಲ್ಲೆ. ನನಗೇಕೆ ಪೂಜೆ? ಸುಮ್ಮನಿರು.'' ಆ ಜನನಿ ನಂದನನಿಗೆ ಹೇಳಿದಳು.

"ಇನ್ನೊಮ್ಮೆ ನನ್ನರ್ತಿಯನ್ನು ಸಲ್ಲಿಸಿ, ಹೊನ್ನಗದ್ದುಗೆಗೆ ಚಿತ್ತೈಸಿ."

"ಚೆನ್ನಲ್ಲ. ನಾನೊಲ್ಲೆ" ಎಂದು ಏಳದೆ ಬಿನ್ನಾಣದಲ್ಲಿದ್ದಳು. ಆಗ ಚಕ್ರಿಯು ಅರ್ಕಕೀರ್ತಿಯೊಡನೆ ಇದಕ್ಕೊಂದು ತಂತ್ರವನ್ನು ಹೇಳೆಂದು ಕೇಳಿದನು. ಮೇಲಿದ್ದ ಗದ್ದುಗೆಯನ್ನೇ ಎತ್ತಿ ತರುವನೆಂದನು ತಂದೆಯ ಕಿವಿಯಲ್ಲಿ ಹೇಳಿದನು. ಅವನನ್ನು ಬಿಟ್ಟು ಆದಿರಾಜನನ್ನು ಕೇಳಿದರೆ, ಅಜ್ಜಿಯಿದ್ದಲ್ಲಿಯೇ ಇರಲಿ; ಸಂವಿಧಾನಗಳ ಪ್ರವರ ಪೂಜೆಯನ್ನು ಅವರ ಮುಂದೆಯೇ ಮಾಡುವ ಎಂದು ಕಿವಿಯಲ್ಲೇ ಹೇಳಿದನು. ಆಮೇಲೆ ಮಿಕ್ಕ ಪುತ್ರರೊಡನೆ ಅಮ್ಮಾಜಿಯನ್ನು ಸಿಂಹಾಸನಕ್ಕೆ ತರುವುದಕ್ಕೇನು ತಂತ್ರವೆಂದು ಸಕ್ಕರೆಯಂತಹ ಸವಿಯಾದ ನುಡಿಕಾರನಾದ ಭರತೇಶನು ಕೇಳಿದಾಗ, ತಂದೆಯೂ ಅಣ್ಣಾಜಿಯವರೂ ತಿಳಿಯದ ತಂತ್ರಗಳು ಅವರಿಗೂ ತಿಳಿಯವೆಂದು ವಿನಯದಿಂದ ತಿಳಿಸಿದರು. ಆಗ ಭರತೇಶನೇ ಅವರೊಡನೆ —

"ದೊಡ್ಡಣ್ಣ ಚಿಕ್ಕಣ್ಣ ನಿಮ್ಮ ತಂತ್ರಗಳೆಲ್ಲ ದೊಡ್ಡವಾದವು. ತಂತ್ರಗಳಿಗೆ ಸಡ್ಡಿಲ್ಲ; ಇನ್ನೊಂದು ಮಂತ್ರವುಂಟು. ಅದರಿಂದಲೇ ಒಳ್ಳೆ ಕಜ್ಜವನ್ನು ಮಾಡುವೆನು. ತಂತ್ರವೆಂದರೆ ಮೈಯಾಡಿ ಮಾಡುವ ಕಾರ್ಯ; ತುಟಿಯಾಡಿ ಮಾಡುವುದೇ ಮಂತ್ರದ ಸದರ. ಮಂತ್ರದ ಸಾಮರ್ಥ್ಯವನ್ನು ನೋಡಿ." ಎಂದು ಹೇಳಿದ ಮೇಲೆ ಯಶಸ್ವತಿ ದೇವಿಯನ್ನು ಕೇಳಿದನು.

"ಅಮ್ಮಾಜಿ, ಪೂಜಾಸನಕ್ಕೆ ಏಳಿ."

"ಆ ಮಾತನ್ನು ಹೇಳಬೇಡ"

"ಹೇಳುವುದಿಲ್ಲ, ಒಂದು ಮಂತ್ರಶಕ್ತಿಯ ತಾವು ಲಾಲಿಸಬೇಡವೆ?" ಎಂದವನೇ ಮಂತ್ರ ಹೇಳತೊಡಗಿದನು.

"ಓಂ ಮಹಾಹಂಸನಾಥಾಯ ನಮಃ ಸ್ವಾಹಾ–ಅಮ್ಮಾಜಿ, 'ಏಳಿ, ಏಳದಿರೆ ನಿಮ್ಮ ಭರತಣ್ಣನಾಣೆ ಸ್ವಾಹಾ" ಆಕೆ, ಜುಮ್ಮನಿಸಿಳಿದು ನಿಂದಳು. "ಪಣ್ಣಪಣ್ಣನೆ ನಡೆಯದಿದ್ದರೆ ನಿಮ್ಮ ಚಕ್ರದಣ್ಣನಾಣೆ–ಸ್ವಾಹಾ." ಅಣ್ಣಾ ಆಣೆಯನ್ನು ಬಿಡೆಂದು ಹೇಳುತ್ತ ಅವಳು ನಡೆದಳು. ಸೊಸೆಯರು ನಗುವುದನ್ನು ಕಂಡು ತಾನೂ ನಕ್ಕಳು. "ನೀವು ಹೇಳುವ ಅರಸಣ್ಣನಾಣೆ ಸ್ವಾಹಾ–ಸಿಂಹಾಸನವನ್ನೇರಿ" ಎಂದನು. ಹೆಂಗಸರೆಲ್ಲರೂ ಕೈ ಮುಗಿಯುತ್ತಿರುವಾಗ ಆ ದೇವಿಯು ಮಣೆಯನ್ನೇರಿ ಕುಳಿತಳು.

"ನಿಮ್ಮ ದೊಡ್ಡಣ್ಣನಾಣೆ; ನಮ್ಮ ದೊಡ್ಡಣ್ಣನಾಣೆ; ನಮ್ಮ ಚಿಕ್ಕಣ್ಣ ನಾಣೆ; ನಿಮ್ಮ ಚಿಕ್ಕಣ್ಣನಾಣೆ; ಅಮ್ಮಾಜಿ ಸ್ವಸ್ಥವಾಗಿರಿ–ಸ್ವಾಹಾ." ಎಂದನು ಭರತೇಶ. ಭರತೇಶ ಭುಜಬಲಿಗಳನ್ನು ಆಕೆ ಕರೆವ ಮಾತುಗಳೆ ಭರತೇಶನೂ, ಅರ್ಕಕೀರ್ತಿ ಆದಿರಾಜರನ್ನು ಕರೆವ ಮಾತುಗಳಾಗಿದ್ದವು. ಎಲ್ಲರೂ ನಗುತಿದ್ದರು.

"ಮಗನೆ. ನೀನು ಒಳ್ಳೆ ಮಂತ್ರವನ್ನು ಕಲಿತೆ. ಇನ್ನಿಲ್ಲ ಆಣೆ. ನನ್ನಾಣೆಯೆನಲು ಆಣೆ." ಎಂದವಳು ಹೇಳಿದಳು. ಭರತೇಶನೂ ಇಲ್ಲ–ಇಲ್ಲ ಸ್ವಾಹಾಯೆಂದನು.

"ದೊಡ್ಡಣ್ಣ ಮಂತ್ರಶಕ್ತಿಯನ್ನು ಕಂಡೆಯಾ?" ಎಂದು ಅರ್ಕಕೀರ್ತಿಯನ್ನು ಕೇಳಿದಾಗ, ಅವನು ಹೊದೆದ ದೂವಟವನ್ನೇ ನಿವಾಳಿಸಿ ನಮಸ್ಕಾರ ಮಾಡಿದನು. ಆದಿರಾಜನೇ ಮೊದಲಾದ ಕುವರರೂ ಆ ದಿನ ಹೊದೆದ ವಸ್ತ್ರಗಳನ್ನೇ ಆದರದಿಂದ

ನಿವಾಳಿಯಿಟ್ಟು ಭರತೇಶನ ಪಾದಗಳಿಗೆರಗಿದರು. ಅದನ್ನು ನೋಡಿದ ಗುಣರಾಜನೆಂಬ ಚಿಣ್ಣನು ತೊಟ್ಟ ಕುಪಸವನ್ನೇ ನಿವಾಳಿಯಿಟ್ಟು ಮಣಿದನು. ಗುರುರಾಜನೆಂಬ ಕಿರುಗೂಸು ದಾದಿಯ ಕೈಯ ಅಂಗದಟ್ಟೆಯನ್ನೇ ಎಳೆದಿಟ್ಟು ಕಾಲಿಗೆರಗಿತು. ಇದಕ್ಕೆ ಎಲ್ಲರೂ ಚೋದ್ಯಪಟ್ಟರು. ಆಗ ಸುಖರಾಜನೆಂಬ ಎಳೆಗೂಸು ಕೈಯಲ್ಲಿದ್ದ ಗಿಲಿಕೆಯನ್ನೂ, ಮೆಲುತಿದ್ದ ಬಾಳೆಹಣ್ಣನ್ನೂ ನಿವಾಳಿಯಿಟ್ಟು ಎರಗಿದನು.

ತರಳರು ಎರಗಿದ ಅಂದವೇನೆಂದು ಭರತೇಶನು ಹೆಂಗಳೆಯರನ್ನು ಕೇಳಿದರೆ ತಾವದನ್ನು ಅರಿಯೆವೆಂದು ತಿಳಿಸಿದರು "ಅಹುದೇ? ನಿಮ್ಮ ಅತ್ತೆಮ್ಮನ ಅರುಣಾಂಘ್ರಿಯ ಆಣೆ." ಎಂದವನು ನುಡಿದನು.

"ಆಣೆಯೇಕೆ? ಅಯ್ಯಗೆ ಸುತರು ಎರಗುವುದಿಲ್ಲವೆ?" ರಾಣಿಯರು ಒಯ್ಯನೆ ಹೇಳಿದರು. "ಇವರಿಗಿದು ನಿವಾಳಿಯಿಡುವ ಪ್ರಾಯವೇ? ಚಿಕ್ಕಮಾಣಿಗಳಲ್ಲವೆ?" ಎಂದು ಭರತೇಶನು ಉತ್ತರವಿತ್ತನು.

"ದೊಡ್ಡಣ್ಣನೊಡನೆ ಚಿಕ್ಕಣ್ಣ ಮುಂತಾದವರು ನಿವಾಳಿಸುತ್ತ ಅಡ್ಡಬಿದ್ದರು. ಹೆಡ್ಡರಲ್ಲ, ಅದನ್ನು ಕಂಡು ಇವರೂ ನಮಿಸಿದರು. ಇದು ದೊಡ್ಡಣ್ಣನ ಒಳ್ಪು." ಅವರೆಂದರು.

"ಅದು ಸುಳ್ಳು. ನಿಮ್ಮ ದೊಡ್ಡಣ್ಣನ ಕಡೆಗೆ ನೀವು ಬಾಗಿದಿರಿ. ನಾನು ಒಪ್ಪೆನು."

"ನಿನ್ನ ಸುತರು ನಿನ್ನಂತೆ ಚತುರರು" ಎಂದು ತಾಯಿಯು ಸಂತೋಷದಿಂದ ಹೇಳಿದಳು.

"ತಮ್ಮ ದೊಡ್ಡಣ್ಣನವರನ್ನು ಅವರು ಕೀರ್ತಿಸಲು, ನೀವು ನಿಮ್ಮ ದೊಡ್ಡಣ್ಣನನ್ನು ಹೊಗಳಲು, ನನ್ನ ಚಿತ್ತಕ್ಕೆ ಬರುವುದಿಲ್ಲವೆ? ಇವರೋಜೆಗೆ ಭರತಾಂಕನ ಅಮ್ಮಾಜಿಯ ಅತಿಶಯವೇ ಕಾರಣ." ಭರತೇಶನೆಂದನು.

ಅದನ್ನೇ ಸರಿಯೆಂದು ರಾಣಿಯರೂ ಅಣುಗರೂ ಒಪ್ಪಿದರು. ಭರತೇಶನಾಗ ಹೃದಯ ತುಂಬಿದ ಆರ್ಶಿಯಿಂದ ಮಕ್ಕಳಿಗೆಲ್ಲ ವಸ್ತ್ರಾದಿಗಳನ್ನು ತರಿಸಿಕೊಟ್ಟನು. ಅವರೆಲ್ಲ ಸಂತೋಷದಿಂದ ಹೋದರು.

"ನೀನಿಂತು ವಿನೋದದ ಮಾತುಗಳನ್ನಾಡುತಿದ್ದರೆ ಏಕಾಂತವೆಂತಾದೀತು? ಈ ಮಾತೇ ಹಬ್ಬಿ ಲೋಕಾಂತವಾಗುವುದು." ಎಂದು ತಾಯಿ ಮಗನೊಡನೆ ನುಡಿದಳು. "ತಾಯ ಮುಂದೆ ನಾನು ಶಿಶುವಲ್ಲದೆ ನಾನೊಬ್ಬ ರಾಯನಲ್ಲ; ನ್ಯಾಯವಾಗಿಯೂ ನನಗಿಲ್ಲ ಮಕ್ಕಳಾಟಿಕೆ; ಮಿಕ್ಕಲ್ಲಿ ಗುರುತ್ವ."

"ಮಂತ್ರದಿಂದ ತರುವೆನೆಂಬುದಕ್ಕೆ ಇಷ್ಟು ಆಣೆಯೇಕೆ? ಎಂದಾಕೆ ಹೇಳಿದಾಗ, ನೂರು ಮಂದಿ ಊಳಿಗದ ಹೆಣ್ಣುಗಳನ್ನು ಸಾಲಾಗಿ ನಿಲ್ಲಿಸಿ ನಾಲಗೆಯನ್ನು ಮಿಡುಕಿದನು. ಕೂಡಲೇ ಅವರು ಮಣೆಯ ಮೇಲೆ ಸಾಲಾಗಿ ಕುಳಿತಿದ್ದರು. ಮತ್ತೊಮ್ಮೆ ಮಂತ್ರಿಸಲು ಮಣೆಯ ಮೇಲಿದ್ದವರು ಒಳಬಂದು ಮೊದಲಿನಂತಿದ್ದರು. ಅದನ್ನು ನೋಡಿದ ಜನನಿಯೂ ರಾಣಿಯರೂ ಬೆರಗಾದರು.

"ಧರೆಯನ್ನೇ ಅತ್ತಿತ್ತ ಮಾಡುವ ಮಂತ್ರಗಳಿವೆ. ಶ್ರೀ ಗುರುಹಂಸನಾಥಾರ್ಚಿ ನಾನು, ನನ್ನೊತ್ತಿಗೆ ಆ ಮಂತ್ರಗಳು ಬರಲೆಂದು ಆಣೆಯಿಟ್ಟೆ" ಎಂದು ಭರತೇಶನೇ ತಿಳಿಸಿದನು.

ಅನಂತರ ಭರತೇಶನೊಂದು ವಿನೋದವನ್ನು ಮಾಡಿದನು. ಅವನು ಮಂತ್ರಿಸಲು ನೂರು ಮಂದಿ ಹೆಂಗಳೆಯರ ಮೊಗಗಳೂ ಬಾಗಿ ಹೋದವು. ಮತ್ತೆ ಮಂತ್ರಿಸಲು ಸರಿಯಾದುವು. ಇದಕ್ಕೆ ಎಲ್ಲರೂ ಅಚ್ಚರಿಗೊಂಡರು. ನಾಡಿನ ವ್ಯಂತರರೆಲ್ಲರು ಅವನ ಸೇವಕರಾದುದರಿಂದ ಆ ಧ್ಯಾನವಿಜ್ಞಾನಿಯು ಏನನ್ನು ಮಾಡಲಾರ? ಮಂತ್ರಶಕ್ತಿಯನ್ನು ತೋರುತಿದ್ದಾಗ ಒಂದು ಸರಸವನ್ನು ನೆನೆದು ಮಂತ್ರಿಸಿದನು. ನೆರವಿಯಲ್ಲಿದ್ದ ಮಧುವಾಣಿಯ ಮುಖವು ಥಕ್ಕನೆ ಡೊಂಕಾಯಿತು. ಎಲ್ಲರೂ ನಕ್ಕರು, ಇದ್ದವರೆಲ್ಲರ ಮುಂದೆ ನಾಚುತ್ತ ಅವಳು ಬಂದು ಭರತೇಶನ ಕಾಲಮೇಲೆ ಬಿದ್ದಳು. "ಎದ್ದು ನಿಲ್ಲು; ನಿನ್ನಮುಖವು ಎಂದಿನಂತಾಗಿದೆ;" ಎಂದವನು ಹೇಳಿದೊಡನೆ ಅವಳು ಎದ್ದು ನಿಂತಳು. ಮುಖವು ಮೊದಲಿನಂತಾಯಿತು.

"ಧಾರೆಯನ್ನೆರೆವಾಗ ಕೈಯೊಡ್ಡಲು ನೀನಂದು ಕೊಂಕುನುಡಿದುದನು ಮರೆತೆಯಾ? ಅದರಿಂದ ಹೀಗಾಯಿತು. ಇನ್ನಾದರೂ ನಮಗೆ ಅಳುಕಿರು."

"ಅಂದು ನುಡಿದರೇನು? ಮತ್ತೆ ನಿಮ್ಮತ್ತೆಗೆ ವಂದಿಸಿದಾಗ ನಾನು ನಿಮ್ಮನ್ನು ಚಂದದಿಂದ ಹೊಗಳಿದೆನಲ್ಲವೆ? ಸರ್ವರ ಇದಿರಲ್ಲೂ ಹೀಗೆ ಮಾಡುವುದೆ?"

"ಮೊದಲು ಡೊಂಕಿನ ಮಾತನ್ನಾಡಿದುದರಿಂದ ಮುಖ ಡೊಂಕಾಯಿತು; ಮತ್ತೆ ಹೊಗಳಿದುದನ್ನು ನೆನೆದು ನಿನ್ನ ಮೋರೆಯನ್ನು ತಿದ್ದಿದೆನು."

"ಘನಮಂತ್ರದಿಂದ ಹೀಗೆ ಮಾಡಿದರೇನಾಯಿತು? ಮುಂದೆ ನಿನಗೆ ಹೇಳತಕ್ಕೊಂದು ದೇವತೆ ನನಗುಂಟು."

"ಅದಕ್ಕೀಗ ವೇಳೆಯಲ್ಲ; ಸೈರಿಸಿಕೋ; ಅದಕ್ಕೂ ಹೇಳುವುದನ್ನು ಹೇಳಿಸುವೆನು" ಎಂದು ನುಡಿದು, ಆಕೆಗೆ ರನ್ನದ ತೊಡಿಗೆಗಳನ್ನಿತ್ತು ನೋಯದಿರೆಂದು ಮನ್ನಿಸಿದನು.

ಅನಂತರ ಭರತೇಶನು ಸರ್ವಚಿಂತೆಗಳನ್ನೂ ಬಿಟ್ಟು ಮಾತೆಯನ್ನು ಭಕ್ತಿಪೂರ್ವಕವಾಗಿ ಪೂಜಿಸಿದನು. ಸರ್ವರಾಣಿಯರೂ ಒಲಿದು ಆರತಿಯೆತ್ತಿದರು. ಅದನ್ನು ನೋಡಿ ಚಕ್ರಿಯು ನಲಿದಾಡಿದನು. ಸಲಿಲ, ಗಂಧ, ಅಕ್ಷತೆ, ಪುಷ್ಪಾನ್ನ, ದೀಪಗುಗ್ಗುಳ ಫಲಾದಿಗಳಿಂದ ತಾಯಿಯನ್ನು ಮಕ್ಕಳೊಡಗೂಡಿ ಪೂಜಿಸಿ ನಮಸ್ಕರಿಸಿದನು. ಕುಲಪುತ್ರರ ಓಜೆಯಿದು. ಪೂಜೆಯಾದ ಮೇಲೆ ಮಂಗಳಾಸನದಲ್ಲಿ ಕುಳಿತು ಎಲ್ಲರೂ ಭೋಜನ ಮಾಡಿದರು. ಭರತಚಕ್ರೇಶನ ಮನೆಯೂಟವೆಂದರೆ ಸುರಲೋಕದ ಔತಣದಂತೆ; ಆಗ ವಿನೋದದಲ್ಲಿ ತಣಿದಿದ್ದರು; ಈಗ ಭೋಜನದಲ್ಲಿ ತಣಿದರು.

## ೨೮

# ಕಾಮದೇವನ ಆಸ್ಥಾನ

ಜನನಿಯನ್ನು ಕಂಡು ಸಂತಸ ತಾಳಿದ ಮರುದಿನದಲ್ಲಿ ಭೇರಿಯು ಸೂಳೈಸುತ್ತಿರುವಾಗ ಭರತೇಶನು ದಂಡೆತ್ತಿ ಮುನ್ನಡೆದನು. ಸೇನೆಯ ಮುಂದೆ ಚಂದ್ರಸೂರ್ಯರಂತೆ ಧ್ವಜಪತಾಕೆಗಳು ಏರಿ ಕಾಣುತಿದ್ದುವು. ಅವುಗಳ ಮುಂಭಾಗದಲ್ಲಿ ಭಾನುಮಂಡಲವೇ ನಡೆಯುವಂತೆ ಚಕ್ರರತ್ನವು ಲೀಲೆಯಿಂದ ಸಾಗುತ್ತಿತ್ತು.

ಹತ್ತೆಂಟು ಪಯಣದ ಮೇಲೆ ಪೌದನಪುರದತ್ತ ಬಂದಾಗ ನಿಂತ ಚಕ್ರರತ್ನವು ಮುಂದೊತ್ತಿ ನಡೆಯದೆ ಅಲ್ಲೇ ನಿಂತುಬಿಟ್ಟಿತು. ಭರತೇಶ ಚಕ್ರಿಗೆ ಎರಗಿದವರ ಭೂಮಿಯಲ್ಲಿ ಚಕ್ರರತ್ನವು ನಡೆಯುವುದು. ವಕ್ರಿಸಿದವರ ಸೀಮೆಯಲ್ಲಿ ಅದು ಪೋಗದೆ ನಿಲ್ಲುವುದು. ಇಲ್ಲಿ ಚಕ್ರರತ್ನವು ನಿಂತುದನ್ನು ನೋಡಿ ಭರತೇಶ್ವರನ ಸೇನಾಚಕ್ರವೂ ವಿಸ್ಮಯಗೊಂಡಿತು.

ಏನು ಕಾರಣ ಈ ಚಕ್ರ ಇಲ್ಲಿ ನಿಂತುದೆಂದು ಭರತೇಶನು ತನ್ನ ಪ್ರಧಾನಿಯನ್ನು ವಿಚಾರಿಸಿದನು. ಬಾಹುಬಲಿಯೇ ಮೊದಲಾದ ಸಹೋದರರು ಬಂದು ನಿನಗೆರಗಬೇಕಾಗಿದೆಯೆಂದು ಪ್ರಧಾನಿಯು ತಿಳಿಸಿದನು. ಕೂಡಲೇ ಚಕ್ರೇಶ್ವರನು ಅಲ್ಲಿಯೇ ಬೀಡು ಬಿಟ್ಟು ತನ್ನ ಒಡಹುಟ್ಟಿದವರಿಗೆ ಲೇಖನವನ್ನು ಅಟ್ಟಿದನು. ಅವರೆಲ್ಲರೂ ಆ ಲೇಖನದ ಅರ್ಥವನ್ನು ಓದಿ ಕೂಡಲೇ ಪೊಡವಿಯ ಆಸೆಯನ್ನೇ ಬಿಟ್ಟರು. ತಂದೆ ಕೊಟ್ಟ ಉಂಬಳಿಯಲ್ಲಿದ್ದು ಅವನಿಗಿನ್ನು ವಂದಿಸಿ ಬಾಳುವುದೇ—ಎಂದವರು ಒಂದನ್ನೂ ಆಡದೆ ಕೈಲಾಸ ಗಿರಿಯನ್ನು ಸೇರಿ ತಂದೆಯೆಡೆಯಲ್ಲಿ ತಪಸ್ಸಿನಲ್ಲಿ ನಿಂತರು. ಭುಜಬಲಿಯ ಹೊರತಾಗಿ, ತೊಂಭತ್ತು ಮೂವರು ದೀಕ್ಷೆಯನ್ನು ಕೊಂಡರೆಂಬ ನುಡಿಯನ್ನು ಕೇಳಿ ಭರತೇಶನು ಮನಸ್ಸಿನಲ್ಲಿ ಮರುಗಿದರೂ ವಿಕ್ರಮಕ್ಕೆ ಮೆಚ್ಚದಿರಲಿಲ್ಲ.

ಎಲ್ಲರಿಗೂ ಓಲೆಯನ್ನು ಕಳುಹಿಸಿದ್ದನು. ಅದರಲ್ಲಿ ಬಂದೆರಗುವುದೆಂಬ ಸೊಲ್ಲಿತ್ತು, ಓದಿ ನೊಂದವರು ತಪಸ್ಸಿಗೆ ನಡೆದರು. ಕಬ್ಬುವಿಲ್ಲಂಗೆ (ಬಾಹುಬಲಿಗೆ) ಓಲೆಯೇ ಹೋಗಿರಲಿಲ್ಲ. ಯೋಚಿಸಿ, ಕೊನೆಗೆ ಕೆಳೆಯರ ಅನುಮತಿಯಂತೆ ದಕ್ಷಿಣಾಂಕನನ್ನು ಪೌದನಪುರಕ್ಕೆ ಕಳುಹಿಸುವುದೆಂದು ನಿರ್ಧರಿಸಿದನು. ದಕ್ಷಿಣಾಂಕನು ಪೌದನಪುರಕ್ಕೆ ಹೋಗಿ ಇಕ್ಷುಚಾಪನನ್ನು ಕರೆದು ತರಬೇಕೆಂದು ಆಜ್ಞೆಯಾಯಿತು. ದಕ್ಷಿಣಾಂಕನು ಕ್ಷೇಮದಲ್ಲೇ ಪೌದನಪುರವನ್ನು ಸೇರಿದನು.

ದಕ್ಷಿಣಾಂಕನು ಪುರವನ್ನು ಸೇರಿದ ಮೇಲೆ ಪಲ್ಲಕ್ಕಿಯಲ್ಲೇ ಸಾಗಿದ ಅವನು ಕೊನೆಗೆ ಕೆಳಕ್ಕಿಳಿದು ಚಾಮರ ವಾದ್ಯ ಮುಂತಾದ ಆತ್ಮಬಲದ ಸಂಪತ್ತಿನಿಂದ ಮುನ್ನಡೆದನು.

ದಕ್ಷಿಣಾಂಕನು ಓದುತ್ತಿರುವ ಅಕ್ಕರಿಗರಿಗೂ ಹಾಡುತ್ತಿರುವ ಗಾಯಕರಿಗೂ ಮೆಚ್ಚುಗೆಯನ್ನು ಕೊಡುತ್ತ ಸಾಗಿದನು. ಆದಿಚಕ್ರಿಯ ಸಖನಾದ ಅವನು ಎಲ್ಲರಿಂದಲೂ ಹೊಗಳಿಸಿಕೊಂಡು ಬರುತ್ತಿದ್ದನು. ನೋಡುವ ನಗುವ, ನುಡಿವ, ಕೊಡುವ ಎಡೆಯಲ್ಲೆಲ್ಲ ಲಕ್ಷಣವಂತನಾದ ಅವನು ಜನರ ಮೋಹಿಸುವಂತೆ, ದಕ್ಷಿಣಾನಿಲನನಂತೆ ಬರುತಿದ್ದನು. ಸಿಂಗರಿಸಿಕೊಂಡ ಆಭರಣಗಳ ಕಾಂತಿ, ಆಡುವ ಚೊಕ್ಕ ನುಡಿಯ ಬಿಂಕ, ದಿಕ್ಕು ದಿಕ್ಕನ್ನು ಬೇಗ ಬೇಗನೇ ನೋಡುತ್ತ ಹೆಜ್ಜೆ ಹಾಕುತ್ತ ಶೋಭೆಯಿಂದವನು ಬರುತಿದ್ದನು.

ದಕ್ಷಿಣಾಂಕನು ಒಂದಿಷ್ಟು ದೂರ ನಡೆದ ಮೇಲೆ ವಾದ್ಯವನ್ನು ನಿಲ್ಲಿಸಿ, ಸುವಿದ್ಯಾವಂತರೊಡನೆ ಪ್ರದ್ಯುಮ್ನರಾಜನ ಪುರದ ಸಂಪತ್ತಿಗೆ ಚೋದ್ಯಪಡುತ್ತ ಬರುತಿದ್ದನು. ಗಂಧದಂಗಡಿ, ಮಾಲೆಗಾರರ ಅಂಗಡಿಗಳು, ಕನ್ನಡಿ ಮಣಿ ಪಸರುಗಳ ಅಂಗಡಿಗಳನ್ನೂ ಪಟ್ಟೆ, ಚೀನಾಂಬರಗಳ ಮೆದೆಯಿರುವ ಅಂಗಡಿಗಳನ್ನೂ ನಿಟ್ಟಿಸುತ್ತ ಅವನು ಬರುತ್ತಿದ್ದನು. ಪನ್ನೀರ ಚೆಂಬುಗಳ ಗುಡ್ಡೆಯಿರುವ, ಸಿರಿಪಚ್ಚೆ, ಪಚ್ಚೆ ಕರ್ಪೂರದ ರಾಶಿಗಳಿರುವ, ಚಿನ್ನಪುಣುಗು, ಸಾದು ಕಸ್ತೂರಿಗಳ ಗುಡ್ಡೆಯಿರುವ ಅಂಗಡಿಗಳು ಅಲ್ಲಲ್ಲಿ ಬಿನ್ನಾಣದಿಂದ ಕಂಗೊಳಿಸುತಿದ್ದುವು. ಶೋಭಿಸುವ ಅಡಿಕೆ, ಬಿಳಿಯೆಲೆ, ಕೈರಗುಳಿಗೆ, ಮುತ್ತಿನ ಸುಣ್ಣವಿರುವ ಅಂಗಡಿಗಳು ಅಲ್ಲಲ್ಲಿದ್ದವು. ಅವುಗಳನ್ನಿವರು ಮೆಚ್ಚಿ ನೋಡುತ್ತಿದ್ದರು. ಕೆಂದಾಳಿಯ ಎಳನೀರು, ದ್ರಾಕ್ಷೆ ಖರ್ಜೂರ, ಮಾದಳ, ಮಾವಿನಹಣ್ಣು ನೇರಳೆಹಣ್ಣುಗಳ ಸಮೂಹದಿಂದ ಶೋಭಿಸುವ ಅಂಗಡಿಗಳನ್ನವರು ನೋಡಿಕೊಂಡು ಮುನ್ನಡೆದರು. ನವಿಲು, ಹಂಸ, ಕೋಗಿಲೆ, ಕೊಂಚೆ, ಪಾರಿವಾಳ, ಗಿಳಿಗಳನ್ನು ಹವಣಿಸಿಕೊಳ್ಳುವ ಕೊಡುವ ಜನರಿಗೆ ಆ ನಗರವು ಕಾಮವನ್ನು ಹೆಚ್ಚಿಸುತಿತ್ತು. ಭೋಗಾಂಗವಲ್ಲದೆ ಯೋಗಾಂಗವಿಲ್ಲ; ಅನುರಾಗವುಂಟು, ವಿರಕ್ತಿಯಿಲ್ಲ, ಪುಷ್ಪಬಾಣನ ಪುರವಲ್ಲವೆ'' ಎಂದು ದಕ್ಷಿಣಾಂಕನು ತಲೆದೂಗುತ್ತ ಬರುತಿದ್ದನು.

''ಉಗುರನ್ನು ತಿದ್ದು; ಹಲ್ಲನ್ನು ಸುಲಿ; ಹುಬ್ಬನ್ನು ತಿದ್ದು.''

''ಸಂಪಗೆ, ಮರುಗ, ಹೊಂಗೇದಗೆ, ಸುರಗಿಯ ಚೊಂಪ—ಮುಂತಾದುವೆಲ್ಲ ಉಷ್ಣ; ಮೊಲ್ಲೆ, ಮಲ್ಲಿಗೆ, ಪದ್ಮ, ಲಾವಂಚಗಳು ತಂಪು.''

''ಕನಕಾಭರಣ, ಕಸ್ತೂರಿ, ಕುಂಕುಮ, ಸಾದುಪುಣುಗು, ಜವಾದಿಗಳೆಲ್ಲ ಉಷ್ಣ; ಪನ್ನೀರು, ಸಿರಿಪಚ್ಚೆ, ಕರ್ಪೂರ, ಪಟ್ಟೆ, ಮುತ್ತಿನಹಾರಗಳೆಲ್ಲ ತಂಪು.''

''ಕಾಲಕಾಲಕ್ಕೆ ತಕ್ಕ ವಸ್ತುವನ್ನು ತಿಳಿವವರು; ಪ್ರೀತಿಸುವವರ ಲೀಲೆಯನ್ನು ತಿಳಿವವರು. ಇನಿದಾದ ಕಲೆಯ ಗುಟ್ಟನ್ನರಿತು ಸುಖಾಬ್ಧಿಯಲ್ಲಿ ತೇಲಾಡಬಹುದು.''

''ಮೋಹವೇ ಮುಕ್ತಿಯಲ್ಲ ಎಂಬುವನ ಬಾಯಹೊಡೆ. ಮೋಹಿಯಲ್ಲದವನನ್ನು ನೋಡದಿರು. ಮೋಹವ ಬಲ್ಲವನು ಎಲ್ಲವನ್ನು ಬಲ್ಲವನು''

''ವ್ಯಸನದ ಉದ್ರೇಕವು ಮೋಹವಲ್ಲ; ಅಸುವಿನ ನೇಮವೆ ಮೋಹವು.''

''ಒಲಿದವಳಿಗೆ ಒಲಿ, ಬರಿಮೋಹದ ಹೆಣ್ಣತ್ತ ತಲೆಯಿಕ್ಕದಿರು. ಒಲಿದ ಚೆಲುವೆಗೆ ಸರ್ವಸ್ವವನ್ನು ಕೊಡು.''

—ಎಂಬ ಮಾತುಗಳು ಬೀದಿಯುದ್ದಕ್ಕೂ ಅಲ್ಲಲ್ಲಿ ಕೇಳುತಿದ್ದುವು, ಈ

ರೀತಿಯಲ್ಲಾಡುವ ಮೋಹಿ ಜನರ ಮೋಹಸಿದ್ಧಾಂತವನ್ನು ಕೇಳುತ್ತ ಅವರು ನಡೆದು ಬರುತ್ತಿರಲು, ಕಂತುವಿನ ಅರಮನೆ ಮುಟ್ಟಲಾಯಿತೆಂದು ತಿಳಿದೊಡನೆ ದಕ್ಷಿಣಾಂಕನಲ್ಲಿ ನಿಂತನು. ಸತ್ತಿಗೆ ಚಾಮರಗಳೊಂದಿಗೆ ಬರುವವರನ್ನೆಲ್ಲ ಅಲ್ಲಿ ನಿಲ್ಲಿಸಿ ತಾನೊಬ್ಬನೆ ಕಡೆಯ ಹಜಾರದ ಮುತ್ತಿನ ಬಾಗಿಲ ಬಳಿಗೆ ನಡೆದನು;

ಕಡೆ ಹಜಾರದ ಮುತ್ತಿನ ಬಾಗಿಲಿಗೆ ಬಂದ ದಕ್ಷಿಣಾಂಕನು, ಅಲ್ಲಿನ ಅವಸರದ ಸೌರಭಾನಿಲನೊಡನೆ ತಾನು ಬಂದುದನ್ನು ಮಾರನಿಗೆ (ಬಾಹುಬಲಿಗೆ) ತಿಳಿಸಬೇಕೆಂದು ಹೇಳಿ ಕಳುಹಿಸಿದನು. ಸೌರಭಾನಿಲನು ಅತ್ತ ಸರಿಯಲು ದಕ್ಷಿಣಾಂಕನು ಅಲ್ಲಿಯೇ ನಿಂತು, ಓಲಗಕ್ಕೆ ಹೋಗುತ್ತಿದ್ದ ಉದ್ದಂಡ ನಾರಿಯರನ್ನು ನೋಡಿದನು.

ಹಾವಭಾವದ ಚೆಳಬಳಿಕೆಯು ರಂಜಿಸುತ್ತಿರಲು, ತನ್ನ ಹಾವದಂತೆ ಒಬ್ಬಳು ಬಂದು, ಕಾಮರಾಯರಿಗೆ ಪುಷ್ಪಮಾಲೆಯನ್ನು ಹಿಡಿದುಕೊಂಡು ಒಳಚಾವಡಿಗೆ ನಡೆದಳು. ಪುಷ್ಪಬಾಣನಿಗೆ ಮೀಸಲಾಗಿ, ಕೆಂಜಾಜಿಯ ಬಾಸಿಗವನ್ನು ಹಿಡಿದುಕೊಂಡು ಕುಶಲೆಯೊಬ್ಬಳು ಹೋಗುತ್ತಿರುವಾಗ ಝುತುತ್ತಿರುವ ತುಂಬಿಗಳಿಗೆ ಚಂಪಕಮಾಲೆಯನ್ನು ಬೀಸುತ್ತ ಒಳಗೆ ಹೋದಳು. ಮುಗುಳು ಮಲ್ಲಿಗೆಯ ಹಾರವನ್ನು ನೀರೆಯೊಬ್ಬಳ ಓಲಗಕ್ಕೆ ಕೊಂಡೊಯ್ಯುತ್ತಿರುವಾಗ ಕಂಡ ಕಾಮುಕರ ದೃಷ್ಟಿಗಳು ಮುಚ್ಚಿಹೋಗುತ್ತಿದ್ದುವು. ಒಬ್ಬಳು, ಘಮಘಮಿಸುವ ಕುಂಕುಮ ಚೂರ್ಣವನ್ನು ತಾವರೆಯೆಲೆಯಲ್ಲಿ ಹಿಡಿದುಕೊಂಡು ಮಕರಾಂಕನಿಗೆ ಮದನಾನುರಾಗವನ್ನು ಕೊಂಡೊಯ್ಯುವಂತೆ ನಡೆದಳು. ಇನ್ನೊಬ್ಬಳು ಅಶೋಕೆಯ ಚಿಗುರುಗಳಲ್ಲಿ ಮಲಯಜಸಾರವನ್ನೊಯ್ದಳು. ಮತ್ತೊಬ್ಬಳು ಪೊನ್ನಕೇದಗೆಯ ಕಠಾರಿಯೊಂದನ್ನು ಅಂಗಜಗೆಂದು ಕೊಂಡೊಯ್ದಳು. ಬೆಟ್ಟದಾವರೆಯ ದೊಡ್ಡಪಾದುಕೆಗಳನ್ನೂ, ಪೊಂಬಾಳೆಯ ಚಾಮರಗಳನ್ನೂ, ಲೀಲೆಗಾರ್ತಿಯರು ಒಳಚಾವಡಿಗೆ ಕೊಂಡುಹೋದರು. ಮಾಣಿಕದ ತೊಡಿಗೆಗಳನ್ನು ತೊಟ್ಟ ಜವ್ವನೆಯೊಬ್ಬಳು, ವೀಣೆಯನ್ನು ಹಿಡಿದುಕೊಂಡು, ಪಂಚಬಾಣನ ಓಲಗಕ್ಕೆ ನಡೆದಳು. ಮದೋನ್ಮತ್ತೆಯಾದ ಒಬ್ಬಳು, ಹಿಡಿದ ಕಿನ್ನರಿಯನ್ನೊಮ್ಮೆ ಮಿಡಿಯುತ್ತ, ತನ್ನಲ್ಲೆ ಆಲಾಪ ಮಾಡುತ್ತ, ತನ್ನ ಎಡಬಲವನ್ನೂ ನೋಡದೆ ಹೋದಳು. ಇನ್ನೊಬ್ಬಳು ಸ್ವರಮಂಡಲವನ್ನು ಹಿಡಿದು ಒಳಚಾವಡಿಗೆ ನಡೆದಳು. ಚೆಂಗು, ದಂಡಿಗೆ, ಶಿತ್ತಿ, ಮುಖವೀಣೆ, ಜಂತ್ರ, ಉಪಾಂಗ–ಮುಂತಾದವುಗಳನ್ನು ಹಿಡಿದುಕೊಂಡು ಗಾನಾಂಗನೆಯೊಬ್ಬಳು ಅಂಗಜನ ಓಲಗಕ್ಕೆ ನಡೆದಳು. ಇವರನ್ನೆಲ್ಲ ದಕ್ಷಿಣಾಂಕನು ನಿಂತು ನೋಡುತಿದ್ದನು.

ಹಲವು ರೀತಿಯ ಬಿರುದಿನ ಅಂಕಮಾಲೆಗಳನ್ನು ಓದಿಸಿಕೊಳ್ಳುತ್ತ ಹಲವು ಮಂದಿ ಓಲಗದ ಹೆಣ್ಣುಗಳು ಒಳಗೆ ನಡೆದರು. ಅಶೋಕೆಯ ಮರವನ್ನು ಒದೆದು ಚಿಗುರಿಸುವ ಬಿರುದಿನವಳೂ, ತಿಲಕವೃಕ್ಷವನ್ನು ಚಿಗುರಿಸುವೆನೆಂದು ಹೇಳಿಸಿಕೊಳ್ಳುವವಳೂ, ಕುರುವಕ ವೃಕ್ಷವನ್ನು ಚಿಗುರಿಪೆನೆಂಬ ಅನುರಕ್ತೆಯೂ ಹೋಗುತ್ತಿರುವುದನ್ನು ದಕ್ಷಿಣಾಂಕನು ನಿಂತಲ್ಲೇ ಇದ್ದು ನೋಡಿದನು. ಚಿತ್ತತ್ವದ ಅನುಭವಗೆಟ್ಟ ತಾಪಸನನ್ನು ಕಾಲ ಗೆಜ್ಜೆಗಳೆಂಬ ಮತ್ತಕಾಶಿನಿಯರನ್ನೂ ಅವನು ನೋಡಿದನು. "ಒಳಗೆ ಆತ್ಮ ಸುಖ; ಹೊರಗೆ ಅಂಗನಾಸುಖ; ಇವು ಇಲ್ಲಿ ಶ್ರೇಷ್ಠವಾದವುಗಳು. ಇನ್ನುಳಿದವೆಲ್ಲ ಅಲ್ಪವಾದವುಗಳು;

ಬೇರೊಂದು ಮಾತನ್ನಾಡುವವನ ಬಾಯನ್ನು ಕುಟ್ಟು'' ಇದು ಭುಜಬಲಿರಾಜನ ಮತವೆನ್ನುವರು ಅಲ್ಲಿ.

ನಾರಿಯರು ಒಳಹೊಕ್ಕರು. ಒಡನೆ ಮೊದಲು ಹೋಗಿದ್ದ ದ್ವಾರ ಸೌರಭನು ಮರಳಿ ಬಂದನು. ದಾರಿಯನ್ನೇ ನೋಡುತಿದ್ದ ದಕ್ಷಿಣಾಂಕಗೆ ತಿಳಿಯಹೇಳಿದನು.

''ಓಲಗವಾಗದ ಮೊದಲು ಬಂದುದರಿಂದ ಸಾವಕಾಶವಾಯಿತು. ಆಲಸ್ಯಮಾಡಿದರೆನ್ನಬೇಡ. ಸ್ವಾಮಿ ಓಲಗವಾದನು; ನೀನು ಬಂದುದನ್ನು ಕೇಳಿ ಆಮೋದಿಸಿದನು; ಬಾ'' ಎಂದವನು ದಕ್ಷಿಣಾಂಕನನ್ನು ಸುಪ್ರೇಮದಿಂದ ಕಾಮನ ಓಲಗಕ್ಕೆ ಕರೆದೊಯ್ದನು.

ಪುತ್ಥಳಿಯ ಕೆಲಸದ ಬಾಗಿಲು; ಕಾಂಚನದ ಭಿತ್ತಿಗಳು ; ಮಾಣಿಕದ ಕಂಭಗಳು; ನೆಲದಲ್ಲಿ ಕಸ್ತೂರಿಯ ಸಾರಣೆ ಹೂಬಲಿಗಳು. ಅವನು ಅವುಗಳನ್ನು ನೋಡುತ್ತ ಮೆಲ್ಲ ಮೆಲ್ಲನೆ ನಡೆದನು.

''ಬರುತ್ತಿರುವ ಇವನಾರು? ದಕ್ಷಿಣಾಂಕನು ಪಂಚಶರನನ್ನು ನೋಡಲು ಹೋಗುವೆನೋ? ಭರತೇಶನೆಲ್ಲಿರುವನು? ಇವನೇಕೆ ಬಂದನು?'' ಎಂದು ಅಲ್ಲಲ್ಲಿ ಅರಗಿಳಿಗಳು ನುಡಿದುವು.

''ದೊಡ್ಡಸ್ತಿಕೆಯ ದೊರೆಯ ಗೆಳೆಯನೆಂಬ ಗರ್ವವೋ? ಪಂಚಶರನಾದ ದೊರೆಯ ಸಭೆಗೆ ಒಂದಿಷ್ಟು ತಗ್ಗಿ ಬಾ ; ನೋಡಿ ಬಾ ; ಮೆಲ್ಲನೆ ಬಾ.'' ಎಂದು ಹೆಗ್ಗಾರಗಳು ನುಡಿದವು.

''ಕಾಮನೆಡೆಗೆ ವೀರರನ್ನೂ ಕವಿಗಳನ್ನೂ ಕಳುಹಿಸದೆ ಪ್ರವೀಣನಾದ ದಕ್ಷಿಣನನ್ನು ಏಕೆ ಅಟ್ಟಿದನು? ಭರತೇಶನು ಜಾಣನೇ?'' ಎಂದು ಬಾಣಾಂಕಿಗಳು ಮಾತನಾಡಿದುವು.

ಬಾಹುಬಲಿಯೆಡೆಯಿಂದ ಜಿಂಕೆಮರಿಗಳು ಓಡಿಬಂದು, ದುರದುರನೆ ನೋಡಿ, ಬೆಚ್ಚಿ ಓಡಿಹೋದುವು. ಮುಖಕ್ಕೆ ತಾಗುವಂತೆ ಪಾರಿವಾಳವೊಂದು ಹಾರಿಬಂದಾಗ ದಕ್ಷಿಣಾಂಕನು ಮುಖವನ್ನು ಓರೆಮಾಡಿ ಕೈಯೊಡ್ಡಿ ತಪ್ಪಿಸಿಕೊಂಡನು. ಅದನ್ನು ಕಂಡು ಓಲಗದ ನೀರೆಯರು ನಕ್ಕರು.

ತಿಳಿತಿಳಿದು ನೋಡುತ್ತ ಬರುತ್ತಿರುವ ದಕ್ಷಿಣಾಂಕನು ನಾರಿಯರ ಓಲಗದಲ್ಲಿ, ದೂರದಲ್ಲಿ ಒಪ್ಪುತ್ತಿರುವ ಮನಸಿಜನಾದ ಭುಜಬಲಿಯನ್ನು ಕಣ್ಣಾರೆ ಕಂಡನು. ಬಾಹುಬಲಿಯ ಬೆಂಗಡೆಯಲ್ಲಿ ಅವನ ಎಂಟು ಸಾವಿರ ರಾಜಾಂಗನೆಯರು ತೆರೆಯೊಳಗಿದ್ದರು. ಮುಂಗಡೆಯಲ್ಲಿ ಮಂತ್ರಿ ಸಖರೂ ಓಲಗದ ಹೆಣ್ಣುಗಳೂ ಇದ್ದರು. ಹೂವಿನ ಸಿಂಹಾಸನದಲ್ಲಿ ಹಂಸಗಳು ಕೊರಳ ತುಪ್ಪುಳಗಳ ಗದ್ದುಗೆಯ ಮೇಲೆ ನರಲೋಕದ ಸುರಲೋಕದ ನಾಗಲೋಕದ ಮೋಹನಾಂಗವೆ ಪುರುಷ ರೂಪದಂತೆ ಕಾಮನು ಕಂಗೊಳಿಸುತ್ತಿದ್ದನು.

ಕಪ್ಪಿನ ರೇಖೆಗಳನ್ನು ತೆಗೆದಂತೆ ತೋರುವ ತುಪ್ಪುಳು ಮೀಸೆ ನುಣುಪಾಗಿತ್ತು. ಉಪ್ಪರ ಜವ್ವನೆಯರೂ ಕಂಡರೆ ಸೋಲುವಂತೆ ಮದನನು ಒಪ್ಪಿದ್ದನು. ಪಚ್ಚೆಯ ಪ್ರತಿಮೆಯು ಪ್ರಾಣವನ್ನುಪಡೆದು, ನವರತ್ನಗಳ ತೊಡಿಗೆತೊಟ್ಟು ತೋರುವಂತಹ ಮೆಚ್ಚಿನಲ್ಲಿ

ಕಾಮದೇವನು ನೋಡುವವರಿಗೆ ಅಚ್ಚರಿಯನ್ನುಂಟುಮಾಡುವ ಚೆಲುವಿನಿಂದಿದ್ದನು. ನೋಡಿದ ಸ್ತ್ರೀಪುರುಷರ ಮೈಗೆ ರೋಮಾಂಚನವನ್ನುಂಟು ಮಾಡುವಂತಹ ಸೌಂದರ್ಯವು ಅವನದಾಗಿತ್ತು. ತಲೆಯ ಬಾಸಿಗದ ಪರಿಮಳಕ್ಕೆ ತುಂಬಿಗಳು ಹೊಯ್‌ಚೆಂಡಿನಂತೆ ನಲಿದಾಡುತಿದ್ದುವು.

ಆ ಆಸ್ಥಾನದಲ್ಲಿ ಅಷ್ಟಚಾಮರಗಳನ್ನು ಶಂಖಿನಿಯರು ಬೀಸುತಿದ್ದರು. ಲಾವಂಚದ ಬೀಸಣಿಗೆಗಳನ್ನೂ ಹೂ ಮಿಕ್ಕಿರುವ ಬೀಸಣಿಗೆಗಳನ್ನೂ ಬೀಸಲು ಚಿತ್ರಣಿಯರನ್ನು ನೇಮಿಸಿದ್ದನು. ವೀಳ್ಯದೆಲೆ ಗಿಂಡಿ ; ತಂಗಾರದ ಅಡಕೆ, ಉಗುಳಿಗವು ಪದ್ಮಿನಿಯರದಾಗಿತ್ತು ಗೋರೋಜನ ಕೈದುಗಳನ್ನು ಹಸ್ತಿನಿಯರು ಹಿಡಿದಿದ್ದರು. ಕೋಗಿಲೆಗಳನ್ನು ಹಿಡಿದು, ಅರಗಿಳಿಗಳನ್ನು ಹಿಡಿದು ಅನುರಾಗದಿಂದ ಹಂಸೆಗಳನ್ನು ಹಿಡಿದು ಸೋಗೆ ನವಿಲುಗಳನ್ನು ಹಿಡಿದು, ಅಬಲೆಯರಿದ್ದರು.

ಸೊಬಗಾಗಿ ಸಿಂಗರಿಸಿದ ವಾರಸುಂದರಿಯರು ಸಭೆಯಲ್ಲಿ ತುಂಬಿದ್ದರು. ವೀಣೆ ಕಿನ್ನರಿಗಳನ್ನು ಮುಟ್ಟಿ ಕೋಮಲಾಂಗಿನಿಯರು ಸರಸ ಗಾನವನ್ನು ಹಾಡುತಿದ್ದರು. ಗಾನವನ್ನು ಕೇಳುತ್ತ ತನ್ನ ಎಂಟು ಮಂದಿ ಸ್ನೇಹಿತರು ಸಂಧಾನಿಸುವ ಅರ್ಥಕ್ಕೆ ಮೆಚ್ಚಿ ನಗುತ್ತ ಬಾಹುಬಲಿಯು ಮಲಗಿನಲ್ಲಿ ತಾನು ಒರಗಿಕೊಂಡು ಸುಮ್ಮಾನದಿಂದ ಪಾದಗಳನ್ನು ನೀಡಿದ್ದನು. ಅವನ ಚರಣಗಳನ್ನು ಮಲಯ ಮಾರುತನು ಒತ್ತುತ್ತಿದ್ದರೆ ಹಸ್ತತಳಗಳನ್ನು ಮಂದಾನಿಲನು ಒತ್ತುತ್ತಿದ್ದನು. ಗೆಳೆಯರ ನುಡಿಗೇಳುತ್ತ, ಇದಿರಲ್ಲಿರುವ ಮಂತ್ರಿಗಳನ್ನು ನೋಡುತ್ತ ಒಲವಿನಿಂದ ಮದನನು ಅನುರಾಗದಿಂದಿದ್ದನು. ಅವನು ಒಮ್ಮೆ ಎಲೆಯ ಘಳಿಗೆಗೆ ಕೈನೀಡುವನು; ಒಮ್ಮೆ ಕೆಲಬಲವನ್ನು ನೋಡುವವನು; ಒಮ್ಮೆ ತೆರೆಯ ಮರೆಯಲ್ಲಿರುವ ಸತಿಯರತ್ತ ಕಣ್ಣನ್ನು ನಿಲುಕಿಸುವನು ಇಂತಹ ವಿಡಾಯದಲ್ಲಿ ಭುಜಬಲಿಯು ಮೆರೆದಿದ್ದನು.

ಒತ್ತಿನಲ್ಲಿ ಅನ್ಯರಿದ್ದಾಗ ಭರತೇಶನಂತೆ ಇವನು ಗಂಭೀರಾಂಗನಾಗಿರಲಿಲ್ಲ. ಚಿತ್ತಜನಾದುದರಿಂದ ಚಿತ್ತಕ್ಕೆ ಬಂದಂತೆ ಓಲಗದಲ್ಲಿದ್ದನು.

ಕಟ್ಟೆದಿರಲ್ಲಿ ತೋರುತ್ತಿರುವ ಕಾಮ (ಬಾಹುಬಲಿ) ನನ್ನು ಕಾಣುತ್ತ ದಕ್ಷಿಣಾಂಕ ಅವನ ಮುಟ್ಟಹೋದನು. ಆಗ ಸಂಗೀತ ನಿಂತಿತು. ಕಳಕಂಠನೆಂಬ ಕಟ್ಟಿಗೆಕಾರನು ಹೇಳಿದನು. "ಮನ್ಮಥವೀರ! ಮರ್ತ್ಯ, ಅಮರ, ನಾಗಲೋಕಗಳ ಉನ್ಮಾದಕಾರಿ ! ಸಹಕಾರಿ! ಚಿನ್ಮಾರ್ಗ ಸಖನು ಬಂದನು. ಸಮ್ಮೋಹಿಸು ಪರಾಕು ! ದಕ್ಷಿಣಾಂಕನು ದಕ್ಷಿಣ ಪರನಾಗಿರುವನು ಕ್ಷತ್ರಿಯನು. ನಾನಾ ಕಲೆಗಳಲ್ಲಿ ದಕ್ಷನು. ಪತಿಕಾರ್ಯಹಿತನು. ಒಡನೆಯೇ ಬಂದಿರುವನು. ಅವನನ್ನು ಪರೀಕ್ಷಿಸು, ಪರಾಕು" ಮನ್ಮಥನಾಗ ನೀಡಿದ್ದ ಕಾಲುಗಳನ್ನು ಮಡಿಸಿದನು; ಕೈನೀಡಲು ಒತ್ತುವುದನ್ನು ನಿಲ್ಲಿಸಿದನು. ಹಾಡುಗಾರಿಕೆಯಲ್ಲಿ ಓಲಗವಾಗಿ ಬರುತ್ತಿರುವ ಸಖನನ್ನು ನೋಡಿದನು. ದಕ್ಷಿಣಾಂಕನು ಉಟ್ಟ ಪಂಚೆಯನ್ನು ಓಸರಿಸುತ್ತ, ಮೆಲ್ಲಮೆಲ್ಲನೆ ಅಡಿಯಿಡುತ್ತ, ಅಡಕವಾಗಿಯೂ ಓಜೆಯಿಂದಲೂ ಮನ್ಮಥನಲ್ಲಿಗೆ ಸಾರಿದನು.

ಎಲೆಗಳ ನಿವಾಳಿಯಿಟ್ಟು, ಹೂಮಾಲೆಯ ನಿವಾಳಿಯಿಟ್ಟು, ತಾವರೆಯೊಂದನ್ನು ಅಲರಂಬನಾದ ಬಾಹುಬಲಿಗೆ ಕಾಣಿಕೆಯಿತ್ತು, ಸಾಷ್ಟಾಂಗವಾಗಿ ನಮಸ್ಕರಿಸಿದನು.

ದಕ್ಷಿಣಾಂಕನು "ಚಕ್ರೇಶನ ಅನುಜಾತ! ನರಸುರನಾಗ ಭೂಚಕ್ರಗಳಿಗೆ ಮೋಹವನ್ನುಂಟುಮಾಡುವ ಮೂಲಕರ್ತ! ಚಕ್ರವಾಕ ಧ್ವಜ ನಮೋನಮಃ!" ಎಂದವನು ಎದ್ದು ನಿಂತನು. ಅನಂತರ ಸಾಗರ ಮೊದಲಾದ ಸಖರ ಕಾಣಿಕೆಯೊಂದೂ, ಬುದ್ಧಿಸಾಗರ ಮೊದಲಾದ ಮಂತ್ರಿಗಳ ಕಾಣಿಕೆಯೆಂದೂ, ಪರಿಮಳದ ಹೂಗಳನ್ನೂ ಕಸ್ತೂರಿಯನ್ನೂ ಕಾಣಿಕೆಯಿತ್ತು ತಲೆಬಾಗಿ ನಮಿಸಿದನು.

"ಬಂದುದು ಉತ್ಸವವಾಯಿತು; ಬಾ ದಕ್ಷಿಣ" ಎಂದು ಒತ್ತಿನಲ್ಲೇ ಆಸನವಿಡಿಸಿ ಕಂದರ್ಪನು ಕುಳ್ಳಿರಲು ಹೇಳಿದನು. ಅಂತೆ ದಕ್ಷಿಣಾಂಕನು ಕುಳಿತನು. ಇದಕ್ಕಿಂತ ಮೇಲಾದ ರಾಜತೇಜವಿದೆಯೇ?

ಆಗ ಕಳಕಂಠನು, "ಅಬಲೆ, ಸುಳಿಯದಿರು; ಪ್ರಬಲೆ, ಸೋಂಕದಿರು, ನಿಮ್ಮಲ್ಲಿ ಮಾತು ಸಾಕು; ಬಳೆಗಳ ಸದ್ದು ಮಾಡಬೇಡಿ." ಎಂದು ಸೊಬಗನ್ನುಂಟುಮಾಡಿದನು. ಸುತ್ತಲಿನವರೆಲ್ಲರೂ ಸುಮ್ಮನೆ ಆಲಿಸುತ್ತಿರುವಾಗ ಚಿತ್ತಜನಾದ ಬಾಹುಬಲಿಯು ದಕ್ಷಿಣಾಂಕನನ್ನು ಮಾತನಾಡಿಸಿದನು.

"ಎತ್ತಣಿಂದ ಬಂದೆ? ನಿಮ್ಮ ಒಡೆಯನನ್ನು ಎಲ್ಲೆಲ್ಲಿ ಸುತ್ತಿಸಿ ತಂದೆ?"

"ಎತ್ತಣಿಂದ ಎಂದೆಯಾ? ನಿನ್ನನ್ನು ಕಾಣುವ ಪುಣ್ಯದ ಕಡೆಯಿಂದ ಬಂದೆನು. ಅದು ಹಾಗಿರಲಿ: ಜಗವನ್ನೇ ಸುತ್ತುವ ಕಾಮನ ಅಣ್ಣನನ್ನು ಸುತ್ತಿಸಿ ತರುವವರಾರು?"

"ನೀನೂ, ನಾಗರ ಮುಂತಾದ ಪ್ರಚಂಡರೂ, ಸೇನಾಧ್ಯಕ್ಷರೂ ಮಂತ್ರಿಗಳೂ ಕೂಡಿ ನಿಮ್ಮ ದೊರೆಯನ್ನು ಏನೇನು ಮಾಡುತ್ತಿದ್ದಿರಿ? ಒಂದೆಡೆಯಲ್ಲೆ ಇರಲು ಬಿಡದೆ ನಿಮ್ಮ ದೊರೆಯನ್ನು ಅಲ್ಲಲ್ಲಿಗೆ ಒಯ್ಯುತ್ತಿರುವಿರಿ. ಹೇಗೆ ನಡೆವನೋ, ಅದನ್ನು ಹಾಗೇ ಹೊಗಳುವಿರಿ. ನಾಡನ್ನು ಸುತ್ತಿಸಿ ತಂದ ರೀತಿ ಲೇಸಾಗಿದೆ."

"ನಾವೊಂದು ಹೇಳಿ ಉಬ್ಬಿಸಲು ನಿಮ್ಮಣ್ಣನೇನು ಪರತಂತ್ರ ಚರಿತನೆ? ಉಬ್ಬಿಸಲು ಭರತೇಶನೇನು ಉಬ್ಬಾಳೆ? ಜಾಣರಾದ ನೀವೂ ಹೀಗೆ ವಿರಚಿಸುವುದೆ ಸ್ವಾಮಿ?"

"ಹೋಗಲಿ, ಆ ಮಾತನ್ನು ಬಿಡು. ನೀವೆಲ್ಲ ಒಳ್ಳೆಯದಾಗಿಯೇ ವರ್ಣಿಸುವಿರಿ. ಪ್ರೀತಿಯಿಂದ ನಾನೊಂದನ್ನು ಕೇಳುವೆನು. ಅದಕ್ಕಾಗಿ ನೀನು ನೋಯಬಾರದು."

"ಆಗಲಿ, ಹೇಳಿ ಸ್ವಾಮಿ"

"ದಕ್ಷಿಣಾ, ಆನೆ ಕುದುರೆ ಆಭರಣಗಳೆಲ್ಲ ಬಡವರಲ್ಲಿರಲು ಎಲ್ಲವನ್ನೂ ಸುಲಿದುಕೊಂಡು ಬಂದಿರಲ್ಲ. ಶಹಭಾಸ್, ನೀವು ಬಹಳ ಬುದ್ಧಿವಂತರು."

"ಒಡೆಯ ಬಡವರಾರು? ವ್ಯಂತರರು, ಖೇಚರರು ಬಡವರೇ? ಮ್ಲೇಚ್ಛರು ಅಲ್ಪರೆ? ಕಡಲಲ್ಲಿರುವ, ಬೆಟ್ಟದಲ್ಲಿರುವ ಸಿಂಧುಗಂಗೆಯರ ಶಕ್ತಿಯನ್ನು ಹಿಡಿದುದು ಅತಿಬಲರಲ್ಲವೆ? ಯಾರನ್ನು ನೋಡಿದರೂ ಮೊದಲೇ ಅವರು ದಾರಿಗೆ ಬಂದು ವಸ್ತುಸಾರವನ್ನೆಲ್ಲ ತೆತ್ತರೇನು ಮಾಡುವುದು? ಭೇರಿಯ ದನಿಗೆ ಹೆದರಿ ಬಂದು ಮಾರನ ಅಣ್ಣನನ್ನು ಕಂಡರು. ಅವರು ಕೊಟ್ಟಕಪ್ಪಕ್ಕೆ ಆನೆಕುದುರೆ ಆಭರಣಗಳ ಮೇಲೆ ಅವಕ್ಕೆ ನಾಲ್ಮಡಿಯ ವಸ್ತುಗಳನ್ನು ಮನ್ನಣೆಯಿತ್ತನು., ನಿಮ್ಮಣ್ಣ . ನಮ್ಮ ದೊರೆಯು ವಸ್ತುಗಳಿಗಾಗಿ ಹೋದುದೆ? ಅವನ ಹಸ್ತದಲ್ಲಿ ಚಿಂತಾಮಣಿಯಿರುವುದು. ದುಸ್ತರರಾದ ನೃಪರನ್ನು ಶಿಕ್ಷಿಸುವುದಕ್ಕಾಗಿ

ಹೋದನು. ಸಮಸ್ತರನ್ನೂ ಸುಖಿಮಾಡುವೆನೆಂದು ಹೋದನು.''

''ಒಡವೆಗಳ ದೊಡ್ಡಿತೇನೆಂದು ಕೇಳುವೆಯಾ? ಅವರು ಚೆಲುವಿನ ಹೆಣ್ಣುಗಳನ್ನು ಪಡೆದಿದ್ದು ನಿಮ್ಮ ಭಾವರಿಗೆ ಸಡಗರದಿಂದ ಇತ್ತರು. ಆ ವಸ್ತುವೇ ಲೇಸು; ಮಿಕ್ಕವಸ್ತುಗಳನ್ನು ಬಿಟ್ಟುಬಿಡು.''

''ಅದಕ್ಕೇನೂ ಕಡಿಮೆ ಮಾಡಲಿಲ್ಲ ನಮ್ಮ ದೊರೆ. ಒಲವಿನ ಹೆಣ್ಣುಗಳ ಅಯ್ಯಂದಿರಿಗೆ ಅಡ್ಡಬೀಳುವುದು ಬೇಡೆಂದನು. ಮೃದುವಾಕ್ಯದಲ್ಲಿ ನೀವು ತಾವು ಎನ್ನುವನು. ಊರ ಅರಸರಿಗೆ ಈ ತೇಜ ಸಾಮಾನ್ಯವೆ? ತನುಜೆಯರನ್ನು ಕೊಟ್ಟ ನೆವದಿಂದ ನೃಪನ ಅರಮನೆಗೆ, ಯಾವಾಗಲು ಅಡೆತಡೆಯಿಲ್ಲದದೆ ಬಂದು. ಸುಖದಲ್ಲಿ ಓಲಾಡುತ್ತಿದ್ದಾರೆ. ನಮ್ಮ ಚಕ್ರವರ್ತಿ ಯಾರಿಗೆ ಲೇಸನ್ನು ಮಾಡಿಲ್ಲ? ನಮ್ಮ ಅರಸನನ್ನು ಕಂಡು ಕೆಲವರು ಚತುರರಾದರು. ಕೆಲವರು ವ್ರತಿಗಳಾದರು; ಗತಿಮಿತಿಯನ್ನು ಕಾಣದವರು ಗತಿಮಿತಿಯನ್ನು ಕಂಡು ಸುಖಿಗಳಾದರು. ಶೃಂಗಾರವೆಂತು, ಸಾಹಿತ್ಯವೆಂತು, ಸಂಗೀತವೆಂತು— ಎಂದು ತಿಳಿಯದವರೂ ನಿನ್ನ ಅಣ್ಣನನ್ನು ಹೊಂದಿ ಶೃಂಗರಿಸುವರು; ಜಾಣ್ಮೆಯಿಂದ ನುಡಿವವರು, ಹಾಡುವವರು ಅಡವಿಯ ಮೃಗಗಳಂತೆ ನಡೆಯುವವರು. ಇಂದು ಉತ್ತರೋತ್ತರ ಜಾಣರಾಗಿ ನಡೆಯುತ್ತಾರೆ. ನಮ್ಮ ಒಡೆಯನ್ನು ಬೀಳ್ಕೊಟ್ಟರೂ ತಾವು ಬಿಡಲಾರದೆ ಇನ್ನೂ ಅವನ ಸಂಗಡವಿದ್ದಾರೆ—ಸ್ವಾಮಿ.''

''ಇದು ದೊಡ್ಡ ಸಾಮರ್ಥ್ಯ !'' ಎಂದು ಮದನನು ಮಾತಾಡಿದರೆ ಅದನ್ನೇ ಮಾರುಮಾತಾಗಿ ದಕ್ಷಿಣನು ಹೇಳಿದನು.

''ಮೃದುಗುಣಗಳನ್ನಷ್ಟೆ ಹೇಳಿದೆನು. ಒದಗಿದ ಸಾಮರ್ಥ್ಯವನ್ನು ಹೇಳುವುದಾದರೆ ಇದಿರಾದ ಪಡೆಗಳ ಎಲ್ಲರ ಮೇಲೂ ಉಗ್ರವಾದ ಖಡ್ಗದ ಬಲುಹನ್ನು ತೋರುವನು. ಕಂಡಷ್ಟನ್ನೇ ಸೂಚಿಸುತ್ತೇನೆ; ಆಲಿಸಬೇಕು; ಒಂದು ಬಾಣದಲ್ಲೇ ಮಾಗಧನು ಬಂದು ಕಂಡನು. ವ್ಯಂತರರ ಹಿಂಡನ್ನೇ ಕಾಣಿಸಿಕೊಂಡು, ಈಗ ನೃಪಸೇನೆಯಲ್ಲೇ ಮೈಗೊಂಡಿದ್ದಾನೆ. ಒಂದು ಪೆಟ್ಟಿಲ್ಲದೆ ಎರಡು ಹೊಡೆಯಲಿಲ್ಲ; ಡಬ್ಬೆಂದು ವಜ್ರದ ಪಡಿಯೊಡೆದು ಹಿಂದಕ್ಕೆ ತೆರೆಯಿತು, ಭರತೇಶಗೆ ಇದಿರಿಲ್ಲವೆಂದು ಬಾಯಿತೆರೆದು ಹೇಳುವಂತೆ. ಬೆನ್ನಲ್ಲೇ ಬೆಂಕಿಯ ನಾಲಗೆ ನೀಡಿತು. ಆಗ ಕುದುರೆ ಹನ್ನೆರಡು ಗಾವುದ ಹಾರಿತು. ನಮ್ಮ ಒಡೆಯ ಜಾರದೆ ಬಂದನು. ಆಗ ಅಮರರು ಹೂಮಳೆಯನ್ನು ಸುರಿಸಿದರು. ಒಂದು ಪೆಟ್ಟುಕೊಡಲು ಬೆಟ್ಟ ಅದುರಿತು. ಅರ್ಭಟೆಯು ಸುರರ ಅಂಗಳಕ್ಕೆ ಮುಟ್ಟಿತು. ಭಯಂಕರವಾದ ಮಳೆಯನ್ನು ಸುರಿಸಿದ ಉಗ್ರದೇವತೆಗಳಿಗೆ ನಮ್ಮ ರಾಜನು ಮಣಿಯಲಿಲ್ಲ. ಅವನ ವೀರಭಟರೆ ಆ ದೇವತೆಗಳನ್ನು ಮುರಿದು ಓಡಿಸಿದರು. ಆತನ ಖಡ್ಗಕ್ಕೆ ಎದುರಾರಿದ್ದಾರೆ? ಅಂಕಮಾಲೆಯನ್ನು ಬರೆಸುವೆನೆಂದು ಮೊದಲಿನ ಡೊಂಕುಮಾಲೆಯನ್ನು ಉಜ್ಜುವಾಗ ಅಲ್ಲಿದ್ದ ಭೂತಗಳು ಝುಂಕಿಸುತ್ತ ಎದ್ದುವು. ಆಗ ಅವುಗಳನ್ನು ನೂಕಿ ಹಲ್ಲುಗಳನ್ನೇ ಕುಟ್ಟಿಸಿದನು. ಕಂತುರಾಜೇಂದ್ರನೆ ಕೇಳು, ನಮ್ಮ ಚಕ್ರಧರನು ಹಿಮವಂತ ಶೈಲವನ್ನು ಒಡೆಯುವಂತೆ ಹೊಡೆದು, ಮುಂದಿನರಾಜ್ಯಗಳನ್ನು ಸಾಧಿಸುವೆನೆಂದು ನೋಡಿದನು. ಆಗ ನಾವು ಆತನನ್ನು ಸಂತೈಸಿದೆವು. ಜಗತ್ತಿನಲ್ಲಿ ಆವನ ಸಾಹಸಕ್ಕೆ ಇದಿರಾದವರು ಯಾರು? ಯಮನೆ?

ಮೃತ್ಯುವೆ? ದೈತ್ಯ ಕುಲವೆ? ಅವನನ್ನು ಅವರ ಮೆಚ್ಚುವರು. ಇಂತಹ ನಮ್ಮೊಡೆಯನು ನಾಡಾಡಿಯೆ? ನೀನೇ ವಿವರಿಸು, ಸ್ವಾಮಿ, ಲೀಲಾಮಾತ್ರದಲ್ಲಿ ಧರೆ ಸಾಧ್ಯವಾಯಿತು. ಚಕ್ರಧರನ ಸಂಪತ್ತನ್ನು ಹೇಳುವುದಕ್ಕೇ ಆಶ್ಚರ್ಯವಾಗುತ್ತದೆ. ಹೂಬಾಣಗಳಿಂದಲೇ ಮೂರುಜಗದಲ್ಲಿ ಅಂಡಲೆಯುವವನು ತಮ್ಮನು; ಭಟರಿಂದಲೇ ರಾಜರೆಲ್ಲರ ಹೆಮ್ಮೆಯನ್ನು ಬಿಡಿಸುವವನು ಅಣ್ಣನು; ಎಂದು ಹೇಳುವಾಗ ನಿಮ್ಮನ್ನು ಮೀರಿಸುವ ಆದಿರಾಜರು ಯಾರಿದ್ದಾರೆ? ನೀವು ಅಗ್ರಗಣ್ಯರೇಂದೇಕೆ ಹೇಳಬೇಕು? ನಿಮ್ಮ ಸೇವಾನುಮತದಲ್ಲಿ ಆಚರಿಸುತ್ತಿರುವ ನಾವೆಲ್ಲರೂ ಅಧಿಕರೆಂದು ಲೋಕವೇ ಹೇಳುತ್ತಿದೆ.''

ಇದನ್ನು ಕೇಳಿದ ಕಾಮನ ಕೆಳೆಯರೆಲ್ಲರೂ ಲೇಸು, ಲೇಸು—ಎಂದು ಹೇಳಿದರು. ''ಅಲ್ಲವೆ ಮತ್ತೆ? ಚಕ್ರಿಗೆ ಯಾರು ಇದಿರು? ಆತನ ತಮ್ಮನಾದ ಈ ಬಾಹುಬಲಿಗೆ ಯಾರು ಇದಿರು? ಇವರ ಮೃದುವಾದ ಶರಣಸೇವೆಯಲ್ಲಿರುವ ನಾವು ಧನ್ಯರಾದೆವು. ಲೇಸನೇ ನುಡಿದೆ.''

ಆಗ ಪ್ರಣಯ ಚಂದ್ರಮನೆಂಬ ತನ್ನ ಮಂತ್ರಿಯೊಡನೆ ಬಾಹುಬಲಿ ನುಡಿದನು. ''ಪ್ರಣಯ ಚಂದ್ರಮ, ಮಾತಾಡುತ್ತಿರುವ ದಕ್ಷಿಣನ ಚಾತುರ್ಯವನ್ನು ಕೇಳಿದೆಯಾ?''

''ಇರುವ ಗುಣಗಳನ್ನೇ ನುಡಿದನು ಸ್ವಾಮಿ. ನೀನು ಅತಿದಕ್ಷ; ನಿನ್ನ ಅಣ್ಣನು ಅಗ್ಗಳನು; ಇದೇನು ಉಪಚಾರದ ನುಡಿಯೆ? ಸೂರ್ಯ ಚಂದ್ರರನ್ನು ಲೋಕವು ಬಣ್ಣಿಸುವಂತಿದೆ. ಚಕ್ರಿಯು ಮಂತ್ರಿ ಮಿತ್ರರೆಲ್ಲ ಕೂಡಿ, ಬರುತ್ತಿರುವ ಮಿತ್ರನ ಕೈಯಲ್ಲಿ ನಿನಗೆ ಕಾಣಿಕೆಯನ್ನು ಕಳುಹಿಸಿದ್ದಾರೆ. ಅದು ದೊರೆಯ ಸದ್ಗುಣವಲ್ಲವೆ?''

''ಇಂದಿನ ಓಲಗವು ಸಾಕು. ದಕ್ಷಿಣಾಂಕನು ಬಂದ ಆಲಸ್ಯವನ್ನು ಕಳೆಯಲಿ. ಮುಂದೆ ಆತನು ಬಂದ ಕಾರ್ಯವನ್ನು ಕೇಳುವ, ಇವನಿಗೀಗಲೆ ಪಡಿಬಿಡಾರಗಳ ವ್ಯವಸ್ಥೆ ಮಾಡು.'' ಎಂದು ಮಂತ್ರಿಗೆ ಮನ್ಮಥನು ನುಡಿನನು.

''ನಮ್ಮ ಮನೆಗಳಿರುವಾಗ ಬಿಡಾರವೇಕೆ ಸ್ವಾಮಿ. ಭರತೇಶ ಬಂದರೆ ದೇವರ ಅರಮನೆಯೇ ಬಿಡಾರ. ದೊರೆಯ ಸಖಿಗೆ ನಮ್ಮ ಮನೆಯೇ ಬಿಡಾರ.'' ಎಂದವರು ಎರವಿಲ್ಲದೆ ನುಡಿದರು.

''ನೆವದಿಂದ ಬಂದಿರುವ ಈ ದಕ್ಷಿಣಾಂಕನಿಗೆ ಇದೊಂದು ಒಸಗೆಯಾಯಿತು.'' ಎಂದು ಬಾಹುಬಲಿಯ ವಿಟರಾದ ದಕ್ಷಿಣ ನಾಯಕರು ಆಡಿಕೊಂಡರು.

ಆ ಮೇಲೆ ಮದನನು ದಕ್ಷಿಣನಿಗೆ ಉಡುಗೊರೆಯಿತ್ತು, ಅವನ ಪಡೆಯನ್ನು ಮನ್ನಿಸುವಂತೆ ಮಂತ್ರಿಗೆ ತಿಳಿಸಿ, ದಕ್ಷಿಣಾಂಕನನ್ನು ''ನಡೆ, ವಿಶ್ರಮಿಸು'' ಎಂದು ಬೀಳ್ಕೊಟ್ಟನು. ಮತ್ತೆ ಹೊನ್ನಿನ ಆಭರಣಗಳ ಸದ್ದು ಕೇಳುತ್ತಿರುವಂತೆ ಬಾಹುಬಲಿಯು ಸಿಂಹಾಸನದಿಂದೆದ್ದು ರಾಣಿಯರೊಡನೆ ತನ್ನ ನಿಲಯವನ್ನು ಹೊಕ್ಕನು.

# ೧೯

# ಸಂಧಾನಭಂಗ

ದಕ್ಷಿಣಾಂಕನು ಮದನನಿಗೂ ಅವನ ಮಂತ್ರಿ ಸಖರಿಗೂ ತನ್ನ ಹೃದಯದ ಆರ್ಥವನ್ನಾಡಿ ತೋರಿಸಿ, ಹದಗ್ಗೆಯ್ದು ಹೋದವನು ಮರುದಿನ ಬಂದು ಮದನನನ್ನು ಆಸ್ಥಾನದಲ್ಲಿ ಕಂಡನು.

''ಬಂದುದೇನು ದಕ್ಷಿಣ? ಹೇಳು?'' ಎಂದು ಕಂದರ್ಪನೇ ಕೇಳಿದನು. ಆಗ ದಕ್ಷಿಣಾಂಕನು ಮುಂದೆ ಬಂದು ಕೈಮುಗಿದು ಇಂಬರಿತು ನುಡಿದನು.

''ಬಿನ್ನಹ ಸ್ವಾಮಿ. ದೊಡ್ಡೊಡೆಯನ ಸೋದರ, ನನ್ನ ಚಿಕ್ಕೊಡೆಯ, ನಾಡೊಡೆಯ, ಚೆನ್ನಿಗರೊಡೆಯ, ನೀನವನ ಬಿನ್ನಹವನ್ನು ಪ್ರಸನ್ನ ಚಿತ್ತದಿಂದ ಲಾಲಿಸು'' ಎಂದವನು ಅತಿ ವಿನಯದಿಂದ ತನ್ನ ಮಾತುಗಳನ್ನಾರಂಭಿಸಿದನು. ''ನಮ್ಮ ರಾಯಗೆ ಧರೆ ಸಾಧ್ಯವಾಯಿತು. ಆದ ಮೇಲೆ ಮಾರ್ಗದಲ್ಲಿ ಅಯ್ಯನನ್ನು ಕಂಡನು. ಆಮೇಲೆ ತಾಯಿಯನ್ನೂ ಕಂಡನು. ಆಮೇಲೆ ಆ ಎಡೆಯಲ್ಲಿ ತಮ್ಮನನ್ನೂ ಕಾಣುವ ಅರ್ತಿಯಾಯಿತು. ತಮ್ಮನನ್ನು ನೋಡುವ ಅಂದವು ಹೇಗೆಂದು ನಮ್ಮನ್ನು ಗುಟ್ಟಿನಲ್ಲಿ ಕೇಳಿದನು. ಆಗ ನಾವು 'ತಮ್ಮನನ್ನು ಕಾಣುವ ಅರ್ತಿಯು ನಿನಗಾಯಿತು. ಅವನೂ ನಿನ್ನನ್ನು ಕಾಣಲು ಹಾರೈಸನೇ' ಎಂದೆವು.ಆಗ ಅವನು 'ಚಿಕ್ಕಮ್ಮಗೊಬ್ಬರೆ ಮಗನೆಂದು ನಮ್ಮೆಲ್ಲರಿಂದ ಅತಿ ಮುದ್ದಾಗಿ ಅಯ್ಯನು ಬಾಹುಬಲಿಯನ್ನು ಪೊರೆದಿರುವನು. ಅವನು ಸುಮ್ಮನಿರಲಿ. ಚಿಕ್ಕಮ್ಮನ್ನು ನಾಳೆ ಸಾಕೇತಪುರಕ್ಕೆ ಕರೆಸುವುದುಂಟು. ಆಗ ಅವನು ಬರುವನು. ಆಗ ಅವನನ್ನೂ ಚಿಕ್ಕ ತಾಯಿಯನ್ನೂ ಕಾಣುವೆವು' ಎಂದನು. ಅರಮನೆಯಲ್ಲಿ ನೀವು ಸಂಧಿಸಿ ಮಾತಾಡಿದರೆ ನಮಗದು ಕೇಳಲಾಗದು. ಧರೆ ತೆರವಾದಲ್ಲಿ ಸಂಧಿಸಿದರೆ ನಾವು ಸರ್ವರೂ ನೋಡುವೆವು' ಎಂದು ನಮ್ಮ ಆಸೆಯನ್ನು ತಿಳಿಸಿದೆವು. ನೀವು ಸಂಧಿಸಿ ಮಾತಾಡುವ ಸಿರಿಯನ್ನು ಕಾಣಲು ದೊರೆಗಳೆಲ್ಲರೂ ಆಸೆಯಿಂದಿರುವರು–ಎಂದೆವು. ಹಾಗೆ ಸ್ಮರಪುರದಿದಿರಲ್ಲಿ ಸಂಧಿಸಲು ಧರಣೀಶನು ಒಪ್ಪಿದನು. ಈಗ ದೂರವಿಲ್ಲ. ನಿನ್ನ ಊರ ಸಮೀಪದಲ್ಲಿರುವನು. ಹಾರೈಸಿದವರ ಕಣ್ಣಾರ್ತಿಯನ್ನು ನೀನು ಸಲ್ಲಿಸಬೇಕು.'' ಎಂದು ದಕ್ಷಿಣನು ಬಾಹುಬಲಿಗೆ ಅಡ್ಡಬಿದ್ದನು.

''ಏಳು ಏಳು ಕುಳಿತು ಮಾತಾಡು ದಕ್ಷಿಣ, ನೀವು ಲೀಲೆಯಿಂದಲೇ ನಿಮ್ಮ ಪುರಕ್ಕೆ ಹೋಗಿ; ಹೇಳಿದಂತೆ ನಾಳೆ ನಾನು ಬರುವೆ.''

''ಆಗ ನಿಮಗಿಬ್ಬರಿಗೆ ಅರ್ತಿಯಾಗುವುದು. ಆದರೆ ನಮ್ಮ ಸರ್ವರ ನುಡಿಗೆ ಒಡಂಬಟ್ಟು, ಸಾರ್ವಭೌಮನು ನಿಂತಮೇಲೆ ನೀವು ಸಂಧಿಸುವುದು ಭೂಮಿಗೇ ಉತ್ತಮ ಸ್ವಾಮಿ. ಮೇರು ನಿಂತಂತೆ ಚಕ್ರಿ ನಿಂತಿರುವನು. ನೀನು ಹೋಗಲು ಮೇರುಗಳೆರಡು

ಸಂಧಿಸಿದ ಗೌರವವಾಗುವುದು. ಅಲ್ಲದಿದ್ದರೆ ರಾಜ್ಯ ಗಂಭೀರಕ್ಕೆ ಸಾಮಾನ್ಯವಾಗುವುದು. ವ್ಯಂತರರು, ಖೇಚರರು, ಭೂಭುಜರು ನೋಡಬೇಕೆಂಬ ಅಂತರಂಗಾಶೆಯಲ್ಲಿರುವಾಗ ಕಂದರ್ಪನು ಬಂದಿಲ್ಲವೆಂದರೆ ಮುಖವು ನಿಷ್ಕಾಂತಿಯಾಗದೇ ಹೇಳು. ಲೋಕಾನಂದವನ್ನುಂಟು ಮಾಡುವವನಲ್ಲವೆ ನೀನು? ವ್ಯಾಕುಲವನ್ನು ತೋರುವ ಸುಖಿಯೇ? ಈ ಕಾರ್ಯಕ್ಕೆ ಹೀಗೆನಬೇಡ ಸ್ವಾಮಿ.''

''ಬರುವೆನು; ಈಗ ನನಗೊಂದು ಕಾರ್ಯವುಂಟು. ಆದರಿಂದ ಬರುವುದಕ್ಕೀಗ ಮನಸ್ಸು ಬರವುದಿಲ್ಲ, ನೀನೊಂದು ತಂತ್ರದಿಂದ ರಾಜನನ್ನು ಹೊರಡಿಸಿ ಮನೆ ಮುಟ್ಟಿಸು; ಹೋಗು.''

''ಬೇಡಸ್ವಾಮಿ. ನೀನು ಬಂದು ನಿಮ್ಮಣ್ಣನನ್ನು ನೋಡಿ. ನಿಮ್ಮ ವಿಲಾಸವನ್ನು ನೋಡದೆ ಪಡೆಗೆ ಸಂತಸವನ್ನುಂಟುಮಾಡು. ವಿರಸವನ್ನು ಮಾಡುವುದು ಉಚಿತವೆ? ಭರತ ರಾಜ್ಯವನ್ನು ಕಾಣುವ ಕಾರ್ಯಕ್ಕಿಂತಲೂ ಅಧಿಕವಾದ ಪರಕಾರ್ಯವೊಂದುಂಟೆ ಲೋಕದಲ್ಲಿ? ಹೀಗೆ ಹೇಳಬೇಡ.''

''ಬಲ್ಲೆನು, ನೀನಿಷ್ಟು ಜಾಣನೆಂಬುದನ್ನು, ಮಾತಿನಲ್ಲಿ ನಮ್ಮನ್ನು ಚಾಳೈಸದಿರು. ನನಗೀಗ ಬರಲು ಆಗುವುದಿಲ್ಲ ಹೋಗು ನೀನು.''

''ಅಣ್ಣನೊತ್ತಿಗೆ ಹೋಗುವವರು ಆಗದೆಂದು ಹೇಳುವುದೇ ಸ್ವಾಮಿ?''

''ಅವನು ನಮಗೆ ಅಣ್ಣನಲ್ಲ ; ಒಡೆಯನು. ನೀನಿಂತು ಬಣ್ಣಿಸಿಕ್ಕಬಾರದು. ದಂಡಿನೊಂದಿಗೆ ಬಂದು, ಕಾಮನನ್ನು ಕರೆಯೆಂದು, ತೊಂಡರನ್ನು ಕರೆಸುವಂತೆ ದಂಡಿಸುತ್ತಿದ್ದವನು ಅಣ್ಣನೋ? ಒಡೆಯನೋ? ಕಂಡುದನ್ನು ನೀನೇ ಹೇಳು?''

''ಗುರುಹಂಸನಾಥ ! ನೀವಿಂತಾಡುವುದೆ ಸ್ವಾಮಿ? ನಾವಾಸೆಪಟ್ಟು ದೊರೆಗಳನ್ನು ಇರಿಸಿದೆವಲ್ಲದೆ ಚಕ್ರಿ ನಿಂತನೆ? ನಾವು ಸಿರಿಗೆ ಎಡರಾದೆವು. ಹಾ......ಧರೆಯ ತೂಕದ ಚಕ್ರಧರನನ್ನು ನಿಲ್ಲಿಸಿದೆವು. ಪರಿವಾರಕ್ಕೆ ಅಂಗಜೋತ್ತಮನ ಸಿರಿಯನ್ನು ತೋರಿಸುವೆವೆಂದು ನೆನೆದೆವು. ನಮ್ಮ ಕಾರ್ಯ ದೇವರಿಗೆ ಆಗಲಿಲ್ಲ; ಹಾ !''

''ಮನಸ್ಸಿನಲ್ಲಿ ಒಂದಿದ್ದು, ಮಾತಿನಲ್ಲಿ ಇನ್ನೊಂದು ನುಡಿಯುವುದು ನನಗೂ ನನ್ನ ಪಡೆಗೂ ಸಲ್ಲುವುದು. ಅದು ನಿನಗೂ ನಿನ್ನೊಡೆಯಗೂ ಸಲ್ಲುವುದೆ? ಈ ಠಕ್ಕಿನ ವಿನಯವೇಕೆ?''

''ಠಕ್ಕಾವುದು ಒಡೆಯ?''

''ಹೇಳಬೇಕೆ? ಅಯ್ಯೋ. ನೀವು ಆತ್ಮರತರು. ಠಕ್ಕನ್ನು ಆಡಲಾರಿರಿ. ನಾನೆ ತಪ್ಪಿ ನುಡಿದೆನು. ಲೆಕ್ಕಿಸಬೇಡ, ಹೋಗು.''

''ದೇವಗೆ ತಪ್ಪಿಲ್ಲ;ನಮಗೆ ತಪ್ಪಿಲ್ಲ; ಠಕ್ಕಾವುದೆಂದು ಅದನ್ನು ಸೂಚಿಸು.''

''ನೋವಾದೀತು; ಸಾಕು ಸಾಕು, ಹೋಗು.''

''ನನ್ನಿಂದ ನೋವುಂಟೆ? ಹೇಳು?''

''ಚಕ್ರ ನಿಂತರೆ, ನನ್ನನ್ನು ಕಾಣಿಸಿಕೊಳ್ಳುವ ಪರಾಕ್ರಮಾರ್ಥಕ್ಕೆ ಬೀಡುಬಿಟ್ಟು ಚಕ್ರಿ ಕಳುಹಿಸಲು ಬಂದು ಬಣ್ಣವನ್ನು ನುಡಿಯುವೆ. ವಕ್ರವನ್ನು ಅರಿತೆ, ಹೋಗು. ನೀನು

ಮರೆಮಾಚಿದೆ. ನಿನ್ನ ನುಡಿಗೆ ಒಡಂಬಟ್ಟು ನನ್ನವರೂ ಮರೆಮಾಚಿದರು. ನೀನೊಬ್ಬನೇ ಬಂದು ಹಿತವನ್ನಾಡಿದೆ. ನಾನಾರ್ಥ ಸಾಕು. ಹೋಗು.''

''ಈ ಸ್ಥಳದಲ್ಲಿ ನೀವಿಬ್ಬರೂ ಸಂಧಿಸಬೇಕೆಂಬ ಅರ್ಥದಲ್ಲಿ ಚಕ್ರ ನಿಂತಿತು. ನಿನ್ನನ್ನು ಕಾಣಬೇಕೆಂದು ಮಂದಿ ಹಾರೈಸಿತು. ಅದನ್ನು ಕಂಡ ಚಕ್ರವೂ ನಿಮ್ಮನ್ನು ಓಲೈಸುವೆನೆಂದು ಹಾರೈಸದೆ?''

''ಒಳಗನ್ನು ಅರಿಯದವರಲ್ಲಿ ಜಾಣ್ಮೆಯನ್ನು ತೋರಬೇಕು. ಒಳಗನ್ನು ಅರಿತವರ ಇದಿರಲ್ಲಿ ಜಾಣ್ಮೆ ಸಲ್ಲುವುದೆ? ಸಾಕು; ಸುಮ್ಮನಿರು. ಮಾತುಕಲಿತೆಯೆಂದು ಆಡುತ್ತಿರುವೆ....ಏನಿಷ್ಟು ಸೊಕ್ಕು ನಿಮ್ಮೊಡೆಯಗೆ? ಧರಣಿಯ ಭೂನಾಥರು ಎರಗಲು ತಣಿಯದೆ, ಸೇನೆಯ ಮುಂದೆ ನನ್ನನ್ನು ಎರಗಿಸಿಕೊಳ್ಳುವ ಬಲುಮಾನಕ್ಕೆ ನಾನು ಬರಬೇಕೆ?...ಈ ಖೇಚರರೂ ಭೂಚರರೂ ಪ್ರೇತಗಳಷ್ಟೆ! ವ್ಯಂತರರು ಭೂತಗಳಷ್ಟೆ! ಪ್ರೇತಭೂತಗಳು ಅಂಜಿ ನಮಿಸಿದರೆ ಮೀನಕೇತನು ಅವನಿಗೆ ಎರಗುವನೆ?...ಎರಗುವುದಕ್ಕೆ ಪ್ರಸ್ತವೇನು? ಅವನ ಹಂಗುಂಟೆ? ನನಗೆ ಅಯ್ಯನು ಹಂಚಿಕೊಟ್ಟ ಉಂಬಳಿಯಲ್ಲಿ ನಾನಿರುವೆನು; ಇಲ್ಲಿ; ಇದನ್ನು ನೋಡಿ ಕಣ್ಣು ಕರುಬಾಯಿತೆ? ತುಂಬಿದ ರಾಜ್ಯವನ್ನು ಅವನಿಗೆ ಕೊಟ್ಟು, ಅಯ್ಯನು ಕಿರಿದು ಉಂಬಳಿಯನ್ನು ನನಗಿತ್ತನು. ಇದನ್ನು ನೋಡಿದ ಕಣ್ಣಿನ ಬೆಳಕು ಕೆಂಪಾಯಿತೇ. ನಮ್ಮ ಹೊಂಬಣ್ಣದ ಒಡಲಿನ ಅಣ್ಣನಿಗೆ?''

''ಉಂಬಳಿಯೇನು? ತನ್ನ ತುಂಬಿದ ಧರೆಯಲ್ಲಿ ಅರ್ಧವನ್ನು ನಿನಗೆ ಕೊಡುವೆನೆಂದು ನಿಮ್ಮಣ್ಣ ನಮ್ಮಲ್ಲಿ ಹೇಳಿರುವನು ಸ್ವಾಮಿ. ಹೀಗೂ ಹೇಳುವುದುಂಟೆ ಸ್ವಾಮಿ? ಅಲ್ಪರು ನುಡಿದಂತೆ ನುಡಿಯದಿರಿ. ಬಲ್ಪಿನ ಚಕ್ರನಾಯಕನ ಆ ಮೇಲ್ಪಿನ ಗುಣ ನಿನ್ನ ಸೊಮ್ಮಲ್ಲವೆ? ಈ ಕಠಿಣದ ಬಲ್ಪು ಏಕೆ ಸ್ವಾಮಿ?''

''ಬಿಡೆಯಲ್ಲವೆ ನಿನ್ನ ಜಾಣ್ಮೆಯನ್ನು? ನನಗೊಂದು ಪೊಡೆವಿಯಾಸೆಯನ್ನು ತೋರಿಸಿ ಕರೆದುಕೊಂಡು ಹೋಗಿ, ಒಡೆಯನ ಕಾಲಿಗೆ ಎರಗಿಸುವೆನೆಂದು ನೆನೆದೆಯಲ್ಲವೆ? ನಾನು ಬಡಮನಸ್ಸಿನವನೆ?...ಗುಣಕ್ಕೆ ಎರಗುವೆನು. ಅಣ್ಣನೆಂದು ಕಣ್ಣು ಝುಂಕಿಸಿದರೆ ನಾನೀಗ ಎರಗುವೆನೆ? ಅಣಮಾಡಿ ನಿಂತು, ಬಣ್ಣಕ್ಕೆ ನಿನ್ನನ್ನು ಕಳುಹಿಸಿ, ಪ್ರೇರಣೆಸುತಿದ್ದಾನೆ. ಭಾಪು! ಹದ್ದರು ನನ್ನ ಒಡಹುಟ್ಟಿದವರು. ಈತನ ಓಲೆಯನ್ನು ಕೇಳಿಯೇ ತಪಸ್ಸಿಗೆ ಓಡಿದರು. ಅವರೆಲ್ಲ ನನ್ನೊಡನೆ ಒಟ್ಟುಗೂಡುತಿದ್ದರೆ, ದೊಡ್ಡಕಾರ್ಯವನ್ನೇ ತೋರುತಿದ್ದನು. ಅಪ್ಪಾಜಿ ಕೊಟ್ಟ ತೇಜದಲ್ಲಿ ನನ್ನ ಸೋದರರು ಒಪ್ಪವಾಗಿರಲಿಯೆನ್ನುವವನೇ ಅಣ್ಣ? ಕಪ್ಪವನು ತೆರಲಿ, ಎರಗಲಿ— ಎನ್ನುವವನು ಅಣ್ಣನೇ? ನಿಜಕ್ಕೂ ಇವನು ಲೇಸಣ್ಣ. ಉತ್ತಮ ರಾಣಿಯ ಮಗನೊಬ್ಬನು. ನನ್ನನ್ನು ತೊತ್ತಿನ ಮಗನ ಕಾಣುವಂತೆ ಅತ್ಯವಸರದಿಂದ ಕರೆಸುತಿದ್ದಾನೆ. ಭಾಗ್ಯಪಡೆದ ಅಣ್ಣನಲ್ಲವೆ? ಕೇಳು, ಇಬ್ಬರು ಅರಸಿಯರಲ್ಲವೆ ನಮ್ಮ ಅಯ್ಯಗೆ? ಊಳಿಗದ ಹೆಣ್ಣಲ್ಲವಲ್ಲ?! ಊಳಿಗದವರ ಮಕ್ಕಳನ್ನು ಕರೆವಂತೆ ನಮ್ಮನ್ನು ಕೇಳಬಹುದೆ ನಿಮ್ಮ ನೃಪತಿ?''

''ನನ್ನನ್ನು ನಿಮ್ಮಡಿಗೆ ಅಟ್ಟಿದಾಗ ಮಂತ್ರಿಗಳೂ ಸಖರೂ ನಿನ್ನ ಚರಣಕ್ಕಾಗಿ ಕಾಣಿಕೆ ಕಳುಹಿದಾಗ ಊಳಿಗದ ಹೆಣ್ಣಿನ ಮಾತನ್ನು ವಿಜ್ಞಾಪಿಸಿಸುವರೆ ಸ್ವಾಮಿ? ನುಡಿಯಲು

ಅಂಜುವೆನು ಸ್ವಾಮಿ; ಚಿತ್ತೈಸು, ದೊಡ್ಡೊಡೆಯನು ತನ್ನ ಮಂತ್ರಿ ಸಖರನ್ನು ಬಡತಾವಿಗೆ ಉಡುಗೊರೆ ಕಟ್ಟಿನ್ನು ಕಳುಹಿದನೇನು? ನಾವು ನಮ್ಮ ಚಿಕ್ಕೊಡೆಯನಲ್ಲಿಗೆ ಬಂದೆವು.''

''ಅಲ್ಲ ; ಹಾಗಲ್ಲ, ನೀವು ನನ್ನನ್ನು ಚಾಳ್ಳಿಸಿಕೊಂಡೊಯ್ಯುವವರು; ಎಲ್ಲವನ್ನೂ ಮಾಡುವವರು. ಆದರೆ ಆದಕ್ಕೆ ನಾನು ಮರುಳಾಗಿ ಬಂದು ನಿಮ್ಮೊಡೆಯನ ಅಡಿಯನ್ನು ಹಿಡಿವನೇ? ಓಲೆಗಳನ್ನಟ್ಟಿ, ಚಿಕ್ಕ ಚಿಕ್ಕ ಅನುಜರ ದಟ್ಟಿಸಿ, ತಪಸ್ಸಿಗೆ ಓಡಿಸಿದನು. ದಿಟ್ಟನು ಎಂಬುದನ್ನರಿತು ನನ್ನಲ್ಲಿಗೆ ತನ್ನ ಗೆಳೆಯನನ್ನೇ ಅಟ್ಟಿದನು. ಇದನ್ನು ಬಲ್ಲೆನು., ಹುಸಿವಿನಯವನ್ನು ತೋರಿಸಿ, ಅಂಜಿಸಿ, ಚಾಳಿಸುವುದನ್ನು ಕಂಡು ನಮ್ಮ ಹೃದಯ ಬಿಸಿಯಾಗದಿರುವುದೇ? ತಂಪೆನಿಸುವ ಚಂದನವಾದರೂ ಮಥಿಸಿದರೆ ಕಿಡಿ ಸೂಸದಿರುವುದೆ? ನೀನು, ಕ್ಷಣಕ್ಷಣಕ್ಕೂ ನಿನ್ನೊಡೆಯನ ಗುಣವನ್ನು ಒಕ್ಕಣಿಸುವಾಗ ನನ್ನೆದೆಯಲ್ಲಿ ಕೋಪ ಕುಣಿದಾಡುತ್ತಿದೆ; ನನ್ನನ್ನು ಕೆರಳಿಸಬೇಡ, ದಕ್ಷಿಣಾ, ಹೋಗು ಸಾಕು ಹೋಗು.''

ನೀರು ತುಂಬಿದ ಕಣ್ಣುಗಳಿಂದ ದಕ್ಷಿಣಾಂಕನು ಎದ್ದನು. ಮುಂಬಟ್ಟೆಯಲ್ಲೇ ಅಡ್ಡಬಿದ್ದನು. ''ಇಂಬು ತೋರಿಸು ಸ್ವಾಮಿ. ನಿಮ್ಮನ್ನು ನೋಯಿಸಿದೆನೆ? ಏನೆನ್ನಲಿ. ನಾನು ಅತಿ ಕ್ರೂರನು. ಒಡೆಯರಿಬ್ಬರನ್ನೂ ಒಡಗೂಡಿಸಿ ನೋಡುವೆವೆಂದು ಸಡಗರಗೊಂಡೆವು ನಾವು. ಕಡುಪಾಪಿಗಳು ನೆನೆದುದು ಫಲಿಸುವುದೆ ಚಿಕ್ಕೊಡೆಯಾ?'' ಎಂದು ಅತ್ತು ಅತ್ತು ನುಡಿದನು. ''ಮೂರು ಲೋಕಕ್ಕೆ ಅಮೃತವನ್ನು ಕರೆಯುವವನ ಮನಸ್ಸಿಗೆ ಜ್ವಾಲೆಗೊಳಿಸಿದೆ ನಾನು. ಹಾಲು ಬರುವಲ್ಲಿ ನೆತ್ತರು ಬರೆಸಿದೆ ನಾನು. ಮೂರು ಲೋಕಕ್ಕೂ ಅತಿ ಪಾಪಿ.'' ಎಂದು ಅತ್ತುಅತ್ತುನುಡಿದನು.

''ಪಾಪಿಯಲ್ಲ, ಏಳು ಏಳು ಹೋಗು'' ಎಂದೊಡನೆ ಎದ್ದು, ''ಹೋಗುವೆನು'' ಎಂದವನೇ ಹೋಗುತ್ತಿರಲು. ''ಹೋ ದಕ್ಷಿಣಾಂಕ ಹೋಗದಿರು; ನಿಲ್ಲು'' ಎಂದು ಸಮೀಪದ ಮಂತ್ರಿ ಉತ್ತರವಿತ್ತನು.

''ಅಂಜುವೆನು ಒಡೆಯ; ನಿಮ್ಮ ಕೋಪಕ್ಕಿದಿರಾರು? ನೀವು ಜಾಣರಾದ ದೊರೆ. ನೀವಿತ್ತ ಆಜ್ಞೆಗಳಗಾಗಿರುವೆನು. ಇನ್ನು ಅಂಜದೆ ಹೇಳುವೆನು; ಲಾಲಿಸಬೇಕು'' ಎಂದು ಮಾತು ಮುಂದುವರಿಸಿದನು.

''ನೀವಿಬ್ಬರೂ ಪುರುಪರಮೇಶನ ಸುತರು. ನೀವೇ ವಿರಸದ ಮಾತನ್ನಾಡಿದರೆ ಧರೆಯಲ್ಲಿದ್ದವರಿನ್ನು ಸಹಜವಾಗಿ ನಡೆದಾರೆ? ಅಣ್ಣನೊತ್ತಿಗೆ ನೀನು ಬಿಜಯಮಾಡದೆ ನಿನ್ನ ಕಣ್ಣನ್ನು ಕೆಚ್ಚನೆ ಮಾಡಿದರೆ, ಇನ್ನು ಜಗತ್ತಿನಲ್ಲಿರುವ ಅಣ್ಣ ತಮ್ಮಂದಿರೆಲ್ಲರೂ ದೊಣ್ಣೆಯಿಂದ ಬಡಿದಾಡದಿರುವರೆ ಪ್ರಭು?''

''ಓಜೆಯನ್ನು ಮೀರೆ, ಬಂದವರಿಗೆ ಆಜ್ಞೆಯನ್ನು ಮಾಡುವ ರಾಜರೇ ಓಜೆಯನ್ನು ಮೀರಿ ನಡೆದರೆ ಕ್ರಮವನ್ನೂ ನಡತೆಯನ್ನೂ ಹೇಳುವರಾರು?'' ಎಂದು ಕಂಜಾಸ್ತ್ರನ ಸಖರು ನುಡಿದರು.

''ಗುರುವಿಗೆ ಶಿಷ್ಯನೂ, ತಂದೆಗೆ ಮಗನೂ, ತನ್ನಯ ಪುರುಷಗೆ ಸ್ತ್ರೀಯೂ ಎರಗದಿದ್ದರೆ—ಹಿರಿಯಣ್ಣನಿಗೆ ತಮ್ಮನು ಎರಗದಿದ್ದರೆ ಮಳೆಬೆಳೆ ಧರೆಯಲ್ಲಾದೀತೇ

ಸ್ವಾಮಿ? ಆದರೆ ನಿನ್ನಣ್ಣನೂ ನೀನೂ ಲೋಕದಲ್ಲಿ ಎಲ್ಲ ನೃಪರಂತಹ ನೃಪರೆ? ಮೂವತ್ತು ಲೋಕಗಳ ಮೆಚ್ಚಿನ ಅರಸುಗಳಲ್ಲವೆ ಸ್ವಾಮಿ? ಇದನ್ನಾದರೂ ನೆನೆಯಬೇಡವೆ? ನನ್ನೆದೆಯಲ್ಲಿ ಹೊಳೆದುದನ್ನು ಮಾಜದೆ ನಾನು ಬಿನ್ನವಿಸಿದೆ ಸ್ವಾಮಿ. ನೀನು ನಿನ್ನಲ್ಲಿ ಆಲೋಚಿಸು. ನಿನ್ನ ಮಿತ್ರರೇನು ತಿಳಿಯದವರೆ? ಸನ್ನಿಧಿಯಲ್ಲೇ ಇದ್ದಾರೆ.'' ಎಂದು ಮತ್ತೆ ಬಾಹುಬಲಿಯ ಮಂತ್ರಿ ನುಡಿದನು.

ಆ ಮಾತಿಗೆ ಕಾಮನ ಸಖರಾದ ದಕ್ಷಿಣ, ನಾಗರರೇ ಮೊದಲಾದವರು ಒಟ್ಟಾಗಿ ನೇಮವನ್ನು ಕಂಡು ಆಡಿದ ಪ್ರಣಯಚಂದ್ರಮ ಮಂತ್ರಿಯ ಮಾತುಗಳನ್ನು ಸ್ವಾಮಿಯು ಮೆಚ್ಚುವನೆಂದರು.

''ಪರಮುಖ ಜಾಣನಾದ ಸ್ವಾಮಿಯೆ, ನೀನರಿಯದ ಸುರುಚಿರ ಕಲೆಗಳೇನುಂಟು? ಹಿರಿಯಣ್ಣನ ಎಡೆಗೆ ಹೋಗೆನೆನ್ನುವುದು ಉಚಿತವೆ? ತಾವೇ ಸ್ಮರಿಸಿ ನೋಡಿರಿ. ನಿನ್ನನ್ನು ಮೃದುಚಿತ್ತನೆನ್ನುವರು. ನಿನ್ನೊಡನೆ ಆಡಿದ ನಮ್ಮನ್ನು ಚದುರರೆಂದೂ ಹೇಳುತ್ತಾರೆ. ಇದನ್ನು ನೀನು ನೆನೆದರೆ, ನಮಗಿನ್ನೂ ಲೋಕದಲ್ಲಿ ಸತ್ಕೀರ್ತಿಯುಂಟೇ ಸ್ವಾಮಿ? ಅಣ್ಣನೆಂದಾಗ ನಿನ್ನ ಅಣ್ಣನು ಎಲ್ಲರಂತಿರುವ ಅಣ್ಣನೆ ! ತಮ್ಮನೆಂದಾಗ ಅಣ್ಣ ಅಪ್ಪಂದಿರಂತಿರುವ ತಮ್ಮನೇ ! ನೀನಿಂತು ಬಿಣ್ಣತು ತೋರುವುದೆ ಸ್ವಾಮಿ ? ಜಗತ್ತಿಗೇ ಅಗ್ರಗಣ್ಯರು ನೀವು. ನೀವು ಕೂಡಿರುವುದು ಜಗತ್ತಿನ ಸೌಭಾಗ್ಯ; ನಮಗೆಲ್ಲ ಪ್ರೀತಿ.'' ಎಂದು ಆ ಸಖರು ಹೇಳುತ್ತ ಮಂತ್ರಿಗೆ ದುಗುಡಬೇಡೆಂದು ಸನ್ನೆ ಮಾಡಿ ಕೈಮುಗಿದು ಅಡ್ಡಬಿದ್ದರು.

''ಏಳೇಳು ಮಂತ್ರಿ. ಸಾಕು, ಏಳಿರ್ಮ ಸಖರೆ. ನಿಮ್ಮ ನುಡಿಯನ್ನು ಪಾಲಿಸುವೆನು. ಆದರೂ ಒಂದು ಮಾತುಂಟು. ಅದನ್ನು ಕೇಳಿ'' ಎಂದು ಬಾಹುಬಲಿ ನುಡಿದಾಗ ಅವರೆಲ್ಲರೂ ಎದ್ದರು.

''ನೀವೆಲ್ಲ ನನಗೆ ಹಿತರೆಂದು ಕಂಡಿದ್ದೆ. ನೀವು ನನ್ನ ಮನಸ್ಸಿಗೆ ಇಚ್ಛೆ ಇಲ್ಲದ ನುಡಿಯನ್ನು ಅನುವಡಿಸುವದೆ? ನನ್ನವರೆಂದರೆ ನನ್ನ ಮಾತನ್ನೇ ಮೆಚ್ಚಬೇಡವೆ? ಇಲ್ಲಿ ನೋಡಿ, ಚಕ್ರಿಯ ಇಚ್ಛೆಯನ್ನೇ ಅವನ ಸುಖನು ಆಡಿದನಷ್ಟೆ. ನೀವಿದನ್ನು ನೋಡಿಕೊಂಡಾದರೂ ನನ್ನತ್ತ ಆಡದೆ ಹೀಗೆ ಮಾತಾಡಬಹುದೆ?''

ಇದನ್ನೆಲ್ಲ ಕೇಳುತ್ತಿದ್ದವರು ಸೈರಿಸಲಾರದಾದರು. ಓಲಗದ ಹೆಣ್ಣುಗಳಲ್ಲಿ ಕೆಲವರು. ''ಎಲ್ಲರ ಇಚ್ಛೆಯನ್ನೂ ಪಾಲಿಸಬೇಕು.'' ಎಂದು ತಮ್ಮ ದೇಹವನ್ನುದ್ದ ಮಾಡಿ ಅಡ್ಡಬಿದ್ದರು. ಬಾಹುಬಲಿಯು ಗಣ್ಯರಾದ ಮಂತ್ರಿಸಖರ ಮಾತುಗಳನ್ನು ದಾಕ್ಷಿಣ್ಯದಿಂದ ಕೇಳುತ್ತಿದ್ದನು. ಆದರೆ ಗಣ್ಯನಾರಿಯರಾಡಿದ ಮಾತಿಗೆ ಉಗ್ರವಾಗಿ ಕೋಪಗೊಂಡನು. ''ಸುತ್ತಲೂ ಸುಮ್ಮನೆ ನೋಡುತ್ತಿರುವುದನ್ನು. ಬಿಟ್ಟು ಬುದ್ಧಿಯನ್ನು ಹೇಳಲು ನಿಮ್ಮನ್ನಿತ್ತ ಯಾರು ಕರೆದರು? ಈ ತೊತ್ತುಗಳನ್ನು ಬಡಿಬಡಿ'' ಎಂದು ಕಳಕಂಠಗೆ ಮನ್ಮಥನು ಆಜ್ಞೆಯಿತ್ತನು.

ಬಾಳೆಯ ಸುಳಿಯ ಕಟ್ಟಿಗೆ ಕೋಲಿನಿಂದ ಅವನು ಅವರನ್ನು ಹೊಡೆದನು ''ಏಳಿ, ಏಳಿ, ಮೂಲೆಗೆ ಓಡಿ ಓಡಿ'' ಎಂದನು. ಆ ಪೆಟ್ಟಿಂದ ಹೆಣ್ಣುಗಳ ಮೈಯಲ್ಲಿ ಪುಷ್ಪಮಾಲೆಯಂತೆ ಬಾಸಳು ಒಡೆದದ್ದು ತೋರಿತು. ಓಡಿಸಿ ಹೊಡೆವಾಗ ಒಬ್ಬ ಚಪಲೆಯು ಹುಲ್ಲೆಯು ಹಾಗೆ ಹಾರಿ ಓಡಿದಳು. ನೈದಿಲೆಯ ದಂಟಿನಿಂದ ಹೊಡೆದರೂ ಅವರ ಮೈ ತೊಗಲು

ಉಬ್ಬಿಕೊಂಡಿತು. ಮತ್ತೆ ಕೋಕಿಲನೆಂಬ ಚಾಟಿಕೋಲಿನವನಿಗೆ ಹೊಡಿ ಹೊಡಿಯೆಂದು ಕಣ್ಣೊತ್ತಿದೊಡನೆ, ಅವನು ಅಶೋಕೆಯ ತಳಿರಿಂದ ಮೈಗೆ ಸುತ್ತುವಂತೆ ಅಟ್ಟಿ ಅಟ್ಟಿ ಹೊಡೆದನು. ಮಲಯ ಮಾರುತ, ಮಂದಮಾರುತರೆಂಬ ಇಬ್ಬರು ಘನ ಜಟ್ಟಿಗಳು ನೇಮಿಸಿದೊಡನೆಯೇ ಎಳೆದೆಳೆದು ಅತ್ತಿತ್ತ ನೆಗೆದು ಗುದ್ದಿದರು. ಅದು ತಂಗಾಳಿಯ ಎಳೆಲತೆಯನ್ನು ಅಲ್ಲಾಡಿಸಿದಂತಾಯಿತು. ಕೆಲವರು ಅತ್ತಿತ್ತ ಓಡುವಾಗ ಒಬ್ಬರಿಗೊಬ್ಬರು ಎಡವಿ ಬಿದ್ದುಬಿಟ್ಟರು.

ಅನಂತರ ಕೆಲವರು ಹೊಡೆಯ ಬಂದವರಿಗೆಲ್ಲ ಒಂದೊಂದು ಮಾತು ಹೇಳಿ ತಪ್ಪಿಸಿಕಂಡರು. ಕೆಲವರು ಲಂಚ ಕೊಟ್ಟು ತಪ್ಪಿಸಿಕೊಂಡರು. ಇದರಿಂದಾಗಿ ಎಲ್ಲರಿಗೂ ಜ್ವರ ಹೆಚ್ಚಿತು. ಶ್ವಾಸಹೆಚ್ಚಿತು. ಕಣ್ಣು ತಿರುಗಿ ಕಂಪನವುಂಟಾಯಿತು. ಬೆವರು ಬಂತು.

''ಅರಿಯದೆ ಆಡಿದೆವು ಸ್ವಾಮಿ, ಪಾಲಿಸುವುದು'' ಎಂದವರು ಮೊರೆಯಿಟ್ಟರು. ಎರಗಿ ಕೈ ಮುಗಿದವರನ್ನು ಬಾಹುಬಲಿಯು ಮನ್ನಿಸಿದನು. ಆದರೂ ಅವನ ಮುನಿಸಳಿದಿರಲಿಲ್ಲ.

''ಪರಿಣಾಮದಲ್ಲಿರುವವರು ಅನುಭವಿಸುತ್ತಿರುವವರು. ನಮ್ಮ ನಗರದಲ್ಲಿ ಭೋಗಿಗಳಿಗೇನು ಕಡಿಮೆಯೇ? ಭರತೇಶನ ಆಳುಗಳನ್ನು ನೋಡಬೇಕಾಗಿತ್ತೇ? ಎಲ್ಲ ಹೆಣ್ಣುಗಳೂ ಸುಮ್ಮನಿರುವಂತೆ ಇರದೆ ನೀವು ನನಗೊಂದು ಹೇಳಿ ಬಲ್ಲವಿಕೆಯ ತೋರಿಸುವಂತಾಯಿತೆ? ಶಹಭಾಸ್, ಮನ್ಮಥನೇನೂ ಸಾಮಾನ್ಯನಲ್ಲ! ಮನೆ ಮನೆಗೆಲ್ಲ ಬಲ್ಲವರಾದಿರಿ; ನಾನೊಬ್ಬ ಇಷ್ಟು ತಿಳಿಯದವನಾದೆ. ಜಿನಸಿದ್ಧಾ ಹಂಸನಾಥನೆ ಬಲ್ಲ. ಕಾಮನ ಕರ್ಮವೆ. ವಿಧಿಯೆ... ಅವಿವೇಕದಲ್ಲಿ ನಡೆಯುವವನು ನಾನೊಬ್ಬ; ನೀವೆಲ್ಲ ಸುವಿವೇಕದಲ್ಲಿ ಓಜೆ ತೋರುವಿರಿ. ಹೊಲಿದು ಮಾಡಿದ ಹೊದಿಕೆಯಾದ ಕವುದಿಗೆ ಹಲ್ಲು ಬಂದಂತೆ ಮಾತನಾಡಿಸುವುದು ಕಾಲವೋ ಕರ್ಮವೋ ಹಂಸನಾಥನೆ ಬಲ್ಲ. ನನ್ನ ಬದುಕನ್ನು ಒಪ್ಪದಿರುವ ಇವರೆಂಥವರೋ. ಹೊ, ಹೊ.''

ಎಂದು ಬಾಹುಬಲಿ ನುಡಿದುದನ್ನು ಕೇಳಿ ಮಂತ್ರಿಸಖರೆಲ್ಲ ಭೀತಿಗೊಂಡರು. ಮೊರವನ್ನು ಹೊಡೆದು ಬೆಕ್ಕನ್ನು ಅಂಜಿಸಿಕೊಂಡನೆಂಬ ಗಾದೆಯ ಮಾತಿನಂತೆ ಮದನನು ಹೊರಹೆಂಗಸರ ಮೇಲೆ ಕೋಪಿಸಿ, ಉರುಬಿ ಹೇಳುವ ಮಂತ್ರಿಸಖರನ್ನು ಅಂಜಿಸಿಬಿಟ್ಟನು. ಹೋರಿ ಹೇಳುತ್ತಿರುವ ಮಂತ್ರಿಸಖರ ಮೇಲಿನ ಕೋಪವು ವಾರನಾರಿಯನ್ನು ನೋಯಿಸಿತು. ಊರಿಗೆ ಬಂದ ಮಾರಿ ಬೀರಸೆಟ್ಟಿಯ ಹೊಡೆಯಿತೆಂಬ ದಾರಿಕಾರರ ಗಾದೆಯಂತೆ.

ಇದನ್ನು ಕಂಡ ಸಭೆಯು ನಡುಗುತ್ತ ಸುಮ್ಮಗಿತ್ತು. ಬಾಹುಬಲಿಯೀಗ ದೂರದಲ್ಲಿದ್ದ ಗುಣವಸಂತಕನೆಂಬ ದಳನಾಯಕನನ್ನು ನೋಡಿದನು; ''ಇತ್ತ ಬಾರಯ್ಯ ಗುಣವಸಂತಕ; ದೂರದಲ್ಲೇಕೆ ನಿಂತೆ? ನನ್ನ ಮಾತು ಹೊತ್ತು ಹೋಕವೊ? ನೀತಿಯೊ? ಚಿತ್ತದಲ್ಲಿದ್ದುದನ್ನು ಹೇಳು.'' ಎಂದನು.

''ಸ್ವಾಮಿ, ಕೆಟ್ಟೆ ಕೆಟ್ಟೆ. ನಿನ್ನ ನಿರೂಪವನ್ನು ಯಾರಾದರೂ ಕುಟ್ಟಿ ಪರೀಕ್ಷಿಸುವವರಿದ್ದಾರೆಯೇ? ಕಟ್ಟಾಣಿ ಮುತ್ತಿನ ಸರವದು, ಅದು ಸೊಬಗಿನ ಕಟ್ಟೆ; ಲೇಸಿನ ಬಟ್ಟೆ. ನೀನು ರಾಜಾಂಗವನ್ನೇ ಆಡಿ ತೋರಿದೆಯಲ್ಲದೆ ವ್ಯಾಜಾಂಗವನ್ನು ಹೇಳಲಿಲ್ಲ. ತೇಜಸ್ವಿಯು ಒಬ್ಬನಿಗೇಕೆ ಎರಗುವನು? ಮಾರನು ಅಗ್ಗಳನೆಂದು ಎಲ್ಲರೂ ಹೇಳುವರು.

ಮತ್ತೆ ಈ ರೀತಿಯಾಗಿ ಹೋಗಿ ಅಡ್ಡಬಿದ್ದರೆ ಮಹಾರಾಯನೆಂದು ಹೇಳುವರೆ ನಿನ್ನನ್ನು ನೋಡಿದವರು?'' ಎಂದು ಗುಣವಸಂತಕನು ವೇಳೆಯರಿತು ನುಡಿದನು.

ಅದಕ್ಕೆ ಬಾಹುಬಲಿಯು ಮೆಚ್ಚಿದನು. ಬಾ ಬಾ ಎಂದು ಕರೆದು ಪಚ್ಚೆಯ ಪದಕವನ್ನು ಮೆಚ್ಚುಗೊಟ್ಟನು. ''ಅವಮಾನಕ್ಕೆಡೆಗೊಡದ ವೀರನು ನೀನು. ನಾನು ನಿನ್ನನ್ನು ನೆಚ್ಚಿದೆನು. ಇನ್ನು ಹೋಗು.'' ಎಂದನು. ಕಳಕಂಠ ಮತ್ತು ಕೋಕಿಲ, ಮಂದಮಾರುತ, ಮಲಯ ಮಾರುತರೂ ಹೊತ್ತನ್ನು ತಿಳಿದೇ ಮಾತನಾಡಿದರು. ''ಸ್ವಾಮಿ ನಿನ್ನ ಕಾರ್ಯಕ್ಕೆ ಸರಿಯುಂಟೇ?'' ಎಂದರು. ಅದನ್ನು ಕೇಳಿ ಅವರಿಗೂ ಮೆಚ್ಚನ್ನು ಕೊಟ್ಟನು. ''ನೀವೀಗ ನನ್ನವರು, ಉಳಿದವರನ್ನು ಏನೆಂದು ಭಾವಿಸಲಿ.'' ಎಂದು ಓರೆಮುಖದಿಂದ ಓಲಗವನ್ನು ಮುಗಿಸಿ ಚಾವಡಿಯಿಂದೆದ್ದನು. ಎಲ್ಲರೂ ಎದ್ದರು.

ಮಂತ್ರಿಸಖರೂ ದಕ್ಷಿಣಾಂಕನೂ ಮಾತನಾಡದೆ ಹೊರಟರು. ಹೆಣ್ಣುಗಳೂ ದುಡುಗುಟ್ಟುವ ಎದೆಯಿಂದ ಕೂಡಲೇ ಕೈಮುಗಿದು ಹೋದರು. ನೊಂದ ಹೆಣ್ಣುಗಳಿಗೆ ಕೈಕೊಟ್ಟು, ಚೆಲ್ಲಿದ ಮಣಿಗಳನ್ನು ಹಾರೈಸದೆ, ಬಿಚ್ಚಿದ ಮುಡಿಯನು ಚೆಂದಗೊಳಿಸದೆ ಹೋದರು. ಗುಣವಸಂತಕ ಮೊದಲಾದ ಐವರು ಮಾತ್ರ ಇದ್ದರು. ಗದ್ದುಗೆಯಲ್ಲಿದ್ದ ಬಾಹುಬಲಿಯು ಕಳಕಂಠನನ್ನು ಕರೆದು, ದಕ್ಷಿಣಾಂಕನನ್ನು ಕರೆಯೆಂದಟ್ಟಿದನು. ಅವನು ಕಡೆಬಾಗಿಲಿಗೆ ಓಡಿಬಂದು ಕರೆದಾಗ, ಒಡೆಯನ ಮನವಿಷ್ಟು ಬೇಗನೆ ತಿಳಿಯಾಯಿತೆಂಬ ಆಸೆಯಿಂದ ದಕ್ಷಿಣಾಂಕನು ಬಂದು ಕೈ ಮುಗಿದನು.

''ದಕ್ಷಿಣ, ಕೇಳು; ನಿನ್ನ ದೊರೆಯಿನ್ನು ನನ್ನ ಮೇಲೆ ದಾಳಿ ಮಾಡದೆ ಹೋಗುವವನಲ್ಲ. ಕಾಳಗವು ಇಲ್ಲಿ ಬೇಡ. ನೀವಿರುವ ಪಾಳಯಕ್ಕೆ ನಾನು ಬರುವೆನು. ಆರು ಖಂಡವನ್ನು ಗೆದ್ದನೆಂಬವನ ಗರ್ವವನ್ನು ಮಾರಾಂಕದಲ್ಲಿ ಎತ್ತಿ ತೂಗಿ ತೋರಿಸುವೆನು.'' ಎಂದ ಬಾಹುಬಲಿಯ ನುಡಿಯನ್ನು ಕೇಳಿ ದಕ್ಷಿಣನು ಭಾಗ್ಯವೇ ಹರಿದುಹೋಯಿತೆಂದು ಭಾವಿಸಿದನು.

''ಹೋಗು ದಕ್ಷಿಣ, ನಿನ್ನ ಒಡೆಯಗಿದನ್ನು ಹೇಳು.'' ಎಂದಾಗ ದಕ್ಷಿಣಾಂಕನು ಮೌನವಾಗಿ ಕೈಮುಗಿದು ಹೋದನು. ''ಚಕ್ರಿಯ ಆಪ್ತರನ್ನು ನಮ್ಮ ಪಟ್ಟಣಕ್ಕೆ ಹೊಗಿಸಬಾರದು.'' ಎಂದು ಬಾಹುಬಲಿಯು ಗುಣವಸಂತಕ ಮೊದಲಾದವರಿಗೆ ಹೇಳಿ ಅಂತಃಪುರವನ್ನು ಸೇರಿದನು.

ದಕ್ಷಿಣನು ಮರಳಿದಾಗ ಅವನ ಮಾತು ಕೇಳಿ, ಅಲ್ಲಿ ನಿಂತಿದ್ದವರು ಉಸ್ಸೆಂದು ಉಸಿರೆಳೆದುಕೊಂಡರು. ಅಲ್ಲಿಗೆ ಬಂದ ಗುಣವಸಂತಕ, ಮತ್ತು ಕೋಕಿಲ ಮುಂತಾದವರು ಅರಸನನ್ನು ಸಂತೈಸಲೆಂದು ತಾವಾಡಿದೆವೆಂದೇ ತಿಳಿಸಿದರು. ದೊರೆಗಳಿಬ್ಬರು ಕೂಡುವುದನ್ನು ನೋಡುವ ಭಾಗ್ಯವಿನ್ನು ಇಲ್ಲವಾಯಿತೆಂದು ದಕ್ಷಿಣನು ನೋವಿನಲ್ಲೇ ತೆರಳುವಾಗ ಮನ್ಮಥನ ಮಂತ್ರಿ ಸಖರೂ ದಕ್ಷಿಣಗೊಂದು ಆಸೆ ಮಾತನ್ನೇ ಹೇಳಿದರು. ''ಮನ್ಮಥನಿಗೆ ಜನನಿಯಿನ್ನು ಬುದ್ಧಿ ಹೇಳುವರು. ಕೋಪವಿಳಿದಾಗ ನಾವೂ ನೋಡುತ್ತೇವೆ. ಅನುಕೂಲವಾದರೆ ಓಲೆ ಕಳುಹಿಸುತ್ತೇವೆ. ಇಲ್ಲವಾದರೆ ಸುಮ್ಮನಿರುವೆವು. ನೀನಿನ್ನು ಹೋಗು'' ಎಂದು ಅವನನ್ನು ಬೀಳ್ಕೊಟ್ಟರು.

## ೩೦

# ಕಟಕ ವಿನೋದ

ಭರತೇಶ್ವರನ ಸಖನಾದ ದಕ್ಷಿಣಾಂಕನು. ಬಾಹುಬಲಿಯ ಆಪ್ತರನ್ನು ಬೀಳ್ಕೊಂಡು ತನ್ನ ಹಿರಿಯ ಪಡೆಯೊಂದಿಗೆ ಕಡೆಯ ಹಜಾರದ ಬಾಗಿಲ ಮುಂದಕ್ಕೆ ಬಂದನು. ಹಾಗೆ ಬಂದವನೇ ತನ್ನ ಸೇವೆಯ ಕುರಿತು ಯೋಚಿಸಿದನು. ಆ ಕಾರ್ಯದ ಅಂದವು ಕೆಟ್ಟುದಕ್ಕೆ ಸಿಗ್ಗಾಗಿ ಹೋದನು. ಕಂದಿದ ಮುಖದಿಂದ ಕೆಲಬಲಕ್ಕೆ ಕಾಲಿಡದ ಕಣ್ಣಿನಿಂದ ಮೌನವಾಗಿ ಮುಂದೆ ನಡೆದನು.

ಅವನನ್ನು ನೋಡಿದ ಪುರಜನರು ತಮ್ಮೊಳಗೇ ಮಾತನಾಡಿಕೊಂಡರು :

''ಇವನು ಬಹಳಸಂತೋಷದಿಂದ ಹೋದವನು. ಹಿಂತಿರುಗುವಾಗ ಇವನಿಗಿಷ್ಟಾಯಿತೆ ಚಿಂತೆ? ದೊರೆಗಳ ಸೇವೆಯ ಸುಖವು ಹೀಗೇ.''

''ಇಷ್ಟವಾದುದನ್ನೇ ಇವನು ನುಡಿದನು. ನಮ್ಮೊಡೆಯರೇ ಮುನಿದರು. ಶಿಷ್ಟನಾದ ಇವನಿನ್ನು ತನ್ನೊಡೆಯನನ್ನು ಹೇಗೆ ದೃಷ್ಟಿಸಲೆಂದು ಯೋಚಿಸುತ್ತಿರುವನು. ಸುಡು; ಪರಸೇವೆ ಕಷ್ಟ.''

''ಕಾರ್ಯವಾದರೆ ನಮ್ಮರಸನ ಪುಣ್ಯದಿಂದಾದುದೆಂದು ಹೇಳುವರು. ಕಾರ್ಯ ತಪ್ಪಿದಾಗ ಹೋದವರಿಂದ ತಪ್ಪಿತೆನ್ನುವರು. ಪರಸೇವೆಯೆಂಬುದು ಮೂದಲೆ.''

''ಹಿರಿಯಣ್ಣನಲ್ಲವೆ? ನರಲೋಕಕ್ಕೆ ಒಬ್ಬ ದೊಡ್ಡರಸಲ್ಲವೆ? ಚಕ್ರಿಯೊಡನೆ ವಿರಸವನ್ನು ನೆನೆದಾಗ ನಮ್ಮರಸನು ಸುರಸನಲ್ಲವೆಂದೆನಿಸುತ್ತದೆ.''

ದಕ್ಷಿಣಾಂಕನು ಅವರಾಡುತ್ತಿದ್ದ ಮಾತುಗಳನ್ನೇ ಭಾವಿಸುತ್ತ ನಡೆದನು. ಮನಸ್ಸಿನ ವಿರಸವನ್ನು ನೆನೆದಾಗ ನಮ್ಮರಸನು ಸುರಸನಲ್ಲವೆಂದೆನಿಸುತ್ತದೆ.''

ದಕ್ಷಿಣಾಂಕನು ಅವರಾಡುತ್ತಿದ್ದ ಮಾತುಗಳನ್ನೇ ಭಾವಿಸುತ್ತ ನಡೆದನು. ಮನಸ್ಸಿನ ಬೇಸರದಲ್ಲಿ ಬರುತ್ತಿದ್ದ ಅವನು ಸೇವಕನೊಬ್ಬ ಮುಂದೆ ಬಂದಾಗ ಕಣ್ಣನೋಟದಿಂದಲೇ ಹಿಂದಕ್ಕೆ ಕಳುಹಿಸಿದನು. ಪರಾಕು ಹೇಳುವವರನ್ನು, ಆಡುವ ಪಾಠಕರನ್ನು, ಬಾಯಿ ಮುಚ್ಚಿ ಹಿಂದಕ್ಕೆ ಕಳುಹಿಸಿದನು. ಬೀಸುವ ಚಾಮರವನ್ನು ನಿಲ್ಲಿಸಿದನು. ನೀಡಿದ ವೀಳೆಯದೆಲೆಯನ್ನು ಕೊಳ್ಳದೆ ಬಿಟ್ಟನು. ಆಳುವವನು ಅಟ್ಟಿದ ಊಳಿಗವು ಭಂಗವಾದ ಹೀಹಾಳಿಕೆಯಲ್ಲೇ ಬರುತ್ತಿದ್ದನು. ಪಲ್ಲಕಿಯನ್ನು ತಂದು ಹಾಕಿದಾಗ ತಲೆಯಲ್ಲಾಡಿಸಿ ಸುಮ್ಮನೆ ಹೋದನು. ದಂಡಿಗೆಯನ್ನು ತಂದಾಗ, ಅದನ್ನು ಕಣ್ಣೆತ್ತಿ ನೋಡದೇ ಮುನ್ನಡೆದನು. ಆನೆ ಕುದುರೆಗಳನ್ನು ತಂದಾಗಲೂ ಅವುಗಳನ್ನು ನೋಡದೆ ಮೌನದಲ್ಲೇ ಹೋದನು. ಗುರುಸೇವೆ ತಪ್ಪಿದ ಶಿಷ್ಯನು ಚಿಂತಿಸುವಂತೆ, ರಾಜನ ಕಾರ್ಯ ಕೆಟ್ಟಿತೆಂದು ಕೊರಗುತ್ತ ಕಾಲ್ನಡೆಯಲ್ಲೇ ಬಂದು ಪೌದನಪುರದ ಬಾಗಿಲನ್ನು ದಾಟಿದನು.

''ಒಡೆಯನ ಹತ್ತಿರ ಹೋಗಬೇಡವೆ? ನಡೆದು ಹೋಗುವುದು ಸಾಧ್ಯವೆ?'' ಆಪ್ತರು ಕೇಳಿದರು. ''ನಡೆದು ಹೋದರೆ ತಡವಾದೀತು. ಆದರೆ ಆನೆ ಕುದುರೆಗಳ ಸವಾರಿ ಬೇಡವೆಂದು ದಕ್ಷಿಣನು ಅವರಿಗೆ ತಿಳಿಸಿ, ಮರುತ ಒಂದನ್ನು ತರಹೇಳಿದನು. ಒಡನೆ ಅದನ್ನೇರಿದನು. ಸತ್ತಿಗೆ ಹಿಡಿದಾಗ ಬೇಡವೆಂದನು. ವಾದ್ಯಗಳನ್ನೂ ಬೇಡವೆಂದನು. ''ಸ್ವಾಮಿಯ ಕೆಲಸಕ್ಕೆ ಗೆಲುವಾದರೆ ಮಾತ್ರ ನಾವು ಮಹಾಮಹಿಮೆಯಿಂದ ಹೋಗಬೇಕು. ಕಾಮಿನಿಯಿಲ್ಲದೆ ಕೈಧಾರೆ ಮಾಂತ್ರವೆ?'' ಎಂದು ಸ್ವಾಮಿಯ ಹಿತಕ್ಕಾಗಿ ನೊಂದಿರುವ ದಕ್ಷಿಣನು ನುಡಿದನು.

ತಡವಿಲ್ಲದೆ ತಾನು ಸ್ವಾಮಿಯನ್ನು ಕಾಣುವೆನೆಂದೂ ತನ್ನ ಪಡೆಯು ಹಿಂದಿನಿಂದ ಬರಲೆಂದೂ ಪಡೆಯ ಮುಖ್ಯರಿಗೆ ಹೇಳಿ ಮರುತವನ್ನು ಹತ್ತಿ, ಕೆಲವೇ ಮಂದಿಯೊಂದಿಗೆ ಮುನ್ನಡೆದನು. ಬಿಗುಹಿನ ಕುಲ್ಲಾಯಿ, ಚಲ್ಲಣ ಕಾಸೆ, ದಟ್ಟಿ, ಹೊಳೆವ ಹೊಂಜುರಿಗೆ, ಮಿಂಚಿನ ಬಿಲ್ಲಿ ಇವುಗಳಿಂದ ಹಗುರವಾಗಿಯೇ ಸಿಂಗರಿಸಿಕೊಂಡು ಬಂದನು. ಮರುತವನ್ನೇರಿ ಬರುವವನಿಗೆ ತಡವಾಗುವುದುಂಟೆ. ತ್ವರಿತದಲ್ಲಿ ಬಂದು ಕಟಕವನ್ನು ಹೊಕ್ಕು ತನ್ನವರನ್ನು ಮಂದಿರಗಳಿಗೆ ಬೀಳ್ಕೊಟ್ಟನು.

ಭರತೇಶನು ಇರುಳಿನ ಓಲಗವಿತ್ತು, ಎಲ್ಲರನ್ನು ಕರೆಯೆಂಬ ವೇಳೆಗೊಬ್ಬ ದೂತನು ಬಂದು ದಕ್ಷಿಣನು ಬಂದ ವಾರ್ತೆಯನ್ನು ತಿಳಿಸಿದನು. ''ದಕ್ಷಿಣ ನಾಯಕನು ಹಿಂಡನ್ನುಳಿದ ಹಂಸಪಕ್ಷಿಯೋ, ಎಲೆಗಳು ಉದುರಿದ ಚೂತವೋ ಎನ್ನುವಂತೆ ಬಂದಿರುವುದನ್ನು ದೂರದಿಂದ ನೋಡಿ ಬಂದೆನು. ಪರಿವಾರವಿಲ್ಲ; ವಾದ್ಯಗಳಿಲ್ಲ, ಹತ್ತೆಂಟು ಮರುತಗಳೊಡಗೂಡಿ ಭರದಿಂದ ಬಂದು ಎಲ್ಲರನ್ನೂ ಕಳುಹಿಸಿ ತಾನಿಲ್ಲಿಗೆ ಬರುತ್ತಿದ್ದಾನೆ.''

ಭರತೇಶನು ಅದನ್ನು ಕೇಳಿದೊಡನೆ ಓಲಗಕ್ಕೆ ಇನ್ನಾರು ಬೇಡವೆಂದು ಆಜ್ಞಾಪಿಸಿ ಆವನನ್ನು ಕಳುಹಿಸಿದನು. ಅದನ್ನು ಕೇಳಿದ ಮಾಗದ ಮೇಘೇಶ್ವರರು ಸಭೆಗೆ ಬಂದವರು ಹೊರಡಲನುವಾದರು. ಆಗ ಭರತೇಶನೇ ಅವರನ್ನು ಸಭೆಯಲ್ಲಿರಲು ಹೇಳಿದನು.

''ನೀವೇಕೆ ಹೊರಟಿರಿ? ನಿಮ್ಮನ್ನು ಕಳೆದು ನನಗೆ ಏಕಾಂತ ಉಂಟೆ? ಗೆಳೆಯರೂ ಎಂಟುಮಂದಿ ಮಂತ್ರಿಗಳೂ ನನ್ನ ಮೈಗೆ ಆಳವಟ್ಟಿರುವ ಪ್ರಭೆಯಲ್ಲವೆ? ಭುಜಬಲಿಯ ಕೆಲಸವೀಗ ಬಿರುಸಾಯ್ತು, ಅವನು ಬಲುಗರ್ವಿಯೆಂದು ನಾನು ಮೊದಲೆ ಅರಿತಿದ್ದನು. ಓಲೆ ಬರೆದು ಕಳುಹಿಸದೆ ಸ್ನೇಹಿತನನ್ನು ಕಳುಹಿಸಿದೆನು.'' ಎಂದು ನೊಂದುಕೊಂಡನು.

ಅಷ್ಟರಲ್ಲಿ ದಕ್ಷಿಣಾಂಕನಲ್ಲಿಗೆ ಬಂದನು. ತನ್ನ ಒಡೆಯನನ್ನು ಇದಿರಿನಲ್ಲಿ ಕಂಡು ಒಡವೆಯನ್ನು ಕಳಕೊಂಡ ಮಗನು ತಂದೆಯನ್ನು ಕಾಣುವಂತೆ ಕಡುಲಜ್ಜೆಯಿಂದ ಬಂದನು. ಬಾಡಿದ ಮೊಗ, ಬಸವಳಿದ ಮೈಯಿಂದ ತನ್ನನ್ನು ನೋಡಲು ನಾಚುತ್ತಿರುವ ಸಖನನ್ನು ನೋಡಿ ಭರತಚಕ್ರೇಶ್ವರನು. ''ಚಿಂತೆಯೇಕೆ? ನಲ್ಮೆಗೂಡಿ ಬಾ. ಬೆದರದಿರು.'' ಎಂದು ಧೈರ್ಯವಿತ್ತನು. ''ಮೊದಲೇ ನಾನವನ ಅಂತರಂಗವನ್ನು ಬಲ್ಲೆ. ಬೇರೆಯವರನ್ನು ಕಳುಹಿಸದೆ ನಿನ್ನನ್ನು ಕಳುಹಿಸಿದೆ. ಅದು ನನ್ನ ತಪ್ಪು. ನಿನ್ನಲ್ಲಿ ತಪ್ಪಿಲ್ಲ'' ಎಂದು ಸಂತೈಸಿದನು.

ದಕ್ಷಿಣನು ಬಂದು ಸಮ್ಮುಖದಲ್ಲಿ ನಿಂದು ಚಕ್ರಿಯ ಮುಂದೆ ಮೈನೀಡಿ ಅಡ್ಡಬಿದ್ದನು.

“ಸ್ವಾಮಿ ಒಂದನ್ನೂ ಮಾತನಾಡಲೂ ನನಗೆ ಬಾಯಿ ಬರದು. ನನ್ನಿಂದ ಕಾರ್ಯವು ತಪ್ಪಿತು. ಇನ್ನೊಬ್ಬ ಹೋದರೆ ಚಂದವಾಗುವುದು. “ನನ್ನಿಂದ ಹಸಗೆಟ್ಟಿದುದು ಒಡೆಯ, ನಿನ್ನ ತಮ್ಮನಲ್ಲಿ ಏನೂ ಕಡಿಮೆಯಿಲ್ಲ” ಎಂದು ತಿಳಿಸಿದನು. ಚೆನ್ನಾಯಿತು; ಏಳೆಂದು ಭರತೇಶನು ನುಡಿದ ಮೇಲೆ ದಕ್ಷಿಣನು ಎದ್ದು ನಿಂತುಕೊಂಡನು. ಅವನೊಡನೆ ಭರತೇಶನು ವಿಷಯವನ್ನು ತಿಳಿಯತೊಡಗಿದನು.

“ತಮ್ಮನು ಏನೆಂದನು? ಹೇಳು.”

“ಕುಸುಮಾಸ್ತ್ರನಲ್ಲವೆ ಅವನು. ಕುಸುಮದಂತಹ ಮೃದುಮಾತುಗಳನ್ನೇ ಆಡಿದನು. ‘ಅಣ್ಣಾಜಿ ಪರಿವಾರಗೂಡಿ ಕೋಸಲಕ್ಕೆ ಹೋಗಲಿ.” ಎಂದನು.”

“ನೋಡಿದೆಯಾ? ನನ್ನ ಪುರಕ್ಕೆ ಹೋಗಲು ಅವನ ಅಪ್ಪಣೆಯೇ? ಗರ್ವವು ಅವನನ್ನು ಕಾಡುತ್ತಿದೆ. ಕಾಳಗವೆಂದನೊ? ಕಡೆಯ ಮಾತೊಂದನ್ನೇ ಹೇಳು ಅಂಜಬೇಡ.”

“ಕಾಳಗವಲ್ಲ, ಅಣ್ಣನೊಡನೆ ಸಾಧನೆ ಮಾಡುವ ಲೀಲೆಗೆ ಇಚ್ಛಿಸಿದ್ದೇನೆಂದು ಹೇಳಿದ. ಚಿಕ್ಕಂದು ದೇವರೊಡನೆ ಸಾಧನೆ ಮಾಡಿದುದನ್ನು ನಿನ್ನ ಪಾಳೆಯಕ್ಕೆ ಬಂದು ತೋರುವೆನೆಂದನು. ವಿನಯತಂತ್ರದಿಂದ ನಾನು ಕರೆದೆನು, ಅವನ ಸಜ್ಜನರೂ ಹಾಗೇ ಹೇಳಿದರು. ಮತ್ತೆ ಹೆಣ್ಣುಗಳೂ ಹೇಳಿದರು. ಆದರೇನು, ಹೇಳಲಿ ಸ್ವಾಮಿ. ನಿನ್ನ ತಮ್ಮನ ಮನಸ್ಸಿಗೂ ಅದೊಂದು ಆಗಲಿಲ್ಲ. ನಿನ್ನನ್ನು ಕಂಡಂತೆ ಭಕ್ತಿಯನ್ನು ಮಾಡಿದೆನು. ಒಂದಿಷ್ಟೂ ಭೇದವಿಲ್ಲದ ಮಾತನ್ನೇ ಹೇಳಿದೆನು. ತನ್ನವರೆಲ್ಲ ಮೆಚ್ಚಿದರೂ ಅವನಿಗಾಗಲಿಲ್ಲ. ಇದು ನನ್ನ ಪಾಪದ ಫಲ. ‘ಈ ಭರತೇಶನೊಡನೆ ವಿರಸವನ್ನು ನೆನೆದನು. ಧರೆ ಮೆಚ್ಚುವುದೇ ?’ ಎಂದು ಪುರಜನರೆಲ್ಲ ಚಿಂತಿಸಿ ನುಡಿವುದನ್ನೂ ಕೇಳಿಬಂದೆನು.”

ಈ ಮಾತುಗಳನ್ನು ಕೇಳುತಿದ್ದಂತೆ ಭರತೇಶ್ವರಗೆ ಕೋಪವೊತ್ತರಿಸಿ ಬಂತು. “ಛಥ! ಹುಸಿ! ನೋಡವನ ಎದೆ ಸೊಕ್ಕನ್ನು, ನನ್ನೊಡನೆ ಕಾಳಗಕ್ಕೆಳಸಿದನೆ? ಒಡಹುಟ್ಟಿದವನೆಂದು ಒಂದು ಪ್ರೀತಿಯ ಮಾತನ್ನೂ ಆಡಲಿಲ್ಲವೆ? ಕೆಡುವುದನ್ನೂ ತಿಳಿಯದೆ ನುಡಿದನೆ? ಬಹಿರಾತ್ಮರಿಗೆ ತನ್ನ ಪುಷ್ಪಬಾಣಗಳನ್ನು ತೋರಿಸಿ ಬಹುಬಾಧೆಗೊಳಿಸಿದ ಸೊಕ್ಕನ್ನು ನನ್ನೊಡನೆ ತೋರಿಸುವನೇ? ಅವನ ಕಬ್ಬುಬಿಲ್ಲುಗಳನ್ನು ಸುಡು. ಛಡ!ಛಡ! ಆ ಬಾಣಗಳು ಪರರನ್ನು ಕಾಡಬಹುದು. ಆದರೆ ಆತ್ಮ ತತ್ಪರರ ಸಮುಖದಲ್ಲಿ ಈ ಬಾಣಗಳು ಇರಿ, ಎಂದರೆ ಇಹವು; ಹೋಗಿರಿ ಎಂದರೆ ಹೋಗುವುವು. ಇದನ್ನವನು ತಿಳಿಯನು. ಹಂಸನಾಥನನ್ನು ನೋಡಿ ಪುಷ್ಪಬಾಣಗಳನ್ನು ವಿಧ್ವಂಸಮಾಡುವೆನು. ಅದನ್ನು ಮೀರಿ ಹಿಂಸೆಗೂ ಅಂಜಿಸಿ ಖಡ್ಗ ಹಿಡಿದು ಬಂದರೆ, ಆ ಖಡ್ಗವನ್ನೇ ಸೆಳೆದುಕೊಂಡು ನೂಕುವೆನು. ದಟ್ಟಿಸಿ ಬಂದರೆ ಕಟ್ಟಿ ಕಳುಹಿಸಿಕೊಡುವೆನು, ಚಿಕ್ಕಮ್ಮನ ಬಳಿಗೆ. ಮುನಿದೆನಾದರೆ ಚೆಂಡನ್ನು ಇಡುವಂತೆ ಹಿಡಿದೆತ್ತಿ ಸಮುದ್ರದಲ್ಲಿ ಮುಳುಗಿಸುವ ಶಕ್ತಿ ನನಗುಂಟು. ತಮ್ಮನ ಮೇಲೆ ಶಕ್ತಿಯನ್ನು ತೋರಬಹುದೆ? ಮೇದಿನಿ ಮೆಚ್ಚೀತೆ? ಬೇರೆಯವರಾಗುತಿದ್ದರೆ ಸನ್ನೆಯಿಂದಲೆ ಬಾಯಿ ಕಟ್ಟಿಸುತಿದ್ದೆ. ಹಾಗೆಂದು ಬೆನ್ನಲ್ಲಿ ಬಂದವನನ್ನು ನೋಯಿಸುವುದೆ? ಜಗದವರು ನನ್ನನ್ನು ಹೀನನೆನ್ನಲಾರರೆ? ಸಾವಿರವಾದರೂ ಹಿರಿಯನೆಂಬುವರು ನನ್ನನ್ನು. ಅವನೆಷ್ಟಾದರೂ ಕಿರಿಯನೆ ಎನ್ನುವರು. ಅವನನ್ನು ಉಪಾಯದಿಂದಲೇ ಗೆಲ್ಲಬೇಕು.

ದಕ್ಷಿಣಾಂಕ, ಇನ್ನಾದರೂ ಕುಳಿತುಕೊಳ್ಳು.'' ಎಂದು ಭರತೇಶನು ಹೇಳಿದಾಗ ದಕ್ಷಿಣಾಂಕನು ಕುಳಿತುಕೊಂಡನು.

ದಕ್ಷಿಣಾಂಕನು ಮತ್ತೂ ಖಿನ್ನನಾಗಿಯೇ ಕುಳಿತಿರುವುದನ್ನು ಕಂಡು ಭರತೇಶನೇ ಅವನನ್ನು ಸಮಾಧಾನಪಡಿಸಿದನು. ಖಿನ್ನನಾಗಿರಬೇಡವೆಂದನು.

''ನಿನ್ನಿಂದ ಕಾರ್ಯ ತಪ್ಪದು, ನಾನದನ್ನು ಬಲ್ಲೆ.''

''ಇಲ್ಲಸ್ವಾಮಿ. ನಿನ್ನ ಚರಣಗಳನ್ನು ಕಂಡವರಿಗೆ ಸಲ್ಲೀಲೆಯಲ್ಲದೆ ನೋವಿಲ್ಲ. ಎಳ್ಳಷ್ಟು ಮೊದಲಿದ್ದರೂ ಈಗ ಎಲ್ಲವೂ ಹೋಯಿತು.'' ಎಂದು ದಕ್ಷಿಣನು ಕೈಮುಗಿದು ತಿಳಿಸಿದನು.

ಸುವಿಟರೇ ಮುಂತಾದ ಮಿತ್ರರೂ ಮಂತ್ರಿಗಳೂ ಕಟಕದ ಶ್ರೇಷ್ಠರೂ ಅವನೊಂದಿಗೆ ಮಾತುಗೂಡಿಸಿದರು. ''ರವಿಯ ಒತ್ತಿನಲ್ಲಿ ಮಂಜೆ? ನಿಮ್ಮೊತ್ತಿನಲ್ಲಿ ದುಃಖವೆ ಸ್ವಾಮಿ?'' ಎಂದು ಆರ್ತಿಯಿಂದಾಡಿದರು. ''ನಾವೊಮ್ಮೆ ಹೋಗಿ ನೋಡಲೆ ಸ್ವಾಮಿ'' ಎಂದು ಪ್ರಧಾನಿ ಬಿನ್ನವಿಸಿದನು. ''ಮಾನ್ಯರ ಇರವನ್ನು ಅವನು ಬಲ್ಲನೆ?'' ಹೋಗಿ ಗ್ಲಾನಿಯಾದರೆ? ಸೈರಿಸು. ದಕ್ಷಿಣನು ತಿಳಿಯದವನೆ? ಹೋಗಿ ಹುಯ್ಯಲುಂಡು ಬಂದಿರುವನು. ನೀನೆಂದರಾರು? ನಾನೇ ಅಲ್ಲವೆ? ಗರ್ವಿಗನ ಸಂಧಾನಕ್ಕೆ ಹೋಗಿ ಭಂಡಾಗುವುದೇಕೆ? ಏನು ಬಂದರೂ ನಾನೇ ಕಾಣುವೆನು.'' ಎಂದು ವಿವೇಕಿಯಾದ ಚಕ್ರೇಶ್ವರನು ಮಂತ್ರಿಯೊಡನೆ ತಿಳಿಸಿದನು.

''ಚಕ್ರೊಡೆಯನ ಮಂತ್ರಿಸಖರೆಲ್ಲರೂ ನಮ್ಮ ಪಕ್ಷದಲ್ಲಿರುವುದರಿಂದ ಯೋಗ್ಯ ನೊಬ್ಬನನ್ನು ಕಳುಹಿಸಿ ನೋಡುವೆನು'' ಎಂದು ಮಂತ್ರಿ ಉತ್ತರಿಸಿದನು. ''ಅದೇ ಲೇಸು. ನಾಳೆ ನಾಡಿದಿಗೆ ಕೋಪವಿಷ್ಟು ತಗ್ಗಬಹುದು. ನೋಡುವ'' ಎಂದು ಸಖರೂ ತಿಳಿಸಿದರು.

ದಕ್ಷಿಣನು ಬಳಲಿದನೆಂದು ಭರತೇಶನು ಉಡುಗೊರೆ ನೀಡಲು ಬಳಿಗೆ ಕರೆದನು. ಆದರೆ ಅವನು ಬಳಿಗೆ ಬರಲೇ ಇಲ್ಲ. ಭರತೇಶನಾಗ ಎಲ್ಲರನ್ನೂ ಕರೆದು ಉಡುಗೊರೆ ಇತ್ತು ಕಳುಹಿಸಿದನು. ಕೊನೆಯಲ್ಲಿ ದಕ್ಷಿಣನಿಗೂ ಉಡುಗೊರೆಯಿತ್ತು, ಮೈದಡವಿ, ನೋವನ್ನು ಬಿಡೆಂದು ಅವನನ್ನು ಮುದ್ದಿಸಿದನು. ಭರತೇಶನೆಂದರೆ ಒಡೆಯನೋ ತಂದೆಯೋ ಗುರುವೋ–ಎಂಬಂತಿದ್ದನು.

ಎಲ್ಲರೂ ಜನಕಗೆರಗುವಂತೆ ಭರತೇಶನಿಗೆ ನಮಿಸಿದರು. ಅವನನ್ನು ಹೊಂದಿ ಸಂತಸದಿಂದ ನಲಿಯದವರಾರು?

ಎಲ್ಲರೂ ಕಳುಹಿಸಿಕೊಂಡರು. ಭರತಚಕ್ರಿಯು ಓಲಗದಿಂದೆದ್ದು ಆ ಕ್ಷಣವೇ ಅಂತಃಪುರ ಸೇರಿದನು. ಕಳುಹಿಸಿಕೊಂಡವರು ಈಚೆಯೊಂದೆಡೆ ಸೇರಿದರು. ಅಲ್ಲೇ ನಿಂತು ಮುಂದನ್ನು ಯೋಚಿಸಿದರು. ಕೊನೆಗವರು ಮಂತ್ರಿಗಳೊಂದಿಗೆ ರಾಜರೆಲ್ಲರೂ ಹೋಗಿ ಮದನಭೂಪನರನಿಗೆ ಕಾಣಿಕೆಯಿಕ್ಕಿಕಂಡು, ಕರೆದುಕೊಂಡು ಬರುವುದೆಂದು ನಿರ್ಣಯಿಸಿದರು. ಅದಕ್ಕಾಗಿ ಪ್ರಾಪ್ತನೊಬ್ಬನನ್ನು ಆರಿಸಿ ಪಯಣವನ್ನು ನಿಶ್ಚಯಿಸಿದರು. ''ಬೆಳಗಾಗಲು ನೀನು ಹೋಗಿ, ಪ್ರಣಯಚಂದ್ರನನ್ನು ಕಂಡು, ಅವರ ಅಂತರಂಗವನ್ನು ತಿಳಿದು ಬರುವುದು''—ಎಂದು ಕಳುಹಿಸಿ ತಮ್ಮ ಬಿಡಾರ ಸೇರಿದರು.

ಮೂಡ ಭಾನು ತಳತಳನೆ ಮೂಡಿತು. ಸ್ವರಪುರಕ್ಕೆ ಹೋದವನು ಹೆಬ್ಬಾಗಿಲಲ್ಲೆ ತಡೆಯಲ್ಪಟ್ಟನು. ಇತ್ತ ಬರಲಾಗದೆಂದು ಅವರು ತಡೆದರು. ಮಂತ್ರಿಗೆ ಹೇಳುವಂತೆಯೂ ಇಲ್ಲವೆಂದರು. ಅವನು ನಾಚಿಕೆಯಿಂದ ಮರಳಿ ಬಂದನು. ಈ ವಾರ್ತೆಯಲ್ಲೇ ಸರ್ವರೂ ಮುಳುಗಿದ್ದರು; ಚಿಂತಿಸುತ್ತಿದ್ದರು. ಇದನ್ನು ಕೇಳಿ ಸಾರ್ವಭೌಮನು ನಕ್ಕನು. ಮದನನ ಗರ್ವವು ಹೆಚ್ಚಾಯಿತೆಂದು ಎಲ್ಲರೂ ಮಾತನಾಡಿದರು. ಅಷ್ಟರಲ್ಲಿ ರವಿ ಮುಳುಗಿದನು. ಒಡನೆ ರಾತ್ರಿಯಾಯಿತು.

ಭರತೇಶನು ಸಜ್ಜೆಮನೆಯಲ್ಲಿ ಒರಗಿದನು. ಅಂದಿನ ಇರುಳಿನ ಮೂರನೆಯ ಜಾವದಲ್ಲಿ ಭರತೇಶನು ಪರಮಾತ್ಮಯೋಗದಲ್ಲಿದ್ದನು. ಆಗ ಅವನ ಮನಸ್ಸಿನಲ್ಲೊಂದು ಸರಸಾರ್ಥ ಹುಟ್ಟಿತು.

ಮರವೂ ಅಲುಗದ, ಮಾತು ಹುಟ್ಟಿದ ಸಮಯವದು. ತೆರೆನಿಂತ ಕಡಲಿನಂತೆ ಕಟಕವು ನಿದ್ರೆಯಲ್ಲಿ ಪರವಶವಾಗಿತ್ತು. ಆಗ ಇಬ್ಬರು ಎಚ್ಚೆತ್ತು ಭರತೇಶನ ವಿಚಾರವಾಗಿಯೇ ಮಾತನಾಡುತಿದ್ದರು.

''ಹನಿಗೂಡಿ ಹಳ್ಳ; ನಾರು ಒಡಗೂಡಿ ಹಗ್ಗವೆಂಬಂತೆ ಪಡೆಗೂಡಿ ಚಕ್ರಿಯು ಘನತೆಯನ್ನು ಪಡೆದಿರುವನು. ಸೇನೆ ಹೊರತಾದರೆ ಇವನೊಬ್ಬ ಮನುಜನಲ್ಲವೆ?''

''ಅಹುದು, ಅಹುದು. ಆನೆ ಕುದುರೆ ಮೊದಲಾದವುಗಳ ಸಂಗ್ರಹವನ್ನೇ ತೋರಿಸಿ ಜಗವನ್ನು ಅಂಜಿಸಿದನು. ಸಹಜವಾದ ಶಕ್ತಿಯನ್ನು ನೋಡಲು ಇವನಿಗೇನುಂಟು? ಯಾವ ಮಹಿಮೆ? ನಮ್ಮಂತೇ ಅಲ್ಲವೆ?''

ಕಟಕದ ಕಟ್ಟ ಕಡೆಯಲ್ಲಿ ಇಬ್ಬರಾಡುತಿದ್ದುದು ನಟ್ಟ ನಡುವಿನ ಸಜ್ಜೆ ಮನೆಯಲ್ಲಿದ್ದು ಚಕ್ರಿಯು ಕೇಳಿದನು. ರವಿಯೊಳಗಿರುವ ಮೂರ್ತಿಯನ್ನು ಕಾಣುವ ಕಣ್ಣುಗಳಿವೆ ಚಕ್ರಿಗೆ, ಈ ಮಾತು ಕೇಳುವುದು ಆಶ್ಚರ್ಯವಲ್ಲ. ಭಾವ ಮೈದುನರಾದ ಪೇಚರಿಬ್ಬರು ಮಾತಾಡುತಿದ್ದುದನ್ನು ಕೇಳಿದ ಭರತ ಭೂಪಾಲನು ಇದನ್ನೊಂದು ಭಾವದಲ್ಲಿ ಪ್ರಕಟಿಸಬೇಕೆಂದು ಯೋಚಿಸಿದನು.

ಅಷ್ಟರಲ್ಲಿ ಕಮಲಸಖನು ಮೂಡಿದನು. ಭರತೇಶನು ದೇವತಾರ್ಘ್ಯವನ್ನಿತ್ತು, ಕಡೆಯ ಹಜಾರಕ್ಕೆ ಹೋಗಿ ಓಲಗವಾದನು. ಸಭಿಕರೆಲ್ಲರು ಬಂದು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು. ಮೊಗವನ್ನು ಸಣ್ಣದು ಮಾಡಿ ಮೌನದಲ್ಲಿರುವುದನ್ನು ಕಂಡು, ಬಾಹುಬಲಿಯು ಮಲೆತು ನಿಂತಿದ್ದರಿಂದ ತನ್ನ ದೊರೆಗಿಂತು ಚಿಂತೆಯೊದಗಿತೆಂದು ಮಂತ್ರಿ ಭಾವಿಸಿದನು. ಆ ಭಾವದಲ್ಲೆ ಮಾತನಾಡಿದನು.

''ಚಿಂತೆ ಬೇಡವೆಂದು ನಮಗೆ ಹೇಳಿದ ದೇವರೇ ಈಗೇನು ಚಿಂತಿಸುತಿದ್ದೀರಿ?''

''ಬಾಹುಬಲಿಗಾಗಿ ಯಾವ ಚಿಂತೆಯೂ ಇಲ್ಲ, ನರ ಬಿಗಿದುದರಿಂದ ಚಿಂತೆಗೊಳಗಾಗಿರುವೆನು.''

ಆಗಲೇ ಮಂತ್ರಿಯು ನರಬಿಗಿದ ಬೆರಳನ್ನು ನೋಡಿದನು. ಧರೆಯಲ್ಲಿ ನಡೆನುಡಿಗಳಲ್ಲಿ ಡೊಂಕಿರುವವರಿದ್ದಾರೆ; ಆದರೆ ಭರತೇಶನಲ್ಲಿ ಅದಿಲ್ಲ. ಅದರೀಗ ಬೆರಳೊಂದು ಡೊಂಕಾಯಿತೆಂದು ಬೆರಳನ್ನು ಮುಟ್ಟಿ ನೋಡಿದರು. ಕುಮಾರರೆಲ್ಲ ಬಂದು ತಂದೆಯನ್ನು

ನೋಡಿ. ಮರುಗಿದರು; ಕಿರುಬೆರಳನ್ನು ಮುಟ್ಟಿದರು; ಠಕ್ಕನ್ನು ನಿಜವೆಂದು ತೋರುವಂತೆ ಭರತೇಶನಾಗ ನರಳುತ್ತಾ ''ಗುರು ಹಂಸನಾಥ'' ಎಂದು ಹೇಳುತ್ತಾ ಒರಗುಮೂಡೆಯಲ್ಲಿ ಒರಗಿಕೊಂಡನು.

ಇದರಿಂದಾಗಿ ರಾಜರಿಗೆಲ್ಲ ಚಿಂತೆಯಾಯಿತು. ಮಂತ್ರಿಯು ರಾಜ ವೈದ್ಯರನ್ನು ಕರೆಯಿಸಿದನು. ಬಂದವರೇ ಮೂಲಿಕಾಸಾರವನ್ನೂ, ಸಿದ್ಧ ತೈಲವನ್ನೂ ಪೂಸಿ ಬೆರಳನ್ನು ಸರಿ ಮಾಡುವೆವೆಂದರು. ಯಂತ್ರಸಿದ್ಧರು ಬಂದು ಬೀಜಾಕ್ಷರ ಮಂತ್ರವನ್ನು ಬರೆದು ಕಟ್ಟಿದರೆ ಸರಿಯಾಗುವುದೆಂದರು. ಆದರೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ಜಟ್ಟಿಗಳು ಬಂದು ನೋಡಿದರು. ನೆಟ್ಟಿ ತೆಗೆದರೆ ಸರಿಯಾಗುವುದೆಂದರು. ಬ್ರಾಹ್ಮಣರು ಬಂದು ಜಲಮಂತ್ರದಿಂದ ಸರಿ ಮಾಡುವೆವೆಂದರು. ಹಲವರು ಬಂದು ಅವರವರ ವಿದ್ಯಾರ್ಥಗಳನ್ನು ಸೂಚಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಸೇನೆಯಲ್ಲಿದ್ದ ಸರ್ವರೂ ಅಲ್ಲಿ ನೆರೆದರು. ಬಡವಗೆ ಬಲವಾದ ರೋಗ ಬಂದು ಬಾಯಿಬಿಡುತ್ತಿದ್ದರೂ ಅವನನ್ನು ನೋಡುವವರಿಲ್ಲ. ಆದರೆ ಸಿರಿಯುಳ್ಳವರಿಗೆ ಅಲ್ಪ ರುಜೆ ಬಂದರೂ ವಿಸ್ಮಯದಿಂದ ಬಂದು ಸೇರುವರು.

ಮಂತ್ರಿಯು ಮತ್ತೆ ಚಕ್ರಿಯ ಇಂಗಿತವೇನೆಂದು ಕೇಳಿದನು. ನೆಟ್ಟಿತೆಗೆದೊಮ್ಮೆ ನೋಡಿರೆಂದು ಜಟ್ಟಿಗಳಿಗೆ ಕೈ ನೀಡಿದನು. ಅವರು ಬೆರಳನ್ನು ನೆಟ್ಟಗೆ ಮಾಡಲೆಂದು ಹಿಡಿದೆಳೆದರು. ಭರತೇಶನಾಗ ತನ್ನ ಕೈಯ್ಯನ್ನೆತ್ತಿದನು. ಅವರಾಗ ಬಾವಲಿಯಂತೆ ತೂಗಿದರು. ಬೆರಳು ಒಂದಿಷ್ಟೂ ನೆಟ್ಟಗಾಗಲಿಲ್ಲ. ಆಗ ಭರತೇಶ್ವರನೇ ಒಂದು ತಂತ್ರವನ್ನು ಸೂಚಿಸಿದನು. ಬಂಗಾರದ ಸರಪಣಿಯನ್ನು ಬೆರಳಿಗೆ ಬಿಗಿದು ಎಳೆಯಿರಿಯೆಂದನು. ಅದರಿಂದಲೂ ನೆಟ್ಟಗಾಗಲಿಲ್ಲ ಬೆರಳು. ಚಿನ್ನದ ಸರಪಣಿಯನ್ನು ಕಟಕದವರೆಲ್ಲರೂ ಹಿಡಿವಂತೆ ಮಾಡಲು ವಿಶ್ವಕರ್ಮನಿಗೆ ಹೇಳಿದನು. ಕಟಕದವರೆಲ್ಲರೂ ಸೇರಿ ಎಳೆವಷ್ಟು ಉದ್ದದ ಸರಪಣಿಯನ್ನು ಜೋಡಿಸಿದರು. ಕುವರರೂ ದೊರೆಗಳೂ ಸಖರೂ ಎಲ್ಲರೂ ಸೇರಿ ಎಳೆದರು. ಅನಂತರ ಕಾಲುದಳವೂ ಸೇರಿಕೊಂಡಿತು. ಬಳಿಕ ಆನೆ ಕುದುರೆಗಳನ್ನು ಜೋಡಿಸಿದರು. ಯಾರು ಎಳೆದರೂ ಚಕ್ರಿಯು ಸಿಂಹಾಸನದ ಮೇಲೆ ಕುಳಿತಂತೇ ಇದ್ದನು. ಕಿರುಬೆರಳು ನೆಟ್ಟಗಾಗದೇ ಇತ್ತು. ರಾಜಕಟಕವು ಈ ರೀತಿಯಲ್ಲಿ ಹೊನ್ನಸರಪಣಿ ಪಿಡಿದೆಳೆಯುತ್ತಿರುವಾಗ ಚಕ್ರಿಯೊಮ್ಮೆ ಬೆರಳನ್ನು ಸಡಿಲುಬಿಟ್ಟನು. ಎಲ್ಲರೂ ಎರಗುವಂತೆ ಧರೆಗೆ ಬಿದ್ದರು. ಸಣ್ಣ ಬೆರಳ ಶಕ್ತಿ ಇಷ್ಟಾದರೆ ಹೆಬ್ಬೆಟ್ಟಿನ ಶಕ್ತಿ ಎಷ್ಟೆಂದು ಅವರೆಲ್ಲ ಅಚ್ಚರಿಗೊಂಡರು. ಭರತೇಶನು ನಸುನಗುತ್ತ ತನ್ನ ಬೆರಳನ್ನು ತಾನೆ ನೆಟ್ಟಗೆ ಮಾಡಿಕೊಂಡನು. ಬಿದ್ದಿದ್ದ ಕಟಕವು ತಟಪಟನೆ ಎದ್ದುನಿಂತಿತು. ನಿಜಸ್ಥಿತಿಯನ್ನು ತಿಳಿದ ಮೇಲೆ ಎಲ್ಲರೂ ಸಂತೋಷದಿಂದ ನಕ್ಕರು. ಅದೊಂದು ನಗೆಗಡಲಾಯಿತು.

ಈ ಘಟನೆಗೆ ಮೆಚ್ಚಿದ ಕಟಕವು ಭೂವರನಿಗೆ ನಮಿಸಿತು. ಸುರರೂ ಹೂಮಳೆಗರೆದರು. ಮೂರುವರೆ ಕೋಟಿವಾದ್ಯಗಳು ಮೊಳಗಿದುವು. ಸುರನರ್ತಕಿಯರೂ ನರ್ತಿಸಿದರು.

ಆಗ ಮಂತ್ರಿಯು ಮುಂದೆ ಬಂದು, ''ಈ ಸರಸಾರ್ಥವನ್ನೇಕೆ ಎಸಗಿದೆ ಸ್ವಾಮಿ?'' ಎಂದು ಸಂತೋಷದಿಂದ ಕೇಳಿದನು.

"ಇರುಳು ಇಬ್ಬರಾಡಿದ ನುಡಿಗಿಂತು ನೆನೆದೆ" ಎಂದು ಆ ಸ್ಥಿತಿಯನ್ನು ತಿಳಿಸಿದನು. ಬಡಗಣ ದೆಸೆಯಲ್ಲಿ ಆಡಿದುದೆಂದು ಹೇಳಿದಾಗ ಖಚರರು ಬಂದು, ಅರಿಯದೆ ಆಡಿದೆವೆಂದು ಎರಗಿದರು. ಭರತೇಶನಾಗ ಭೀತಿಬೇಡವೆಂದು ಅವರನ್ನು ಏಳುವಂತೆ ಹೇಳಿದನು. ಅವರೆದ್ದು ಭಯ ಬಿಟ್ಟು ಸಂತಸಗೊಂಡರು.

ಚಕ್ರೇಶ್ವರನಾಗ ಮಂತ್ರಿಯನ್ನು ಕರೆದು ಹೊನ್ನ ಸರಪಣಿಯನ್ನು ತುಂಡು ಮಾಡಿ ಎಲ್ಲರಿಗೂ ಹಂಚುವಂತೆ ಮಾಡಿದನು. ಕಬ್ಬಿನ ತುಂಡಿನಂತೆ ಅದನ್ನು ಎಲ್ಲರಿಗೂ ಹಂಚಿದರು. ಆನಂತರ ಬಳಿಯಿದ್ದವರಿಗೆಲ್ಲ ಉಡುಗೊರೆಗೊಟ್ಟು, ಭರತಚಕ್ರಿಯು ರಾಜ ಮಂದಿರವನ್ನು ಸೇರಿದನು.

ಅಲ್ಲಿದ್ದ ಲಲನೆಯರು, ತಳತಳಿಸುವ ನಗುಮೊಗದಿಂದ ಚಕ್ರಿಯನ್ನಿದಿರುಗೊಂಡು ಆರತಿ ಬೆಳಗಿ ನಿವಾಳಿಯಿಟ್ಟು ಎರಗಿದರು. ಭರತೇಶನು ಸ್ತ್ರೀಯರನ್ನು ಹಿಂದಿಕ್ಕಿ ಬಂದು, ತಾಯಪಾದಗಳಿಗೊಂದಿಸಿದನು. ತಾಯಿ ಮಗನನ್ನು ತಕ್ಕೈಸಿ "ಮಾಯದ ರೋಗವನ್ನು ತೋರಿಸಿದೆಯಾ?" ಎಂದು ಕೇಳಿದಳು. "ನಿನಗೆಂತೂ ರುಜೆ ಬಾರದು; ನಿನ್ನನ್ನು ನೆನೆವವರಿಗೂ ರುಜೆ ಬಾರದಿರಲಿ"—ಎಂದೂ ಹರಸಿ ಮುತ್ತಿನ ಅಕ್ಷತೆಯಿಟ್ಟಳು. ಆನಂತರ ಅವರೆಲ್ಲರೂ ಭೋಜನಕ್ಕೆ ನಡೆದರು.

# ೩೧

# ಮದನ ಸನ್ನಾಹ

ಕಟಕದ ವಾರ್ತೆಯನ್ನು ಕೇಳಿದ ಬಾಹುಬಲಿಯು ಒಂದಿಷ್ಟು ಅಳುಕಿದನಾದರೂ ಮೊದಲು ತಾನು ನುಡಿದ ಗರ್ವದ ಮಾತುಗಳನ್ನೇ ನೆನೆದು ಹೋರಾಟಕ್ಕೆ ಸಿದ್ಧನಾದನು. ಚಕ್ರಿಯು ಬೆರಳ ಶಕ್ತಿಯನ್ನು ಕೇಳಿದ ಮೇಲಾದರೂ ಕಾಮನು ಬಂದು ಹಿರಿಯಣ್ಣನಿಗೆ ಎರಗಬೇಡವೇ? ಆದರೆ ಕರ್ಮವು ಅವನನ್ನು ಹಾಗೆ ಮಾಡಲು ಬಿಡಲಿಲ್ಲ. ಕಾರಣ, ಅದು ಅವನನ್ನು ದೀಕ್ಷೆಗೊಯ್ಯುವ ರೀತಿಯಾಗಿತ್ತು. ಅದನ್ನು ಮೀರುವವರಾರು? ಧರೆಯನ್ನು ಸಾಧಿಸಿ ಭರತೇಶನು ಬರಲು ಹೋರಾಟವಾಗಬೇಕು; ಎಂಬುದೇ ಕರ್ಮತಂತ್ರವಾಗಿತ್ತು.

ಕಾಮನು ಗುಣವಸಂತಕನನ್ನು ಕರೆದನು. ''ಚಕ್ರಿಯು ಬಂದು ನಮ್ಮೂರಿಗಿದಿರಾಗಿ ಬೀಡು ಬಿಟ್ಟಿರುವನು. ಇದನ್ನು ನಾನು ಸೈರಿಸಬಹುದೆ? ನಾನೊಬ್ಬ ವೀರನಲ್ಲವೆ? ಪರಿವಾರವೆಲ್ಲವನ್ನೂ ಕರೆಸು. ಈ ದಂಡನ್ನೀಗಲೇ ತೆರಳಿಸಬೇಕು. ನಾನು ಅರಮನೆಯ ಒಳಹೊಕ್ಕು ಬರುವೆನು ಹೋಗು.'' ಎಂದು ಸ್ಮರನೆದ್ದು ಒಳಗೆ ಹೋದನು.

ಈ ವಾರ್ತೆಯನ್ನು ಸುನಂದಾದೇವಿ ಕೇಳಿ, ಮಗನನ್ನು ಮನೆಗೆ ಕರೆಸಿಕೊಂಡಳು. ಬಾಹುಬಲಿಯು ತನ್ನ ದುಗುಡವನ್ನು ತೋರಿಸಿಕೊಳ್ಳದೆ ಬಂದು ನಗೆಮೊಗದಿಂದ ಆಕೆಗೆ ಎರಗಿದನು.

''ಭುಜಬಲಿ, ದೊಡ್ಡಣ್ಣನೊಡನೆ ಕಾಳಗವೆಂದು ನೀನು ಗಜಬಜಿಸಿರುವೆ. ಸುಜನರಾದವರು ಇದನ್ನು ಮೆಚ್ಚುವರೆ? ನಿನ್ನ ಕುಜಿನ ಮಾರ್ಗವನ್ನು ಸುಡು. ಭರತಣ್ಣನಂತಿರುವ ಹಿರಿಯಣ್ಣನೆಂಬ ಸಿರಿಯನ್ನು ಯಾರಿಗೆ ಪಡೆಯಲು ಸಾಧ್ಯ? ಆದ್ದರಿಂದ ಹರುಷದಿಂದಲೇ ಹೋಗಿ ಅವನಿಗೆರಗಿ ಬಾಳಲರಿಯದೆ ಸಿರಿಯನ್ನು ಕೆಡಿಸಿಕೊಳ್ಳಬೇಡ.ತಮ್ಮನು ಉತ್ತಮನಾದರೆ ಅಣ್ಣನಿಗೆ ಎದುರಾದ ಹೆಮ್ಮೆವಂತರನ್ನು ಹಿಡಿದು ತಂದು ಅಣ್ಣನ ಸನ್ನಿಧಿಯಲ್ಲಿ ಒಪ್ಪಿಸಬೇಕಲ್ಲದೆ ಅಣ್ಣನಿಗೆ ತಾನೇ ಎದುರಾಗುವುದು ಚದುರೆ? ತಮ್ಮನಾದವನು ಅಣ್ಣನಿಗೆ ಎರಗಬೇಕು. ಅಣ್ಣನೊಡನೆ ತಮ್ಮನು ಕೂಡಿದರೆ ಅಣ್ಣನೂ ತಮ್ಮ ತಮ್ಮ ಎಂದು ಕರೆದಾಡುವುದು ಒಳಿತಲ್ಲವೆ? ಅವನು ಚಕ್ರಿ ನೀನು ಕಾಮನು. ನೀನು ಆತನನ್ನು ಅತ್ರಮಿಸದೆ ನಡೆದರೆ ಶುಕ್ರ ಬೃಹಸ್ಪತಿಗಳು ಹೊಗಳುವರು. ನೀನು ವಕ್ರಿಸಿ ನಡೆದರೆ ಜರೆವರು ನಿನ್ನನ್ನು. ಅವರಿವರ ಮಾತು ಬಿಡು; ನಮ್ಮ ಬಾಂಧವರಿಗೂ ನಮಗೂ ನೋವಾಗುವುದು. ಕುಮಾರ, ನೆರೆದು ತನ್ನ ಕುಲವನ್ನು ನೋಯಿಸಿದನೆಂಬ ಅವಿವೇಕವು ನಿನಗೆ ಲೇಸೆ? ಅಣ್ಣನೊಡನೆ ಕಾಳಗಮಾಡೆಂದು ನಾನು ಬೆಣ್ಣೆ ಹಾಲು ಕೊಟ್ಟು ನಿನ್ನನ್ನು ಸಾಕಿದೆನೇ?ನಮ್ಮೆಲ್ಲರ ಹೊಟ್ಟೆಗೆ ತಂಪುಮಾಡಬೇಕಲ್ಲದೆ

ಹುಣ್ಣು ಮಾಡುವುದು ಲೇಸೆ ಕಂದ? ನೀನೊಬ್ಬನೇಕೆ, ನಿನ್ನ ಸೋದರರೆಲ್ಲರೂ ಅವನಿಗೆ ಅಡ್ಡಬೀಳದೆ ಓಡಿಹೋದರು. ನನ್ನ ಮಗ ಇವರಿಗೆಲ್ಲ ಏನು ಮಾಡಿದನು? ಹಿರಿಯರಿಗೆ ಅಡ್ಡ ಬೀಳುವುದು ಹೀನವೆ? ಹಿರಿಯಣ್ಣನು ಹೆತ್ತ ತಂದೆಗೆ ಸರಿಯೆಂದು ಸತ್ಪುರುಷರು ಭಕ್ತಿಯಿಂದಿರುತ್ತಾರೆ. ಆದರೆ ಧೂರ್ತರು ಮಾತ್ರ ನಾನು ಮೇಲು, ತಾನು ಮೇಲೆಂದು ದಾಯಾದ್ಯರಾಗಿ ಹೋರಾಡುವರು. ಅವರೆಲ್ಲ ತಪಸ್ಸಿಗೆ ಹೋದರು. ನೀನೊಬ್ಬನಾದರೂ ನಮ್ಮೆಲ್ಲರ ಪ್ರೀತಿಯನ್ನು ಸಲ್ಲಿಸಲು, ಬಲುಹನ್ನು ತೋರಬೇಡ; ಅಣ್ಣನಿಗೆ ಎರಗು'' ಎಂದು ಗಲ್ಲಹಿಡಿದು ಮುದ್ದುಮಾಡಿ ಹೇಳಿದಳು.

ಕದನವೆಂದರೆ ತಾಯಿಗೆ ನೋವಾಗುವುದೆಂದು ಮದನನು ಮಾತಿನಲ್ಲಿ ಅವಳೆದೆಗೆ ಸಂತಸವನ್ನುಂಟುಮಾಡುವುದಕ್ಕಾಗಿ, ಯುದ್ಧವಿಲ್ಲವೆಂದು ಹೇಳಿದನು. ಮದನಗೆ ವಂಚನೆ ಸಹಜವಾದುದು.

''ಅವ್ವಾಜಿ, ಕಾಳಗವೆಂದು ಮೊದಲೇನೋ ಇಷ್ಟು ಮಾತನಾಡಿದೆ. ಕೋಪದಿಂದ ಎಲ್ಲರೂ ಯುದ್ಧ ಸಲ್ಲದೆಂದು ಹೇಳಿದ ಮೇಲೀಗ ಬಿಟ್ಟುಬಿಟ್ಟೆನು. ಅಣ್ಣನ ಅಡಿಗೆರಗುವೆನು. ಪರರು ಅಲ್ಲವೆಂದುದನ್ನು ನಾನೆಂದೂ ಮಾಡಲಾರೆನು. ಇದಕ್ಕಾಗಿ ನೀವು ಚಿಂತಿಸಬೇಡಿ. ಅಣ್ಣನಿಗೆ ಶಿರಬಾಗಿ ಬರುವೆನು.'' ಎಂದು ಬಾಹುಬಲಿಯು ಮಾತಿನಲ್ಲಿ ಹೇಳಿದರೂ ಎದೆಯಲ್ಲಿ ಕೋಪವನ್ನಿರಿಸಿಕೊಂಡನು. ಆಕೆಗೆ ಸಂತೋಷವಾಯಿತು. ಮಗನನ್ನು ತಕ್ಕೈಸಿಕೊಂಡು, ''ನನ್ನ ಕಂತು, ನೀನು ಹಾಗೆ ಮಾಡಣ್ಣ; ನನ್ನ ಚಿಂತೆಯೆಲ್ಲ ಹೋಯಿತು'' ಎಂದು ಹರಸಿದಳು. ಎಲ್ಲರ ಅಂತರಂಗವನ್ನು ಬಲ್ಲವರಾರು?

ತಾಯಿಗೆ ನಮಸ್ಕರಿಸಿ ಪುಷ್ಪಬಾಣನು ತನ್ನ ಅರಮನೆಯನ್ನು ಹೊಕ್ಕನು. ಚೆಡಗಾಗಿ ಸಿಂಗರಿಸಿಕೊಂಡನು. ಅದು ಅವನ ಅಂಗಕ್ಕೆ ಕಡೆಯ ಶೃಂಗಾರವಷ್ಟೆ. ಅವನದೆಂದರೆ ಊನವಿಲ್ಲದ ಮೋಹನಾಂಗವು. ಅದಕ್ಕೆ ತಕ್ಕ ಗಾಡಿಮೋಡಿಯೊದಗುವಂತೆ ಸಿಂಗರಿಸಿಕೊಂಡು, ನೋಡುವವರೆಲ್ಲರ ಕಣ್ಣು ಮನಸ್ಸುಗಳನ್ನು ನಲಿದಾಡಿಸುತ್ತಿದ್ದನು. ಅವನು ಸಿಂಗಾರವಾಗಿ ಕನ್ನಡಿಯನ್ನು ನೋಡುವಾಗ ಅವನ ಅಂಗನೆಯರೆಲ್ಲರೂ ಅಲ್ಲಿಗೆ ಬಂದರು. ಪಟ್ಟದರಸಿ ಇಚ್ಛಾದೇವಿಯೊಡನೆ ಅವರೆಲ್ಲರೂ ಕೈಮುಗಿದು ಕಾಲುಹಿಡಿದರು. ಇಚ್ಛಾದೇವಿ ಪತಿಯ ಕೇಳಿ ವಿಚಾರಿಸಿದಳು.

''ದೇವರೀಗ ಯಾರ ಮೇಲೇರಿ ಹೋಗುವುದು? ಹೆಂಗಸರ ಮೇಲೋ ದೂರಿಸುವ ಗಂಡಸರ ಮೇಲೋ? ವೀರಾಂಗವೆಲ್ಲ ಶೃಂಗಾರವಾಗಿದೆ. ಹೆಂಗಸರೆಲ್ಲರೂ ನನ್ನ ಪಕ್ಷ. ಪುರುಷರೆಲ್ಲರೂ ನಿನ್ನ ಪಕ್ಷ. ನನ್ನ ಪಕ್ಷದವರನ್ನು ಕಂಗೆಡಿಸಬೇಡ.''

''ಆಗಲಿ ನಲ್ಲೆ, ನಿನ್ನ ಪಕ್ಷದ ಮೇಲೆ ಹೂವಿನ ಕಣೆಯನ್ನು ತೊಡುವುದಿಲ್ಲ, ಕಾಳಗವೊಡ್ಡಿ ನಿಂತಿರುವ ಚಕ್ರಿಯ ಫೌಜು ಹೋಗುವಂತಿಲ್ಲ, ಅದನ್ನು ತಾಕುವೆನು. ಅವನಿಗೆ ಶ್ರೀ ಗುರು ಹಂಸನಾಥನ ಶಕ್ತಿಯುಂಟು. ಅವನು ಪುಷ್ಪಬಾಣಗಳಿಗೆ ಅಂಜುವವನಲ್ಲ, ಆದ್ದರಿಂದ ಲೋಹಾಯುಧಗಳಿಂದ ಸೇನೆಯನ್ನು ಹೊಡೆದೋಡಿಸಿ ಬೇಗನೆ ಬರುವೆನಿಲ್ಲಿಗೆ.''

''ಇದು ಒಳಿತಾಯಿತು. ಇದನ್ನು ಈ ಲೋಕದಲ್ಲಿ ಯಾರು ಮೆಚ್ಚುವರು? ಹಿರಿಯಣ್ಣನೊಡನೆ ಕಾಳಗವೆ? ನೀನು ಹೀಗೂ ನಿಷ್ಠುರವನ್ನು ತಾಳುವುದೆ? ಸಲ್ಲದಿದು,

ಹಿರಿಯಣ್ಣನೊಡನೆ ಈ ರೀತಿಯಲ್ಲಿ ಬಲವನ್ನು ತೋರುವುದು ಗುಣವೆ? ನಿನ್ನ ಬಿಲ್ಲಿ ಡೊಂಕೆಂದು ನಡತೆಯೂ ಡೊಂಕೆ? ಲೋಕದವರೊಡನೆ ಯುದ್ಧ ಮಾಡಬಹುದು. ಅಣ್ಣನೊಡನೆ ಮಾಡುವುದೆ? ಶ್ರೀಗಂಧದಲ್ಲಿ ಕೈ ಬೆಂದಂತೆ ಮಾಡುತ್ತಾರೆಯೆ? ಪನ್ನೀರಿಗೆ ಪರಿಮಳಕ್ಕೆ ಎಡಗಟ್ಟು ಕಟ್ಟುವುದು ಉನ್ನತದ ಓಜೆಯೇ? ಒಂದು ಮನೆಯ ಹೆಣ್ಣು ತಂದು ಸಡ್ಡು ಕರೆದು ಕೂಡಿ ಬಾಳುವವರಿದ್ದಾರೆ. ಇಂದು ನೀವಣ್ಣ ತಮ್ಮಂದಿರು ನನ್ನನ್ನು ಅಕ್ಕನೊಂದಿಗೆ ಕೂಡಿ ನಡೆವಂತೆ ಮಾಡದೆ ಅಗಲಿಸುವುದೇ? ನಮಿರಾಜ ವಿನಮಿ ರಾಜರನ್ನು ನೋಡಿ; ಅವರು ಮಮತೆಯಲ್ಲಿ ಕೂಡಿ ಬಾಳುವುದನ್ನೂ ನೋಡಿ, ನೀವಿಂತು ಕ್ರಮತಪ್ಪಿ ನಿಮ್ಮೊಳಗೆ ಹೋರಾಡಿದ್ದರೆ ಅವರು ನಗಲಾರರೆ? ಇದನ್ನು ನಿಮ್ಮ ಭಾವಮೈದುನರು ಸುಮಾರ್ಗವೆಂದಾರೆ? ಸಿರಿಯಲ್ಲಿ ನೀವು ದೊಡ್ಡವರು; ನಮ್ಮ ಸೋದರರು ಬಡವರು ; ಆದರೆ ನಿಮ್ಮ ನಮ್ಮ ತಾಯಿ ತಂದೆಯರ ಸಂಬಂಧ ಸರಿಯಾಗಿರುವುದರಿಂದವರು ಹಾಗೆನ್ನದಿರುವರೆ? ಭಾವಾಜಿಯ ಉತ್ತಮ ಗುಣವನ್ನು ಕೇಳುವಾಗ ನನ್ನೀ ವಿರೋಧಕ್ಕೆ ಎಡೆಯುಂಟೆ? ದೇವ, ನೀವು ಸೈರಿಸಬೇಕು.''

''ದೇವಿ, ನಿನ್ನ ಭಾವನ ಒಳ್ಳೇ ಗುಣವೇನು? ನಿಮ್ಮ ಅಣ್ಣನನ್ನು ನಮಿರಾಜನೆಂದು ಬಣ್ಣಿಸುವುದನ್ನು ಕೇಳಿ ನೀನೂ ಹಾಗೆ ಎಣ್ಣೆಯನ್ನು ತುಪ್ಪವೆಂದು ಹೇಳುತ್ತಿ''

''ರಾಜಾಗ್ರಗಣ್ಯನಲ್ಲವೆ? ಬೇರೆ ಭೂಪತಿಗಳನ್ನು ರಾಜನೆಂದೇಕೆ ಕರೆಯುವನು? ನನ್ನ ಅಣ್ಣನನ್ನು ರಾಜನೆಂದರೆ ಅದೊಂದು ಓಜೆಯಲ್ಲದೆ ಮತ್ತೇನು? ನನ್ನ ಅಣ್ಣನಲ್ಲದೆ ಮತ್ತಾರು ರಾಜರೆಂದು ಕರೆಯಿಸಿ ಕೊಂಡಿದ್ದಾರೆ? ತನ್ನ ಕೈತುಂಬ ತಕ್ಕೈಸಿ, ಗದ್ದುಗೆ ತೋರಿ ಮನ್ನಿಸಿದ್ದು ಕಿರಿಯ ತೇಜವೆ? ಸರಸಕ್ಕಾಗಿ ಒಂದೇ ಪಂತಿಯಲ್ಲಿ ಸತ್ಕರಿಸಿದನು; ಮತ್ತೆ ತನ್ನ ಹಿರಿಯತ್ತಿಗೆ ಕೈಮುಗಿದನು. ಇದಕ್ಕೂ ಹಿರಿದಾದ ತೇಜವಿನ್ನುಂಟೆ? ಅವನ ಮಾವನ ಮಕ್ಕಳೆಂಬ ವಿಖ್ಯಾತಿಯೇ ಸಾಕು ನಮ್ಮವರಿಗೆ. ನೀನು ಅಣ್ಣನನ್ನು ಕಂಡು ನಮಗೆ ಪ್ರೀತಿಯನ್ನುಂಟು ಮಾಡು''

ಅಷ್ಟರಲ್ಲಿ ಚಿಕ್ಕ ಹರೆಯದ ಚಿತ್ರಾವತಿಯು ಮುಂದೆ ಬಂದಳು. ''ಅಕ್ಕಾಜಿ ನೀ ನಿಲ್ಲು, ನಾನೊಮ್ಮೆ ನನ್ನ ಮನಸ್ಸಿನ ಎರಡು ಅಕ್ಷರಗಳನ್ನು ಹೇಳಿ ನೋಡುತ್ತೇನೆ'' ಎಂದು ಪತಿಯೊಡನೆ ಮಾತನಾಡಿದಳು.

''ದೇವ, ನೀನು ಸುಖಿಯಲ್ಲವೆ? ಜಗದಲ್ಲಿನ ಎಲ್ಲರಿಗೂ ಸುಖವನ್ನೇ ಸಂಧಿಸುವೆಯಲ್ಲವೆ? ನಿಮ್ಮ ಅಣ್ಣನು ಸುಖಿಗಳ ಅಗ್ರಗಣ್ಯನಲ್ಲವೆ? ಅವನಿಗೆ ಸುಖಮುಖವನ್ನೇ ತೋರು. ನೀನು ಅಣ್ಣನೊಡನೆ ಎತ್ತಿ ಕಾದಿದರೆ ತೊಂಬತ್ತಾರು ಸಾವಿರ ಹೆಣ್ಣುಗಳ ಚಿತ್ತ ನೋಯದೆ? ನಮಗೆ, ಎಂಟು ಸಾವಿರಕ್ಕೆ ದುಃಖವುಂಟಾಗದಿರುವುದೆ? ಅವರು ಅಲ್ಲಿಗೆ ಇಲ್ಲಿಗೆ ನೇರವಾಗಿದ್ದರು. ಅವರೊಮ್ಮೆ ಇಲ್ಲಿಗೆ ಬರುತ್ತಾರೆ.ನಾವು ಅಲ್ಲಿಗೆ ಹೋಗುವೆವು. ಎರವಿಲ್ಲದೆ ಕೂಡಿ ಬಾಳುವ ಈ ಉಲ್ಲಾಸವನ್ನು ಕೆಡಿಸುವುದೆ, ರಮಣ? ಹೆರರ ಮನೆಗೆ ಹೋಗಬಾರದು. ನಿಮ್ಮಣ್ಣನ ಉತ್ತಮವಾದ ಮಂದಿರಗಳಿಗೆ ಹೋಗಿ ನಾವು, ಅಲ್ಲಿ ತುಂಬಿರುವ ಹೆಣ್ಣುಗಳೊಂದಿಗೆ ಪ್ರೀತಿಯಿಂದಿರಬಾರದೆ? ನೀನು ನಮ್ಮನ್ನು ಸೆರೆಯಲ್ಲಿಟ್ಟು,

ಆಳುವೆಯ? ಹಿರಿಯನಲ್ಲಿ ತೊಡಕು ಸಲ್ಲದು. ನಮ್ಮ ನಮ್ಮ ಆರ್ತಿಯು ನಡೆಯದಂತೆ ನೀನು ಮುಳ್ಳನ್ನೆಳೆಯಬೇಡ. ಆ ಪ್ರೀತಿ ನಮಗೆಂದಿಗೂ ಇರಲಿ'' ಎಂದು ಚಿತ್ರಾವತಿ ಕೈಮುಗಿದಳು.

''ಸಾಕು ಚಿತ್ರಾವತಿ; ನಿಲ್ಲಕ್ಕ, ನನಗೀಗ ಕೋಪವು ಉದ್ರೇಕಿಸುತ್ತಿದೆ. ಈ ಕರ್ತನೊಡನೆ ಒಮ್ಮೆ ನುಡಿದು ನೋಡುವೆನು'' ಎಂದು ರತಿದೇವಿ ನುಡಿದಳು ಅವಳಾದರೂ ಚತುರೆ; ಚಪಲ ನೇತ್ರೆ; ನಿಶ್ಚಲಮತಿಯ ನೀರೆ; ಪತಿಭಕ್ತಿಧೀರೆ, ಶೃಂಗಾರೆ, ರತಿಕಲೆಯಲ್ಲಿ ಕುಶಲೆ. ಆಕೆ ಇಚ್ಛಾದೇವಿಯ ಅನುಜೆ. ಬಾಹುಬಲಿಯ ಮನಮೆಚ್ಚಿನ ಹೆಣ್ಣು. ಮೋಹರಸದ ಸಾಗರವೇ ತುಳುಕಿದ ಹಾಗೆ ತೂಕ ಕಾಣದೆ ನುಡಿದಳು.

''ತನ್ನ ಸಾಮರ್ಥ್ಯ ತನ್ನವರ ಮೇಲಲ್ಲವೆ? ಅಲ್ಲದಿದ್ದರೆ ಅದನ್ನು ಮೆರೆವುದು ಇನ್ನೆಲ್ಲಿ? ಬಿಲ್ಲುಬಾಣಗಳನ್ನು ಹಿಡಿದು ಒಂದು ಬಲ್ಮೆಯಿಂದ ನಿನ್ನ ಅಣ್ಣನಲ್ಲಿ ತೋರುವುದೆ? ಒಳ್ಳಿತಾಯಿತು. ಭಾವಾಜಿಯರ ಹೆಣ್ಣುಗಳಿಗೂ, ನಮಗೂ, ಎಲ್ಲರಿಗೂ ನೋವನ್ನುಂಟು ಮಾಡುವೆನೆಂದು ಹೇಳುವ ನಿನ್ನನ್ನು ಕಾಮನೆನ್ನುವರೇ? ಭ್ರಾಂತರಾದ ಜೀವರೂ ನರರೂ ಉರಗರೂ ಕೊಲ್ಲುವವನೆಂದೇ ಹೇಳುವರು. ಒಬ್ಬರ ಮನಸ್ಸಿಗೂ ಈ ನಡತೆ ಸಿಹಿಯಲ್ಲ. ನಿನ್ನ ಕೈಯಲ್ಲಿ ಕಬ್ಬಿನ ಬಿಲ್ಲುಂಟಂತೆ. ಆದರೆ ಅದು ಕಬ್ಬಿನ ಬಿಲ್ಲೋ? ಕಾಗೆ ಕಬ್ಬಿನ ಬಿಲ್ಲೋ? ಅಥವಾ ಹಿರಿದಾದ ಬಿದಿರಿನ ಡೊಂಕು ಬಿಲ್ಲೋ? ನೋಡಬೇಕು. ಮೃದುಹೃದಯದ ದಯೆಯನ್ನು ಬಿಟ್ಟು ತಮ್ಮ ಅಣ್ಣನಿಗೆ ಇದಿರಾಗುವ ಕಲ್ಲೆದೆಯ ಪ್ರಿಯನಬಾಣಗಳು ಕೋಲುಗಳೋ, ಮಲ್ಲಿಗೆಯ ಮರದ ಮಿಂಚೆಯೋ, ಹೂಬಾಣಗಳೋ, ಲೋಹದ ಸರಳುಗಳೋ—ನೋಡಬೇಕಾಗಿದೆ. ಈ ಕದನದಿಂದ ಸುಭದ್ರಾದೇವಿ, ಮರುಗದಿರುವಳೆ? ನಮಗಿಲ್ಲಿ ದುಃಖವಾಗದಿರುವುದೆ? ತಿಳಿದು ತಿಳಿದು ಅಚ್ಚಮೋಹಿಗಳನ್ನು ನೋಯಿಸುವ ಸುಖಮುರುಕ ಹೋಗು.'' ಎಂದು ಪ್ರಮದೆಯಾದ ರತಿದೇವಿ ಸಿಡಿದು ನುಡಿದಳು. ''ನೀನೀಗ ನಡೆಯಬಾರದ ನಡತೆಗೆ ತೊಡಗಿದೆ. ನುಡಿಯಬಾರದ ನುಡಿಯನ್ನು ತೋರಿದೆ; ಕಡೆಗಾಲವಿದು. ನೀನು ಕೆಡುವೆ, ಇಕೊ ಹುಲ್ಲ ಹಿಡಿದು ಸಾಸಿದೆನು'' ಎಂದು ಕೂಡ ಹೇಳಿದಳು.

''ಎಲೆ ಧೂರ್ತೆ, ಬಾಯಿ ಮುಚ್ಚು. ಸ್ವಾಮಿಯನ್ನು ನೀನಿಂತು ನೋಯಿಸುವುದೆ?'' ಎಂದು ಅಕ್ಕ ನುಡಿದಾಗ. ''ನ್ಯಾಯ ತಪ್ಪಿದ ಮೇಲೆ ಮುಖದ ಇಚ್ಛೆಯೆಂಬ ಅಭಿಪ್ರಾಯವೇ?'' ಎಂದು ತಂಗಿ ಹೇಳಿದಳು. ಉಳಿದ ಹೆಂಗಸರೂ ಯುದ್ಧ ಬೇಡವೆಂದು ನುಡಿದರು. ಹಲವರ ನುಡಿ ಕೇಳಿದ ಬಾಹುಬಲಿಯು ಚಕ್ರಿಯ ಪುಣ್ಯವೆಂದು ಮನಸ್ಸಿನೊಳಗೇ ತಲೆದೂಗುತಿದ್ದನು. ಇವರನ್ನು ಮಾತಿನಲ್ಲೇ ವಂಚಿಸಬೇಕೆಂದು ಅವನು ಯೋಚಿಸಿದನು.

''ನೀವೆಲ್ಲ ನುಡಿದುದು ಉತ್ತಮವಾಯಿತು. ನಿಮ್ಮೆಲ್ಲರ ಪ್ರೀತಿಯನ್ನು ಕೆಡಿಸಲಾರೆ, ಸುಖವನ್ನೆ ತೋರುವೆನು. ನನಗೆ ಮೊದಲು ಕೋಪವಿತ್ತು, ನಿಮ್ಮೆಲ್ಲರ ಕಲಾಪ ಕೇಳಿದ ಮೇಲೆ ನನಗೀಗ ತಂಪಾಯಿತು. ಕೂಪತನದಲ್ಲಿ ಅಣ್ಣನಿಗೆರಗಿ ಬರುವೆನು.'' ಎಂದು ಬಾಹುಬಲಿ ನುಡಿದಾಗ ಹೆಂಗಸರಿಗೆಲ್ಲ ಉಲ್ಲಾಸವೇರಿತು.

''ರತಿ, ನೀನು ಲೇಸನ್ನೆ ನುಡಿದೆ. ನನಗದು ಮಹಾ ಹಿತವಾಯಿತು'' ಎಂದನು.

ಅವಳಾಗ, ''ಹಿತವೆಂದು ನೀನಲ್ಲದೆ ಮತ್ತಾರು ಬಲ್ಲರು?'' ಎಂದು ಪತಿಯ ಕಾಲಿಗೆರಗಿದಳು. ಆಗ ಸರ್ವರಾಣಿಯರೂ ಸೇಸೆಯಿಟ್ಟರು. ಕೂಡಲೆ ಬಾಹುಬಲಿಯು ಆ ನಿವಾಸದಿಂದೆದ್ದು ಹೋದನು. ಹೆಣ್ಣುಗಳ ಎದೆಗೆ ಸಾಸಿವೆ ಕುಡಿದಂತಾಯಿತು.

ಬಾಹುಬಲಿಯು ತನ್ನ ಅರಮನೆಯೆದಿರಲ್ಲಿ ನೆರೆದಿರುವ ಮಂದಿಯನ್ನು ನೋಡಿದನು. ಮಂದಿಗಳು ''ಬಾಗು, ಭಲಾ,'' ಎಂದು ಹೇಳುತ್ತಿರುವಾಗಲೆ ಅವನು ಮಾಕಂದವೆಂಬ ಆನೆಯನ್ನೇರಿದನು. ಒಡನೆ ಬೆಳಿಯ ಸತ್ತಿಗೆಯೆತ್ತಿತು. ಚಾಮರಗಳು ಎಡಬಲದಲ್ಲಿ ಒಪ್ಪಿದುವು. ವಾದ್ಯ ಮೊಳಗಿತು. ಚಾಮರವಿಕ್ಕುತ್ತಿರಲು ಧ್ವಜ ಪತಾಕೆಗಳನ್ನೆತ್ತಿಕೊಂಡು ಮುನ್ನಡೆದರು.

ಲೋಕದ ಶೃಂಗಾರವೆ ರೂಪುಗೊಂಡಂತೆ ತನ್ನ ಆಕಾರವೆ ಲೋಕ ಮೋಹಕ ವಾಗಿರುವಾಗ ಬಾಹುಬಲಿಯು ಮಾಕಂದ ಗಜವನ್ನು ಮುಂದಕ್ಕೆ ನಡೆಸಿದನು. ಜನಸಮೂಹವು, ''ಜಯ ಜಯ''ವೆಂದು ಘೋಷಿಸಿತು. ಹೆಂಗಸರಾಗ ಮದಿಲು, ಮಾಳಿಗೆ ಮಾಡಗಳನ್ನೇರಿ ಮದನನ ಚೆಲುವನ್ನು ನೋಡಿದರು.

ಆಗ ಆದ ಅಪಶಕುನಗಳನ್ನು ಲೆಕ್ಕಿಸದೆ ಬಾಹುಬಲಿ ಮುಂದೆ ನಡೆದನು. ಮುಂದೆ ಒಬ್ಬ ರಾವುತನು ತನ್ನ ದೇಹದಲ್ಲಿರುವ ಭೂಷಣಗಳನ್ನೆಲ್ಲ ತೆಗೆದಿತ್ತು ಮುಂದಿನ ತಪವನ್ನು ಸೂಚಿಸಿದನು. ಅದನ್ನು ಕಂಡು ಮಂತ್ರಿಯು ಮರುಗಿ ''ನಾಳೆ ನಾಡಿದು ಗಮಿಸುವೆ ಸ್ವಾಮಿ'' ಎಂದನು. ಆದರೆ ಬಾಹುಬಲಿ ಕೇಳಲಿಲ್ಲ, ಅದೇ ಸುಲಗ್ನವೆಂದು ಮುನ್ನಡೆದನು. ವಾದಕ ಪಾಠಕರ ಘೋಷದೊಂದಿಗೆ ಅವರು ಮುನ್ನಡೆದು ಪೌದನಪುರದ ಬಾಗಿಲನ್ನು ಕಳೆದರು.

ಅಷ್ಟರಲ್ಲಿ ಗುಣವಸಂತಕನು, ಮುಂದೆ ಪಾಯದಳವನ್ನು ತೋರಿ ಕೈ ಮುಗಿದನು. ರಣರಂಗ ವಿಕ್ರಮನಾದ ಆ ಕಾಮನು ಮಾಕಂದವೆಂಬ ಮದದಾನೆಯ ಮೇಲಿದ್ದು ತನ್ನ ಪಾಯದಳವನ್ನು ನೋಡಿದನು.

ಕೊಂಬು, ದಂತ, ಸೊಂಡಿಲು, ಕಣ್ಣುಗಳ ಆನೆಗಳೆಲ್ಲ ಮಾಮರಗಳಂತೆ ಸುಳಿದುವು. ಕೋಗಿಲೆಯ ದನಿ, ತಳಿರಿನ ಪತಾಕೆ, ತುಂಬಿರುವ ಪುಷ್ಪಬಾಣಗಳು ರಥಗಳ ಸಮೂಹವೇ ಅಶೋಕೆಯ ಮರಗಳಂತೆ ಸರಿಯಿತು. ಕುದುರೆಗಳ ಸಾಲುಗಳು ನೆಲದಲ್ಲಿ ನಿಲ್ಲದೆ ಗಿಳಿಗಳಂತೆ ಹಾರಿಹೋದುವು. ಕೂರಾಯುಧಗಳನ್ನು ಹಳಚುತ್ತ ಹರಿಗೆಯ ಭಟರು ಜಕ್ಕವಕ್ಕಿಗಳಂತೆ ಕಾಲಿಕ್ಕುತಿದ್ದರು. ಸಬಳಿಗರು ಎರಳೆಯಂತೆಯೂ, ಬತ್ತಳಿಕೆಯವರು ನವಿಲಿನಂತೆಯೂ, ಅರಸುಗಳು ಅರಸಂಚೆಗಳಂತೆಯೂ, ಹೋಗುತ್ತಿರುವುದನ್ನು ಪುಷ್ಪಬಾಣನು ನೋಡಿದನು.

ಚತುರಂಗ ಬಲದ ಹೊರಗೆ ಮದನನಿಗಿರುವ ಹಿಂಬಲವೇ ಹೆಣ್ಣುಗಳ ಬಳಗ. ಕುಪ್ಪಸ, ಕಸೆ, ಮೊಲೆಗಟ್ಟು, ರತ್ನದ ಕೆಲಸದಿಂದ ಕಂಗೊಳಿಸುವ ಒಡ್ಯಾಣಗಳ ರತಿರಾಗ ಕುಶಲೆಯರೆಲ್ಲರು ಆಯತವಾಗಿ ಸಾಗುತಿದ್ದರು. ಆನೆಯ ಮೇಲೇರಿದ ಹೆಣ್ಣುಗಳು ಹೀಲಿಯ ಹರಿಗೆಯನ್ನೂ, ಹೂವಿನ ಬಾಣಗಳನ್ನೂ ಹಿಡಿದಿದ್ದರು. ಕೆಲವರು ಕೇದಗೆಯೆಸಳಿನ ಕಠಾರಿಗಳನ್ನೂ ಹಿಡಿದು ರಥಗಳನ್ನೇರಿ ಬಂದರು. ಮುತ್ತು ಕುಂದಣಗಳ ಹರಿಗೆಗಳನ್ನೂ ಬಾಣಗಳನ್ನೂ ಹಿಡಿದ ಯೌವನೆಯರು ಸಾಗಿದರು.

ಬಾಹುಬಲಿಯೂ ತನ್ನ ಬಲವನ್ನು ನೋಡಿ ಮೆಚ್ಚಿ, ದಳಪತಿಗೆ ಮೆಚ್ಚನ್ನಿತ್ತನು. ತನ್ನ

ಸೇನೆಯು ಗೆಲುವಿನಿಂದ ನಡೆಯಲೆಂದು ಆಜ್ಞೆ ಮಾಡಿದನು. ಆ ಸೇನೆಯು ಘುಳು ಘುಳು ಘೋಷವೆಬ್ಬಿಸುತ್ತ ನಡೆಯಿತು. ಭೇರಿಗಳೂ ತಂಬಟೆಗಳೂ ಮೊಳಗಿದುವು. ಕಹಳೆಗಳೂ ಬೀರಿದುವು. ಪೆಟಲು ಡಬ್ಬೆಂದುವು. ಮದದಿಂದ ಮದನನ ಸೇನೆಯು ಭೋಯೆಂದು ಘೋಷಮಾಡುತ್ತ ನಡೆಯುತ್ತಿರುವುದು. ಅತ್ತ ಚಕ್ರಿಯ ಕಟಕಕ್ಕೂ ಕೇಳಿತು. ಮತ್ಸ್ಯಧ್ವಜಗಳು ಮೇಲೆದ್ದು ಆಕಾಶ ತುಂಬಿದುವು. ಅಂಗಜನ ಸೇನೆಯೂ ಹಾರುತ್ತ, ಹರಿಯುತ್ತ, ಬೊಬ್ಬಿರಿಯುತ್ತಸಾಗಿತು.

ಸ್ಮರನು ಹಿಡಿದಿರುವ ಇಕ್ಷುಚಾಪಕ್ಕೆ ಸರಿಯಾಗಿ ಪುಷ್ಪಬಾಣಗಳನ್ನು ಹಿಡಿದುಕೊಂಡು, ಆನೆಯನ್ನೇರಿ ಹತ್ತಿರದಲ್ಲೇ ಬರುತಿದ್ದರು. ಪಾರಿವಾಳದಂತೆ ಭಟರು ಶಬ್ದಮಾಡುತ್ತಿರುವಾಗ ಮಂದಮಾರುತ ಮಲಯಮಾರಂತರು ಹಾರುತ್ತ ಮುಂದೆ ಹೋಗುತ್ತಿರುವುದನ್ನು ಶೃಂಗಾರಹಾರನಾದ ಬಾಹುಬಲಿಯು ನೋಡುತ್ತ ಸವಿಜೃಂಭಣೆಯಿಂದ ಬಂದನು.

ಕಳಕಂಠನು ಕೈಯೆತ್ತಿ ''ಚಿತ್ತ ಪರಾಕು. ಅವಧಾನ'' ಎನ್ನುವುದನ್ನೂ ಮತ್ತಕೋಕಿಳನು ''ಹೋ ಹೋ'' ಎನ್ನುವುದನ್ನೂ ಕೇಳುತ್ತ, ನೋಡುತ್ತ ಬಾಹುಬಲಿಯು ಮುಂದುವರಿದನು. ಹತ್ತು ವರುಷದ ಮಹಾಬಲಿನೆಂಬ ಉತ್ತಮ ಗುಣದ ಕುಮಾರನು, ಸಹಕಾರವೆಂಬಾನೆಯನ್ನೂ, ಅವನಿಗಿಂತ ಕಿರಿಯನಾದ ರತ್ನಬಲಿ ರಾಜಕುಮಾರನು ಚೂತಾಂಕನೆಂಬ ಆನೆಯನ್ನೂ ಏರಿ ಬಾಹುಬಲಿಯೇ ಬೆನ್ನಲ್ಲೇ ಬರುತ್ತಿದ್ದರು. ಬಾಲೆಯರೆಲ್ಲಿ? ಬಾಲಕರೆಲ್ಲಿ? ಬಾಹುಬಲಿಯು ಮೂರು ಲೋಕಗಳೂ ತನಗೆ ಇದಿರಿಲ್ಲವೆಂದೇ ಕಂಡಿರುವನು. ಇದು ಬರೇ ಬಾಹ್ಯದ ಆಲಾಪವಲ್ಲ.ಸತ್ಯವೇ ಆಗಿದೆ. ಭೂಮಿಯೇ ಭೋರಿಡುವಂತೆ ತನ್ನ ಪಡೆಯನ್ನುಕೂಡಿಕೊಂಡು ಬಾಹುಬಲಿಯು ಚಕ್ರಿಯ ಪಡೆಯನ್ನು ನೋಡಲು ಬಂದನು. ಕಡಲಿನ ಇದಿರಲ್ಲಿ ಕೆರೆ ನಿಂತಂತಾಯಿತು. ಎಂಟುಮಂದಿ ಚಾಮರವನ್ನಿಕ್ಕುತ್ತಿರುವಾಗ ಬಾಹುಬಲಿಯು ವೀಳ್ಯವನ್ನು ಕೊಂಡು ಸಾಳಂಗರಾಗವನ್ನು ಹಾಡಿಸುತ್ತ ಚಕ್ರೇಶ್ವರನ ಪಾಳೆಯವನ್ನು ನೋಡುತಿದ್ದನು. ಭಾವಜನಾದ ಬಾಹುಬಲಿಯ ಬಾಸಿಗದ ಕಂಪಿಗೆ ಎಳೆದುಂಬಿಯು ಆಡುತಿತ್ತು. ಅವುಗಳ ಮೇಲೆ ಬೆಳ್ಗೊಡೆಗಳು ಶೋಭಿಸುತ್ತಿದ್ದುವು. ಅಲರಂಬನಾದ ಬಾಹುಬಲಿಯು ದಾಳಿಗಾಗಿ ಬಂದಿರುವೆನೆಂದು ಚಕ್ರಧರನ ಪಾಳೆಯವೊಮ್ಮೆ ಮಸಗಿದಂತಾಯಿತು. ಬಾಹುಬಲಿಯ ಐಸಿರಿಯನ್ನವರು ತಿರುಗಿ ತಿರುಗಿ ನೋಡುತ್ತಿದ್ದರು.

ಅತ್ತ ಭರತಚಕ್ರಿಯು ಹೊರಚಾವಡಿಯಲ್ಲಿದ್ದು ಪುಷ್ಪಬಾಣನು ಬಂದ ವಾರ್ತೆಯನ್ನು ಕೇಳಿದನು. ''ಕಿರಿಯಯ್ಯನು ಕಾದಲು ಬಂದಿರುವನು. ನಮ್ಮನ್ನು ಕಂಡಾದರೂ ತಿಳಿಯಬಾರನೇ?'' ಎಂದು ಅರ್ಕಕೀರ್ತಿಯು ತನ್ನ ಸಹೋದರರೊಂದಿಗೆ ಬಾಹುಬಲಿಯ ಬಳಿಗೆ ಬಂದನು. ತಂದೆಗೆ ತಿಳಿಸದೆ ತಾವೇ ಮಾತಾನಾಡಿ ಆ ಕುಮಾರರು ಬಂದಿದ್ದರು. ಅವರು ಪ್ರಣಯ ಚಂದ್ರಮ ಮಂತ್ರಿಯೆಡೆಗೆ ದೂತರನ್ನು ಕಳುಹಿಸಿ, ಕಾಣಿಕೆಗೊಂಡು ಚಿಕ್ಕತಂದೆಯ ಬಳಿಗೆ ಬಂದರು. ಚಂದ್ರನಂತಿರುವ ಕುಮಾರರನ್ನು ಕಂಡ ಬಾಹುಬಲಿಯು ಮಾಕಂದದ ಮೇಲಿದ್ದೇ ಬರುವವರಾರೆಂದು ಮಂತ್ರಿಯನ್ನು ಕೇಳಿದನು. ಅವರು ಅವನ ಕಂದರೆಂದು ಮಂತ್ರಿಯು ತಿಳಿಸಿದನು.

ಅಷ್ಟರಲ್ಲಿ ಅರ್ಕಕೀರ್ತಿಯೇ ಮುಂತಾದ ಕುಮಾರರು ತಾವು ತಂದ ಕಾಣಿಕೆಗಳೊಡನೆ ಚಿಕ್ಕ ತಂದೆಯನ್ನು ಕಾಣಲು ಮುಂದೆ ಬಂದರು. ಅದನ್ನು ಕಂಡ ಬಾಹುಬಲಿಯು ಅವರನ್ನು ಬರಬೇಡಿಯೆಂದೂ ಅವರ ಪಿತನು ತನಗೆ ಅರಸನಾದುದರಿಂದ ಅವರು ತನಗೆ ಮಕ್ಕಳಲ್ಲವೆಂದು ಹೇಳಿದನು. ಅದನ್ನು ಕೇಳಿದ ಕಳಕಂಠನು ಹೊರಬಂದು ಕುಮಾರರಿಗೆ ಕೈಮುಗಿದನು. ಈಗ ಒಡೆಯರಿಗೆ ವೇಳೆಯಿಲ್ಲವೆಂದು ತಿಳಿಸಿದನು. ಆ ಮಾತು ಕೇಳಿದ ಕುಮಾರರೆಲ್ಲರೂ ಕಲ್ಲುತಾಗಿದ ಮಿಂಟೆಯಂತಾದರು. ಅದರಿಂದ ಅವರೆಲ್ಲರಿಗೂ ಅತೀವ ನೋವಾಯಿತು.

''ಅಯ್ಯಯ್ಯೊ. ಅಣ್ಣಾಜಿಯರು ಬಂದರೆ, ಹೋಗಲಿ—ಎಂದು ಅಯ್ಯನು ಬಾರಿಸಿದನೆ?'' ಎಂದು ಮಹಾಬಲಿಯು ಒಡನೆ ಆನೆಯಿಂದಿಳಿದು, ಯಾರಿಗೂ ಕಾಣದಂತೆ ಅಲ್ಲಿಂದ ಹೋದನು. ಈ ತಂದೆಯು ನಿನ್ನನ್ನು ಮುಂದೆ ರಕ್ಷಿಸಲಾರನು; ದೊಡ್ಡ ತಂದೆಯೇ ಪಾಲಿಸುವನು—ಎಂದು ವಿಧಿಯೇ ಅವನನ್ನು ಕೊಂಡೊಯ್ದಂತೆ ಮಹಾಬಲಿಯು ಪ್ರೀತಿಯಿಂದ ಚಕ್ರಿಯೆಡೆಗೆ ಹೋದನು. ಕಾಮನ ಸುತನಲ್ಲವೆ ಅವನು. ಹೊರಹೊಮ್ಮುವ ಲಾವಣ್ಯದಿಂದವನು ಭೂಮೀಶನಲ್ಲಿಗೆ ನಡೆದನು.

''ಸ್ವಾಮಿ, ನಿನ್ನ ತಮ್ಮನ ಕುಮಾರನು. ಶ್ರೀ ಮಹಾಬಲಿರಾಜ'' ಎಂದು ದಕ್ಷಿಣಾಂಕನು ಒಡನೆ ತಿಳಿಸಿದನು. ಕಾಣಿಕೆಯಿಟ್ಟು ಕಾಲಿಗೆರಗಿದ ಕುಮಾರನನ್ನು ಭರತೇಶನು ತೆಗೆದಪ್ಪಿಕೊಂಡು ತೊಡೆಯ ಮೇಲೆ ಕುಳ್ಳಿರಿಸಿಕೊಂಡನು.

''ಮೊಗವೇಕೆ ಬಾಡಿತು? ಗುಟ್ಟಿನಲ್ಲಿ ಬಂದುದೇಕೆ? ನಿನಗೆ ಯಾರೊಡನಾದರೂ ಜಗಳವಾಯಿತೊ? ಹೇಳು; ಹೇಳಣ್ಣ'' ಎಂದು ಅಪ್ಪಿಕೊಳ್ಳುತ್ತ ಚಕ್ರಿಯು ವಿಚಾರಿಸಿದನು.

ಆಗ ಸೇವಕರು ವಿನಯದಿಂದ ತಿಳಿಸಿದರು:

''ದೇವರು ಮಕ್ಕಳ ಚಿಕ್ಕಯ್ಯನ ಹತ್ತಿರ ಹೋದಾಗ ಅವರು ವೇಳೆಯಿಲ್ಲವೆಂದು ಅಟ್ಟಿಬಿಟ್ಟರು. ಅದರಿಂದ ನೊಂದು, ಈತನಿಲ್ಲಿಗೆ ಬಂದನು.''

''ಅಯ್ಯೊ, ಮದನನ ಮನಸ್ಸಿನ ವಿಧ್ವಂಸಭಾವನನ್ನು ಹಂಸನಾಥನೆ ಬಲ್ಲನು. ನಾನು ಬೇಡವಾದರೆ ನನ್ನ ಸುತರು ವೈರಿಗಳೆ?'' ಎಂದ ಭರತೇಶನು ಅದೆಲ್ಲವೂ ಕರ್ಮಾಂಶವೆಂದು ಭಾವಿಸಿದನು. ಆಮೇಲೆ ಅರ್ಕಕೀರ್ತಿಯನ್ನು ಅಲ್ಲಿಗೆ ಕರೆಯಿಸಿದರು. ಕೈಮುಗಿದು ನಿಂತಿರುವ ಮಗನನ್ನು ಕಂಡು ಭರತೇಶನೇ ಮಾತನಾಡಿದನು.

''ಇಲ್ಲಿಂದಲ್ಲಿಗೆ ನಡೆದು ಬಳಲಿದೆಯಾ? ಪಿತ್ತದ ಉದ್ರೇಕವು ನಿನ್ನನ್ನು ತಿರುಗಿಸಿತೇ? ಯಮನೇ ಮುನಿದರೂ ಜಯಿಸುವ ಶಕ್ತಿ ನನಗುಂಟು.'' ನಿಮಗಲ್ಲ ಯಾಕಿಷ್ಟು ಚಿಂತೆ? ಕಬ್ಬಿನ ಬಿಲ್ಲಿರುವವನು ಸರಸನೆಂದು ಭಾವಿಸಿ ನೀನು ಹೋದುದಲ್ಲವೆ? ಸವಿಯಾಯಿತೆ ನಿನಗೆ? ಹೋಗು. ಹೋಗು.'' ಎಂದು ಭರತೇಶ ನುಡಿದನು.

ಅರ್ಕಕೀರ್ತಿಯು ತಲೆತಗ್ಗಿಸಿ ಸುಮ್ಮನೆ ನಿಂತನು. ಅನಂತರ ಚಕ್ರಿಯು ಮಹಾಬಲಿ ಕುಮಾರನ ಮೊಗವ ನೋಡಿದನು. ನಿನ್ನನ್ನು ಕಂಡು ಹಲವು ನೋವುಗಳನ್ನೂ ಮರೆಯುವೆನು. ಇನ್ನು ನನಗೇನೂ ಕಲುಷವಿಲ್ಲ.'' ಎಂದು ಸಮಾಧಾನ ಪಡಿಸಿದನು.

''ಕಾಲವಶದಿಂದ ತಮ್ಮನು ಈಗ ಎದುರು ನಿಂತರೂ ಮುಂದೆ ಅವನೆ

ಕಾಲಿಗೆರಗುವನು. ಈ ಬಾಲಕನು ಈಗ ಬಂದು ಕಂಡುದೇ ಅದಕ್ಕೆ ಸಾಕ್ಷಿ'' ಎಂದು ಅಲ್ಲಿದ್ದ ಅರಸುಗಳು ಹೇಳಿದರು.

''ತಂದೆಯ ನುಡಿಗೆ ಒಪ್ಪದೆ ಈ ಕುಮಾರ ಬಂದ ವಿವೇಕಕ್ಕೆ ಎಣೆಯೇ ಇಲ್ಲ. ಈಗಿಷ್ಟು ಬುದ್ಧಿವಂತನಾಗಿರುವವನು ಮುಂದೆ ಜವ್ವನನಾದಾಗ ಇನ್ನೆಷ್ಟು ಬುದ್ಧಿವಂತನೋ'' ಎಂದವರು ಮಹಾಬಲಿ ಕುಮಾರನನ್ನು ಹೊಗಳಿದರು.

''ಈಗ ಒಡ್ಡಿದ ಅಂಕವನ್ನು ನಾನು ಗೆಲ್ಲುವೆನು. ಅಷ್ಟರವರೆಗೆ ನೀನು ದೊಡ್ಡಣ್ಣನೊಡನೆ ಇರು.'' ಎಂದು ಭರತೇಶನು ಮಹಾಬಲಿ ಕುಮಾರಗೆ ಮನ್ನಣೆಯೆಸಗಿ ಕಳುಹಿಸಿದನು.

ಇಲ್ಲಿ ಸಭೆಯಲ್ಲಿ ಭರತೇಶನಿದ್ದರೆ ಅಲ್ಲಿ ಮದಗಜವನ್ನೇರಿದ ಮನ್ಮಥನು ಸಮರೋನ್ಮುಖನಾಗಿದ್ದನು.

೩೨

# ರಾಜೇಂದ್ರ ಗುಣವಾಕ್ಯ

ಭರತೇಶ ಮತ್ತು ಭುಜಬಲಿರಾಜರ ಮಂತ್ರಿಗಳೂ ಮಿತ್ರರೂ ಒಂದೆಡೆ ಸೇರಿ, ಆ ದೊರೆಗಳಿಬ್ಬರ ಕದನದ ವಿಚಾರವನ್ನು ಯೋಚಿಸಿದರು. ಮೃದುಕಲೆಯನ್ನೇ ಅವರು ಆಲೋಚಿಸಿದರು.

''ಯಾರು ಬೇಡವೆಂದರೂ ಬಿಡಲಿಲ್ಲ; ಕಾವು ಏರಿ ಮಾರನೇ ಬಂದನೆಂದು ಮೇಲೆ ಹೋರಾಟವಲ್ಲದೆ ಸಂಧಾನವು ಇನ್ನಾಗದು.''

''ಹೋಗಲಿ. ಇನ್ನೇನು ಮಾಡಬಹುದು? ಚಕ್ರೇಶ್ವರನು ಈ ಪುಷ್ಪಬಾಣನಿಗೆ ಇದಿರೇ? ಉಗ್ರರಾದವರು ಸಂಗರದಲ್ಲಿ ತಾಗದೆ ಬಾಗಲಾರರು.''

''ಮಿಕ್ಕವರೊಡನೆ ಸೆಣಸಬಹುದು. ಚಿತ್ತಾದ ನಿರೀಕ್ಷಕನಾದ, ಸಾಹಸಿಯಾದ ಚಕ್ರಿಯನ್ನು ಕೆಣಕಿ ಕಾಮನು ಗೆಲ್ಲುವನೆ? ಬಲ್ಲೆವು,ಅದಂತಿರಲಿ. ಮುಂದಣ ಕಾರ್ಯವೇನು?''

''ಕುಸುಮಾಸ್ತ್ರದಿಂದ ಕಾಳಗವೋ? ಮನ್ಮಥನು ಕೂರಸಿಗಳನ್ನು ಹಿಡಿವನೋ?''

''ಕುಸುಮಾಸ್ತ್ರಗಳನ್ನು ಹಂಸನಿಂದ ಗೆಲ್ಲುವೆನೆಂದು ಕೂರಸಿಗಳನ್ನೂ ಹಿಡಿಯಬಹುದು.''

''ಎಂದರೆ—ಇಬ್ಬರೂ ವಜ್ರದೇಹಿಗಳು. ಇವರು ಅಲ್ಪದಿಂದ ನೋಯುವಂತಿಲ್ಲ. ಕಾದುವಾಗ ಮಂದರ ಪರ್ವತಗಳೆರಡು ಮಲೆತು ಬಂದಂತೆ ಕಾದುವರು. ಆಗ ಉಳಿದ ಮಂದಿ ಚೂರ್ಣವಾದೀತು. ನುಗ್ಗು ನೂರಾಟೀತು.''

''ಹಾಗಾದರೆ ಸರ್ವಬಲವನ್ನೂ ಕೊಲ್ಲುವುದು ಬೇಡ. ಇಬ್ಬರೂ ಹರಿತವಾದ ಖಡ್ಗಗಳನ್ನು ಹಿಡಿದು ಕಾದುವುದೂ ಬೇಡ. ಇಬ್ಬರನ್ನೂ ಧರ್ಮಯುದ್ಧಕ್ಕೆ ಕೇಳಿಕೊಳ್ಳುವ.'' ಎಂದು ಯೋಚಿಸಿದ ಆ ಮಂತ್ರಿಗಳೂ ಮಿತ್ರರೂ ಸಾರ್ವಭೌಮನಲ್ಲಿಗೆ ಸಾರಿ ಅವನನ್ನು ಕೇಳಿದರು.

''ಅರಸ ಬಿನ್ನಹ. ಯುವರಾಜನು ಪುಷ್ಪಶರಗಳ ಬದಲಿಗೆ ಲೋಹಾಸ್ತ್ರಗಳನ್ನು ಉಪಯೋಗಿಸುವನು. ಹಾಗಾದರೆ ಕಟಕವು ಪುರಪ್ರವೇಶ ಮಾಡುವುದರ ಬದಲು ಯಮಪುರ ಪ್ರವೇಶಮಾಡಬೇಕಾದೀತು?''

''ಚಕ್ರೇಶ್ವರಾ. ನೀವಿಬ್ಬರೂ ಮಹಾವಿಕ್ರಮರು. ನೀವಿಬ್ಬರೂ ಆಯುಧ ಹಿಡಿದು ಕಾದುವಾಗ ಪ್ರಳಯಕಾಲವೆ ಬಂದೀತಲ್ಲದೆ ಸೇನೆಗಿನ್ನು ಉಳಿಗಾಲವಿಲ್ಲ.''

''ಸ್ವಾಮಿ, ವಜ್ರದೇಹಿಗಳಾದ ನೀವಿಬ್ಬರೂ ಅಂಕದ ಕಳದಲ್ಲಿ ಕಾಲಿಟ್ಟರೆ, ಬಳೆಗಾರ ಅಂಗಡಿಗಳಿಗೆ ಆನೆ ಹೊಕ್ಕು ಓಕುಳಿಯಾಡಿದಂತಾಗುವುದು.''

ಅವರ ಮಾತನ್ನು ಕೇಳಿದ ಸಾರ್ವಭೌಮನು ಅವರನ್ನೇ ಕೇಳಿದನು. ''ಇದಕ್ಕೆ ನೀವು ಏನನ್ನು ಕಂಡಿರುವಿರಿ? ಹೇಳಿರಿ'' ಎಂದನು. ಆದರೆ ಆವರು ತಮ್ಮ ಆಲೋಚನೆ ಹೇಳಲು ಅಂಜಿದರು.

''ಎದೆಹಾರು ಬೇಡ. ಹೇಳಿರಿ.''

''ಸ್ವಾಮಿ ಧರ್ಮಯುದ್ಧಕ್ಕೆ ಒಪ್ಪು.''

''ದೃಷ್ಟಿಯುದ್ಧ, ಜಲಯುದ್ಧ, ಮಲ್ಲರ ಮುಷ್ಟಿಯುದ್ಧವನ್ನು ನೀವಿಬ್ಬರು ಎಸಗಿರಿ. ಅದರ ಮೇಲೇನೂ ತೊಡಕುಂಟಾಗಲಾರದು. ಇದು ಸರ್ವರ ಇಷ್ಟವಾಗಿದೆ.''

''ಅಂತು ಇಂತೆಂದು ನನ್ನನ್ನು ಕೇಳುವುದು ಬೇಡ. ಭುಜಬಲಿ ಹೇಗೆ ಒಪ್ಪುತ್ತಾನೊ ಹಾಗೆ, ನಾನು ಕೇಳುವೆನು. ಚೆನ್ನಾಗಿ ಯೋಚಿಸಿಕೊಳ್ಳಿರಿ'' ಎಂದು ಸಾರ್ವಭೌಮನು ಸಂತೋಷದಿಂದಲೇ ನುಡಿದನು. ಅವರೂ ಸಂತೋಷದಿಂದಲೇ ಅಲ್ಲಿಂದ ತೆರಳಿದರು.

ಅವರು ಮದನನನ್ನು ಕಂಡು ಕೈಮುಗಿದು ಬಿನ್ನವಿಸಿದರು ''ಬಿನ್ನಹ ಮಾಡಲು ನಮ್ಮೆದೆ ಬೆದರುತ್ತಿದೆ ಸ್ವಾಮಿ.'' ಎಂದಾಗ ''ಕದನವುಂಟು; ಆದರೆ ನಿಮಗೆ ಭೀತಿ ಬೇಡ. ಹೇಳಿರಿ'' ಎಂದವನೇ ದಕ್ಷಿಣವನ್ನು ನೋಡಿ ಮೊದಲಿನಂತೆ ಆಡಬೇಡೆಂದು ಬಾಹುಬಲಿಯು ತಿಳಿಸಿದನು.

''ಕಾಳಗ ಉಂಟು ಸ್ವಾಮಿ. ಆದರೆ ಖಡ್ಗದ ಯುದ್ಧ ಬೇಡ. ಮೇಲಾದ ಮೃದುಲಯುದ್ಧವನ್ನು ನೀವಿಬ್ಬರೂ ತೋಳಬಲ್ಮೆಯಿಂದಲೇ ಮಾಡಿರಿ.''

''ಇದಿರಿನ ಕಾಲುದಳವು ಹೆಚ್ಚು, ನನ್ನ ಕಾಲದಳವು ಕಿರಿದು. ಇದಕ್ಕೇನು ಮಾಡುವುದೆಂದಿದ್ದೆ. ಅದರಲ್ಲೂ ನೀವಿಂತಾಡಿದುದು ನನ್ನ ಪುಣ್ಯೋದಯವು. ಮುಂದೇನೆಂದು ಹೇಳಿರಿ.''

''ಎವೆಯಿಕ್ಕದೆ ಒಬ್ಬರನ್ನೊಬ್ಬರು ನೋಡಬೇಕು. ಕಣ್ಣೆವೆಯಿಕ್ಕಿದರೆ ಸೋಲು. ಯುದ್ಧವನ್ನು ಅಷ್ಟರಲ್ಲೇ ನಿಲ್ಲಿಸಬೇಕು. ನಿಲ್ಲಿಸದಿದ್ದರೆ ಇನ್ನೊಂದು ಮಾತುಂಟು. ಹಸ್ತಗಳಿಂದ ಒಬ್ಬೊಬ್ಬರೂ ಜಲವನ್ನು ಮೊಗೆದು ಮೊಗೆದು ಮುಖಕ್ಕೆ ಚೆಲ್ಲುತ್ತಿರಬೇಕು. ಮುಖ ತಿರುಗಿಸಿದರೆ ಸೋಲು. ಅಲ್ಲಿಗೂ ಯುದ್ಧವು ನಿಲ್ಲದಿದ್ದರೆ ಮಲ್ಲ ಯುದ್ಧವನ್ನು ಮಾಡುವುದು. ಒಬ್ಬನನ್ನು ಎತ್ತಿದರೆ ಸಾಕು.ಅಲ್ಲಿಗೇ ಸುಮ್ಮನೆ ನಿಲ್ಲಬೇಕು.ಅಲ್ಲಿಂದ ಮುಂದೆ ಕಾಳಗವಿಲ್ಲ. ಇದಕ್ಕೆ ಸ್ವಾಮಿ ಒಪ್ಪಬೇಕು.''

''ಒಪ್ಪಿದೆನು. ನನಗಿದು ಒಪ್ಪು.''

''ಹೂವಿನ ಕಣೆಗಳಿಂದ ಲೋಕವನ್ನು ಜಯಿಸುವವನು ನಿಷ್ಠುರವಾದ ಖಡ್ಗಗಳನ್ನು ಹಿಡಿದರೆ ಧರೆಯು ಮೆಚ್ಚದೆಂದು, ನಾವೀ ಮೃದುಲ ಯುದ್ಧವನ್ನು ಯೋಚಿಸಿದೆವು.''

''ನೀನು ಮೃದು; ನಿನ್ನ ಬಾಣಗಳೂ ಮೃದು; ನಿನ್ನ ಪಡೆಯೂ ಮೃದು; ಇಲ್ಲಿ ಮಾತ್ರ ಕಲ್ಲಿನಂತೆ ಕಠಿಣವೇಕೆ? ಆದ್ದರಿಂದ ಮೆಲ್ಲಿತಾದ ಅಂಕವನ್ನೇ ನೆನೆದೆವು. ನಿನ್ನ ಅರ್ಶಿಗಾಗಿ ಅಲ್ಲವೆಂಬೆವೆ?''

"ನನ್ನವರು ನೀವೆಂದು ಬಲ್ಲೆನು. ಯುದ್ಧಕ್ಕೆ ತಡಮಾಡದೆ ಸಿದ್ಧರಾಗಿರಿ, ಹೋಗಿ."

ಬಾಹುಬಲಿಯ ನುಡಿಯಂತೆ ಅವರೆದ್ದು ನಡೆದರು. ಅವರು ಚಕ್ರಧರನಲ್ಲಿಗೆ ಬಂದು ಬಾಹುಬಲಿಯ ಶೌರ್ಯದ ರೀತಿಯನ್ನೆಲ್ಲ ಅವನೊಡನೆ ಬಿನ್ನವಿಸಿದರು. ಈ ಮೂರು ಮೃದು ಯುದ್ಧವಲ್ಲದೆ ಬೇರೊಂದು ಯುದ್ಧವನ್ನು ಮಾಡುವುದಿಲ್ಲವೆಂದವರು ಮೊದಲು ಚಕ್ರೇಶ್ವರನಿಂದ ಅಭಯ ಪಡೆದರು. ಅನಂತರ ಮದನನಿಂದಲೂ ಅಂತಹ ಅಭಯವನ್ನೇ ಕೊಂಡರು.

"ಅಂಗಜನಿಗೆ ಸೋಲುಂಟಾದರೆ ಅವನು ಚಕ್ರವರ್ತಿಯ ಕಾಲಿಗೆರಗಬೇಕು. ಚಕ್ರವರ್ತಿಯ ಕಾರ್ಯ ಹಿಂಜಿದರೆ ಕಾಲಿಗೆ ಎರಗದೆ, ಕಂದರ್ಪನು ತನ್ನ ಊರಿಗೆ ಹೋಗಿ ಬಾಳಲಿ" ಎಂದು ಶರ್ತಗಳನ್ನೂ ನಿರ್ಣಯಿಸಿಕೊಂಡರು.

"ಮದನನು ಅಣ್ಣನಿಗೆ ಮೇರುವಿನಂತೆ ಒಡ್ಡಿನಿಂತಾಗ ಸಂಗ್ರಾಮವು ದೊರೆಗಳಿಗಿಬ್ಬರಿಗಲ್ಲದೆ ಉಳಿದ ಷಡಂಗದ ಸೇನೆಗಿಲ್ಲ"ವೆಂದು ಕಟಕದಲ್ಲಿ ಡಂಗುರ ಸಾರಿತು.

ಹೆಸರಾದ ವ್ಯಂತರೆಲ್ಲರು ತರತರವಾಗಿ ನಿಂತರು. ಅಂಬರಚರರು ಆಕಾಶದಲ್ಲಿ ನಿಂತರು. ನರರು ವಸುಂಧರೆಯಲ್ಲಿ ತುಂಬಿ ನಿಂತರು. ಒತ್ತಿನಲ್ಲಿ ಕಾಮನ ನೃಪರೂ, ಚಕ್ರೇಶ್ವರನ ದೊರೆಗಳೂ, ಅಖಿಲ ಭೂಸುರರೂ, ತುಂಬಿದ ಕವಿ ಗಮಕಿಗಳೂ, ಸರ್ವಜೀವ ರೂಪಿಗಳೂ ನಿಂತರು. ಅವರನ್ನು ಕಾಯುತ್ತ ಭಟರೂ ಸುತ್ತುಗಟ್ಟಿ ನಿಂತರು. ಸನ್ನೆಯ ಭೇರಿಕಾರರು ನಡುನೆಲದಲ್ಲಿ ಸನ್ನದ್ಧರಾಗಿ ನಿಂತರು. ಅಷ್ಟರಲ್ಲಿ ಉತ್ತಮರು ಬಾಹುಬಲಿಯ ಸನ್ನಿಧಿಗೆ ಹೋಗಿ, ಚಿತ್ಯೈಸಬೇಕೆಂದು ನುಡಿಯತೊಡಗಿದರು. ಆನೆ, ಕುದುರೆ ಮೊದಲಾದ ಸಂಪತ್ತು ಸಾಕು. ನಾನಿನ್ನು ದೀಕ್ಷೆಗೆ ಹೋಗುವೆನು ಎಂದು ಆ ನೆಲ ತುಂಬಿದ ಪಡೆಗೆ ತಿಳಿಸುವಂತೆ ಏರಿದ್ದ ಆನೆಯಿಂದ ಮದನನು ಇಳಿದನು. ಗರ್ವಗಿರಿಯಿಂದ ಇಳಿವಂತೆ ಆನೆಯಿಂದ ಇಳಿದು, ಭೂಮಿಯಲ್ಲಿ ಸ್ವಲ್ಪ ದೂರದ ನಡೆದು ಮಧ್ಯದಲ್ಲಿ ನಿಂತನು. ಅದು ಹಸುರು ಪರ್ವತ ನಿಂತಂತೆ ಕಂಡಿತು. ತನ್ನ ಛತ್ರ ಚಾಮರ ಮೊದಲಾದ ಹಲವು ಭೂಷಣ ವಸ್ತ್ರಗಳನ್ನೆಲ್ಲ ತೆಗೆದಿಟ್ಟು, ದಟ್ಟಿ, ಕುಲಾಯಿ ಮುಂತಾದ ಕೆಲವೇ ಭೂಷಣಗಳನ್ನು ಅಳವಡಿಸಿಕೊಂಡು ಕಾಮನು ಕಳದಲ್ಲಿ ನಿಂತನು.

ಅಚ್ಚ ಕೆಂಪಾದ ದಟ್ಟಿ ಚಲ್ಲಣ ಕುಲ್ಲಾಯಿಗಳನ್ನು ಪಚ್ಚೆಬಣ್ಣದ ಮೈಗ್ಗೆ ಮೆರೆಯುವಂತೆ ಧರಿಸಿರುವುದನ್ನೂ ಹಚ್ಚಡವಿಲ್ಲದಿರುವ ಅವನಂಗದ ಚೆಲುವನ್ನು ಪಡೆಯು ನೋಡಿ, ನೋಡಿ ಮೆಚ್ಚಿ ಬೆರಗಾಯಿತು.ಕಾಸೆಯಿಂದೊಡಗೂಡಿ, ಅದೊಂದು ವಿಲಾಸಕ್ಕೆ ರಂಗದಲ್ಲಿ ನಿಂತ ದೇಸಿಗಾರಿಕೆಯ ಸುಪಾತ್ರವು ಮೋಹಿಸುವಂತೆ ಬಾಹುಬಲಿಯ ಕಳದಲ್ಲಿ ನಿಂತಿದ್ದನು. ಕಣ್ಣೆಟ್ಟು ಸೋತು ನೋಡುತ್ತಿರುವ ಮೋಹೀಜನರ ಕಣ್ಣುಗಳು ಅವನ ದೇಹದಲ್ಲಿ ಪಣ್ಣೆ ಪಣ್ಣೆಯಾಗಿ ಎಡೆಯಾಡುತ್ತಿರುವಾಗ ಮನ್ಮಥನೋ ವೈಗಣ್ಣನೋ ಎಂಬಂತೆ ಅವನು ಒಪ್ಪಿದನು. ಹೆಣ್ಣುಗಂಡಿನ ಕಣ್ಣುಗಳೆಲ್ಲ ಅವನಲ್ಲಿ ನಿಂತಿದ್ದುವು, ಕಣ್ಣೆಯಲ್ಲಿ ಜಂಕೆ ಬಿದ್ದಂತೆ. ಅಣ್ಣನೊಡನೆ ಯುದ್ಧಕ್ಕೆ ನಿಂತ ಒಂದೇ ಒಂದು ಕೊರತೆಯಲ್ಲದೆ. ಬೇರೆ ಯಾವ ಕೊರತೆಯೂ ಅವನಲ್ಲಿರಲಿಲ್ಲ.

ಬಾಹುಬಲಿಯು ಅನುವಾಗಿ ನಿಂತ ಮೇಲೆ ಮುಂದಿನ ಕಾರ್ಯವೇನೆಂದು ಭರತನೊಡನೆ ಅವನ ಮಂತ್ರಿಗಳು ಕೇಳಿದರು. ಆಗ ಅವನಾದರೋ, ''ನಾನೆ ಬಂದು ಎಲ್ಲವನ್ನೂ ಹೇಳುವೆನು,'' ಎಂದು ಮೌನ ತಾಳಿದನು.

''ಇವನೊಡನೆ ಧರ್ಮಯುದ್ಧವನ್ನೇಕೆ ಮಾಡುವುದು? ಆ ಮೊದಲು ಇವನ ಕೈಗಳನ್ನು ಕಟ್ಟಿ ಚಿಕ್ಕಮ್ಮನಲ್ಲಿಗೆ ಕಳುಹಿಸುವುದು— ಎಂದು ಯೋಚಿಸಿದರೂ ಒಡಹುಟ್ಟಿದವನನ್ನು ಭಂಗಗೊಳಿಸಲು ಹೇಸಿದನು. ಸೇನೆಯ ಸಮ್ಮುಖದಲ್ಲಿ ಭಂಗಿಸಿ ಕಳುಹಿಸಿದರೆ ಬಾಹುಬಲಿಯು ಮನೆಯಲ್ಲಿ ನಿಲ್ಲಲಾರ, ದಿಕ್ಷೆಗೆ ಹೋದಾನು— ಎಂದು ಯೋಚಿಸಿದ. ಅವನು ಅದಕ್ಕೆ ಹೆದರಿ ಆ ಯೋಚನೆಯನ್ನು ತೊರೆದನು. ಮೃದುಲ ಯುದ್ಧದಿಂದ ಅವನನ್ನು ಸೋಲಿಸಿದರೂ ನಾಚಿಕೆಯಿಂದ ಮನೆ ಬಿಡುವನು. ಇದಕ್ಕಾವ ಯುಕ್ತಿಯೆಂದು ಭರತೇಶನು ಮನಸ್ಸಿನಲ್ಲೇ ಯೋಚಿಸಿದನು, ಅವನ ಸಹೋದರನು ಆಡಿದ ಆಟವನ್ನು ನೆನೆದು ಅವನು ಚಿಂತೆಗೊಳಗಾದನು. ಇವನೊಂದಿಗೆ ಬಲವನ್ನು ತೋರುವುದೆಂದರೆ ಇದು ಹೂಡಿದ ಯುದ್ಧವಲ್ಲ. ಕಲಹವೊಡ್ಡಿದವನು ತಮ್ಮನೇ. ''ಕೊಲ್ಲಬಾರದು, ನೋಯಿಸಬೇಕು, ಗೆಲ್ಲಬಾರದು'' ಎಂಬ ಚಿಂತೆಯುಂಟಾಯಿತು. ಸಾಹಸಿಗಳನ್ನಾದರೆ ಕುಟುಂಬ ದ್ರೋಹವನ್ನುಂಟುಮಾಡುವುದು ಗುಣವೇ? ಬಾಹುಬಲಿಯ ಮೂರ್ಖತನಕ್ಕೇನು ಮಾಡಲಿ? ಎಂದು ಆ ಹಿರಿಯಣ್ಣನು ಚಿಂತಿಸಿದನು. ''ಶ್ರೀ ಹಂಸನಾಥ ನೀನೇ ಬಲ್ಲೆ! ಇದಕ್ಕೆ ತಕ್ಕ ಊಹೆ ಯಾವುದು ಸ್ವಾಮಿ?'' ಅಷ್ಟರಲ್ಲೊಂದು ಯೋಚನೆ ಹೊಳೆಯಿತು. ದಿವ್ಯವಾದ ಉಪಾಯ. ಗುರುವಿನ ಮಹಾತ್ಮೆಯೆಂದು ನಕ್ಕನು.

ಪಲ್ಲಕ್ಕಿಯನ್ನು ಹಿಡಿಯಿರೆಂದುದೇ ತಡ; ಅಷ್ಟರಲ್ಲೇ ಅವರು ಪಲ್ಲಕ್ಕಿ ತಂದು ಹಿಡಿದರು. ಒಡನೆ ಚಕ್ರಿಯು ಪಲ್ಲಕ್ಕಿಯನ್ನೇರಿದನು. ಕೂಡಲೆ ಹನ್ನೆರಡು ಭೇರಿಗಳೂ ಮೊಳಗಿದುವು. ಛತ್ರಚಾಮರಗಳು ಶೋಭಿಸುತ್ತಿರಲು ಭರತ ರಾಜೇಂದ್ರನು ಮದುವೆಗೆ ಹೋಗುವಂತೆ ಯುದ್ಧಕ್ಕೆ ಸಾಗಿದನು.

''ಬಾಹುಬಲಿಯು ಯುದ್ಧಕ್ಕೆ ಸನ್ನದ್ಧನಾಗಿರುವನು. ಭರತೇಶನು ಉದಾಸೀನದಿಂದೇಕೆ ಹೋಗುವುದು?'' ಎಂದು ಚಕ್ರವರ್ತಿಯ ಸಖರನ್ನು ಕೇಳಿದರು. ''ಶಕ್ತಿಯಿದ್ದರೂ ಯುಕ್ತಿಬೇಕು. ಆದ್ದರಿಂದ ಆಭರಣಗಳನ್ನೆಲ್ಲ ತೆಗೆದಿರಿಸಿ, ಚಲ್ಲಣ ದಟ್ಟಿ ಕಲ್ಲಾಯಿ ಧರಿಸಿ, ದೇವರು ನಡೆಯಬೇಕು.''

''ಇಲಿಯನ್ನು ಹಿಡಿದವರಿಗೆ ಹುಲಿಯನ್ನು ಹಿಡಿವ ಜೋಕೆ ಯಾಕೆ?'' ಎಂದು ಚಕ್ರಿಯು ನುಡಿದಾಗ, ಮಂತ್ರಿಯು ಸಮಾಧಾನ ಹೇಳಿದನು. ''ನೀವು ಹೇಳುವುದು ಬುದ್ಧಿಯುಹುದು. ಆದರೆ ನನ್ನ ಚಿತ್ತದಲ್ಲೊಂದು ಭಾವನೆಯುಂಟಾಯಿತು.'' ''ಯಾವ ಚಿಂತೆಯೂ ಬೇಡ; ಬನ್ನಿ. ಬಾಹುಬಲಿಯನ್ನು ಗೆಲ್ಲುವೆನು,'' ಎಂದು ಚಕ್ರವರ್ತಿಯು ದಕ್ಷಿಣ ನಾಗರ ವಿಟ ವಿದೂಷಕರೆಲ್ಲರಿಗೂ ಹೇಳಿದನು.

''ಗೆಲುವಿರೆಂದು ನಾವು ಬಲ್ಲೆವು; ಆದರೂ ಯುದ್ಧಸನ್ನದ್ಧರಾಗಿ ನಿಲ್ಲುವುದು ಉತ್ತಮವೆಂದಿಷ್ಟೆ ಹೇಳಿದೆವು.'' ಎಂದವರು ತಮ್ಮ ಒಡೆಯಗೆ ಉಸಿರಿದರು.

''ಜಗದೇಕ ಮಲ್ಲ ಜಾಡ್ಯ ಉದ್ಧೂತ ಮನುವಂಶಗಗನ ಮಾರ್ತಾಂಡ. ಕಾಮನ ಅಗ್ರಜ ಜತನ! ಪರಾಕು!'' ಎಂದು ಹೇಳುತ್ತಿರಲು ಅವರು ದಿಗಿದಿಗಿ ನಡೆದುಬರುತ್ತಿದ್ದರು.

"ವಿಕ್ರಾಂತರೊಡೆಯೆ ! ವಿಶ್ವಂಭರಾಭೂಷಣ ! ಚಕ್ರೇಶ ! ಛಲದಂಕಮಲ್ಲ! ಚಕ್ರವಾಕ ಧ್ವಜನ ಅಣ್ಣ!" ಎಂದು ಹೊಗಳುತ್ತಿರಲು ಭರತೇಶನು ಬಂದನು,

ಭರತೇಶ ಬರುತ್ತಿರುವುದನ್ನು ನೂರಿನ್ನೂರು ಮಾರು ದೂರದಿಂದಲೇ ನೋಡಿದ ಬಾಹುಬಲಿಯು ಧೀರಮನ್ನಿನಿಂದ ಅಡ್ಡಮುಖಮಾಡಿ ನಿಂತುಕೊಂಡನು. ಈ ರೀತಿಯಲ್ಲಿ ನಿಂತುದನ್ನು ನೋಡಿ ಭರತೇಶನು ನಗೆಯಾಡಿದನು.

"ನನ್ನ ತಮ್ಮನ ಮೊಗವು ಓರೆಯಾಯಿತೆ? ಈ ನನ್ನ ತೋಳುಗಳು ಇಳಿದು ಹೋದುವು. ಅಯ್ಯೋ. ಮಾರನ ಘೋರವೆ; ಜಗದಧಿನಾಥನ ಮಗನಾಗಿ ನಾಡುಗರ ಮಧ್ಯದಲ್ಲಿ ಹೀಗೆ ನಿಂತು, ಹಗರಣಕ್ಕೆಳೆಸಿದನಲ್ಲ" ಎಂದು ಚಕ್ರಿಯು ನೊಂದು ಕೊಂಡನು. ಭರತೇಶನು ಬಾಹುಬಲಿಯಿಂದ ಹತ್ತೆಂಟು ಮಾರಿರುವಲ್ಲಿ ಶಿಬಿಕೆಯಿಂದಿಳಿದನು. ಕುಂದಣ ಗಿರಿಯೂ ಪಚ್ಚೆಯ ಗಿರಿಯೂ ಒಂದೆಡೆ ನಿಂತಂತೆ ಸೌಂದರ್ಯ ಶಾಲಿಗಳಾದ ಆ ಅಣ್ಣತಮ್ಮಂದಿರು ಶೋಭಿಸುತ್ತಿದ್ದರು.

ಚಕ್ರಿಯ ದೇಹವು ಐನೂರು ಮಾರುದ್ದವಿತ್ತು. ಬಾಹುಬಲಿಯ ದೇಹವು ಅದನ್ನೂ ಮೀರಿದ ಐನೂರ ಇಪ್ಪತ್ತೈದು ಮಾರುದ್ದವಿತ್ತು ಬಾಹುಬಲಿಯ ಚೆಲುವನ್ನೂ ಚಕ್ರಿಯ ಚೆಲುವನ್ನೂ ಪರೀಕ್ಷಿಸಿ ನೋಡಿದಾಗ ಈ ಧರೆಗೆ ಕಾಮನೇ ಚೆಲುವನೆಂದು, ಆ ಕಾಮನಿಂದಲೂ ಚಕ್ರಿಯೇ ಚೆನ್ನಿಗನೆಂದೂ ತೋರಿತು; ಎಲ್ಲ ಚಕ್ರಿಗಳೂ ಕಾಮನ ಹೋಲಿರಲಿಲ್ಲ, ಆದರೆ ಈ ಚಕ್ರಿಯು ಸಲ್ಲಲಿತ ಆತ್ಮಭಾವಕನಾಗಿ, ತನ್ನ ತನುಕಾಂತಿಯಿಂದ ಎಲ್ಲರನ್ನೂ ಮೀರಿದ್ದನು. ರಾಜಮೋಡಿಯಲ್ಲಿ ಚಕ್ರಿ ಮೆರೆದರೆ, ವಿಟರಾಜ ಮೋಡಿಯಲ್ಲಿ ಬಾಹುಬಲಿ ಮೆರೆಯುತಿದ್ದನು. ಅಣ್ಣನದು ರಾಜತೇಜಸ್ಸಾದರೆ ತಮ್ಮನದು ಅನಂಗರಾಜ ತೇಜಸ್ಸಾಗಿತ್ತು.

"ಶಕ್ತಿಯಿಂದ ಭರತೇಶಗೆ ಯಾರಾದರೂ ಎದುರಾಗುವರೆ? ಒಡಹುಟ್ಟಿದವನೆಂಬ ಸೊಕ್ಕಿನಿಂದ ಬಾಹುಬಲಿ ಅವನಿಗಿದಿರಾಗಿ ಒಡ್ಡಿನಿಂತನು." ಜಾಣರಾದವರು ಮನಸ್ಸಿನಲ್ಲಿ ಎಣಿಸಿದರು.

ಅಷ್ಟರಲ್ಲಿ ಭೂರಿವಾದ್ಯದ ನಾದನಿಂತಿತು. "ಕದನದ ಭೇರಿಯ ಸನ್ನೆ ಮತ್ತೆ ಆಗಲಿ. ಈಗ ಮೊದಲು ಯೋಚಿಸಿ ನಾಲ್ಕೆಂಟು ನುಡಿ ಹೇಳುವೆನು. ಮನ್ಮಥನು ಓರೆಮೋರೆಯಲ್ಲೇ ಕೇಳುತ್ತಿರಲಿ. ಗಂಭೀರಾರ್ಥವನ್ನೇ ಹೇಳುವೆನು." ಎಂದು ಚಕ್ರಿಯು ಹಲವರು ಕೇಳುವಂತೆ ಹೇಳಿದನು. ಅದನ್ನು ಅಲ್ಲಿದ್ದ ಮಂತ್ರಿಗಳೂ ನೃಪರೂ ಸಭರೂ ಲೇಸೆಂದು ತಿಳಿಸಿದರು. ಆಮೇಲೆ ಧೀರನಾದ ಚಕ್ರೇಶನು ಬಾಹುಬಲಿಯೊಡನೆ ಹೇಳಿದನು.

"ಮನಸಿಜ ಕೇಳಣ್ಣ. ನಿನಗೂ ನನಗೂ ದುರ್ಮನಸ್ಸಿನಿಂದ ಜಗಳವಾಗುವುದರ ಕಾರಣವೇನು. ಹೇಳು? ನಿಷ್ಕಾರಣವಾಗಿ ಅರಸರು ಕದನವೆಸಗುತ್ತಾರೆಯೇ? ನಿನ್ನ ಒಡವೆಗಳನ್ನು ನಾನು ಕೊಂಡುದಿಲ್ಲ; ನನ್ನ ಒಡವೆಗಳನ್ನು ನೀನೂ ಕೊಂಡುದಿಲ್ಲ ಅಣ್ಣ ನಮ್ಮಯ್ಯನು ಇರಿಸಿ ಹೋದಂತೆ ರಾಜ ಯುವರಾಜ ಸನ್ನಾಹದಲ್ಲೇ ಇದ್ದೇವಲ್ಲವೆ? ದೋಷವಿಲ್ಲದ ಅಣ್ಣತಮ್ಮಂದಿರಾಗಿಯೂ ನಾವೂ ನೊಂದುಕೊಳ್ಳಬೇಕೆ ಅಣ್ಣ? ಆಗಲಿ ಆಗಲಿ. ಹಾಗದ ತೆರಿಗೆ ನೀಡೆಂದು ನಾನು ನಿನ್ನೂರಿಗೆ ಭಟರನ್ನು ಅಟ್ಟಿದೆನೆ?

ಒಡಹುಟ್ಟಿದವನನ್ನು ನೋಡಬೇಕೆಂದು ಹೇಳಿ, ಕಳುಹಿಸಿದೆ, ಅಪ್ಪಾ, ಅದನ್ನು ಸುಳ್ಳೆಂದು ಹೇಳುವುದೆ? ನಿನ್ನ ಊರಿಗೆ ನಮ್ಮವರು ಬಾರದಿದ್ದರೆ ಹೋಗಲಿ. ನನ್ನ ಊರಿಗೆ ನಿನ್ನವರು ಬಂದರೆ ಅನ್ಯರೆಂದು ನಮ್ಮ ಪ್ರಜೆಗಳಾಗಲೀ ಪರಿವಾರವಾಗಲೀ ಕಂಡುದುಂಟೆ? ನಿನ್ನಲ್ಲಿ ಈ ಭಿನ್ನಾರ್ಥವೇಕೆ ಉಂಟಾಯಿತು? ನುಡಿಯಲ್ಲಿ ನಾನು ನಿನ್ನನ್ನು ನಿಂದಿಸಿರುವೆನೆ? ನನ್ನ ಪಡೆಯಲ್ಲಿ ಯಾರಾದರೂ ಹಾಗೆ ನುಡಿದರೆ? ನಾನು ನಿನಗೆ ಹಗೆಯೆ? ನೀನು ನನಗೆ ಹಗೆಯೆ? ಹೇಳು? ಜಿನಪುತ್ರರಾದ ನಾವಿಂದು ಇದನ್ನು ನೆನೆದರೆ ಮುಂದೆ ಸಮಸ್ತರಿಗೂ ದ್ರೋಹದ ಶಾಸನ ಬರೆದಂತಾಗುವುದಿಲ್ಲವೆ?

''ಮಾತಿಗೆ ತೊಡಗಿದ್ದಾನೆ; ಈಗ ಇವನಿಗೆ ಕದನಕ್ಕೆ ಭೀತಿಯಾಗಿದೆ ಎಂದು ಹೇಳಬೇಡ. 'ಪೂತು ಮುಝುರೆ!' ಎಂದು ಜಯಘೋಷವೆದ್ದಾಗ ಕದನಕ್ಕೆ ಸಿದ್ಧನಾಗುವೆನು. ಆದರೆ ಆ ಮೊದಲು ಪಾತಕವನ್ನು ಕಳೆದುಕೊಳ್ಳುತ್ತೇನೆ. ಪರನೊಬ್ಬನು ನನಗೆ ಇದಿರಾಗುತಿದ್ದರೆ ಆಗಲೇ ಮೇಲೆ ಬಿದ್ದು ಮೆಟ್ಟಿ ಅಟ್ಟುತಿದ್ದೆನು. ಸೋದರರ ಕಾಳಗಕ್ಕೆ ಧರೆ ಮೆಚ್ಚದಣ್ಣ, ಯುದ್ಧಕ್ಕೆ ಮೊದಲು ಯುದ್ಧ ನೀತಿಯನ್ನು ಹೇಳಬೇಕು. ನಾನು, ನಿನ್ನಿಂದ ಹಿರಿಯನಾದುದರಿಂದ ಪಾಳೆಯಕ್ಕೆ ಬರಲು ಹೇಳಿದೆ. ನೀನೇ ನನಗೆ ಅಗ್ರಜನಾಗುತಿದ್ದರೆ ನೀನಿರುವಲ್ಲಿಗೆ ನಾನೇ ಬರುತಿದ್ದೆ , ತಡೆದಿರುತ್ತಿಲ್ಲ. ಹಿರಿಯನಲ್ಲಿಗೆ ಕಿರಿಯನು ಬಂದು ಕಾಣುವುದು ಧರಣಿಯಲ್ಲಿರುವುದಲ್ಲವೆ? ಇದರಲ್ಲಿ ಪರಿಭಾವವೇನುಂಟು ತಮ್ಮ? ಅಂದು ನಮ್ಮಯ್ಯನು ಹೇಳಿದ ಒಜೆಯೇನಾದರೂ ಇದರಲ್ಲುಂಟೆ? ಯೋಚಿಸಿ ನೋಡಣ್ಣ, ನಾನು ನೀನು ಆಡುವ ಆಟಗಾರರು; ನಮ್ಮ ಭಟರೆ ನೋಡುವವರು. ನೀನು ನೆನೆದಿರುವ ಸಂಗ್ರಾಮ ನಮ್ಮನ್ನು ಈ ಸ್ಥಿತಿಗೆ ತಂದಿದೆ. ಜಗತ್ತಿನ ರಾಜರನ್ನು ಆಡಿಸಿ, ಪೊತ್ತುಗಳೆಯುವ ನಾವೇ ನಗೆಗೆಡೆಯಾಗಿ ಹೀಗೆ ಮಾಡುವುದು, ದೊರೆಯಿದ್ದು ಹಗರಣ ಮಾಡಿದಂತಾಯಿತು. ನನ್ನನ್ನು ಗೆದ್ದರೆ ನಿನಗೆ ಕೀರ್ತಿಯೇ ಹೇಳು? ನಿನ್ನನ್ನು ನಾನು ಗೆದ್ದರೆ ನನಗೆ ಯಶಸ್ಸೇ? ಇದನ್ನು ನೋಡಿದ ಮೂರು ಲೋಕದಲ್ಲಿನ ಉತ್ತಮರು ಛೀ ಎನ್ನಲಾರರೆ? ಯೋಚಿಸಿ ನೋಡು, ಅದಕ್ಕಾಗಿ ನೀನಿಂತು ಕದನಕ್ಕೆ ಬಂದೆಯೇನು? ಕದನದಲ್ಲಿ ಕಡೆಗೆ ಗೆಲುವಲ್ಲವೆ; ಬಡಗರ ಹಾಗೇಕೆ ಕಾದಬೇಕು? ಗೆಲವು ನಿನ್ನದು, ಸೋಲು ನನಗೆ ಹೋಗು.''

ಎಂದು ಭರತ ರಾಜೇಂದ್ರನು ತನ್ನ ಗುಣವಾಕ್ಯವನ್ನು ತಿಳಿಸಿದನು. ಭರತ ಚಕ್ರಿಯ ನುಡಿಯನ್ನು ಕೇಳಿದ ದೊರೆಗಳು, ಮಂತ್ರಿಗಳು, ಗೆಳೆಯರು, ಆ ಮಾತಿಗೆ ಕಿವಿ ಮುಚ್ಚಿಕೊಂಡು. ''ದೇವರಿಗುಂಟೇ ಸೋಲು?'' ಎಂಬ ಉದ್ಗಾರಗಳು ಅವರಿಂದ ಹೊರಹೊಮ್ಮಿದುವು. ಭರತೇಶನು ತನ್ನ ಮಾತನ್ನೇ ಮುಂದುವರಿಸಿದನು.

''ಸ್ಮರನಿಗಾರು ಸೋಲಲಿಕ್ಕಿಲ್ಲ? ನಾವೇನು ಹೆಣ್ಣನ್ನು ಬಿಟ್ಟವರೆ? ಸ್ವಲ್ಪ ತಾಳ್ಮೆಯಿಂದಿರಿ. ನನ್ನ ತಮ್ಮನಿಗಾದ ಗೆಲವು ನನ್ನ ಗೆಲವೇ. ಅದರಿಂದ ಭಿನ್ನವಿಲ್ಲ; ನನಗೆ ಸೋಲು ಇಲ್ಲ. ಇನ್ನೊಬ್ಬರು ಇದಿರಾಗುತಿದ್ದರೆ ಎಡಗಾಲಲ್ಲಿ ಒದೆಯುತಿದ್ದೆ. ನೀವು ನನ್ನ ಅಂತರ್ಯವನ್ನರಿತುಕೊಳ್ಳಿ.''

ಮತ್ತೆ ಭರತೇಶನು ಬಾಹುಬಲಿಯತ್ತ ತಿರುಗಿದನು. ''ಗೆಲುವೆಂಬುದೇನೂ ಉಪಚಾರವಲ್ಲ ಅಣ್ಣ; ತೋಳಬಲವನ್ನು ಬಲ್ಲೆನು. ಅದೆಲ್ಲ ಸತ್ಯವಾಗಿದೆ. ನಮ್ಮ ಬಲವೆಲ್ಲ

ಕೇಳುವಂತೆ ಹೇಳುವೆನು. ಕೇಳು. ದೃಷ್ಟಿವಿಜಯ ಹೇಗಾದೀತು? ನೀನು ನನಗಿಂತಲೂ ಇಪ್ಪತ್ತೈದು ಬಿಲ್ಲಿನಷ್ಟು ಹೆಚ್ಚು ಎತ್ತರವಿರುವೆ? ನೀನು ನನ್ನನ್ನು ದೃಷ್ಟಿಸಬಹುದು. ನಾನು ನಿನ್ನನ್ನು ನೋಡುವಾಗ ಊರ್ಧ್ವದೃಷ್ಟಿಯಿಂದಾಗಿ, ನೋವಿನಿಂದ ಎವೆ ಮುಚ್ಚಿಹೋದೀತು. ಸೂರ್ಯಬಿಂಬದೊಳಗಿರುವ ಪ್ರತಿಮೆಯನ್ನು ಕಾಣಬಲ್ಲಂಥ ನಿನ್ನ ಕಣ್ಣುಗಳು ಇಪ್ಪತ್ತೈದು ಮಾಡಿನವು.''

ಈ ಮಾತನ್ನು ಕೇಳಿ ಸಚಿವಮಂತ್ರಿ ನೃಪರು ಆ ವಿಚಾರವನ್ನು ತಮ್ಮಲ್ಲೇ ನೆನೆದುಕೊಂಡರು. ತನ್ನ ತಮ್ಮನಿದನ್ನು ತಿಳಿದುಕೊಳ್ಳಲೆಂದು ಚಕ್ರೇಶನು ಹೇಳಿದನೆಂದು ಅವರು ಭಾವಿಸಿದರು. ಕಣ್ಣನ್ನು ಚುಚ್ಚುವ ಸೂರ್ಯನ ಕಾಂತಿಗೆ ಕುಗ್ಗದೆ ನೋಡುವ ಕಣ್ಣುಳ್ಳ ಭರತೇಶನು, ಆ ಅಂಗಜನ ಬಣ್ಣವು ಸೂರ್ಯರಶ್ಮಿಯಿಂದ ಹೆಚ್ಚಲು ನೋಡಿ, ತಮ್ಮನಿಗೊಲಿದು, ಅಣ್ಣನಿಂತಾಡುವನೆಂದವರು ತಮ್ಮೊಳಗೆ ಆಡಿಕೊಂಡರು.

''ಜಲ ಯುದ್ಧದಲ್ಲಿ ನಾನು ನೀರನ್ನು ಚೆಲ್ಲಿದರೆ ಅದು ನಿನ್ನದೆ ಮುಟ್ಟಿ ಕೆಳಗಿಳಿಯುವುದು; ನೀನಾದರೆ ನನ್ನನ್ನು ಮುಳುಗಿಸಿ ಬಿಡಬಹುದು. ಅದರಿಂದ ನನಗಾಗ ಚಳಿಯಾಗಿ ಅಡ್ಡಮೊಗವಾಗಬಹುದು.'' ಎಂದು ಭರತೇಶನು ಆಮೇಲೆ ತಮನೊಡನೆ ನುಡಿದನು.

''ಮುಗಿಲಿಗೆ ನೀರು ಚೆಲ್ಲುವ ಶಕ್ತಿ ಭರತೇಶನಿಗುಂಟು. ಹಲವು ರೂಪುಗಳನ್ನು ತಾಳಿ, ಸ್ಮರನನ್ನು ಭಯಗೊಳಿಸುವ ಶಕ್ತಿಯೂ ಉಂಟು, ಉಪಚಾರಕ್ಕಾಗಿ ಈ ಮಾತುಗಳನ್ನು ಹೇಳುತ್ತಿರುವನು.'' ಎಂದು ಅದನ್ನು ಕೇಳಿದ ಅರಸರು ಯೋಚಿಸಿದರು.

''ಮಲ್ಲಯುದ್ಧವಾದರೂ ಹೇಗಾದೀತು? ಅಂದು ಅಯ್ಯನು ಭುಜಬಲಿಯೆಂದು ನಿನಗಲ್ಲವೆ ಹೆಸರಿಟ್ಟುದು? ಅಯ್ಯನ ವಾಕ್ಯ ಸುಳ್ಳಾಗದೆಂದು ಬಲ್ಲೆನು. ಭುಜಬಲದಲ್ಲಿ ನೀನೇ ನನ್ನನ್ನೆತ್ತುವೆ. ಭರತೇಶನೆಂದು ಅಯ್ಯನು ನನಗೆ ಹೆಸರಿಟ್ಟುದರಿಂದ ನಾನು ಭರತ ಭೂಮಿಯನ್ನು ಆಳಿದೆ.'' ಎಂದು ಮತ್ತೆ ಭುಜಬಲಿಗೆ ಹೇಳಿದನು.

''ಭುಜಬಲಿಯೆಂದರೆ ಚಕ್ರೇಶ್ವರನನ್ನು ಗೆಲುವುದೆಂದು ಅರ್ಥವೇ? ಸುಜನ ಚಿಂತಾಮಣಿಯಾದ ಭರತೇಶನು ತನ್ನ ಸೋದರನನ್ನು ಬರಿದೆ ಹೊಗಳಿದನು. ವೀರ, ಸುವೀರ, ಅನಂತವೀರ್ಯ, ಮಹಾಬಾಹು. ಎಂದು ಜಿನಗೆ ಬಹಳ ಮಂದಿ ಮಕ್ಕಳಿರುವರು. ಅವರೆಲ್ಲ ನೃಪನೊಂದಿಗೆ ಹೋರಾಡಬೇಕೆಂದು ಇಟ್ಟ ಹೆಸರೆ? ಮೊನ್ನೆ ಕಿರು ಬೆರಳಲ್ಲೇ ತನ್ನ ಪಡೆಯನ್ನು ತೂಗಿದನು. ಅಂದು ಒಂದೇ ಪೆಟ್ಟಿಯಲ್ಲಿ ವಿಜಯಾರ್ಧ ದ್ವಾರದ ಬಾಗಿಲನ್ನೊಡೆದನು. ಕಟಕವೆಲ್ಲ ತೂಗಿ ತೆಗೆದರೂ ಅವನು ಗದ್ದುಗೆಯಲ್ಲೇ ಸ್ಥಿರವಾಗಿದ್ದನು.ಇಂಥ ಭರತನನ್ನು ವಿಟವೇಷದ ಅಂಗಜನು ಎತ್ತಬಲ್ಲನೇ? ನಮ್ಮರಸನು ಸಟೆಗಾಗಿ ಹೀಗೆ ಹೇಳಿದನು. ಅಣ್ಣನಿಂತು ತಮ್ಮನನ್ನು ಉಬ್ಬಿಸಿದನು.'' ಎಂದು ಹಲವರು ಯೋಚಿಸುತಿದ್ದರು.

''ತಮ್ಮ ಕೇಳು. ತಪ್ಪು , ನನ್ನದು : ತೇಜ ನಿನಗೆಂದ ಮೇಲೂ ಕೋಪವೇಕೆ?'' ಎಂದು ಅಣ್ಣನು ಮಾತು ಮುಂದುವರಿಸಿದನು. ತಮ್ಮನಿಗೆ ಅಣ್ಣನು ಸೋತನೆಂದು ಹೇಳುವಾಗ, ದಶದಿಕ್ಕುಗಳೂ ಕುಂದಿಹೋದುವು. ಗಾಳಿಯಿಲ್ಲದೆ ಹೊಗೆ ತುಂಬಿತು. ಮನುರತ್ನನು

ನೊಂದು ಮಾತನಾಡಿದಾಗ ಈ ರೀತಿ ಹೊಗೆ ತುಂಬಿ ಸೂಸದಿರುವುದೆ? ಅದನ್ನು ನೋಡಿದ ಮಹಾಸೇನೆಯು ಹೆದರಿತು.

"ಹಾ, ಕಷ್ಟವನ್ನೇ ನೆನೆದನು." ಎಂದು ಬಾಹುಬಲಿಯು ಎದೆಯಲ್ಲೇ ನೊಂದು ಕೊಳ್ಳುತ್ತ, ಭರತೇಶನೆಡೆಗೆ ನೋಡದೆ ಓರೆಯಾಗಿದ್ದರೂ ಚಕ್ರಿಯು ಸಂತೋಷವನ್ನೇ ತೋರಿಸುತ್ತನುಡಿದನು,

"ಕೇಳಣ್ಣ, ನಾನೇನೂ ಈ ಚಕ್ರವನ್ನು ಬಯಸಲಿಲ್ಲ. ಶಸ್ತ್ರಾಲಯದಲ್ಲಿತಾನೇ ಹುಟ್ಟಿ, ನನ್ನನ್ನೇಳಿಸಿ ನಾಡನ್ನೆಲ್ಲ ಸುತ್ತಿಸಿತು; ನಿಮ್ಮ ಕಣ್ಣಿಗೆ ನೋವಾಗುವಂತೆ ಮಾಡಿಸಿತು. ನಾನೀ ಸಿರಿಯನ್ನು ಪುಣ್ಯದ ಫಲವೆಂದು ಉದಾಸೀನದಲ್ಲಿ ನೋಡುತ್ತಿರುವೆನು. ನನಗಿದರ ಆಸೆಯಿಲ್ಲ, ನೀನೇ ಒಪ್ಪಿಕೋ. ನೀನು ಮುಂದಣ ರಾಜನಲ್ಲವೆ? ನಿಜವಾಗಿ ನೋಡಿದರೆ ಅರಸಾಗಿ ನೀನು ಊರಲ್ಲಿದ್ದೆ. ನೀನು ಅಟ್ಟಿದ ದೊರೆಯನ್ನೂ ನಿನ್ನವರೇ ಆದ ಈ ರಾಜರನ್ನೂ ಈ ಕಟಕವನ್ನೂ ಒಪ್ಪಿಕೊಳ್ಳು. ನಿನಗೆ ನಾನು ಅಣ್ಣನೆಂಬ ಪ್ರೀತಿಯಿಲ್ಲ, ನೀನು ತಮ್ಮನೆಂಬ ಅಕ್ಕರೆ ನನಗುಂಟಪ್ಪ ! ಪುಷ್ಪಬಾಣ, ನಿನ್ನ ಭಾಗ್ಯವನ್ನು ಕಣ್ಣುತುಂಬ ನೋಡುವೆನು. ಈ ರಾಜ ಪದವಿಗೆ ಒಪ್ಪು. ಕೋಸಲದಲ್ಲಿ ನೀನು ಸುಖವಾಗಿ ಬಾಳು. ನನಗೊಂದು ದೇಶವನ್ನು ಕೊಟ್ಟು ಬೇರೆಡೆಯಲ್ಲಿ ಇರಿಸು. ಇದು ಕ್ಲೇಶದ ಮಾತಲ್ಲ ; ಸ್ವರುದೇವನ ಅಡಿದಾವರೆಯಾಣೆಯಾಗಿ ಸಂತೋಷದಿಂದಲೇ ಹೇಳುವ ಮಾತು. ಲೆಕ್ಕವಿಲ್ಲದ ಮಂದಿ ನನಗೆ ಬೇಡ. ಸೇವಕರಿಗೂ, ಒಕ್ಕಲು ಮಕ್ಕಳಿಗೂ ನನಗೂ, ತಕ್ಕಷ್ಟು ಉಂಬಳಿ ಕೊಟ್ಟರೆ ಸಾಕು. ನಾಡಿನ ಕಕ್ಕುಲಿತೆ ನನಗಿಲ್ಲ. ಇದೇನೂ ರಂಜನೆಗಾಗಿ ಹೇಳಿದ ಮಾತಲ್ಲ. ಇದನ್ನು ನಂಬು.ಇದಕ್ಕೆ ನಿರಂಜನ ಸಿದ್ಧನೆ ಸಾಕ್ಷಿ, ನನಗೆ ಇದಕ್ಕಿಂತಲೂ ಹೆಚ್ಚಿನ ಆಶೆ ಭಾಷೆಗಳಿಲ್ಲ."

ವಿರಸವನ್ನು ಬಿಡು ಬಿಡೆಂದು ಚಕ್ರಿಯು ನುಡಿಯುತ್ತಿರಲು ಬಾಹುಬಲಿಯು ಮನಸ್ಸಿನಲ್ಲೇ ತಗ್ಗುತ್ತ, ಮುರಿದ ಮೋರೆಯಲ್ಲೇ ಇದ್ದನು. ಆಗ ಭರತನು ಚಕ್ರರತ್ನವನ್ನು ಕರೆದಿಂತು ಹೇಳಿದನು. "ಹೋಗು ಚಕ್ರವೇ. ಭುಜಬಲಿಯನ್ನು ಓಲೈಸು." ಆದರೆ ಚಕ್ರರತ್ನವು ಹೋಗಲಿಲ್ಲ.ಭರತೇಶನಿಗೆ ಪುಣ್ಯವುಂಟು; ಬಾಹುಬಲಿಗೆ ಆ ಪುಣ್ಯವಿಲ್ಲ, ಆದ್ದರಿಂದಲೇ ಚಕ್ರರತ್ನವು ಮುಂದೆ ಬಂದು ಅಲ್ಲಿಯೇ ನಿಂತಿತು. "ಎಲೆ ಪಿಶಾಚ, ಹೋಗೆಂದರೆ ಏತಕ್ಕೆ ಹೋಗದಿರುವೆ? ನಿನ್ನಿಂದ ನನಗೆ ಕಲಹವುಂಟಾಯಿತು." ಎಂದು ಭರತೇಶನು ಚಕ್ರವನ್ನು ಬಾಹುಬಲಿಯತ್ತಸಾರೆಂದು ನೂಕಿದರೂ ಅದು ಬಳಿ ಜಾರುವಂತೆ ಜಾರಿತು.

ಇವನಿಗೆ ಪುಣ್ಯ ಕ್ಷಯವಾಯಿತಲ್ಲ; ಚಕ್ರಸೇರುವ ಪುಣ್ಯ ಬಾಹುಬಲಿಗಿಲ್ಲ. ಭರತೇಶ ನೂಕಿದ ರಭಸಕ್ಕಷ್ಟು ದೂರ ಚಕ್ರ ನಿಂತಿತು. ಅದು ಕಳೆಗುಂದಿದಂತೆ ಬಾಹುಬಲಿಯು ಬಳಿಯಿಂದ ಅತ್ತ ಸುರಿದು ನಿಂತಿತು. ಇದನ್ನು ನೋಡಿದ ದಳವು ನಡುಗಿತು. ಕೂಡಲೆ ಧೂಮಕೇತುಗಳು ಕಾಣಿಸಿಕೊಂಡವು. ನೆಲವು ಥಡಥಡನೆ ನಡುಗಿತು. ಸೂರ್ಯಬಿಂಬವು ಕಂದಿತು. ಕೆಂಪಾದ ಬಿಸಿಲು ಮಾಸಿತು. ಎಂಟು ದಿಕ್ಕುಗಳು ಮಾರ್ದನಿಗೊಟ್ಟವು.

ಘನಪುಣ್ಯಯುತನು ಅಲ್ಪ ಪುಣ್ಯನಿಗೆ ಚಕ್ರವನ್ನು ತೂಗಿ ಅಟ್ಟಿದುದರಿಂದ ಇಂತಾಯಿತೆನ್ನುವಂತೆ, ಆಯಿತು. ಸತ್ಪುರುಷನಿಗೆ ಜ್ಯೇಷ್ಠನಿಗೆ ಉಂಬಳಿಯೆಂದೂ, ಜಗತ್ಪದ ಕಿರಿಯನಿಗೆಂದೂ ಸತ್ಪಥವು ತಪ್ಪಿ ಕೆಟ್ಟದಾರಿ ಹುಟ್ಟುವಾಗ ಜಗದಲ್ಲಿ ಉತ್ಪಾತ ಹುಟ್ಟಿರುವುದೆ? ಸಲ್ಲದ ಅರ್ಥವನ್ನು ಸಲ್ಲಿಸುವೆನೆಯು ವರ್ತಿಸಿದಾಗ ತಳವಿಲ್ಲದ ಅದ್ಭುತ ಹುಟ್ಟದಿರುವುದೆ?

ಇದನ್ನು ನೋಡಿದ ಬಾಹುಬಲಿಯು, ''ಛಿ ಛೀ ನಾನು ನೆನೆದುದು ಹೊಲ್ಲದು'' ಎಂದು ಅಂತರ್ಯದಲ್ಲೇ ಹೇಸಿದನು.ಗರುಡ ಮಂತ್ರಕ್ಕೆ ಕೋಪವಿಳಿಯುವಂತೆ, ಭರತ ಭೂವರನ ವಾಕ್ಯವನ್ನು ಕೇಳಿದೊಡನೆ ಬಾಹುಬಲಿಗೇರಿದ್ದ ಕೋಪವು ಇಳಿಯಿತು; ಹೃದಯ ತಂಪಾಯಿತು. ಎತ್ತಿದ ಹೆಡೆಯಿಳಿಯುವಂತೆ, ಮೊದಲಿನ ಗರ್ವವು ಜಾರಿತು; ಮೃದುವಾಯಿತು ಮನಸ್ಸು.

''ಕಠಿಣವಾಯಿತು ಕ್ರೌರ್ಯ ; ನನ್ನಣ್ಣನಿಗೆ ದೂರು ಹೊತ್ತೆನಲ್ಲಾ, ಹಾ.'' ಎಂದುಕೊಂಡನು ಬಾಹುಬಲಿ. ಬೇರೆಡೆಗೆ ಒಲೆದಿದ್ದ ಮೋರೆಯನ್ನು ತಿರುಗಿಸಿ, ಸಮ್ಮುಖನಾದನು. ತನ್ನ ತೋಳಿನ ತೊಡಕನ್ನು ಕೂಡಲೆ ಕಳೆದನು. ಅವನಲ್ಲಿ ಅಳುಕು ಉಂಟಾಯಿತು. ಅಣ್ಣನ ಮುಖವನ್ನು ನೋಡದೆ ನಾಚಿಕೆಯಿಂದ ತಲೆಯನ್ನು ತಗ್ಗಿಸಿ ನಿಂತನು. ಬಲಗೈಯ್ಯನ್ನು ಕೆಳಗಿಳಿಸಿ, ಮೂಗಿನ ತುದಿಯಲ್ಲಿ ಎಡಗೈಯ್ಯ ಬೆರಳನ್ನಿರಿಸಿ, ''ಅಣ್ಣನಿಗೆ ಬಲು ಹಾಸ್ಯಗೈದೆನಲ್ಲಾ'' ಎಂದು ಬಾಹುಬಲಿಯು ಒಳಗೊಳಗೇ ನೊಂದುಕೊಂಡನು.

ಕೈಯಲ್ಲಿದ್ದ ದಂಡೆಯನ್ನು ಕಾಮನು ಕಳೆದನು. ಆಗ ಎಲ್ಲರ ಮೈಯ್ಯುಕಟ್ಟುಗಳೂ ಕಳೆದಂತಾಯಿತು. ಇನ್ನು ಯುದ್ಧವಿಲ್ಲವೆಂದು ಕಟಕದವರೆಲ್ಲ ಸಂತಸದಿಂದ ನಲಿದರು. ತಂದೆಗಳಿಬ್ಬರ ಯುದ್ಧವನ್ನು ಕಾಣುವ ಪಾತಕವು ಬಂತಲ್ಲಾ, ಎಂದು ಚಿಂತಿಸುತ್ತ ನಿಂತಿದ್ದ ಕುಮಾರರ ಮುಖಗಳು, ಬಂಗಾರದ ತಾವರೆಗಳಂತೆ ಅರಳಿದುವು. ಕಡೆಯ ಯುದ್ಧದಲ್ಲಲ್ಲದೆ ಇವರ ಉಕ್ಕು ನಿಲ್ಲಲಾರದೆಂದು ನೋಡುತಿದ್ದ ಸಖಿ, ಮಂತ್ರಿ, ನೃಪರು, ನುಡಿಯಲ್ಲೇ ಭರತ ಚಕ್ರೇಶ್ವರನು ಗೆದ್ದುದನ್ನು ಕಂಡು, ಮನಸ್ಸಿನಲ್ಲೇ ಹೊಗಳಿದರು. ಭುಜಬಲಿಯ ಉಗ್ರತೆಯೆಲ್ಲಿ? ಭರತೇಶನು ಶಾಂತದಿಂದ ಮಾತುಗಳಲ್ಲೇ ಗೆದ್ದುದೆಲ್ಲಿ? ಯಾವ ಅಂಗದಲ್ಲೂ ಚಕ್ರಿಗೆ ಎಣೆಯಿಲ್ಲ'' ಎಂದು ಜನಸ್ತೋಮವು ಎದೆಯಲ್ಲೇ ಹೊಗಳಿತು. ಗಂಭೀರವಾದ ಮಾತು, ಬೋಧಿಸಿದ ಬೋಧೆ, ತಮ್ಮನೆಂದು ಒಡಕು ಹುಟ್ಟಿಸದ ಪ್ರೀತಿ, ಬೆಳೆಯದ ಮಾತಿನಿಂದ ಗೆದ್ದ ಚಾತುರ್ಯ–ಇವೆಲ್ಲವನ್ನೂ ಪಡೆಯು ಮೆಚ್ಚಿ ಕೀರ್ತಿಸಿತು.

ಅಷ್ಟರಲ್ಲಿ ಸನ್ನೆ ಮಾಡುವ ಭೇರಿಕಾರರು ತೊಲಗಿದರು. ರಾಜೋನ್ನತನಾದ ಭರತೇಶನಿಗೊಂದು ಆಸನವನ್ನು ತಂದಿಟ್ಟರು. ಭರತೇಶನು ಅಲ್ಲೇ ಓಲಗವಾದನು. ಮುತ್ತಿನ ಸತ್ತಿಗೆ ಎತ್ತಿಹಿಡಿದರು. ಅದರ ಕಾಂತಿ ಬೆಳದಿಂಗಳಿನಂತೆ ಹಬ್ಬಿತು. ಚಕ್ರಿಯ ಓಲಗವು ರತ್ನದ ಕಾಂತಿಯಂತೆ ಶೋಭಿಸಿತು !

ಚಕ್ರೇಶನು ಒರಗು ಮೂಡೆಯನ್ನೊತ್ತಿ ಕುಳಿತನು. ಆದರೆ ಭುಜಬಲಿಯು ಮಾತ್ರ ಬಿಸಿಲಲ್ಲೇ ನಿಂತಿದ್ದನು. ಭರತೇಶನಾಗ ಸನ್ನೆ ಮಾಡಿ ಅವನಿಗೆ ಸತ್ತಿಗೆ ಹಿಡಿಸಿದನು. ತಮ್ಮನ

ಮೇಲೆ ಆ ಅಣ್ಣಗೆಷ್ಟು ಮರುಕವೊ! ಆಗ ಅಲ್ಲೇ ಇದ್ದ ಮಹಾಬಲಿರಾಜನು ತನ್ನ ತಮ್ಮನಾದ ರತ್ನಬಲಿ ರಾಜನನ್ನು ಕೈಬೀಸಿ ಕರೆದನು. ರತ್ನಬಲಿರಾಜನು ಓಸರಿಸದೆ ಉಲ್ಲಾಸದಿಂದ ಅಣ್ಣನೆಡೆಗೆ ಬಂದನು. ತನ್ನ ತಮ್ಮನನ್ನು ಕಳೆದು, ದೊಡ್ಡಪ್ಪನ ಕಾಲಿಗೆರಗಿಸಿ, ''ಸ್ವಾಮಿ ನನ್ನ ಸಹೋದರನಿವನೆ'' ಎಂದು ಹೇಳಿದನು. ಭರತೇಶನು ಕಿರಿಯ ಕಂದನನ್ನೆತ್ತಿ ಮುತ್ತಿಟ್ಟು ತಲೆಯನ್ನು ಸವರಿ ತಕ್ಕೈಸಿದನು. ತನ್ನ ಚಿತ್ತಕ್ಕೆ ಆನಂದವಾಯಿತೆಂದು ತಿಳಿಸಿದನು. ಅಲ್ಲಿದ್ದವರೆಲ್ಲ ಮುಂದೆ ಬಂದು ಅವನ ಲಾವಣ್ಯವನ್ನು ನೋಡಿದರು. ಕಾಮನ ಮಗನೆಂದಮೇಲೆ ಲಾವಣ್ಯಕ್ಕೆಣೆಯುಂಟೆ? ತರಳನಿಗೆ ಉಡುಗೊರೆಯಿತ್ತು ''ಆ ಮೇಲೆ ಎಲ್ಲವನ್ನೂ ಮಾಡುವೆನು, ಈಗ ನಿನ್ನ ಅಣ್ಣಂದಿರೊಡನಿರು'' ಎಂದು ಎಳೆಯನನ್ನು ಬೀಳ್ಕೊಟ್ಟು ಭುಜಬಲಿಯುತ್ತ ನೋಡಿದನು.

ಮೂಗಿನ ತುದಿಯಲ್ಲಿ ಬೆರಳಿಟ್ಟು ಭುಜಬಲಿಯು ತನ್ನ ದುರ್ವಾಸನೆಯ ಚರಿತವನ್ನು ನೆನೆದು ಹೇಸುತಿದ್ದನು; ತಲೆಯಲ್ಲಾಡಿಸುತ್ತಿದ್ದನು. ಅವನು ಆಸನ ಮೋಕ್ಷಕನಷ್ಟೆ !

''ಪಾಪಿ ನಾನು. ನನ್ನ ಅಣ್ಣಗೆದುರಾಗಿ ಕುಲಕ್ಕೆ ಲೋಕಾಪವಾದವನ್ನು ತಂದೆನು. ಅಯ್ಯೋ ಕೋಪ ಗರ್ವಗಳು ಯಾರನ್ನೂ ಕೆಡಿಸುವುವು. ಅಣ್ಣನು ಹಗೆಯೆ? ಹಾ ಹಾ ಕಷ್ಟ! ನನ್ನನ್ನು ಕರ್ಮಗ್ರಹವು ಕಾಡಿತು. ಉಗ್ರಭಾವವನ್ನು ಒಡ್ಡಿ ನಿಂತ ಈ ನನ್ನ ದುರಾಗ್ರಹವು ಸುಡಲಿ. ದಿವ್ಯಾತ್ಮ ತತ್ವಾನುಭವಿಯಾದ ಅಣ್ಣನನ್ನು ನೋಡಬಾರದೆ? ಅವನಾದರೂ ಎಂತಹ ಭ್ರಾತೃತ್ವವುಳ್ಳವನು. ನಾನಾದರೂ ಭ್ರಾತೃತ್ವವಿಲ್ಲದವನು. ಅಯ್ಯೊ ಕಷ್ಟವೆ, ಸನ್ಮತವಲ್ಲದ ಕಾರ್ಯವನ್ನು ಮಾಡುವ ನನ್ನನ್ನು ಉನ್ಮತ್ತನೆನ್ನದೆ ಪಿತನೇಕೆ ಮನ್ಮಥನೆಂದು ಕರೆದನೋ. ಮಹಾಕಷಾಯವನ್ನು ಧರಿಸಿದ ನನ್ನಿಂದಲೇ ನನ್ನ ಮನಸ್ಸಿಗೆ ವ್ಯಥೆಯಾಯಿತು. ನನ್ನನ್ನೀಗ ನಾನೆ ಮಥಿಸಿ ನೋಡಿದರೆ, ನನ್ನನ್ನೇ ಮನ್ಮಥನು ಎಂದು ಹೇಳಬಹುದು. ಹೋರಾಡುವನೆಂದು ಒತ್ತಿಬರುವುದೆಲ್ಲಿ? ಯುದ್ಧಕ್ಕೆಂದು ರಣರಂಗದಲ್ಲಿ ಒಡ್ಡಿನಿಲ್ಲುವುದೆಲ್ಲಿ? ಗುಣವಚನಗಳಿಂದ ಶಾಂತನಾಗಿರುವುದೆಲ್ಲಿ? ಅಯ್ಯೋ ಕ್ಷಣಕ್ಕೊಂದು ಪರಿಣಾಮವಲ್ಲವೆ ಈ ಕರ್ಮಕ್ಕೆ ! ಸುಖರೂ ಮಂತ್ರಿಗಳೂ ಹೇಳಿದಾಗ ಕೇಳಿದೆನೇ? ಜನನಿಯೇ ಸಮ್ಮುಖದಲ್ಲಿ ನಿಂತು ತೋರಿದ ಒಜೆಯನ್ನು ಒಪ್ಪಿದೆನೇ? ರಾಣಿಯರೆಲ್ಲರೂ ಹೇಳಿದಾಗ, ಅವರನ್ನು ಚಾಳಿಸಿ ಬಂದ ದುರ್ಮುಖನಲ್ಲವೆ ನಾನು? ಅಯ್ಯೊ ! ಜಿನ ಜಿನ ಅದು ಹೋಗಲಿ. ನನ್ನ ಅಣ್ಣನೂ ಆತ್ಮಜರೂ ನನ್ನನ್ನು ಕಾಣುವುದಕ್ಕೆಂದು ಬಂದಾಗ, ಅವರನ್ನು ಕಂಡಾದರೂ ನನ್ನ ಹೃದಯವು ಮೃದುವಾಯಿತೆ? ಇಲ್ಲ ! ನಾನು ಕಲ್ಲು ಮನಸ್ಸಿನವನಲ್ಲದೆ ಮದನನಲ್ಲ ! ಜಿನಜಿನ ! ಎಲ್ಲರೂ ನಿಂತು ಹೇಳುವಾಗ ''ನಿನ್ನ ಅಣ್ಣ ನಿನ್ನ ಅಣ್ಣ'' ಎಂದು ಪ್ರೀತಿಯಿಂದ ಹೇಳುವಾಗ ''ಅತನು, ಈತನು, ಚಕ್ರಿ'' ಎಂದು ಹೇಳಿದೆನಲ್ಲದೆ. ಅಣ್ಣನೆಂಬ ಮಾತನ್ನು ಹೇಳಿದೆನೆ? ಅಯ್ಯೊ ! ಲೋಕದ ಮುಂದೆ ಅಣ್ಣನೆ ಸೋತನೆಂದನು. ಆಗ ಚಕ್ರಕ್ಕೇ ನನ್ನಿಂದಾಗಿ ನೂಕುತಾಕಾಯಿತು. ನನಗಿದು ತೂಕವಲ್ಲ. ಲಘುತ್ವವಾಯಿತು.''

ಭುಜಬಲಿಯೊಮ್ಮೆ ಮರುಗಿದನು. ಒಮ್ಮೆ ಅಯ್ಯೊ ಎಂದು ಚಿಂತಿಸಿದನು. ಮತ್ತೊಮ್ಮೆ ಜಿನ ಜಿನ ಎಂದು ಹಂಬಲಿಸಿದನು. ಮತ್ತೆ ಆತ್ಮನಿರಾಣೆಯನ್ನೂ ಮಾಡಿಕೊಂಡನು.

''ಇದು ಅಕೀರ್ತಿಯಾಯಿತು. ಮನೆಯಲ್ಲಿದ್ದರೆ ಇದು ಹೋಗದು. ಇದನ್ನು ತಪಸ್ಸಿನಿಂದ

ತೊಳೆಯಬೇಕು'' ಎಂದು ಭುಜಬಲಿಯು ಮನಸ್ಸಿನಲ್ಲೇ ಜಪಿಸಿದನು. ಅದು ನಿಜವಾಗಿಯೂ ಮೋಹಕರ್ಮದ ಉಪಶಮನದ ಅನುಭವವಲ್ಲದೆ ಬೇರೇನೂ ಅಲ್ಲ. ಅದರೂ ಅವನ ಯೋಚನೆ ಮುಂದುವರಿಯಿತು.

''ಕಲ್ಲಿನಂತೆ ನಾನು ಅಣ್ಣನಿಗೆ ಎದುರಾದೆ. ಮುಂದೆ ಎರಕವಿಲ್ಲದೆ ಬದುಕಿದಾಗ, ''ಮನ್ಮಥನು ಕಪ್ಪನು'' ಎಂದು ಅರಸರು ಯೋಚಿಸದಿರುವರೆ? ಇದನ್ನು ಕಂಡ ಅರಸರು ''ಅಣ್ಣನಿಗೆ ಮಲೆತನು, ಎಣ್ಣೆ ತಾಗಿದ ಬಿದಿರಿನಂತೆ ಬಣ್ಣಗಾರನು'' ಎಂದು ಹೇಳದಿರುವರೆ?''

ಮುಂದುವರಿದ ಯೋಚನೆಯಿಂದ ಬಾಹುಬಲಿ ನಿಶ್ಚಯದ ನೆಲೆಯಲ್ಲಿ ನಿಂತನು. ದೀಕ್ಷೆಗೆ ಹೋಗುವುದೆ ಲೇಸೆಂದು ಎದೆಯಲ್ಲೇ ನೆನೆದು ಅಣ್ಣನನ್ನು ನೋಡದೆ, ಶಾಂತದೃಷ್ಟಿಯಿಂದ ಸೇನೆಯನ್ನು ನೋಡಿದನು. ಆಕಾಶ ಭೂಮಿಗಳನ್ನು ತುಂಬಿರುವ ಆ ಸೇನೆಯನ್ನು ಅವನು ನೋಡಿದೊಡನೆ ಮಹಾಸೇನೆಯು ಕೈಮುಗಿದು ಗೌರವಿಸಿತು. ಇವರೇಕೆ ಕೈಮುಗಿದರೆಂದು ನಾಚಿಕೆಯಿಂದ ಮತ್ತೊಂದು ಕಡೆಗೆ ನೋಡಿದನು. ಆಗ ಅಲ್ಲಿದ್ದ ವಿಜಯಾರ್ಧದೇವ ಹಿಮವಂತರು ದಿಗ್ಗಜಗಳಂತೆ ಕೈಮುಗಿದರು. ಭುಜಬಲಿಯಾಗ ಸಿಗ್ಗಾಗಿ, ಅವರನ್ನು ತ್ಯಜಿಸಿ, ಬೇರೆಡೆಗೆ ನೋಡಿದನು. ಅಲ್ಲಿದ್ದ ವರತನು, ಮಾಗಧೇಂದ್ರ ನಾಟ್ಯಮಾಲೇಂದ್ರ, ಪ್ರಭಾಸೇಂದ್ರ, ಮುಂತಾದ ಸುರರಾಜರು ನೋಡಿ ಕೈ ಮುಗಿದರು. ಅದನ್ನು ಕಂಡು ಬಾಹುಬಲಿ ನಾಚಿಕೆಯಿಂದ ಅತ್ತಿತ್ತ ನೋಡಿದನು. ಆಗ ಇಬ್ಬರು ದೊರೆಗಳೂ, ಮಂತ್ರಿ ಮಿತ್ರರೂ, ಅಖಿಲ ರಾಜರೂ, ಮಕ್ಕಳೂ, ಬಾಹುಬಲಿಗೆ ಕೈಮುಗಿದರು. ಅದನ್ನು ನೋಡಿ, ''ದೊಡ್ಡ ಅಪಕೀರ್ತಿ ಹಬ್ಬಿತಲ್ಲ'' ಎಂದು ಫೌಜನ್ನು ನೋಡುವುದನ್ನೇ ಬಿಟ್ಟು ತಲೆಬಾಗಿ ಒಂದು ಕ್ಷಣ ನಿಂತುಕೊಂಡನು. ''ಇನ್ನಾದರೂ ಅಣ್ಣಾಜಿಗೆ ನನ್ನ ಕಾರ್ಯವನ್ನು ಮರೆಮಾಚದೆ ಹೇಳುವನು'' ಎಂದು ಮನಸ್ಸಿನಲ್ಲೇ ನೆನೆದು ಕೊಂಡನು.

## ೩೩

# ಚಿತ್ತಜನಿರ್ವೇಗ

ಭಂಗಿಸಿದರೆ ದೀಕ್ಷೆಗೆ ಹೋಗುವನೆಂದು ಭರತ ಚಕ್ರೇಶ್ವರನು ತಮ್ಮನೊಂದಿಗೆ ಒಳಿತನ್ನೇ ನುಡಿದು ಮಂಗಲವನ್ನುಂಟು ಮಾಡಿದ. ಕೆಲವರು, ಯುದ್ಧವನ್ನು ತಿಳಿಯದೆ ಅಮಂಗಲವನ್ನುಂಟು ಮಾಡುವರು.

ಜಲಯುದ್ಧ ದೃಷ್ಟಿಯುದ್ಧ ಮುಷ್ಟಿಯುದ್ಧಗಳಲ್ಲಿ ಚಕ್ರೇಶ್ವರನು ತಮ್ಮನಿಗೆ ಗೆಲವು ತೋರಿಸಿ ನುಡಿದುದನ್ನು ಕೆಲವರು ಕಾದಾಡಿಯೇ ಗೆದ್ದನೆಂದು ಹೇಳುವರು. ಬಾಹುಬಲಿಯು ಚಕ್ರಿಯನ್ನು ಗೆಲ್ಲಲು ಸಮರ್ಥನೇ? ಜಗತ್ತನ್ನು ಮೋಹಿಸುವ ಶಕ್ತಿಯಲ್ಲದೆ, ಚಕ್ರಿಯನ್ನೆತ್ತುವ ಶಕ್ತಿಯು ಸ್ಮರನಿಗುಂಟೆ? ಹಗಲಂತೆ ಬೆಳದಿಂಗಳಿರುವುದೆಂದು ಹೇಳಲು ಸೂರ್ಯರಶ್ಮಿಗಳನ್ನೇ ನೂಕುವ ಶಕ್ತಿಯು ಬೆಳದಿಂಗಳಿಗುಂಟೆ? ಕಾಮದೇವರ ಶಕ್ತಿಯೆಂಬುದು ಸಾರ್ವಭೌಮರ ಶಕ್ತಿಗಿಂತ ಮಿಗಿಲೆ? ಕಾಮದಲ್ಲಿ ಊಟದಲ್ಲಿ ಭೂಮಿಯ ಸೇನೆಯನ್ನಾಳುವ ನಿಯಮದಲ್ಲಿ ತಿಳಿಯುವುದು ಹಾಗಿರಲಿ; ಚಕ್ರಿಯು ಎಲ್ಲರ ಮುಂದೆಯೇ ಸೋಲೆಂದನು. ಆದರಿಂದ ಅವನ ಚಕ್ರಕ್ಕೆ ನೂಕುತಾಕಾಯಿತು. ಚಕ್ರಿಯಲ್ಲದ ತಮ್ಮನು ವಕ್ರಿಯಾದನು. ಅದು ಕಾಲಚಕ್ರದಲ್ಲಾದ ದೋಷ. ಬಣ್ಣಗೆಟ್ಟು ಚಕ್ರವು ದೂರಸರಿದು ನಿಂತುದೇ ಚಕ್ರಭಂಗವು. ಹಾಗಿರುವುದನ್ನು ಕೆಲವರು ಅದು ಬಾಹುಬಲಿಗಾಗಿ ಮಾಡಿದುದು – ಎಂದು ರಸಭಂಗವನ್ನೇ ಮಾಡಿ ಮಾತಾಡುವರು.

ಅರ್ಧಚಕ್ರಿಯ ಚಕ್ರವು ವೈರಿಗನುಕೂಲ ಮಾಡಿ ಅರ್ಧ ಚಕ್ರಿಯನ್ನೇ ಖಂಡಿಸುತ್ತದೆ. ವರ್ಧಿಸುತ್ತಿರುವ ಸಕಲ ಚಕ್ರಿಯ ಚಕ್ರವು ಸ್ಪರ್ಧಿಸಿ ಎದುರು ನಿಂತ ಭೂಪತಿಗೆ ಸೋಲುವುದೇ? ಮೂರು ರೀತಿಯ ಮೃದುವಾದ ಯುದ್ಧಕ್ಕೊಪ್ಪಿದ ಮೇಲೆ ಭರತೇಶನು ಅದನ್ನು ಮೀರಿ ಚಕ್ರದಿಂದ ಹೊಡೆಯುವನೆ? ಮದನನೆನಿಸಿರುವ ಬಾಹುಬಲಿಯ ಪ್ರಾಣಕ್ಕೆ ಕೋಪಿಸಿಕೊಳ್ಳುವನೇ? ಪಾಪಿಗಳಾದವರು ಇದನ್ನು ಮಾತನಾಡಿ ಕೆಡುವರು. ತಮ್ಮನಿಗೆ ರಣರಂಗವಾಗಬಾರದೆಂದು ಸದ್ಗುಣ ವಚನಗಳಿಂದ ತಮ್ಮನನ್ನು ಗೆದ್ದನು. ಕ್ಷಣದಲ್ಲೇ ಮುಕ್ತಿಯನ್ನು ಪಡೆಯುವಂತಹ ಮೃದುಹೃದಯನಿಗೆ ಕ್ರೂರ ಗುಣಗಳಿವೆಯೆ? ಸಾಕು ಅದು ಹಾಗಿರಲಿ.

ಚಿತ್ತವು ನೋಯುತಿತ್ತು; ಆದರೂ ಮನ್ಮಥನು ತಲೆಯೆತ್ತಿ ಭೂಪತಿಗಳಲ್ಲಿ ಅಗ್ರ ಗಣ್ಯನಾದ ಭರತೇಶ್ವರನನ್ನು ನೋಡಿದನು. ''ದೇವರು ನನ್ನನ್ನು ಕ್ಷಮಿಸುವುದು. ನನ್ನದೇ ತಪ್ಪು'' ಎಂದು ಬಾಹುಬಲಿಯು ಭಾವಶುದ್ಧದಲ್ಲಿ ಕೈಮುಗಿದನು.

''ಅಣ್ಣಾ ತಪ್ಪಿಲ್ಲ, ನಿನ್ನ ನಡೆತೆಯೆಲ್ಲವೂ ಒಪ್ಪವೆ. ನನ್ನೆದೆಗದು ಸಂತೋಷವೆ. ಒಂದಿಷ್ಟೂ ನೋವು ನನಗಿಲ್ಲ'' ಎಂದು ಐವತ್ತಾರು ದೇಶಗಳ ಒಡೆಯನಾದ ಭರತೇಶ ನುಡಿದನು.

''ನಾನೇ ದೂಷಣ ಮಾಡಿದೆ; ದೇವರು ನನಗೆ ಭೂಷಣ ಮಾಡಿದಿರಿ; ದೋಷವು ನನ್ನನ್ನೇ ತುಂಬಿ ಸುತ್ತುತ್ತಿರುವುದು. ಪರಮ ಸಂತೋಷವು ದೇವರಿಗಿದೆ.''

''ಈ ರೀತಿ ಮಾತನಾಡದಿರು. ನೀನು ಬೇರೆ ನಾನು ಬೇರೆಯೇ? ಈ ರೀತಿಯಲ್ಲೇಕೆ ನೊಂದುಕೊಳ್ಳುವಿ? ನಿನಗೂ ಗಾಯವಾಗಿಲ್ಲ, ನನಗೂ ಇಲ್ಲ, ಈ ರೀತಿಯಲ್ಲಿ ಚಿಂತಿಸಬೇಡ.''

''ನನಗಾವ ಚಿಂತೆಯೂ ಇಲ್ಲ, ದೇವರು ನನ್ನ ಬಿನ್ನಹವೊಂದನ್ನು ಪಾಲಿಸಬೇಕು''

''ತಮ್ಮ, ನಿನ್ನ ಬಿನ್ನಹವೇನು ಹೇಳು?''

''ದೀಕ್ಷೆಗೆ ಹೋಗುತ್ತೇನೆ, ಒಪ್ಪು'' ಎಂದು ಬಾಹುಬಲಿಯು ಕೈಮುಗಿದನು. ಚಕ್ರಿಯು ಥೋಂಕನೆದ್ದು ಗಳಗಳನೆ ನಡೆದು, ''ನಮ್ಮ ಕುಸುಮಾಯುಧನೆ, ದೀಕ್ಷೆಗೀಗ ಮುಂದುವರಿಸಿ ಹೋಗುತ್ತೇನೆಂಬುದನ್ನು ಮರೆತುಬಿಡು,'' ಎಂದು ತಳ್ಳಂಕದಿಂದ ತಕ್ಕೈಸಿದನು.

''ದೀಕ್ಷೆಗೆ ಹೋಗುವಂತಹ ಭಂಗವೇನಾಗಿದೆ? ನಿನ್ನನ್ನು ಕಡೆಗಣಿಸಿ ನುಡಿದೆನೆ? ಮೋಕ್ಷಕಾರ್ಯವನ್ನು ಮುಂದೆ ಯೋಚಿಸಿಕೊಳ್ಳುವ, ಇಂದು ಈ ಕ್ಷೋಭೆ ಬೇಡ.''

''ನನಗಾವ ಭಂಗವೂ ಆಗಿಲ್ಲ, ಯುದ್ಧರಂಗದಲ್ಲಿ ದೇವರಿಗೆ ಒಡ್ಡಿ ನಿಂತೆನು. ನಿಮಗೆ ಕೀಳು ತೋರಿದೆನು. ಭಂಗುರವಾದ ಕರ್ಮತಂತ್ರದಿಂದ ನೊಂದಿರುವೆನು. ನನ್ನಂತರಂಗವು ಹೇಸಿಹೋಗಿದೆ. ಅದಕ್ಕಾಗಿ ಹೋಗುವೆನು.''

''ನನ್ನ ಸಹೋದರನು ನನಗೊಡ್ಡಿ ನಿಂತರೆ, ಅದು ದೊಡ್ಡ ಬನ್ನವಲ್ಲ, ನನಗೊಂದು ಲೀಲೆ, ಸನ್ನೆ ಮಾಡುವ ಭೇರಿಯು ಸುಮ್ಮನೆ ಬಡೆಯಲ್ಪಟ್ಟರೆ ಅದು ಬಿನ್ನವು. ಮುಚ್ಚಿ ಹೋಯಿತೆಂಬ ಸೂಚನೆ''

''ಒಣ ಚರ್ಮದ ಭೇರಿಯು ಸುಮ್ಮನೆ ಬಡೆದರೆ ಏನೂ ಆಗದು. ಆದರೆ ನಿಷ್ಕರುಣದಿಂದ ನಾನು ಮಾಡಿದ ದುಷ್ಟ ಆಚರಣೆಗೆ ಲೋಕದ ಮುಖಭೇರಿಯು ಮೌನವಾದೀತೆ? ಲಘು ವಾಕ್ಯಗಳನ್ನು ದೇವರ ನಾಲಗೆಯಿಂದ ನುಡಿಸಿದೆ. ಚಕ್ರವೂ ಕಳೆಗುಂದಿ ಹೋಗಿರುವುದು, ನನ್ನಿಂದ ಭಂಗಕ್ಕಿದುವೆ ಕಟ್ಟಕಡೆಯಾಗಲಿ.''

''ಕಂದರ್ಪ, ನೀನೇನು ಮಾಡಿರುವೆ? ಹುಂಡಾವಸರ್ಪಿಣಿಯ ದೋಷದಿಂದ ನನಗೀ ಭಂಗವು ತೋರುವುದೆಂದು ಅಯ್ಯನೇ ಹೇಳಿರುವನು. ನೀನೀಗ ಬೇರೇನನ್ನೂ ನೆನೆಯಬೇಡ.''

''ಕಾಲದೋಷದಿಂದಾದರೂ ನನ್ನಿಂದ ಪ್ರಕಟವಾದ ಈ ಲೋಕವಾರ್ತೆ ಜಾರಿ ಹೋಗುವುದೆ? ಇಲ್ಲ, ಅದಕ್ಕಾಗಿ ಕೈಲಾಸ ಗಿರಿಗೇ ಹೋಗಬೇಕು. ನನ್ನ ಬಿನ್ನಹಕ್ಕೆ ಆಲಸ್ಯಮಾಡದೆ ಒಪ್ಪಿಬಿಡಿ.''

''ಆ ಮಾತನ್ನು ನನ್ನೊಡನೆ ಆಡದಿರು. ನನ್ನ ಮನಸ್ಸಿಗೆ ಪ್ರೀತಿಯನ್ನುಂಟು ಮಾಡಿ ಮುಂದೆ ಹೋಗಬಹುದು'' ಭರತೇಶ್ವರನು ಬಾಹುಬಲಿಯ ಗಲ್ಲವನ್ನೆತ್ತಿ ಬೇಡಿಕೊಂಡನು.

''ಎಂದಾದರೂ ದೀಕ್ಷೆಯನ್ನು ಪಡೆದು ಅಪವರ್ಗ ಮಂದಿರದಲ್ಲಿ ನಿಲ್ಲುವವನಲ್ಲವೆ

ನಾನು. ತಂದೆಯ ಬಳಿಗಿಂದೇ ಹೋಗುವೆನು. ಅಣ್ಣಾಜಿ, ಒಪ್ಪು; ಸಂಸಾರ ಸುಖದಾಸೆ ಹರಿದುದು. ನಿಮ್ಮೆಲ್ಲರ ಎರಕದ ಮಮತೆಯೂ ಜಾರಿತು. ಮುರಿದ ಚಿತ್ತವನ್ನಿನ್ನು ಮೊನೆಮಾಡಲು ಸಾಧ್ಯವಿಲ್ಲ, ಬಾಯಿ ತೆರೆದು ಹೋಗೆಂದು ಹೇಳು ಅಣ್ಣಾಜಿ. ಅಣ್ಣಾಜಿಗೆ ಇದಿರೊಡ್ಡಿನಿಂತ ಈ ದೇಹವನ್ನು ತಪಸ್ಸಿಗೊಡ್ಡಿ ಮಸಿ, ಮಣ್ಣಾಗಿ ಮಾಡುವೆನು. ಉರಿಯುತ್ತಿರುವ ಕರ್ಮಗಳನ್ನು ಅನುಭವಿಸಿದೆ, ಸುಟ್ಟು ಮೋಕ್ಷಕ್ಕೆ ಸಲ್ಲುವೆನು; ನೋಡು. ಶಕ್ತಿಯೆಂಬುದು ದಿನದಿನಕ್ಕೆ ಹೆಚ್ಚುವುದೆ? ಬೇಕೆಂದಾಗ ವಿರಕ್ತಿಯು ಬರುವುದೆ? ಮುಕ್ತಿಗೆ ತಕ್ಕುದಾದ ಸಾಧನವೀಗ ಕೈಗೂಡುತ್ತಿದೆ. ಇದು ಮಹಾಯುಕ್ತಿಯಲ್ಲವೆ ಕಳುಹು.’’

‘‘ಬೇಡಪ್ಪಾ, ಬಾಹುಬಲಿ, ನೀನೂ ನಾನು ಕೆಲವು ದಿನ ಒಟ್ಟಿಗೆ ಕೂಡಿದ್ದು ಮತ್ತೆ ದೀಕ್ಷೆಯನ್ನು ಜೋಡಿಸುವ, ನಿನ್ನನ್ನು ನಾನು ನಂಬಿರುವೆನು. ನನ್ನನ್ನು ನೀನು ದೂಡಿಬಿಟ್ಟುಹೋಗುವುದು ಲೇಸೆ ? ಆರು ಮಂದಿ ಮೊದಲೇ ಎದ್ದು ಹೋದರು. ತೊಂಭತ್ತಮೂವರು ನಿನ್ನೆ ಹೋದರು. ಈಗ ನೀನು ಹೋದರೆ ನನ್ನ ಭಾಗ್ಯವು ಒಡೆದು ಹೋಗದೆ? ಹೋಗಬೇಡಣ್ಣ ನನ್ನ ಮಾತನ್ನು ಮನ್ನಿಸು.’’

‘‘ಯಾರಿದ್ದು ದೇವರಿಗೇನು ಮಾಡುವರು? ಸುಕುಮಾರರು ನೆರೆದಿರುವವರಲ್ಲವೆ? ತಮ್ಮ ಸಿರಿಯು ರಮ್ಯವಾಗುವುದಲ್ಲದೆ ಒಡೆದು ಹೋಗದು. ನನ್ನನ್ನು ಕ್ರಮವಾಗಿ ದೀಕ್ಷೆಗೆ ಕಳುಹಿಸಿ ಕೊಡಿರಿ. ಪುರುನಾಥನಾಣೆ. ದೇವರ ಪಾದದಾಣೆ, ಶ್ರೀ ಗುರುಹಂಸನಾಥನೆ ಸಾಕ್ಷಿ. ನಾನಿಲ್ಲಿರಲಾರೆನು. ನನ್ನನ್ನು ದೀಕ್ಷೆಗೆ ಕಳುಹಿಸುವ ಮನಸ್ಸು ಮಾಡಿರಿ.’’

ಎಂದು ಅಣ್ಣನ ಅಡಿದಾವರೆಗಳಲ್ಲಿ ಬಾಹುಬಲಿಯು ತಲೆಯನ್ನಿಟ್ಟನು. ಗಳಗಳನೆ ಸುರಿದ ಕಂಬನಿಯೊಂದಿಗೆ ಭರತೇಶನು ಅವನನ್ನೆತ್ತಿ ‘‘ನೀನು ಬಯಸಿದಂತಾಗಲಿ ಅಣ್ಣ’’ ಎಂದನು. ಬಾಹುಬಲಿಯು ಕೂಡಲೆ ಎದ್ದು, ತನ್ನ ಹಿರೆಮಗನನ್ನು ಅಣ್ಣನಿಗೊಪ್ಪಿಸಿ ಕೊಟ್ಟು ನಗುತ್ತ ಕೈಮುಗಿದು, ಸಂಕಲೆಯನ್ನು ಬಿಟ್ಟು ಆನೆಯು ವನಕ್ಕೆ ಹೋಗುವಂತೆ ನಡೆದೇ ಬಿಟ್ಟನು. ಸಂಗವನ್ನು ತೊರೆದು ಅವನು ಹೋಗುತ್ತಿರುವುದನ್ನು ದಳವೆಲ್ಲ ಬೆರಗಾಗಿ ನೋಡುತಿತ್ತು

ಅಯ್ಯೋ, ಆ ಕಷ್ಟವನ್ನು ಏನೆಂದು ಹೇಳಲಿ. ಕುಟಿಲನಾಯಕ ಮತ್ತು ಶಠನಾಯಕರು. ಮಕರಾಂಕನಾದ ಬಾಹುಬಲಿಯು ನಮ್ಮೊಡೆಯನಾದ ಭರತೇಶನಿಗೆ ಒಡ್ಡಿದಾಟಕ್ಕೆ ಒಳಗೊಳಗೇ ನೋವನ್ನು ತಾಳಿದ್ದರು. ಇಬ್ಬರೂ ನಮಗೆ ಸ್ವಾಮಿಗಳೆಂದು ಆ ಸಖರಿಬ್ಬರೂ ಒಂದೇ ಬುದ್ಧಿಯಿಂದ ನೋಡುತ್ತಿದ್ದರು. ಇಬ್ಬರಿಬ್ಬರಿಗೂ ಚಕ್ರೇಶ್ವರನಲ್ಲೇ ಅತಿಯಾದ ಭಕ್ತಿ ಹಬ್ಬಿತ್ತು. ಅವರು ಅನ್ಯರನ್ನೊಪ್ಪುತ್ತಿರಲಿಲ್ಲ.

‘‘ನಮ್ಮೊಡೆಯನಿಗೆ ಅನುಕೂಲವಾಗಿರುತ್ತಿದ್ದರೆ, ಸ್ಮರನು ನಮಗೂ ಒಡೆಯನಾಗುತ್ತಿದ್ದನು. ಈಗ ಅವನನ್ನೇ ಮೀರಿರುವುದರಿಂದ ನಮಗಿನ್ನು ಒಡೆಯನೆ?’’ ಎಂದು ಸ್ವಲ್ಪ ದೂರ ಹೋಗಿ ಬಾಹುಬಲಿಯ ಬೆನ್ನಲ್ಲೇ ಮತ್ತೂ ಮಾತನಾಡಿದರು.

‘‘ಸಿರಿಯನ್ನು ತೊರೆದು ಹೋಗುತ್ತಿರುವ ಅರಸ ಕೇಳು, ನೀನು ನಮ್ಮ ಭರತೇಶ್ವರನಿಗೆ ತಲೆಬಾಗಿ ಇರದಾದೆ; ಹೋಗು, ಹೋಗು. ಭಿಕ್ಷೆಗಾಗಿ ತಿರುಗಾಡಲಿಕ್ಕಾದರೂ ನಿನಗೆ ಅವನ ರಾಜ್ಯವೇ ಬೇಕು. ಒರಗುವುದಕ್ಕೂ ಉಣ್ಣುವುದಕ್ಕೂ ತಪಸ್ಸು ಮಾಡುವುದಕ್ಕೂ ರಾಜರ

ಗೆಳೆಯನಾದ ಭರತಚಕ್ರೇಶ್ವರನ ನಾಡಲ್ಲದೆ, ಬೇರೆ ಹೊರಗಿನ ನಾಡನ್ನು ಕಂಡಿರುವೆಯಾ? ಹೋಗು. ಒಳಗನ್ನು ಅರಿಯದ ಹೊರಜಾಣರ ಅರಸನೆ ಹೋಗು. ಈ ವಿರಸವನ್ನಾದರೂ ಕೇಳಿಕೋ. ತಣ್ಣಗಾಗಿ ಅಡಿಗೆಮಾಡಿ ಉಂಡು ಸುಖವಾಗಿ ಬಾಳುವುದನ್ನು ಬಿಟ್ಟು, ನಿನಗೀಗ ಬೇರೆ ಉಣ್ಣಬೇಕಾಯಿತು. ಅಣ್ಣನಿಗೆ ಒಡ್ಡಿ ನಿಂತುದರ ಕರ್ಮಫಲವನ್ನು ಈ ಭವದಲ್ಲೇ ಉಣ್ಣು; ಉಣ್ಣು, ಆಯಿತು. ಹೋಗು. ಬೇಡಿಕೊಂಡು ಆರೋಗಣೆಮಾಡು, ರಾಜ. ಹುಲ್ಲಿರುವ ಕಾಡಿನಲ್ಲಿ ಮಲಗು. ಈ ಪಾಡು ನಿನಗಾಯಿತಲ್ಲ; ಹೋಗು ಹೋಗು.''

ಎಂದವರು ಕೈತಟ್ಟಿ ನಗುತ್ತ ಹಿಂತಿರುಗಿದರು. ಜಪಶಾಂತಿಯಿಂದ ಹೋಗುತಿದ್ದ ಬಾಹುಬಲಿಯು ಕೋಪದಿಂದೊಮ್ಮೆ ತಿರುಗಿ ನೋಡಿದನು. ತಪಸ್ಸಿಗೆ ಹೋಗುತ್ತಿರುವ ತನಗೆ ತಾಳ್ಮೆಯೇ ಮುಖ್ಯವೆಂದು ನಿರ್ಲಿಪ್ತನಾಗಿ ಮದನನು ಮುಂದಕ್ಕೆ ನಡೆದನು. ಸ್ಮರನ ಮಿತ್ರರೂ ಮಂತ್ರಿಗಳೂ ದಳಪತಿಗಳೂ ಅವರನ್ನು ತಡೆದರು. ಆದರೂ ಅವನು ನಿಲ್ಲಲಿಲ್ಲ. ಅಪ್ತರಾದವರು ತಮ್ಮ ದೊರೆಯನ್ನು ಬಿಟ್ಟಿರುವರೆ?

''ಚಿಕ್ಕಮ್ಮನಿಗೆ ದುಃಖವಾಯಿತು. ಅದನ್ನು ಆರಿಸಬೇಕು, ಅದಕ್ಕಾಗಿ ನೀವು ಒಂದಿಷ್ಟು ತಡವಾಗಿ ಹೋಗಿರಿ.'' ಎಂದು ದಳಪತಿಯನ್ನೂ ಸಚಿವರನ್ನೂ ತಡೆದು ನಿಲ್ಲಿಸಿಕೊಂಡು ಮತ್ತೆ ಬೀಳ್ಕೊಂಡನು. ಅವರು ಅರಸನ ಪಾದಕ್ಕೆ ತಮ್ಮ ಮಕ್ಕಳನ್ನೊಪ್ಪಿಸಿ, ಎರಡನೇ ವಿಮಾನಗಳನ್ನು ತೆಗೆದುಕೊಂಡು ಬಾಹುಬಲಿಯನ್ನು ಹಿಂಬಾಲಿಸಿ ನಡೆದರು. ಬಾಹುಬಲಿಯನ್ನು ಕಂಡು, ಒಂದು ವಿಮಾನವನ್ನು ಸ್ಮರನು ಏರುವಂತೆ ಕೇಳಿಕೊಂಡರು. ಆದರೆ ಅವನು ತನಗದು ಬೇಡವೆಂದು ಅವರನ್ನು ಅಲ್ಲಿಯೇ ನಿಲ್ಲಿಸಿದನು. ಆದರವರು ಆದಕ್ಕೊಪ್ಪಲಿಲ್ಲ, ಜೋಡುವಿಮಾನದಲ್ಲಿ ಹೋಗುವುದು ಬೇಡವೆಂದೂ ಒಂದೇ ವಿಮಾನದಲ್ಲಿ ಹೋಗುವೆನೆಂದೂ ಅವನು ಸೂಚಿಸಿದನು.

''ನಿಮ್ಮ ತನಕ ದೇವರ ರಾಜತೇಜವೆಲ್ಲವೂ ಇರಲಿ, ನಾವಿನ್ನೊಂದರಲ್ಲಿ ಬರುವೆವು'' ಎಂದವರು ಸೂಚಿಸಿದಾಗ ಸ್ಮರವೀರನು ಅದರಂತೆ ಒಂದು ವಿಮಾನವನ್ನೇರಿದನು. ಉಳಿದವರು ಇನ್ನೊಂದನ್ನೇರಿ, ಆಕಾಶಮಾರ್ಗವನ್ನು ಹಿಡಿದು ಸಾಗಿದರು.

ಇತ್ತ ಭರತೇಶನು ಮಂದಿಯನ್ನು ಕಳುಹಿಸಿ, ಕಣ್ಣೀರಿಡುತ್ತಿರುವ ಬಾಹುಬಲಿಯ ಕುಮಾರರ ಕೈ ಹಿಡಿದು, ಕಂದಿದ ಮುಖದಿಂದಲೂ ನೀರು ತುಂಬಿದ ಕಣ್ಣುಗಳಿಂದಲೂ ಕೂಡಿ ತನ್ನ ಮಂದಿರವನ್ನು ಪ್ರವೇಶಿಸಿದನು.

ಪುಷ್ಪಬಾಣನೆನಿಸಿದ ಬಾಹುಬಲಿಯು ದೀಕ್ಷೆಗೆ ನಡೆದನೆಂದು ಕೇಳಿದೊಡನೆಯೇ ತೂಗುಮಂಚದಲ್ಲಿದ್ದ, ಯಶಸ್ವತೀ ದೇವಿಯು ಅಲ್ಲಿಯೇ ಮೂರ್ಛೆಗೆ ಸಂದಳು. ಹೆತ್ತ ತಾಯಂದಿರಿಗೆ ಮೂರ್ಛೆಯಾಗದಿರುವುದೆ? ಕೂಡಲೆ ಶೈತ್ಯೋಪಚಾರ ಮಾಡಿ ಎಬ್ಬಿಸಿದರು. ಆಗ ಶೋಕವೂ ದೈತ್ಯನೆದ್ದಂತೆ ಎದ್ದಿತು.

''ಹಾ! ಅಯ್ಯೊ! ಚಿಕ್ಕಣ್ಣ ದೀಕ್ಷೆಗೆ ಹೋದನೆ? ನನ್ನ ಚಿಕ್ಕ ಆನೆಯು ಮದವೆದ್ದು ಹೋಯಿತೇ? ಆಗ ಮುಂದೆ ಹೋಗಿ ಅಡ್ಡಗಟ್ಟಿ ತಡೆಯುವವರಿಲ್ಲವಾದರೆ? ಅಯ್ಯೋ!'' ಎಂದವಳು ಗೋಳಿಟ್ಟಳು. ಅಂತಃಪುರವೆಲ್ಲವೂ ಗೋಳಿಡುತ್ತಿರುವುದನ್ನು ಕೇಳಿ ಚಕ್ರೇಶ್ವರನು ಅಲ್ಲಿಗೆ ಬಂದು ಬಾಲಕರಿಬ್ಬರನ್ನೂ ತಾಯಿಯ ಕಾಲಿಗೆರಗಿಸಿ, ಮಂಕು ತಾಗಿದಂತೆ ನಿಂತುಕೊಂಡನು.

ಅಷ್ಟರಕ್ಕೆ ಇರುಳಾಯಿತು. ಆ ಇರುಳೆಲ್ಲರೂ ಶೋಕದಲ್ಲೇ ಜಾಗರು ಮಾಡಿದರು. ಅದರೊಂದಿಗೆ ಉದಯವಾಯಿತು. ಆ ರಾತ್ರಿಯೇ ಝುಂಝಾನಿಲನೆಂಬ ನಂಬುಗೆವಂತನು ಸ್ಮರಪುರಕ್ಕೆ ಹೋಗಿ ಈ ವಾರ್ತೆಯನ್ನು ತಿಳಿಸಿದನು. ಅದನ್ನು ಕೇಳಿದೊಡನೆ ಸುನಂದಾದೇವಿಯು ಮೂರ್ಛೆ ಹೋದಳು. ಅರಸಿಯರ ಎದೆಗೆ ಬಾಳನ್ನು ಬೀಸಿದಂತೆ ಆಯಿತು. ಹಾ ! ಎಂದವರೇ ಮೂರ್ಛೆಗೆ ಸಂದು, ಒರಗಿದರು. ಎಷ್ಟೋ ಹೊತ್ತಿನಲ್ಲಿ ಜನನಿ ಎಚ್ಚೆತ್ತಳು.

''ಏನು? ಏನು ಝುಂಝಾನಿಲ? ಪಚ್ಚೆಬಿಲ್ಲಿನ ಅಣ್ಣನು ಏನಾದ? ಹುಟ್ಟುಗೊಂಡು ನಮ್ಮನ್ನು ಬಿಟ್ಟು ಹೋದನೆ? ದೀಕ್ಷೆ ಮೆಚ್ಚಾಯ್ತೇ ಅವನಿಗೆ? ''ಸಂದೇಹ ಬೇಡ, ಮಿತ್ರರೊಡಗೂಡಿ ಅಯ್ಯನಲ್ಲಿಗೆ ತಪಸ್ಸಿಗೆ ಸಾಗಿದನು. ಮಂದಿಯೆಲ್ಲವು ಸೇನೆಯಲ್ಲಿದೆ. ತಮಗಿದನ್ನು ಸೂಚಿಸಲೆಂದು ನಾನು ಓಡಿ ಬಂದೆ.''

''ಅಣ್ಣನ ಕಾಣುವೆನೆಂದು ಹೋದವನು ದೀಕ್ಷೆಯ ಪ್ರತಿಜ್ಞೆ ಮಾಡುವಂತಹ ವಿರಕ್ತಿ ಹೇಗಾಯ್ತು? ಅವನು ಜಾಣತನ ಬಿಟ್ಟು ಆಡುವವನೇ ಅಲ್ಲ,''

''ದೇವರನ್ನು ಕಾಣುವೆನೆಂದು ಇಲ್ಲಿ ಆಡಿದವನು ಅಲ್ಲಿ ಕಾಳಗವೇ ಬೇಕೆಂದನು. ಮಲ್ಲಯುದ್ಧ, ಅಕ್ಷಿಯುದ್ಧ, ಜಲಯುದ್ಧಗಳೆಂಬ ಮೃದುಯುದ್ಧವನ್ನು ಕಾರ್ಯಹಿತರಾದವರು ಅಣಿಗೊಳಿಸಿದರು. ಆ ಯುದ್ಧದಲ್ಲಿ ಚಕ್ರಿಯು ಹೋರಾಡಲಿಲ್ಲ. ಬಂದವನೇ, ''ಕಾಯಜ, ನಿನ್ನದೆ ಗೆಲವು. ದಾಯವನ್ನು ಕೆಟ್ಟುದರಿಂದ ನನ್ನದೆ ಸೋಲು'' ಎಂದು ತನ್ನ ಕಟಕವೆಲ್ಲ ಕೇಳುವಂತೆ ಬಾಯಾರೆ ಹೇಳಿದನು. ಧರೆಯನ್ನು ನೀನೇ ಆಳೆಂದು ಹೇಳಿದನು. ತನಗೊಂದು ನಾಡನ್ನು ಕೊಟ್ಟು ಅಲ್ಲಿ ನನ್ನನ್ನು ನೇಮಿಸೆಂದೂ ಹೇಳಿದನು. ಚಕ್ರವು ಹೋಗದಿರಲು ಅದನ್ನು ತನ್ನ ಕರದಿಂದಲೇ ಹಿಡಿದು ನೂಕಿ ಕೊಟ್ಟನು. ಕೂಡಲೆ ಬಾಹುಬಲಿಯು ನಾಚಿಕೆಯಿಂದ ದೀಕ್ಷೆಗೆ ನಡೆದನು.''

ಒಡನೆ ಸುನಂದಾದೇವಿ ಮೂರ್ಛೆಗೆ ಸಂದಳು; ಮತ್ತೆ ಎಚ್ಚರಗೊಂಡಳು. ಬಿಟ್ಟ ಕಣ್ಣೀರು ಮುತ್ತಿನಂತೆ ಇಳಿಯುತಿತ್ತು.

''ಚಿತ್ತಜ, ನನ್ನನ್ನು ಕೊಂದೆಯಲ್ಲವೆ ಕಂದಾ? ಅಯ್ಯೋ, ಗುಣೋತ್ತಮನೆ ಮಕ್ಕಳನ್ನು ನೆನೆಯದೆ, ಹೆಂಡಿರನ್ನು ನೋಡದೆ, ನನ್ನನ್ನೂ ಲೆಕ್ಕಕ್ಕೆ ತಾರದೆ, ಚಿಕ್ಕ ಪ್ರಾಯದಲ್ಲೇ ನೀನು ದೀಕ್ಷೆಗೆ ಹಾರಿದುದು ನಿನಗೆ ಯೋಗ್ಯವೇ ಕಂದರ್ಪಾ? ಹಿರಿಯಣ್ಣಗೆ ತಪಸ್ಸನ್ನು ತಾಳೆಂದು, ನಾನು ಮರೆತು ಹರಸಿದೆನಲ್ಲವೆ? ಇಲ್ಲಿ ಹೀಗಾಯಿತೇ ಮಗನೆ? ಜನರಲ್ಲಿ ಮೋಹಿಸುವ ನಿನ್ನ ಸಿರಿಯೆಲ್ಲಿ? ನೀನೆಲ್ಲಿ? ಮುನಿವೇಷ ಪಡೆಯುವುದೆಲ್ಲಿ? ನಿನ್ನ ಸಂಪತ್ತು ಕನಸಿನಲ್ಲಿ ಕಂಡಂತೆ ಆಯಿತಲ್ಲ ಮಗನೆ?''

ಪರವಶದಲ್ಲಿ ಬಿದ್ದಿದ್ದ ಸ್ಮರನ ರಾಣಿಯರು ಎಚ್ಚರಗೊಂಡು ಕಣ್ಣೀರು ಸುರಿಸುತ್ತ ಹಲುಬಿದರು, ನಲ್ಲನನ್ನು ಅಗಲಿ ಯಾರಾದರೂ ಸೈರಿಸುವುದುಂಟೆ? ಮೋಕ್ಷಕ್ಕೆ ಸಂದನೆಂಬ ನುಡಿಯಾಗಿದ್ದರೆ ಅವರು ಆಗಲೇ ತಮ್ಮ ಪ್ರಾಣವನ್ನು ಬಿಡುತಿದ್ದರು. ದೀಕ್ಷೆಯಲ್ಲಿರುನೆಂದು ಹೇಳಿದ್ದರಿಂದ ಒಮ್ಮೆ ನೋಡುವೆವೆಂಬ ಬಯಲಾಸೆಯಿಂದ ಅತ್ತ ನಡೆದರು. ಕಣ್ಣ ಬೆಳಕೆಂಬ ಎಳೆಮಿಂಚು, ದನಿಯೆಂಬ ಗುಡುಗುಗಳಿಂದ ಕೂಡಿ ತುಂಬಿದ ಕಾರ್ಮುಗಿಲಾದವು.

ಆದರಿಂದಾಗಿ ಸುರಿದ ಕಂಬನಿಯು ಮಳೆಯೇ ಆಯಿತು. ಬಂದ ಝೇಂಝಾನಿಲನು ಇಷ್ಟನ್ನುಂಟು ಮಾಡದಿರುವನೆ?

''ಅಯ್ಯೋ ! ಹಾ ನಲ್ಲ ! ನಮ್ಮನ್ನು ಬಿಟ್ಟು ಹೋದೆಯ? ಕಬ್ಬುಬಿಲ್ಲನೆ, ನಮ್ಮನ್ನು ಕೊಲ್ಲದೆ ಕೊಂದೆ. ನಿನಗೆ ಅಂಗನೆಯರ ಕೂಟ ಸಾಕಾಯಿತೆ? ಮೋಕ್ಷವನಿತೆಯ ಆಟ ಬೇಕಾಯಿತೆ ನಿನಗೆ? ಯುದ್ಧವೆಂಬ ನೆವನ ಹೂಡಿ ವಿಧಿಯು ನಿನ್ನನ್ನು ಮುಂದಕ್ಕೊಯ್ದುದೇ? ನಿನ್ನ ಎದೆಗೆ ದರ್ಪವನ್ನುಂಟು ಮಾಡಿದ ಹುಂಡಾವಸರ್ಪಿಣಿಯು ಸರ್ಪಿಣಿಯಲ್ಲವೆ? ಪ್ರೀತಿಸುವವರಿಗೆ ನೀನು ಪುಷ್ಪಬಾಣನೊ ಉಗ್ರಬಾಣನೋ? ದೇಹವೆರಡು ಪ್ರಾಣವೊಂದು ಎಂಬಂತಿದ್ದ ನಿನ್ನ ಮಾನಿನಿಯರ ಎದೆಗೆ ಸೋಲನ್ನು ತೋರಿಸಿದೆ. ನಮ್ಮನ್ನು ನೆನೆಯದೆ ಹೋದರೆ ನಾವಿಲ್ಲಿ ನಿಲ್ಲುವೆವೆ? ನಿನ್ನ ಬೆನ್ನಲ್ಲೇ ಬರುವೆವು. ನಮಗಾವುದರ ಆಸೆಯೂ ಇಲ್ಲ.

ದುಃಖದ ಆವೇಗದಲ್ಲವರು ತಾವು ಸಾಕಿದ ಅರಗಿಳಿ ಬಾಣಾಂಕಿಗಳೊಡನೆ ಮಾತನಾಡಿದರು.

''ಅರಗಿಳಿಗಳೆ, ಬಾಣಾಂಕಿಗಳೆ, ನಾವು ಸಾಕಿದ ಜಿಂಕೆಗಳೆ, ಹಂಸೆಗಳೆ, ನಾವೀಗ ಪುಷ್ಪಬಾಣನು ಹೋದ ದಾರಿಯಲ್ಲೇ ಹೋಗುವೆವು. ನಮ್ಮನ್ನು ಸ್ಮರಿಸದೆ ಸುಖವಾಗಿರಿ ನೀವು. ನವಿಲೆ ಉಯ್ಯಾಲೆ ಮಾಡುತ್ತಿರು. ತೂಗು ಮಂಚವೆ, ಸೆಜ್ಜೆವನೆಯೆ, ಭೋಗ ಸಾಕಾಯ್ತು, ನಮಗೆ. ಇನ್ನು ಯೋಗಕ್ಕೆ ಹೋಗುವೆವು. ನಾವು ನಿಮಗೆ ಹಾಲೋಗರವಾಗಿದ್ದೆವು. ಲತೆಯೆ, ನಂದನವೆ, ತಂಪುಕೊಳವೆ, ತಾವರೆಯೆ, ಮಂದ ಮಾರುತನೆ, ಮದಬಂದ ತುಂಬಿಯೇ, ಕೇಳಿ ನಮ್ಮ ಪತಿಹೋದ ದಿಕ್ಕಿಗೆ ನಾವೂ ಹೋಗುವೆವು, ನೀವು ಸುಖವಾಗಿರಿ.''

ಎಂದು ಬಾಹುಬಲಿಯ ಸತಿಯರೆಲ್ಲರೂ ಮನೆಯಿಂದ ಹೊರಟರು.

ಬಾಹುಬಲಿಯ ಸತಿಯರು ತಮ್ಮ ಅತ್ತೆಯನ್ನು ಕಂಡು ಕಾಲಿಗೆರಗಿದರು. ''ನಿಮ್ಮ ಅಣುಗನು, ನಮ್ಮೊಡನೆ ಮುನಿದು ಮುಂದಕ್ಕೆ ಹೋದನು. ನಾವು ಹೋಗಿ, ಅವರಿಗೆ ಹೇಳಿ, ಕರೆದುಕೊಂಡು ಬರುವೆವು.'' ಎಂದು ಉದ್ವೇಗದಿಂದ ಹೇಳಿದರು.

''ನಿಮ್ಮ ಕುಮಾರನು, ಅಣ್ಣನಿಗೆರಗಿ ಬರುವೆನೆಂದು ನಮ್ಮನ್ನು ಚಾಳಿಸಿ ಹೋದನು. ಹುಸಿಕಗೆ ದೀಕ್ಷೆ ಸಲ್ಲುವುದೇ ಎಂದು ಮಾವಾಜಿಗೆ ಹೇಳುವೆವು; ನಮ್ಮನ್ನು ಕಳುಹಿಸಿರಿ. ಅತ್ತ್ಯಾಜಿ, ನಾವಿಲ್ಲಿ ಉಂಡು, ಉಟ್ಟು, ತೊಟ್ಟು ಆನಂದಪಟ್ಟೆವು. ಇನ್ನು ನಮ್ಮ ಗಂಡನು ಹೋದ ದೀಕ್ಷೆಗೆ ಹೋಗುವೆವು. ಅನುಮತಿಕೊಟ್ಟು, ನಮ್ಮನ್ನು ಕಳುಹಿಸಿಕೊಡಿರಿ. ಕಣ್ಣು ಮನಸ್ಸುಗಳಿಗೆ ಲೀಲೆಯನ್ನುಂಟುಮಾಡುವ ದೇಹಕ್ಕೆ ನಿಮ್ಮ ಮಗನು ಅಸಹ್ಯಪಟ್ಟನು. ಈ ದೇಹವನ್ನು ತಪಸ್ಸಿಗೊಡ್ಡಿ ದಂಡಿಸದಿದ್ದರೆ ನಾವು ಜಾತಿ ಕ್ಷತ್ರಿಯರ ಕುಮಾರಿಯರೇ ಅಲ್ಲ, ನಮ್ಮ ಕಳುಹಿಸಿ. ತಡವೇಕೆ? ಪತಿಯು ಹೋದ ಮೇಲೆ ಸತಿಯರು ಮನೆಯಲ್ಲಿರುವುದೊಂದು ಬದುಕೆ? ರಜತಾದ್ರಿಯಲ್ಲಿ ಬ್ರಾಹ್ಮಿ ಸೌಂದರಿಯ ಪಕ್ಕದಲ್ಲಿ ನಮಗೂ ಸ್ಥಳವಾಯಿತು''. ಎಂದವರು ಅತ್ತೆಯೊಡನೆ ಬೇಡಿಕೊಂಡರು.

''ಹಾಗಾದರೆ ನಾನು ಬರುವೆನು. ನನಗಿಲ್ಲಿ ಯಾವ ಆಸೆಯೂ ಇಲ್ಲ. ಈ

ಮಾನಿತಾರ್ಥವನ್ನು ಭರತಣ್ಣನಿಗೂ ಒಪ್ಪಿಸಬೇಕು. ಆದ್ದರಿಂದ ತಡವಾದೀತು. ನೀವು ಹೋಗಿರಿ.'' ಎಂದು ಒಡಹುಟ್ಟಿದ ನಂಬುಗೆವಂತರೊಂದಿಗೆ ಸೊಸೆಯರನ್ನು ಕಳುಹಿಸಿದಳು.

ಸೊಸೆಯರನ್ನು ಕಳುಹಿಸುವಾಗ, ಸುಬಲಿ ಎಂಬ ಹೆಸರಿನ ಮೂರು ವರುಷದ ಹಸುಳೆಯು ಬಂದು ಅಯ್ಯನನ್ನು ತೋರು, ತೋರು–ಎಂದು ಅಜ್ಜಿಯನ್ನು ಪೀಡಿಸಿತು. ಬಾಹುಬಲಿಯು ಆ ಮಗುವನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುದ್ದಾಡುತಿದ್ದನು. ಆದರೆ ಈಗ ತಂದೆಯಿಲ್ಲ, ಪಿತನನ್ನು ತೋರೆಂದು ಆ ಮಗುವು ಅಜ್ಜಿಯನ್ನು ಗುದ್ದುವುದು; ಬಿದ್ದು ಬಿದ್ದು ಅಳುವುದು. ಹೀಗೆ ಕಾಡುತಿದ್ದ ಮಗುವನ್ನು ಸಮಾಧಾನಪಡಿಸಲೆಂದು ಅಜ್ಜಿಯು ಯೋಚಿಸಿದಳು. ಮಗುವನ್ನು ಕರೆದುಕೊಂಡು ಹೋಗಿ ಭರತೇಶ್ವರನನ್ನು ತಂದೆಯೆಂದು ತೋರಿಸಲು ಅಲ್ಲಿದ್ದ ಹಿತರೊಡನೆ ಹೇಳಿದಳು. ''ಖಿಳಣ್ಣ ಸುಬಲಿ ನಿನ್ನ ಅಯ್ಯನನ್ನು ಇವರು ತಮ್ಮ ಪಾಳೆಯದಲ್ಲಿ ತೋರಿಸುವರು.'' ಎಂದು ಬಾಲನನ್ನು ನಂಬಿಸಿ, ವಿಶಾಲವಾದ ವಿಮಾನದಲ್ಲಿ ಕಳುಹಿಸಿದಳು.

ಅವರು ಪಾಳೆಯವನ್ನು ಸೇರಿ, ನಡುವಣ ಚಾವಡಿಯಲ್ಲಿರುವ ಭರತೇಶನನ್ನು ತಂದೆಯೆಂದು ತೋರಿಸಿದರು. ಮಗುವನ್ನು ಕಂಡೊಡನೆ ಭರತೇಶನಲ್ಲಿ ದುಃಖವು ದಳ್ಳೆಂದು ಹಬ್ಬಿತು. ಮಗುವು ಅಳುತ್ತ , ಅಯ್ಯನೆಲ್ಲಿ—ಎಂದು ಕೇಳಿದರೆ ಅವರು ಚಕ್ರಿಯನ್ನು ತೋರಿಸುವರು. ಕೂಡಲೆ ಶಿಶುವು ಚಕ್ರಿಯನ್ನು ನೋಡಿ,ಅಯ್ಯನಲ್ಲವೆಂದು ಕೈಯಲ್ಲಾಡಿಸುವುದು. ಆಗ ಮಹಾಬಲಿರಾಜನು, ''ನಮ್ಮಯ್ಯನು ಅಹುದು'' ಎಂದು ತಮ್ಮನಿಗೆ ಹೇಳುವನು. ಅದಕ್ಕೆ ಮಗು ಮತ್ತೊಮ್ಮೆ ಭರತೇಶನನ್ನು ದಿಟ್ಟಿಸಿ, ''ನಮ್ಮಯ್ಯನಲ್ಲ'' ವೆಂದು ಮುಖ ತಿರುಗಿಸಿ ಅಳುವುದು. ''ಇವನು ನನ್ನಯ್ಯನಲ್ಲ, ನನ್ನಯ್ಯನು ಹೀಗಿರುವವನು''ಎಂದು ತಾನು ಹಾಕಿಕೊಂಡಿರುವ ಪಚ್ಚೆ ಕುಪ್ಪಸವನ್ನು ತೋರಿಸುವುದು, ಅದನ್ನು ನೋಡಿ ಭರತೇಶನು ಮೆಚ್ಚಿದನು. ಅವನ ಮೊಗದಲ್ಲಿ ನಗೆ ಮೂಡಿತು.

''ಇತ್ತ ಬಾ ಸುಬಲಿ, ನಿನ್ನ ಅಯ್ಯನನ್ನು ತೋರಿಸುವೆನು.'' ಎಂದು ಭರತೇಶನು ಮಗುವನ್ನೆತ್ತಿಕೊಂಡನು. ಆಗ ಮಗುವು ಸುಮ್ಮನಾಯಿತು. ಶೋಕವೆಲ್ಲ ಮಾಯವಾಯಿತು. ಸುತ್ತಲಿದ್ದವರಿಗೆಲ್ಲ ಬೆರಗಾಯಿತು. ಭರತೇಶನ ವಶವಾದ ಸುಬಲಿಯು ವೈಶ್ಯರಂಗಡಿಯ ಬೊಂಬೆಯಂತೆ ಮೌನವಾಗಿದ್ದನು. ಭಂಗವನ್ನು ತೋರಿಸಲೊಲ್ಲದ ಬಾಹುಬಲಿಯು, ಅಣ್ಣನು ಆಲಂಗಿಸಿ ಹೇಳಿದರೂ ಮೀರಿ ಹೋದನಲ್ಲದೆ, ಮಿಕ್ಕವರು ಭರತೇಶನ ಸಂಪರ್ಕಕ್ಕೆ ಸೋಲದಿರುವರೆ?

''ಸುಬಲಿ, ನಿನ್ನಯ್ಯನು ನಮ್ಮೆಲ್ಲರ ಹರ್ಷಗಳೆಲ್ಲವನ್ನೂ ಕೆಡಿಸಿ, ಹೋದನಣ್ಣ. ಅಣ್ಣ ನೀನು ಅಳಬೇಡ.'' ಎಂದು ತಬ್ಬುತ್ತ ಗಲ್ಲವನ್ನು ಹಿಡಿದು ಅಲುಗಿದನು. ''ಇಂತಹ ಮಕ್ಕಳನ್ನು ಬಿಸಾಡಿ ತಪಸ್ಸಿಗೆ ಹೋಗುವುದೆ? ಹೇಗೆ ಮನಸ್ಸು ಮಾಡಿದನೊ ! ಪಾಪಿಯ ಬಸುರಿಂದ ಬಂದಿರಿ ಮಕ್ಕಳೇ'' ಎಂದು ಭರತೇಶನು ಸಂತಾಪದಿಂದ ಉದ್ಗಾರವೆತ್ತಿದನು. ಅರಮನೆಯ ಲಲನೆಯರು ಶಿಶು ಬಂದಿರುವ ಸಂಗತಿಯನ್ನು ಕೇಳಿ, ಕರೆದುತರಲು

ಹೆಂಗಳೆಯರನ್ನು ಕಳುಹಿಸಿದರು. ಅವರು ಭರತೇಶನೆಡೆಗೆ ಬರಲು, "ಒಳಗೆ ನಿಮ್ಮಜ್ಜಿಯಿರುವಳು. ಅಣ್ಣ ಅಲ್ಲಿಗೆ ಹೋಗು." ಎಂದು ಮಗುವನ್ನು ಕಳುಹಿಸಿದನು.

ಅಷ್ಟರಲ್ಲಿ ಬಾಹುಬಲಿಯ ಸತಿಯರು ವಿಮಾನವೇರಿ ದೂರದಲ್ಲಿ ಆಕಾಶದಲ್ಲಿ ಹೋಗುತ್ತಿರುವುದನ್ನು ನೋಡಿ ಚಕ್ರಿಯ ಸೇನೆಯು ಮರುಗಿತು. ರಾಣಿಯರೆಲ್ಲರೂ ಅಂಗಳದಲ್ಲಿ ಸೇರಿ, ಕೊರಳೆತ್ತಿ ನೋಡಿ, ಗೋಳಿಟ್ಟರು, ಭರತೇಶನಾದರೋ, ಕಣ್ಣ ನೀರಿನಿಂದಲೇ, ಆಶ್ಚರ್ಯದಿಂದ ನೋಡಿದನು. ಅಷ್ಟರಲ್ಲಿ ಬಾಹುಬಲಿಯ ಸತಿಯರು ಭರತೇಶನ ಸತಿಯರಿಗೆ ಕಳುಹಿಸಿದ, ಓಲೆಯನ್ನು ಊಳಿಗದಾಳು ಹಿಡಿದುಕೊಂಡು ಅಲ್ಲಿಗೆ ಬಂದನು. ಬಂದವನೆ ವಿನಯದಿಂದ ಅರಸನಿಗೆ ಮಣಿದು, ಒಳಗೆ ನಡೆದನು. ಓಲೆಯನ್ನು ನೋಡಿದ ಚಕ್ರಿಯು, ತನ್ನನ್ನು ಬಳಸಿದ್ದವರನ್ನು ಕಳುಹಿಸಿ, ತಾನೂ ಒಳಹೊಕ್ಕನು. ಹೆಂಗಸರ ನಡುವೆ ರಾಣಿಯೊಬ್ಬಳು, ಆ ಓಲೆಯನ್ನೋದಿದವಳು. ಅವಳು ಓದುತ್ತಿರುವಾಗ "ಬಾಯ್ಬಿಟ್ಟು ಓದು, ಓದು; ನಮಗೂ ಕೇಳಬೇಕು–ಓದು ಎಂದು ಹೇಳುತ್ತಿದ್ದರು ಹಲವರು. ಭರತೇಶನೂ, ಓದೆಂದು ಹೇಳಿದ ಮೇಲೆ ಅವಳು ಓದಿದಳು. ಅದು ಹೀಗಿತ್ತು:

"ಶ್ರೀ ಸುಭದ್ರಾದೇವಿ ಮೊದಲಾದ ನೃಪರಾಣಿ ವಾಸಕ್ಕೆ —ಅಂತರಂಗ ಮಾಸದೆ ಇಚ್ಛಾದೇವಿ ಮೊದಲಾದ ಸತಿಯರು ಉಲ್ಲಾಸದಿಂದ ಹೇಳುವ ಆತ್ಮಕಾರ್ಯ.

'ನಮಗೆ ಮನೆಬಾಳುವೆ ಸಾಕಾಯಿತು; ಮುನಿಬಾಳುವೆ ಬೇಕಾಯಿತು. ಪುಷ್ಪಬಾಣನಾದ ನಮ್ಮ ಪತಿ ನಡೆದತ್ತ ನಾವೂ ಅನುಕೂಲರಾಗಿ ಹೋಗುತ್ತಿರುವೆವು. ಇದಕ್ಕೆ ನೀವಾರು ಮನಸ್ಸಿನಲ್ಲಿ ನೋಯಬಾರದು. ಭಾವಾಜಿಯಿಂದ ವಿರಸವಾಗಲಿಲ್ಲ. ನಮ್ಮ ದೇವರಿಗೆ ಈ ಪ್ರಾಪ್ತಿಯಿತ್ತು ಅದರಿಂದಾಯಿತು. ನಾವಿನ್ನು ಬ್ರಾಹ್ಮಿ ಸೌಂದರಿಯರನ್ನು ಸೇರಿ ತಪೋವನದ ಕ್ರೀಡೆಯನ್ನಾಡುವೆವು. ನಮ್ಮಂತೆ ನೀವು ಅರ್ಧ ಭೋಗಿಗಳಾಗದೆ, ನಿಮ್ಮ ಓಪನಲ್ಲಿ ನೆಚ್ಚಿನಿಂದ ಚಿರವಾಗಿ ಬಾಳಿ ; ಮುಪ್ಪಿನಲ್ಲಿ ಆತ್ಮ ಸಿದ್ಧಿಯನ್ನು ಮಾಡಿಕೊಳ್ಳಿ. ಅಕ್ಕ, ಇದು ನಿಮಗೆಲ್ಲರಿಗೆ ನಮ್ಮ ಹರಕೆ. ಧರೆಯು ಸುಖವಾಗಿ ಬಾಳಲಿ. ಭೋಗರಾಜ್ಯವೇ ನಿಮಗಿರಲಿ. ನಮಗೆ ತಪೋರಾಜ್ಯವು ದೊರೆತಿದೆ. ಅದರ ಅನುಭವವನ್ನು ನೋಡುವೆವು–ಪರಮೇಶ ತೇ ನಮಃ ಸ್ವಾಹಾ."

ಓಲೆಯೋದು ಮುಗಿದಾಗ ಎಲ್ಲರೂ ಮೊರೆಯಿಡುತ್ತಿದ್ದರು. ಭರತೇಶನು ಅಲ್ಲಿಂದ ನಡುವಣ ಓಲಗ ಮಂದಿರಕ್ಕೆ ಹೋಗಿ, ಮರುಗುತ್ತ ಕುಳಿತುಕೊಂಡನು. ಅವನಿಗೆ ಮತ್ತೊಂದು ನೋವಾಯಿತು. "ತೊಂಭತ್ತ ಮೂವರು ದೀಕ್ಷೆಗೆ ಹೋದ ವಾರ್ತೆ ಸಂಭವಿಸಿತು. ಚಕ್ರಿಯಿಂದ ಜನನಿಗೆಂತಹ ಶೋಕಾಗ್ನಿ ಸಂಭವಿಸಿತು. "ಎಂದೆಲ್ಲರೂ ಒಳಗೊಳಗೆ ದುಃಖಿಸಿದರು. ಪುರವನ್ನು ಹೊಕ್ಕಾಗಲ್ಲದೆ ಈಗ ಈ ವಾರ್ತೆಯನ್ನು ಹರಡಬಾರದೆಂದು ಚಕ್ರೇಶನು ಹೇಳಿ ತಡೆದಿದ್ದನು. ಆದರೆ, ಅದು ತನ್ನಿಂದ ತಾನೆ ಹೊರಹೊಮ್ಮಿ ಅರಮನೆಯಲ್ಲಿ ಶೋಕವನ್ನು ಮುಸಗಿತು. ಈ ಶೋಕನಾದವನ್ನು ಕೇಳಿ ಭರತೇಶನೂ ಮನಸ್ಸಿನಲ್ಲೇ ವ್ಯಾಕುಲಪಟ್ಟನು.

"ಈ ಚಕ್ರವೇಕೆ ಬಂದಿತು? ಈ ರಾಜ್ಯಪದವಿ ಮಹಾಕಷ್ಟ! ಹಾ,ಹಾ. ಸುಡು! ಐಸಿರಿ ಬಂದರೆ ಫಲವೇನು? ತನಗಿರುವ ಬಳಗವನ್ನು ಸಂತೋಷಪಡಿಸಬೇಡವೆ? ಕುಲವನ್ನು

ಗೋಳಿಡಿಸುವ ಸಿರಿಯನ್ನು ಸುಡು. ಹಲವರನ್ನು ನೋಯಿಸುವ ದೊರೆತನಕ್ಕಿಂತಲೂ, ಪ್ರಚಾರವಾಗಿರುವ ಹಲವರ ಬಾಳುವೆಯೆ ಲೇಸು. ಕಲಕದ ಚಿತ್ತದಿಂದ ಆತ್ಮನನ್ನು ನೋಡುತ್ತ ಮರೆಯಲ್ಲಿರವುದೇ ಸುಖವು. ಈ ರಾಜ್ಯವು ಅರ್ಕಕೀರ್ತಿಗಿರಲಿ''– ಎಂದು ಮಂತ್ರಿಗೆ ತೋರಿಸಿ ಕೊಟ್ಟು ತಪಸ್ಸಿಗೆ ಹೋಗಲೋ ಎಂದು, ಮರ್ಕಟ ವೈರಾಗ್ಯವೆಂದು ಜಗತ್ತು ಹೇಳುತ್ತಿರುವುದನ್ನು ಬೇರೆ ಮಾಡಿ ಮನಸ್ಸಿನೊಳಗೇ ಚಿಂತಿಸಿದನು. ಆದರೆ ಇನ್ನೊಂದು ಯೋಚನೆ ಬಂತು. ''ಸುತ್ತಲಿನ ನಾಡುಗಳನ್ನು ಸಾಧಿಸಿ ತಂದು, ನಿಜಪುರದ ಒತ್ತಿನಲ್ಲಿ ಬಿಸಾಡಿ ಹೋಗುವಾಗ ಭರತನಿಗೆ ಪಿತ್ತವೆಟ್ಟಿತೋ'' ಎಂದು ಜಗತ್ತೇ ಹೇಳುವುದು ಎಂದು ಮತ್ತೆ ಮನಸ್ಸಿನಲ್ಲೇ ಎಣಿಸಿ ಸಮಾಧಾನ ತಂದುಕೊಂಡನು.

''ಸಹೋದರರೆಲ್ಲರು ನನ್ನಿಂದ ತಪಸ್ಸಿಗೆ ಹೋದರು. ನಾನೂ ಈಗ ತಪಸ್ಸಿಗೆ ಹೋಗುವೆನು–ಎಂದರೆ ಮಕ್ಕಳಾಟಿಕೆಯಾಗುವುದಿಲ್ಲವೆ? ಸಿರಿಯೆಷ್ಟು ಹೆಚ್ಚಿತೋ ಅಷ್ಟು ಅಳಬಹುದು ಎಂಬಂತೆ ಆಯಿತೀಗ. ಎದೆಯಲ್ಲಿ ಉರಿಯೇಳುತ್ತಿದೆ. ಇದಕ್ಕೆ ಶಾಂತಿ ಮಾಡುವ ತಂತ್ರವೇನು? ಯಾವ ಯಾವ ದುಃಖ ಬಂದರೂ ಹಂಸನಾಥ ಭಾವನೆಯಲ್ಲೇ ಇರಬೇಕು.'' ಎಂದು ಕಣ್ಣು ಮುಚ್ಚಿ ತನ್ನ ಆತ್ಮನನ್ನೇ ಭರತೇಶನು ನೋಡತೊಡಗಿದನು.

ಮಣ್ಣಿನಲ್ಲಿ ಹೊಳೆದ ಛಾಯಾ ಪ್ರತಿಮೆಯಂತೆ, ಆಗ ಆತ್ಮನು ಕಣ್ಣಿಗೆ ಕಾಣುವನು. ತನಗಾಗ ತಣ್ಣಗಾಗುವುದು. ಆಗ ಎಂಟು ಕರ್ಮಗಳ ಮಣ್ಣು ಗಲಗಲನೆ ಜಾರುವುದು. ಪ್ರಭೆಯು ತಳತಳಿಸುತ್ತಿರುವಾಗ, ಸುಖವಾಗುವುದು. ಆಗ ಸುಜ್ಞಾನವು ಹುಟ್ಟುವುದು. ಒಡನೆ ದುಷ್ಕರ್ಮವು, ಅಭಿಜಾತ ಜ್ವರದಂತೆ, ಕುಣಿದಾಡಿ ಕ್ಷೋಭೆಗೊಂಡು ಬೀಳುವುದು. ಆ ನೃಪನ ಚಿತ್ತದ ಪರಿಣತಿಯನ್ನು ಗುರು ಹಂಸನಾಥನೆ ಬಲ್ಲನು. ಕವಿದಿರುವ ಘೋರಚಿಂತೆಯು ಎತ್ತ ಹೋದುದೊ ! ಹತ್ತು ಸಾವಿರ ವರುಷದ ಯೋಗಿಯಂತೆ ಆಗ ಭರತೇಶನಿದ್ದನು. ಅಣುಗರನ್ನೂ, ಜನನಿಯನ್ನೂ, ಹೆಂಡಿರನ್ನೂ, ಪಡೆಯನ್ನೂ ಧಾರಿಣಿಯನ್ನೂ, ತನ್ನ ಒಡಲನ್ನೂ, ಭರತೇಶನು ಮರೆತನು. ಅಣುಮಾತ್ರವಾದರೂ ಪರಚಿಂತೆಯಿಲ್ಲದೆ ಆ ಗುಣರತ್ನನಾದ ಭರತೇಶನು ಆತ್ಮನಲ್ಲಿದ್ದನು. ಏನನ್ನು ಸಾಧಿಸಿದನೊ ! ನೆನೆದಾಗ ಪರಮಾತ್ಮಧ್ಯಾನ ಪ್ರತ್ಯಕ್ಷವಾಗುತ್ತಿದೆ ! ಆ ನೃಪನು ಮನೆಯಲ್ಲಿದ್ದರೂ ಕಾಲಕರ್ಮ ಸಂತಾನದ ಗೆಳೆಯನಷ್ಟೆ?

ಅರಮನೆಯವರೆಲ್ಲ ಕರೆಯುತ್ತ , ಅಳುತ್ತ ಅಧಿಕ ಶೋಕದಲ್ಲಿ ಮುಳುಗಿದ್ದರೂ ರಾಜಯೋಗಿ ಮಾತ್ರ ಒಲೆಯದೆ, ಅಲ್ಲಾಡದೆ ಪರಮಾತ್ಮ ಸುಖದಲ್ಲಿ ಮುಳುಗಿದ್ದನು. ಆಗಾಗ ತೋರುತ್ತಿರುವ ವ್ಯಾಕುಲವು ಧ್ಯಾನದಿಂದ ಒಮ್ಮೆಗೇ ಜಾರಿಹೋಯಿತು. ಏರುತ್ತಿರುವ ಶೋಕಕ್ಕೆ ಅಂಜಿ ರಾಜಯೋಗಿಯು ಮೂರು ದಿವಸ ಧ್ಯಾನದಿಂದ ಏಳದಿದ್ದನು. ಮನೆಯವರು ಬಂದು ಈಗ ಕಣ್ಣು ತೆಗೆದು ಅಲ್ಲಾಡಿ, ಏಳುವನು–ಎಂದು ನೋಡುತಿದ್ದರು. ಹೊರಗಿನವರು ಹೊರಗಿನಿಂದಲೇ ಕೇಳಿ ಹೋಗುತಿದ್ದರು. ಭರತೇಶನು ಮಾತ್ರ ಮಂದರ ಶೈಲದಂತೆ ಇದ್ದನು. ಆ ಮೂರು ದಿನದಲ್ಲೂ ಕೆಲವರು ಉಪವಾಸವಿದ್ದರು. ಕೆಲವರು ಏಕ ಭುಕ್ತದಲ್ಲಿದ್ದರು. ಕೆಲವರು ಫಲಹಾರದಿಂದ ಇದ್ದರು. ಈ ರೀತಿಯಲ್ಲಿ ಒಳಗೆ ಹೆಂಗಸರೂ ಹೊರಗೆ ಸೈನಿಕರೂ ಇರಲು ಮೂರು ದಿವಸ ಕಳೆಯಿತು.

ತನ್ನ ದಳದೊಂದಿಗೆ ಚಕ್ರೇಶ್ವರನು ತಪಸ್ಸಿನಲ್ಲಿದ್ದ ಸಾಮರ್ಥ್ಯವು ಮೂವತ್ತು ಲೋಕಗಳನ್ನೂ ನಡುಗಿಸಿತು. ಅದನ್ನು ಕೇಳಿ, ಮರುಗಿ, ಮಗನನ್ನು ಕಾಣುವೆನೆಂದು ಅಲ್ಲಿಗೆ ಚಿಕ್ಕತಾಯಿಯು ಬಂದಳು. ತನ್ನ ಪುರದಲ್ಲಿ ಮೂರು ದಿನ ಉಪವಾಸವಿದ್ದು, ವಿಮಾನವೇರಿ ಬಂದು, ಸೇನೆಯನ್ನು ಹೊಕ್ಕು ಅರಮನೆಗೆ ಬಂದು, ನಡುವಣ ಓಲಗ ಮಂದಿರದಲ್ಲಿದ್ದ ಮಗನನ್ನು ಕಂಡಳು. ಕಿರಿಯಮ್ಮ ಬಂದಿರುವಳೆಂದಾಗ, ಚಕ್ರಿ, ಹಂಸನಾಥಗೆ ಹೆಚ್ಚಿಗೆ ಅಕ್ಕರೆಯಿಂದ ನಮಿಸಿ, ಕಣ್ಣು ತೆರೆದವನೆ, ದಿಗಿಲನೆದ್ದು, ಕಂಬನಿಗೂಡಿ, ಅವಳ ಅಡಿಗಳಿಗೆ ಎರಗಿದನು. "ದೋಷಿಯ ಹತ್ತಿರಕ್ಕೆ ದೇವರೇಕೆ ಬಂದಿರಿ?" ಎಂದು ಚರಣಗಳನ್ನು ಹಿಡಿಯಲು ಅವನನ್ನು ಎತ್ತಿ , ಅಂತಹ ದೋಷದ ಭಾಷೆಯನ್ನು ತೋರಬೇಡವೆಂದು ಅಪ್ಪಿದಳು. ಆದರೆ ಅವಳ ಭೀಷಣವಾದ ಅಶ್ರು ಸುರಿಯುತ್ತಲೇ ಇತ್ತು.

"ನಿನಗುಂಟೆ ದೋಷ? ನೀನೇನು ಮಾಡಿದೆ? ನಿನಗಿಷ್ಟು ಉಬ್ಬೆಗ ಮಾಡಿದವನು ಹೋದನು. ಘನಮೂರ್ಖರಿಗೇ ದೋಷವು." ಎಂದವಳು ಮಗನ ಕಂಬನಿಯನ್ನು ಕೈಮುಟ್ಟಿ ಒರಸಿದಳು.

"ಜನನಿಯರಿಗೆ ಬೇಗೆಯನ್ನುಂಟುಮಾಡಿದೆ. ನನ್ನ ನಾದಿನಿಯರು ತಪಸ್ಸಿಗೆ ಹೋಗುವುದನ್ನು ಕಣ್ಣಾರೆ ಕಂಡನು.ಇಂತಹ ನನ್ನನ್ನು ದೋಷಿಯೆನ್ನಬಾರದೇಕೆ,ಅಮ್ಮಾಜಿ?"

"ಅವರ ಪೂರ್ವಪ್ರಾಪ್ತಿ ಅವರನ್ನು ಕೊಂಡೊಯ್ದುದು. ಮೊದಲು ನಮಗೂ ಇಷ್ಟು ನೋವಾಯಿತು. ಮೂರು ದಿವಸಗಳ ಮೇಲೆ ತಂಪಾಯಿತು. ಮಗನೆ, ಶೋಕವನ್ನು ಮರೆ. ಅಂಕ ಬೇಡವೆಂದು ಹೇಳಿದೆನು.ಇಲ್ಲವೆಂದೇ ನನ್ನನು ಚಾಳಿಸಿ ಬಂದನು. ಆ ಮದನ. ನೀನು ಒಪ್ಪು ಮಾಡಿದುದನ್ನೂ ಕೇಳಿದೆ; ಅವನಾದರೊ ಕೇಳದೆ ಹೋದನಲ್ಲವೇ? ಕ್ಷಮಿಸು. ಹಾದಿ ಮೀರಿ ಬಂದವರು ತಾವೇ ನಾಚಿಕೆಯಿಂದ ಹೋದರು. ಇದರಿಂದ ನಿನಗೇನು ಕೊರತೆ? ಈ ದೇಹದಂಡನೆ ಮಾಡುವುದೇಕೆ? ಚಿಂತೆಯೇ ಮುಪ್ಪು, ಸಂತೋಷವೆ ಯೌವನವೆಂಬ ಸಂತಾನವಾಕ್ಯ ಉಂಟಣ್ಣ ಚಿಂತೆಬೇಡ–ನನ್ನಾಣೆ. ಎಲ್ಲರೂ ಹೋದರೇನು? ನೀನೊಬ್ಬನಿದ್ದರೆ ನಮಗೆ ಆನಂದವಾಗುವುದು. ಇದನ್ನೆಲ್ಲ ನೀ ಬಲ್ಲೆ; ಆದರಿಂದ ಕ್ಷಮಿಸು." ಎಂದು ತಾಯಿ ಗಲ್ಲವನ್ನು ಹಿಡಿದು, ತಲೆಯನ್ನು ಸವರಿದಳು.

ಆಗ ಭರತೇಶನೆದೆ ಸಂತೋಷ ತಾಳಿತು. ಕುಮಾರರ ಸಮೂಹವು ಬಂದು ಅವನಿಗೆರಗಿತು. ಸೊಸೆಯರೂ ಅಳುತ್ತ ಬಂದು ಅತ್ತೆಗೆ ಎರಗಿದರು. ಅವರನ್ನಾಕೆ ಹಸನಾಗಿ ಹರಿಸಿದಳು. ಭರತೇಶನು ಚಿಕ್ಕಮ್ಮನಿಗೆ ಕೈಲಾಗುಗೊಟ್ಟು, ಒಳಹೊಕ್ಕು ದೊಡ್ಡಮ್ಮನನ್ನು ಕಂಡನು. ಅಕ್ಕ ತಂಗಿಯರು ಒಂದಿಷ್ಟು ನೊಂದುಕೊಂಡರು; ಮತ್ತೆ ಆ ನೋವನ್ನು ಮರೆತು ಸ್ಮರಣೆಗೊಂಡರು.

ಸ್ನಾನ ದೇವಾರ್ಚನೆ ಮಾಡಿ, ಮತ್ತೆ ಎಲ್ಲರೂ ಪಾರಣೆ ಮಾಡಿದರು. ಸೇನೆಯಲ್ಲ ಪಾರಣೆ ಮಾಡಿತು. ಸರ್ವರ ಉಮ್ಮಳವೂ ಹೋಯಿತು. ಒಡನೆ ತಂಪಾಯಿತು. ಈ ಕಡೆಯಲ್ಲಿ ಶಾಂತಿಯಲ್ಲಿತ್ತು, ಅತ್ತ ಬಾಹುಬಲಿಯ ಪತ್ನಿಯರು ಆದೀಶನನ್ನು ಕಂಡು ಉತ್ತಮವಾದ ದೀಕ್ಷೆಯನ್ನು ತಾಳಿದರು.

## ೩೪

# ನಗರೀಪ್ರವೇಶ

ಕಿರಿಯಮ್ಮ ದೀಕ್ಷೆಗೆ ಹೋಗುವೆನೆಂದಾಗ, ಭರತೇಶನು, ಕಾಮನ ಮಕ್ಕಳು ಪ್ರಾಯಭರಿತರಾಗುವವರೆಗೆ ದೀಕ್ಷೆಯನ್ನು ಬಯಸಬಾರದೆಂದು, ಕಾಲಿಗೆರಗಿ ನಿಲ್ಲಿಸಿಕೊಂಡನು.

''ಕಾಮನು ಮಾತ್ರವೇ ಮಗನು; ನಾನು ಮಗನಲ್ಲವೇ? ನಾನಿಷ್ಟು ಸೇವೆಯನ್ನು ಮಾಡುವೆನು. ಅದನ್ನು ದೇವರು ಕೈಕೊಂಡು, ಮತ್ತೆ ಚಿತ್ತೈಸಬಹುದು'' ಎಂದು ಹೇಳಿದವನೇ ತನ್ನ ಹೆಂಡತಿಯರ ಕಡೆಗೆ ನೋಡಿದನು. ಅವರು ನೋಟದ ಇಂಗಿತವರಿತರು. ಆಲಸ್ಯಮಾಡದೆ ಅತ್ತೆಯಮ್ಮಾಜಿಯ ಅಡಿಗಳಿಗೆರಗಿ, ತಪಸ್ಸಿಗೆ ತೆರಳಬಾರದೆಂದು ಬೇಡಿಕೊಂಡರು.

''ಅಣ್ಣ , ನಿನ್ನ ನುಡಿಯನ್ನು ಮೀರುವೆನೆ ನಾನು? ಸನ್ನೆಯಿಂದೇಕೆ ಸತಿಯರನ್ನು ಎರಗಿಸಿದೆ? ಭಿನ್ನೋಪಚಾರವನ್ನು ಬೇಡಿದನೆ?'' ಎಂದು ಹೇಳಿ ಕಾಲಿಗೆರಗಿದ ಸೊಸೆಯರನ್ನು ''ಏಳಿರಿ ಏಳಿರಿ'' ಎಂದು ಎತ್ತಿದಳು.

''ಅಕ್ಕ ತಂಗಿಯರು ನೀವೊಡನಿರುವುದರಿಂದ ಲಕ್ಷ ಹೆಂಗಳೆಯರಿರುವರು.'' ಎಂದವನೆ ಭರತನು ತಾಯ ಕಡೆಗೆ ನೋಡಿ, ''ನಾನು ನಿಮಗೆ ತಕ್ಕ ಸೇವೆಯನ್ನು ಮಾಡಲು, ಅದನ್ನೆಲ್ಲಿ ಕೇಳಬೇಕು'' ಎಂದು ಹೇಳಿದನು. ತಾಯಿಗಳಲ್ಲಿ ಅಕ್ಕರೆಯೆಂದರೆ ಇದಕ್ಕೂ ಬೇರೊಂದಿದೆಯೆ?

''ಬಾಹುಬಲಿಯ ಸಂಪತ್ತೆಲ್ಲವೂ ಅವನ ಅಣುಗರಿಗಿರಲಿ. ಅಲ್ಲಿಗೆ ತಕ್ಕ ಮಾನಿಸರನ್ನು ಇರಿಸುವ. ತರಳರನ್ನೊಡಗೂಡಿ ನಾವು ಸಾಕೇತಪುರಕ್ಕೆ ತೆರಳುವ'' ಎಂದು ಚಕ್ರವರ್ತಿಯು ನುಡಿಯಲು ಅಂಬಿಕೆಯು ಅದನ್ನೊಪ್ಪಿಕೊಂಡಳು. ಭರತೇಶನು ಕೂಡಲೆ ಕಡೆಯ ಚಾವಡಿಗೆ ನಡೆದು, ಪ್ರಣಯ ಚಂದ್ರಮನನ್ನೂ ಗುಣವಂತಕನನ್ನೂ ಕರೆಸಿಕೊಂಡು, ಆ ಸ್ಥಿತಿಯೆಲ್ಲವನ್ನೂ ತಿಳಿಸಿದನು. ಅವರಾದರೊ ಅದಕ್ಕೆ ಆನಂದಪಟ್ಟು, ತಾವಿನ್ನು ದೀಕ್ಷೆಗೆ ಹೊರಡುವೆವೆಂದು ತಿಳಿಸಿದರು. ಕುಮಾರರು ನೆರೆವವರೆಗೆ ಸೈರಿಸಬೇಕೆಂದು ಅವರನ್ನು ಭರತೇಶನು ಸುವಿನಯದಿಂದ ತಡೆದನು.

''ಮೀನಾಂಕನಾದ ಬಾಹುಬಲಿಗಿಷ್ಟು ದಿವಸ ಸೇವೆ ಮಾಡಿದಿರಿ. ನಾನೇನು ನಿಮಗೆ ಕಷ್ಟಕೊಟ್ಟವನೆ? ಈ ನೋವಿನಲ್ಲಿ ನೀವು ಹೋಗುವುದು ಬೇಡ. ನಾವು ಒಂದಾಗಿಯೇ ದೀಕ್ಷೆಯನ್ನು ಸ್ವೀಕರಿಸುವ. ಭುಜಬಲಿಯಿಂದಲೂ ಹೆಚ್ಚಾಗಿ ನಿಮ್ಮನ್ನು ಮನ್ನಿಸುವೆನು. ನನ್ನ

ನಿಜವನ್ನಿಷ್ಟು ಅರಿತುಕೊಳ್ಳುವುದು'' ಎಂದು ಭುಜದಿಂದವರ ತಲೆಗಳನ್ನು ಅಪ್ಪಿಕೊಂಡನು. ಅವರಾಗ ಅವನ ಕಾಲುಗಳಿಗೆರಗಿ, ಒಪ್ಪಿಕೊಂಡರು.ಪರಿವಾರದವರಿಗೂ ಪ್ರಜೆಗಳಿಗೂ ಆಸೆಯಾಗುವಂತೆ ಪೌದನಪುರದಲ್ಲವರು ಇರಬಹುದೆಂದು ಭರತೇಶನು ಹೇಳಲು ಆ ದಳಪತಿ ಸಚಿವರಿಬ್ಬರೂ ಬೆರಗಾಗಿ ನುಡಿದರು.

''ದೊರೆಯಿಲ್ಲದೆ ನಾವಿರುವುದು ಓಜೆಯೇ? ಮದನನ ಹಿರಿಯಪುತ್ರನಿಗೆ ಪಟ್ಟಗಟ್ಟಿ, ಸಿರಿಗೂಡಿ ಕಳುಹು.'' ಆ ನುಡಿಗೆ ಅಲ್ಲಿದ್ದ ಬುದ್ಧಿಸಾಗರ ಮಂತ್ರಿಯೂ ಗೆಳೆಯರೂ ಲೇಸೆಂದು ತಿಳಿಸಿದರು. ಅದರಂತೆ ಮಹಾಬಲಿರಾಜನನ್ನು ಕರೆದು ಪೌದನಪುರದ ಪಟ್ಟವನ್ನು ಕಟ್ಟಿ, ಮಂತ್ರಿ ದಳಪತಿಗಳಿಗೂ ಸೇನೆಗೂ ಉಡುಗೊರೆಯಿತ್ತು ಭರತೇಶನು ಅರಮನೆ ಯನ್ನು ಸೇರಿದನು. ಆ ಕಾರ್ಯವನ್ನು ಚಿಕ್ಕಮ್ಮನಿಗೆ ಹೇಳಲು ಆಕೆಯದನ್ನು ಚೊಕ್ಕದಾಯಿ ತೆಂದು ಒಪ್ಪಿದಳು. ಆ ಮೇಲೆ ಮೂವರು ಮಕ್ಕಳಿಗೂ ಉಡಲಿಕ್ಕೂ ತೊಡಲಿಕ್ಕೂ ಇತ್ತು ಸುಮ್ಮಾನದಿಂದ ತಕ್ಕೈಸಿಕೊಂಡು ನುಡಿದನು. ''ಅಣ್ಣ , ನಿಮ್ಮ ಆರೈಕೆಗೆ ಅಮ್ಮಾಜಿಯಿರುವರು. ನಾನೂ ಹಿತವರನ್ನು ಒಮ್ಮೊಮ್ಮೆ ಕಳುಹಿಸಿ, ಆರೈಕೆ ಮಾಡುವೆನು. ನಿಮ್ಮೂರಲ್ಲೇ ನೀವು ಸುಮ್ಮಾನದಿಂದಿರಬಹುದು.''

ಅನಂತರ ಭರತೇಶನು. ನಂಬುಗೆವಂತರಿಗೂ ತಾಯ ಸೇವಕಿಯರಿಗೂ ಉಡಿಗೆ ತೊಡಿಗೆಗಳ ಉಡುಗೊರೆಯಿತ್ತು ತಾಯಿಗೆರಗಿ, ಪಲ್ಲಕ್ಕಿಯಲ್ಲಿ ಬೀಳ್ಕೊಟ್ಟನು. ಈ ರೀತಿಯಲ್ಲಿ ಬಾಹುಬಲಿಯ ಮಕ್ಕಳಿಗೆ ಭೂಮಿಯನ್ನು ಸ್ಥಿರವಾಗಿತ್ತು, ಮನ್ನಣೆಯಿತ್ತು ಆಗಾಗ್ಗೆ ವಿಚಾರಿಸಿಕೊಳ್ಳುವೆನೆಂದು ತಲೆದಡವಿ ಅವರನ್ನು ಬೀಳ್ಕೊಟ್ಟನು.

ಅಂಗಜನ ಸುತರು ಅತ್ತ ಹೋದಮೇಲೆ, ಇತ್ತ ಭೇರಿಗಳು ಸೊಳ್ಳೈಸುತ್ತಿರುವಾಗ, ಸಂಗರಮಲ್ಲನಾದ ಭರತಚಕ್ರಿಯು, ತನ್ನ ಮಹಾಸೇನೆಯೊಂದಿಗೆ ಸಾಕೇತಪುರದತ್ತ ನಡೆದನು.

ಸಿಕ್ಕುಗಳೆಲ್ಲ ತೀರಿದುವು. ಇನ್ನು ನಮ್ಮ ಪಟ್ಟಣ ಸಮೀಪದಲ್ಲೇ ತೋರುತ್ತಿದೆ, ಕಾಣುತಿದ್ದೇವೆಂದು ರಾಜಕಟಕದವರು ನಕ್ಕು, ಆಡಿ, ಕೈಹೊಯ್ದು ಸರಸದ ಮಾತುಗಳನ್ನಾಡುತ್ತ ಮುಂದಕ್ಕೆ ಕಾಲುಗಳನ್ನಿಡುತಿದ್ದರು. ಮುಂದೆ ಹತ್ತೆಂಟು ಗಾವುದ ನಡೆದು ಬರುವಷ್ಟರಲ್ಲಿ ಜಿನಗೃಹ, ಕರುಮಾಡ, ಗೋಪುರಾದಿಗಳು ಸಿಂಗರಿಸಿದ ಗಿರಿಯಂತೆ ಕಾಣತೊಡಗಿದುವು. ಕಾಲುದಳವೆಲ್ಲ ಸಾಕೇತಪುರವನ್ನು ಕಂಡಿತು.

ಪಟ್ಟಣವು ಮುಟ್ಟಿವಾಯಿತೆನ್ನುವಾಗ ಭರತೇಶನು ಪಟ್ಟದಾನೆಯನ್ನೇರಿದನು. ಕುಮಾರರೂ ಪುಟ್ಟ ಪುಟ್ಟ ಆನೆಗಳನ್ನೇರಿ ಒಗ್ಗಟ್ಟಾಗಿ ಆರ್ತಿಯಿಂದ ಬಂದರು. ನೆಲ ಬಿರಿ ವಂತೆ ನಾನಾ ವಾದ್ಯಗಳು ಮೊಳಗುತ್ತಿರಲು, ಮಾರ್ಬಲವು ಕಲಕಲಗುಟ್ಟಿ ನಡೆಯುತ್ತಿರಲು, ಬೆಳ್ಗೊಡೆ, ಚಾಮರ, ಧ್ವಜಗಳ ಚಿನ್ನೆಗಳಿಂದ ಸಾರ್ವಭೌಮನು ಬರುತಿದ್ದನು.

ಸಾಕೇತಪುರದ ಮಹಾಪ್ರಜೆಗಳನ್ನು ಕೂಡಿಕೊಂಡು, ಪತಾಕೆ ಪಲ್ಲವ ಛತ್ರಗಳೊಂದಿಗೆ, ಮಹಾಕಾಳನಾಯಕನು ಭರತೇಶನನ್ನು ಇದಿರ್ಗೊಂಡು, ಬಿನ್ನವಿಸಿದನು.

''ಸ್ವಾಮಿ, ನೀನು ಪುರವನ್ನು ಬಿಟ್ಟು ಹೋದ ಈ ಅರವತ್ತು ಸಾವಿರ ವರುಷಗಳಲ್ಲಿ

ಪುರಜನರೂ ನಾವೂ ನಿನ್ನನ್ನು ಸ್ಮರಿಸಿದ ತಪಸ್ಸು ಇಂದಿಗೆ ಸಿದ್ಧಿಯಾಯಿತು.'' ಅದನ್ನು ಕೇಳಿದ ರಾಯನು ನಗುತಿದ್ದನು.

''ದೇವರ ಒತ್ತಿನಲ್ಲಿದ್ದ ಸೇನೆಗೆ ಮಹತ್ತಾದ ನೋವಾಗಲಿಲ್ಲ, ಆದರೆ ದೇವರನ್ನು ಅಗಲಿದ ನಾವು ಧಾವತಿ ಪಟ್ಟೆವು.'' ಎಂದ ಮಹಾಕಾಳನ ಮಾತಿಗೆ ರಾಯನು ನಗುತ್ತ ಅವರನ್ನು ನೋಡಿದನು. ಮಹಾಕಾಳನಿಗೂ ಪ್ರಜೆಗಳಿಗೂ ಇಂಪಾದ ಮಾತುಗಳನ್ನಾಡಿ, ಚಕ್ರೇಶನು ತನ್ನ ಸೇನೆಯೊಂದಿಗೆ ಶ್ರೀಕಾಂತಿ ನೆಲೆಸಿರುವ ಹೊತ್ತಿನಲ್ಲಿ ಮಹಾಪುರದ ಕೋಟೆಯ ಒಳಹೊಕ್ಕು ನಡೆದನು. ಅಂತಃಪುರದವರು ಮಕ್ಕಳೊಂದಿಗೆ ಅರಮನೆಗೆ ಸಾಗಿದರು. ರಾಜೇಂದ್ರನು ಜಿನಾಲಯದತ್ತ, ಅನಂತ ವಿಲಾಸದಲ್ಲಿ ನಡೆದನು. ಕೇರಿ ಕೇರಿಗಳಲ್ಲಿ ಮಂದಿಯು ಕಿಕ್ಕಿರಿದುನೋಡುತ್ತಿರುವಾಗ, ತೇರು,ಆನೆ, ಕುದುರೆಗಳು ಸಂದಣಿಸಿ ಸಾಗಿದುವು. ಆಕಾಶಮಾರ್ಗದಲ್ಲಿ ಖೇಚರರೂ ವ್ಯಂತರರೂ ಬರುತ್ತಿದ್ದರು.

ಈ ರೀತಿಯಲ್ಲಿ ಭರತಚಕ್ರಿಯು ಬರುತಿದ್ದನು.

ಅಲ್ಲಲ್ಲಿ ಪುರಜನರೂ ಪುರಸತಿಯರೂ ಬೀದಿಯಲ್ಲಿ ಬರುತ್ತಿರುವ ರಾಜಮಲ್ಲನನ್ನು ನೋಡುತಿದ್ದರು. ಏನೂ ಇಲ್ಲದ ಬಡವೆಗೆ ಬಲುರಾಜ್ಯಬಂದಂತೆ ಅವರು ಸಲ್ಲೀಲೆಯಿಂದ ಭರತೇಶನನ್ನು ನೋಡಿದರು.

''ಒಡೆಯನು ದಂಡು ತೆಗೆದು ಹೋದಾಗ, ದೊಡ್ಡ ಒಡವೆಯೇ ಕೆಟ್ಟು ಹೋದಂತಾಗಿದ್ದೆವು. ಇಂದು ನಮಗೆ ಸಿಡಿದು ಹೋದ ಒಡವೆಯು ದೊರೆತ ಹಾಗಾಯಿತು.'' ಎಂದು ಪುರಸತಿಯರು ಭರತೇಶನನ್ನು ನೋಡುತ್ತನುಡಿದರು.

''ಒಮ್ಮೆ ಕರೆದು ನುಡಿಸುವುದೂ ಬೇಡ. ನಮ್ಮವರಿಗೆ ಇನ್ನು ಸಿರಿಯನ್ನು ಕೊಡುವುದೂ ಬೇಡ. ನಮ್ಮರಸನು ಪುರದಲ್ಲಿದ್ದರೆ ಅಷ್ಟೇ ನಮಗೆ ಸಾಕು. ಅದೇ ಸಕಲ ಸಂಪದವು.'' ಎಂದು ಪುರಲಲನೆಯರು ಮಾತಾಡಿಕೊಂಡರು.

''ನಮ್ಮ ರಾಯನನ್ನು ಕಂಡರೆ ಸಾಕು. ಉತ್ತಮವಾದುದನ್ನು ಉಟ್ಟಂತೆ, ತೊಟ್ಟಂತೆ, ಉಂಡಂತೆ, ಹರುಷವಾಗುತ್ತಿದೆ. ನಮ್ಮ ಪಾಪವನ್ನೂ ಖಂಡಿಸುತ್ತಿದೆ'' ಎಂದು ಚಕ್ರೇಶನನ್ನು ಕೊಂಡಾಡುತಿದ್ದರು.

ಪುರಜನರಿದ್ದರೂ ಭೂಪಾಲನಿಲ್ಲದ್ದರಿಂದ ನಮ್ಮ ನಗರವು ಹಾಳಾದಂತೆ ತೋರುತಿತ್ತು, ಪರನಾರೀಸೋದರನಾದ ನಮ್ಮ ರಾಜನು ಬಂದುದರಿಂದ ನಗರವಿಂದು ಸಿಂಗಾರವಾದಂತೆ ತೋರುತ್ತಿದೆ.''

''ಸಿರಿಯಿಲ್ಲದ ತಾವರೆ, ಪುರುಷನಿಲ್ಲದ ನೀರೆ, ಗುರುವಿಲ್ಲದಿರುವ ಉತ್ತಮ ತೀರ್ಥ, ದೊರೆಯಿಲ್ಲದಿರುವ ಪಟ್ಟಣ ಮೆರೆವುದೇ?''

''ಅಂದು ನಮ್ಮ ಒಡೆಯನು ಒಂದು ಆನೆಯನ್ನೇರಿ ಹೋದನು. ನೋಡಿದೊ. ಕುಮಾರರು ಏರಿದ ಆನೆಗಳೊಂದಿಗೆ ಬಂದುದೊಂದು ಭಾಗ್ಯವಾಗಿದೆ.''

''ರಾಜರ ದೇವ ಬಂದನೆ?''

''ಧರೆಯಲ್ಲಿರುವ ಅಧಿಕವನ್ನೆಲ್ಲ ಆರಿಸಿ, ಆರಿಸಿ, ತಂದನೇ? ಇಂದು ಅಯೋಧ್ಯಾಪುರದ ಐಸಿರಿಯು ಇಮ್ಮಡಿಯಾಯಿತು.''

ಎಂದು ಪುರಜನರು ಬರುತ್ತಿರುವ ಭರತೇಶನನ್ನು ಪ್ರೀತಿಯಿಂದ ನೋಡುತ್ತ ಸಂತೋಷಗೊಳ್ಳುತ್ತಿದ್ದರು. ಓಲಗವೋ ಎಂಬಂತೆ ಕೈಯೆತ್ತಿ ಮುಗಿಯುತ್ತಿರುವವರನ್ನು ಕಣ್ಣಿಟ್ಟು ನೋಡಿಕೊಂಡು ದೊರೆಯು ಬರುತಿದ್ದನು. ಮಾಡಗಳಲ್ಲಿ , ಮಜಲುಗಳಲ್ಲಿ, ಜಗಲಿಗಳಲ್ಲಿ , ಅಲ್ಲಲ್ಲಿ ಎಡಬಲದಿಂದ ಕಿಕ್ಕಿರಿದ ಜನರು ಬರುತ್ತಿರುವ ದೊರೆಯನ್ನು ನೋಡಿ, ತಮ್ಮೊಳಗೆ ಮಾತನಾಡಿಕೊಂಡರು.

''ಒಡೆಯನು ದಂಡಿಗೆ ಹೋದಂದಿನಿಂದ ಕರಕರೆ ಹಿಡಿದು ಪ್ರಜೆಗಳ ಮೈ ಬಡವಾಗಿತ್ತು, ಪೊಡವಿಯನ್ನು ಸಲಹಿ, ಪಟ್ಟಣವನ್ನು ನೋಯಿಸುವುದು ತರವೆ?

''ಶಿರಬಾಗಿದವರಿಗೆ ಸಿರಿಯನ್ನು ಕೊಡಬಹುದು. ಸಿಂಗಾರದ ಮೋಡಿಯ ಜಾಣ್ಮೆಯನ್ನು ಧರೆಗೆಲ್ಲ, ವೆಚ್ಚಕೆಂದು ನೀಡಿ ಬರುವುದೇ? ಇಂತಹ ಹುಚ್ಚು ಉಂಟೆ?''

''ಧರೆಯನ್ನು ಸಾಧಿಸುವುದಕ್ಕೆ ನೀನೇ ಹೋಗಬೇಕಿತ್ತೇ ಸ್ವಾಮಿ? ನಿನ್ನ ಪುರದಲ್ಲೇ ಸುಖದಲ್ಲಿದ್ದು ಚರರನ್ನು ಅಟ್ಟುತಿದ್ದರೆ ಅವರು ಸಾಧ್ಯಮಾಡಿ ಬರುತ್ತಿರಲಿಲ್ಲವೆ? ನೀನೇ ನಾಡನ್ನು ತಿರುಗಿದುದೇಕೆ?''

''ಭರತೇಶನ ಆಣೆಯಿದೆ; ಬಾ ಎಂದರೆ ಬಾರದ ದೊರೆಯಾರು? ನೀನೇಕೆ ಹೋಗಬೇಕಿತ್ತು? ಅದಕಿಷ್ಟು ಪರಿವಾರ ಬೇಕಿತ್ತೆ ? ಒಬ್ಬೊಬ್ಬ ಬಂಟರು ಗೆದ್ದು ತರುತ್ತಿರಲಿಲ್ಲವೆ?''

''ಆಳುಬೇಡ, ಅಂಬು ಬೇಡ. ನನ್ನನ್ನು ಅಟ್ಟುತಿದ್ದರೆ ಭೂಪಾಲಕರಿಗೆ ನಿನ್ನ ಹೆಸರನ್ನು ಹೇಳಿ ಎಲ್ಲರನ್ನೂ ಹಿಡಿದು ತರುತಿದ್ದೆನು.''

''ಸ್ವಾಮಿ ನೀನು ಎಲ್ಲೆಲ್ಲಿ ತಿರುಗಿದೆಯೊ. ನೀನು ಸುಖದಲ್ಲಿ ಊರಲಿದ್ದು ನನ್ನನ್ನು ಅಟ್ಟುತಿದ್ದರೆ ಎಲ್ಲರನ್ನೂ ಹೊರೆಗಟ್ಟಿ ತರುತಿದ್ದೆನು.''

ಈ ರೀತಿಯಲ್ಲಿ ನುಡಿಯುತ್ತಿರುವ ಪ್ರಜೆಗಳ ಮಾತನ್ನು ಕೇಳುತ್ತ , ಸಡಗರದಿಂದ ಎದೆಯುಬ್ಬಿ ನಗುತ್ತ, ಅಲ್ಲಲ್ಲಿ ಅವರಿಗೆ ಮನ್ನಣೆ ಕೊಡಿಸುತ್ತ, ಸುಮುಖನಾದ ಭರತೇಶನು ಬರುತ್ತಿದ್ದನು. ಸಂತೋಷದಿಂದ ಉಬ್ಬಿ, ಹೂವನ್ನಿಡುವ, ಕೈಮುಗಿವ, ಕೀರ್ತನೆಮಾಡುವ ಜನರನ್ನೆಲ್ಲ ನೋಡುತ್ತ ಕನಕ ತೋರಣಗಳನ್ನೂ ರತ್ನ ತೋರಣಾದಿಗಳನ್ನೂ ನೋಡುತ್ತ ಮನುಜೇಶನಾದ ಭರತಚಕ್ರಿಯು ಬರುತಿದ್ದನು.

ಚಕ್ರೇಶನು ದೂರದಲ್ಲೇ ಆನೆಯಿಂದಿಳಿದು ಕುಮಾರರನ್ನೂ ಕೂಡಿಕೊಂಡು ಆದಿಜಿನನನ್ನು ಕಂಡು ಸಾರವಸ್ತುಗಳನ್ನು ಕಾಣಿಕೆಯಿತ್ತು, ಯೋಗಿಗಳಿಗೆ ವಂದಿಸಿ, ಅವರ ಕಾಲಿಗೆರಗಿದನು. ಅವರಲ್ಲಿ ಹರಕೆಯನ್ನೂ ಸೇಸೆಯಲ್ಲಿ ಪಡೆದು ದೇವರಿಗೆ ಕೈಮುಗಿದನು. ಆನಂತರ ತಿರುಗಿ ಬಂದು. ಆನೆಯನ್ನೇ ತನ್ನ ಅರಮನೆಯ ಕಡೆಗೆ ನಡೆಸಿದನು.

ಅಂಗಡಿಯ ಬೀದಿಯ ಶೋಭೆಯನ್ನೂ, ಕುರುಜು ಮಾಡಗಳ, ಗೋಪುರದ ಸಾಲುಗಳ ಶೃಂಗಾರವನ್ನೂ ನೋಡುತ್ತ, ಎಲ್ಲರ ಕಣ್ಣುಗಳನ್ನೂ ಮನವನ್ನೂ ಮೋಹಿಸುತ್ತ ಭರತೇಶನು ಬಂದನು. ಆನೆಯು ಬಂದು ರಾಜಗೃಹದ ಮುಂದೆ ನಿಂತಾಗ ಸರ್ವರನ್ನೂ ವಿಭ್ರಾಜಿತ ವಿನಯದಿಂದ ಕಳುಹಿಸಿಕೊಟ್ಟು, ರಾಜಶಿಖಾಮಣಿಯಾದ ಭರತೇಶನು ಜಯಘೋಷ ಮೊಳಗುತ್ತಿರಲು ಆನೆಯಿಂದ ಇಳಿದನು.

ಮಕ್ಕಳನ್ನು ಕೂಡಿಕೊಂಡು, ಅರಮನೆಯನ್ನು ಸೇರಿದಾಗ ಅಲ್ಲಿ , ರಾಣಿಯರು ಸಂತೋಷದಿಂದ ಆರತಿ ಬೆಳಗಿದರು. ಅನಂತರ ಎಲ್ಲರನ್ನೂ ನೋಡುತ್ತ ಹಂಸನಾಥನನ್ನು ನೆನೆದು ಸಂಭ್ರಮದಿಂದ ಅರಮನೆಯೊಳಗೆ ಹೋದನು. ತಾವರೆ ತುಂಬಿದ ಕೊಳದಂತೆ ಆ ಅರಮನೆಯು ಭಾಮೆಯರಿಂದ ತುಂಬಿತ್ತು, ದೇವರು ಬಂದು ನೆಲೆಸಿದ ದೇಗುಲದಂತೆ ಮೆರೆಯಿತು. ಮದುವೆಯ ಮನೆಯಂತೆ ಎಲ್ಲಿನೋಡಿದರೂ ಪುರದಲ್ಲಿ ಜನಸಂದಣಿ ಚೆದುರಿತ್ತು. ಷಟ್ಖಂಡಗಳ ಸಿರಿಯೆಲ್ಲ ಒಂದೇ ತಾಣದಲ್ಲಿ ಸೇರಿತ್ತು.

ಹತ್ತೆಂಟು ದಿವಸಗಳು ಕಳೆದ ಮೇಲೊಂದು ದಿನ ಹಗಲು ಹೊತ್ತಿನಲ್ಲಿ ಭರತೇಶ್ವರನ ಸಂಪತ್ತಿನ ಓಲಗವು ಕೂಡಿತು. ಚಕ್ರೇಶ್ವರನಾಗ, ಸಭಿಕರನ್ನೆಲ್ಲ ನೋಡಿ, ತನ್ನ ಚಿತ್ತದಲ್ಲಿದ್ದ ಆಲೋಚನೆಯನ್ನು ನುಡಿದನು.

''ಮೊದಲಿದ್ದ ಯುವರಾಜನು ತಪಸ್ಸಿಗೆ ಸಾಗಿದನು. ಇನ್ನಿಲ್ಲಿ ಯುವ ರಾಜಪದಕ್ಕೆ ಸನ್ನತರಾದವರೊಬ್ಬರು ಯಾರೆಂದು ನೀವು ಸೂಚಿಸಬೇಕು.''

''ಪುಷ್ಪಬಾಣನಾದ ಬಾಹುಬಲಿಯು ತಪಸ್ಸಿಗೆ ಹೋದರೇನಾಯ್ತು? ಯುವರಾಜ ಪದಕ್ಕೆ ಯೋಗ್ಯನಾಗಿ ಅರ್ಕಕೀರ್ತಿ ರಾಜನಿದ್ದಾನೆ.ಅವನೆ ಯುವರಾಜ ಪದವನ್ನು ಆಧರಿಸತಕ್ಕವನು.'' ಎಂದು ದೊರೆಗಳೆಲ್ಲ ಬಿನ್ನವಿಸಿದರು.

''ಅರ್ಕಕೀರ್ತಿರಾಜನು ನಿನ್ನಂತೆ ನೀತಿ ನಿಷ್ಣಾತ್ಮನಾಗಿದ್ದಾನೆ. ಅವನು ಧರಾತಳಕ್ಕೇ ಅಲಂಕಾರಪ್ರಾಯನು. ಅವನೇ ತಕ್ಕವನು.'' ಎಂದು ಪ್ರಧಾನರೆಲ್ಲ ಮಾತು ಸೇರಿಸಿದರು.

ತಾನು ನೆನೆದುದನ್ನೇ ಉಪಾಚಾರಕ್ಕೆಂದು ಸಭೆಯ ಮುಂದಿಟ್ಟು, ಸಭೆಯಿತ್ತಸೂಚನೆಗೆ ಆನಂದಪಟ್ಟು, ಅದರ ವಿಧಾನವೃತ್ತಿಗಳನ್ನೆಲ್ಲ ವಿವರಿಸಿದನು.ಕೂಡಲೆ ನಗರಿ ಸಿಂಗಾರವಾಯಿತು. ಜಿನಪೂಜೆ ಜರುಗಿತು. ವಾದ್ಯಗಳು ಘರ್ಜಿಸಿದುವು. ಚಕ್ರಿಯು ತನ್ನ ಮಗನಿಗೆ ಯುವರಾಜ ಪಟ್ಟಗಟ್ಟಿದನು. ಪುರಜನರೆಲ್ಲರೂ ಹೊಗಳಿ ಹಾಡಿದರು. ತನ್ನಿಂದ ಮುಂದೆ ಇವನೆ ಧರೆಗೆ ಅರಸೆಂಬುದನ್ನು ಕನ್ನಡಿಸುವಂತೆ ಚಕ್ರೇಶ್ವರನು ತನ್ನ ಕೊರಳಿನ ತೋರಹಾರವನ್ನೇ ತೆಗೆದು ಮಗನಿಗಿಟ್ಟು ಮನ್ನಿಸಿದನು. ಆ ಮಗನನ್ನು ನೋಡಿ ಹರಸಿದನು; ಅಪ್ಪಿಕೊಂಡನು; ದೃಷ್ಟಿ ತೆಗೆದನು; ಮತ್ತೊಮ್ಮೆ ನೋಡಿ ಸಂತೋಷಗೊಂಡನು. ತನ್ನ ಹಿರಿಕುವರನ ಸಿರಿಗೆ ಆ ತಂದೆ ಆರ್ತಿಪಡೆದನು. ಪುಟ್ಟ ಗದ್ದುಗೆಯಲ್ಲಿ ಮಗನನ್ನು ಕುಳ್ಳಿರಿಸಿ, ವೀರಾಕ್ಷತೆಗಳನ್ನಿಟ್ಟು ಆ ಮೇಲೆ ಪಟ್ಟ ಸಿಂಹಾಸನದಲ್ಲಿ ತಾನೂ ಕುಳಿತನು. ಜನಸ್ತೋಮವು ಜಯಜಯವೆನುತಿತ್ತು.

ಅಯ್ಯನು ಅಧಿರಾಜನು, ಮಗನು ಯುವರಾಜನು, ಎಂದು ಜನರೆಲ್ಲರೂ ಅಧಿಕ ಸಂತೋಷಗೊಂಡು, ಸುಧೆಯನ್ನುಂಡ ಸುರರಂತೆ ನಲಿದಾಡಿ ಗುಣಾಂಬುಧಿಯಾದ ಚಕ್ರೇಶ್ವರನಿಗೆ ಕಾಣಿಕೆಯಿಕ್ಕಿದರು.ತಂದೆಗೆ ಕಾಣಿಕೆಗೊಟ್ಟು,ಅಂತೆ ಅಣ್ಣನಿಗೂ ಕಾಣಿಕೆಯಿಕ್ಕಿತ್ತು, ತಮ್ಮಂದಿರೆಲ್ಲ ಪುಳಕಿತರಾದರು. ಭಕ್ತಿಯಿಂದ ಅಡ್ಡಬಿದ್ದರು. ''ಅಯ್ಯ ಜನಕಗೆ ಎರಗಿದಂತೆ ಇವರು ನನಗೂ ಸಾಷ್ಟಾಂಗದಿಂದ ಎರಗುವುದೇಕೆ?'' ಎಂದು ಅರ್ಕಕೀರ್ತಿ ಆಕ್ಷೇಪಿಸಿದನು. ''ಅಣ್ಣಾ ಅದನ್ನೊಪ್ಪು, ನನ್ನ ಸೋದರರ ವರ್ತನೆ ನಿನಗೆ ಬೇಕಾಗಿತ್ತೇ?'' ಎಂದು ಭರತ ಚಕ್ರಿಯು ನಸುನಗುತ್ತ ನುಡಿದನು.

ತ್ರಿಲೋಕಗಳ ನಿಧಿಯಂತಿರುವ ಹಿಮಗಿರಿಯನ್ನು ಮುಟ್ಟಲಿರುವ ಸರ್ವರಾಜರೂ ಕಾಣಿಕೆಗೊಟ್ಟು ನಮಸ್ಕರಿಸಿದಾಗ, ಅರ್ಕಕೀರ್ತಿಯ ಯುವರಾಜ ಪಟ್ಟವು ಪೂಜಿತವಾಯಿತು. ಎಲ್ಲೆಲ್ಲೂ ಉತ್ಸವ ಮೆರೆಯಿತು. ಆಗ ಅರ್ಕಕೀರ್ತಿಯು ಗದ್ದುಗೆಯಿಂದಿಳಿದು ತಂದೆಯ ಅಡಿಗಳಿಗೆ ತಲೆಯಿಟ್ಟು ಹರಕೆಗೊಂಡನು; ಬ್ರಾಹ್ಮಣರಿಗೆ ನಮಸ್ಕರಿಸಿ ಆಶೀರ್ವಾದ ಪಡೆದನು. ರಾಜರಿಗೂ ಮಂತ್ರಿಗಳಿಗೂ ವಿದ್ವಾಂಸರಿಗೂ ನಮಸ್ಕರಿಸಿ, ಅವರವರಿಗೆ ತಕ್ಕಂತೆ ಮನ್ನಣೆಮಾಡಿ, ತನ್ನ ಅರಮನೆಗೆ ನಡೆದನು.

ನಾಲ್ಕೆಂಟು ದಿನಕಳೆಯಲು ಮಂತ್ರಿ ಬಂದು, ದಂಡುಮಾಡಿದ ರಾಜರನ್ನೆಲ್ಲ ತಮ್ಮ ತಮ್ಮ ನಾಡಿಗೆ ಕಳುಹಿಸಬೇಕಾಗಿದೆಯೆಂದು ಬಿನ್ನಹ ಮಾಡಿದನು. ಹಾಗೇ ಆಗಲೆಂದು ಭರತೇಶನು ಸಂತೋಷದಿಂದ ಒಪ್ಪಿ ಅವರಿಗೆಲ್ಲ ಹರುಷವಾಗುವಂತೆ, ಮಜ್ಜನ ಮಾಡಿಸಿ, ದಿವ್ಯಾನ್ನಪಾನಗಳಿಂದ, ಅರಮನೆಯಲ್ಲೇ ಔತಣ ಮಾಡಿಸಿದನು. ಹೆಣ್ಣು ಕೊಟ್ಟವರು ಅನುದಿನವೂ ಉಂಡು ಸಂತೋಷಪಟ್ಟರು. ಉಳಿದವರಿಗೆ ಪರಿಶುದ್ಧವಾದ ಹಾಲಿನ ಔತಣವಾಯಿತು. ಉಣ್ಣದ ಊಟದಿಂದ ವ್ಯಂತರರು ತೃಪ್ತರಾದರು. ಔತಣದಿಂದ ತೃಪ್ತರಾದವರಿಗೆ ಭರತೇಶ್ವರನು ಪರಿಮಳವಾದ ವಸ್ತ್ರಗಳನ್ನೂ ಪ್ರಜ್ವಲಿಸುವ ಆಭರಣಗಳನ್ನೂ ಹೊರೆಹೊರೆಯಾಗಿ ಉಡುಗೊರೆ ಮಾಡಿದನು. ಅವರಿಗೆಲ್ಲ ಆನೆ,ಕುದುರೆಗಳನ್ನೂ ರಥವಿಮಾನಗಳನ್ನೂ ಪಲ್ಲಕಿಯನ್ನೂ ಮರುತವಾಪುಗಳನ್ನೂ ಕೊಟ್ಟನು. ಹಸುಗಳನ್ನು ಹಿಂಡುಹಿಂಡಾಗಿ ದಾನಮಾಡಿ ಸನ್ಮಾನಿಸಿದನು.ಅನಂತರ ಅವರೆಲ್ಲರಿಗೂ ಬೀಳ್ಕೊಡುವ ವೀಳ್ಯವನ್ನಿತ್ತು , ವಿಶಾಲ ದೃಷ್ಟಿಯಿಂದ ಅವರನ್ನು ನೋಡಿ, ವಿನಯದಿಂದ ಕೂಡಿ ನುಡಿದನು.

"ಕೇಳಿರೈ, ಹಿತರಾದ ನೀವೆಲ್ಲರೂ ನನ್ನೊಡನೆ ಇಷ್ಟು ಕಾಲ ಪ್ರಯಾಸದಿಂದ ಆಳಿದಿರಿ, ಓಲೈಸಿದಿರಿ. ಪ್ರೀತಿಯಿಂದೆಲ್ಲವನ್ನು ನನಗಿತ್ತು, ನನ್ನ ಅರಮನೆಯವರೆಗೆ ನನ್ನನ್ನು ಮುಟ್ಟಿಸಿದಿರಿ. ನೀವೆಲ್ಲರೂ ನಾಡ ಅರಸುಗಳಹುದು. ನಿಮಗೆ ನನ್ನಲ್ಲಷ್ಟು ಮಮಕಾರವಿದೆ. ಅಲ್ಲದಿದ್ದರೆ ನನ್ನೊಡನೆ ಸುತ್ತುವಿರೇಕೆ? ಮಿತ್ರರೇ, ಅದನ್ನೆಲ್ಲ ನಾ ಬಲ್ಲೆ. ಕೇಳಿರಿ.ನಿಮ್ಮಲ್ಲಿ ಕೆಲವರು ಕ್ಷತ್ರಿಯನೆಂಬ ಒಲವಿನ ಪಕ್ಷಪಾತದಿಂದ ಹೆಣ್ಣು , ಹೊನ್ನು, ಆನೆ ಕುದುರೆಯಿಂದೆಲ್ಲ ನನಗೆ ನೀಡಿದಿರಿ. ಶ್ರೇಷ್ಠವಾದ ಈ ಕ್ಷತ್ರಿಯ ವಂಶದ ನಮಗೂ ನಿಮಗೂ ಪುಣ್ಯವೊಂದೇ ಶ್ರೇಷ್ಠವಲ್ಲದೆ, ಬೇರೊಂದು ಗಣ್ಯವಾದುದು ನಿರ್ಗಣ್ಯವಾದುದು ಎಂದುಂಟೆ? ನನಗೆ ನೀವೆಲ್ಲರೂ ಅಗ್ರಗಣ್ಯರಾದ ಬಂಧುಗಳಾಗಿರುವಿರಿ. ವ್ಯಂತರರಾದರೋ ನನ್ನ ಮೇಲಿನ ಪ್ರೀತಿಯಿಂದ ಹಲವು ರೀತಿಯ ಕಾರ್ಯವೆಸಗಿದ್ದಾರೆ. ಅದರಿಂದ ನನಗೆ ಸಂತೋಷವಾಗಿದೆ. ಅವರಾದರೂ ನನ್ನ ಬಂಧುಗಳ ಸಂತತಿಯವರು; ನೀವೆಲ್ಲ ಬಳಲಿದ್ದೀರಿ. ಇನ್ನು ನಿಮ್ಮ ಊರಿಗೆ ಹೋಗಿ ಸಂತೋಷದಿಂದಿರಿ. ನಾವೇನಾದರೊಮ್ಮೆ ಹೇಳಿ ಕಳುಹಿಸಿದರೆ, ನಿಮ್ಮ ಮನಸ್ಸೂ ಒಪ್ಪಿದರೆ,ನಮ್ಮಲ್ಲಿಗೆ ಬನ್ನಿ. ನಿಮಗೆ ಯಾವಾಗಲೂ ಸ್ವಾಗತವಿದೆ.

ಬಂಧುತ್ವದಿಂದ ಭರತೇಶನು ಹೇಳಿದ ಮಾತುಗಳನ್ನು ಕೇಳಿದೊಡನೆ ರಾಜರ ಮನಸ್ಸಿನ ಅಂಧತ್ವವೆಲ್ಲ ಮಾಯವಾಯಿತು. ಅವರೆಲ್ಲ ಸುಖದ ಸಿಂಧುವಿನಲ್ಲಿ ತೇಲಾಡಿದರು. ಅವರಾಡಿದ ಮಾತುಗಳೆಲ್ಲ ಭಕ್ತಿಯ ಪ್ರಬಂಧವೇ ಆಯಿತು.

''ಚಕ್ರೇಶಾ, ನಿನ್ನ ಓಲಗವೆಂಬುದು ನಮಗೆಲ್ಲ ಪರಮ ಲೀಲಾವಾಸವಾಗಿತ್ತು ನಮಗೆ ಯಾವ ರೀತಿಯ ಪ್ರಯಾಸವೂ ಇರಲಿಲ್ಲ . ಇನ್ನು ಊರಿಗೆ ಹೋದಾಗ ನಮಗೇ ನೋವಾದೀತು.''

''ಸ್ವಾಮಿ, ನಿನಗೊಂದು ವಸ್ತುವನ್ನು ಕೊಡುವಷ್ಟು, ದಕ್ಷರೆ ನಾವು? ದೇವಡಿಗನು ದೇವರಿಗೊಂದು ಹೂವನ್ನು ಅರ್ಪಿಸಿದರೆ ಅದು ದೇವಡಿಗನ ಹಂಗೊ? ದೇವನ ಮಹಿಮೆಯೋ?''

''ಮಂಡಲಾಗ್ರಣಿ, ಭಂಡಾರಿಯು ನಿನಗೊಂದು ವಸ್ತುವನ್ನು ಸಮಯವರಿತು ತಂದುಕೊಟ್ಟು ಮೆಚ್ಚನ್ನು ಪಡೆಯುವಂತೆ, ನಿನ್ನ ವಸ್ತುವನ್ನೇ ನಿನಗಿತ್ತು ಅಧಿಕ ಸಂಪತ್ತು ಪಡೆದುವು.''

''ಸ್ವಾರ್ವಭೌಮ, ಕರಡು ಮುತ್ತುಗಳೆಲ್ಲ ಕಟ್ಟಾಣಿಯ ಕುಲದೇವರಿಗೆ. ನಾವು ಕುಲದಲ್ಲಿ ಸರಿಸಮಾನರೇ? ನಮ್ಮ ಮೇಲೆ ನಿಮ್ಮ ಕರುಣೆಯು ಹೆಚ್ಚಾಯಿತು. ಆದರಿಂದ ಈ ರೀತಿ ಹೇಳಿದಿರಿ.''

''ಸ್ವಾಮಿ ಪರಮಾತ್ಮವೇದಿ, ನಿನ್ನ ಪಾದಸೇವೆ ಧನ್ಯರಿಗಲ್ಲದೆ ಎಲ್ಲರಿಗೂ ಲಭಿಸುವುದೆ? ನರಲೋಕದಲ್ಲಿದ್ದರೂ ನಮಗಿಲ್ಲಿ ಇಷ್ಟು ಕಾಲವೂ ಸುರಲೋಕದಲ್ಲಿದ್ದಂತೆ ಆಯಿತು.''

''ಸ್ವಾಮಿ, ನಿತ್ಯವೂ ಮದುವೆ; ನಿತ್ಯವೂ ಮನ್ನಣೆ—ಸನ್ಮಾನಗಳು, ನಿತ್ಯವೂ ವಿನೋದಗಳಾದುವು. ಹೊಡೆದು ಇರಿದು ಒಬ್ಬರನ್ನೊಬ್ಬರು ಕೊಂದು ಆಡಿದ ಮಾತ್ರಕ್ಕೆ ನಿನ್ನ ಸೇವೆಯಾಯಿತೆ?''

''ದೇವಾ, ಹೋಗಲು ನಮಗೆ ಕಾಲೇ ಬರುವುದಿಲ್ಲ, ನೀನು ಹೋಗೆಂದು ನಿರೂಪ ಮಾಡಿದ ಮೇಲೆ ಅದನ್ನು ಮೀರಬಹುದೆ? ಹೋಗುವೆವು. ಕೂಡಲೇ ಬರುವೆವು.''

ಎಂದು ಹೇಳುತ್ತ ರಾಜರೆಲ್ಲರೂ ಒಬ್ಬೊಬ್ಬರಾಗಿ ಸಾಷ್ಟಾಂಗವೆರಗಿದನು. ಅವರು ಕರಗಳ ಮುಗಿದು ನಿಲುತ್ತಿರುವಾಗಲೇ ಸುಕಂಠ ಮತ್ತು ವಜ್ರಕಂಠರೆಂಬ ಕಟ್ಟಿಗೆಕಾರರು ಚಕ್ರಿಯ ಮುಂದೆ ಬಂದು ಹೊರಟು ಹೋಗುತ್ತಿರುವ ರಾಜಾಧಿರಾಜರನ್ನು ಒಬ್ಬೊಬ್ಬರಾಗಿ ಚಕ್ರೇಶ್ವರನಿಗೆ ನುಡಿದು ತಿಳಿಸಿದರು.

''ಇತ್ತ ಚಾಪಾಗ್ರಜ, ವಿಶ್ವಭೂರಮಣ, ಬೋಧೇಕ್ಷಣ, ಚಿತ್ತಾವಧಾನ. ದಕ್ಷಿಣಾಬ್ಧಿಯ ವರತನು. ಸುರಕೀರ್ತಿಯ ಸಾಕ್ಷಿಕನಾಗಿ ಚಿತ್ತೈಸು.'' ''ಕಡಲಿಗಿಂತಲೂ ಕಡುಗಂಭೀರವಾಗಿ ಶೋಭಿಸುವ ನಾಡೊಡೆಯರದೇವ—ಪರಾಕು. ಪಡುವಣಾಬ್ಧಿಯ ಪ್ರಭಾಸೇಂದ್ರನ ನೋಡು.'' ''ವಿಜಯ ಲಕ್ಷ್ಮಿಯನಲ್ಲ, ಬಲ್ಲಿದರೊಡೆಯ ಕೇಳು, ವಿಜಯಾರ್ಧನ ಅಗ್ರದಲ್ಲಿರುವ ವಿಜಯಾರ್ಧ ದೇವನನ್ನು ಚಿತ್ತೈಸು; ಹೋ. ಸುಜನೇಂದುವು ನೋಡಿದನು, ತೊಲಗು.'' ''ಸಮವಸರಣನಾಥನ ಆತ್ಮಜನೆ ಲಾಲಿಸು, ಹಿಮಗಿರಿಯ ಅಗ್ರದಲ್ಲಿ ಶೋಭಿಸುವ ಹಿಮವಂತ ದೇವನನ್ನು ಚಿತ್ತೈಸು ಸ್ವಾಮಿ.'' ''ಕಾಲಕರ್ಮಾರಣ್ಯಕ್ಕೆ ದಾವಾಗ್ನಿಯಂತಿರುವ ಹಂಸತತ್ವಾವಲಂಬಿ ತ್ರಿಭುವನ ರಕ್ಷಾ, ತಮಸ್ರಗುಹೆಯ ಕೃತಮಾಲನನ್ನು ಒಲಿದು ಅವಲೋಕಿಸು.'' ''ಖಂಡೆಯದ ಪ್ರತಾಪದಿಂದ ಷಟ್ಖಂಡವನ್ನಾಳುವ ವಿಕ್ರಾಂತನೆ. ಖಂಡಪ್ರತಾಪ ಗುಹೆಯ ನಾಟ್ಯಮಾಲವನ್ನು ನೋಡು.''

"ಸಾರ್ವಭೌಮ, ಉತ್ತಮ ಭಾಗೆಯ ಪಡುವಣ ಖಂಡದ ರಾಜರನ್ನೆಲ್ಲ ಕೂಡಿ ಕೊಂಡಿರುವ ಕಲಿರಾಜನನ್ನು ನೋಡು; ಅಲ್ಲಿಯ ಮೂಡಣ ಖಂಡದ ಭೂಭುಜರನ್ನೆಲ್ಲ ಕೂಡಿಕೊಂಡು ಗಾಡಿಯಲ್ಲಿ ಮೆಲ್ಲನೆ ಹೋಗುತ್ತಿರುವ ಕಾಮರಾಜನನ್ನು ನೋಡು." "ಅದೊ, ಆ ನಡುವಣ ಖಂಡದೊಳಗಿರುವ ನೃಪರೊಂದಿಗೆ ಹೋಗುತ್ತಿರುವ ಮಾನ್ಯನಾದ ಚಿಲಾತ ರಾಜನನ್ನೂ ಸಾನುರಾಗದಿಂದ ನೋಡು. ದಕ್ಷಿಣಭಾಗೆಯ ಪಶ್ಚಿಮ ಖಂಡದ ದಕ್ಷರಾದ ಭೂಪರೆಲ್ಲರೊಡನೆ ಒಂದಾಗಿ ಹೋಗುತ್ತಿರುವ ಉದ್ದಂಡರಾಜನನ್ನು ಪ್ರೀತಿಯಿಂದ ನೋಡು ದೇವ. ಮನುಕುಲ ಪ್ರದೀಪನೆ, ಆ ಪೂರ್ವಖಂಡದ ರಾಜರೆಲ್ಲರೂ, ವೇತಂಡರಾಜನನ್ನು ಕೂಡಿಕೊಂಡು ಹೋಗುತ್ತಿರುವುದನ್ನು ನೋಡು."

"ಊಣೆಯೆಂಬುದು ಅಣುಮಾತ್ರವೂ ಇಲ್ಲದೆ, ಪ್ರವೀಣರು ತಲೆದೂಗುತ್ತಿರಲು ಶೋಭಿಸುವ ಜಾಣರ ದೇವನೆ. ಉತ್ತರ ಶ್ರೇಣಿಯ ಖಚರ ನಾಯಕರನ್ನು ಚಿತ್ತೈಸು. ಯುದ್ಧಕ್ಕೊಡ್ಡಿ ನಿಲ್ಲುವ ರಾಯದಲ್ಲಣ, ವೈರಿಭಯಂಕರ, ರಿಪುರಾಯ ಮಥನ, ತೆಂಕಣ ಶ್ರೇಣಿಯ ಖಚರವಲ್ಲಭರನ್ನು ನೋಡು." "ಅಗಲವಾಗಿರುವ ಆರ್ಯಖಂಡ ದೊಳಗಿರುವ ರಾಜರಲ್ಲಿ ತಿಗುಳಾಣ್ಯದ ಅರಸನನ್ನೂ ಮಗಧ ರಾಜನನ್ನೂ ಮಾಳವೇಂದ್ರನನ್ನೂ ಕಾಶ್ಮೀರಪತಿಯನ್ನೂ ನೋಡು." ಎಂದು ಹೇಳಿದ ವೇತ್ರಧರರು ಚಕ್ರಿಗೆ ಹೋಗುತ್ತಿರುವ ಲಾಟ, ಮಹಾಲಾಟ, ಚಿತ್ರಕೂಟ, ಭೋಟ, ಮಹಾಭೋಟ, ಕರ್ಣಾಟ ರಾಜರನ್ನು ತೋರಿಸಿದರು. ಆ ಮೇಲೆ ಚೀನ, ಮಹಾಚೀನ, ಕಾಶಿ, ಸಿಂಹಳ, ಬಂಗಾಳ ಮುಂತಾದ ರಾಜರನ್ನು ಕರೆದು ಹೋಗಿರೆಂದು ಸೂಚಿಸಿದರು. ತುರುಕ, ತೆಲುಗ, ಕರಹಾಟ, ಹುರುಮುಂಜಿ, ಮುಂತಾದ ದೇಶದರಸರೂ ತೆರಳಿದರು. ಅಂಗದೇಶಾಧೀಶ, ಪಲ್ಲವರಾಜ, ಕಳಿಂಗೇಂದ್ರ, ಕಾಂಭೋಜ ನೃಪತಿ, ವಂಗಾಢ್ಯ ಹಮ್ಮೀರನೃಪ, ಸಿಂಧುನೃಪರೆ,— ನೀವೆಲ್ಲರೂ, ಭರತೇಶಗೊಂದಿಸಿ ಹೋಗಿರಿ" ಎಂದು ಕಟ್ಟಿಗೆಕಾರರು ತಿಳಿಸಿದರು. "ಗೌಳದೇಶ, ಕೊಂಕಣ, ಮಲೆಯಾಳ, ತುಳುವರಸ, ಚೋಳ, ಮಲಹ, ಹವಕುಂತಳ— ಮುಂತಾದ ದೇಶಗಳ ಅಧಿಪತಿಗಳನ್ನವರು ಕರೆದು ಚಕ್ರೇಶ್ವರನಿಂದ ಬೀಳ್ಕೊಳ್ಳಿರೆಂದರು. ಅಂತೆಯೆ, ಗುರ್ಜರ, ನೇಪಾಳ, ಪಾಂಚಾಲ, ಸೌರಾಷ್ಟ್ರ, ಬರ್ಬರ, ಮುಂತಾದ ದೇಶಾಧಿಪತಿಗಳನ್ನು ಕಟ್ಟಿಗೆಕಾರರು ಕಳುಹಿಸಿಕೊಟ್ಟರು.

ಅರಮನೆಯ ಔತಣದಿಂದ ತಣಿದ ಅವರನ್ನು ಭರತೇಶನು ಹಿರಿದಾದ ಮನ್ನಣೆಗಳನ್ನಿತ್ತು ಮನ್ನಿಸಿದನು. ಆಗ ಭರತೇಶನು ಹೇಳಿದ ಸದ್ವಿನಯಗಳನ್ನೇ ಹೊಗಳುತ್ತ ರಾಜರೆಲ್ಲರೂ ಕಂಡಕಡೆಗೆ ನಡೆದರು. ದೂರದ ನೃಪರು ಹೋಗಲು ಅರಸು ಮಕ್ಕಳಿಗೆ ನಾಡು ಊರು, ಆನೆ, ಕುದುರೆ, ಮುಂತಾದ ಭೂರಿಸಂಪತ್ತುಗಳನ್ನಿತ್ತು ವಿನಯದ ಮಾತುಗಳನ್ನು ಹೇಳಿ ಭರತೇಶನು ಕಳುಹಿಸಿದನು. ರಾವುತರಿಗೆ, ರಥಿಕರಿಗೆ, ಮಾವುತರಿಗೆ, ಸೇವಕರಿಗೆ, ಸಾಣೆಗಳಿಗೆ ಜೀವಿತಗಳನ್ನು ಹೆಚ್ಚು ಮಾಡಿ ಮನ್ನಿಸಿದನು. ಅದರಂತೆ ಪಾಠಕರಿಗೆ, ಕರಣಿಕರಿಗೆ, ಬೋವುಗಳಿಗೆ, ನಂಬಿಗೆವಂತರಿಗೆ, ವೇತ್ರಧರರಿಗೆ, ಮಾಕಾಳಗೆ—ಎಲ್ಲರಿಗೂ ಅಧಿಕ ಸಂಪತ್ತುಗಳನ್ನು ಕೊಟ್ಟನು. ಗಣಬದ್ಧರಿಗೆ, ಗೃಹಪತಿಗಳಿಗೆ, ವಿಶ್ವಕರ್ಮರಿಗೆ, ಕವಿಗಣಕ್ಕೆ, ಗಾನಭಟ್ಟರಿಗೆ, ವಾದಕರಿಗೆ, ಗಣಿಕೆಯರಿಗೆ—ಸರ್ವರಿಗೂ ಉಚಿತವಾದ ಉಡುಗೊರೆಯಿತ್ತು ತಣಿಸಿದನು. ಮಹಾ ಉದಾರನೆಂದರೆ ಭರತೇಶನೆ ಸೈ!

ಗಲಭೆ ಹಿಂಗಿದ ಮೇಲೆ ಮಾಗಧ ಧ್ರುವಗತಿಗಳಿಗೆ ಅಚ್ಚತೊಡವುಗಳನ್ನು ಕೊಟ್ಟು ಮತ್ತೆ ತಲೆಯನ್ನು ತಕ್ಕೈಸಿದನು. ಅವರಾಗ ಭರತೇಶನ ಪಾದಗಳಿಗೆರಗಿ ಪ್ರೀತಿಯಿಂದ ಹೋದರು. ಮೆಘೇಶ್ವರ ಜಯಂತರಿಗೂ ನಾಡುಗಳನ್ನಿತ್ತನು. ಅವರೂ ಭರತೇಶಗೊಂದಿಸಿ, ಬೀಳ್ಕೊಂಡು ಸಂತೋಷದಿಂದ ಹೋದರು. ಬುದ್ಧಿಸಾಗರ ಮಂತ್ರಿಯ ಸೂಚನೆಯಂತೆ ಗೆಳೆಯರಿಗೂ ಉಡುಗೊರೆಯಿತ್ತನು. ಅವರೂ ಸರಿದು ತೊಲಗಿದರು.

''ಆವುದು ನಿನಗಿಚ್ಚೆ?'' ಎಂದು ಬುದ್ಧಿಸಾಗರನನ್ನು ಮತ್ತೆ ಭರತೇಶನೇ ಕೇಳಿದನು.

''ನಿನ್ನ ಸೇವೆಯೇ ನನಗೊಂದು ಇಚ್ಚೆ'' ಎಂದು ಆ ಮಹಾಮಂತ್ರಿ ಮರುಮಾತುಕೊಟ್ಟನು. ಆದರೂ ಮಂಗಲಕ್ಕೆಂದು ಉಡುಗೊರೆಯಿತ್ತು ಕಳುಹಿಸಿದನು. ಅನಂತರ ಶೃಂಗಾರಹಾರನಾದ ಭರತೇಶನು ನವರತ್ನರಂಗ ಸಿಂಹಾಸನದಿಂದೆದ್ದು ಒಳಗೆ ನಡೆದನು.

ಜನನಿಯ ಮನೆಗೆ ಹೋಗಿ, ಆಕೆಗೆ ಎಲ್ಲವನ್ನೂ ಸೂಚಿಸಿ, ನಮಿಸಿ, ಬೀಳ್ಕೊಂಡು ಮನಸ್ಸಿನಲ್ಲಿ ಹಂಸನಾಥನನ್ನು ಸ್ಮರಿಸುತ್ತ ವಿಲಾಸವೈಭವದಿಂದ ಭರತೇಶನು ತನ್ನ ಅಂತಃಪುರವನ್ನು ಪ್ರವೇಶಿಸಿದನು. ಅಲ್ಲಿ ಅರಸಿಯರೆಲ್ಲರ ಬಳಸಿನಲ್ಲಿ, ಪಟ್ಟದರಸಿಯ ಸೋಂಕಿನಲ್ಲಿ ಕುಳಿತುಕೊಂಡು, ಧರಣಿಯನ್ನೇ ಸಂತೋಷಪಡಿಸಿದ ರೀತಿಯನ್ನೆಲ್ಲ ಮಾತನಾಡಿದರು.

''ನೀನಿಲ್ಲಿ ಹುಟ್ಟಿದುದು; ಮತ್ತೆ ಚೆನ್ನಾಗಿ ಬೆಳೆದುದು ಬೆಳ್ಳಿಬೆಟ್ಟದಲ್ಲಿ. ಆ ಮೇಲೆ ನಮ್ಮ ಪಟ್ಟಣವನ್ನು ಪ್ರವೇಶಿಸುವಂತೆ ಪುಣ್ಯವು ಮಾಡಿತು.'' ಎಂದು ಭರತೇಶನು ಪಟ್ಟದರಸಿ ಸುಭದ್ರಾದೇವಿಯೊಂದಿಗೆ ಸಹಜವಾಗಿ ಹೇಳಿದನು.

''ಅಹುದು. ನಾನಿಲ್ಲಿ ಜನಿಸಬೇಕಿತ್ತು, ಮತ್ತೆ ಉತ್ತರ ಖಂಡದಲ್ಲಿ ದೇವರ ಪ್ರಾಣಿಗ್ರಹಣವು ಆಗಬೇಕೆಂಬ ಆದೇಶವಿತ್ತು. ಅಂತಿರುವುದನ್ನು ಮೀರಬಹುದೆ? ನನ್ನ ಸೋದರಿಯರನ್ನೆಲ್ಲ ದೇವರು ಒಲಿದು ಮೊದಲೇ ಕೈಹಿಡಿದಿರಿ. ಆಮೇಲೆ ನನ್ನನ್ನು ಮನ್ನಿಸುವ ಪ್ರಾಪ್ತಿಯು ಈ ರೀತಿ ಮಾಡಿತು.'' ಎಂದು ಸುಭದ್ರಾದೇವಿಯು ವೀಳ್ಯದೆಲೆಯನ್ನು ನೀಡುತ್ತ ನುಡಿದಳು.

''ಅಕ್ಕ, ಅದು ಅಂತಲ್ಲ, ನೀನು ಪ್ರೀತಿಸಿದ್ದರಿಂದ ಸ್ವಾಮಿಯೇ ಎಂಟು ದಿಕ್ಕುಗಳನ್ನು ಸಾಧಿಸಲು ಎದ್ದನು. ಅದರಿಂದ ನಮಗೂ ಸೊಗಸನ್ನೂ ಆನಂದವನ್ನೂ ತೋರಿಸುವುದಿತ್ತು. ಸ್ವಾಮಿಯೂ ನೀನೂ ಇಲ್ಲಿ ಜನಿಸಿ, ನಿಮ್ಮ ಜನ್ಮಭೂಮಿಯ ಪುರಕ್ಕೆ ನಮ್ಮನ್ನು ಪ್ರೇಮದಿಂದ ಕರೆಸಿಕೊಂಡಿರಿ.'' ಎಂದು ರಾಣಿಯರೆಲ್ಲರೂ ಠಕ್ಕಿಲ್ಲದೆ ಆಮೋದದಿಂದ ಹೇಳಿದರು.

''ಈ ಪುರವೇನು? ನಿಮ್ಮ ಪುರವೇನು? ಭೋಗೋಪಭೋಗದಲ್ಲಿ ಎರವಿಲ್ಲದೆ ವ್ಯಾಪಿಸಬಲ್ಲವರಿಗೆ ಎಲ್ಲಿಯೂ ಸಮವೇ.'' ಎಂದು ಭರತೇಶನು ನುಡಿದನು.

ವರುಷದ ಮೇಲೆ, ಭರತೇಶನು, ಅಯ್ಯನ ಒತ್ತಿಗೆ ಹೋಗಲಿರುವನು. ಅದೇ ಯೋಗವಿಜಯದ ಮೊದಲು ಈಗ ಎಲ್ಲಿಗೂ ತೆರಳದಂತೆ ಅವರೆಲ್ಲರೂ ಸಾಕೇತಪುರದಲ್ಲಿ ಸುಖಾಂಗದಲ್ಲಿದ್ದರು.